1956

S.S. Hiremath
Sanikop

26-2-69

S.S. HIREMATH
M.A
SANIKOPA

ವತ್ತಮೂರನೇ ಪ್ರಕಟನೆ :

ಗೋದಾನ

ಮೂಲ ಲೇಖಕರು :
ದಿ. ಪ್ರೇಮಚಂದ

ಅನುವಾದಕರು :
ಶ್ರೀ. ಕೆ. ರಾಮಕೃಷ್ಣ ಉಡುಪರು
. ಟಿ.

ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಪ್ರಕಾಶಕರು :
ಮ. ಗೋವಿಂದರಾಯರು
ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಮೊದಲನೆಯ ಮುದ್ರಣ : ೧೯೫೬

ಬೆಲೆ:
ಸಾದಾ ಪ್ರತಿ ೪-೨೫
ಕೆಲಿಕೊ ಪ್ರತಿ ೫-೫೦

ಮುದ್ರಕರು :
ಮೊಹರೆ ಹಣಮಂತರಾಯರು
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಪರಿವಿಡಿ

ಪ್ರಕಾಶಕರ ಮಾತು

ಹಿಂದೀ ಸಾಹಿತ್ಯ ಪ್ರಪಂಚಕ್ಕೆ ಸಮ್ರಾಟನಾದ ದಿವಂಗತ ಪ್ರೇಮಚಂದರ ಕಾ
ಗಳಲ್ಲಿ '**ಗೋದಾನ**'ವೇ ಸರ್ವೋತ್ಕೃಷ್ಟ ಕಾದಂಬರಿ. ವಿವಿಧ ಭಾರತೀ
ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟು ಪರದೇಶೀಯರ ಮೆಚ್ಚುಗೆಯನ್ನು ಪಡೆದ
ಆಧುನಿಕ ಭಾರತೀಯ ಪುಸ್ತಕಗಳಲ್ಲಿ ಈ ಕಾದಂಬರಿಯೂ ಒಂದು. ಇದು ಇಂ
ಫ್ರೆಂಚ್, ರಶಿಯನ್ ಭಾಷೆಗಳಲ್ಲಿ ಪ್ರಕಟವಾಗಿ ಆ ಆ ದೇಶಗಳಲ್ಲಿ ಬಹಳ ಬ
ಮಾರಾಟವಾಗುತ್ತಿದೆ. ಇಂಥ ಶ್ರೇಷ್ಠ ಕಾದಂಬರಿಯನ್ನು ಅನುವಾದಿಸಿದವರು ಕ
ಒಬ್ಬ ಗಣ್ಯ ಲೇಖಕರಾದ ಶ್ರೀ. ಕೆ. ರಾಮಕೃಷ್ಣ ಉಡುಪರು.

ಈ ಅನುವಾದವು, ಕನ್ನಡದ ಮೂರು ಪ್ರಾದೇಶಿಕ ಪ್ರಭೇದಗಳಲ್ಲಿ ಒಂ
ಮಂಗಳೂರು ಕನ್ನಡದಲ್ಲಾಗಿದೆ. ಆದ್ದರಿಂದ ಇಲ್ಲಿಯ ಶೈಲಿ, ಪದಪ್ರಯೋಗ
ಉಳಿದ ಕನ್ನಡಿಗರಿಗೆ ಕೊಂಚ ವಿಜಾತೀಯವಾಗಿ ಕಾಣುವವೇನೊ! ಕರ್ನಾ
ಹಲವು ಆಡಳಿತಗಳಲ್ಲಿ ಹಂಚಿಹೋದ ಈ ವರೆಗಿನ ಮಾತು ಹೇಗೂ ಇರಲಿ.
ಮುಂದೆ ಮಾತ್ರ ಕನ್ನಡದ ಈ ಕೃತ್ರಿಮ ಪ್ರಭೇದಗಳು ವ್ಯಕ್ತವಾಗಿಯೂ ಮಾ
ವಾಗಿಯೂ ಅಳಿಸಿಹೋಗಿ, ಅದರ ಗರ್ಭದಿಂದ ಒಂದೇ ಒಂದು ಕನ್ನಡವು ವ
ಬರಲೇಬೇಕು. ಇಡಿಯ ಕರ್ನಾಟಕವನ್ನು ಒಂದೇ ಆಡಳಿತದಲ್ಲಿ ತರುವುದಕ್ಕಾಗಿ
ವರೆಗೆ ಪರಿಶ್ರಮಿಸಿದವರ ಗುರಿಯೂ ಇದೇ. ಕನ್ನಡ ನಾಡಿನ ಈ ಪೀಳಿಗೆಯು ಸಾ
ಬೇಕಾದ ಈ ಮಹತ್ಕಾರ್ಯದಲ್ಲಿ ಕರ್ನಾಟಕದ ಈಗಿನ ಪ್ರಕಾಶಕರ ಪಾಲಿನ ಕರ್ತ
ಅಲ್ಪವಾದುದೇನೂ ಅಲ್ಲ. ತಾನು ನಿತ್ಯವೂ ಬಳಸದ, ತನ್ನ ಕಿವಿಗೆ ಕ್ವಚಿತ್ತಾಗಿ ಬೀಳ
ಇನ್ನೊಂದು ಕನ್ನಡದ ಪರಿಚಯವನ್ನು ತನ್ನ ಸುತ್ತುಮುತ್ತಲಿನ ಕನ್ನಡ ಓದುಗ
ಮಾಡಿಕೊಡುವುದರ ಮೂಲಕ, ಕರ್ನಾಟಕದ ಎಲ್ಲ ಪ್ರದೇಶಗಳನ್ನು ಹತ್ತಿರ ತರ
ಪ್ರಕಾಶಕನಿಗಿರುವಷ್ಟು ಅವಕಾಶ ಇನ್ನಾರಿಗೂ ಇಲ್ಲ.

ಇಂಥ ಸಂದರ್ಭಗಳಲ್ಲಿ, ಪ್ರಾದೇಶಿಕ ಶಬ್ದಕೋಶವು ಅಗತ್ಯವೆಂದು ತಿಳಿ
ಅದನ್ನು ಕೊನೆಯಲ್ಲಿ ಕೊಟ್ಟಿದೆ. ಈ ಶಬ್ದಕೋಶವು ಗಾತ್ರದಲ್ಲಿ ಕೊಂಚ ದೊಡ್ಡದಾ
ತೆಂದು ತೋರಿದರೂ ಅರ್ಥವು ಸ್ಪಷ್ಟವಾಗುವುದಕ್ಕಾಗಿ ಇದು ಅಗತ್ಯವೆನಿಸಿತು. ಓ
ಗರು ಇದರ ಲಾಭ ಪಡೆಯುವರೆಂದು ನಂಬಲಾಗಿದೆ.

ಇಂಥ ಉತ್ತಮ ಕಾದಂಬರಿಯ ಅನುವಾದವನ್ನು ಉತ್ತಮವಾಗಿ ಮಾಡಿದುದಲ್ಲ
ಪ್ರಕಟಿಸಲು ಅನುವು ಮಾಡಿಕೊಟ್ಟ ಮಿತ್ರರಾದ ಶ್ರೀ. ಕೆ. ರಾಮಕೃಷ್ಣ ಉಡುಪರಿಗ
ಪ್ರಕಟಿಸಲು ಅನುಮತಿಯಿತ್ತ ಶ್ರೀ. ಶ್ರೀಪತಿರಾಯರಿಗೂ ಕೃತಜ್ಞತೆಗಳು.

—ಪ್ರಕಾಶ

ಮೊದಲ ಮಾತು

ಅನುಭವವನ್ನು ಮನೋಹರವಾದ ಭಾಷೆಯಲ್ಲಿ ಪ್ರಕಟಗೊಳಿಸಿದರೆ ಅದು ಹಿತ್ಯವಾಗುತ್ತದೆ. ಅದು ಪದ್ಯವಾಗಲೂ ಬಹುದು, ಗದ್ಯವಾಗಲೂ ಹುದು. ಅಥವಾ ಪದ್ಯಧಾಟಿಯಲ್ಲಿರುವ ವಚನವಿದ್ದರೂ ಇರಬಹುದು. ತು ಆ ಮಾತು ಹೃದಯಂಗಮವಾಗಬೇಕು. ಪದ-ಅರ್ಥಗಳು ಸಹಿತ ಾಗಿ, ಒಂದನ್ನೊಂದು ಹೊಂದಿಕೊಂಡು - "ಸಕ್ಕರೆಯು ಸವಿಯೊಳಗೋ, ಯು ಸಕ್ಕರೆಯೊಳಗೋ" ಎಂಬಂತಿರಬೇಕು. ಅದರೊಡನೆ ಸ-ಹಿತ, ಂದರೆ ಹಿತಸಾಧಕ, ಅಹಿತನಿವಾರಕವಾಗಿದ್ದುದಾದರೆ ಆ ಸಾಹಿತ್ಯದ ಮಹತ್ವ ನ್ನಷ್ಟು ಹಿರಿದಾಗುತ್ತದೆ.

ಆದರೆ ಆ ಅನುಭವದ ಸುಂದರವಾದ ಅಭಿವ್ಯಕ್ತಿಗೆ ಆ ಭಾಷೆ ಈ ಭಾಷೆ ಬ ಅಡೆತಡೆಗಳಿಲ್ಲ. ಹಿಂದುಳಿದ ಜನರ ನಾಣ್ನುಡಿಯಲ್ಲೂ ಮನೋಹರ ದ ಅನುಭವವು ಕಾವ್ಯರೂಪದಲ್ಲಿ ಹೊರಸೂಸುತ್ತದೆ. ಅದರಲ್ಲೂ ನೈಜವಾದ ನುಭವವು ಅವರವರ ಮಾತೃಭಾಷೆಯಲ್ಲೇ ಬೆಳಗುವುದು ಸ್ವಾಭಾವಿಕ. ಾಗೆ ಒಂದು ಭಾಷೆಯಲ್ಲಿ ಅಭಿವ್ಯಕ್ತವಾದ ಸುಂದರಾನುಭವವು ಆ ಭಾಷೆ ಲ್ಲೇ ಉಳಿದುದಾದರೆ ಆ ಭಾಷೆಯನ್ನರಿಯದವರಿಗೆ ಅದರ ಆನಂದಾನು ವವು ಒದಗದಂತಾಗುತ್ತದೆ. ಪ್ರಕಟಿಸಿದ ಭಾಷೆ ಬೇರೆಯಾದರೂ ಅನುಭವಿ ದ ಹೃದಯ ಒಂದೇ ತರ ತಾನೇ? ಕಾಳಿದಾಸನು ಶಾಕುಂತಳದಲ್ಲಿ 'ಶ್ರೀಯಾ ರಾಪ: ಕಥಮಾಪ್ಸಿತೋ ಭವೇತ್' ಎಂದು ಸಂಸ್ಕೃತದಲ್ಲಿ ಹೇಳಿದ್ದನ್ನು ಸೇರಲ್ ಬರೆ ಭಾಗ್ಯಲಕ್ಷ್ಮಿ ಬಿಡುವನೇ ಬಡವಂ' ಎಂಬುದಾಗಿ ಅಭಿನವ ಾಳಿದಾಸ ಬಸವಪ್ಪ ಶಾಸ್ತ್ರಿಗಳು ಭಾಷಾಂತರಗೊಳಿಸಿ ಮೂಲದನುಭವವನ್ನು ನ್ನಡಿಗರಿಗೆ ಒದಗಿಸಿಕೊಟ್ಟಿದ್ದಾರೆ. ಈ ರೀತಿ ಒಬ್ಬ ಕವೀಶ್ವರನ ಮನೋ ರ ವಚನವಿನ್ಯಾಸವನ್ನು ಇನ್ನೊಬ್ಬ ಕವಿ ಮತ್ತೊಂದು ಭಾಷೆಯಲ್ಲಿ ಪರಿ ರ್ತನಗೊಳಿಸಿ ಕಾವ್ಯಾನಂದವನ್ನು ಹರಡಿಸುತ್ತಾನೆ.

ಆದ್ದರಿಂದಲೇ ಹಳಗನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಗ್ರಂಥಗಳಿಂದ ೂಪಾಂತರ ಹೊಂದಿಬಂದ ಕಾವ್ಯಗಳನ್ನು ವಿಪುಲವಾಗಿ ಕಾಣುತ್ತೇವೆ. ಂಪ ರನ್ನರು, ವ್ಯಾಸ ಭಾಸರ ಸಂಸ್ಕೃತ ಮಹಾಕಾವ್ಯಗಳನ್ನನುಸರಿಸಿದರು. ಕ್ಷ್ಮೀಶ ನಾರಣಪ್ಪರಿಗೂ ವ್ಯಾಸ ಜೈಮಿನಿಗಳೇ ಆಧಾರವಾದರು. ವ್ಯಾಸ

ವಾಲ್ಮೀಕಿಗಳನ್ನನುಸರಿಸಿದ ಕುಮಾರವ್ಯಾಸ, ಕುಮಾರ ವಾಲ್ಮೀಕಿಗಳು ಉದಯವಾದರು. ಜೈನ ಕವಿಗಳಿಗೆ ಸಂಸ್ಕೃತ ಕವಿಗಳೊಡನೆ ಪ್ರಾಕೃತ ಕವಿಗಳೂ ಸಹಾಯಕರಾಗಿ ದೊರೆತರು. ಲಕ್ಷಣ ಶಾಸ್ತ್ರದ ವಿಚಾರ ತೆಗೆದರಂತು ವ್ಯಾಕರಣ, ಛಂದಸ್ಸು, ಅಲಂಕಾರ—ಇತ್ಯಾದಿಗಳೆಲ್ಲ ಸಂಸ್ಕೃತ ಲಕ್ಷಣ ಗ್ರಂಥಗಳ ಕನ್ನಡ ರೂಪಾಂತರಗಳೇ ಆಗಿವೆ. ಭಟ್ಟಾಕಳಂಕ, ನಾಗವರ್ಮ ಮುಂತಾದವರಂತು ಕನ್ನಡ ವ್ಯಾಕರಣವನ್ನು ಸಂಸ್ಕೃತ ಭಾಷೆಯಲ್ಲೇ ಸೂತ್ರ ವೃತ್ತಿಗಳ ರೂಪದಲ್ಲಿ ರಚಿಸಿದರು. ಹೀಗೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದ ರೂಪಾಂತರಗಳು ಅಪಾರವಾಗಿ ದೊರೆಯುತ್ತವೆ.

ಕನ್ನಡದ ನವೀನ ಸಾಹಿತ್ಯವನ್ನು ತೆಗೆದುಕೊಂಡರೆ ವೆಂಕಟಾಚಾರ್ಯರ ಕಾದಂಬರಿಗಳೆಲ್ಲ ಬಂಗಾಳಿಯ ಅನುವಾದಗಳಾದರೆ, ಗಳಗನಾಥರ ಕಾದಂಬರಿಗಳು ಮರಾಠಿಯ ಭಾಷಾಂತರಗಳಾಗಿವೆ. ಬಿ. ಎಂ. ಶ್ರೀಯವರು ಇಂಗ್ಲಿಶ್ ಗೀತೆಗಳನ್ನು ಕನ್ನಡಿಸಿದರಾದರೆ ಶ್ರೀ ಗೋವಿಂದ ಪೈಗಳು ಜಪಾನೀ ನಾಟಕಗಳನ್ನು ಕನ್ನಡಕ್ಕಿಳಿಸಿದರು. ಇತ್ತೀಚೆಗಂತು ಇಂಗ್ಲಿಶ್ ಸಾಹಿತ್ಯದ ರೂಪಾಂತರ ಭಾಷಾಂತರಗಳಿಂದಾಗಿ ನವೀನ ಸಾಹಿತ್ಯ ಭಂಡಾರದ ಸಂಪತ್ತು ವಿಪುಲವಾಗಿ ಬೆಳೆಯುವಂತಾಗಿದೆ. ಇದರಿಂದಾಗಿ, ಕನ್ನಡದ ಕವಿಗಳಿಗೆ ಸ್ವತಂತ್ರವಾದ ಕೃತಿಗಳನ್ನು ರಚಿಸುವ ಯೋಗ್ಯತೆಯೇ ಇಲ್ಲವೆಂದು ತಿಳಿಯಬೇಕಾಗಿಲ್ಲ. ಸ್ವಕೀಯ ಪ್ರತಿಭೆ ಅನುಭವಗಳನ್ನವಲಂಬಿಸಿದ ಸ್ವತಂತ್ರ ಕೃತಿಗಳೂ ಬೇಕಾದಷ್ಟಿವೆ. ಆದರೆ ಕೆಲ ಮಹಾಶಯರಿಗೆ ತಮ್ಮ ಅನುಭವಕ್ಕೆ ಸಮಾನವಾದ ಅನುಭವ, ಸಮಾನವಾದ ಮಾತು, ಇನ್ನೊಂದು ಭಾಷೆಯ ಕವಿವಚನದಲ್ಲಿ ಕಂಡುಬಂದುದಾದರೆ ಒಂದು ತರದ ಹೊಸ ಹುರುಪು ಮೂಡಿ ಬರುತ್ತದೆ. ಆ ಭಾಷೆಯ ಸಾರವನ್ನು ಮತ್ತು ಸ್ವಭಾಷೆಯ ಶೋಭೆಯನ್ನು ಸೇರಿಸಿ ಹೊಸ ಅಲಂಕಾರವನ್ನು ಬೆಸೆಯುವ ಮನಸ್ಸಾಗುತ್ತದೆ. ಹಾಗಾಗಿ ಆ ಮೂಲ ಕಾವ್ಯವನ್ನು ಮುಂದಿಟ್ಟುಕೊಂಡು ಅದಕ್ಕೆ ತನ್ನ ಅನುಭವಾಮೃತವನ್ನು ಸೇರಿಸಿ ಒಂದು ತರದ ಹೊಸ ಚಿತ್ರವನ್ನು ಬರೆಯುತ್ತಾರೆ. ಆಗ, ರವಿವರ್ಮನ ಗೋಪಾಲಬಾಲನ ಚಿತ್ರವನ್ನು ಮುಂದಿರಿಸಿಕೊಂಡು ತನ್ನದೇ ಆದ ರೀತಿಯಲ್ಲಿ ಹೊಸ ಗೋಪಾಲನ ಚಿತ್ರವನ್ನು, ಹೊಸ ಹಿನ್ನೆಲೆಯಲ್ಲಿ ರೂಪಿಸಿದಂತಾಗುವುದು. ಆದರೆ ಈ ಕಾರ್ಯ ಸ್ವತಃ ಚಿತ್ರಕಾರನಿಗೆ ಮಾತ್ರ ಸಾಧ್ಯವೇ ವಿನಾ ಅಪ್ರಬುದ್ಧನು ಬರೆಯತೊಡಗಿದರೆ ಚಿತ್ರವು ಗೋಪಾಲನದಾಗುವ ಬದಲು ಭೂಪಾಲನದಾಗಿ ಕೊನೆಗೊಂಡೀತು.

ಈ ರೀತಿ ಕನ್ನಡ ಸಾಹಿತ್ಯದಲ್ಲಿ ಬೇರೆ ಬೇರೆ ಭಾಷೆಗಳಿಂದ ಇಳಿದುಬಂದ ಕೃತಿಗಳು ಅಪಾರವಾಗಿವೆ. ಇದೀಗ ನಮ್ಮ ಭಾಷೆಯಲ್ಲಿ ಮಾತ್ರವೇ ಅಲ್ಲ; ಎಲ್ಲ ಭಾಷೆಗಳಲ್ಲೂ ಈ ತರ ಇದ್ದೇ ಇದೆ. ಅಭಿವ್ಯಕ್ತಿಗೊಳಿಸುವ ಭಾಷೆ ಬೇರೆಯಾದರೂ ಅನುಭವಿಸಿದ ಹೃದಯಗಳೆಲ್ಲ ಹೆಚ್ಚು ಕಡಮೆ ಒಂದೇ ತರ ತಾನೇ? ಆದರೆ ಕೆಲ ಕವಿಗಳು ತಮ್ಮ ಮೂಲ ಕವಿಯ ಹೆಸರನ್ನು ಹೇಳಿರುವರಾದರೆ ಇನ್ನು ಕೆಲವರು ಅದನ್ನು ಮುಚ್ಚಿಡುವುದೂ ಉಂಟು. ಅಂತು ಅದು ಹೇಗಿದ್ದರೂ ಸುಯೋಗ್ಯ ಭಾಷಾಂತರವಾಗುವುದು ಸ್ವತಃ ಕವಿಯಾದವನಿಗೇ ಸಾಧ್ಯವೆಂಬುದರಲ್ಲಿ ಸಂದೇಹವಿಲ್ಲ. ಹಾಗಿರುತ್ತ, ಭಾಷಾಂತರ ಗ್ರಂಥವೆಂದೊಡನೆ ಮೂಗು ಮುರಿಯುವುದು ಸರಿಯಲ್ಲ. ಭಾಷಾಂತರವೆಂದಾಕ್ಷಣ ಅದನ್ನೆಲ್ಲರಿಗೂ ಮಾಡಬರುವುದಿಲ್ಲ. ಶ್ರೀ ಬಸವಪ್ಪಶಾಸ್ತ್ರಿಗಳಂತಹ ಅಭಿನವ ಕಾಳಿದಾಸರಿಗೆ ಮಾತ್ರ ಮೂಲ ಕಾಳಿದಾಸನ ಭಾವವನ್ನು ಹೊರಸೂಸುವ ಸಾಮರ್ಥ್ಯ ಬಂದಿತ್ತು. ಹಾಗೆಯೇ, ಸ್ವತಂತ್ರ ಸಾಹಿತ್ಯಗಳೆಂದೆನಿಸಲ್ಪಟ್ಟವುಗಳಲ್ಲೂ ಬಹುಭಾಗ ಹೆಸರಿಸದ ಭಾಷಾಂತರಗಳೇ ಆಗಿವೆಯೆಂಬುದನ್ನೂ ಮರೆಯಬಾರದು.

ಹೀಗೆ ಸಾಹಿತ್ಯದಲ್ಲೇ ಭಾಷಾಂತರದ ಸ್ಥಾನ ಬಹು ಮುಖ್ಯವೆಂದಿರುವಾಗ ಇತರ ರಾಜಕೀಯ ಸಾಮಾಜಿಕ ವಿಚಾರಗಳಲ್ಲಂತು ಭಾಷಾಂತರದ ಸ್ಥಾನ ಬಹು ಮಹತ್ತಾದುದು. ಇಂದು ಜಗತ್ತೇ ಒಂದಾಗುತ್ತಿದೆ. ಪ್ರಪಂಚದ ರಾಷ್ಟ್ರಗಳೆಲ್ಲ ಒಂದಕ್ಕೊಂದು ಸೇರಿಕೊಳ್ಳುತ್ತಿವೆ. ಹಾಗಿರುವಾಗ ಎಲ್ಲ ರಾಷ್ಟ್ರಗಳ ಲೆಕ್ಕವಿಲ್ಲದ ಭಾಷೆಗಳನ್ನೆಲ್ಲ ಕಲಿಯುವುದೆಂದರೆ ಅಸಾಧ್ಯ ವಿಚಾರವೇ ಸರಿ. ಅದರಿಂದಾಗಿ ಭಾಷಾಂತರವೇ ಪರಸ್ಪರ ಸಮಾಗಮದ ಮೂಲ ಸಾಧನವಾಗಿ, ಅನುವಾದಕರ ಮೂಲಕವೇ ಜಾಗತಿಕ ಸಂಬಂಧ ಬೆಳೆಯುವಂತಾಗಿದೆ.

ಈ ರೀತಿ ಜಾಗತಿಕ ವಿಚಾರವನ್ನೊಮ್ಮೆಗೆ ಬದಿಗೊತ್ತಿದರೂ, ಭಾರತೀಯರಾದ ನಾವೆಲ್ಲ ಪರಸ್ಪರವಾಗಿ ಅರಿತುಕೊಳ್ಳಲೇಬೇಕು. ಹಿಂದೀಯನೆಂದಾಕ್ಷಣ ಕನ್ನಡಿಗನು ಅವನನ್ನು ಅರ್ಥಾರ್ಥ ಸಂಬಂಧವಿಲ್ಲದವನಂತೆ ದೂರಮಾಡಲು ಸಾಧ್ಯವೇ ಇಲ್ಲ. ಜಗತ್ತೇ ಒಂದಾಗಬೇಕಾಗಿದ್ದ ಈ ಕಾಲದಲ್ಲಿ ಭಾರತದ ಒಗ್ಗಟ್ಟಂತು ಇನ್ನಷ್ಟು ಪ್ರಮುಖವಾದುದು. ಭಾರತದ ಪ್ರಜೆಗಳು ಬೇರೆ ಬೇರೆ ಭಾಷೆಗಳ ನೆಪದಿಂದ ಬೇರೆ ಬೇರೆ ದಿಕ್ಕಿಗೆ ತಿರುಗಿದರಾದರೆ ದೇಶದ ಪ್ರಗತಿ ಸರ್ವಥಾ ಆಗಲಾರದು. ಆ ಕಾರಣದಿಂದಾಗಿ ನಾವು ಪರಸ್ಪರರ ಅರಿ-

ವನ್ನು ಮಾಡಿಕೊಳ್ಳಲೇಬೇಕು. ಅದಕ್ಕಾಗಿ ಭಾರತದ ಮೂವತ್ತಾರು ಕೋಟಿ ಜನರೂ ಒಂದೇ ಭಾಷೆಯನ್ನು ಆಡಬೇಕೆಂದು ಹೇಳುವುದು ಸರಿಯೂ ಅಲ್ಲ; ಹಾಗೆ ಆಡಿಸುವುದು ಸಾಧ್ಯವೂ ಅಲ್ಲ. ಅಪಾರ ಸಾಹಿತ್ಯಸಂಪತ್ತಿನಿಂದೊಡ ಗೂಡಿದ, ಭಾರತೀಯ ಸಂಸ್ಕೃತಿಯ ವಿವಿಧ ಬಣ್ಣಗಳ ಪ್ರತೀಕಗಳಂತಿರುವ ಕನ್ನಡ, ತಮಿಳು, ಬಂಗಾಳಿ ಮುಂತಾದ ಭಾಷೆಗಳನ್ನು ತೊಡೆದುಹಾಕಿದರೆ ದೇಶಕ್ಕೇ ಅಪಾರ ನಷ್ಟವಾಗಬಹುದು. ಹಾಗಾಗಿ ಒಂದು ಭಾಷೆಯ ಉತ್ತಮ ಸಾಹಿತ್ಯವು ಇನ್ನೊಂದು ಭಾಷೆಗೆ ಸುಯೋಗ್ಯ ರೀತಿಯಲ್ಲಿ ಅನುವಾದಿಸಲ್ಪಟ್ಟಿ ದಾದರೆ ಭಾರತದ ಬೇರೆ ಬೇರೆ ಜನರ, ಅವರ ಜೀವನದ, ಅರಿವಾಗುವುದಕ್ಕೆ ಸಹಾಯವಾಗುತ್ತದೆ. ತನ್ಮೂಲಕ ದೇಶದ ಏಕತೆ ಬೆಳೆಯುವುದಕ್ಕೆ ಸಹಕಾರಿ ಯಾಗುತ್ತದೆ. ಇದನ್ನರಿತೇ ಕೇಂದ್ರ ಸಾಹಿತ್ಯ ಅಕಾಡಮಿಯು ಈ ದಿಶೆಯಲ್ಲಿ ಕಾರ್ಯಪ್ರವೃತ ವಾಗಿ, ಭಾರತದ ಬೇರೆ ಬೇರೆ ಭಾಷೆಗಳ ಉತ್ತಮ ಕೃತಿ ಗಳನ್ನು ಎಲ್ಲ ಭಾಷೆಗಳಲ್ಲೂ ಅನುವಾದಗೊಳಿಸಲು ವ್ಯವಸ್ಥೆ ಮಾಡುತ್ತಲಿದೆ. ವಿಶ್ವಸಂಸ್ಥೆಯ ಪ್ರಧಾನಾಂಗವಾದ ಯುನೆಸ್ಕೊವೂ ಪ್ರಪಂಚದ ಪ್ರಸಿದ್ಧ ಗ್ರಂಥಗಳನ್ನು ಜಗತ್ತಿನ ಪ್ರಧಾನ ಭಾಷೆಗಳಲ್ಲಿ ಭಾಷಾಂತರಗೊಳಿಸಲು ಏರ್ಪ ಡಿಸುತ್ತಿದೆ. ಇಂತಹ ಈ ಅನುವಾದ ಕಾರ್ಯವು ಜಗತ್ತೇ ಒಂದಾಗುತ್ತಿರುವ ಈ ಕಾಲದಲ್ಲಿ ಜನರ ಮನಸ್ಸನ್ನು ಹತ್ತಿರ ತರುವುದಕ್ಕಿರುವ ಪ್ರಮುಖ ಸಾಧನ ವಾಗಬಹುದೆಂಬುದರಲ್ಲಿ ಸಂದೇಹವಿಲ್ಲ.

ಹೀಗೆ ಭಾಷಾಂತರದ ಸ್ಥಾನ ಬಹು ಮಹತ್ವದ್ದಾದರೂ ಉತ್ತಮ ಭಾಷಾಂತರದ ಕೆಲಸ ಸುಲಭವಾದುದಲ್ಲ. ಸಾಹಿತ್ಯದಲ್ಲಂತೂ ಮೂಲದ ಮಧುರ ರಸವನ್ನು ಯಥಾವತ್ತಾಗಿ ಇನ್ನೊಂದು ಭಾಷೆಯಲ್ಲಿ ಹರಿಸಬೇಕಾ ದರೆ ಅನುವಾದಕನಲ್ಲಿ ಅತ್ಯುತ್ತಮ ಮಟ್ಟದ ಉಭಯ ಭಾಷಾ ಪಾಂಡಿತ್ಯವಿರ ಬೇಕು. ಮೂಲದ ಸವಿಯನ್ನು ಸಂಪೂರ್ಣ ಅರಿತುಕೊಳ್ಳುವ ಯೋಗ್ಯತೆಯೊಡನೆ, ಅದನ್ನು ಇನ್ನೊಂದು ಭಾಷೆಗೆ ಸರಿಯಾಗಿ ಹರಿಸುವ ಪ್ರತಿಭೆಯಿಂದ ಕೂಡಿದ ವನೂ ಇರಬೇಕು ಅವನು. ಭಾಷಾಂತರವೆಂಬುದು ಯಾಂತ್ರಿಕವಾಗಿ ಉತ್ಪನ್ನ ವಾಗಬಹುದಾದೊಂದು 'ತಯಾರಿ'ಯಲ್ಲ, ಮಾಂತ್ರಿಕವಾಗಿ ಅಭಿವೃದ್ಧಿಗೊಳ್ಳ ಬೇಕಾದೊಂದು ಸೃಷ್ಟಿ. ಎಂದರೆ ಭಾಷಾಂತರವೂ ಮೂಲದಂತೆಯೇ ಹುಟ್ಟಿ ದುದೇ ಹೊರತು ಕಟ್ಟಿದುದಲ್ಲ.

ವೃತ್ತ ಪತ್ರಿಕೆಗಳಿಗೆ ಬೇಕಾದ ವಾರ್ತೆಗಳನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡಬೇಕಾದರೆ ವಿಶೇಷ ಶಕ್ತಿ ಬೇಕಾಗ

ಲಾರದು. ಎರಡು ಭಾಷೆಗಳ ಪದ-ಅರ್ಥಗಳ ಜ್ಞಾನವಿದ್ದರೆ ಸಾಕು. 'ಮಕ್ಕಿ ಕಾ ಮಕ್ಕಿ' ಭಾಷಾಂತರವಾಗಿ ಹೋಗಬಹುದು. ಆದರೆ ಕವಿಪುಂಗವರಾದ ಕಾಳಿದಾಸ, ಶೇಕ್ಸ್‌ಪಿಯರರಂತಹರ ಅಮೃತವಾಣಿಯನ್ನು ಭಾಷಾಂತರಿಸ ಬೇಕಾದರೆ ಅನುವಾದಕನಿಗೆ ಕೇವಲ ಪದ-ಅರ್ಥಗಳ ಜ್ಞಾನವಷ್ಟೇ ಅಲ್ಲ; ಅಪಾರ ವಿದ್ವತ್ತಿದ್ದರೂ ಸಾಲದು. ಜೊತೆಗೆ, ಆ ಮೂಲ ಕವಿಗಳಲ್ಲಿರುವಂತಹ ಪ್ರತಿಭೆ, ಸೃಷ್ಟಿಶಕ್ತಿಗಳೂ ಇರಬೇಕು. ಆ ಶಕ್ತಿ ಇಲ್ಲದವನು ಭಾಷಾಂತರ ಮಾಡಲುದ್ಯುಕ್ತನಾದರೆ ಅದು ಭಾಷಾಂತರದ ಬದಲು ಅವಾಂತರವಾದೀತು. ಕಲಾಹೀನನು ಗಣೇಶನನ್ನು ಮಾಡಹೋಗಿ ಅವನಪ್ಪನನ್ನು ಮಾಡಿದಂತಾ ದೀತು. ಹಾಗಾಗಿ ಭಾಷಾಂತರವು ಸಂಪೂರ್ಣ ಸಫಲವಾಗಬೇಕಾದರೆ ಮೂಲ ಭಾಷೆ ಸ್ವಭಾಷೆ, ಈ ಎರಡೂ ಭಾಷೆಗಳ ಸ್ವರೂಪ, ಸ್ವಾರಸ್ಯ, ಜಾಯಮಾನ ಗಳ ಅರಿವು, ಪ್ರತಿಭಾಸಂಪನ್ನ ಅನುವಾದಕನಲ್ಲಿ ಧಾರಾಳವಾಗಿ ಬೆಳೆದು ಬಂದಿರಬೇಕು. ಭಾಷಾಂತರವನ್ನು ಓದಿನೋಡಿದಾಗ ಸ್ವಕೀಯ ಹೃದಯ ದಿಂದ ಹೊರಟುಬಂದು, ಸ್ವಂತ ಭಾಷೆಯಲ್ಲಿ ಮೂಡಿನಿಂತ ಭಾವವೇ ಎಂದು ತೋರಿಬರುವಂತಿರಬೇಕು. ಇದು ಮೂಲ; ಇದು ಯಾವುದರ ಪ್ರತಿಕೃತಿಯೂ ಅಲ್ಲ—ಎನಿಸಬೇಕು. ಆಗ ಮಾತ್ರ ಅದು ಸರಿಯಾದ ಅನುವಾದವಾದೀತು.

ಈ ಮೇಲಿನ ತತ್ವವನ್ನನುಸರಿಸಿ ಹಿಂದೀ ಸಾಹಿತ್ಯ ಸಾಮ್ರಾಟರಾದ ದಿವಂಗತ ಪ್ರೇಮಚಂದರ ಕಾದಂಬರೀ ರತ್ನವಾದ **'ಗೋದಾನ'**ವನ್ನು ಕನ್ನ ಡಕ್ಕೆ ಅನುವಾದಿಸಲಾಗಿದೆ. ಮೂಲದ ಅನುಭವ, ಸವಿ, ಸೊಬಗುಗಳನ್ನು ಆದಷ್ಟು ಮಟ್ಟಿಗೆ ಉಳಿಸಿಕೊಂಡು, ಅದಕ್ಕೆ ಕನ್ನಡದ ಸೌಂದರ್ಯವನ್ನೂ ಹೊಸೆದುಕೊಂಡು ಈ ಅನುವಾದಕಾರ್ಯ ಮಾಡಲಾಗಿದೆ. ಕನ್ನಡ ಜನಕ್ಕೆ ಅನುಚಿತ, ತೀರಾ ಅಪರಿಚಿತ—ಎಂದು ತೋರಿದ ಕಡೆ ಅಲ್ಪ ಸ್ವಲ್ಪ ವ್ಯತ್ಯಾಸ ವನ್ನೂ ಮಾಡಲಾಗಿದೆ. ಅಂತು ಹಿಂದಿಯ ರೂಪವೂ ಲಾವಣ್ಯವೂ ಒಂದು ಗೂಡುವಂತೆ ಪ್ರಯತ್ನ ನಡೆದಿದೆ. ಭಾರತೀಯ ಭಾಷೆಗಳೆಲ್ಲ ಒಂದೇ ಹಿನ್ನೆಲೆ, ಒಂದೇ ಸಂಸ್ಕೃತಿಯಿಂದ ಮೂಡಿಬಂದಿರುವ ಕಾರಣ ಈ ಸಂಯುಕ್ತರೂಪ ಲಾವಣ್ಯವು ಸಹೃದಯರಿಗೆ ಹೃದಯಂಗಮವಾಗಿ ತೋರದೆ ಇರಲಾರದು.

ಶ್ರೀ. ಪ್ರೇಮಚಂದರ ಹೆಸರನ್ನು ಹಿಂದೀ ಸಾಹಿತ್ಯಜ್ಞರು ಮಾತ್ರವೇ ಅಲ್ಲ; ಭಾರತದ ಎಲ್ಲ ಭಾಷೆಗಳ ಸಾಹಿತ್ಯ ಪ್ರಿಯರೂ ಅವಶ್ಯ ಅರಿತೇ ಇರಬೇಕು. ಅವರ ಕಥೆ ಕಾದಂಬರಿಗಳು ಭಾರತದ ಬೇರೆ ಬೇರೆ ಭಾಷೆಗಳಲ್ಲೂ ಪ್ರಪಂಚದ ಪ್ರಸಿದ್ಧ ಭಾಷೆಗಳಲ್ಲೂ ಅನುವಾದಿಸಲ್ಪಟ್ಟು ಶ್ಲಾಘನೆಗೆ ಪಾತ್ರವಾಗಿವೆ.

ಅವರ ಲೇಖನಿಯು ಮನೋರಂಜನೆಯೊಡನೆ ದೇಶದ ಸಾಮಾಜಿಕ ಆರ್ಥಿಕ ರಾಜಕೀಯ ಸುಧಾರಣೆಗಳನ್ನೂ ಮಾಡಬಲ್ಲುದಾಗಿದೆ. ಅವರು ವಾರಣಾಸಿಯ ಹತ್ತಿರದ ಗ್ರಾಮ ಒಂದರಲ್ಲಿ ೧೮೮೦ ರಲ್ಲಿ ಜನ್ಮತಾಳಿ ೧೯೩೬ರಲ್ಲಿ ಕೀರ್ತಿ ಶೇಷರಾದರು. ಅವರು ಬಡಕುಟುಂಬದಲ್ಲಿ ಹುಟ್ಟಿಬಂದು, ತುಂಬಾ ದುಃಖ ಸಂಕಷ್ಟಗಳನ್ನನುಭವಿಸುತ್ತ ವಿದ್ಯಾಭ್ಯಾಸಮಾಡಿಕೊಳ್ಳಬೇಕಾಗಿತ್ತು. ಅಭ್ಯಾಸ ಮುಗಿಸಿ ಶಿಕ್ಷಣಖಾತೆಯನ್ನು ಪ್ರವೇಶಿಸಿ ಜೀವನದ ಬಹುಭಾಗವನ್ನು ಜ್ಞಾನದಾನದಲ್ಲಿ ವಿನಿಯೋಗಿಸಿದ್ದರು. ಕೊನೆಗೆ ಪೂಜ್ಯ ಗಾಂಧಿಜಿಯವರ ದೇಶಸೇವೆಯ ಕರೆಗೆ ಓಗೊಟ್ಟು, ತಮ್ಮ ವೃತ್ತಿಗೆ ತಿಲಾಂಜಲಿಯನ್ನಿತ್ತು ಸಮಾಜಸೇವೆಯ ಪಾವನ ಕಾರ್ಯದಲ್ಲಿ ತಮ್ಮ ಲೇಖನ ಸಾಮರ್ಥ್ಯವನ್ನು ಉಪಯೋಗಿಸತೊಡಗಿದರು. ಅವರು ೧೦—೧೨ ಉತ್ತಮ ಕಾದಂಬರಿಗಳನ್ನೂ ೪೦೦ಕ್ಕೂ ಮಿಕ್ಕಿದ ಚಿಕ್ಕ ಕಥೆ ಲೇಖನಗಳನ್ನೂ ಬರೆದು ಹಿಂದೀ ಭಾಷೆಯ 'ಸಾಹಿತ್ಯ ಸಾಮ್ರಾಟ'ನೆಂಬ ಬಿರುದಿಗೆ ಸಾರ್ಥಕವಾಗಿ ಪಾತ್ರರಾಗಿದ್ದಾರೆ.

ಇವರ ಕಾದಂಬರಿಗಳಲ್ಲಿ **"ಗೋದಾನ"**ವು ಅತ್ಯಂತ ಪ್ರಖ್ಯಾತವಾದುದು. ಇತ್ತೀಚೆ ಇದು ಇಂಗ್ಲಿಶ್, ಫ್ರೆಂಚ್, ರಶ್ಯನ್, ಮುಂತಾದ ವಿದೇಶೀ ಭಾಷೆಗಳಲ್ಲೂ ಅನುವಾದಿಸಲ್ಪಟ್ಟು ವಿಶೇಷ ಹೊಗಳಿಕೆಗೆ ಪಾತ್ರವಾಗಿದೆ. ರಶ್ಯನ್ ಭಾಷೆಯಲ್ಲಂತು ಇದರ ಲಕ್ಷಾಂತರ ಪ್ರತಿಗಳು ಮಾರಾಟವಾಗಿ ಅಲ್ಲಿಯ ಅತ್ಯುಚ್ಚ ಮಾರಾಟದ (Best seller) ಪುಸ್ತಕಗಳಲ್ಲೊಂದಾಗಿದೆಯಂತೆ. ಹೋರಿರಾಮನೆಂಬೊಬ್ಬ ರೈತನ ಜೀವನವು ಇದರಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿದೆ. ಹಳ್ಳಿಯ ಸಾಮಾಜಿಕ ಆರ್ಥಿಕ ಬಂಧನದೊಳಗೆ ಸಿಕ್ಕಿಬಿದ್ದ ಆ ಬಡಬೇಸಾಯಗಾರನ ಪಾಡು ಇದರಲ್ಲಿ ಯಥಾವತಾಗಿ ವರ್ಣಿತವಾಗಿದೆ. ಅದರೊಡನೆ ಗ್ರಾಮಜೀವನದ ಸುಧಾರಣೆಯು ಯಾವ ತೆರದಲ್ಲಾಗಬಹುದೆಂಬ ಅಂಶವೂ ತೆರೆಯ ಮರೆಯಿಂದ ಸೂಚಿತವಾಗಿದೆ. ಮಧ್ಯೇ ಮಧ್ಯೇ ಪ್ರಣಯ ಹಾಸಗಳ ಅಲೆಗಳೂ ಮೂಡಿಬಂದು ಕಾದಂಬರಿ ತುಂಬಾ ರಸವತ್ತಾಗಿ ತೋರುತ್ತದೆ.

ಭಾರತದ ಜನತೆಯೆಲ್ಲಾ ಒಂದು, ಸಂಸ್ಕೃತಿ ಸಂಪ್ರದಾಯಗಳೂ ಮೂಲತಃ ಒಂದು, ಎಂಬೀ ಭಾವನೆ ಬೆಳೆದುಬರುತ್ತಿರುವ, ಬೆಳೆದುಬರಬೇಕಾದ ಈ ಕಾಲದಲ್ಲಿ 'ಗೋದಾನ'ದಂತಹ ಉತ್ತಮ ಕಾದಂಬರಿಯ ಸವಿಯನ್ನು ಕನ್ನಡಿಗರೂ ಅರಿಯುವುದು ಅಗತ್ಯ ಎಂಬೀ ಭಾವನೆಯಿಂದ ಈ ಕಾದಂಬರಿಯ ಸಂಕ್ಷಿಪ್ತ ರೂಪವನ್ನು (Abridged edition) ಕನ್ನಡದಲ್ಲಿ ಅನುವಾದಿಸಲಾಗಿದೆ.

ಅದರಲ್ಲೂ ಇದೀಗ, ಬಹುಕಾಲದ ಹೋರಾಟ ಪರಿಶ್ರಮಗಳ ತರುವಾಯ, ಕನ್ನಡ ಜನರೆಲ್ಲ ಒಂದುಗೂಡಿದ ನವಯುಗದ ಸುಪ್ರಭಾತ ಸಮಯ. ಸ್ವಾತಂತ್ರ್ಯದ ಸವಿಯು ಜನಸಾಮಾನ್ಯರಿಗೂ ಒದಗಬೇಕಾದರೆ ಸ್ವತಂತ್ರ ಭಾರತದಲ್ಲಿ ಸಂಯುಕ್ತ ಕರ್ನಾಟಕದ ರಚನೆಯಾಗಬೇಕೆಂದು ಸಾರುತ್ತಿದ್ದವರ ಕನಸು ನನಸಾದ ಸುಸಮಯ. ಇದರಿಂದ ವಿವಿಧ ಭಾಷೆಗಳನ್ನಾಡುತ್ತಿರುವ ಬೇರೆ ಬೇರೆ ರಾಜ್ಯಗಳ ಪ್ರಗತಿಯೊಂದಿಗೆ ಅಖಿಲ ಭಾರತದ ಅಭಿವೃದ್ಧಿಯೂ ಸರ್ವತೋಮುಖವಾಗಿ ಅವಶ್ಯ ಆದೀತು. ಎಲ್ಲ ಅವಯವಗಳ ಸರಿಯಾದ ಪರಿಪುಷ್ಟಿಯಿಂದ ದೇಹಸೌಂದರ್ಯವು ಸಂಪೂರ್ತಿಯಾಗಿಯೇ ಆಗುತ್ತದೆ.

ಹೀಗೆ ಕನ್ನಡದ ಜನತೆಯೆಲ್ಲ ಒಂದುಗೂಡಿದುದು ಸಾಹಿತ್ಯದ ಪ್ರಗತಿಗೆ ಪ್ರಧಾನಸಾಧನವಾಗಬೇಕಾಗಿದೆ. ಈ ಮೊದಲು ಮಂಗಳೂರಿನ ಹೆಚ್ಚಿನ ಪುಸ್ತಕಗಳು ಮೈಸೂರಿಗೆ ಹೋಗುತ್ತಿದ್ದಿಲ್ಲ; ಮೈಸೂರಿನ ಪುಸ್ತಕ ಮಂಗಳೂರನ್ನು ಮುಟ್ಟುತ್ತಿದ್ದಿಲ್ಲ. ಧಾರವಾಡ ರಾಯಚೂರುಗಳಂತು ಬಹು ದೂರ—ಎಂಬಂತಿತ್ತು. ಪರಸ್ಪರ ಸಂಪರ್ಕ ಕಡಿಮೆಯಾದ್ದರಿಂದ ಭಾಷೆಯೂ ಪರಸ್ಪರವಾಗಿ ಅರ್ಥವಾಗದಷ್ಟು ಪರಭಾಷೆಯ ಬಿರುಗಾಳಿಗೆ ಒಳಗಾಗಿತ್ತು. ಇನ್ನೀಗ ದೂರದವರೂ ಹತ್ತಿರಬಂದಂತಾಗಿ, ಪರಸ್ಪರ ಕಲೆತು, ಒಂದುಗೂಡಿ ಬಾಳಬೇಕಾದ ನಮ್ಮೆಲ್ಲರ ಭಾಷೆ, ಸಾಹಿತ್ಯ, ಜೀವನ ಸಮರಸವಾಗಿ ಬೆಳೆಯುವುದರಲ್ಲಿ ಸಂದೇಹವಿಲ್ಲ. ಆ ದಿಶೆಯಲ್ಲಿ ಈಗ ತಾನೇ ಮೂಡಿಬಂದ ಈ ರಾಜಕೀಯ ಏಕತೆಯು ಸಾಧಕವಾಗಿ ಪರಿಣಮಿಸಲೆಂದು ಹಾರೈಸಲಾಗಿದೆ.

ಮುಂದುವರಿದ ಇತರ ಭಾರತೀಯ ಭಾಷೆಗಳೊಡನೆ ಹೋಲಿಸಿ ನೋಡಿದರೆ ಕನ್ನಡ ಸಾಹಿತ್ಯದ ಪ್ರಗತಿಯು ಬಹುಕುಂಠಿತವಾಗಿದೆಯೆಂದು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಉತ್ತಮ ಗ್ರಂಥಗಳ ಅಭಾವವು ಸರ್ವವಿಧದಲ್ಲಿಯೂ ಕಂಡುಬರುತ್ತದೆ. ವಿಜ್ಞಾನವಿಚಾರದ ಸಾಹಿತ್ಯವಂತು ಇಲ್ಲವೇ ಇಲ್ಲವೆಂದೂ ಹೇಳಬಹುದು. ಇದಕ್ಕೀವರೆಗೆ ಕನ್ನಡ ಜನತೆ ಹರಿದು ಹಂಚಿ ಹೋಗಿದ್ದುದೇ ಕಾರಣವೆಂದು ಹೇಳಬಹುದಾಗಿತ್ತಾದರೂ ಇನ್ನದನ್ನೂ ಹೇಳುವಂತಿಲ್ಲ. ಉತ್ತಮ ಸಾಹಿತ್ಯ ರಚನೆಯಲ್ಲಿ ಮೊತ್ತಮೊದಲು ಉದಾತ್ತ ಅನುವಾದಗಳಿಂದ ತೊಡಗಿದರೂ ನಮ್ಮ ಸಾಹಿತ್ಯಸಂಪತ್ತು ಸುಯೋಗ್ಯ ರೀತಿಯಲ್ಲಿ ಮುಂದುಬರಬಹುದು. ಆದೃಷ್ಟಿಯನ್ನಿಟ್ಟುಕೊಂಡು ನಾನೀಗ ಮಾಡಿದ ಈ ಅಳಿಲ ಸೇವೆಯಿಂದ ಸಾಹಿತ್ಯ ಸರಸ್ವತಿಯ ತೃಪ್ತಿಗೆ ತಿಲಮಾತ್ರವಾದರೂ ಕಾರಣವಾಗುವಂತಾದರೆ, ಈ ಕೃತಿಯ ಓದುವಿಕೆಯಿಂದ ಕನ್ನಡಿಗರ ಜೀವನ

ಕುಸುಮ ಸ್ವಲ್ಪವಾದರೂ ಅರಳಿ ಕಂಗೊಳಿಸುವಂತಾದರೆ, ನನ್ನ ಪರಿ
ಸಫಲವಾದಂತೆಯೇ ಸರಿ.

ಈ ಸಂದರ್ಭದಲ್ಲಿ ಇದನ್ನನುವಾದಿಸಲು ಸಮ್ಮತಿಯನ್ನಿತ್ತ ಶ್ರೀ. ಪೆ
ಚಂದರ ಸುಪುತ್ರ ಶ್ರೀ. ಶ್ರೀಪತಿರಾಯರನ್ನು ವಂದಿಸಿ, ಇದನ್ನು ಪ್ರಕಟಿ
ಭಾರವನ್ನು ವಹಿಸಿದ ಹುಬ್ಬಳ್ಳಿಯ ಸಾಹಿತ್ಯ ಭಂಡಾರದ ಒಡೆಯರಾ
ಗೆಳೆಯ ಗೋವಿಂದರಾಯರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ಮಡಿಕೇರಿ
೧-೧೧-೫೬

ಕೆ. ರಾಮಕೃಷ್ಣ ಉಡುಪ, ಎಂ. ಎ; ಬಿ.
ಪ್ರೊಫೆಸರ್, ಸರಕಾರದ ಕಾಲೇಜು, ಮಡಿಕೆ
(ಮೈಸೂರು ಪ್ರಾಂತ)

ಗೋದಾನ

೧

ಹೋರಿರಾಮನು ಹಟ್ಟಿಯ ಜೋಡೆತ್ತುಗಳಿಗೆ ಅಕ್ಕಚ್ಚು ಕುಡಿಸಿ, ಹುಲ್ಲು ಹಾಕಿ, ತನ್ನ ಹೆಂಡತಿ ದನಿಯಳೊಡನೆ ಹೇಳಿದ – 'ಗೋಬರನನ್ನು ಕಬ್ಬಿನ ಕೆಲಸಕ್ಕೆ ಕಳುಹಿಸಿ ಕೊಟ್ಟುಬಿಡು. ನಾನೆಷ್ಟು ಹೊತ್ತಿಗೆ ಬಂದೇನೆಂದು ಹೇಳಬರುವುದಿಲ್ಲ. ಆ ನನ್ನ ಊರುಗೋಲನ್ನು ಇತ್ತ ಕೊಟ್ಟುಬಿಡು– ನೋಡುವಾ.'

ದನಿಯಳ ಎರಡು ಕೈಗಳಲ್ಲೂ ಸೆಗಣಿ ಹಿಡಿದಿತ್ತು. ಬೆರಣಿ ತಟ್ಟಿ ಮುಗಿಸಿ ಬರುತ್ತ ಅವಳು ಗಂಡನತ್ತ ನೋಡಿ ಹೇಳಿದಳು – 'ಸ್ವಲ್ಪ ಫಲಾಹಾರವನ್ನಾದರೂ ಮುಗಿಸಿ ಹೋಗಬಾರದೇ ? ಅಷ್ಟೇನು ಅವಸರ ?'

ಆಗ ಹೋರಿರಾಮನು ನೆರಿಗೆ ತುಂಬಿದ ತನ್ನ ಮುಖವನ್ನು ಮುದುಡಿಸಿ ಹೇಳಿದ – 'ನಿನಗೆ ಯಾವಾಗಲೂ ನನ್ನ ಹೊಟ್ಟೆಯದೇ ಚಿಂತೆ; ಎಲ್ಲಿಯಾದರೂ ತಡಗಿಡ ಆಗಿಹೋದರೆ ದನಿಗಳ ಬೇಟಿಯಾಗುವುದೇ ಕಷ್ಟವಲ್ಲ-ಎಂಬುದು ನನ್ನ ಚಿಂತೆ. ಇನ್ನು ಸ್ನಾನ, ಪೂಜೆ– ಎಂದು ಅವರು ಕುಳಿತು ಬಿಟ್ಟರೆ ಸಾಯಂಕಾಲದ ವರೆಗೂ ಕಾದೇ ಇರಬೇಕಾದೀತು.'

'ಅದಕ್ಕೇ ಹೇಳುವುದು – ಹೊಟ್ಟೆ ಸ್ವಲ್ಪ ಗಟ್ಟಿಮಾಡಿಕೊಂಡೇ ಹೊರಡಿ– ಎಂಬುದಾಗಿ. ಹಾಗೆ, ಒಂದು ವೇಳೆ ಇಂದೇ ಹೋಗದಿದ್ದರೆ ಆಗುವುದಾದರೂ ಏನು ? ಮೊನ್ನೆ ತಾನೆ ಹೋಗಿ ಬಂದುದಲ್ಲವೇ ?'

'ನಿನಗೆ ಅರ್ಥವಾಗದ ವಿಚಾರದಲ್ಲಿ ಏಕೆ ಸುಮ್ಮನೆ ಬಾಯಿ ಹಾಕುವೆಯಪ್ಪಾ ? ನನ್ನ ಊರುಗೋಲು ಕೊಟ್ಟುಬಿಟ್ಟು ನೀನು ನಿನ್ನ ಕೆಲಸಕ್ಕೆ ಹೋಗು. ನಮ್ಮ ಜೀವ ಬಚಾವಾಗಿರುವುದೇ ಹೀಗೆ ಹೋಗಿ ಬರುತ್ತ ಇದ್ದುದರ ಪ್ರಸಾದದಿಂದಾಗಿ. ನೋಡು, ಊರಲ್ಲಿ ಎಷ್ಟು ಜನರಿದ್ದಾರೆ– ಅವರಿಗೆ ಏನೆಲ್ಲ ತೊಂದರೆಗಳು ! ನೋಟೀಸುಗಳು! ನಮ್ಮ ಕೊರಳು ಇನ್ನೊಬ್ಬರ

ಕಾಲುಗಳೆಡೆ ಸಿಕ್ಕಿಕೊಂಡಿರುವಾಗ, ಆ ಕಾಲುಗಳ ಸೇವೆಮಾಡಿಕೊಂಡಿರುವುದರಿಂದಲೇ ಅಲ್ಲವೆ ಸುಖ ದೊರಕುವುದು ? '

ದನಿಯಳು ಅಷ್ಟೆಲ್ಲ ವ್ಯವಹಾರಕುಶಲಳಲ್ಲ. ಅವಳ ಯೋಚನೆ – ನಾವು ದನಿಗಳ ಗದ್ದೆ ಉತ್ತು ಅನುಭವಿಸಿದರೂ ಅವರು ಗೇಣಿ ತೆಗೆದುಕೊಳ್ಳುವುದಿಲ್ಲವೇ ? ಹಾಗಿರುವಾಗ ಅವರಿಗೇಕೆ ಪದೇ ಪದೇ ಅಡ್ಡಬಿದ್ದು ಸೇವೆ ಮಾಡುತ್ತಿರಬೇಕು ? ಅವಳಿಗೆ ಮದುವೆಯಾಗಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಚನ್ನಾಗಿ ಅನುಭವವಾಗಿದೆ – ಎಷ್ಟೇ ಬೆವರು ಸುರಿಸಿ ಕೆಲಸಮಾಡಲಿ, ಎಷ್ಟೇ ಹೊಟ್ಟೆ ಕಾಯಿಸಿಕೊಳ್ಳಲಿ, ಒಂದೊಂದು ಪೈಗೆ ಸಹ ಗಂಟು ಹಾಕಿ ಉಳಿಸಲಿ – ಅಂತೂ ಏನು ಮಾಡಿದರೂ ಬಾಕಿ ಇಲ್ಲದೆ ಗೇಣಿ ಸಲ್ಲಿಸಲಿಕ್ಕೇ ಅವರಿಂದಾಗುತ್ತಿರಲಿಲ್ಲ. ಗಂಡ ಹೆಂಡಿರೊಳಗೆ ಯಾವಾಗಲೂ ಈ ವಿಚಾರ ಸಂಗ್ರಾಮ ನಡೆಯುತ್ತಲೇ ಇತ್ತು. ಅವಳ ಆರು ಮಕ್ಕಳಲ್ಲಿ ಈಗ ಮೂವರು ಮಾತ್ರ ಬದುಕಿ ಉಳಿದಿದ್ದಾರೆ. ಅವರಲ್ಲಿ ದೊಡ್ಡವನಾದ ಗೋಬರನು ಈಗ ಹದಿನಾರು ವರುಷದವನು. ಉಳಿದೆರಡು ಹುಡುಗಿಯರಲ್ಲಿ ಸೋನಿಗೆ ಹದಿನೆರಡು ವರುಷ, ರೂಪಳಿಗೆ ಎಂಟು. ಬಾಕಿ ಮೂರು ಮಕ್ಕಳು ಎಳೆತನದಲ್ಲೇ ಸತ್ತು ಹೋಗಿದ್ದವು. ಸರಿಯಾದ ಮದ್ದುಗಿದ್ದು ಮಾಡಿದ್ದರೆ ಅವು ಬದುಕಿ ಬಾಳಬಹುದಿತ್ತೆಂದು ಅವಳ ಮನಸ್ಸು ಈಗಲೂ ಹೇಳುತ್ತಿದೆ. ಆದರೆ ಆಗ ಅವಳಿಂದ ಬರೇ ಎಂಟಾಣೆಯ ಔಷಧಿ ತರಿಸಲಿಕ್ಕೂ ಆಗಿದ್ದಿಲ್ಲ.

ಅವಳ ಪ್ರಾಯವಾದರೂ ಈಗೆಷ್ಟಾಗಿರಬಹುದು? ಹೆಚ್ಚೆಂದರೆ ೩೫-೩೬. ಆದರೂ ತಲೆಗೂದಲೆಲ್ಲ ಹಣ್ಣಾಗಿ ಹೋಗಿತ್ತು. ಮುಖದ ಮೇಲೆಲ್ಲ ನೆರಿಗೆ ಬಂದಿತ್ತು. ಇಡೀ ದೇಹವೇ ಕುಗ್ಗಿಹೋಗಿತ್ತು. ಆ ಸುಂದರ ಗೋದಿವರ್ಣವೆಲ್ಲ ಈಗ ಮಾಸಿಹೋಗಿತ್ತು. ದೃಷ್ಟಿ ಸಹ ಮಂದವಾಗತೊಡಗಿತ್ತು. ಇವೆಲ್ಲ ಹೊಟ್ಟೆಗೆ ಸರಿಯಾಗಿ ಬೀಳದ್ದರಿಂದಲೇ ಇರಬೇಕು. ಅವಳಿಗೆ ಜೀವನದ ಸರಿಯಾದ ಸುಖ ಈ ವರೆಗೆ ಸಿಕ್ಕಿದ್ದಿಲ್ಲ. ಈ ಶಾಶ್ವತವಾದ ಕಷ್ಟಸ್ಥಿತಿ ಅವಳ ಆತ್ಮಾಭಿಮಾನವನ್ನು ಉದಾಸೀನತೆಯ ರೂಪಕ್ಕಿಳಿಸಿತ್ತು. ಈ ಗೃಹಸ್ಥಿತಿಯಲ್ಲಿ ಹೊಟ್ಟೆಯ ಹಿಟ್ಟಿಗೇ ಕಷ್ಟವೆಂದಾದ ಮೇಲೆ ಏಕಾಗಿ ಮನೆತನದ ಹೆಸರಲ್ಲಿ ಹೆಣಗಾಡಬೇಕು? ಇದರಿಂದಾಗಿ ಅವಳ ಮನಸ್ಸಿಗೇ ಬೇಸರ ಹಿಡಿದುಹೋಗಿತ್ತು. ನಾಲ್ಕಾರು ಬೈಸುಗಳನ್ನು ತಿಂದೊಡನೆಯೇ ಅವಳಿಗೆ ವೈರಾಗ್ಯ ಬಂದುಹೋಗುತಿತ್ತು.

ಹಾಗಾಗಿ ಸೋತು ಅವಳು ಮತ್ತೇನೂ ಹೇಳದೆ ಊರುಗೋಲು, ಕೋಟು, ಪಗಡಿ, ಕಾಲಿನ ಜೋಡು, ವೀಳ್ಯದೆಲೆಯ ಚೀಲ–ಎಲ್ಲವನ್ನೂ ತಂದು ಗಂಡನ ಮುಂದಿಟ್ಟಳು.

ಆಗ ಹೋರಿರಾಮ ಅವಳತ್ತ ಓರೆಗಣ್ಣಿಂದ ನೋಡುತ್ತ ಹೇಳಿದ– 'ಇಷ್ಟೆಲ್ಲ ಪೋಷಾಕು ತಂದೆಯಲ್ಲ! ಏನಿದು ಮಾವನ ಮನೆಗೆ ಹೊರಟುದೇ? ಮಾವನ ಮನೆಯಲ್ಲಿ ಸಹ, ಹೋಗಿ ದರ್ಬಾರ್ ತೋರಿಸುವೆನೆಂದರೆ, ಎಳೆ ಪ್ರಾಯದ ಭಾವ ನಾದಿನಿಯರಾರಾದರೂ ಈಗ ಅಲ್ಲಿ ಇದ್ದಾರೆಯೆ ?'

ಹೋರಿರಾಮನ ಕುಗ್ಗಿಹೋದ ಕಂದು ಮುಖದ ಮೇಲೆ ಮುಗುಳ್ ನಗೆಯ ತಳಕು ಒಂದು ಮೂಡಿ ಬಂತು. ಆಗ ದನಿಯಳು ಸ್ವಲ್ಪ ನಾಚುತ್ತ ಹೇಳಿದಳು –'ಓಹೋ! ಬಹಳ ಸುಂದರ ಯುವಕ! ನೋಡಿದಾಗ ಭಾವ ನಾದಿನಿಯರೆಲ್ಲ ಮೋಹಗೊಳಲಿಕ್ಕೆ !'

ಹೋರಿರಾಮ ಅಲ್ಲಲ್ಲಿ ಹರಿದುಹೋಗಿದ್ದ ಕೋಟನ್ನು ಮೆಲ್ಲನೆ ಮಡಚಿ ಮಂಚದ ಮೇಲೆ ಇಡುತ್ತ ಹೇಳಿದ–'ಹಾಗಾದರೆ ನೀನೇನು ಹೇಳುತ್ತಿರುವುದು – ನಾನು ಮುದುಕನಾಗಿ ಹೋದೆನೆಂದೇ? ಇನ್ನೂ ೪೦ ವರುಷ ಸಹ ದಾಟಿಲ್ಲ. ಮನುಷ್ಯ ಅರುವತ್ತರ ನಂತರ ಅರೆಮುದುಕನಾಗುವುದು – ಗೊತ್ತೇ ?'

'ಹೋಗಿ, ಕನ್ನಡಿಯಲ್ಲಿ ಸ್ವಲ್ಪ ಮುಖ ನೋಡಿಕೊಳ್ಳಿ. ನಿಮ್ಮಂತಹ ಮನುಷ್ಯರು ಅರುವತ್ತು ಆಗುವಾಗ ಚಾಪೆ ಹಿಡಿಯಬಹುದು. ನಿಮ್ಮ ಈ ಅವಸ್ಥೆ ನೋಡಿ ನೋಡಿ, ನಾನು ಕೂಡ ಒಣಗಿ ಹೋಗುತ್ತಿದ್ದೇನೆ. ಅಯ್ಯೋ ದೇವರೇ – ಆ ಮುದಿತನದಲ್ಲಿ ಹೇಗೆ ದಿನ ದೂಡುವುದು, ಎಲ್ಲಿ ಬಿಕ್ಕೆ ಬೇಡುವುದು – ಎಂದು ಕಂಗಾಲಾಗುತ್ತಿದ್ದೇನೆ.'

ಈ ಯಥಾರ್ಥ ಸ್ಥಿತಿಯ ಅರಿವಿನಿಂದಾಗಿ ಹೋರಿರಾಮನ ಆ ಕ್ಷಣಿಕ ಪರಿಹಾಸವು ಮಾಯವಾಯಿತು. ಅವನು ಊರುಗೋಲನ್ನು ತೆಗೆದು ಹೊರಡುತ್ತ ಹೇಳಿದ–'ಅರುವತ್ತರ ವರೆಗೆ ಹೋಗಿ ಮುಟ್ಟುವ ಸಂದರ್ಭವೇ ಬರಲಾರದು ದನಿಯಾ. ಅದರ ಮೊದಲೇ ಹೊರಟು ಹೋದೇವು.'

ಆ ಮಾತಿಗೆ ದನಿಯಳು ಅಡ್ಡಬಂದಳು–'ಸುಮ್ಮನಾದರೂ ಏಕೆ ಅಮಂಗಲ ವಿಚಾರ ಮಾತಾಡುವಿರಿ? ನಿಮ್ಮೊಡನೆ ಒಳ್ಳೆಯ ವಿಚಾರ ಹೇಳಿದರೂ ನೀವು ತೊಡಗುವುದು ಕೆಟ್ಟ ಯೋಚನೆಯಲ್ಲೇ.'

ಹೋರಿರಾಮು ಊರುಗೋಲನ್ನು ಹೆಗಲ ಮೇಲೆ ಇಟ್ಟುಕೊಂಡು ಮನೆಯಿಂದ ಹೊರಟ. ಬಾಗಿಲ ಬಳಿ ನಿಂತುಕೊಂಡು ದನಿಯಳು ಅವನನ್ನು ಬಹು ಹೊತ್ತಿನ ತನಕ ನೋಡುತ್ತಲೇ ಇದ್ದಳು. ನಿರಾಶೆಯಿಂದ ತುಂಬಿದ ಅವನ ಕೊನೆಯ ಮಾತು ಅವಳ ಸೋತ ಹೃದಯವನ್ನು ನಡುಗಿಸಿಬಿಟ್ಟಿತ್ತು. ಆದರೆ ಅವಳು ಅವನನ್ನು ನೋಡುತ್ತಿರುವಾಗ ತನ್ನ ನಾರೀತ್ವದ ವ್ರತ ತಪಸ್ಸುಗಳಿಂದ ಅವನಿಗೆ ಸಂಪೂರ್ಣ ಅಭಯದಾನ ಮಾಡುತ್ತಿರುವಳೋ ಎಂಬಂತೆ ತೋರುತ್ತಿತ್ತು. ಈ ನಾನಾ ತರದ ಕಷ್ಟಸಾಗರದಲ್ಲಿ ಅವಳ ಆ ಮಾಂಗಲ್ಯ ಒಂದೇ ಆಧಾರತೃಣವಾಗಿ ಅವಳನ್ನು ಪಾರುಗೊಳಿಸುವಂತಿತ್ತು. ಈ ಅಮಂಗಲ ಶಬ್ದಗಳು ಆ ಏಕ ಮಾತ್ರ ಆಧಾರವನ್ನೂ ಕೈಯಿಂದ ಸೆಳೆದುಕೊಳ್ಳುವುದಕ್ಕೆ ಸಿದ್ಧವಾದಂತೆ ತೋರಿ ಬಂತು. ಆ ಮಾತು ಯಥಾರ್ಥತೆಗೆ ಸಮೀಪದ್ದಾದ ಕಾರಣವೇ ಅವಳಿಗಷ್ಟು ಮನನೋಯಲು ಕಾರಣವಾಯಿತು. ಕುರುಡನೆಂದು ಹೀನೈಸಿದಾಗ ಕುರುಡನಿಗಾಗುವಷ್ಟು ದುಃಖ ಕಣ್ಣಿದ್ದವನಿಗಾದೀತೇ?

ಸಾಗುತ್ತಲೇ ಇದ್ದ ಹೋರಿರಾಮುನು ಕಾಲುದಾರಿಯ ಎರಡೂ ಬದಿಗಳಲ್ಲಿ ಬೆಳೆದ ಕಬ್ಬಿನ ಗದ್ದೆಗಳ ಹಸುರು ಬಣ್ಣವನ್ನು ಕಂಡು ಮನಸ್ಸಿನಲ್ಲೇ ಯೋಚಿಸತೊಡಗಿದ – 'ದೇವರ ದಯದಿಂದ ಕಬ್ಬು ಚೆನ್ನಾಗಿ ಬೆಳೆದರೆ ಹೇಗಾದರೂ ಮಾಡಿ ಒಂದು ದನ ಈ ಸಲ ಕೊಂಡುಕೊಳ್ಳಬೇಕು. ಆದರೆ ಊರಿನ ದನ ಅಷ್ಟೊಂದು ಹಾಲು ಕೊಡುವುದಿಲ್ಲ. ಅದರ ಕರು ಸಹ ಹೆಚ್ಚಿನ ಪ್ರಯೋಜನಕ್ಕೆ ಬರುವುದಿಲ್ಲ. ಹೆಚ್ಚೆಂದರೆ ಗಾಣ ಎಳೆಯಲಿಕ್ಕಾದೀತು. ಆದ್ದರಿಂದ ಇಂಗ್ಲಿಶ್ ಜಾತಿಯ ದನ ತೆಗೆಯಬೇಕು. ಚನ್ನಾಗಿ ಅದನ್ನು ಸಾಕಬೇಕು. ಏನಿಲ್ಲವಾದರೂ ಅದು ನಾಲ್ಕಾರು ಸೇರು ಹಾಲು ಕೊಟ್ಟೀಕೊಟ್ಟೀತು. ಗೋಬರನು ಹಾಲಿಗಾಗಿ ಬಹಳ ಆಸೆ ಪಡುತ್ತಿದ್ದಾನೆ. ಈ ಪ್ರಾಯದಲ್ಲಿ ಅವನು ಹಾಲು ಕುಡಿಯದಿದ್ದರೆ ಇನ್ನಾವಾಗ ಕುಡಿಯುವುದು? ಒಂದು ವರ್ಷದ ಮಟ್ಟಿಗಾದರೂ ಹಾಲು ಕುಡಿದರೆ ಗಟ್ಟಿಮುಟ್ಟಾದಾನು. ಉಳಿದ ಮಕ್ಕಳ ಮೈಯಲ್ಲಿ ಸಹ ಒಂದು ಬಣ್ಣ ಬಂದೀತು. ಆದರೆ ಹಸುವನ್ನು ನೂರು ರೂಪಾಯಿಗಿಂತ ಕಡಿಮೆಗೆ ಯಾರೂ ಕೊಡಲಿಕ್ಕಿಲ್ಲ. ಕ್ರಯ ಎಷ್ಟೇ ಆಗಲಿ; ಅಂಥ ದನದಿಂದ ಮನೆಯ ಶೋಭೆಯೇ ಹೆಚ್ಚೀತು. ಬೆಳಿಗ್ಗೆ ಎದ್ದೊಡನೆ ಗೋವಿನ ದರ್ಶನವಾದರೆ ಸಾಕು; ಮತ್ತೇನು ಬೇಕು? ಆದರೆ ನನ್ನ ಈ ಆಶೆ ಯಾವಾಗ ಪೂರ್ತಿ ಆದೀತೋ! – ಯಾವಾಗ ಆ ಶುಭ ದಿನವು ಬಂದೀತೋ! – ದೇವರೇ ಬಲ್ಲ!'

ಇತರ ಹೆಚ್ಚಿನ ರೈತರ ಹಾಗೆಯೇ ಹೋರಿರಾಮನ ಮನಸ್ಸಿನಲ್ಲಿಯೂ ಈ ದನದ ಆಸೆ ಬಹುದಿನಗಳಿಂದ ಮನೆಮಾಡಿಕೊಂಡಿತ್ತು. ಇದೇ ಅವನ ಜೀವನದ ಅತಿ ದೊಡ್ಡ ಸ್ವಪ್ನ, ಅತಿ ದೊಡ್ಡ ಬಯಕೆಯಾಗಿತ್ತು. ಬೇಂಕಿನ ಬಡ್ಡಿ ಹಣ ದಿಂದ ಸುಖಪಡುವ, ಅಥವಾ ಜಮೀನು ಕೊಂಡುಕೊಂಡು ಮೆರೆದಾಡುವ, ಇಲ್ಲವೇ ಭವ್ಯ ಭವನವನ್ನು ಕಟ್ಟಿಸಿ ಆನಂದಪಡುವ, ದೊಡ್ಡ ದೊಡ್ಡ ಆಸೆ ಗಳೆಲ್ಲ ಅವನ ಆ ನಿಷ್ಕಪಟ ಹೃದಯದಲ್ಲಿ ಹೇಗೆ ಮೂಡಿ ಬಂದಾವು?

ಜೇಷ್ಠ ಮಾಸದ ಸೂರ್ಯನು ಮೇಲೇರುತ್ತಲೇ ಇದ್ದ. ಅವನು ತನ್ನ ರಜತ ಕಿರಣಗಳಿಂದ ಆಕಾಶದ ಕೆಂಬಣ್ಣವನ್ನು ಅಳಿಸುವಂತಿದ್ದು ತೀಕ್ಷ್ಣ ರೂಪವನ್ನು ತಾಳುತ್ತಿದ್ದ. ಉರಿಗಾಳಿ ಬೀಸಲೂ ಆರಂಭಿಸಿತು. ದಾರಿಯ ಇಬ್ಬದಿಯ ಗದ್ದೆ ಗಳಲ್ಲಿ ಕೆಲಸ ಮಾಡುತ್ತಿದ್ದ ರೈತರೆಲ್ಲ ಹೋರಿರಾಮನನ್ನು ನೋಡಿ ನಮಸ್ಕಾರ ಮಾಡಿ ವೀಳ್ಯ ಹಾಕಿಕೊಂಡು ಹೋಗಲು ಒತ್ತಾಯಪಡಿಸುತ್ತಿದ್ದರು. ಆದರೆ ಅವನಿಗೆ ಅದಕ್ಕೆಲ್ಲ ಸಮಯವೆಲ್ಲಿಂದ? ಇಂತಹ ಆದರ ಸತ್ಕಾರಗಳ ಮೂಲಕ ಆವನ ಹೃದಯದೊಳಗೆ ಹುದುಗಿದ್ದ ಗೌರವದಾಸೆಯು ಒಣಗಿದ ಮುಖದ ಮೇಲೆ ಒಂದು ತರದ ಗರ್ವದ ಹೊಳಪನ್ನು ಮೂಡಿಸುತ್ತಿತ್ತು. ಧನಿಗಳಲ್ಲಿ ಆಗಾಗ ಹೋಗಿ ಬಂದು ಅವರ ನಿಕಟ ಸಂಬಂಧವನ್ನಿಟ್ಟುಕೊಂಡಿದ್ದುದರ ಪ್ರಸಾದರೂಪವಾಗಿಯೇ ಅವನಿಗೆ ಈ ತರದ ಆದರ ಗೌರವಗಳು ಬರುತ್ತಿವೆ. ಇಲ್ಲವಾದರೆ ಅವನನ್ನು ಯಾರು ಕೇಳುತಿದ್ದರು? ಐದು ಎಕ್ರೆ ಭೂಮಿಯುಳ್ಳ ರೈತನ ಲಕ್ಷ್ಯವೇನು? ಮೂರು ನಾಲ್ಕು ಜೋಡು ಎತ್ತು ಕೋಣಗಳನ್ನು ಕಟ್ಟಿಕೊಂಡ ರೈತರು ಸಹ ಹೋರಿರಾಮನ ಮುಂದೆ ಈ ರೀತಿ ತಲೆ ತಗ್ಗಿಸು ತ್ತಾರೆಂದರೆ ಇದೇನು ಸಾಮಾನ್ಯ ವಿಚಾರವೇ?

ಅವನು ಗದ್ದೆಗಳ ಮಧ್ಯದ ಕಾಲುದಾರಿಯನ್ನು ದಾಟಿ ಒಂದು ಬೈಲಿಗೆ ಬಂದು ಸೇರಿದ. ಮಳೆಗಾಲದಲ್ಲಿ ಅಲ್ಲಿ ಸ್ವಲ್ಪ ನೀರು ನಿಲ್ಲುತ್ತಿದ್ದು ಬೇಸಗೆ ಬಂದೊ ಡನೆ ಹಸುರು ಹುಲ್ಲು ಏಳುತ್ತಿತ್ತು. ಆದ್ದರಿಂದ ಅಕ್ಕಪಕ್ಕದ ದನಕರುಗಳೆಲ್ಲ ಅಲ್ಲಿ ಮೇಯಲಿಕ್ಕಾಗಿ ಬರುತ್ತಿದ್ದವು. ಈ ಸಮಯದಲ್ಲಿ ಅಲ್ಲಿಯ ನಿರ್ಮಲ ಗಾಳಿಯೂ ತಂಪಾಗಿ ಬೀಸುತ್ತಿತ್ತು. ಅವನಿಗೆ ಅಲ್ಲೇ ಸ್ವಲ್ಪ ಕೂತುಕೊಂಡು ಆ ತಂಗಾಳಿಯನ್ನು ಸೇವಿಸುವ ಮನಸ್ಸಾಯಿತು. ದಿನವಿಡೀ ಒಂದಲ್ಲ ಒಂದು ತೊಂದರೆ ಇದ್ದೇ ಇದೆ.

ಎಷ್ಟೋ ಮಂದಿ ಒಕ್ಕಲಿಗರು ಈ ಸುಂದರ ಭೂಭಾಗವನ್ನು ತಮ್ಮ ಹೆಸ

ರಿಗೆ ಮಾಡಿಕೊಳ್ಳಬಯಸುತ್ತಿದ್ದರು. ಒಳ್ಳೆಯ ಗೇಣಿ ಕೊಡಲಿಕ್ಕೂ ಅಣಿಯಾಗಿದ್ದರು. ಆದರೆ ರಾಯ್‌ಸಾಹೇಬರಿಗೆ ದೇವರು ಒಳ್ಳೆಯದು ಮಾಡಲಿ! ಗೇಣಿ ಹೋದರೂ ಚಿಂತೆ ಇಲ್ಲ! ದನ ಕರುಗಳು ಮೇಯಲಿಕ್ಕಾಗಿಯೇ ಈ ಭೂಮಿ ಮೀಸಲು - ಎಂಬುದಾಗಿ ಅವರು ಖಡಾ ಖಂಡಿತ ಹೇಳಿಯೇ ಬಿಟ್ಟಿದ್ದರು. ಬೇರೆ ಯಾರಾದರೂ ಆಗುತ್ತಿದ್ದರೆ– 'ದನಗಿನಗಳೆಲ್ಲ ಕಾಡಿಗೆ ಹೋಗಲಿ. ಕೈಗೆ ಬರುವ ಹಣವನ್ನೇಕೆ ಬಿಟ್ಟುಬಿಡಬೇಕು?' -ಎಂದು ಯೋಚಿಸುತ್ತಿದ್ದರು. ಆದರೆ ಅವರು ಮಾತ್ರ ಹಳೆಯ ಸಂಪ್ರದಾಯದ ಮೇಲೆ ವಿಶ್ವಾಸವಿರುವ ಮಹಾನುಭಾವರಾಗಿದ್ದರು! ಒಕ್ಕಲುಗಳ ಮೇಲೆ ದಯೆ ತೋರಿಸದ ಧನಿಗಳು ಅದೆಂತಹ ದೊಡ್ಡ ಮನುಷ್ಯರು?

ಹೋರಿರಾಮ ಅತ್ತ ಇತ್ತ ನೋಡುವಾಗ ಬೋಲನು ತನ್ನ ದನಕರುಗಳನ್ನು ಹೊಡೆದುಕೊಂಡು ಆ ಕಡೆಯೇ ಬರುತ್ತಿದ್ದ. ಬೋಲನು ಅದೇ ಊರಿಗೆ ಸೇರಿದ ಒಬ್ಬ ಗೊಲ್ಲ. ಹಾಲು ಬೆಣ್ಣೆಗಳ ವ್ಯಾಪಾರ ಆತನದು. ಒಳ್ಳೆಯ ಬೆಲೆ ಬಂದರೆ ಊರಿನ ರೈತರಿಗೆ ದನಗಳನ್ನು ಮಾರುತ್ತಲೂ ಇದ್ದ. ಆ ದನಗಳನ್ನು ಕಂಡು ಹೋರಿರಾಮನ ಮನಸ್ಸಿನಲ್ಲಿ ಆಸೆ ಮೂಡಿ ಬಂತು. ಮುಂದಿನಿಂದ ಬರುತ್ತಿರುವ ಆ ಕಾಳಿ ದನ ಒಂದನ್ನು ಬೋಲ ಕೊಟ್ಟುಬಿಟ್ಟಿದ್ದರೆ? ಆಹ! ಏನು ಹೇಳುವುದು! ಆದರೆ ಹಣ? – ಸ್ವಲ್ಪ ಹಿಂದು ಮುಂದು ಮಾಡಿ ಕೊಟ್ಟೇ ಬಿಡುತ್ತಿದ್ದ ಹೋರಿರಾಮ.

ಹೋರಿರಾಮನಿಗೆ ಮನೆಯಲ್ಲೇನೂ ರೂಪಾಯಿ ಇಲ್ಲವೆಂದು ಗೊತ್ತಿತ್ತು. ಹೆಚ್ಚು ಹಣದ ಮಾತು ಇರಲಿ; ಕೊಡಬೇಕಾದ ಪೂರ್ಣ ಗೇಣಿಯನ್ನೇ ಸಂದಾಯ ಮಾಡಲು ಅವನಿಂದಾಗಿದ್ದಿಲ್ಲ. ಅಲ್ಲದೆ ವಿಶ್ವೇಶ್ವರ ರಾಯರಿಗೂ ಸಾಲದ ಹಣ ಕೊಡುವುದು ಬಾಕಿ ಇತ್ತು. ಅದಕ್ಕೆ ರೂಪಾಯಿಗೆ ಒಂದಾಣೆಯಂತೆ ಬಡ್ಡಿ ಏರುತ್ತಲೇ ಇತ್ತು. ಆದರೆ, ದಾರಿದ್ರ್ಯದಲ್ಲಿ ಒಂದು ತರದ ಅದೂರದರ್ಶಿತ್ವವು ಇದ್ದೇ ಇರುತ್ತದೆ. ಬೈದರೂ ಹೊಡೆದರೂ ದೂರವಾಗುವಂತಹದಲ್ಲ ಅದು. ಆದರಿಂದಾಗಿ ಅವನಿಗೊಂದು ತರದ ಉತ್ಸಾಹವೇ ಇತ್ತು. ಹಲವು ವರ್ಷಗಳಿಂದ ಮನ ಕೊರೆಯುತ್ತಿದ್ದ ದನದ ಮೇಲಿನ ಆ ಆಸೆ ಇಂದು ಅವನನ್ನು ಚಂಚಲನನ್ನಾಗಿಸಿತು. ಅವನು ಕೊನೆಗೆ ಬೋಲನ ಹತ್ತಿರ ಹೋಗಿ – 'ನಮಸ್ಕಾರ ಬೋಲಣ್ಣಾ. ಏನು ಸಮಾಚಾರ? ಜಾತ್ರೆಯಿಂದ ಹೊಸ ಹೊಸ ದನಗಳನ್ನು ತಂದಿರುವೆಯಂತೆ, ಹೌದೇ ?' ಎಂದ.

ಬೋಲನು ತುಸು ಗರ್ವಯುಕ್ತ ಸ್ವರದಿಂದ ಉತ್ತರವಿತ್ತ. ಅವನಿಗೆ ಹೋರಿರಾಮನ ಮನೋಗತದ ಅರಿವಾಗಿತ್ತು – 'ಹೌದು; ಎರಡು ದನ, ಎರಡು ಹೆಣ್ಣು ಕರು – ತಂದಿದ್ದೆ. ಮೊದಲಿದ್ದ ದನಗಳೆಲ್ಲ ಬತ್ತಿ ಹೋಗಿದ್ದುವು. ಅಂತೂ ಹಾಲು ಸಿಗದಿದ್ದರೆ ದಿನ ಹೋಗುವುದಾದರೂ ಹೇಗೆ ?'

ಹೋರಿರಾಮು ಮುಂದುಗಡೆ ಬರುತ್ತಿದ್ದ ದನದ ಬೆನ್ನ ಮೇಲೆ ಕೈಯಾಡಿಸುತ್ತ ಹೇಳಿದ– 'ಒಳ್ಳೆಯ ಜಾತಿ ದನದ ಹಾಗೆ ಕಾಣಿಸುತ್ತದೆ! ಎಷ್ಟಕ್ಕೆ ಸಿಕ್ಕಿತು ?'

ಬೋಲ ಸ್ವರ ಏರಿಸಿ ಹೇಳಿದ– 'ಈಗ ಪೇಟೆ ಬಹಳ ತೇಜಿಯಾಗಿದೆ ಮಹಾರಾಯಾ! ಹಾಗಾಗಿ ಎಂಬತ್ತು ರೂಪಾಯಿ ಬಿಸಾಡಬೇಕಾಯಿತು. ಕಣ್ಣು ಹಾರಿ ಹೋಯಿತು. ಎರಡು ಕರುಗಳಿಗೆ ಮೂವತ್ತು ಮೂವತ್ತು ರೂಪಾಯಿ! ಇಷ್ಟಾಗಿ ಸಹ ಗಿರಾಕಿಗಳಿಗೆ ರೂಪಾಯಿಗೆ ಆರು ಸೇರು ಹಾಲು ಕೊಡಬೇಕಂತೆ!'

'ಆದರೆ ನೀವೆಲ್ಲ ಬಹಳ ಎದೆಗಟ್ಟಿಯ ಮನುಷ್ಯರಪ್ಪ. ಇಡೀ ಊರಲ್ಲೇ ಇಂತಹ ನಾಲು ಸಿಗಲಿಕ್ಕಿಲ್ಲ. ಅಂತಹ ದನ ತಂದು ಬಿಟ್ಟಿದ್ದೀರಲ್ಲ!'

ಬೋಲನ ಹೆಮ್ಮೆ ಮತ್ತೂ ಸ್ವಲ್ಪ ಏರಿತು. 'ರಾಯ್‌ಸಾಹೇಬರು ಇದಕ್ಕೆ ನೂರು ರೂಪಾಯಿ ಕೊಡಲು ತಯಾರಿದ್ದರು. ಆದರೆ ನಾನು ಉಪಾಯದಿಂದ ಹೊಡೆದುಬಿಟ್ಟೆ. ದೇವರ ದಯೆ ಇದ್ದರೆ ಈ ಕರುವಿನಲ್ಲೇ ನೂರು ರೂಪಾಯಿ ತೆಗೆದುಬಿಡಬಹುದು' ಎಂದ ಅವನು.

"ಆ ವಿಚಾರ ಸಂದೇಹವೇ ಬೇಡ. ನಮ್ಮ ಧನಿಗಳಿಗೆ ಅದೆಲ್ಲ ಏನು ಗೊತ್ತು? ಕೊಂಡು ಹೋಗಿ ಹಟ್ಟಿಯಲ್ಲಿ ಸೇರಿಸಿದರೆಂದರೆ ಮತ್ತೆ ದೇವರೇ ಗತಿ! ಅದೆಲ್ಲ ನಿಮ್ಮಂತಹರಿಗೆ ಹೇಳಿದ್ದು. ಹಣ ಹಾಕುತ್ತೀರಿ – ಹಾಗೇ ತೆಗೆಯುತ್ತೀರಿ. ಬೇರೇನೂ ಬೇಡ. ಯಾವಾಗಲೂ ಇದರ ದರ್ಶನ ಮಾಡಿಕೊಂಡಿರಬೇಕೆಂದು ತೋರುತ್ತದೆ. ನಿತ್ಯ ದನಗಳ ಸೇವೆ ಮಾಡುತ್ತಿರುವ ನಿನ್ನ ಜೀವನವೇ ಧನ್ಯ! ನಮಗೆಲ್ಲ ದನದ ಸೆಗಣಿ ಸಿಗುವುದು ಸಹ ಕಷ್ಟದ ವಿಚಾರವಾಗಿದೆ. ಮನೆಯಲ್ಲಿ ಒಂದು ದನ ಸಹ ಇಲ್ಲವಾದರೆ ಅದೆಷ್ಟು ನಾಚಿಕೆಗೇಡು! ವರ್ಷಗಳು ದಾಟಿ ಹೋದರೂ ಗೋರಸ ದರ್ಶನವೇ ನಮಗಾಗುವುದಿಲ್ಲ. ನಮ್ಮ ಮನೆಯಾಕೆಯಂತೂ – ಯಾಕೆ ಬೋಲಣ್ಣನನ್ನು ಕೇಳಬಾರದು ? – ಎನ್ನುತ್ತಿರುತ್ತಾಳೆ. ಸಿಕ್ಕಿದಾಗ ಕೇಳಿ ನೋಡುತ್ತೇನೆಂದು

ನಾನು ಹೇಳುತ್ತಿರುತ್ತೇನೆ. ಅವಳಿಗೆ ನಿನ್ನ ಸ್ವಭಾವದ ಮೇಲೆ ಬಹಳ ಗೌರವ. ಯಾವಾಗಲೂ ಹೇಳುತ್ತಾಳೆ ಅವಳು – 'ಪರಸ್ತ್ರೀಯರನ್ನು ಕಂಡಾಗ, ಆ ರೀತಿ ಕೆಳಗೆ ನೋಡಿ ಮಾತಾಡುವ ಬೋಲಣ್ಣನಂತಹ ಮನುಷ್ಯರನ್ನು ಕಾಣುವುದೇ ಅಪರೂಪ' – ಎಂಬುದಾಗಿ."

ಮೊದಲೇ ಏರಿ ಹೋಗಿದ್ದ ಬೋಲನಿಗೆ ಈಗ ಇನ್ನಷ್ಟು ಗರ್ವ ಬಂತು. ಹಾಗಾಗಿ ಹೇಳಿದ ಅವನು - 'ಇತರರ ಸ್ತ್ರೀಯರನ್ನು ತನ್ನ ಅಕ್ಕ ತಂಗಿಯರಂತೆ ಕಾಣುವವನೇ ನಿಜವಾದ ಸದ್ಗೃಹಸ್ಥ. ನಾನು ಹೇಳುವುದಾದರೆ-ಪರನಾರಿಯರತ್ತ ಕಣ್ಣು ಹಾಕುವವನಿಗೆ ಗುಂಡೇ ಹೊಡೆಯಬೇಕು.'

'ಶಾಭಾಸ್, ನಿನ್ನ ಮಾತಿಗೆ ಲಕ್ಷ-ಲಕ್ಷ ರೂಪಾಯಿ ಬೆಲೆ ಕೊಡಬೇಕು. ಇನ್ನೊಬ್ಬರ ಮಾನ ಮರ್ಯಾದೆಯನ್ನು ತನ್ನ ಮಾನ ಮರ್ಯಾದೆಯಾಗಿ ತಿಳಿಯುವವನೇ ನಿಜವಾದ ಸಜ್ಜನ.'

'ಗಂಡ ಸತ್ತ ಮೇಲೆ ಹೆಂಗುಸು ಅನಾಥೆಯಾಗುವಂತೆಯೇ ಹೆಂಡತಿ ಸತ್ತ ಮೇಲೆ ಗಂಡುಸಿನ ಕೈಯೂ ಮುರಿದು ಹೋದಂತಾಗುತ್ತದೆ. ನನ್ನ ಮನೆಯಂತೂ ಈಗ ಹಾಳಾಗಿಯೇ ಹೋಯಿತು ರಾಮಣ್ಣ! ಒಂದು ತಂಬಿಗೆ ನೀರು ಕೊಡುವವರಿಗೂ ಗತಿ ಇಲ್ಲವಾಗಿದೆ!'

ಕಳೆದ ವರ್ಷ ಬೋಲನ ಹೆಂಡತಿ ಜ್ವರ ಬಂದು ತೀರಿಹೋಗಿದ್ದಳು. ಇದು ಹೋರಿರಾಮನಿಗೆ ಗೊತ್ತಿತ್ತು. ಆದರೆ ಐವತ್ತು ವರ್ಷದ ಮುದುಕ ಒಳಗಿಂದೊಳಗೆ ಇಷ್ಟು ಸ್ನೇಹಮಯನಾಗಿದ್ದನೆಂದು ಅವನಿಗೆ ಗೊತ್ತಿದ್ದಿಲ್ಲ. ಹೆಣ್ಣಿನ ವಿಚಾರ ಬಂದೊಡನೆ ಬೋಲನ ಕಣ್ಣಲ್ಲಿ ನೀರು ಬಂತು. ಇದರಿಂದ ಹೋರಿರಾಮನ ಮನಸ್ಸೂ ಕರಗಿತು.

'ಹಿಂದಿನವರ ಮಾತು ಎಂದಿಗೂ ಸುಳ್ಳಲ್ಲ ಬೋಲಣ್ಣ! ಮನೆಯಾಕೆ ಇಲ್ಲದ ಮನೆ ದೆವ್ವದ ಮನೆ. ನಾನು ಹೇಳುವುದು – ಎಲ್ಲಿಯಾದರೂ ಎರಡನೆಯ ನೆಂಟಸ್ತಿಕೆ ಏಕೆ ನೋಡಬಾರದು? – ಎಂದು.'

'ನೋಡುತ್ತಲೇ ಇದ್ದೇನೆ. ಆದರೆ ಎಲ್ಲಿಯೂ ಸರಿ ತಾಗಿಬರಲಿಲ್ಲ. ನೂರಿನ್ನೂರು ರೂಪಾಯಿ ಖರ್ಚು ಮಾಡಲಿಕ್ಕೂ ತಯಾರಿದ್ದೇನೆ. ಇನ್ನೆಲ್ಲ ದೇವರಿಚ್ಛೆ.'

'ಹಾಗಾದರೆ ನಾನೂ ನೋಡುತ್ತಿರುತ್ತೇನೆ. ದೇವರು ದಯೆ ತೋರಿಸಿದರೆ ಬೇಗನೆ ಮನೆ ತುಂಬಿ ಬರಬಹುದು.'

'ಅಷ್ಟಾದರೆ ನಾನು ಉದ್ಧಾರವಾದ ಹಾಗೆಯೇ ಸರಿ. ಉಣ್ಣಲಿಕ್ಕೆ ತಿನ್ನಲಿಕ್ಕೆ ಮನೆಯಲ್ಲಿ ದೇವರು ಕೊಟ್ಟುದು ಧಾರಾಳ ಇದೆ. ನಾಲ್ಕೈದು ಸೇರು ಹಾಲೂ ಬರುತ್ತದೆ. ಆದರೆ ಅದರಿಂದೆಲ್ಲ ಏನು ಪ್ರಯೋಜನ?'

'ನನ್ನ ಮಾವನ ಮನೆಯಲ್ಲಿ ಒಬ್ಬಳು ಹೆಂಗುಸಿದ್ದಾಳೆ. ಗಂಡ ಅವಳನ್ನು ಬಿಟ್ಟು ಕಲ್ಕತ್ತೆಗೆ ಹೋಗಿ ಮೂರು ನಾಲ್ಕು ವರ್ಷವಾಯಿತು. ಪಾಪ! ಕೂಲಿ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾಳೆ. ಮಕ್ಕಳು ಮರಿಗಳೂ ಇಲ್ಲ. ನೋಡಲಿಕ್ಕೂ ಚೆನ್ನಾಗಿಯೇ ಇದ್ದಾಳೆ. ಹೆಚ್ಚೇಕೆ – ಸಿಕ್ಕಿದ್ರೆ ಮನೆಗೊಂದು ದೀಪವಾದಾಳು – ಎಂದು ತಿಳಿದುಕೋ.'

ಬೋಲನ ಒಣಗಿದ ಮುಖವು ಅರಳಿತು. ಆಸೆಯಲ್ಲಿ ಇರುವ ಸಾಮರ್ಥ್ಯವಾದರೂ ಎಷ್ಟು! ಅವನು ಹೇಳಿದ- 'ಇನ್ನೀಗ ನಿನ್ನದೇ ಆಧಾರ ಮಹಾರಾಯಾ! ನಿನಗೆ ಸಮಯವಿದ್ದರೆ ಹೊರಡುವಾ – ಹೋಗಿ ನೋಡಿಕೊಂಡೇ ಬರುವಾ!'

'ನಾನೆಲ್ಲ ಸರಿಪಡಿಸಿದ ನಂತರವೇ ನಿನಗೆ ತಿಳಿಸುತ್ತೇನೆ. ಹೆಚ್ಚಿನ ಅವಸರ ತೋರಿಸಿದರೆ ಕೆಲಸ ಕೆಟ್ಟುಹೋದೀತು!'

'ಆಗಲಿ, ನಿನಗೆ ಸಮಯ ಸಿಕ್ಕಿದಾಗ ನೋಡು. ಆದರೆ ಬಹಳ ಹಿಂದೆ ಹಾಕಬೇಡ. ಈಗ, ನಿನಗೆ – ಈ ಕಾಳಿ ದನದ ಮೇಲೆ ಮನಸ್ಸಾಗಿದ್ದರೆ – ಅವಳನ್ನು ಹೊಡೆದುಕೊಂಡು ಹೋಗು.'

'ಈ ದನದ ಮೇಲೆ ಮನಸ್ಸಾಗಿದೆ ನಿಜ. ಆದರೆ ನಿನ್ನನ್ನು ನಷ್ಟದಲ್ಲಿ ಹಾಕಲು ಇಷ್ಟವಿಲ್ಲ. ಮಿತ್ರರ ಕುತ್ತಿಗೆ ಕೊಯ್ಯುವುದು ಎಷ್ಟಕ್ಕೂ ಧರ್ಮವಲ್ಲ. ಹೇಗೂ ಇಷ್ಟು ದಿನ ದಾಟಿತು. ಇನ್ನೂ ಹಾಗೆಯೇ ಹೋದೀತು.'

'ನಿಮ್ಮ ನಮ್ಮೊಳಗೆ ಪಾಲಾಗಿ ಬೇರೆಯಾದವರಂತೆ ನೀನು ಮಾತನಾಡುವೆಯಲ್ಲ– ರಾಮಣ್ಣ! ನೀನೀಗ ದನವನ್ನು ಹೊಡೆದುಕೊಂಡು ಹೋಗು. ಹಣ ಕುಶಿ ಬಂದಷ್ಟು ಕೊಡು. ನನ್ನ ಮನೆ ಬೇರೆ, ನಿನ್ನ ಮನೆ ಬೇರೆಯೇ? ಎಂಬತ್ತು ರೂಪಾಯಿ ಕೊಟ್ಟಿದ್ದೆ. ನೀನು ಅಷ್ಟೇ ಕೊಟ್ಟರೆ ಸಾಕು. ಹೋಗು.'

'ಆದರೆ ನನ್ನ ಹತ್ತಿರ ಈಗ ನಗದಿ ಹಣ ಇಲ್ಲವಲ್ಲ!'

'ಯಾರು ನಿನ್ನನ್ನು ನಗದಾಗಿ ಕೇಳಿದರು?'

ಹೋರಿರಾಮನ ಎದೆ ಒಂದು ಗಜ ಅಗಲವಾಯಿತು. ಆ ಚಿನ್ನದಂತಹ

ದನಕ್ಕೆ ಎಂಬತ್ತು ರೂಪಾಯಿ ಹೆಚ್ಚಲ್ಲ. ಎಷ್ಟು ತುಂಬಿ ಬಂದ ದನ ! ಎರಡು ಹೊತ್ತಿಗೆ ಒಟ್ಟಾಗಿ ಆರೇಳು ಸೇರು ಹಾಲು ಸಿಗದಿರದು. ಎಷ್ಟು ಸಾಧು ! ಮಗು ಕೂಡ ಹೋಗಿ ಹಾಲು ಕರೆಯಬಹುದು ! ಇದರ ಒಂದೊಂದು ಕರುವಿನಲ್ಲೂ ನೂರು ನೂರು ರೂಪಾಯಿ ತೆಗೆಯಬಹುದು. ಮನೆ ಬಾಗಿಲಿಗೆ ಕಟ್ಟಿದರೆ ಮನೆಯ ಲಕ್ಷಣವೇ ಹೆಚ್ಚಾಗಬಹುದು. ಹೋರಿರಾಮನಿಗೆ ಹೆಚ್ಚುಕಡಿಮೆ ನಾಲ್ನೂರು ರೂಪಾಯಿಗಳ ಸಾಲ ಮೊದಲೇ ಇತ್ತು. ಆದರೆ ಸಾಲದ ಹಣವನ್ನು ಧರ್ಮಾರ್ಥ ಬಂದುದೆಂದೇ ಅವನು ತಿಳಿದಿದ್ದನು. ಎಲ್ಲಿಯಾದರೂ ಬೋಲನಿಗೆ ನೆಂಟಸ್ತಿಕೆ ಕೂಡಿಬಂದರೆ ಒಂದೆರಡು ವರ್ಷಗಳ ವರೆಗೆ ಹಣದ ಸುದ್ದಿಯೇ ತೆಗೆಯಲಾರ. ಅಥವಾ ನೆಂಟಸ್ತಿಕೆ ಕೂಡಿಬಾರದಿದ್ದರೂ ಆತ ತನಗೇನು ಮಾಡಿಯಾನು ? ಹೆಚ್ಚೆಂದರೆ ಆಗಾಗ್ಗೆ ಬಂದು ತಗಾದೆ ಮಾಡಿಯಾನು, ಬೈದಾನು. ಆದರೆ ಹೋರಿರಾಮ ಅದಾವುದರಿಂದಲೂ ಹೆಚ್ಚಿನ ಬೇಸರಪಡುವವನಲ್ಲ. ಅದೆಲ್ಲ ಅವನಿಗೊಂದು ರೂಢಿಯಾಗಿ ಹೋಗಿತ್ತು, ಕೃಷಿಕಜೀವನದ ಒಂದು ವರಪ್ರಸಾದವಾಗಿತ್ತು.

ಬೋಲನು ದನದ ಹಗ್ಗವನ್ನು ಹೋರಿರಾಮನ ಕೈಯಲ್ಲಿ ಕೊಡುತ್ತ ಹೇಳಿದ– ' ಕರೆದುಕೊಂಡು ಹೋಗಣ್ಣಾ – ಇವಳನ್ನು. ದೇವರು ಒಳ್ಳೇದು ಮಾಡಲಿ. ಹೊತ್ತಿಗೆ ಆರು ಸೇರು ಹಾಲು ಸಿಗಲಿ. ಹೋಗುವಾ. ಪರಿಚಯವಿಲ್ಲದ ಕಾರಣ ದಾರಿಯಲ್ಲಿ ಕೊಸರಿಕೊಳ್ಳಲು ತೊಡಗಲೂ ಬಹುದು; ನಾನೇ ನಿಮ್ಮ ಮನೆಯ ವರೆಗೆ ಮುಟ್ಟಿಸಿಬರುತ್ತೇನೆ. ಹೋರಿಯಣ್ಣಾ – ನಿನ್ನ ಹತ್ತಿರ ಸತ್ಯಸ್ಥಿತಿ ಹೇಳುತ್ತೇನೆ – ಧನಿಗಳೇ ತೊಂಬತ್ತು ರೂಪಾಯಿಗೆ ತಯಾರಿದ್ದರು ಕೊಳ್ಳಲು. ಆದರೆ ಅವರಲ್ಲೇನು ದನಗಳಿಗೆ ಕಡಿಮೆಯೇ ? ಕೊಂಡುಕೊಂಡು, ಹಾಲು ಆರಿದ ಬಳಿಕ ಯಾರಾದರೂ ತುರುಕರ ಕೈಯಲ್ಲಿ ಹಾಕಿಬಿಡುತ್ತಾರೆ. ಆ ಸಾಹೇಬರಿಗೆಲ್ಲ ಗೋ ಸೇವೆಯ ವಿಚಾರವೇನು ಗೊತ್ತು ? ಬೇಕಾದರೆ ಅದರ ರಕ್ತ ಕುಡಿಯಲಿಕ್ಕೂ ಅವರು ತಯಾರು ! ಬರೇ ಹಣವೇ ನಮ್ಮ ಸರ್ವಸ್ವವಲ್ಲ. ಧರ್ಮ ವಿಚಾರವನ್ನೂ ಸ್ವಲ್ಪ ನೋಡಿಕೊಳ್ಳುವುದು ಬೇಡವೇ ? ನಿಮ್ಮ ಮನೆಯಲ್ಲಾದರೆ ಇವಳು ನೆಮ್ಮದಿಯಾಗಿದ್ದಾಳು. ಎಷ್ಟಾದರೂ ನಿಮ್ಮಲ್ಲಿ, ನೀವು ಹೊಟ್ಟೆತುಂಬ ತಿಂದು ದನವನ್ನು ಉಪವಾಸ ಹಾಕಲಾರಿರಿ. ಇವಳ ಸೇವೆ ಚನ್ನಾಗಿ ಮಾಡಿ ನೀವು ಪ್ರೀತಿಸಬಹುದು, ಮುದ್ದು ಮಾಡಬಹುದು. ಇವಳು ನಿಮಗೆ ಆಶೀರ್ವಾದ ಮಾಡಿಯಾಳು.

ಈಗ ನಿನ್ನೊಡನೆ ಏಕೆ ಮುಚ್ಚುಮರೆ ಹೋರಿಯಣ್ಣಾ ? ಮನೆಯಲ್ಲಿ ದನಕರುಗಳಿಗೆ ಹುಲ್ಲು ಒಂದು ಮುಷ್ಟಿಯೂ ಉಳಿದಿಲ್ಲ. ಸಾಲ ಮಾಡಿ ಹುಲ್ಲು ತೆಗೆಯುವಾಂದ್ರೆ— ಹಳೇ ಸಾಲವೇ ಬಾಕಿ ಇದೆ. ಇಷ್ಟೆಲ್ಲ ದನಕರುಗಳಿಗೆ ಹೊಟ್ಟೆಗೆ ಏನು ಹಾಕುವುದೆಂದೇ ಯೋಚನೆಯಾಗಿದೆ. ದೇವರೇ ಈ ಕಷ್ಟದಿಂದ ಪಾರುಮಾಡಬೇಕು.'

ಹೋರಿರಾಮನೂ ಸಹಾನುಭೂತಿಯ ಸ್ವರದಿಂದ ಹೇಳಿದ– 'ಅಯ್ಯೋ, ನೀನೇಕೆ ಮೊದಲೇ ನನ್ನೊಡನೆ ಹೇಳಲಿಲ್ಲ? ನಾವು ಒಂದು ಗಾಡಿ ಹುಲ್ಲು ಮಾರಿಯಾಯಿತಲ್ಲ !'

ಬೋಲನೂ ತಲೆ ಬಡೆದುಕೊಂಡು ಹೇಳಿದ –'ಎಲ್ಲರ ಹತ್ತಿರವೂ ಹೋಗಿ ಏಕೆ ತನ್ನ ದುಃಖ ಹೇಳಿಕೊಳ್ಳುವುದೆಂದು ಸುಮ್ಮನಿದ್ದೆ. ಈ ಕಾಲದಲ್ಲಿ ಸಹಾಯ ಮಾಡುವವರು ಕಡಿಮೆ. ಕೇಳಿ ನಗುವವರೇ ಎಲ್ಲರೂ. ಈ ಬತ್ತಿಹೋದ ದನಗಳದಾದರೂ ದೊಡ್ಡದಲ್ಲ; ಏನಾದರೂ ಆಗುತ್ತದೆ. ಆದರೆ ಕರೆಯುವ ದನಗಳಿಗೆ ಹುಲ್ಲು ಹಿಂಡಿ ಇಲ್ಲದೆ ಆಗುವುದೇ ಇಲ್ಲ. ಕೈಯಲ್ಲಿದ್ದರೆ, ಹತ್ತಿಪ್ಪತ್ತು ರೂಪಾಯಿ ಅದಕ್ಕಾಗಿ ಕೊಟ್ಟುಬಿಡು ನೋಡುವ.'

ರೈತನು ನಿಜವಾಗಿಯೂ ಒಂದು ರೀತಿಯಲ್ಲಿ ಸ್ವಾರ್ಥಿ. ಅವನ ಗಂಟಿನಿಂದ ಲಂಚದ ಹಣ ಸಹ ಬಹು ಕಷ್ಟದಿಂದಲೇ ಹೊರಡುವುದು. ಧಾನ್ಯದ ಧಾರಣೆಯ ವಿಚಾರದಲ್ಲೂ ಅವನು ತುಂಬ ಚರ್ಚೆ ಮಾಡುವವನೇ. ಬಡ್ಡಿ ಹಣದ ಒಂದೊಂದು ಪೈಗೆ ಸಹ ಸಾಲಗಾರರೊಡನೆ ಕಾದಾಡುತ್ತಾನೆ. ಹಾಗಿದ್ದರೂ, ಅವನ ಸಂಪೂರ್ಣ ಜೀವನವು ಪ್ರಕೃತಿಗೆ ಸಮೀಪವರ್ತಿಯಾದುದು. ಮರಗಳಲ್ಲಿ ಹಣ್ಣು ಬೆಳೆಯುತ್ತದೆ; ಅದನ್ನು ತಿನ್ನುವವರು ಜನರು. ದನದ ಕೆಚ್ಚಲಿಂದ ಹಾಲು ಬರುತ್ತದೆ; ಅದನ್ನು ಕುಡಿಯುವವರು ಬೇರೆಯೇ. ಮೋಡಗಳಿಂದ ಮಳೆ ಬರುತ್ತದೆ; ಅದರಿಂದ ಇಡೀ ಪೃಥಿವಿಗೇ ತೃಪ್ತಿಯಾಗುತ್ತದೆ. ಇದರಲ್ಲಿ ಸ್ವಾರ್ಥದ ಸಮಾಚಾರವೇ ಇಲ್ಲ. ಹಾಗೆಯೇ, ಹೋರಿರಾಮ ಪರೋಪಕಾರಿಯಾದ ಒಬ್ಬ ರೈತನಾಗಿದ್ದ. ಅವನು ಇನ್ನೊಬ್ಬರಿಗೆ ಸಹಾಯಕನೇ ಹೊರತು ತೊಂದರೆ ಕೊಡುವವನು ಎಂದಿಗೂ ಅಲ್ಲ.

ಬೋಲನ ಸಂಕಷ್ಟಗಳನ್ನು ಕೇಳಿ ಅವನ ಮನಸ್ಸೇ ಬದಲಾಯಿತು. ಅವನು ದನದ ಹಗ್ಗವನ್ನು ಪುನಃ ಬೋಲನ ಕೈಯಲ್ಲಿಟ್ಟು ಹೇಳಿದ – 'ನನ್ನ ಕೈಯಲ್ಲಿ ಹತ್ತು ರೂಪಾಯಿ ಬಿಟ್ಟು ಹತ್ತು ಚಿಕ್ಕಾಸೂ ಇಲ್ಲಣ್ಣಾ. ಏನೋ –

ಸ್ವಲ್ಪ ಹುಲ್ಲು ತೌಡು ಬೇಕಾದರೆ ಉಳಿದಿರಬಹುದು. ಅದನ್ನು ಬೇಕಾದರೆ ಕೊಟ್ಟುಬಿಡುತ್ತೇನೆ. ಬಂದು ಸಾಗಿಸಿಕೊಂಡು ಹೋಗು. ನಿನಗೂ ಈಗ ಹೇಗೂ ಮೇವಿನ ತಾಪತ್ರಯುವೇ ತಾನೆ ?'

ಆಗ ಬೋಲನೂ ಆರ್ದ್ರ ಕಂಠದಿಂದ ಹೇಳತೊಡಗಿದ– 'ಹಾಗೆ ಮಾಡಿದರೆ ನಿನ್ನ ಎತ್ತುಗಳಿಗೆ ಏನು ಗತಿ ? ಅಂತಹ ರಾಶಿ ರಾಶಿ ಹುಲ್ಲು ತೌಡು ನಿಮ್ಮಲ್ಲಾದರೂ ಎಲ್ಲಿಂದೆ ?'

'ಹಾಗಲ್ಲ ಮಹಾರಾಯಾ; ಈ ಸಲ ಬೆಳೆ ಚನ್ನಾಗಿತ್ತು.'

'ನಾನು ನಿನ್ನೊಡನೆ ಸುಮ್ಮನೆ ಈ ಹುಲ್ಲಿನ ಸಮಾಚಾರ ತೆಗೆದುದು.'

'ಈಗ ನೀನು ಹೇಳದಿದ್ದರೂ ಮತ್ತೆ ಗೊತ್ತಾಗದಿರುವುದೇ ? ಸಮಯ ಬಂದಾಗ ನಿನಗೆ ಸಹಾಯ ಮಾಡದಿದ್ದರೆ ಹೇಗೆ ? ಮತ್ತೆ ತುಂಬ ಬೇಸರಕ್ಕೆ ಕಾರಣವಲ್ಲವೇ ?'

'ಅದಿರಲಿ—ನೀನೀಗ ಈ ದನವನ್ನು ಹೊಡೆದುಕೊಂಡು ಹೋಗು.'

'ಈಗ ಬೇಡ. ಮತ್ತೆ ಕೊಂಡುಹೋಗುತ್ತೇನೆ.'

'ಹೇಗಿದ್ದರೂ ಈ ದನ ನಿನ್ನದು. ನಿನಗಿಷ್ಟಬಂದಾಗ ಹೊಡೆದುಕೊಂಡು ಹೋಗು.'

ಹೋರಿರಾಮನಿಗೆ ಒಮ್ಮೆ ತುಂಬ ಸಂತೋಷವಾಯಿತು. ನಗದು ಹಣ ಕೇಳದ್ದರಿಂದ ಹುಲ್ಲಿಗಾಗಿ ಆತ ದನ ಮಾರುವುದಲ್ಲವೆಂದು ಸ್ಪಷ್ಟವಾಗಿತ್ತು. ಅವನ ಉದ್ದೇಶ ಬೇರೆಯೇ ಆಗಿತ್ತೆಂಬುದೂ ಗೊತ್ತಾಗಿತ್ತು. ಆದರೂ ಕೈಯಲ್ಲಿ ಕಾಸು ಕಡಿಮೆಯಾದ್ದರಿಂದ ಈ ಹೊಸ ಸಂಕಷ್ಟದ ಬೀಜವನ್ನು ಕೊಂಡುಕೊಳ್ಳಲಿಕ್ಕೂ ಇಷ್ಟವಿಲ್ಲ. ಹಾಗೆಂದು ಇಡೀ ಜೀವಮಾನದ ಹಿರಿಯಾಸೆಯಾದ ಈ ದನವನ್ನು ಬಿಡಲಿಕ್ಕೂ ಮನಸ್ಸಿದ್ದಿಲ್ಲ.

ಕೊನೆಗೆ ಹೋರಿರಾಮ ಉತ್ತರವಿತ್ತ—'ಈಗ ನಾನು ಧನಿಗಳ ಮನೆಗೆ ಹೊರಟಿದ್ದೇನೆ. ಅಲ್ಲಿಂದ ಬರುವಾಗ ತುಂಬ ತಡವಾಗಬಹುದು. ಆ ಮೇಲೆ ಯಾರನ್ನಾದರೂ ಇಲ್ಲಿ ಕಳುಹಿಸಿ ದನ ತರಿಸಿಕೊಂಡರೆ ಆಗದೇ ?'

ಬೋಲನ ಕಣ್ಣಲ್ಲಿ ನೀರು ಬಂತು – 'ಈ ಪ್ರಪಂಚದಲ್ಲಿ ನನಗೊಬ್ಬ ಹಿತಚಿಂತಕ ನೀನಾದರೂ ಇರುವೆಯಲ್ಲಾ ?' ಎಂದ ಅವನು, ಸ್ವಲ್ಪ ತಡೆದು ಪುನಃ ಹೇಳಿದ— 'ಆದರೆ, ಆ ವಿಚಾರ ಮಾತ್ರ ಮರೆತುಬಿಡಬೇಡ !'

ಹೋರಿರಾಮ ತಲೆಯಾಡಿಸಿ ಮುಂದೆ ಹೋದ. ಆತನ ಮನಸ್ಸು ಬಹಳ

ಪ್ರಸನ್ನವಾಗಿತ್ತು. ಅವನಲ್ಲಿ ಒಂದು ತರದ ಉತ್ಸಾಹ ಮೂಡಿತ್ತು. 'ಏನೇ ಆಗಲಿ; ನೂರಿನ್ನೂರು ಸೂಡಿ ಹುಲ್ಲು ಈಗೊವ್ಮೆ ಕೊಟ್ಟುಬಿಟ್ಟರೆ ಅವನ ನೋವಿನ ತಾಪತ್ರಯ ದೂರವಾಗಬಹುದು. ಮತ್ತೆ ಕೈಯಲ್ಲಿ ಆದಾಗ ಕಾಸೂ ಕೊಟ್ಟುಬಿಟ್ಟರಾಯಿತು. ಈ ಮಧ್ಯೆ ದೇವರ ದಯದಿಂದ ಎಲ್ಲಿಯಾದರೊಂದು ಹೆಣ್ಣು ಸಿಕ್ಕಿಹೋದರೆ ಮತ್ತೆ ಯಾವ ಹೆದರಿಕೆಯೂ ಇಲ್ಲ' – ಎಂದು ಯೋಚಿಸಿದ ಅವನು.

ಮುಂದೆ ಸಾಗುತ್ತಲಿದ್ದ ಬೋಲಾರಾಮ ಹಿಂದಿರುಗಿ ಪುನಃ ನೋಡಿದ– ಬಾಲದಿಂದ ನೊಣ ಓಡಿಸುತ್ತ, ತಲೆಯಾಡಿಸುತ್ತ, ಮಂದಗತಿಯಿಂದ ಅತ್ತಿತ್ತ ಹೋಗುತ್ತಿದ್ದ ಆ ಕಾಳಿದನ ಸಖಿಯರ ಮಧ್ಯದ ಮಹಾರಾಣಿಯಂತೆ ತೋರುತ್ತಿದ್ದಳು. ಅವಳಂತಹ ಕಾಮಧೇನುವನ್ನು ಮನೆಬಾಗಿಲಲ್ಲಿ ಕಟ್ಟಿದಾಗ ನಿಜವಾಗಿಯೂ ಆ ದಿನ ಶುಭ ದಿನವಾಗದೇ ?

೨

ಔಧ್ ಪ್ರಾಂತದಲ್ಲಿ ಸಮೇರಿ ಮತ್ತು ಬಲೇರಿ ಎಂಬ ಎರಡು ಗ್ರಾಮಗಳು ಹೆಸರಾಗಿವೆ. ಹೋರಿರಾಮನು ಬಲೇರಿಯಲ್ಲಿಯೂ ಅವನ ಧನಿಗಳಾದ ರಾಯ್‌ಸಾಹೇಬ್ ಅಮರಪಾಲಸಿಂಹರು ಸಮೇರಿಯಲ್ಲಿಯೂ ವಾಸಿಸುತ್ತಿದ್ದರು. ಎರಡು ಗ್ರಾಮಗಳ ಮಧ್ಯ ಕೇವಲ ಐದು ಮೈಲುಗಳು. ಹಿಂದಿನ ಸತ್ಯಾಗ್ರಹ ಸಂಗ್ರಾಮದಲ್ಲಿ ರಾಯ್‌ಸಾಹೇಬರು ತುಂಬಾ ಕೀರ್ತಿ ಗಳಿಸಿದ್ದರು. ಕೌನ್ಸಿಲ್ಲಿನ ಮೆಂಬರಿಕೆಗೆ ರಾಜಿನಾಮೆಯಿತ್ತು ಜೈಲಿಗೆ ಹೋಗಿದ್ದರು. ಅಂದಿನಿಂದ ಅವರ ಮೇಲೆ ಜನರಿಗೆ ತುಂಬಾ ಶ್ರದ್ಧೆ ಬೆಳೆದು ಬಂದಿತ್ತು.

ಹಾಗೆಂದು, ಅವರ ಜಮೀನಿನಲ್ಲಿರುವ ರೈತರಿಗೆ– ದಂಡ ಕಾಣಿಕೆ ಕೊಡುವುದಾಗಲಿ, ಬಿಟ್ಟಿ ಬೇಗಾರಿ ಮಾಡುವುದಾಗಲಿ ಒಂದೂ ಕಡಿಮೆಯಾಗಿದ್ದಿಲ್ಲ. ಬೇಕಿದ್ದರೆ, ಅದರ ಅಪಕೀರ್ತಿಯೆಲ್ಲ ಅವರ ಕೈಕೆಳಗಿನ ಕಾರ್ಯಕರ್ತರಿಗೆ ಸಲ್ಲುತ್ತಿತ್ತು. ರಾಯ್ ಸಾಹೇಬರ ಕೀರ್ತಿಗೆ ಕಳಂಕ ತಾಗಿಸಲು ಯಾರಿಂದಲೂ ಸಾಧ್ಯವಿಲ್ಲ. ಎಷ್ಟಾದರೂ, ಉದಾರ ಹೃದಯದ ಅವರು ಕೂಡ ಸಂಪ್ರದಾಯ ಶರಣರೇ ಆಗಿದ್ದರು. ಜಮೀನ್ದಾರಿಕೆಯ ಕಾರ್ಯಕಲಾಪಗಳೆಲ್ಲ ಯಾವ ರೀತಿ

ಈ ತನಕ ಬೆಳೆದು ಬಂದಿವೆಯೋ ಅದೇ ರೀತಿ ಮುಂದಕ್ಕೂ ನಡೆಯಬೇಡವೇ? ರಾಯ್‌ಸಾಹೇಬರ ಸಜ್ಜನಿಕೆಯು ಆ ವಿಚಾರದಲ್ಲಿ ಯಾವ ಪ್ರಭಾವವನ್ನೂ ಬೀರಲಾರದಾಗಿತ್ತು. ಈ ಅಪಾರ ದೇಶಸೇವೆಯಿಂದ ಅವರ ಆದಾಯ ಅಧಿಕಾರಗಳು ಎಳ್ಳಷ್ಟೂ ಕಡಿಮೆಯಾಗದಿದ್ದರೂ ಅವರ ಯಶಸ್ಸು ಮಾತ್ರ ಮಣಗಟ್ಟಲೆ ಹೆಚ್ಚುತ್ತಲೇ ಇತ್ತು. ತನ್ನ ಭೂಮಿಯಲ್ಲಿದ್ದ ರೈತರೊಡನೆ ಅವರು ನಗುತ್ತ ಮಾತಾಡುತ್ತಿದ್ದರು. ಅದೇನು ಸಾಮಾನ್ಯದ ವಿಚಾರವೇ? ಗರ್ಜನೆ ಕಾದಾಟಗಳಿಲ್ಲದೆಯೇ ಸುಲಭವಾಗಿ ಸಿಂಹಕ್ಕೆ ಬೇಟೆ ಸಿಗುವುದಾದರೆ ಬೇಟೆ ಹುಡುಕುತ್ತ ಒದ್ದಾಡುವ ಗೊಡವೆ ಏಕೆ?

ರಾಯ್ ಸಾಹೇಬರು ರಾಷ್ಟ್ರೀಯವಾದಿಗಳಾಗಿದ್ದರೂ ಬಹು ಸಂಭ್ರಮದಿಂದ ಹಬ್ಬ ಉತ್ಸವಗಳನ್ನು ಜರುಗಿಸುತ್ತಿದ್ದರು. ಅವರ ಗೇಣಿಯ ಒಕ್ಕಲುಗಳಿಂದ ಕಪ್ಪಕಾಣಿಕೆ, ಬಿಟ್ಟಿಬೇಗಾರಿಗಳು ಹಿಂದಿನಂತೆಯೇ ಈಗಲೂ ಬರುತ್ತಿದ್ದುವು. ಅವರು ಸಾಹಿತ್ಯ, ಸಂಗೀತ ನಾಟಕದ ಪ್ರೇಮಿಗಳೂ, ಉತ್ತಮ ಲೇಖನ ಮತ್ತು ಭಾಷಣಗಾರರೂ ಆಗಿ, ಕೀರ್ತಿ ಗಳಿಸಿದ್ದರು. ಅವರ ಧರ್ಮಪತ್ನಿ ದಿವಂಗತರಾಗಿ ಇಂದಿಗೆ ಹತ್ತು ವರ್ಷ ದಾಟಿ ಹೋಗಿತ್ತು. ಆದರೂ ಅವರು ಎರಡನೆಯ ವಿವಾಹ ಮಾಡಿಕೊಂಡಿದ್ದಿಲ್ಲ. ಹೀಗೆ ತನ್ನ ವಿಧುರ ಜೀವನವನ್ನು ಈ ಕಲೋಪಾಸನೆ, ದೇಶಸೇವೆಗಳಲ್ಲಿ ಕಳೆಯುತ್ತಿದ್ದರು.

ಹೋರಿರಾಮನು ಧನಿಗಳ ಮನೆಯ ಹೆಬ್ಬಾಗಿಲಿಗೆ ಬಂದು ನೋಡಿದ–ಜ್ಯೇಷ್ಠಮಾಸದ ಶುಕ್ಲಪಕ್ಷದಲ್ಲಿ ನಡೆಯಲಿರುವ ಧನುರ್ಯಜ್ಞ ಮಹೋತ್ಸವದ ಸಿದ್ಧತೆಗಳೆಲ್ಲ ಸಂಭ್ರಮದಿಂದ ನಡೆಯುತ್ತಿದ್ದವು. ಒಂದೆಡೆಯಲ್ಲಿ ರಂಗಮಂಟಪ; ಇನ್ನೊಂದೆಡೆಯಲ್ಲಿ ಚಪ್ಪರ. ಮತ್ತೊಂದೆಡೆ ಅತಿಥಿಗಳ ಗೃಹನಿರ್ಮಾಣ. ಬೇರೊಂದೆಡೆ ಸಂತೆಗಾಗಿ ಅಂಗಡಿಗಳು. ಬಿಸಿಲು ಏರಿ ಬಂದಿದ್ದರೂ ಎಲ್ಲ ಕೆಲಸಗಳ ಮೇಲ್ವಿಚಾರಣೆ ಸ್ವತಃ ರಾಯರೇ ನೋಡುತ್ತಿದ್ದರು. ತಮ್ಮ ಹಿರಿಯರ ಅಪಾರ ಸಂಪತ್ತಿನೊಡನೆ ಶ್ರೀರಾಮನ ಮೇಲಿನ ಅಗಾಧ ಭಕ್ತಿಯನ್ನೂ ರಾಯ್ ಸಾಹೇಬರು ಪಡೆದಿದ್ದರು. ಹೀಗಾಗಿ ಶ್ರೀರಾಮನ ಧನುರ್ಯಜ್ಞದ ಕಥೆಯನ್ನು ಸ್ವತಃ ನಾಟಕರೂಪದಲ್ಲಿ ಬರೆದು ಶಿಷ್ಟಮನೋರಂಜನೆಯ ಸಾಧನವನ್ನಾಗಿಸಿದ್ದರು ಅವರು. ಈ ಸಂದರ್ಭದಲ್ಲಿ ಅವರ ಆಪ್ತ ಸ್ನೇಹಿತರೂ, ಮೇಲ್ಮಟ್ಟದ ಅಧಿಕಾರಿಗಳೂ ಆಮಂತ್ರಿತರಾಗುತ್ತಿದ್ದರು. ಆದರಿಂದ ಆ ಎರಡು ಮೂರು ದಿನಗಳ ಮಟ್ಟಿಗೆ, ಅಲ್ಲಿ ಮಹಾ ಸಂಭ್ರಮ ಜರುಗುತ್ತಿತ್ತು.

ರಾಯ್‌ಸಾಹೇಬರ ಪರಿವಾರವೂ ಬಹಳ ದೊಡ್ಡದು. ಊಟದ ಸಮಯಕ್ಕೆ ಹೆಚ್ಚು ಕಡಿಮೆ ೧೫೦ ಮಂದಿ ತಪ್ಪುತ್ತಿರಲಿಲ್ಲ. ಎಷ್ಟೋ ಮಂದಿ ಚಿಕ್ಕಪ್ಪಂದಿರು, ದೂರದ ಅಣ್ಣ ತಮ್ಮಂದಿರು, ಇನ್ನೆಷ್ಟೋ ಮಂದಿ ಅತ್ತೆ ನಾದಿನಿಯರು, ಅಕ್ಕ ತಂಗಿಯಂದಿರು – ಅಂತೂ ಸಂಬಂಧಿಕರಿಗೆ ಮಿತಿಯೇ ಇಲ್ಲ. ಒಬ್ಬ ಚಿಕ್ಕಪ್ಪ ರಾಧಾಕೃಷ್ಣರ ಅನನ್ಯ ಉಪಾಸಕರಾಗಿದ್ದು ಹೆಚ್ಚಿನ ಕಾಲ ವೃಂದಾವನದಲ್ಲೇ ಕಳೆಯುತ್ತಿದ್ದರು. ಭಕ್ತಿರಸಪೂರ್ಣವಾದ ಎಷ್ಟೋ ಕವಿತೆಗಳನ್ನು ರಚಿಸಿ, ಮುದ್ರಿಸಿ ಆಗಾಗ್ಗೆ ಬಂಧುಮಿತ್ರರಿಗೆ ಧರ್ಮಾರ್ಥ ಕಳುಹಿಸುತ್ತಿದ್ದರು. ಮತ್ತೊಬ್ಬ ಚಿಕ್ಕಪ್ಪ ಶ್ರೀ ರಾಮದೇವರ ಪರಮಭಕ್ತರಾಗಿದ್ದು ವಾಲ್ಮೀಕಿ ರಾಮಾಯಣವನ್ನು ಪಾರಸೀ ಭಾಷೆಯಲ್ಲಿ ಅನುವಾದ ಮಾಡುತ್ತಿದ್ದರು. ಜಮೀನ್ದಾರಿಕೆಯ ಎಲ್ಲ ಭಾರವನ್ನು ರಾಯ್‌ಸಾಹೇಬರು ಹೊತ್ತಿದ್ದುದರಿಂದ ಎಲ್ಲ ವಿಚಾರದಲ್ಲಿಯೂ ಇವರೆಲ್ಲ ನಿರ್ಲಿಪ್ತರಾಗಿದ್ದರು.

ಹೋರಿರಾಮ ಚಪ್ಪರದೊಳಹೊಕ್ಕು, ತಾನು ಬಂದುದನ್ನು ಹೇಗೆ ರಾಯರಿಗೆ ತಿಳಿಸಲಿ – ಎಂದು ಯೋಚಿಸುತ್ತಿದ್ದನು. ಅಷ್ಟರಲ್ಲಿ ಅವರೇ ಅಲ್ಲಿಗೆ ಬಂದು ಅವನನ್ನು ನೋಡಿ ಹೇಳಿದರು – 'ಎಲ ಎಲಾ, ಹೋರಿ; ಬಂದೇ ಬಿಟ್ಟೆಯಾ? ನಿನ್ನನ್ನು ನಾನೇ ಕರೆಸಬೇಕೆಂದಿದ್ದೆ. ನೋಡು, ನಿನ್ನಿಂದೊಂದು ಕೆಲಸವಾಗಬೇಕು. ನಾಳದು ನಾಟಕದಲ್ಲಿ ಜನಕರಾಜನ ಮಾಲಿಯ ಪಾತ್ರವನ್ನು ನೀನು ವಹಿಸಬೇಕು. ಗೊತ್ತಾಯಿತಲ್ಲಾ? ಸೀತಾದೇವಿಯು ದೇವಮಂದಿರಕ್ಕೆ ಪೂಜೆಗಾಗಿ ಹೋಗುವಾಗ ಒಂದು ಹೂವಿನ ಹರಿವಾಣವನ್ನು ಹಿಡಿದುಕೊಂಡು ಹೋಗಿ ಅವಳಿಗರ್ಪಿಸಬೇಕು. ತಪ್ಪು ಮಾಡಬಾರದು – ತಿಳಿಯಿತೇ? ಮತ್ತೆ, ನಮ್ಮ ಜಮೀನಿನಲ್ಲಿರುವ ಎಲ್ಲ ಅಸಾಮಿಗಳಿಗೂ ಗೇಣಿ, ಕಾಣಿಕೆಗಳನ್ನು ಹಿಡಿದುಕೊಂಡು, ತಪ್ಪದೆ, ಬರಲೇಬೇಕೆಂದು ಆಜ್ಞೆ ಸಹ ಮಾಡಬೇಕು. ಈಗ ಉಗ್ರಾಣದತ್ತ ಸ್ವಲ್ಪ ಬಾ. ನಿನ್ನ ಹತ್ತಿರ ಬೇರೆ ಕೂಡ ಸ್ವಲ್ಪ ಮಾತಾಡುವ ಕೆಲಸವಿದೆ.'

ಹೀಗೆ ಹೇಳುತ್ತ ರಾಯ್ ಸಾಹೇಬರು ಉಗ್ರಾಣದತ್ತ ಮುಂದೆ ಹೋದರು. ಹೋರಿರಾಮ ಹಿಂದಿನಿಂದ ಹೋದ. ಅವರು ಅಲ್ಲೇ ಒಂದು ಯೋಗ್ಯ ಸ್ಥಳದಲ್ಲಿ ಒಂದು ಕುರ್ಚಿಯ ಮೇಲೆ ಕುಳಿತುಕೊಂಡರು. ಹೋರಿರಾಮನಿಗೆ ಅಲ್ಲೇ ನೆಲದ ಮೇಲೆ ಕೂತುಕೊಳ್ಳಲು ಸೂಚಿಸಿ ಹೇಳಲಾರಂಭಿಸಿದರು – 'ನಾನು ಹೇಳಿದ್ದು ಗೊತ್ತಾಯಿತಲ್ಲ? ನಮ್ಮ ಗುಮಾಸ್ತರು, ಉಗ್ರಾಣಿಗಳು,

ಮಾಡಬೇಕಾದ್ದನ್ನೆಲ್ಲ ಮಾಡಿಯಾರು. ಆದರೆ ರೈತರೆಲ್ಲ ಇನ್ನೊ
ಮಾತು ಕೇಳಿದಷ್ಟು ಶಾನುಭೋಗರ ಮಾತು ಕೇಳಲಾರರು. ನನ
ಏಳೆಂಟು ದಿನಗಳಲ್ಲಿ ಕನಿಷ್ಟ ಪಕ್ಷ ಇಪ್ಪತ್ತು ಸಾವಿರವಾದರೂ
ಬೇಕು. ಹಣ ಹೇಗೆ ಸೇರುವುದೋ ನನಗೆ ತಿಳಿಯದು. ಈ ವಿಚ
ತನ್ನಂತಹ ಬಡ ರೈತನ ಹತ್ತಿರ ರಾಯರು ಏಕೆ ಹೇಳುತ್ತಿದ್ದಾರೆಂದು
ಯೋಚಿಸಬಹುದು. ಆದರೆ ನನ್ನ ದುಃಖವನ್ನು ಬೇರೆ ಯಾರ
ಹೇಳಿಕೊಳ್ಳಲಿ? ನಿನ್ನ ಮೇಲೆ ಏಕೆ ವಿಶ್ವಾಸ ಕುಳಿತಿತೋ – ನಾನ
ಇಷ್ಟು ಮಾತ್ರ ಹೇಳಬಲ್ಲೆ— ನೀನು ಒಳಗಿಂದೊಳಗೆ ನನ್ನ ವಿಚ
ನಗಾಡಲಾರೆ. ಅಥವಾ ಒಂದು ವೇಳೆ ನಗಾಡಿದರೂ ನಿನ್ನ ನಗ
ನಾನು ಹಾರಿಸಿ ಬಿಟ್ಟೇನು. ಆದರೆ ನನಗೆ ಸಮಾನರಾಗಿರುವವರ ನಗ
ಮಾತ್ರ ಸಹಿಸಲಾರೆ. ಏಕೆಂದರೆ ಅವರ ನಗುವಿನಲ್ಲಿ ವ್ಯಂಗ್ಯ ಮಾತ್ರ
ಗಳು ತುಂಬಿ ಹೋಗಿವೆ. ಅಥವಾ, ಅವರು ನಕ್ಕರೆ ನಗಲಿ. ನಾನು
ಅವರಿಗೆ ದುಃಖ ದುಮ್ಮಾನ ಬಂದಾಗ ಕೈ ತಟ್ಟಿ ಚನ್ನಾಗಿ ನಗಾಡಿಯ
ಸಂಪತ್ತಿಗೂ ಮತ್ತು ಸಹೃದಯತೆಗೂ ಯಾವಾಗಲೂ ವೈರ ತಪ್ಪಿ
ನಾವು ಸಹ ದಾನ ಕೊಡುತ್ತೇವೆ; ಧರ್ಮ ಮಾಡುತ್ತೇವೆ – ಅವೆಲ್ಲ ಏಕೆ
ನಿನಗೆ ಗೊತ್ತೆ ? ಕೇವಲ ನಮ್ಮಂಥ ಇತರ ಗೃಹಸ್ಥರಿಗಿಂತ ತಾವು ದೊಡ್ಡ
ರೆಂದು ಪ್ರದರ್ಶನ ಮಾಡುವುದಕ್ಕೋಸ್ಕರ! ನಮ್ಮ ದಾನ ಧರ್ಮ
ಉದ್ದೇಶ—ಅಹಂಕಾರ, ಶುದ್ಧ ಅಹಂಕಾರ! ನಮ್ಮಂತಹರ ಪೈಕಿ ಒಬ್ಬ
ಮೇಲೆ ಡಿಕ್ರಿ ವಾರಂಟ್ ಆಗಿ ಮನೆ ಜಪ್ತಾದರೆ, ಅಥವಾ ಪ್ರಾಯದ ಸಮರ್ಥ
ಪುತ್ರನು ದಿವಂಗತನಾದರೆ, ಇಲ್ಲವೇ ಹೆಂಡತಿ ಸತ್ತುಹೋದರೆ, ಮನೆಗೆ ಬೆಂ
ಬಿದ್ದರೆ, ಅಥವಾ ವೇಶ್ಯೆಯ ಕೈಯಲ್ಲಿ ಸಿಕ್ಕಿ ಹೋಗಿ ಒದ್ದಾಡುತ್ತಿದ್ದರೆ –
ಈ ಸಂದರ್ಭಗಳಲ್ಲೆಲ್ಲ ನಮ್ಮಂತಹರ ಸಹೋದರರೂ ಬಂಧುಗಳೂ ಎಲ್ಲ
ನಗಾಡುವವರೇ! ಇಡೀ ಪ್ರಪಂಚದ ಸಂಪತ್ತೇ ಸಿಕ್ಕಿದವರಂತೆ ಕೈತಟ್ಟಿ
ಕುಣಿದಾಡುವವರೇ! ಹಾಗೆಂದು ಇದಿರಲ್ಲಿ ಮಾತ್ರ ಜೀವಕ್ಕೆ ಜೀವ ಕೊಡು
ವವರಂತೆ ನಟನೆ ಮಾಡುತ್ತಾರೆ!

ಇನ್ನು ನಮ್ಮ ಸಂಬಂಧಿಕರು – ಚಿಕ್ಕಪ್ಪನ ಮಕ್ಕಳು, ಚಿಕ್ಕಮ್ಮನ
ಮಕ್ಕಳು, ಸೋದರತ್ತೆಯ ಮಕ್ಕಳು – ಎಲ್ಲರೂ ಈ ನಮ್ಮ ಜಮೀನ್ದಾರಿ
ಕೆಯ ಹಣದಿಂದಲೇ ಮಜಾ ಮಾಡುತ್ತಿರುವುದು. ಅವರಲ್ಲಿ ಕೆಲವರು ಕವಿ

ಗಳು, ಮತ್ತೆ ಕೆಲವರು ಜೂಜಾಡುವವರು, ಇನ್ನು ಕೆಲವರು ಹೆಂಡ ಕುಡುಕರು. ಅಂತು ಎಲ್ಲರೂ ನನ್ನ ಮೇಲೆ ಮತ್ಸರದಿಂದ ಉರಿಯುತ್ತಿದ್ದು, ಒಂದು ವೇಳೆ ನಾನು ಸತ್ತರೆ ಸಂತೋಷದಿಂದ ದೇವರಿಗೆ ತುಪ್ಪದ ದೀಪ ಉರಿಸಲು ತಯಾರು ! ನನ್ನ ದುಃಖವನ್ನು ತಿಳಿದುಕೊಳ್ಳುವವರು ಯಾರೂ ಇಲ್ಲ. ಅವರ ದೃಷ್ಟಿಯಲ್ಲಿ ದುಃಖ ಪಡಲು ನನಗೆ ಅಧಿಕಾರವೇ ಇಲ್ಲ. ನಾನು ಒಂದು ಪಕ್ಷ ಅತ್ತರೂ ಸಹ ಒಳಗಿಂದೊಳಗೆ ಅವರೆನ್ನುವಂತೆ ನಗುವುದೇ! ನಾನು ಜೇನೆ ಬಿದ್ದರೂ ಸುಖಕ್ಕಾಗಿಯೇ ! ನಾನು ಎರಡನೆಯ ಮದುವೆ ಮಾಡಿಕೊಂಡು ಮನೆಯಲ್ಲಿ ಕಲಹ ಎಬ್ಬಿಸದಿದ್ದರೆ – ಅದೂ ನನ್ನ ಸ್ವಾರ್ಥಪರತೆ! ಒಂದು ವೇಳೆ ಮದುವೆ ಮಾಡಿಕೊಂಡಿದ್ದರೂ ಅದು ನನ್ನ ನೀಚ ವಿಲಾಸ ಪ್ರಿಯತೆಯಾಗುತ್ತಿತ್ತು! ಹಾಗೆಯೆ, ನಾನು ಹೆಂಡ ಕುಡಿಯದೆ ಇದ್ದರೆ – ಅದು ಆಸೆಯಿಂದ! ಕುಡಿಯುತ್ತಿದ್ದರೆ ಅದು ಬಡ ಜನರ ರಕ್ತವೇ ಆಗುತಿತ್ತು ! ಇನ್ನು, ಹುಡುಗಿಯರ ಹುಚ್ಚು ಹಿಡಿದಿಲ್ಲವಾದರೆ – ಅದು ನನ್ನ ಅರಸಿಕತನ ! ಆ ಹುಚ್ಚು ಹಿಡಿದಿದ್ದರೆ – ಮತ್ತೆ ಕೇಳುವುದೇನು? ಈ ಜನರೆಲ್ಲ ನನ್ನನ್ನು ಭೋಗವಿಲಾಸಗಳಲ್ಲಿ ಹಿಡಿಸಿ ಹಾಕಲಿಕ್ಕೆ ಮಾಡಿದ ಪ್ರಯತ್ನಗಳೇನೂ ಅಷ್ಟಿಷ್ಟಲ್ಲ. ಆ ಪ್ರಯತ್ನ ಈಗಲೂ ನಡೆಯುತ್ತಿದೆ. ನಾನು ಕುರುಡನಾಗಿ ಹೋಗಿ ನನ್ನ ಸಂಪತ್ತೆಲ್ಲ ಹಾಳಾಗಿ ಹೋದರೆ ಅವರಿಗೆ ತೃಪ್ತಿಯಾದೀತು ! '

ರಾಯ್‌ಸಾಹೇಬರು ಮಾತಿನ ಗಾಡಿಯನ್ನು ಮತ್ತೂ ಮುಂದೆ ಸಾಗಿಸುವುದಕ್ಕಾಗಿ ಎರಡು ಬೀಡಾ ತಿಂದು ಹೋರಿರಾಮನ ಮುಖ ನೋಡುತ್ತ ಒಂದು ಕ್ಷಣ ಸುಮ್ಮನಿದ್ದರು. ಆಗ ಅವನೇನು ಯೋಚಿಸುತ್ತಿರುವನೆಂದು ಅವರು ನಿರೀಕ್ಷಿಸುತ್ತಿದ್ದಂತೆ ತೋರುತ್ತಿತ್ತು.

ಆಗ ಹೋರಿರಾಮ ಹೇಳಿದನು – 'ಇಂತಹ ಅಲ್ಪ ವಿಷಯಗಳು ನಮ್ಮ ಜನರಲ್ಲಿ ಮಾತ್ರ ನಡೆಯುವುದೆಂದು ನಾನೆಣಿಸಿದ್ದೆ. ಈಗ ನೋಡುವಾಗ ದೊಡ್ಡ ಮನುಷ್ಯರಲ್ಲಿಯೂ ಇದೆಲ್ಲ ಇದ್ದೇ ಇದೆ. '

ರಾಯರು ವೀಳ್ಯದೆಲೆಯ ರಸವನ್ನೊಮ್ಮೆ ಉಗುಳಿ ಪುನಃ ಹೇಳಲಾರಂಭಿಸಿದರು – 'ನೀನು ನಮ್ಮನ್ನೆಲ್ಲ ದೊಡ್ಡ ಮನುಷ್ಯರೆಂದು ತಿಳಿದಿರುವೆಯಾ ? ನಮ್ಮ ಹೆಸರೇನೋ ದೊಡ್ಡದು. ಆದರೆ ತಿಳಿವಳಿಕೆ ಮಾತ್ರ ಚಿಕ್ಕದು. ಬಡ ಜನರಲ್ಲಿ ಒಂದು ವೇಳೆ ಹೊಟ್ಟೆಕಿಚ್ಚು ಹಗೆತನಗಳಿದ್ದರೆ ಅದು ಸ್ವಾರ್ಥಕ್ಕಾಗಿ,

ಇಲ್ಲವೇ ಹೊಟ್ಟೆಗಾಗಿ. ಅಂತಹ ಮತ್ಸರ ವೈರಗಳು ಕ್ಷಮೆಗೆ ತಕ್ಕವೆಂದು ನನ್ನ ಅಭಿಪ್ರಾಯ. ನಮ್ಮ ಬಾಯಿಯ ತುತ್ತನ್ನು ಯಾರಾದರೂ ಸೆಳೆದು ಕೊಂಡರೆ ಅವನ ಕುತ್ತಿಗೆಗೆ ಕೈಹಾಕಿಯಾದರೂ ಅದನ್ನು ಹಿಂಪಡೆದುಕೊಳ್ಳು ವುದು ನಮ್ಮ ಧರ್ಮ. ಅದನ್ನು ಬಿಟ್ಟುಬಿಟ್ಟರೆ ಆತ ದೇವತೆಯೇ ಸರಿ. ಹಾಗೆಂದು ದೊಡ್ಡ ಮನುಷ್ಯರ ಮತ್ಸರ ವೈರಗಳು ಕೇವಲ ಆನಂದಕ್ಕಾಗಿ! ನಾವೀಗ– ನೀಚತನ ಕುಟಿಲತನಗಳಲ್ಲೇ ಆನಂದಪಡುವಷ್ಟು ದೊಡ್ಡವರಾಗಿ ಹೋಗಿದ್ದೇವೆ! ಇನ್ನೊಬ್ಬರು ಆತ್ಮಾಗ ನಾವು ನಗಾಡುವಷ್ಟು ದೊಡ್ಡ ದೇವತೆ ಗಳಾಗಿ ಹೋಗಿದ್ದೇವೆ! ಇದೆಲ್ಲ ಸಾಮಾನ್ಯ ವಿಷಯವೆಂದು ತಿಳಿಯಬೇಡ. ಇಷ್ಟು ದೊಡ್ಡ ಕುಟುಂಬ ಇರುವಾಗ ಯಾವಾಗಲೂ ಒಬ್ಬನಲ್ಲವಾದರೆ ಇನ್ನೊಬ್ಬ ಬೇನೆ ಬಿದ್ದೇ ಬೀಳುತ್ತಾನೆ. ದೊಡ್ಡ ಮನುಷ್ಯರ ರೋಗವೂ ದೊಡ್ಡದೇ ಆಗುತ್ತದೆ! ಸಣ್ಣ ಕಾಯಿಲೆಗಳೆಲ್ಲ ಬಂದರೆ ಅವನೆಂತಹ ದೊಡ್ಡ ಮನುಷ್ಯ? ಸಾಮಾನ್ಯ ಜ್ವರ ಬಂದರೂ ಅದ್ಭುತ ಚಿಕಿತ್ಸೆಯೇ ಕೊಡ ಲ್ಪಡುತ್ತದೆ! ಒಂದು ಚಿಕ್ಕ ಗುಳ್ಳೆಯೂ ದೊಡ್ಡ ಭಗಂದಳವೆಂದೇ ತಿಳಿಯ ಲ್ಪಡುತ್ತದೆ. ತಂತಿ ಕೊಟ್ಟು, ದೊಡ್ಡ ದೊಡ್ಡ ಸರ್ಜನರನ್ನು ಕರೆಸು ತ್ತಾರೆ! ಹೊಸ ಹೊಸ ಮದ್ದಿಗಾಗಿ ಡಿಲ್ಲಿಗೆ ಓಡುತ್ತಾರೆ! ವೈದ್ಯಾಚಾರ್ಯ ರನ್ನು ಕರೆತರಲು ಕಲ್ಕತ್ತೆಗೆ ಓಡುತ್ತಾರೆ! ಇತ್ತ ದೇವಾಲಯಗಳಲ್ಲಿ ದುರ್ಗಾಪೂಜೆ ನಡೆಯುತ್ತದೆ! ಅತ್ತ ಜೋಯ್ಸರೆಲ್ಲ ಕುಂಡಲಿ ಹಾಕಿ ಗಣಿತ ವಿಚಾರ ಮಾಡುತ್ತಿರುತ್ತಾರೆ! ಮಂತ್ರವಾದಿಗಳು ಹೋಮ ಹವನ, ಮಂತ್ರ ತಂತ್ರಗಳನ್ನು ನಡೆಸುತ್ತಾರೆ! ರಾಜಾ ಸಾಹೇಬರನ್ನು ಯಮ ರಾಜನ ಬಾಯಿಂದ ಬಿಡಿಸುವುದಕ್ಕಾಗಿ ಗಲಭೆಯೇ ಗಲಭೆ ನಡೆಯುತ್ತದೆ! ವೈದ್ಯರೂ, ಡಾಕ್ಟರರೂ – ಯಾವಾಗ ನಮಗೆ ತಲೆ ಸಿಡಿತ ಮೊದಲಾದೀತು, ಯಾವಾಗ ತಮ್ಮ ಮನೆಯಲ್ಲಿ ಸುವರ್ಣ ವೃಷ್ಟಿ ಆದೀತು – ಎಂದು ಕಾಯು ತ್ತಿರುತ್ತಾರೆ! ಈ ಎಲ್ಲ ಕತೆಗೂ ರೂಪಾಯಿ ನಿಮ್ಮಂತಹ ಬಡ ರೈತರ ಕೈಯಿಂದ ಬರಬೇಕು. ಅದನ್ನು ದೊಣ್ಣೆ ಹಿಡಿದು ವಸೂಲು ಮಾಡಲಾಗು ವುದು. ನಿಮ್ಮಂತಹರ ಹೊಟ್ಟೆಯುರಿಯ ದಾವಾನಲವು ನಮ್ಮನ್ನೆಲ್ಲ ಏಕೆ ಸುಟ್ಟು ಭಸ್ಮ ಮಾಡಿಬಿಡುವುದಿಲ್ಲವೆಂಬುದೇ ನನಗಾಶ್ಚರ್ಯ! ನಿಮ್ಮೆಲ್ಲರ ಹಾಹಾಕಾರದ ಬೆಂಕಿಯಿಂದ ಬದುಕಿ ಉಳಿಯುವುದಕ್ಕಾಗಿ ನಾವು ಪೋಲೀಸ ರಿಗೆ, ಕೋರ್ಟು ಕಚೇರಿಗಳಿಗೆ, ವಕೀಲರಿಗೆ ಶರಣು ಹೋಗುತ್ತೇವೆ. ಕೊನೆಗೆ

ರೂಪವತಿಯಾದ ಹಾಳು ಹೆಂಗುಸಿನಂತೆ ಎಲ್ಲರಿಗೂ ಕೈಗೊಂಬೆಗಳಾಗಿ ಹೋಗುತ್ತೇವೆ. ಮತ್ತು ನಾವು ಬಹಳ ಸುಖವಾಗಿದ್ದೇವೆಂದು ಇಡೀ ಜಗತ್ತೇ ತಿಳಿಯುತ್ತದೆ. ನಮಗೆ ವಿಶಾಲ ಜಮೀನು, ದೊಡ್ಡ ಭವನ, ಒಳ್ಳೆಯ ವಾಹನ, ನೌಕರ ಚಾಕರರು, ಸಾಲದ ಹೊರೆ, ವೇಶ್ಯೆಯರ ಮೇಳ – ಅಂತು ಏನೆಲ್ಲ ಇಲ್ಲ? ಆದರೂ ಯಾರ ಆತ್ಮದಲ್ಲಿ ಬಲವಿಲ್ಲವೋ, ಅಭಿಮಾನವಿಲ್ಲವೋ –ಅಂಥವನೊಬ್ಬ ಮನುಷ್ಯನೇ ಅಲ್ಲ. ಯಾರಿಗೆ ಶತ್ರುಗಳ ಭಯದಿಂದ ರಾತ್ರಿ ನಿದ್ದೆ ಬರುವುದಿಲ್ಲವೋ, ಯಾರ ದುಃಖವಿಚಾರದಲ್ಲಿ ಎಲ್ಲರೂ ನಗುತ್ತಿರುವರೋ, ಸಹಾನುಭೂತಿ ತೋರಿಸುವವರಿಲ್ಲವೋ, ಯಾವಾತನು ತನ್ನ ಭೋಗ ವಿಲಾಸಗಳ ಹುಚ್ಚಿನಲ್ಲಿ ತನ್ನನ್ನೇ ಮರೆತಿರುವನೋ, ಮತ್ತಾರು ಅಧಿಕಾರಿಗಳ ಸಹಾಯ ಪಡೆದು ತನ್ನ ಅಧೀನವಿರುವ ಬಡ ಜನರ ರಕ್ತ ಹೀರುವನೋ- ಅಂಥವನನ್ನು ಸುಖಿಯೆಂದು ನಾನೆಂದೂ ಹೇಳಲಾರೆ. ಅವನು ಪ್ರಪಂಚದ ಅತಿ ದೊಡ್ಡ ಭಾಗ್ಯಹೀನ ಮನುಷ್ಯ!'

'ಇನ್ನು, ಬಿಳಿ ಮುಖದ ಸಾಹೇಬರು ರಾಜಕಾರ್ಯಕ್ಕಾಗಿ ಬರಲಿ, ಇಲ್ಲವೇ ಬೇಟೆಗಾಗಿ ಬರಲಿ – ಅವರ ಹಿಂದೆಯೇ ಬಾಲವಲ್ಲಾಡಿಸುತ್ತ ತಿರುಗಾಡುವುದು ನಮ್ಮ ಕರ್ತವ್ಯವಾಗಿದೆ. ಅವರನ್ನು ಸಂತೋಷಗೊಳಿಸಲಿಕ್ಕಾಗಿ ನಾವು ಯಾವುದಕ್ಕೂ ಅಣಿಯಾಗುತ್ತೇವೆ! ಅವರ ಕೈಕೆಳಗಿನ ಅಧಿಕಾರಿಗಳ ತೃಪ್ತಿಗಾಗಿ ಎಂತಹ ನೀಚ ಕೆಲಸಕ್ಕೂ ಇಳಿಯುತ್ತೇವೆ! ಒಮ್ಮೊಮ್ಮೆ ನನಗೆ ತೋರುತ್ತದೆ – ಸರಕಾರವು ನಮ್ಮ ವಿಶಾಲ ಜಮೀನನ್ನೆಲ್ಲ ಕಸಿದುಕೊಂಡು ನಮ್ಮ ಹೊಟ್ಟೆಗಾಗಿ ದುಡಿಯುವುದನ್ನು ಕಲಿಸಿಕೊಡುತ್ತಿದ್ದರೆ–ನಮಗೊಂದು ದೊಡ್ಡ ಉಪಕಾರವಾಗುತ್ತಿತ್ತು, ಎಂದು. ಇನ್ನುಮುಂದೆ ಸರಕಾರವೂ ನಮ್ಮ ರಕ್ಷಣೆಗೆ ಬರಲಿಕ್ಕಿಲ್ಲವೆಂಬ ಸಂದೇಹ ನನಗಿದೆ. ನಮ್ಮಿಂದಾಗಿ ಅದಕ್ಕೆ ದೊಡ್ಡ ಪ್ರಯೋಜನವಾಗಲಾರದು. ನಮ್ಮಂತಹರ ಅಟ್ಟಹಾಸವೆಲ್ಲ ಬಹು ಬೇಗನೆ ಮುಳುಗಿ ಹೋಗಲಿದೆಯೆಂದೂ ತೋರಿ ಬರುತ್ತದೆ. ಮತ್ತು ನಾನು ಅಂತಹೆ ದಿನಗಳನ್ನು ಸ್ವಾಗತಿಸಲಿಕ್ಕೂ ಅಣಿಯಾಗಿದ್ದೇನೆ. ದೇವರು ಆ ದಿನ ಬೇಗ ಬರುವಂತೆ ಮಾಡಲಿ! ಅದು ನಮ್ಮನ್ನುದ್ಧಾರ ಮಾಡುವ ದಿನವಾದೀತು. ಹಿಂದಿನಿಂದಲೂ ಬಂದಿರುವ ಸಂಪ್ರದಾಯ ಪರಿಸ್ಥಿತಿಗಳಿಗೆ ನಾವು ದಾಸರಾಗಿ ಹೋಗಿ ಈಗ ಆ ಸಂಪ್ರದಾಯಗಳೇ ನಮ್ಮ ಸರ್ವ ನಾಶಕ್ಕೆ ಕಾರಣವಾಗಿವೆ. ಸಂಪತ್ತಿನ ಈ ಚಿನ್ನದ ಸರಪಣಿ ನಮ್ಮ

ಕಾಲಿಂದ ಕಳಚಿ ಬೀಳುವ ವರೆಗೆ ನಮಗೆ ನಿಜವಾಗಿಯೂ ಸುಖ ಬರಲಾರದು.'

ರಾಯ್‌ಸಾಹೇಬರು ಮತ್ತೂ ಸ್ವಲ್ಪ ವೀಳ್ಯೆದೆಲೆ ತೆಗೆದುಕೊಂಡು ಬಾಯಿಗೆ ತುರುಕಿಸಿಕೊಂಡರು. ಅದನ್ನು ಜಗೆಯುತ್ತ ಮತ್ತೂ ಏನನ್ನೋ ಹೇಳಬೇಕೆಂದಿದ್ದರು. ಅಷ್ಟರಲ್ಲಿ ಒಬ್ಬ ಕೆಲಸದಾಳು ಬಂದು ಹೇಳಿದ – 'ಸ್ವಾಮಿ, ಬಿಟ್ಟಿಯ ಆಳುಗಳು ಕೆಲಸ ಮಾಡುವುದನ್ನೇ ನಿಲ್ಲಿಸಿ ಬಿಟ್ಟಿದ್ದಾರೆ. ಹೊಟ್ಟೆಗೇನಾದರೂ ಸಿಗುವ ವರೆಗೆ ತಾವು ಕೆಲಸವೇ ಮಾಡಲಿಕ್ಕಿಲ್ಲವೆಂದು ಹೇಳುತ್ತಿದ್ದಾರೆ. ನಾವು ಗದರಿಸಿ ನೋಡಿದೆವು. ಆದರೂ ಕೇಳುವುದಿಲ್ಲ.'

ರಾಯ್‌ಸಾಹೇಬರ ತಲೆಯ ಮೇಲೆ ದೊಡ್ಡ ಹೊರೆ ಕಳಚಿ ಬಿದ್ದಂತಾಯಿತು. ಅವರು ಕಣ್ಣು ಕೆರಳಿಸುತ್ತ ಹೇಳಿದರು – 'ನಡೆ, ಆ ನೀಚರಿಗೆಲ್ಲ ಬುದ್ಧಿ ಕಲಿಸುತ್ತೇನೆ. ಈ ವರೆಗೆ ಎಂದೂ ಊಟ ಕೊಡುತ್ತಿದ್ದಿಲ್ಲವೆಂದಾದ ಮೇಲೆ ಇಂದೇನು ಈ ಹೊಸವಾಡಿಕೆ? ಹೋಗಲಿ, ಅವರ ಲೆಕ್ಕದಲ್ಲಿ ದಿನಕ್ಕೆ ಒಂದಾಣೆಯಂತೆ ಮಜೂರಿ ಬೇಕಾದರೆ ಕೊಡಿಸುವಾ. ಸಾಧ್ಯವಿದ್ದರೆ ಅಷ್ಟಕ್ಕೆ ಕೆಲಸ ಮಾಡಲಿ, ಇಲ್ಲವಾದರೆ ನಡೆಯಲಿ–ನೋಡಿ ಬಿಡುವೆ ಒಂದು ಕೈ.'

ಬಳಿಕ ಹೋರಿರಾಮನತ್ತ ನೋಡುತ್ತ ಹೇಳಿದರು – 'ಈಗ ನೀನು ಹೋಗು. ನಿನ್ನ ತಯಾರಿಗಳನ್ನೆಲ್ಲ ಮಾಡು. ನಾನು ಹೇಳಿದ ವಿಚಾರ ಮಾತ್ರ ಮರೆಯಬೇಡ. ನಿಮ್ಮ ಗ್ರಾಮದಿಂದ ಕನಿಷ್ಟಪಕ್ಷ ಐನೂರಾದರೂ ಸಿಕ್ಕಬೇಕು.'

ರಾಯ್‌ಸಾಹೇಬರು ಗದರಿಸುತ್ತಲೇ ಮುಂದೆ ಹೋದರು. ಹೋರಿರಾಮ ಆಗ – 'ಈ ತನಕ ಎಂತೆಂತಹ ನೀತಿಯ, ಧರ್ಮಶಾಸ್ತ್ರದ, ವಿಚಾರ ಮಾತಾಡುತ್ತಾ ಇದ್ದರು! ಈಗ ಒಂದೇ ಪೆಟ್ಟಿಗೆ ಹೇಗೆ ಪಿತ್ಥ ನೆತ್ತಿಗೇರಿತು!' ಎಂದು ಎಣಿಸಿದ.

ಸೂರ್ಯನು ಮೇಲೇರಿ ಬಂದಿದ್ದನು. ಅವನ ತೇಜಸ್ಸಿಗೆ ಸೋತು ಹೋಗಿ ಮರಗಳೂ ತಮ್ಮ ನೆರಳಿನ ಪ್ರಸಾರವನ್ನು ಕುಗ್ಗಿಸಿಕೊಂಡಿದ್ದುವು.

ಹೋರಿರಾಮ ತನ್ನ ಊರುಗೋಲನ್ನು ಹಿಡಿದುಕೊಂಡು ಮನೆಯತ್ತ ಹೊರಟನು. ಕಾಣಿಕೆಗಾಗಿ ರೂಪಾಯಿ ಎಲ್ಲಿಂದ ಮಾಡಲಿ – ಎಂಬ ಯೋಚನೆಯೇ ಅವನ ತಲೆಯಲ್ಲಿ ತಿರುಗುತಿತ್ತು.

೩

ಹೋರಿರಾಮು ತನ್ನ ಗ್ರಾಮವನ್ನು ಸಮೀಪಿಸಿದ. ಗೋಬರ ಆಗಲೂ ಗದ್ದೆಯಲ್ಲಿ ಕಬ್ಬು ಕಡಿಯುತ್ತಲೇ ಇದ್ದ. ಅವನೊಡನೆ ಅವನ ತಂಗಿಯ ರಿಬ್ಬರೂ ಕೆಲಸಕ್ಕೆ ಸೇರಿದ್ದರು. ಉರಿಗಾಳಿ ಬೀಸಲಾರಂಭಿಸಿತ್ತು. ಪ್ರಕೃತಿ ದೇವಿಯು ವಾಯುವಿಗೆ ಬೆಂಕಿ ಹಿಡಿಸಿದ್ದಳೊ – ಎಂಬಂತೆ ತೋರುತಿತ್ತು.

ಈಗಲೂ ಈ ಮಕ್ಕಳು ಏಕೆ ಕೆಲಸ ಮಾಡುತ್ತಿದ್ದಾರೆ? ಏನು, ಕೆಲಸದ ದೆಸೆಯಿಂದ ಜೀವದಾಸೆಯೂ ಬೇಡವೇ ? ಹಾಗಾಗಿ, ಹೋರಿರಾಮು ಗದ್ದೆಯತ್ತ ಹೋಗಿ ದೂರದಿಂದಲೇ ಕರೆದು ಕೇಳಿದ – 'ಏನು, ಮನೆಯ ಕಡೆ ಬರುವುದಿಲ್ಲವೇ ಗೋಬರಾ? ಏನು, ಇಡೀ ದಿನ ಕೆಲಸ ಮಾಡುತ್ತಲೇ ಇರುವಿರೇ? ನಡುಬಿಸಿಲು ಏರಿ ಬಂದುದು ಕಾಣುವುದಿಲ್ಲವೆ? '

ಇದನ್ನು ಕೇಳಿದೊಡನೆಯೇ ಮೂವರೂ ಹಾರೆ ಪಿಕ್ಕಾಸುಗಳನ್ನು ಹಿಡಿದುಕೊಂಡು ಬಂದು, ಹೋರಿರಾಮುನೊಡನೆ ಸೇರಿದರು. ಗೋಬರನು ಸ್ವಲ್ಪ ಕೃಶ, ಆದರೂ ಉದ್ದ ಶರೀರದ ಯುವಕ. ಅವನ ಮುಖದ ಮೇಲೆ ಒಂದು ತರದ ಬೇಸರ ಒಡೆದು ಕಾಣುತ್ತಿತ್ತು. ಈ ಕೆಲಸದ ಮೇಲೆ ಬಹಳ ಮಮತೆ ಇಲ್ಲವಾದರೂ ಆತ, ತನಗೆ ಹಸಿವು ಬಾಯಾರಿಕೆಗಳ ಗಣ್ಯವೇ ಇಲ್ಲವೆಂದು ತೋರಿಸಬಯಸುತ್ತಿದ್ದ. ದೊಡ್ಡ ಹುಡುಗಿ ಸೋನೆಯು ಲಜ್ಜಾಶೀಲ ಕುಮಾರಿ. ಅವಳ ಶರೀರ ತೆಳ್ಳಗೆ. ಪ್ರಸನ್ನ ಹಾಗೂ ಚಪಲ ಸ್ವಭಾವದ ಮುಖ ದಪ್ಪದ ಕೆಂಪು ಸೀರೆಯನ್ನುಟ್ಟು ಸೆರಗನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದುದರಿಂದ ಒಂದು ತರದ ದೊಡ್ಡಿತೆ ಅವಳಲ್ಲಿ ತೋರಿಬರುತ್ತಿತ್ತು. ನಂತರದ ರೂಪಳು ಬಟ್ಟೆಯ ತುಂಡೊಂದನ್ನು ಸೊಂಟಕ್ಕೆ ಸುತ್ತಿಕೊಂಡ ಹುಡುಗಿಯಾಗಿದ್ದಳು. ತಲೆ ಕೂದಲು ಕೆದರಿದೆ. ಗರ್ವದಿಂದ ಕೂಡಿದ ಅಳು ಮುಖ ಅವಳದಾಗಿತ್ತು.

ಅಪ್ಪನನ್ನು ನೋಡಿದೊಡನೆಯೇ ರೂಪಳು ಹಾರುತ್ತಾ ಓಡಿ ಬಂದು 'ಅಪ್ಪಾ, ನೋಡು. ಮಣ್ಣಿನ ಹೆಂಟೆ ಒಂದನ್ನು ಬಿಡದೆ ಒಡೆದು ಹಾಕಿದೆ. ಅಕ್ಕ ನನ್ನನ್ನು ಮರದ ಕೆಳಗೆ ಕೂರಲು ಹೇಳುತ್ತಿದ್ದಳು. ಅಪ್ಪಾ ! ಹೆಂಟೆ ಪುಡಿ ಮಾಡದಿದ್ದರೆ ಗದ್ದೆಯ ಮಣ್ಣು ಹೇಗೆ ಸರಿಯಾದೀತು ? ' ಎಂದಳು ಅವನ ಕೈಹಿಡಿದು ಜೋತಾಡುತ್ತ.

ಆಗ ಹೋರಿರಾಮ ಅವಳನ್ನೆತ್ತಿಕೊಂಡು ಮುದ್ದು ಮಾಡುತ್ತ ಹೇಳಿದ– 'ನೀನು ಬಹಳ ಒಳ್ಳೆಯ ಕೆಲಸ ಮಾಡಿದೆ ಮಗೂ. ಆಯಿತು; ಈಗ ಮನೆಗೆ ಹೋಗುವ.'

ಇಷ್ಟು ಹೊತ್ತಿನ ವರೆಗೆ ತನ್ನ ಬೇಸರವನ್ನು ಮನಸ್ಸಿನೊಳಗೇ ಒತ್ತಿ ಹಿಡಿದುಕೊಂಡಿದ್ದ ಗೋಬರ ಹೇಳಲಾರಂಭಿಸಿದ– 'ಇದೇನು ಪ್ರತಿ ದಿನವೂ ಧನಿಗಳ ಪೂಜೆಗಾಗಿ ಹೋಗುತ್ತಿರುವುದು ? ಬಾಕಿ ಕೊಡದಿದ್ದರೆ ಉಗ್ರಾಣಿ ಬಂದು ಬಾಯಿಗೆ ಬಂದಂತೆ ಬೈದು ಹೋಗುತ್ತಾನೆ ! ಬಿಟ್ಟಿ ಕೆಲಸ ಮಾಡುತ್ತಲೇ ಇರಬೇಕು ! ತಪ್ಪದೆ ಕಪ್ಪ ಕಾಣಿಕೆಗಳನ್ನು ಕೊಡದೆ ಸಾಧ್ಯವೇ ಇಲ್ಲ. ಹಾಗಿರುವಾಗ ಪುನಃ ಪುನಃ ಹೋಗಿ ಸಲಾಮು ಹೊಡೆಯುತ್ತಿರುವುದೇಕೆ ?'

ಹೋರಿರಾಮನ ಮನಸ್ಸಿನಲ್ಲಿಯೂ ಅದೇ ಭಾವನೆ ಮೂಡಿ ಬಂದಿತ್ತು. ಆದರೂ ಸಹ ಹುಡುಗನ ಈ ದ್ರೋಹ ಭಾವವನ್ನು ಅಡಗಿಸಿ ಬಿಡುವುದು ಅಗತ್ಯವಾಗಿತ್ತು. ಹಾಗಾಗಿ ಹೇಳಿದ– 'ಗುಲಾಮರಾಗಿ ಹುಟ್ಟಿದ ಮೇಲೆ ಸಲಾಮು ಹಾಕದಿರಲಿಕ್ಕಾದೀತೇ ? ಹೀಗೆ ಅಡ್ಡ ಬೀಳುತ್ತಿದ್ದುದರ ಫಲವಾಗಿಯೇ ಮನೆ ಬಾಗಿಲಲ್ಲಿ ಹೊಸ ಗುಡಿಸಲು ಕಟ್ಟಿದರೂ ಯಾರೂ ಬಾಯ್ದೆರೆಯಲಿಲ್ಲ. ಘೂರನು ಮನೆಬಾಗಿಲಲ್ಲಿ ಗೂಟ ಹೊಡೆದುದಕ್ಕೆಯೇ ಧನಿಗಳ ಉಗ್ರಾಣಿ ಬಂದು ಎರಡು ರೂಪಾಯಿ ದಂಡ ತೆಗೆದುಕೊಂಡಿದ್ದ ! ಕೆರೆಯಿಂದ ಎಷ್ಟು ಮಣ್ಣು ತೆಗೆದು ನಾವು ಮೇಲೆ ಹಾಕಿದೆವು ! ಆದರೂ ಉಗ್ರಾಣಿ ಬಾಯಿ ತೆರೆಯಲಿಲ್ಲ. ಬೇರೆ ಯಾರಾದರೂ ಆಗುತ್ತಿದ್ದರೆ ದಂಡ ತೆರಬೇಕಾಗುತ್ತಿತ್ತು. ಇದಕ್ಕಾಗಿಯೇ ಆಗಾಗ ಧನಿಗಳಲ್ಲಿಗೆ ಹೋಗುವುದಲ್ಲದೆ, ನನ್ನ ಕಾಲಿಗೇನೂ ನಾಯಿಗೆರೆ ಇದೆಯೆಂದಲ್ಲ. ಅಥವಾ ಉದ್ದಂಡ ಅಡ್ಡಬೀಳಹೋಗುವುದೆಂದರೆ ಅದು ಸುಖದ ಸಮಾಚಾರವೂ ಅಲ್ಲ. ಗಂಟೆಗಟ್ಲೆ ಕಾದು ನಿಂತ ಬಳಿಕವೇ ಒಡೆಯರಿಗೆ ನಾವು ಹೋದ ಸುದ್ದಿ ಮುಟ್ಟುವುದು. ಒಮ್ಮೊಮ್ಮೆ ಹೊರ ಬರುತ್ತಾರೆ; ಮತ್ತೆ ಕೆಲವೊಮ್ಮೆ– ಈಗ ಪುರ್ಸೊತ್ತು ಇಲ್ಲ– ಎಂದು ಹೇಳಿಕಳುಹಿಸುತ್ತಾರೆ.'

ಗೋಬರ ಕಣ್ಣು ತಿರುಗಿಸಿ ಹೇಳಿದ– "ದೊಡ್ಡ ಮನುಷ್ಯರ ಮುಂದೆ 'ಹೌದು ಬಸವಣ್ಣಾ ಹೌದು, ಅಲ್ಲ ಬಸವಣ್ಣಾ ಅಲ್ಲ,' ಎನ್ನುವುದರಲ್ಲಿಯೂ ಒಂದು ತರದ ಆನಂದವಿರಬಹುದು ! ಇಲ್ಲವಾದರೆ ದೊಡ್ಡ ಮನುಷ್ಯರೆಲ್ಲ ಆ ಮೆಂಬರಿಕೆಗಾಗಿ ನಿಂತು ಏಕೆ ಇಷ್ಟು ಕಷ್ಟಪಡುತ್ತಿದ್ದಾರೆ ?"

'ತಲೆಯ ಮೇಲೆ ಭಾರ ಬೀಳುವಾಗ ಎಲ್ಲ ಗೊತ್ತಾಗುತ್ತದೆ ಮಗನೇ. ಈಗ ಏನು ಬೇಕಾದರೂ ಹೇಳಿಕೋ. ಮೊದಮೊದಲು ನಾನು ಕೂಡ ಹೀಗೇ ಯೋಚಿಸುತ್ತಿದ್ದೆ. ಆದರೆ ಈಗ ಗೊತ್ತಾಗುತ್ತಿದೆ – ನಮ್ಮ ಕೊರಳು ಇನ್ನೊಬ್ಬರ ಕಾಲುಗಳೆಡೆ ಸಿಕ್ಕಿ ಹೋಗಿರುವಾಗ ಸುಮ್ಮನೆ ತಲೆ ಅಲ್ಲಾಡಿಸಿ ಪ್ರಯೋಜನವಿಲ್ಲ – ಎಂಬುದಾಗಿ.'

ಅಪ್ಪನ ಮೇಲೆ ತನ್ನ ಕೋಪದ ಹೊರೆಯನ್ನಿಳಿಸಿ ಗೋಬರ ಶಾಂತನಾದ. ಅವನು ಮತ್ತೇನೂ ಮಾತಾಡದೆ ಬೇರೆ ಕಡೆಗೆ ಹೋಗಿಬಿಟ್ಟ. ರೂಪಳು ಅಪ್ಪನ ತೊಡೆಯನ್ನೇರಿ ಕೂತುದನ್ನು ಕಂಡು ಸೋನೆಗೆ ಸ್ವಲ್ಪ ಮತ್ಸರ ವಾದಂತಾಗಿ ಗದರಿಸಿ ನುಡಿದಳು – 'ಅಪ್ಪನ ತೊಡೆಯಿಂದ ಇಳಿದು, ನೀನೇಕೆ ನಿನ್ನ ಕೆಲಸ ಮಾಡುವುದಿಲ್ಲ ? ನಿನ್ನ ಕಾಲು ಮುರಿದು ಹೋಗಿದೆಯೇ ?'

ಆಗ ರೂಪಳು ಅಪ್ಪನ ಹೆಗಲಮೇಲೆ ಕೈಹಾಕಿಕೊಂಡು ಹೇಳಲಾರಂಭಿಸಿ ದಳು – 'ನಾನು ಇಳಿಯುವುದಿಲ್ಲ. ನಿನಗೇನು ಆದರಿಂದ ? ಅಪ್ಪಾ, ಅಕ್ಕ ನನ್ನನ್ನು ಯಾವಾಗಲೂ ಹೀಯಾಳಿಸುತ್ತಿರುತ್ತಾಳೆ. ಅವಳು ಸೋನಾ, – ಎಂದರೆ ಚಿನ್ನವಂತೆ; ನಾನು ರೂಪಾ, – ಎಂದರೆ ಬೆಳ್ಳಿಯಂತೆ ! ಅಪ್ಪಾ, ನನಗೇನಾದರೂ ಬೇರೆ ಒಳ್ಳೆಯ ಹೆಸರಿಡು.'

ಹೋರಿರಾಮ ಕೃತಕ ಕೋಪ ತೋರಿಸುತ್ತ ಹೇಳಿದ–'ನೀನು ಅವಳನ್ನು ಯಾವಾಗಲೂ ಹೀಯಾಳಿಸುತ್ತಿರುವುದು ಏಕೆ ಸೋನಾ ? ಚಿನ್ನವು ಬರೇ ನೋಡಲಿಕ್ಕೆ ಮಾತ್ರ ಚಂದ. ಬೆಳ್ಳಿಯಾದರೆ ಎಷ್ಟೋ ಪ್ರಯೋಜನಕ್ಕೆ ಬರುತ್ತದೆ. ಬೆಳ್ಳಿ ಇಲ್ಲವಾದರೆ ರೂಪಾಯಿ ಎಲ್ಲಿಂದಾಗುವುದು ?'

ಆಗ ಸೋನೆಯು ತನ್ನ ಪಕ್ಷವನ್ನು ಸಮರ್ಥನೆ ಮಾಡುತ್ತ ಹೇಳಿದಳು – 'ಚಿನ್ನ ಇಲ್ಲವಾದರೆ ಪವನು ಎಲ್ಲಿಂದ ಬರುವುದು ? ಚಿನ್ನದ ಬಳೆ ಸರಗಳು ಆಗುವುದು ಹೇಗೆ ?'

ಗೋಬರನೂ ಈ ವಿನೋದ ಮಯ ವಿವಾದದಲ್ಲಿ ಸೇರಿ ರೂಪಳೊಡನೆ ಹೇಳಿದ – 'ಚಿನ್ನ ಒಣಗಿದ ಎಲೆಯಂತೆ ಹಳದಿ – ಪ್ರಕಾಶವೇ ಇಲ್ಲ. ಬೆಳ್ಳಿ ಯಾದರೆ ಸೂರ್ಯನಂತೆ ಬೆಳಗುತ್ತಿರುತ್ತದೆ.'

ಆಗ ಸೋನೆಯೂ ಹೇಳಿದಳು–ಹಳದಿಯೇ ಚಂದ; ಬಿಳಿಯಲ್ಲ. ಮದುವೆ ಯಲ್ಲಿ ಸಹ ಹಳದಿ ಸೀರೆಯನ್ನೇ ಉಡುವುದು ; ಬಿಳಿ ಸೀರೆಯನ್ನು ಯಾರಾ ದರೂ ಉಟ್ಟುಕೊಳ್ಳುವರೇ ?'

ರೂಪಳು ಈ ಮಾತಿನಿಂದ ಸೋತುಹೋದಳು. ಗೋಬರ್ ಮತ್ತು ಹೋರಿರಾಮನಿಗೆ ಸಹ ಇದಕ್ಕುತ್ತರ ಕೊಡಲಾಗಲಿಲ್ಲ. ಆಗ ಸೋನೆಯು ವಿಜಯೋತ್ಸಾಹದಿಂದ ನೋಡತೊಡಗಿದಳು.

ಆಗ ಹೋರಿರಾಮನಿಗೆ ಒಂದು ಹೊಸ ಹಂಚಿಕೆ ತೋರಿದ್ದರಿಂದ ಅವನು ಹೇಳಿದ – ' ಚಿನ್ನ – ದೊಡ್ಡ ಮನುಷ್ಯರಿಗಾಗಿ ಇರುವುದು. ನಮ್ಮಂತಹರಿಗೆ ಬೆಳ್ಳಿಯೇ ಮುಖ್ಯ.'

ಇದರಿಂದ ರೂಪಳಿಗೆ ಪುನಃ ಸ್ವಲ್ಪ ಉತ್ಸಾಹ ಬಂತು.

ಇವರೆಲ್ಲ ಮನೆ ಮುಟ್ಟುವಾಗ ದನಿಯಳು ಬಾಗಿಲಲ್ಲಿ ನಿಂತು ಇವರ ದಾರಿ ನೋಡುತ್ತಲೇ ಇದ್ದಳು. ಅವಳು ಸ್ವಲ್ಪ ಕೋಪಗೊಂಡವಳಾಗಿ ಹೇಳಿದಳು– 'ಏಕೆ ಇಷ್ಟು ತಡಮಾಡಿದೆ ಗೋಬರಾ? ಕೆಲಸ, ಕೆಲಸ, ಅಂತ ಪ್ರಾಣ ಕೂಡಾ ಕೊಡುವುದೇ?'

ಅವಳು ಪುನಃ ಪತಿಯೊಡನೆ ಸಿಡುಕಿನಿಂದ ಹೇಳಿದಳು – ' ನೀವು ಸಹ ಧನಿಯರಲ್ಲಿಗೆ ಹೋಗಿ ಬಂದವರು ಪುನಃ ಗದ್ದೆಯಲ್ಲೇ ಹೋಗಿ ಸೇರಿದಿರಿ. ನೀವು ಹೋಗದಿದ್ದರೆ ಗದ್ದೆ ಏನಾದರೂ ಓಡಿ ಹೋಗುತಿತ್ತೇ?'

ಮನೆಬಾಗಿಲಲೇ ಬಾವಿ ಇತ್ತು. ಹೋರಿರಾಮ ಗೋಬರರು ಒಂದೊಂದು ಕೊಡ ನೀರು ಎಳೆದು ಕೈಕಾಲು ಮುಖ ತೊಳೆದುಕೊಂಡರು. ಹೋರಿರಾಮ ರೂಪಳ ಕೈಕಾಲೂ ತೊಳೆಸಿದ. ಬಳಿಕ ಎಲ್ಲರೂ ಊಟಕ್ಕೆ ಹೊರಟರು. ಗೋದಿಯ ರೊಟ್ಟಿ ಬೆಳ್ಳಗೆ, ಮೆತ್ತಗೆ ಇದ್ದುವು. ಬೆಂದ ಬೇಳೆಗೆ ಹಸಿ ಮಾವಿನಕಾಯಿ ಸೇರಿಸಿದ ಪದಾರ್ಥವೂ ತಯಾರಾಗಿತ್ತು. ರೂಪಳು ತಂದೆಯ ಬಟ್ಟಲಲ್ಲೇ ತಿನ್ನತೊಡಗಿದಳು. ಸೋನೆಯು ಅಸೂಯಾಯುಕ್ತ ದೃಷ್ಟಿಯಿಂದ ನೋಡಲಾರಂಭಿಸಿದಳು.

ಆಗ ದನಿಯಾ ಕೇಳಿದಳು – ' ಧನಿಗಳೊಡನೆ ಏನು ಮಾತು ಕತೆ ನಡೆಯಿತು?'

ಹೋರಿರಾಮ ಒಂದು ಲೋಟ ನೀರು ಕುಡಿದು ಹೇಳಿದ – ' ಅದೇ, ಗೇಣಿ ವಸೂಲಿನ ಮಾತು ಕತೆ ನಡೆಯಿತು, ಮತ್ತೇನು? ನಾವೆಲ್ಲ ತಿಳಿಯುವುದು – ದೊಡ್ಡ ಮನುಷ್ಯರೆಲ್ಲ ಬಹಳ ಸುಖವಾಗಿದ್ದಾರೆಂದು. ಆದರೆ ನಿಜ ವಿಚಾರ ಕೇಳಿದರೆ – ಅವರು ನಮಗಿಂತಲೂ ಹೆಚ್ಚು ಅಳುತ್ತಿದ್ದಾರೆ. ನಮಗೆ ಹೊಟ್ಟೆಯ ಚಿಂತೆ ಮಾತ್ರ. ಅವರಿಗಾದರೋ ಸಾವಿರಾರು ಚಿಂತೆಗಳು!'

ರಾಯ್‌ಸಾಹೇಬರು ಮತ್ತೇನೆಲ್ಲ ಹೇಳಿದ್ದರೋ ಹೋರಿರಾಮನಿಗೆ ನೆನಪಿದ್ದಿಲ್ಲ. ಅವರ ಎಲ್ಲ ಮಾತುಗಳ ಈ ಒಟ್ಟಾರ್ಥ ಮಾತ್ರ ಅವನ ಸ್ಮೃತಿಯಲ್ಲಿ ಉಳಿದಿತ್ತು.

ಆಗ ಗೋಬರನು ವ್ಯಂಗ್ಯಸ್ವರದಿಂದ ಹೇಳಲಾರಂಭಿಸಿದ – 'ಹಾಗಾದರೆ ಅವರ ಜಮೀನನ್ನೆಲ್ಲ ನಮಗೆ ಬಿಟ್ಟುಕೊಡಲಿ. ನಮ್ಮ ಎತ್ತು ಸೇಗಿಲು, ಹಾರೆ ಪಿಕ್ಕಾಸು – ಎಲ್ಲ ಅವರಿಗೆ ಕೊಟ್ಟುಬಿಡುವ. ಅವರು ನಮ್ಮೊಡನೆ ಹುದ್ದೆ ಬದಲಾಯಿಸಿಕೊಳ್ಳಲು ತಯಾರಿರುವರೇ? ಬಾಯಲ್ಲಿ ಹೇಳುವುದೆಲ್ಲ – ಸುಳ್ಳು, ಮೋಸ! ಅವರಿಗೆ ದುಃಖ ಚಿಂತೆಗಳಿವೆಯಾದರೆ – ಡಜನ್‌ಗಟ್ಟಲೆ ಹೊಸ ಹೊಸ ಮೋಟರ್ ತೆಗೆಯುವರೇ? ದೊಡ್ಡ ದೊಡ್ಡ ಅರಮನೆಗಳನ್ನು ಕಟ್ಟಿಸಿಕೊಳ್ಳುವರೇ? ಯಾವಾಗಲೂ ಹಲ್ವಾ ಪೂರಿಗಳನ್ನು ತಿಂದುಕೊಂಡು ನರ್ತನ ಗಾಯನಗಳಲ್ಲಿ ಮಗ್ನರಾಗಿರುತ್ತಾರೆ ಅವರು! ರಾಜಭೋಗಗಳನ್ನು ಅನುಭವಿಸುತ್ತಿದ್ದಾರೆ! ಅದರ ಮೇಲೆ ಕೂಡ ಅವರು ದುಃಖಿಗಳಾಗಿಯೇ ಇದ್ದಾರೆ ಅಲ್ಲವೆ?'

ಕರಕರೆಗೊಂಡು ಹೋರಿರಾಮ ಹೇಳಿದ – 'ನಿನ್ನ ಹತ್ತಿರ ಯಾರು ಚರ್ಚೆ ಮಾತಾಡುವುದು! ಈಗ ನಮ್ಮ ಬೇಸಾಯದ ವಿಚಾರವೇ ಯೋಚಿಸುವ– ಇದರಿಂದ ಸಿಗುವುದಾದರೂ ಏನು? ಸರಿಯಾಗಿ ದಿನಕ್ಕೊಂದಾಣೆಯ ಮಜೂರಿಯೂ ಸಿಗಲಾರದು. ಹತ್ತು ರೂಪಾಯಿ ಸಂಬಳದ ನೌಕರನು ಸಹ ನಮಗಿಂತ ಒಳ್ಳೆಯ ರೀತಿಯಲ್ಲಿ ಉಂಡು ಉಡುತ್ತಾನೆ. ಹಾಗಿದ್ದರೂ ಬೇಸಾಯ ಬಿಡಲಿಕ್ಕಾಗುವುದೇ? ಅಥವಾ ಬೇಸಾಯ ಬಿಟ್ಟಮೇಲೆ ಮಾಡುವುದಾದರೂ ಏನನ್ನು? ಬೇರೆ ಕೆಲಸ ಎಲ್ಲಿ ಸಿಗುತ್ತದೆ? ಅದೂ ಅಲ್ಲದೆ ನಮ್ಮ ಗೌರವ ಮರ್ಯಾದೆಗಳನ್ನು ಕಾಪಾಡಿಕೊಳ್ಳುವುದು ಬೇಡವೇ? ಈ ಬೇಸಾಯದಲ್ಲಿರುವ ಗೌರವ ನೌಕರಿಯಲ್ಲಿದೆಯೇ? ಅದೇ ರೀತಿ ಜಮೀನ್ದಾರರ ಕತೆಯೂ ಆಗಿದೆ. ಅವರ ದೇಹದಲ್ಲಿ ನೂರಾರು ರೋಗಗಳು ಮನೆಮಾಡಿಕೊಂಡಿವೆ. ಹಕೀಮರಿಗೂ, ವೈದ್ಯರಿಗೂ ಹಣಕೊಟ್ಟು ಆಗಾಗ ಸಲಾಮು ಹಾಕುತ್ತಿರಬೇಕಾಗುತ್ತದೆ. ಸರಿಯಾದ ತಾರೀಕಿಗೆ ಕಂದಾಯ ಪಾವತಿಯಾಗದಿದ್ದರೆ ಆಸ್ತಿ ಜಪ್ತಿಯಾಗುತ್ತದೆ. ನಮಗೇನೂ ಅಂತಹ ತೊಂದರೆಗಳಿಲ್ಲ. ಹೆಚ್ಚೆಂದರೆ ಗದರಿಕೆ ಬೈಗಳು ಸಿಗುತ್ತವೆ – ಅಷ್ಟೆ.'

ಆಗ ಗೋಬರ ಅಡ್ಡಮಾತಾಡಿದ– 'ಇದೆಲ್ಲ ಬರೇ ಬಾಯಲ್ಲಿ ಹೇಳ

ಲಿಕ್ಕಾದೀತು. ನಾವು ಒಂದೊಂದು ಕಾಳು ಧಾನ್ಯವನ್ನೂ ಜೋಪಾನವಾಗಿ ಕೂಡಿಸಿಡುತ್ತೇವೆ. ಹಾಗಿದ್ದರೂ ಮೈಮೇಲೆ ಸರಿಯಾದ ಬಟ್ಟೆ ನಮಗಿಲ್ಲ. ದಿನವಿಡೀ ಬೆವರು ಸುರಿಸಿದರೂ ಹೊಟ್ಟೆಗೇ ಸಾಕಾಗುವುದಿಲ್ಲ. ಅವರಿಗೆಲ್ಲ ಏನು? ದೊಡ್ಡ ಸಿಂಹಾಸನದ ಮೇಲೆ ಕೂತುಕೊಳ್ಳುತ್ತಾರೆ! ನೂರಾರು ಮಂದಿ ಚಾಕರರಿದ್ದಾರೆ. ರೂಪಾಯಿ ಕೂಡಿಸಿಡದಿದ್ದರೂ ಎಲ್ಲ ತರದ ಸುಖ ವನ್ನು ಭೋಗಿಸುತ್ತಿಲ್ಲವೇ? ಇನ್ನೇನಾಗಬೇಕು ಅವರಿಗೆ?'

'ನಿನ್ನ ದೃಷ್ಟಿಯಲ್ಲಿ–ನಾವೂ ಅವರೂ ಸಮಾನರೇ ಆಗಿದ್ದೇವೆಯೇ?'

'ದೇವರು ನಮ್ಮನ್ನೆಲ್ಲ ಸಮಾನರನ್ನಾಗಿಯೇ ಸೃಷ್ಟಿಸಿದ್ದಾನೆ.'

'ಹಾಗಲ್ಲ ಮಗನೇ. ದೇವರೇ ದೊಡ್ಡವರನ್ನೂ ಬಡವರನ್ನೂ ಸೃಷ್ಟಿ ಸಿದ್ದಾನೆ. ಅಂತಹ ಅಪಾರ ಸಂಪತ್ತು ಪೂರ್ವ ಪುಣ್ಯದಿಂದ ಬರುತ್ತದೆ. ಹಿಂದಿನ ಜನ್ಮದ ತಪಸ್ಸಿನ ಫಲವಾಗಿ ಇಂದು ಆನಂದವನ್ನನುಭವಿಸುತ್ತಾರೆ. ನಾವು ಪೂರ್ವ ಜನ್ಮದಲ್ಲಿ ಗಳಿಸಿಲ್ಲ. ಹಾಗಿರುವಾಗ ಸಂಪತ್ತು ಬರುವು ದಾದರೂ ಎಲ್ಲಿಂದ?'

'ಇದೆಲ್ಲ ಮನಸ್ಸಮಾಧಾನಕ್ಕಾಗಿ ಹೇಳುವ ಪುರಾಣ! ದೇವರು ಎಲ್ಲ ರನ್ನು ಒಂದೇ ರೀತಿ ಸೃಷ್ಟಿಸಿದ್ದಾನೆ. ಆದರೆ ಯಾರ ಕೈಯಲ್ಲಿ ದೊಡ್ಡ ದೊಣ್ಣೆ ಇದೆಯೋ ಆತ ಶಕ್ತಿಹೀನನ ತಲೆ ಒಡೆದು ದೊಡ್ಡ ಮನುಷ್ಯ ನಾಗುತ್ತಾನೆ!'

'ಇದು ನಿನ್ನ ತಿಳಿವಳಿಕೆ. ಆದರೆ ನಮ್ಮ ಧನಿಗಳು ದಿನಾಲು ನಾಲ್ಕು ಗಂಟೆಗೆ ಎದ್ದು ದೇವರ ಭಜನೆ ಮಾಡುತ್ತಾರೆ. ಅದು ಗೊತ್ತೇ?'

'ಹೌದು; ಆ ಪಾಪದ ಹಣ ಜೀರ್ಣವಾಗಬೇಕಾದರೆ ಭಜನೆ, ಪೂಜೆ, ದಾನ ಧರ್ಮ–ಎಲ್ಲ ಮಾಡಬೇಕಾಗುತ್ತದೆ. ಅವರು ಹೊಟ್ಟೆಗೇನೂ ಇಲ್ಲದೆ ದೇವರ ಭಜನೆ ಮಾಡುವುದಿದ್ದರೆ–ನಾವೂ ನೋಡಿಯೇವು ಮೂರು ಹೊತ್ತೂ ಸರಿಯಾಗಿ ಹೊಟ್ಟೆಗೆ ಕೊಟ್ಟರೆ–ನಾವು ದಿನವೀಡೀ ಭಜನೆ ಮಾಡುತ್ತಲೇ ಇದ್ದೇವು. ಒಂದು ದಿನ ಗದ್ದೆ ಉಳಲಿಕ್ಕೆ ತೊಡಗಲಿ! ಆಗ ಎಲ್ಲ ದೈವಭಕ್ತಿಯೂ ಗುಡ್ಡೆ ಹತ್ತೀತು!'

ಹೋರಿರಾಮ ಸೋತು ಹೇಳಿದ–'ನಿನ್ನ ಬಾಯಿ ಕಟ್ಟಿಸಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ. ನೀನು ದೇವರ ಲೀಲೆಯಲ್ಲಿಯೂ ತಪ್ಪು ಕಂಡು ಹಿಡಿಯುವವನೇ.'

ಸಾಯಂಕಾಲವಾದಾಗ ಗೋಬರನು ಹಾರೆ ಪಿಕ್ಕಾಸು ಹಿಡಿದುಕೊಂಡು ಗದ್ದೆಯತ್ತ ಹೊರಟ. ಆಗ ಹೋರಿರಾಮು ಹೇಳಿದ – ' ಸ್ವಲ್ಪ ನಿಲ್ಲು ಮಗನೇ. ನಾನೂ ಬರುತ್ತೇನೆ. ನೀನು ಹಟ್ಟಿಗೆ ಹೋಗಿ ರಾಶಿಯಿಂದ ಸ್ವಲ್ಪ ಹುಲ್ಲು ತೆಗೆದು ಬೇರೆ ಮಾಡಿಡು. ನಾನು ಬೋಲನನ್ನು ಬರಹೇಳಿದ್ದೆ. ಪಾಪ! ಬಹಳ ಕಷ್ಟದಲ್ಲಿದ್ದಾನೆ– ಆತ. '

ಗೋಬರನು ಅಲಕ್ಷ್ಯಭಾವದಿಂದ ನೋಡಿ ಹೇಳಿದ – ' ನಮ್ಮ ಹತ್ತಿರ ಇನ್ನು ಮಾರಾಟಕ್ಕೆ ಹುಲ್ಲೇ ಇಲ್ಲವಲ್ಲ. '

' ಮಾರಾಟಕ್ಕಲ್ಲ. ಹೀಗೇ ಸ್ವಲ್ಪ ಕೊಡುತ್ತೇನೆಂದು ಹೇಳಿದ್ದೆ. ಆತ ಕಷ್ಟದಲ್ಲಿದ್ದಾಗ ಏನಾದರೂ ಸಹಾಯ ಮಾಡುವುದು ಬೇಡವೇ ? '

' ಆತ ಎಂದಾದರೂ ನಮಗೊಂದು ದನಕೊಟ್ಟು ಸಹಾಯ ಮಾಡಿದ್ದನೇ ?'

' ಬೇಕಾದರೆ ಕೊಡುತ್ತಿದ್ದ. ಆದರೆ ನಾವೇ ಕೇಳಿ ತೆಗೆದುಕೊಳ್ಳಲಿಲ್ಲ. '

ದನಿಯಳು ಆಗ ಮಧ್ಯ ಬಾಯಿ ಹಾಕಿದಳು – ' ಏನು ? ಆತ ದನ ಕೊಡುವುದೆ ? ಕಣ್ಣಿಗೆ ತಾಗಿಸಲಿಕ್ಕೆ ಒಂದು ಹನಿ ಹಾಲು ಸಹ ಕೊಡದವನು ದನ ಕೊಟ್ಟಾನೇ ? '

ದೃಢವಾದ ಸ್ವರದಿಂದ ಹೋರಿರಾಮು ಹೇಳಿದ – ' ಹಾಗಲ್ಲ; ನಿನ್ನಾಣೆ ಹೌದು. ತನ್ನ ಒಳ್ಳೆಯ ದನವೊಂದನ್ನು ಕೊಡುವುದರಲ್ಲಿದ್ದ. ಆತನ ಕೈ ಕಟ್ಟಿ ಹೋಗಿದೆ. ಹುಲ್ಲು, ಹಿಂಡಿ, ದಾಸ್ತಾನು ಮಾಡಿಲ್ಲ. ಹಾಗಾಗಿ ಒಂದು ದನ ಮಾರಿ ಮೇವು ಕೂಡಿಸುವ ಯೋಚನೆಯಲ್ಲಿದ್ದಾನೆ. ಕಷ್ಟದಲ್ಲಿರುವ ಮನುಷ್ಯ ನಿಂದ ಹೇಗೆ ದನ ತೆಗೆದುಕೊಳ್ಳುವುದೆಂದು ನಾನು ಯೋಚನೆಯಲ್ಲಿದ್ದೇನೆ. ಆದರೆ, ಈಗ ಸ್ವಲ್ಪ ಹುಲ್ಲು ಕೊಟ್ಟು, ಕ್ರಮೇಣ ಆದಾಗ ಸ್ವಲ್ಪ ಸ್ವಲ್ಪ ಹಣ ಕೊಡುತ್ತಾ ಅವನ ದನ ತೆಗೆದುಕೊಳ್ಳುವ ಯೋಚನೆಯೂ ಆಗುತ್ತಿದೆ. ಎಂಬತ್ತು ರೂಪಾಯಿ ಬೆಲೆಯ ದನ ! ನೋಡಿದರೆ ಯಾರೂ ಹುಚ್ಚಾಗಬೇಕು!'

ಗೋಬರ ಒಡನೆ ಹೇಳಿದ – ' ಈ ನಿಮ್ಮ ಧರ್ಮಾಭಿಮಾನವೇ ನಿಮ್ಮನ್ನು ಇಲ್ಲಿಗೆ ತಂದು ಬಿಟ್ಟದೆ ! ಈ ದನದ ವಿಚಾರ ಏಕೆ ಈಗಲೇ ಇತ್ಯರ್ಥ ಮಾಡಿ ಬಿಡಬಾರದು ? ಎಂಬತ್ತು ರೂಪಾಯಿಯ ದನ. ನಮ್ಮ ಕೈಯಿಂದ ೨೦ ರೂಪಾಯಿಯ ಹುಲ್ಲು ತೆಗೆದುಕೊಂಡು ಈಗ ನಮಗೆ ದನ ಕೊಟ್ಟು ಬಿಡಲಿ. ಬಾಕಿ ಉಳಿದ ೬೦ ರೂಪಾಯಿ ಕ್ರಮೇಣ ಕೊಡುತ್ತ ಬಂದರಾಯಿತು. '

ಹೋರಿರಾಮು ಆಗ ವ್ಯಂಗ್ಯವಾಗಿ ನಕ್ಕು ಹೇಳಿದ – ' ಆದರೆ ನಾನು ದನ

ವನ್ನು ಪುಕ್ಕಟೆಯಾಗಿಯೇ ಹೊಡೆದು ಬಿಡುವ ಯೋಚನೆಯಲ್ಲಿದ್ದೇನೆ. ಭೋಲಣ್ಣನಿಗೆ ಎಲ್ಲಿಂದಾದರೂ ಒಂದು ನೆಂಟಸ್ತಿಕೆ ಗೊತ್ತುಮಾಡಿದರೆ ಸರಿ; ಮತ್ತೆ ಒಂದೆರಡು ಹೊರೆ ಹುಲ್ಲು – ಇಷ್ಟರಿಂದಲೇ ಒಂದು ದನ ಸಿಕ್ಕಿಹೋಗಬಹುದು.'

ಗೋಬರನು ತಿರಸ್ಕಾರಯುಕ್ತ ಸ್ವರದಿಂದ ಹೇಳಿದ – 'ಸರಿ; ಹಾಗಾದರೆ ಅವನ ಮದುವೆಯ ದಲಾಲಿಗೆ ಒಪ್ಪಿಕೊಂಡಿರುವಿರೇ?'

ದನಿಯಳು ಓರೆಗಣ್ಣಿಂದ ನೋಡಿ ಹೇಳಿದಳು – 'ಇನ್ನು ಆ ಉದ್ಯೋಗ ಒಂದು ಮಾತ್ರ ಬಾಕಿ!'

ಆಗ ಹೋರಿರಾಮ ತನ್ನ ಅಭಿಪ್ರಾಯ ಸೂಚಿಸಿದ – 'ಅಲ್ಲ, ನನ್ನ ಪ್ರಯತ್ನದಿಂದಾಗಿ – ಒಂದು ಉಪಕಾರವಾಗಿ – ಅವನ ಮನೆ ತುಂಬಿ ಬರುವುದಿದ್ದರೆ ನಮಗೇನು ನಷ್ಟ?'

ಗೋಬರನು ಏನೋ ಕೆಲಸದ ಮೇಲೆ ಅಲ್ಲಿಂದ ಎದ್ದು ಹೋದ. ಅವನಿಗೆ ಈ ವಿಚಾರಗಳೆಲ್ಲ ಸರಿದೋರಲಿಲ್ಲ.

ತಲೆಯಾಡಿಸುತ್ತ ದನಿಯಳೆಂದಳು – 'ಈ ಮನೆ ತುಂಬಿಸುವ ಕೆಲಸ ಇನ್ನಾರಾದರೂ ಮಾಡಿದರೆ ಬರೀ ೮೦ ರೂಪಾಯಿಯ ದನ ತೆಗೆದುಕೊಂಡು ಸುಮ್ಮನಿರಲಾರ. ಒಂದು ಚೀಲ ರೂಪಾಯಿ ತೆಗೆದುಕೊಂಡಾನು!'

'ಹೌದು; ಅದು ನನಗೂ ಗೊತ್ತು. ಎಷ್ಟಾದರೂ, ಭೋಲಣ್ಣ ಗುಣಕ್ಕೆ ಒಳ್ಳೆಯವ. ಯಾವಾಗ ನೋಡಿದರೂ ನಿನ್ನನ್ನು ಬಾಯಿ ತುಂಬ ಹೊಗಳುತ್ತಾನೆ. ನೀನು ನಿಜವಾಗಿಯೂ ಲಕ್ಷ್ಮಿಯೇ ಆಗಿರುವೆಯಂತೆ!'

ದನಿಯಳ ಮುಖದ ಮೇಲೆ ನಗುವಿನ ರೇಖೆಯೊಂದು ಮೂಡಿ ಬಂತು. ಅದನ್ನು ನಾಚಿಕೆಯಿಂದ ಮರೆಮಾಡಿಕೊಳ್ಳುತ್ತ ಹೇಳಿದಳು – 'ನನ್ನನ್ನು ಅವನೇನೂ ಹೊಗಳಬೇಕಾಗಿಲ್ಲ.'

ಹೋರಿರಾಮ ಮುಗುಳ್ನಗುತ್ತ ಎಂದ – 'ಅವನು ಹೇಳುತ್ತಾನೆ – ಬೆಳಗ್ಗೆದ್ದು ನಿನ್ನಮುಖ ನೋಡಿದರೆ ಆ ದಿನವಿಡೀ ಒಂದಲ್ಲ ಒಂದು ರೀತಿಯ ಲಾಭ ಆಗಿಯೇ ಆಗುವುದಂತೆ! ಆಗ ನಾನೆಂದೆ – ಪ್ರತಿ ದಿನವೂ ನಾನು ಅವಳ ಮುಖ ನೋಡುತ್ತಾ ಇದ್ದೇನೆ ಮಹಾರಾಯಾ, – ಒಂದು ಚಿಕ್ಕಾಸಿಗೂ ಗತಿ ಇಲ್ಲವಲ್ಲ – ಎಂಬುದಾಗಿ.'

"ನಿಮ್ಮ ಅದೃಷ್ಟವೇ 'ಖೊಟ್ಟಿ' ಆದರೆ ನಾನೇನು ಮಾಡಲಿ?"

ಅಷ್ಟರಲ್ಲಿ ಗೋಬರ ಬಂದು ಹೇಳಿದ – 'ಭೋಲಣ್ಣ ಬಂದೇ ಬಿಟ್ಟ.

ಒಂದೆರಡು ಹೊರೆ ಹುಲ್ಲಿದೆ. ಅದನ್ನವನಿಗೆ ಕೊಟ್ಟು, ಆ ಮೇಲೆ ಅವನಿಗೆ ಹೆಣ್ಣು ಹುಡುಕಲಿಕ್ಕೆ ಹೊರಟು ಬಿಡಿ.'

ಆಗ ದನಿಯಳು ಅವನಿಗೆ ಬೋಧಿಸಲಾರಂಭಿಸಿದಳು – 'ಒಬ್ಬ ಮನುಷ್ಯ ಮನೆ ಬಾಗಿಲಿಗೆ ಬಂದಾಗ ಆದರ ಸತ್ಕಾರ ಮಾಡುವುದು ಬಿಟ್ಟು ಅವನ ವಿಚಾರ ಚಿರಿಪಿರಿ ಹೇಳುತ್ತಿರುವುದೇ ? ಸ್ವಲ್ಪವಾದರೂ ಒಳ್ಳೆಯ ನಡತೆ ಕಲಿಯ ಬಾರದೇ ? ಬಂದವನಿಗೆ ಕೈಕಾಲು ತೊಳೆಯ ಹೇಳಿ ಏನಾದರೂ ಬಾಯಾ ರಿಕೆಗೆ ಕೊಡುವುದು ಬೇಡವೇ ?'

ಆಗ ಹೋರಿರಾಮ ಹೇಳಿದ – 'ಹಾಗೆ ಉಪಚಾರಕ್ಕೇನು ಆತ ಹೊಸ ದಾಗಿ ಬಂದ ಅತಿಥಿಯೇ ?'

ದನಿಯಳಿಗೆ ಬೇಸರವಾಯಿತು – 'ಹಾಗೇನು ಅವರು ನಿತ್ಯ ಬರುವವರೇ ? ಬಿಸಿಲಲ್ಲಿ ಬಹು ದೂರದಿಂದ ಬಂದಿದ್ದಾರೆ. ಬಾಯಾರಿಕೆ ಆಗಿಯೇ ಆದೀತು. ರೂಪಾ, ಡಬ್ಬಿಯಲ್ಲಿ ಹೊಗೆಸೊಪ್ಪು ಇದೆಯೇ ನೋಡು. ಈ ಗೋಬರನ ಕಾಟದಿಂದ ಎಲ್ಲಿ ಉಳಿದೀತು ಅದು ? ಬೇಗ ಓಡಿ ಹೋಗಿ ದುಲಾರಿಯಮ್ಮನ ಅಂಗಡಿಯಿಂದ ಒಂದು ಮುಕ್ಕಾಲಿನ ಹೊಗೆಸೊಪ್ಪು ತಾ.'

ಬೋಲನಿಗೆ ಅಂದಿನಷ್ಟು ಆದರ ಸತ್ಕಾರ ಹಿಂದೆಂದೂ ಆಗಿದ್ದಿಲ್ಲ. ಕೂತು ಕೊಳ್ಳಲಿಕ್ಕೆ ಗೋಬರ ಚಾಪೆ ಹಾಕಿದ. ಸೋನೆ ಬಾಯಾರಿಕೆ ತಂದುಕೊಟ್ಟಳು. ರೂಪಾ ವೀಳ್ಯದೆಲೆಯ ಹರಿವಾಣ ಸರಿಮಾಡಿ ತಂದಳು. ದನಿಯಳು ಬಾಗಿಲೆಡೆ ಯಲ್ಲಿ ನಿಂತುಕೊಂಡು ತನ್ನ ಹೊಗಳಿಕೆ ತನ್ನ ಕಿವಿಯಿಂದಲೇ ಕೇಳಲುತ್ಸುಕ ಳಾಗಿ ನಿಂತಳು.

ಬೋಲನು ಹೊಗೆಸೊಪ್ಪು ಕೈಯಲ್ಲಿ ತಿಕ್ಕುತ್ತ ಹೇಳತೊಡಗಿದ – 'ಒಳ್ಳೆಯ ಗೃಹಿಣಿಯು ಮನೆಯಲ್ಲಿದ್ದರೆ ಸಾಕ್ಷಾತ್ ಲಕ್ಷ್ಮಿಯೇ ಇದ್ದ ಹಾಗೆ. ಯಾರ್ಯಾರಿಗೆ ಹೇಗೆ ಹೇಗೆ ಸತ್ಕಾರ ಮಾಡಬೇಕೆಂದು ಬಲ್ಲವಳೇ ನಿಜವಾದ ಗೃಹಿಣಿ.'

ದನಿಯಳ ಹೃದಯದಲ್ಲಿ ಉಲ್ಲಾಸದ ತೆರೆಗಳು ಮೂಡಿ ಬಂದುವು. ಚಿಂತೆ, ನಿರಾಶೆಗಳಿಂದ ಒಣಗಿದ ಹೃದಯಕ್ಕೆ ಈ ಕೋಮಲ ಶಬ್ದಗಳಿಂದ ಒಮ್ಮೆ ತಂಪಾಯಿತು.

ಹೋರಿರಾಮ ಬೋಲನಿಗಾಗಿ ಮೇವು ತೆಗೆಯಲಿಕ್ಕೆ ಹೋಗುವಾಗ ದನಿ ಯಳು ಬೆನ್ನ ಹಿಂದೆಯೇ ಹೋದಳು. ತನ್ನ ಎತ್ತುಗಳ ಬಾಯಿಂದ ಕಿತ್ತು

ಬೋಲನಿಗೆ ಧರ್ಮಮಾಡುವುದು ಹೇಗೆಂದು ಹೋರಿರಾಮ ಗೊಣಗುಟ್ಟುತ್ತ ಹೋಗುತ್ತಿದ್ದ. ಆಗ, ಅರಳಿದ ಕಣ್ಣುಗಳಿಂದ ನೋಡುತ್ತ ದನಿಯಳೆಂದಳು-- 'ಒಂದೇ, ಧರ್ಮ ಮಾಡಲೇ ಬಾರದು ; ಅಥವಾ ಮಾಡಿದರೆ ಹೊಟ್ಟೆತುಂಬ ಕೊಡಬೇಕು. ಹಾಗಾಗಿ, ಕೊಡುತ್ತೀರಾದರೆ ಎರಡು ಮೂರು ಹೊರೆ ಯಾದರೂ ಕೊಟ್ಟುಬಿಡಿ. ಪಾಪ! ಬರುವಾಗ ಗಂಡು ಮಕ್ಕಳನ್ನೂ ಕರೆದು ತಂದಿಲ್ಲ ಒಬ್ಬನೇ ಎಷ್ಟರ ತನಕ ಹೊತ್ತುಕೊಂಡು ಹೋದಾನು?'

'ಮೂರು ಹೊರೆ ಎಲ್ಲಿದೆ ಕೊಡಲಿಕ್ಕೆ?'

'ಹಾಗಾದರೇನು, ಒಂದೇ ಹೊರೆ ಕೊಟ್ಟು ಸುಮ್ಮನಿರುವಿರೇ? ಮತ್ತೊಂದು ಹೊರೆ ಹೊತ್ತುಕೊಂಡು ಹೋಗಿ ಹಾಕಿ ಬರಲಿಕ್ಕೆ ಗೋಬರನಿಗೆ ಹೇಳಬಾರದೇ?'

'ಗೋಬರ ಕಬ್ಬಿನ ಕೆಲಸಕ್ಕೆ ಹೋಗುವುದು ಬೇಡವೆ?'

'ಕಬ್ಬಿನ ಕೆಲಸ ಒಂದು ದಿನದ ಮಟ್ಟಿಗೆ ಹಿಂದೆ ಬಿದ್ದರೆ ಮನೆ ಹಾಳಾಗಿ ಹೋಗುವುದಿಲ್ಲ.'

'ಯಾರನ್ನಾದರೂ ಜೊತೆಗೆ ಕರೆದುಕೊಂಡು ಬರಬೇಕಾಗಿತ್ತು ಅವನು. ದೇವರು ಕೊಟ್ಟ ಗಂಡು ಮಕ್ಕಳು ಇಬ್ಬರು ಇದ್ದಾರೆ.'

'ಮನೆಯಲ್ಲಿಲ್ಲವೋ ಏನೋ! ಹಾಲು ತೆಗೆದುಕೊಂಡು ಪೇಟೆಗೆ ಹೋಗಿ ರಲೂ ಬಹುದು'

'ಇದು ಒಳ್ಳೆಯ ವ್ಯಾಪಾರ! ನಮ್ಮ ಮಾಲು ದಾನ ಮಾಡುವುದು ಬೇರೆ. ಅದನ್ನವನ ಮನೆಗೆ ಮುಟ್ಟಿಸಿ ಬರುವುದು ಬೇರೆ!'

'ಒಳ್ಳೇದು ಹಾಗಿದ್ದರೆ. ಯಾರೂ ಹೋಗುವುದು ಬೇಡ. ನಾನೇ ಹೊತ್ತುಕೊಂಡು ಹೋಗಿ ಹಾಕಿ ಬರುತ್ತೇನೆ. ಹಿರಿಯರ ಸೇವೆ ಮಾಡು ವುದರಲ್ಲಿ ನನಗೇನೂ ನಾಚಿಕೆ ಇಲ್ಲ.'

'ಹಾಗವನಿಗೆ ಮೂರು ಹೊರೆ ಕೊಟ್ಟರೆ ನಮ್ಮ ಎತ್ತುಗಳಿಗೇನು ಗತಿ?'

'ಈ ಎಲ್ಲ ದಾನದ ಮಾತು ಕೊಡುವ ಮೊದಲೇ ಯೋಚಿಸಬೇಕಿತ್ತು. ಇನ್ನು ಯಾರ ಕೈಲಾದರೂ ಕಡ ಕೇಳಿ ಭರ್ತಿ ಮಾಡಿಕೊಳ್ಳಿ.'

'ಒಳ್ಳೆಯ ಕೆಲಸ! ಮನೆ ಮಾರಿಯೂ ಧರ್ಮಮಾಡಬೇಕೇ?'

'ಈಗ ಜಮೀನ್ದಾರರ ಉಗ್ರಾಣಿ ಬಂದು ಕೇಳಿದರೆ-- ತಂದೆ, ಮಗ, ಎಳೆಯ ಮಕ್ಕಳು--ಎಲ್ಲರೂ ಮೇವನ್ನು ಹೊತ್ತುಕೊಂಡು ಹೋಗಿ ಅವರ

ಮನೆಯಲ್ಲಿ ಕಾಣಿಕೆ ಹಾಕಿ ಬರುವುದಿಲ್ಲವೇ? ಸಾಲದುದಕ್ಕೆ, ಅಲ್ಲಿಗೆ ಹೋದ ಮೇಲೆ ಒಂದೆರಡು ಗಾಡಿ ಸೌದೆ ಕೂಡ ಒಡೆದು ಹಾಕುವುದು ತಪ್ಪುವುದಿಲ್ಲ!'

'ಜಮೀನ್ದಾರರ ವಿಚಾರವೇ ಬೇರೆ.'

'ಹೌದು, ಅವರು ದೊಣ್ಣೆ ಹಿಡಿದು ಕೆಲಸ ಮಾಡಿಸುತ್ತಾರೆ!'

'ಅವರ ಭೂಮಿ ನಾವು ಬೇಸಾಯ ಮಾಡುವುದಿಲ್ಲವೆ?'

'ಬೇಸಾಯ ಮಾಡಿದರೆ ಗೇಣಿ ಕೊಡುವುದಿಲ್ಲವೇ?'

'ಆಯಿತಪ್ಪ – ಆಯಿತು. ನಮ್ಮ ಪ್ರಾಣ ತೆಗೆಯಬೇಡ. ನಾವಿಬ್ಬರೂ ಮೇವು ಹೊತ್ತುಕೊಂಡು ಹೋಗಿ ಅಲ್ಲಿ ಹಾಕಿ ಬರುತ್ತೇವೆ. ನಿನ್ನ ವ್ಯಾಪಾರ ಕಷ್ಟ! ಮೊದಲು ಅಲ್ಲಾಡಲಿಕ್ಕೇ ಕೇಳದ ಕೋಣ ಎದ್ದ ಮೇಲೆ ಓಡಿಕೊಂಡೇ ಹೋದಂತಾಯಿತು ನಿನ್ನ ಕಥೆ!'

ಮೂರು ಹೊರೆಗಳು ಸಿದ್ಧವಾದವು. ಗೋಬರನು ಅವನ್ನು ಕಟ್ಟಿ ಸರಿ ಪಡಿಸಿದ. ಆತನಿಗೆ ತಂದೆಯ ಈ ವ್ಯವಹಾರಗಳು ಸ್ವಲ್ಪವೂ ಸರಿ ಬರುತ್ತಿರಲಿಲ್ಲ. ತಂದೆಯಿಂದಾಗಿ ಮನೆ ಹಾಳಾಗುತ್ತಿರುವುದೆಂದು ಅವನು ತಿಳಿದಿದ್ದ. ಆದರೆ ದನಿಯಳಿಗೆ ತುಂಬಾ ಸಂತೋಷವಾಗಿತ್ತು. ಹೋರಿರಾಮ ಮಾತ್ರ ಈ ದಾನ ಮತ್ತು ಸ್ವಾರ್ಥದ ನಡುವೆ ಸಿಕ್ಕಿಹೋಗಿ ಒದ್ದಾಡುತ್ತಲಿದ್ದ.

ಹೋರಿರಾಮನೂ ಗೋಬರನೂ ಒಂದು ಹೊರೆ ಹಿಡಿದುಕೊಂಡು ಹೊರಗೆ ಬಂದಾಗ ಬೋಲನು ತನ್ನ ಬಟ್ಟೆಯ ಸುರುಳಿಯನ್ನು ತಲೆಯ ಮೇಲೆ ಇಟ್ಟುಕೊಂಡು ಹೊರಲಿಕ್ಕೆ ಸಿದ್ಧನಾದ. 'ಬೇಗನೆ ಇದನ್ನು ಕೊಂಡು ಹೋಗಿ ಮನೆಯಲ್ಲಿ ಹಾಕಿ ಬರುತ್ತೇನೆ. ಮತ್ತೊಂದು ಹೊರೆ ಬಳಿಕ ಕೊಂಡು ಹೋಗುತ್ತೇನೆ' ಎಂದ.

ಆಗ ಹೋರಿರಾಮ ಹೇಳಿದ – 'ಒಳಗಿಂದ ಇನ್ನೆರಡು ಹೊರೆ ಸಿದ್ಧವಾಗಿವೆ. ನೀನು ಪುನಃ ಬರುವುದು ಬೇಡ. ನಾನು ಮತ್ತು ಗೋಬರ ಒಂದೊಂದು ಹೊರೆ ಹೊತ್ತುಕೊಂಡು ನಿನ್ನೊಡನೆಯೇ ಬರುತ್ತೇವೆ.'

ಇದನ್ನು ಕೇಳಿ ಬೋಲನು ಸ್ತಂಭಿತನಾದ. ಪ್ರೀತಿಯ ಸಹೋದರನಿಗೂ ಮಿಕ್ಕಿದ ಆಪ್ತನಾಗಿ ಹೋರಿರಾಮ ತೋರಿಬಂದ ಅವನಿಗೆ. ಅಂತಹ ಒಂದು ತೃಪ್ತಿ, ಸಂತೋಷಗಳ ಅನುಭವ ಅವನಿಗೆ ಇಡೀ ಜೀವಮಾನದಲ್ಲೇ ಆಗಿರಲಿಲ್ಲ.

ಮೂವರೂ ಹುಲ್ಲಿನ ಹೊರೆ ಹೊತ್ತುಕೊಂಡು ಹೊರಟರು. ಆಗ ದಾರಿಯಲ್ಲಿ ಪುನಃ ಮಾತುಕತೆ ಆರಂಭವಾಯಿತು.

ಬೋಲ ಕೇಳಿದ – ‘ ಧನಿಗಳ ಮನೆಯಲ್ಲಿ ಜೇಷ್ಠ ಮಾಸದ ಉತ್ಸವ ಆರಂಭವಾಗಿರಬಹುದಲ್ಲ? ಬಹಳ ಸಂಭ್ರಮವಿರಬೇಕು – ಈ ಸಲ. ’

‘ ಹೌದು ; ಚಪ್ಪರ ಮಂಟಪ – ಎಲ್ಲ ತಯಾರಾಗುತ್ತಿದೆ. ಈ ಸಲದ ನಾಟಕದಲ್ಲಿ ನಾನು ಕೂಡ ಸೇರಲಿದ್ದೇನೆ ಜನಕ ರಾಜನ ಮಾಲಿಯ ಪಾತ್ರವನ್ನು ನಾನು ವಹಿಸಬೇಕೆಂದು – ರಾಯ್‌ಸಾಹೇಬರು ಹೇಳಿದ್ದಾರೆ.’

‘ ಧನಿಗಳಿಗೆ ನಿನ್ನ ಮೇಲೆ ಬಹಳ ಪ್ರೀತಿ – ಅಲ್ಲವೆ? ’

‘ ಏನೋ – ಅವರ ದಯ. ’

ಒಂದು ಕ್ಷಣದ ನಂತರ ಪುನಃ ಬೋಲ ಕೇಳಿದ – ‘ ಧನಿಗಳ ಕಾಣಿಕೆಗಾಗಿ ರೂಪಾಯಿ ಒಟ್ಟು ಮಾಡಿಟ್ಟುಕೊಂಡಿರುವೆಯಾ? ಮಾಲಿಯಾದ ಮಾತ್ರಕ್ಕೆ ಅದೇನೂ ಬಿಟ್ಟು ಹೋಗುವಂತಿಲ್ಲ. ’

ಹೋರಿರಾಮು ಮುಖದ ಮೇಲಿನ ಬೆವರನ್ನು ಒರಸಿಕೊಳ್ಳುತ್ತ ಹೇಳಿದ – ‘ಆ ಚಿಂತೆಯೇ ನನ್ನ ಜೀವ ತೆಗೆಯುತ್ತಿದೆ ಮಹಾರಾಯಾ! ಕಳೆದ ಬೆಳೆಯ ಧಾನ್ಯವನ್ನೆಲ್ಲ ಅಂಗಳದಿಂದಲೇ ಅಳೆದುಕೊಂಡು ಹೋದರು. ಜಮೀನ್ದಾರರು ತಮ್ಮ ಪಾಲು ತೆಗೆದುಕೊಂಡರು; ಸಾಲಗಾರರು ಅವರ ಪಾಲು ಕೊಂಡು ಹೋದರು. ಕೊನೆಗೆ ನನ್ನ ಪಾಲಿಗೆ ಐದಾರು ಸೇರು ಮಾತ್ರ ಉಳಿಯಿತು. ಈ ಮೇವನ್ನು ರಾತಾರಾತ್ರಿಯೇ ಅಡಗಿಸಿಟ್ಟದ್ದರಿಂದ ಇದಾದರೂ ಉಳಿಯಿತು. ಇಲ್ಲವಾದರೆ ಇದೂ ಹೋಗುತಿತ್ತು. ಜಮೀನ್ದಾರರೇನೋ ಒಬ್ಬರೇ. ಆದರೆ ಸಾಲಗಾರರು ಮಾತ್ರ ಮೂವರು – ಅಂಗಡಿಯ ಸಾಹುಕಾರ್ತಿಯೊಬ್ಬಳು, ಮಂಗಾರಾಮ ಇನ್ನೊಬ್ಬ, ದಾತಾದೀನ್ ಪಂಡಿತ – ಮತ್ತೊಬ್ಬ. ಬಡ್ಡಿ ಸಹ ಪೂರ್ತಿಯಾಗಿ ಯಾರದೂ ಕೊಡಲಾಗಲಿಲ್ಲ. ಧನಿಗಳ ರೂಪಾಯಿ ಸಹ ಅರ್ಧಾಂಶ ಬಾಕಿ ಇದೆ. ಸಾಹುಕಾರ್ತಿಯಿಂದ ಪುನಃ ಸಾಲ ತೆಗೆದು ಹೇಗೋ ದಿನ ಹೋಗುತ್ತಿದೆ. ಎಲ್ಲ ತರದ ವೇಷ ಹಾಕಿಯೂ ನೋಡಿ ಆಯಿತು. ಆದರೆ ಒಂದೂ ಪೂರೈಸುವುದಿಲ್ಲ. ಅಂತು – ದಿನವಿಡೀ ರಕ್ತ ಹರಿಸುವುದು ; ದೊಡ್ಡವರ ಹೊಟ್ಟೆ ತುಂಬಿಸುವುದು ; – ಇದಕ್ಕೇ ಆಗಿದೆ ನಮ್ಮ ಜನ್ಮ! ಅಸಲು ಹಣದ ಎರಡು ಪಾಲಷ್ಟು ಬಡ್ಡಿ ಕೊಟ್ಟಾಯಿತು. ಇನ್ನೂ ಅಸಲು ಹಣದ ಹೊರೆ ತಲೆಯ ಮೇಲೆ ಹಾಗೇಯೇ ಇದೆ. ಜನರೆಲ್ಲ ಹೇಳುತ್ತಾರೆ–ಮದುವೆ ಮುಂಜಿಗಳಲ್ಲಿ, ವ್ರತ ನಿಯಮಗಳಲ್ಲಿ, ಕೈ ಗಿಡ್ಡ ಮಾಡಿ ಖರ್ಚು ಮಾಡಬೇಕು – ಎಂಬುದಾಗಿ. ಆದರೆ ನನಗಾವುದೂ ಅರ್ಥವಾಗುವು

ದಿಲ್ಲ. ರಾಯ್ ಸಾಹೇಬರು ತಮ್ಮ ಮಗಳ ಮದುವೆಗಾಗಿ ೨೦ ಸಾವಿರ ನೀರು ಮಾಡಿದರು! ಮಂಗಾರಾಮರವರು ತಮ್ಮ ತಂದೆಯ ಉತ್ತರ ಕ್ರಿಯೆಗಾಗಿ ಐದು ಸಾವಿರ ಪುಡಿ ಮಾಡಿದರು! ಅವರಿಗೆ ಯಾರೂ ಏನೂ ಹೇಳುವುದಿಲ್ಲ. ಎಲ್ಲರಿಗೂ ಮರ್ಯಾದೆ ಎಂದರೆ – ಒಂದೇ ತರ ಅಲ್ಲವೇ?'

ಬೋಲನೂ ಕರುಣಾಮಯ ಸ್ವರದಿಂದ ಹೇಳಿದ– 'ದೊಡ್ಡ ಮನುಷ್ಯರ ಹಾಗೆ ಮಾಡಲು ನಮಗೆ ಎಲ್ಲಿ ಸಾಧ್ಯ ?'

'ನಾವು ಸಹ ಮನುಷ್ಯರೇ ಅಲ್ಲವೇ ?'

'ನೀವು ನಾವು ಮನುಷ್ಯರೆಂದು ಯಾರು ಹೇಳುತ್ತಾರೆ? ನಮ್ಮಲ್ಲಿ ಮನುಷ್ಯತ್ವವಾದರೂ ಎಲ್ಲಿದೆ? ಯಾರ ಹತ್ತಿರ ಹಣವಿದೆಯೋ, ಭೂಮಿ ಭವನಗಳಿವೆಯೋ – ಅವರೇ ಮನುಷ್ಯರು. ನಾವೆಲ್ಲ ಉಳುವ ಎತ್ತುಗಳು – ಉಳಲಿಕ್ಕಾಗಿ ಹುಟ್ಟಿದವರು. ಅದರ ಮೇಲೆ ಒಬ್ಬರನ್ನು ಕಂಡರೆ ಇನ್ನೊಬ್ಬರಿಗಾಗುವುದಿಲ್ಲ. ಅಂತು ಪ್ರೇಮ ವಿಶ್ವಾಸವೆಂಬುದು ಪ್ರಪಂಚದಿಂದಲೇ ಓಡಿ ಹೋಗಿದೆ.'

ಇಬ್ಬರು ಹಳಬರು ಸೇರಿದರೆ– ಹಿಂದಿನ ತಮ್ಮ ಸುಖದ ವಿಚಾರ, ಇಂದಿನ ದುಃಖದ ವಿಚಾರ, ಹಾಗೂ ಮುಂದಿನ ಸರ್ವನಾಶದ ವಿಚಾರ– ಇವುಗಳಿಗೆ ಮಿಕ್ಕಿದ ಬೇರೆ ಮನೋರಂಜಕ ಸಮಾಚಾರವೇ ಮಾತಾಡಲಿಕ್ಕಿರುವುದಿಲ್ಲ. ಅಂತೂ ಮಿತ್ರರಿಬ್ಬರೂ ತಮ್ಮ ಸುಖದುಃಖದ ವಿಚಾರ ಮಾತಾಡುತ್ತಲೇ ಇದ್ದರು. ಬೋಲನು ತನ್ನ ಗಂಡು ಮಕ್ಕಳ ಉಪದ್ರವನ್ನು ವಿವರಿಸುತ್ತಲಿದ್ದ. ಹೋರಿರಾಮ ತನ್ನ ತಮ್ಮಂದಿರಿಂದಾದ ಸಂಕಷ್ಟಗಳನ್ನು ಹೇಳುತ್ತ ಹೋದ. ಅಷ್ಟರಲ್ಲಿ ಒಂದು ಬಾವಿ ಸಿಕ್ಕಿತು ಅದರ ದಂಡೆಯ ಮೇಲೆ ಹೊರೆಯನ್ನಿಳಿಸಿ ನೀರು ಕುಡಿಯಲು ಅಣಿಯಾದರು. ಹಳೆಯ ಸ್ನೇಹಿತರಿಬ್ಬರೂ ಕೂತುಕೊಂಡರು. ಗೋಬರನು ಹತ್ತಿರದ ಮನೆಯಿಂದ ಒಂದು ಬಿಂದಿಗೆ ತೆಗೆದುಕೊಂಡು ನೀರು ಸೇದಿ ತರಲು ಹೊರಟ.

ಬೋಲನು ವಿಶ್ವಾಸಪೂರ್ವಕವಾಗಿ ಕೇಳಿದ –'ನಿಮ್ಮೊಳಗೆ ಪಾಲಾಗುವಾಗ ನಿನಗೆ ತುಂಬ ದುಃಖವಾಗಿರಬೇಕು. ತಮ್ಮಂದಿರನ್ನೆಲ್ಲ ನೀನು ಮಕ್ಕಳಂತೆಯೇ ನೋಡಿಕೊಂಡಿದ್ದೆ.'

ಹೋರಿರಾಮ ತುಂಬಿಬಂದ ಕಂಠದಿಂದ ಹೇಳತೊಡಗಿದ –'ಅಯ್ಯೋ – ಅದನ್ನೆಲ್ಲ ಕೇಳಬೇಡ ಮಹಾರಾಯಾ! ಎಣಿಸುವಾಗ ಎಲ್ಲಿಯಾದರು ಬಾವಿಗೆ

ಹಾರುವಾ ಎನಿಸುತ್ತದೆ. ನಾನು ಜೀವದಲ್ಲಿರುವಾಗಲೆ ಅದೆಲ್ಲ ಆಗಿಹೋಯಿತು. ಯಾರಿಗೋಸ್ಕರ ನನ್ನ ದೇಹವನ್ನೆಲ್ಲ ಸವೆಸಿದೆನೋ – ಅವರೇ ನನ್ನ ಪ್ರತಿವಾದಿಗಳಾದರು. ಅಂತಹ ಜಗಳಕ್ಕೆ ಕಾರಣವಾದರೂ ಏನು ? - ಕೇವಲ ನನ್ನ ಹೆಂಡತಿ ಗದ್ದೆ ಕೆಲಸಕ್ಕೆ ಏಕೆ ಹೋಗುವುದಿಲ್ಲ – ಎಂಬುದು. ನೀನೇ ಹೇಳು – ಮನೆ ನೋಡಿಕೊಳ್ಳಲಿಕ್ಕಾದರೂ ಒಬ್ಬಳು ಬೇಕೇ – ಬೇಡವೇ ? ಕೊಡುವುದು ತೆಗೆದುಕೊಳ್ಳುವುದು, ಮನೆಕೆಲಸ ಮಕ್ಕಳ ಕೆಲಸ, ಇವನ್ನೆಲ್ಲ ಯಾರು ನೋಡಿಕೊಳ್ಳಬೇಕು ? ಅವಳೇನಾದರೂ ಮನೆಯೊಳಗೆ ಸುಮ್ಮನೆ ಕೂತುಕೊಂಡೇ ಇರುತ್ತಿದ್ದಿಲ್ಲ. ಮನೆ ಗುಡಿಸುವುದು, ಅಡಿಗೆ ಮಾಡುವುದು, ಮಕ್ಕಳನ್ನು ನೋಡಿಕೊಳ್ಳುವುದು–ಇವೆಲ್ಲ ಚಿಲ್ಲರೆ ಕೆಲಸಗಳೇ? ಹೀರನ ಹೆಂಡತಿಗಾಗಲಿ, ಸೋಬನ ಹೆಂಡತಿಗಾಗಲಿ, ಇವೆಲ್ಲ ಗೊತ್ತಿದೆಯೇ ? ಪಾಲಾಗಿ ಬೇರೆ ಆದ ಮೇಲೆ ಅವರ ಮನೆಯಲ್ಲೀಗ ದಿನಕ್ಕೊಂದೇ ಸಲ ಅಡಿಗೆ ತಯಾರಾಗುವುದು ! ಹಾಗೆಂದು – ಒಟ್ಟಾಗಿರುವಾಗ ಅವರಿಗೆಲ್ಲ ದಿನಕ್ಕೆ ನಾಲ್ಕು ಸಲ ಹಸಿವಾಗುತ್ತಿತ್ತು ! ಈಗ ನಾಲ್ಕು ಸಲ ತಿನ್ನಲಿ ನೋಡುವ? ಈ ಯಜಮಾನಿಕೆಯ ದೆಸೆಯಿಂದಾಗಿ ಗೋಬರನ ತಾಯಿ ಪಟ್ಟ ಪಾಡು – ಅದು ನನಗೇ ಗೊತ್ತು. ಪಾಪ ! ತನ್ನ ಓರಗಿತ್ತಿಯರ ಹಳೆಯ ಬಟ್ಟೆಯನ್ನುಟ್ಟುಕೊಂಡು ದಿನ ದೂಡುತ್ತಿದ್ದಳು. ಸ್ವತಃ ತನ್ನ ಹೊಟ್ಟೆಗೆ ಕಡಿಮೆಯಾದರೂ ಬಾಕಿಯವರಿಗೆಲ್ಲ ಹೊಟ್ಟೆತುಂಬ ಹಾಕುತ್ತಿದ್ದಳು. ತನ್ನ ಮೈಮೇಲೆ ಆಭರಣದ ಚೂರಿಲ್ಲವಾದರೂ ಓರಗಿತ್ತಿಯರಿಗೆ ಎರಡೆರಡು ಬಳೆ ಮಾಡಿಸಿ ಹಾಕಿದ್ದಳು – ಚಿನ್ನದ್ದಲ್ಲ, ಬೆಳ್ಳಿದ್ದು. ಅವರಿಗೆಲ್ಲ– ಇವಳೇಕೆ ಯಜಮಾನ್ತಿಯಾಗಿರುವುದೆಂಬುದೇ ಮತ್ಸರ ! ಅಂತು ಅವರು ಬೇರೆ ಆದುದು ಬಹಳ ಒಳ್ಳೆಯದೇ ಆಯಿತೆನ್ನುವಾ. ನನ್ನ ತಲೆಯ ಮೇಲಿಂದ ದೊಡ್ಡ ಹೊರೆ ಇಳಿಸಿದಂತಾಯಿತು.'

ಬೋಲನು ಒಂದು ಲೋಟಿ ನೀರು ಕುಡಿದು ಹೇಳಿದ – “ ಪ್ರತಿ ಮನೆಯಲ್ಲೂ ಇದೇ ಕತೆ ಮಹಾರಾಯಾ. ತಮ್ಮಂದಿರ ಕತೆ ನೀನು ಹೇಳುತ್ತೀ. ನಮ್ಮಲ್ಲಿ ಮಕ್ಕಳೊಡನೆಯೇ ನನಗೆ ಪೂರೈಸುವುದಿಲ್ಲ. ನನಗೆ ಯಾರದೇ ಆಗಲಿ, ಕೆಟ್ಟ ನಡತೆ ನೋಡಿಕೊಂಡು ಸುಮ್ಮನೆ ಬಾಯಿ ಮುಚ್ಚಿರಲಿಕ್ಕಾಗುವುದಿಲ್ಲ. ಜೂಜಾಡಲಿಕ್ಕೆ, ಹೆಂಡ ಕುಡಿಯಲಿಕ್ಕೆ, ಗಾಂಜಾ ತಿನ್ನಲಿಕ್ಕೆ – ಇದೆಲ್ಲದಕ್ಕೆ ಯಾರ ಮನೆಯಿಂದ ಹಣ ಬರುವುದು ? ವೆಚ್ಚ ಮಾಡುವ ಬಯಕೆ

ಇದ್ದರೆ ಸಂಪಾದನೆಯನ್ನೂ ಮಾಡಬೇಕು. ಆದರೆ ಅದು ಮಾತ್ರ ಯಾರಿಂದಲೂ ಆಗುವುದಿಲ್ಲ. ಹಾಗೆಂದು, ಕೈಬಿಟ್ಟು ಖರ್ಚು ಮಾಡಲಿಕ್ಕೆ ಎಲ್ಲರೂ ತಯಾರು! ದೊಡ್ಡವನಾದ ಕಾಮತನು ಹಾಲು ಬೆಣ್ಣೆ ತೆಗೆದು ಕೊಂಡು ಪೇಟೆಗೆ ಮಾರಾಟಕ್ಕೆ ಹೋದರೆ ಹಿಂದೆ ಬರುವಾಗ ಅದರಲ್ಲಿ ಅರ್ಧ ಹಣ ನುಣ್ಣಗೆ ಮಾಡಿಬಿಡುತ್ತಾನೆ. ಕೇಳಿದರೆ ಉತ್ತರವೇ ಇಲ್ಲ. ಚಿಕ್ಕವ ನಾದ ಜಂಗಿಗಂತೂ ಸಂಗೀತದ ಹುಚ್ಚೇ ಹಿಡಿದಿದೆ. ಕತ್ತಲೆಯಾಯಿತೆಂದರೆ ಡೋಲು, ತಬಲೆ ತೆಗೆದುಕೊಂಡು ಕೂತುಬಿಡುತ್ತಾನೆ. ನಾನೀಗ ಸಂಗೀತ ಹಾಳೆಂದು ಹೇಳುವುದಲ್ಲ. ಗಾಯನ ಭಜನೆ ಕೆಟ್ಟದಲ್ಲ. ಆದರೆ ಈ ಎಲ್ಲ ಕೆಲಸ ವಿರಾಮವಿರುವಾಗ ಮಾಡಬೇಕಾದ್ದು. ಆದರೆ ಇದೇನಿಲ್ಲ! ಮನೆ ಕೆಲಸ ಸ್ವಲ್ಪವೂ ಮಾಡದೆ ಇಡೀ ದಿನ ತಲೆ ತಿರುಗಿಸುತ್ತ ಕೂತುಕೊಂಡರೆ ಹೇಗೆ? ಅಂತೂ ನನ್ನ ತಲೆಯೇ ಕೆಟ್ಟಿದೆ. ಇತ್ತ ನಾನೊಬ್ಬನೇ ಏನು ಮಾಡಲಿ?– ಕರುಗಳ ಕೆಲಸ ಮಾಡುವುದೇ, ಆವುಗಳ ಹಾಲು ಬೆಣ್ಣೆ ಮಾರಾಟಕ್ಕೆ ಹೋಗುವುದೇ?– ಅಂತೂ ಸಂಸಾರವೇ ಸಾಕಾಗಿ ಹೋಗಿದೆ.

"ಇನ್ನು, ಮಗಳು ಜುನಿಯುಳೊಬ್ಬಳಿದ್ದಾಳೆ. ಅವಳದೂ ಅದೃಷ್ಟ ಕೆಟ್ಟದು. ನೀನು ಅವಳ ಮದುವೆಗೆ ಬಂದಿದ್ದೆಯಲ್ಲ? ಎಷ್ಟು ಒಳ್ಳೆಯ ಮನೆತನ! ಅವಳ ಗಂಡ ಬೊಂಬಾಯಿಯಲ್ಲಿ ಒಂದು ಹಾಲಿನಂಗಡಿ ಇಟ್ಟುಕೊಂಡಿದ್ದ. ಆಗ ಅಲ್ಲಿ ಒಮ್ಮೆ ಹಿಂದು ಮುಸಲ್ಮಾನರ ದಂಗೆ ಎದ್ದಿತು. ಯಾರೋ ಒಬ್ಬ ಬಂದು ಅವನ ಹೊಟ್ಟೆಗೆ ಚೂರಿ ಹಾಕಿಯೇ ಬಿಟ್ಟ! ಮನೆಯೇ ಮುಳುಗಿ ಹೋಯಿತು! ಇವಳಿಗಲ್ಲಿ ದಿನ ಹೋಗುವುದೇ ಕಷ್ಟವಾಯಿತು. ಕೊನೆಗೆ ಅಲ್ಲಿಯ ತನಕ ಹೋಗಿ ಅವಳನ್ನು ಕರೆದುಕೊಂಡು ಬಂದೆ. ಇನ್ನೊಂದು ಮದುವೆ ಮಾಡಿಸಿಬಿಡುವಾಂದ್ರೆ – ಅವಳೊಪ್ಪುವುದಿಲ್ಲ. ಅವಳ ಅಣ್ಣಂದಿ ರಿಬ್ಬರೂ ಅವಳೊಡನೆ ಕಾದಾಡುತ್ತಲೇ ಇರುತ್ತಾರೆ. ಹಾಗಾಗಿ ಮನೆ ಈಗ ಕುರುಕ್ಷೇತ್ರವಾಗಿದೆ. ಅಲ್ಲಿಯ ಕಷ್ಟದಿಂದ ಅವಳು ಇಲ್ಲಿಗೆ ಬಂದರೆ ಇಲ್ಲಿಯೂ ಸುಖವಿಲ್ಲವಾಗಿದೆ."

ಈ ಎಲ್ಲ ದುಃಖಸಮಾಚಾರ ಹೇಳುತ್ತ ಹೇಳುತ್ತ ಹೋಗುವಾಗ ದಾರಿ ಕಳೆಯಿತು. ಬೋಲನ ಮನೆ ಅಷ್ಟೊಂದು ದೊಡ್ಡ ಮನೆಯಲ್ಲ. ಆದರೆ ಸುತ್ತಲೂ ಒಳ್ಳೆಯ ತೋಟ. ಅವನ ಮನೆಯ ನೆರೆಕರೆಯಲ್ಲಿ ಇನ್ನೂ ಕೆಲ ಗೊಲ್ಲರು ವಾಸವಾಗಿರುತ್ತಿದ್ದರು. ಇತರ ರೈತರೊಡನೆ ಹೋಲಿಸಿ ನೋಡಿದರೆ

ಇವನ ಪರಿಸ್ಥಿತಿ ಅಷ್ಟು ಹಾಳಲ್ಲ. ಇವನು ಊರಿನ ಮುಂದಾಳು. ಮನೆ ಎದುರಿಗೆ ವಿಶಾಲವಾದ ಬೈಲು ಇದೆ. ಅದರಲ್ಲಿ ೧೦–೧೫ ಎಮ್ಮೆ ದನಗಳು ಮೇಯುತ್ತಿದ್ದುವು. ಮನೆಯ ಚಾವಡಿಯಲ್ಲಿ ಒಂದು ದೊಡ್ಡ ಮಂಚವಿತ್ತು. ಅದನ್ನು ಎತ್ತಲು ಏಳೆಂಟು ಜನರಿಂದಲೂ ಸಾಧ್ಯವಿಲ್ಲ. ಗೋಡೆಯ ಗೂಟ ಒಂದರಲ್ಲಿ ಮದ್ದಳೆ, ಮತ್ತೊಂದರಲ್ಲಿ ಡೋಲು, ಇನ್ನೊಂದರಲ್ಲಿ ತಂಬೂರಿ – ಎಲ್ಲ ತೂಗಹಾಕಲಾಗಿತ್ತು. ಹಲಿಗೆಯೊಂದರ ಮೇಲೆ ದೊಡ್ಡ ಪುಸ್ತಕದ ಒಂದು ಗಂಟು. ಪ್ರಾಯಶಃ ಅದು ರಾಮಾಯಣವಾಗಿರಬೇಕು. ಇಬ್ಬರು ಸೊಸೆಯಂದಿರು ಮನೆಯಂಗಳದಲ್ಲಿ ಬೆರಣಿ ತಟ್ಟುತ್ತಿದ್ದರು. ಜುನಿಯಳು ಬಾಗಿಲಲ್ಲಿ ನಿಂತುಕೊಂಡಿದ್ದಳು. ಅವಳ ಕಣ್ಣು ಕೆಂಪಾಗಿತ್ತು. ಮೂಗಿನ ನರಗಳು ಉಬ್ಬಿ ಹೋಗಿ ಈ ತನಕ ಅಳುತ್ತಿದ್ದಳೋ ಎಂಬಂತೆ ತೋರುತ್ತಿತ್ತು. ಅವಳ ಹೃಷ್ಟ ಪುಷ್ಟ ಅವಯವಗಳಲ್ಲಿ ಯೌವನದ ತರಂಗಗಳು ಎದ್ದು ಬರುವಂತೆ ತೋರುತ್ತಿತ್ತು. ದುಂಡಾದ ಮುಖ, ಅರಳಿದ ಕೆನ್ನೆ, ಸಣ್ಣ ಕಣ್ಣುಗಳು, ಉಬ್ಬಿ ಬಂದ ಎದೆ – ಅದರ ಮೇಲೆ ಗುಲಾಬಿ ಬಣ್ಣದ ಸೀರೆ – ಇವೆಲ್ಲ ನೋಡುವವರ ಕಣ್ಣನ್ನು ಆಕರ್ಷಿಸುತ್ತಿದ್ದುವು.

ಬೋಲನನ್ನು ನೋಡಿದೊಡನೆಯೇ ಜುನಿಯಳು ಹಾರಿಕೊಂಡು ಬಂದು ಅವನ ತಲೆಯ ಹೊರೆಯನ್ನಿಳಿಸಿದಳು. ಬೋಲನು ಗೋಬರ ಹೋರಿರಾಮರ ಹೊರೆಯನ್ನಿಳಿಸಿ ಹೇಳಿದ – ‘ ನೋಡು ಜುನಿಯಾ, ಮೊದಲು ಒಂದು ವೀಳ್ಯದೆಲೆಯ ತಟ್ಟೆ ತಾ. ಆ ಮೇಲೆ ಬಾಯಾರಿಕೆಗೇನಾದರೂ ತಯಾರಿಸು. ನೀರು ತಂದುದಿಲ್ಲವಾದರೆ ಕೊಡ ತಾ. ನಾನು ನೀರು ಸೇದಿ ಕೊಡುತ್ತೇನೆ. ಹೋರಿರಾಮನ ಪರಿಚಯವಿದೆಯಲ್ಲಾ ನಿನಗೆ ? ’

ಆ ಮೇಲೆ ಹೋರಿರಾಮನಿಗೆ ಹೇಳಿದ – ‘ ಗೃಹಿಣಿ ಇಲ್ಲವಾದರೆ ಅದು ಮನೆಯೇ ಅಲ್ಲ. ಹಿಂದಿನವರ ಮಾತು ಸುಳ್ಳಲ್ಲ – ಬಂಜರು ಬಿದ್ದ ಭೂಮಿ, ಗೃಹಿಣಿ ಇಲ್ಲದ ಮನೆ – ಇವೆರಡೂ ವ್ಯರ್ಥ ಎಂಬುದಾಗಿ. ಇವಳ ತಾಯಿ ಸತ್ತಂದಿನಿಂದ ಮನೆಯೇ ಶೂನ್ಯವಾಗಿದೆ. ಸೊಸೆಯಂದಿರು ರೊಟ್ಟಿ ಪಲ್ಯ–ಎಲ್ಲ ಮಾಡುತ್ತಾರೆ, ನಿಜ. ಆದರೆ ಗೃಹಕೃತ್ಯ ನಡೆಸುವ ವಿಚಾರ ಅವರಿಗೇನು ಗೊತ್ತು ! ಹುಡುಗರು ಸೋಮಾರಿತನದಿಂದ ಎಲ್ಲಿಯಾದರೂ ಬಿದ್ದುಕೊಂಡಿರುತ್ತಾರೆ. ನಾನೊಬ್ಬನೇ ಜೀವ ಹಿಂಡಿಕೊಳ್ಳಬೇಕು. ನಾನು ಸತ್ತ ಮೇಲೆ ಗೊತ್ತಾದೀತು. ಮಗಳು ಕೂಡ ಅದೇ ರೀತಿ. ಇಷ್ಟು ಚಿಕ್ಕ ಕೆಲಸ ಹೇಳಿ

ದರೂ ಗೊಣಗುಟ್ಟಿಕೊಂಡೇ ಮಾಡುತ್ತಾಳೆ. ಅಂತು ಎಲ್ಲವನ್ನೂ ಸಹಿಸಿಕೊಂಡು ಸುಮ್ಮನಿರಬೇಕಾಗಿದೆ ನಾನು!'

ಅಷ್ಟರಲ್ಲಿ ಜುನಿಯಳು ಒಂದು ಕೈಯಲ್ಲಿ ಎಲೆ ಅಡಿಕೆ ತಟ್ಟೆ, ಮತ್ತೊಂದು ಕೈಯಲ್ಲಿ ಕುಡಿಯುವ ಪಾನಕ – ತೆಗೆದುಕೊಂಡು ವೈಯಾರದಿಂದ ಬಂದಳು. ಆ ಮೇಲೆ ಕೊಡ ತೆಗೆದುಕೊಂಡು ನೀರು ತರಲು ಹೊರಟಳು. ಆಗ ಗೋಬರನು ಮುಂದೆ ಹೋಗಿ ಅವಳೊಡನೆ ಕೇಳಿದ – 'ತಾ ಇಲ್ಲಿ ಆ ಕೊಡ, ನಾನು ನೀರು ತರುತ್ತೇನೆ.'

ಜುನಿಯಳು ಕೊಡ ಕೊಡಲಿಲ್ಲ. ಬಾವಿಯ ಕಟ್ಟೆಯ ಹತ್ತಿರ ಹೋಗಿ ಮುಗುಳ್ನಗುತ್ತ ಹೇಳಿದಳು – 'ನಮ್ಮಲ್ಲಿ ನೆಂಟನಾಗಿ ಬಂದವನು ನೀನು! ಮತ್ತೆ ತಿರುಗಿ ಹೋದ ಮೇಲೆ ಹೇಳಬಹುದು – ಒಂದು ತಂಬಿಗೆ ನೀರು ಸಹ ಕೊಡಲಿಲ್ಲ ಅಲ್ಲಿ – ಎಂಬುದಾಗಿ.'

'ನಾನೆಂತಹ ನೆಂಟ – ನಿಮ್ಮ ನೆರೆಕರೆಯವನೇ ಅಲ್ಲವೇ?'

'ವರ್ಷಗಟ್ಲೆ ಮುಖ ತೋರಿಸದಿದ್ರೆ ನೆರೆಕರೆಯವನೂ ನೆಂಟನೇ ಸರಿ.'

'ಪ್ರತಿ ನಿತ್ಯವೂ ಬರುತ್ತಿದ್ದರೆ ಮರ್ಯಾದೆ ಸಿಗುತ್ತದೆಯೇ?'

ಜುನಿಯಳಾಗ ಓರೆಗಣ್ಣಿನಿಂದ ನೋಡಿ ಮುಗುಳ್ನಗುತ್ತ ಹೇಳಿದಳು – 'ಒಪ್ಪುವ ಮರ್ಯಾದೆ ಕೊಟ್ಟೇನು – ತಿಂಗಳಿಗೊಮ್ಮೆ ಬಂದರೆ ಬಾಯಾರಿಕೆ ಕೊಟ್ಟೇನು! ಹದಿನೈದು ದಿನಕ್ಕೊಮ್ಮೆ ಬಂದರೆ ವೀಳ್ಯದೆಲೆ ಕೊಟ್ಟೇನು! ವಾರಕ್ಕೊಮ್ಮೆ ಬಂದರೆ ಕೂತುಕೊಳ್ಳಲಿಕ್ಕೆ ಮಂಚ ತೋರಿಸಿಯೇನು! ನಿತ್ಯವೂ ಬಂದರೆ – ಏನೂ ಇಲ್ಲ!'

'ದರ್ಶನವಾದರೂ ಕೊಡುವೆಯಲ್ಲ?'

'ದರ್ಶನ ಸಿಗಬೇಕಾದರೆ ಪೂಜೆ ಮಾಡಬೇಕಾದೀತು!'

ಹೀಗೆ ಹೇಳುತ್ತಿರುವಾಗ ಮರೆತು ಹೋಗಿದ್ದ ಯಾವುದೋ ವಿಚಾರವೊಂದು ಅವಳಿಗೆ ಜ್ಞಾಪಕ ಬಂದಂತಾಗಿ ಅವಳ ಮುಖ ಉದಾಸೀನವಾಯಿತು.

ಗೋಬರನು ಕೊಡ ತುಂಬಿಸಿ ತಂದ. ಎಲ್ಲರೂ ಕೈಕಾಲು ತೊಳೆದು ಬಾಯಾರಿಕೆ ಕುಡಿದರು; ವೀಳ್ಯ ಹಾಕಿದರು. ಆಗ ಬೋಲನು ಹೇಳಿದ – 'ಗೋಬರ, ನಾಳೆ ಬಂದು ದನ ಹೊಡೆದುಕೊಂಡು ಹೋಗಿ ಬಿಡು.'

ಹೋರಿರಾಮ ತನ್ನ ಆಶೆಯನ್ನು ತಡೆದುಕೊಂಡು ಹೇಳಿದ – 'ಆಗಲಿ, ಅದಕ್ಕೇನು ಅವಸರ?'

‘ ನಿನಗೆ ಅವಸರವಿಲ್ಲವಾದರೂ ನನಗಿದೆ. ಆ ದನವನ್ನು ಮನೆ ಬಾಗಿಲಲ್ಲಿ ನೋಡಿದಾಗ – ಆ ಸಮಾಚಾರ – ನಿನಗೆ ಜ್ಞಾಪಕ ಬರಬಹುದಲ್ಲ ! ’

‘ ಅದನ್ನು ನಾನು ಮರೆಯಲಿಕ್ಕಿಲ್ಲ ಬೋಲಣ್ಣಾ. ’

‘ ನಾಳೆಯೇ ಗೋಬರನನ್ನು ಕಳುಹಿಸಿಬಿಡು. ’

ತಂದೆ ಮಗ ಇಬ್ಬರೂ ಮನೆ ಕಡೆಗೆ ಹೊರಟರು. ಇಬ್ಬರಿಗೂ ಹೊಸ ಮದುವೆಯಾಗಿ ಬಂದವರಂತೆ ತುಂಬ ಸಂತೋಷವಾಗಿತ್ತು. ಹೋರಿರಾಮನಿಗೆ ಬಹು ಕಾಲದಿಂದ ಯೋಚಿಸಿಕೊಂಡಿದ್ದ ತನ್ನ ಅಭಿಲಾಷೆ ಪೂರ್ತಿಯಾಗಲಿರುವುದರಿಂದ ಬಹಳ ಸಂತೋಷವಾಗಿತ್ತು. ಅದು ಕೂಡ ಹಣ ಕೊಡದೆ! ಗೋಬರನಿಗೆ ಅದಕ್ಕಿಂತಲೂ ಮಿಕ್ಕಿದ ಬೆಲೆ ಬಾಳುವ ವಸ್ತು ಸಿಕ್ಕಿಹೋಗಿತ್ತು! ಅವನ ಮನಸ್ಸಿನಲ್ಲಿ ವಿಚಿತ್ರ ಅಭಿಲಾಷೆ ಮೂಡಿ ಬಂದಿತ್ತು !

ಸಂದರ್ಭ ನೋಡಿ ಆತ ಹಿಂತಿರುಗಿ ನೋಡಿದ. ಜುನಿಯಳು ಬಾಗಿಲಲ್ಲಿ ನಿಂತುಕೊಂಡು ಅವನ ಕಡೆಗೇ ನೋಡುತ್ತಿದ್ದಳು. ಮದಗೊಂಡ ಅಧೀರ, ಚಂಚಲ ಆಶೆಯಂತೆ ಆಕೆ ತೋರುತ್ತಿದ್ದಳು !

೪

ಹೋರಿರಾಮನಿಗೆ ರಾತ್ರಿ ಇಡೀ ನಿದ್ದೆ ಬರಲಿಲ್ಲ. ಅವನು ಅಂಗಳದ ಬೇವಿನ ಮರದಡಿಯಲ್ಲಿ ತನ್ನ ಬಿದಿರ ಮಂಚದ ಮೇಲೆ ಬಿದ್ದುಕೊಂಡು ನಕ್ಷತ್ರಗಳತ್ತ ಆಗಾಗ್ಗೆ ನೋಡುತ್ತಲೇ ಇದ್ದ. ಒಂದೊಂದೇ ಯೋಚನೆಯೂ ಬರಲಾರಂಭಿಸಿತು – “ ನಾಳೆ ದನ ಬರಬಹುದು. ಅದಕ್ಕೆ ಅಕ್ಕಚ್ಚು ಕುಡಿಯಲಿಕ್ಕಾಗಿ ಒಂದು ಮರಿಗೆ ಹೂಳಬೇಕು – ಅದು ಎತ್ತುಗಳಿಗಿಂತ ಸ್ವಲ್ಪ ದೂರದಲ್ಲಿದ್ದರೆ ಒಳ್ಳೇದು. ಬೇಸಗೆಯ ರಾತ್ರಿಯಲ್ಲಿ ದನ ಹೊರಗಿಂದಲೇ ಇರಬಹುದು. ಆದರೆ ಮಳೆಗಾಲಕ್ಕೆ ಬೇರೆಯೇ ಒಂದು ಸ್ಥಳದ ವ್ಯವಸ್ಥೆಯಾಗಬೇಕು. ಮನೆಯ ಹೊರಭಾಗದಲ್ಲಿದ್ದರೆ ಯಾರಾದರೂ ದೃಷ್ಟಿ ಹಾಕಲಿಕ್ಕೂ ಸಾಕು. ಕೆಲ ವೇಳೆ ದೃಷ್ಟಿದೋಷದಿಂದಾಗಿ ಹಾಲೇ ಒಣಗಿ ಹೋಗುವುದುಂಟು. ಕೆಚ್ಚಲಿಗೆ ಕೈ ಹಾಕಲಿಕ್ಕೇ ಬಿಡುವುದಿಲ್ಲ. ಒದೆಯಲಿಕ್ಕೂ ತೊಡಗುತ್ತದೆ.

ಹಾಗಾದ್ದರಿಂದ ಹೊರಗೆ ಕಟ್ಟುವುದು ಸರಿಯಲ್ಲ. ಮಾತ್ರವಲ್ಲದೆ, ಹೊರಗಿಂದ ಮರಿಗೆ ಹೊತುದನ್ನು ಕಂಡರೆ ಧನಿಗಳ ಏಜಂಟನು ಕಾಣಿಕೆ ಕೇಳಲೂ ಬಹುದು. ಈ ಚಿಲ್ಲರೆ ವಿಚಾರದಲ್ಲಿ ರಾಯ್‌ಸಾಹೇಬರ ಹತ್ತಿರ ದೂರು ಕೊಂಡುಹೋಗುವುದೂ ಸರಿಯಲ್ಲ. ಅಲ್ಲಿಯೂ, ಏಜಂಟರ ಇದಿರು ನನ್ನ ಮಾತು ಯಾರು ಕೇಳುತ್ತಾರೆ? ಅಥವಾ ಒಂದು ಪಕ್ಷ ಹೇಳಿದರೂ ಆತ ನಮ್ಮ ಹಗೆಯಾದಾನು. ನೀರಲ್ಲಿದ್ದುಕೊಂಡು ಮೊಸಿನ ಹತ್ತಿರ ವೈರಕಟ್ಟಿ ಕೊಂಡರೆ ಹೇಗಾದೀತು? ಹಾಗಾದ್ದರಿಂದ ಒಳಗೇನೇ ದನ ಕಟ್ಟುವು ದೊಳ್ಳೆಯದು. ನಮ್ಮ ಅಂಗಳವೇನೋ ಚಿಕ್ಕದು. ಆದ್ದರಿಂದ ಒಂದು ಚಿಕ್ಕ ಗುಡಿಸಲು ಇಳಿಸಿದರೆ ಕೆಲಸವಾದಂತೆಯೇ ಸರಿ.

"ಇದೀಗ ಮೊದಲಿನ ಕರುವಾಗಿದೆ. ಹಾಲು ಐದು ಸೇರಿಗೆ ಕಡಿಮೆ ಬರಲಿಕ್ಕಿಲ್ಲ. ಆದರೆ ಒಂದು ಸೇರು ಹಾಲು ಗೋಬರನಿಗೇ ಬೇಕಾದೀತು. ರೂಪಳಿಗೆ ಸಹ ಹಾಲೆಂದರೆ ಎಷ್ಟು ಪ್ರೀತಿ! ಇನ್ನು ಎಷ್ಟು ಬೇಕೋ ಅಷ್ಟು ಕುಡಿಯಲಿ. ಒಮ್ಮೊಮ್ಮೆ ಎರಡು ಮೂರು ಸೇರು ಧನಿಗಳಲ್ಲಿಗೂ ಕೊಟ್ಟು ಬರಬೇಕು. ಆ ಗುಮಾಸ್ತನ ಪೂಜೆ ಸಹ ಆಗಾಗ್ಗೆ ಮಾಡುತ್ತಲೇ ಇರಬೇಕು. ಮತ್ತೆ, ಬೋಲನ ರೂಪಾಯಿಯನ್ನೂ ಕೊಟ್ಟುಬಿಡಬೇಕು. ಈ ನೆಂಟಸ್ತಿ-ಕೆಯ ತೊಡಕಿನಲ್ಲಿ ಆತನನ್ನು ಏಕೆ ಸಿಕ್ಕಿಸಿ ಹಾಕಬೇಕು? ಯಾವ ಮನುಷ್ಯ ನನ್ನ ಮೇಲೆ ಇಷ್ಟು ವಿಶ್ವಾಸವಿಡುತ್ತಾನೋ ಅವನಿಗೆ ಮೋಸ ಮಾಡುವುದು ಸರಿಯಲ್ಲ. ಎಂಬತ್ತು ರೂಪಾಯಿಯ ದನವನ್ನು ನನ್ನ ಮೇಲಿನ ವಿಶ್ವಾಸದಿಂದ ಕೊಟ್ಟಿದ್ದಾನೆ. ಈ ಕರುವಿನಲ್ಲಿ ಏನೂ ಸಿಗಲಿಕ್ಕಿಲ್ಲವೇ? ಈ ಸಲ ಇಪ್ಪತ್ತೈದು ರೂಪಾಯಿಯಾದರೂ ಕೊಡಲಿಕ್ಕಾದರೆ ಬೋಲನಿಗೆ ತೃಪ್ತಿಯಾದೀತು. ಆದರೆ ದನಿಯಳಿಗೆ ಈ ದನದ ಕತೆ ಹೇಳಲೇಬಾರದಿತ್ತು. ಯಾವ ಮಾತೂ ಹೇಳದೆ, ಮೆಲ್ಲಗೆ ದನ ತಂದು ಕಟ್ಟುತ್ತಿದ್ದರೆ ಅವಳಿಗೆ ತುಂಬಾ ಆಶ್ಚರ್ಯ ವಾಗುತ್ತಿತ್ತು. ಆಗ ಕೇಳುತ್ತಿದ್ದಳು — ಯಾರದು ದನ? ಎಲ್ಲಿಂದ ತಂದುದು? ಎಷ್ಟಕ್ಕೆ ತಂದುದು? — ಎಂದು ಮೊದಲಾಗಿ. ಎಲ್ಲ ಆದ ಮೇಲೆ ಮತ್ತೆ ಹೇಳಬೇಕಿತ್ತು!

"ಗೋಬರ ಎಷ್ಟಾದರೂ ಕೆಲಸದಲ್ಲಿ ಸ್ವಲ್ಪ ಸೋಮಾರಿ. ಆದ್ದರಿಂದ ನಾನೇ ದನದ ಸೇವೆ ಹೇಗೆ ಬೇಕೋ ಹಾಗೆ ಮಾಡುತ್ತೇನೆ. ಹಾಗೆಂದು, ಅವನು ಬಹಳ ಸೋಮಾರಿಯಲ್ಲ. ಅಥವಾ ಆ ಪ್ರಾಯದಲ್ಲಿ ಎಲ್ಲರೂ

ಸೋಮಾರಿಗಳೇ ಆಗಿರುತ್ತಾರೆ. ನಾನು ಸಹ ಅಪ್ಪ ಇರುವಾಗ ಸುಮ್ಮನೆ ಲಾಟ್ರ ಹೊಡೆಯುತ್ತಲೇ ಇದ್ದೆ. ಪಾಪ! ರಾತ್ರಿ ಹೊತ್ತು ಸಹ, ಅವರು ಏನಾದರೂ ಕೆಲಸ ಮಾಡುತ್ತಲೇ ಇದ್ದರು – ಮನೆ ಬಾಗಿಲು ಗುಡಿಸುವುದು, ಗದ್ದೆಗೆ ಬೂದಿ ಗೊಬ್ಬರ ಹಾಕುವುದು, ಹಟ್ಟಿ ಕೆಲಸ ಮಾಡುವುದು–ಇತ್ಯಾದಿ. ಆದರೆ ನಾನು ಮಾತ್ರ ನಿದ್ದೆ ಹೊಡೆಯುತ್ತಲೇ ಇದ್ದೆ. ಎಲ್ಲಿಯಾದರೂ ನಿದ್ರೆಯಿಂದ ಎಬ್ಬಿಸಿದರೆ ಕೋಪದಿಂದ ಮನೆ ಬಿಟ್ಹೋಡುವ ಬೆದರಿಕೆ ಹಾಕುತ್ತಿದ್ದೆ. ತಂದೆ ತಾಯಂದಿರು ಜೀವಂತರಾಗಿರುವಾಗಲೇ ಮಕ್ಕಳು ಸ್ವಲ್ಪ ಸುಖ ಅನುಭವಿಸಬೇಕಾದರೆ. ಮತ್ತೆ – ಅವರ ತಲೆಯ ಮೇಲೆ ಹೊರೆ ಬಿದ್ದ ಮೇಲೆ– ಪಾಪ ಏನು ಮಾಡಿಯಾರು! ನನ್ನ ಅಪ್ಪ ತೀರಿ ಹೋದ ಮೇಲೆ ನಾನೇ ಈಗ ಗೃಹಕೃತ್ಯಗಳನ್ನೆಲ್ಲ ಸುಧಾರಿಸಿಕೊಂಡು ಬರಲಿಲ್ಲವೇ ? – ಈ ಹೋರಿರಾಮ ಮನೆ ಮಾರು ಹಾಳುಮಾಡಿ ಬಿಡುತ್ತಾನೆ – ಎಂದು ಊರವರೆಲ್ಲ ಹೇಳುತ್ತಿದ್ದರು. ಆದರೆ ತಲೆಯ ಮೇಲೆ ಭಾರಬಿದ್ದೊಡನೆಯೇ ನನ್ನ ಮರ್ಜಿಯನ್ನೇ ಬದಲಾಯಿಸಿಕೊಂಡುದರಿಂದ ನೋಡುವವರಿಗೆ ಈಗ ಆಶ್ಚರ್ಯವಾಗುತ್ತಿದೆ!

"ಸೋಬನೂ ಹೀರನೂ ಈಗ ಬೇರೆಯಾಗಿ ಹೋದರು. ಇಲ್ಲವಾದರೆ ಈ ಮನೆಯ ಕತೆಯೇ ಬೇರೆ ಇತ್ತು. ಮೂರು ಜೋಡು ಎತ್ತುಗಳನ್ನು ಒಟ್ಟಾಗಿ ಉಳಬಹುದಿತ್ತು. ಈಗೆಲ್ಲ ಬೇರೆ ಬೇರೆ ಆಗಿಹೋಗಿದೆ! ಎಲ್ಲ ಕಾಲದ ಮಹಿಮೆ! ಇದರಲ್ಲಿ ದನಿಯುಳದೇನು ತಪ್ಪು ? ಪಾಪ! ಮನೆಗೆ ಬಂದಂದಿನಿಂದ ಎಂದೂ ಅವಳಿಗೆ ಸುಖ ದೊರಕಿದ್ದಿಲ್ಲ. ಮದುವೆಯ ಪಲ್ಲಕ್ಕಿಯಿಂದ ಇಳಿದವಳೇ ಮನೆಗೆಲಸಗಳನ್ನೆಲ್ಲ ತಲೆಯ ಮೇಲೆ ಹಾಕಿಕೊಂಡಳು. ಅತ್ತೆಯನ್ನು ಕಂಡೊಡನೆ ತರಗೆಲೆಯಂತೆ ತರತರ ನಡುಗುತ್ತಿದ್ದಳು. ಮನೆಗಾಗಿ ತನ್ನ ಜೀವವನ್ನೇ ಸವೆಯುತ್ತಿದ್ದಳು. ಹಾಗಿರುತ್ತ ಅವಳು ತನ್ನ ಓರಿಗಿತ್ತಿಯರಿಗೆ ಏನಾದರೂ ಕೆಲಸ ಹೇಳಿದರೆ ಅದು ದೊಡ್ಡ ತಪ್ಪಾಯಿತೇ ? ಅವಳಿಗಾದರೂ ಸ್ವಲ್ಪ ವಿಶ್ರಾಂತಿ ಸಿಗಬೇಡವೇ ? ಆದರೆ ಯಾರ ಹಣೆಯಲ್ಲಿ ಬರೆದಿದೆಯೋ – ಅವರಿಗೇ ಸಿಕ್ಕೀತು ವಿರಾಮ ವಿಶ್ರಾಂತಿಗಳು. ಆಗ ಮೈದುನರಿಗಾಗಿ ಜೀವ ತೆಗೆದುಕೊಳ್ಳುತ್ತಿದ್ದಳು; ಈಗ ಮಕ್ಕಳಿಗಾಗಿ. ಅವಳು ಅಂದು ಅಷ್ಟು ಕಷ್ಟಪಡದಿರುತ್ತಿದ್ದರೆ ಸೋಬನಿಗೂ ಹೀರನಿಗೂ ಇಂದು ಮೀಸೆ ಮೇಲೆ ಕೈ ಹಾಕಿಕೊಂಡು ತಿರುಗಾಡಲಿಕ್ಕಾಗುತಿತ್ತೇ ? ಎಲ್ಲಿಯಾದರೂ

ಭಿಕ್ಷೆ ಬೇಡಿಕೊಂಡಿರಬೇಕಾಗುತಿತ್ತು! ಎಂತಹ ಸ್ವಾರ್ಥಿ ಜನರು! ಅವರಿಗೋಸ್ಕರ ಜೀವಕೊಟ್ಟದ್ದರೂ ಸಹ – ಅವರು ಇಂದು ನಮ್ಮ ವೈರಿಗಳು!"

ಹೋರಿರಾಮು ಮೂಡು ದಿಕ್ಕಿನತ್ತ ನೋಡಿದ. ಆಕಾಶ ಕೆಂಪಾಗತೊಡಗಿತ್ತು. ಹೋರಿರಾಮುನ ಯೋಚನೆ ಹಾಗೆಯೇ ಮುಂದೆ ಸಾಗಿತು– "ಗೋಬರ ರಾತ್ರಿ ಇರುವಾಗಲೇ ಹೋಗಿ ದನ ಹೊಡೆದುಕೊಂಡು ಬರುವೆನೆಂದು ಹೇಳಿದ್ದ. ಆದ್ದರಿಂದ ಅವನನ್ನೆಬ್ಬಿಸಬೇಕು. ಆದರೆ ಮೊದಲು ಮರಿಗೆ ಹೊತು ಸರಿಪಡಿಸಲೋ! – ಅಥವಾ ಏಕೆ? ಈಗ ಬೇಡ. ದನ ಮನೆ ಬಾಗಿಲಿಗೆ ಬರುವ ವರೆಗೆ ಬೇಡ. ಎಲ್ಲಿಯಾದರೂ ಬೋಲನ ಮನಸ್ಸು ತಿರುಗಿ ಹೋಗಿ ದನ ಕೊಡದಿದ್ದರೆ ಊರವರೆಲ್ಲ ಕೈತಟ್ಟಿ ನಗಾಡುವಂತಾದೀತು– 'ದನ ತರಲಿಕ್ಕೆ ಮೊದಲೇ ಹಟ್ಟಿ ಕಟ್ಟಿ, ಮರಿಗೆ ಹೊತು ಸರಿಮಾಡಿದ್ದ ಮುದುಕ; ಆದರೆ–ದನ, ದನ!' ಎಂಬುದಾಗಿ. ಬೋಲ ಮನೆಯ ಯಜಮಾನನೇನೋ ಸರಿ. ಆದರೆ ಮಕ್ಕಳಿಗೆ ಪ್ರಾಯ ಬಂದ ಮೇಲೆ ಅಪ್ಪನ ಮಾತು ಎಲ್ಲಿ ನಡೆಯುತ್ತದೆ? ಕಾಮತ ಮತ್ತು ಜಂಗಿ ಅಡ್ಡ ಬಂದರೆ?"

ಅಷ್ಟರಲ್ಲಿ ಗೋಬರ ಟಪ್ಪನೆ ಎದ್ದು ಕೂತುಕೊಂಡು, ಕಣ್ಣು ತಿಕ್ಕಿಕೊಳ್ಳುತ್ತ ಕೇಳಿದ – 'ಅಪ್ಪಾ, ಬೆಳಗಾಗುತ್ತ ಬಂತು. ನೀನು ಮರಿಗೆ ಹೊತು ಸರಿ ಪಡಿಸಿದೆಯಾ?'

ಮಗನ ತುಂಬಿ ಬಂದ ಎದೆ ಮತ್ತು ಪುಷ್ಟವಾದ ರಟ್ಟೆಗಳನ್ನು ನೋಡಿ ಹೋರಿರಾಮು ಗರ್ವಗೊಂಡವನಾಗಿ – ಇನ್ನು ಗೋರಸವೂ ಬಿದ್ದರೆ ನಿಜವಾಗಿಯೂ ಒಳ್ಳೆಯ ಬಲಿಷ್ಠನಾದಾನು – ಎಂದು ಮನಸ್ಸಿನಲ್ಲೇ ಯೋಚಿಸುತ್ತ ಹೇಳಿದ – 'ಇಲ್ಲ; ಮರಿಗೆ ಹೊತು ಸರಿಪಡಿಸಲಿಲ್ಲ. ಏಕೆಂದರೆ – ಎಲ್ಲಿಯಾದರೂ ದನ ಸಿಗದಿದ್ದರೆ?'

ಗೋಬರ ಸ್ವರ ಏರಿಸಿ ಹೇಳಿದ – 'ಏಕೆ ಸಿಗಲಿಕ್ಕಿಲ್ಲ?'

'ಅಲ್ಲ; ಅವನ ಮನಸ್ಸಿನಲ್ಲೇನಾದರೂ ಸಂದೇಹ ಮೂಡಿ ಬಂದರೆ?'

'ಸಂದೇಹ ಬರಲಿ, ಬಾರದಿರಲಿ. ಅವನು ದನ ಕೊಡದೆ ಎಲ್ಲಿಗೆ ಹೋಗುತ್ತಾನೆ? ನೋಡುವಾ' ಎಂದು ಹೆಗಲ ಮೇಲೆ ಒಂದು ದೊಣ್ಣೆಯನ್ನೇರಿಸಿಕೊಂಡು ಗೋಬರ ಹೊರಟೇ ಬಿಟ್ಟ. ಅವನನ್ನು ನೋಡಿದಾಗ ಹೋರಿರಾಮನ ಮನಸ್ಸಿನಲ್ಲಿಯೂ ಒಂದು ವಿಧದ ಆಲೋಚನೆ ಮೂಡಿ ಬರತೊಡಗಿತು – 'ಇನ್ನು ಹುಡುಗನಿಗೆ ಎಲ್ಲಿಯಾದರೂ ಒಂದು ನೆಂಟಸ್ತಿಕೆ ನೋಡ

ಬೇಕು. ಹದಿನೇಳು ವರ್ಷ ಪ್ರಾಯ ಮುಗಿದಾಯಿತು. ಆದರೆ ಮಾಡುವುದೇನು ? – ಹಣ ಕಣ್ಣಿಗಾದರೂ ಕಾಣ ಸಿಗುವುದು ಬೇಡವೇ ? ತಮ್ಮಂದಿರು ಬೇರೆಯಾದ ಮೇಲೆ ಮನೆತನದ ಗೌರವವೂ ಕಡಿಮೆಯಾಗುತ್ತ ಬಂದಿದೆ. ಯಾರಾದರೂ ಹುಡುಗನನ್ನು ನೋಡಲಿಕ್ಕೆ ಬಂದರೂ ಮನೆಯ ಪರಿಸ್ಥಿತಿ ನೋಡಿ ಮುಖ ತಿರುಗಿಸಿಕೊಂಡು ಹೋಗುತ್ತಾರೆ. ಅಥವಾ ಒಪ್ಪಿದರೂ ಹಣ ಕಾಸು ಕೇಳುತ್ತಾರೆ. ಬರುವ ಹುಡುಗಿಗೆ, ಚಿನ್ನಾಭರಣಕ್ಕಾಗಿ ೨೦೦–೩೦೦ ರೂಪಾಯಿ ಕೊಟ್ಟು, ಆದರ ಮೇಲೆ ಅಷ್ಟೇ ಹಣ ಮದುವೆಗಾಗಿ ವೆಚ್ಚ ಮಾಡಿದರೆ – ಉಂಟೇ ? ಎಲ್ಲಿಂದ ಬರುವುದು ಅಷ್ಟೆಲ್ಲ ಹಣ ? ಈ ಸಲದ ಬೆಳೆಯೆಲ್ಲ ಅಂಗಳದಿಂದಲೇ ಹೋಗಿ ಬಿಟ್ಟದೆ. ಊಟಕ್ಕೇ ಈಗ ತತ್ವಾರ. ಹಾಗಾಗಿ ಮದುವೆಯಾಗುವುದು ಹೇಗೆ ? ಮಾತ್ರವಲ್ಲದೆ ಸೋನೆಗೂ ಮದುವೆಯ ಪ್ರಾಯ ಬಂತು. ಹುಡುಗನಿಗೆ ಮದುವೆಯಾಗದಿದ್ದರೂ ಚಿಂತೆ ಇಲ್ಲ. ಹುಡುಗಿಗೆ, ಕಾಲದಲ್ಲಿ ಮದುವೆಯಾಗದಿದ್ದರೆ ಮನೆತನದ ಮರ್ಯಾದೆಯೇ ಹೋದೀತು. ಆದ್ದರಿಂದ ಮೊದಲು ಅವಳಿಗೇ ನೆಂಟಸ್ತಿಕೆ ಹುಡುಕಬೇಕು. '

ಅಷ್ಟರಲ್ಲಿ ಒಬ್ಬ ಮನುಷ್ಯನು ಬಂದು ನಮಸ್ಕಾರ ಮಾಡಿ ಕೇಳಿದ – ' ನಿಮ್ಮಲ್ಲಿ ಸ್ವಲ್ಪ ಬಿದಿರು ಮಾರಾಟಕ್ಕಿದೆಯೆ ? ' ಎಂದು.

ಹೋರಿರಾಮ ನೋಡಿದ. ಬಿದಿರಿನ ಕೆಲಸದ ಗೌಡ ಬಂದು ನಿಂತಿದ್ದಾನೆ. ಕಪ್ಪಾಗಿ ಗಟ್ಟಿಮುಟ್ಟಾದ ದೇಹ. ದೊಡ್ಡ ಮೀಸೆ. ಸೊಂಟದಲ್ಲಿ ಹರಿತವಾದ ದೊಡ್ಡ ಕತ್ತಿ. ವರ್ಷಕ್ಕೆ ಒಂದೆರಡು ಸಲ ಆತ ಬಂದು, ಬಿದಿರು ಕಡಿದುಕೊಂಡು ಹೋಗಿ, ಕುರ್ಚಿ, ಕುಕ್ಕೆ, ತಟ್ಟಿ ಮುಂತಾದುವನ್ನೆಲ್ಲ ಮಾಡುತ್ತಿದ್ದ.

ಹೋರಿರಾಮನಿಗೆ ಸಂತೋಷವಾಯಿತು. ಕೈಬಿಸಿಯಾಗುವ ಸಂದರ್ಭ ಒದಗಿತು. ಆ ಗೌಡನನ್ನು ಕರೆದುಕೊಂಡು ಹೋಗಿ ಹಿತ್ತಿಲ ಬಿದಿರು ತೋರಿಸಿದ. ಧಾರಣೆಯ ಚರ್ಚೆಯಾಗಿ ಕೊನೆಗೆ ನೂರಕ್ಕೆ ಇಪ್ಪತ್ತೈದು ರೂಪಾಯಿಯ ಬೆಲೆಯಲ್ಲಿ ಐವತ್ತು ಬಿದಿರಿನ ಮಾತುಕತೆಯಾಯಿತು. ಪುನಃ ಇಬ್ಬರೂ ಅಲ್ಲಿಂದ ಹೊರಟು ಮನೆಯಂಗಳಕ್ಕೆ ಬಂದರು. ಹೋರಿರಾಮ ಅವನಿಗೆ ಬಾಯಾರಿಕೆ ವೀಳ್ಯದೆಲೆ ಕೊಟ್ಟು, ರಹಸ್ಯಭಾವದಿಂದ ಹೇಳತೊಡಗಿದ – ' ನನ್ನ ಬಿದಿರು ಯಾವಾಗಲೂ ಮೂವತ್ತು ರೂಪಾಯಿಗಿಂತ ಕಡಿಮೆಗೆ ಹೋಗುವುದೇ ಇಲ್ಲ. ಆದರೆ ನೀನು ನಮ್ಮ ಮನೆಯವನಂತೆಯೇ

ಆಗಿರುವೆ. ನಿನ್ನ ಹತ್ತಿರ ಏನು ಚರ್ಚೆ ಮಾಡುವುದು ?. . ಆ ನಿನ್ನ ಮಗ–ಮದುವೆಯಾದವನು – ಪರಪೂರಿಂದ ಬಂದಿರುವನೇ, ಇಲ್ಲವೆ ?'

ಗೌಡನು ವೀಳ್ಯದೆಲೆ ಜಗೆಯುತ್ತ ಬಂದು ನಿಟ್ಟುಸಿರು ಬಿಟ್ಟು ಹೇಳಿದ – " ಆ ಘಟಂಗನಿಗಾಗಿ ನಾನು ಜೀವ ತೆಗೆದುಕೊಂಡೆ ! ಆದರೆ ಆತ, ಪ್ರಾಯ ಬಂದ ಹುಡುಗೆಯನ್ನು ಮನೆಯಲ್ಲೇ ಬಿಟ್ಟು ಬೇರೆ ಜಾತಿಯ ಒಂದು ಹುಡುಗಿಯೊಡನೆ ಪರಪೂರಲ್ಲಿ ಮಜಾ ಮಾಡುತ್ತಿದ್ದಾನಂತೆ. ಅಷ್ಟಾಗುವಾಗ ಈ ಸೊಸೆಯೂ ಮತ್ತೊಬ್ಬನೊಡನೆ ಓಡಿಹೋದಳು. ಅದನ್ನೆಣಿಸುವಾಗ ಹೊಟ್ಟೆಗೆ ಚೂರಿ ಹಾಕಿದಂತಾಗುತ್ತದೆ. ಅವಳಿಗೆ ತುಂಬಾ ಹೇಳಿದೆ– 'ಏನು ಬೇಕಾದರೂ ತಿನ್ನು; ಯಾವುದು ಬೇಕೋ ಅದನ್ನುಟ್ಟುಕೋ; ನನ್ನ ಮರ್ಯಾದೆ ಮಾತ್ರ ತೆಗೆಯಬೇಡ' ಎಂಬುದಾಗಿ. ಆದರೆ ನನ್ನ ಮಾತು ಯಾರು ಕೇಳುತ್ತಾರೆ ? ಹೆಂಗುಸಿಗೆ ದೇವರು ಏನು ಬೇಕಾದರೂ ಕೊಡಲಿ, ರೂಪ ಮಾತ್ರ ಕೊಡಬಾರದು. ಅಂಥವಳು, ಎಷ್ಟಾದರೂ ನಮ್ಮ ಮುಷ್ಟಿಯಲ್ಲಿ ನಿಲ್ಲುವುದು ಕಷ್ಟ. ಅದು ಹೋಗಲಿ; ಈ ಬಿದಿರಿನ ಹಿತ್ತಿಲು ನಿಮ್ಮೊಳಗೆ ಪಾಲಾಗಿದೆಯಲ್ಲವೇ ? "

ಹೋರಿರಾಮ ಮೇಲೆ ನೋಡಿ ಬೇಸರದಿಂದ ಹೇಳಿದ – ' ಎಲ್ಲವೂ ಪಾಲಾಗಿ ಹೋಗಿದೆ ಗೌಡರೇ. ಯಾರನ್ನು ಮಕ್ಕಳ ಹಾಗೆ ನೋಡಿದ್ದೆನೋ – ಅವರೇ ಇಂದು ಸರಿಸಮಾನ ಪಾಲುಗಾರರಾಗಿದ್ದಾರೆ. ಆದರೂ ತಮ್ಮಂದಿರ ಪಾಲು ತಿಂದು ಹಾಕುವ ಯೋಚನೆ ನನಗಿಲ್ಲ. ನಿನ್ನ ಕೈಯಿಂದ ಬಂದ ಹಣವನ್ನೂ ಸರಿ ಪಾಲು ಮಾಡಿ ಕೊಟ್ಟುಬಿಡುತ್ತೇನೆ. ನಾಲ್ಕು ದಿನದ ಬಾಳುವೆಗಾಗಿ ಯಾರ್ಯಾರೊಡನೆ ಕಪಟ ಮೋಸ ಏಕೆ ಮಾಡಬೇಕು ? ಆದರೆ.... ಅಲ್ಲ ; ಇದೀಗ ೨೦ ರೂಪಾಯಿಯ ದರದಲ್ಲಿ ಮಾರಾಟವಾಯಿತೆಂದು ಅವರೊಡನೆ ಹೇಳಿ ಬಿಡುತ್ತೇನೆ. ಅವರಿಗೆ ಹೇಗೆ ಗೊತ್ತಾಗುವುದು ? ನೀನೇನಾದರೂ ಅವರೊಡನೆ ಹೇಳ ಹೋಗುವೆಯೋ ? ನಿನ್ನನ್ನು ನಾನು ನನ್ನ ತಮ್ಮಂದಿರಂತೆಯೇ ತಿಳಿದುಕೊಂಡಿದ್ದೇನೆ.'

ಹೋರಿರಾಮ ಈ ಪ್ರಸ್ತಾಪ ತೆಗೆದು – ಅವನು ಒಪ್ಪುವನೋ, ಇಲ್ಲವೋ ಎಂಬ ಸಂದೇಹದಿಂದ – ಅವನ ಮುಖ ನೋಡತೊಡಗಿದ. ಆಗ ಅವನ ಮುಖದಮೇಲೆ ಒಂದು ತರದ ಕಪಟ ವಿನೀತಭಾವ ತೋರಿಬರುತ್ತಿತ್ತು.

ಗೌಡನಿಗೆ ಗುಟ್ಟು ಗೊತ್ತಾಯಿತು. ಅದರಿಂದ ಅವನು ಒಂದು ಅಸ್ತ್ರ

ವನ್ನು ಸೇರಿಸಿಯೇ ಬಿಟ್ಟ – ‘ ನಿಮ್ಮ ನಮ್ಮ ಸಂಬಂಧವೆಂದರೆ ಬಹಳ ಹಿಂದಿನದು. ಆದ್ದರಿಂದ ಇಪ್ಪತ್ತು ರೂಪಾಯಿಯಲ್ಲ; ಹದಿನೈದು ರೂಪಾಯಿಯ ಬೆಲೆ – ಎಂಬುದಾಗಿ ಬೇಕಾದರೆ ಹೇಳಿಬಿಡುತ್ತೇನೆ. ಆದರೆ ನೀವು ಮಾತ್ರ ಇಪ್ಪತ್ತು ರೂಪಾಯಿಯ ಬೆಲೆ ತೆಗೆದುಕೊಂಡು ಬಿಡಿ.’

ಹೋರಿರಾಮ ತಲೆಯಾಡಿಸುತ್ತ – ‘ಇದೆಂಥ ಮಾತು ? ೨೦ ರೂಪಾಯಿಗೆ ಇಂತಹ ಬಿದಿರು ಎಲ್ಲಿ ಸಿಕ್ಕೀತು ? ’ ಎಂದ.

‘ ಇಂತಹ ಬಿದಿರೇ ಏಕೆ ? ಇದಕ್ಕಿಂತ ಒಳ್ಳೆಯ ಬಿದಿರು ೧೦ ರೂಪಾಯಿಗೇ ಸಿಗಬಹುದು. ಆದರೆ ಏಳೆಂಟು ಮೈಲು ಪಶ್ಚಿಮಕ್ಕೆ ಹೋಗಬೇಕು, ಅಷ್ಟೆ. ಬೆಲೆ ಈ ಬಿದಿರಿಗಾಗಿ ಕೊಡುವುದಲ್ಲ, ಇದು ಪೇಟೆಗೆ ಸಮೀಪದಲ್ಲಿರುವುದಕ್ಕಾಗಿ ಕೊಡುವುದು. ಅಲ್ಲಿ ಹೋಗಿ ಬರಲಿಕ್ಕೆ ಎಷ್ಟು ಸಮಯ ತಾಗೀತು? ಆ ಸಮಯದಲ್ಲಿ ಎರಡು ಮೂರು ರೂಪಾಯಿಯ ಬೇರೆ ಕೆಲಸವಾಗುವುದಿದ್ದರೆ ಏಕೆ ಹೋಗಬೇಕು ಅಷ್ಟು ದೂರ?–ಅಂತ ಕೆಲಸಗಾರ ಎಣಿಸಿ ನೋಡುತ್ತಾನೆ.’

ಬೆಲೆ ನಿಶ್ಚಯವಾಯಿತು. ಗೌಡನು ಕತ್ತಿ ಸರಿಮಾಡಿಕೊಂಡು ಬಿದಿರು ಕಡಿಯಲಿಕ್ಕೆ ಹೊರಟ.

ಕಬ್ಬಿಗೆ ನೀರು ಹರಿಸುವ ಸಮಯವಾಗಿತ್ತು. ಹೀರನ ಹೆಂಡತಿ ನೀರ ಮರಿಗೆ ಹಿಡಿದುಕೊಂಡು ಬಾವಿಯ ಹತ್ತಿರ ಹೋಗುತ್ತಿದ್ದಳು. ಗೌಡನು ಬಿದಿರು ಕಡಿಯುವುದನ್ನು ನೋಡಿ ಅವಳು ಅಲ್ಲಿಂದಲೇ ಕೇಳಿದಳು – ‘ ಯಾರದು ಬಿದಿರು ಕಡಿಯುವುದು ? ’

ಗೌಡ ಕಡಿಯುವುದನ್ನು ನಿಲ್ಲಿಸಿ ಹೇಳಿದ – ‘ ಬಿದಿರು ಕ್ರಯಕ್ಕೆ ತೆಗೆದುಕೊಂಡಿದ್ದೇನೆ. ನೂರಕ್ಕೆ ಹದಿನೈದು ರೂಪಾಯಿಯ ಬೆಲೆ ನಿಶ್ಚಯವಾಗಿದೆ. ಧರ್ಮಕ್ಕೆ ಕಡಿದುಕೊಂಡು ಹೋಗುವುದಲ್ಲ.’

ಈಗ ಹೀರನ ಮನೆಗೆ ಅವನ ಹೆಂಡತಿಯೇ ಯಜಮಾನ್ತಿ. ಅವಳಿಂದಾಗಿಯೇ ಅಣ್ಣತಮ್ಮಂದಿರೊಳಗೆ ಪಾಲಾಗಿತ್ತು. ಅವಳೀಗ ದನಿಯಳನ್ನು ಗೆದ್ದುಬಿಟ್ಟು ಸಿಂಹದಂತಾಗಿದ್ದಳು. ಹೀರ ಒಮ್ಮೊಮ್ಮೆ ಅವಳಿಗೆ ಸರಿಯಾಗಿ ಬಡೆಯುತ್ತಿದ್ದ. ಇತ್ತೀಚೆ ಒಮ್ಮೆ ಹೊಡೆದುದರಿಂದಾಗಿ ಕೆಲ ದಿನ ಅವಳು ಮಲಗಿದಲ್ಲಿಯೇ ಇದ್ದಳು. ಆದರೂ ತನ್ನ ಅಧಿಕಾರವನ್ನು ಅವಳೆಂದೂ ಬಿಟ್ಟು ಕೊಡುವವಳಲ್ಲ. . ಕೋಪ ಬಂದಾಗ, ಗಂಡನು ಹೊಡೆದರೂ ಮತ್ತೆ – ಅವಳು ಹೇಳಿದಂತೇ ಕುಣಿಯುತ್ತಿದ್ದ.

ಅವಳು ತಲೆಯ ಮೇಲಿನ ನೀರ ಮರಿಗೆಯನ್ನು ಕೆಳಗಿಳಿಸಿ ಹೇಳಿದಳು – '೧೫ ರೂಪಾಯಿಯ ಬೆಲೆಗೆ ನಮ್ಮ ಬಿದಿರನ್ನು ನಾವು ಕೊಡಲಿಕ್ಕಿಲ್ಲ.'

ಈ ವಿಚಾರದಲ್ಲೆಲ್ಲ ಹೆಂಗುಸರೊಡನೆ ಮಾತಾಡುವುದು ನೀತಿಗೆ ವಿರುದ್ಧವಾದುದೆಂದು ಗೌಡನ ತಿಳಿವಳಿಕೆ. ಹಾಗಾಗಿ ಹೇಳಿದ – 'ಹೋಗಿ, ನಿಮ್ಮ ಯಜಮಾನರನ್ನು ಕಳುಹಿಸಿ ಕೊಡಿ. ಏನಾದರೂ ಹೇಳುವುದಿದ್ದರೆ ಅವರೇ ಹೇಳಲಿ.'

ಹೀರನ ಹೆಂಡತಿಯ ಹೆಸರು 'ಪುನ್ನಿ.' ಅವಳು ಎರಡು ಮಕ್ಕಳ ತಾಯಿ. ಆದರೂ ದೇಹದಿಂದ ಗಟ್ಟಿಮುಟ್ಟಾಗಿಯೇ ಇದ್ದಳು. ಆದ ಪ್ರಾಯವನ್ನು ಬೆಡಗು ಬಿನ್ನಾಣಗಳಿಂದ ಮರೆ ಮಾಡಿಕೊಳ್ಳುತ್ತಿದ್ದಳು. ಆದರೆ ಮನೆಯಲ್ಲಿ ಸರಿಯಾಗಿ ಊಟವೇ ಸಿಗುತ್ತಿರಲಿಲ್ಲ. ಹಾಗಾಗಿ ಶೃಂಗಾರಕ್ಕಾಗಿ ಹಣವೆಲ್ಲಿಂದ? ಈ ಬಡತನದ ಬೇಸರದಿಂದಾಗಿ ಅವಳ ದೇಹಸ್ಥಿತಿಯೂ ಕೆಡತೊಡಗಿತ್ತು.

ಅವಳು ಗೌಡನ ಹತ್ತಿರ ಬಂದು ಅವನ ಕೈಹಿಡಿದು ಅವನನ್ನು ತಡೆಯುವ ಸಿದ್ಧತೆಯಿಂದ ಹೇಳಿದಳು – 'ಯಜಮಾನರನ್ನೇಕೆ ಕರೆಯಬೇಕು ? ಹೇಳುವುದಿದ್ದರೆ ನನ್ನೊಡನೆಯೇ ಹೇಳು. ಏನಿದ್ದರೂ, ನಮ್ಮ ಬಿದಿರು ಮುಟ್ಟಬಾರದು; ನಾನು ಹೇಳಿಯಾಯಿತು.' ಹೀಗೆ ಹೇಳುತ್ತ ಹೋಗಿ ಅವನ ಕೈ ಹಿಡಿದು ತಡೆದಳು. ಅವನು ಬಿಡಿಸಿಕೊಳ್ಳಲು ಪ್ರಯತ್ನಿಸಿದ. ಸ್ವಲ್ಪ ಸಮಯದವರೆಗೆ ಜಗಳವಾಯಿತು. ಕೊನೆಗೆ ಅವನು ಬಲವಾಗಿ ಅವಳನ್ನು ದೂಡಿಬಿಟ್ಟ. ಪುನ್ನಿಯು ಪೆಟ್ಟು ತಿಂದು ಬಿದ್ದುಬಿಟ್ಟಳು. ಆದರೂ ಅವಳು ಬಿಡಲಿಲ್ಲ. ಎದ್ದು, ಕಾಲಿನಿಂದ ಅವನನ್ನು ಸರಿಯಾಗಿ ಒದೆಯತೊಡಗಿದಳು. ಒಂದೆಡೆ ಒದೆಯುತ್ತಲೂ ಇದ್ದಳು, ಮತ್ತೊಂದೆಡೆ ಅಳುತ್ತಲೂ ಇದ್ದಳು. ಪಾಪ! ಗೌಡ ಹೆಂಗುಸಿನ ಕೈಯಿಂದ ಪೆಟ್ಟು ತಿನ್ನಬೇಕಾಯಿತು!

ಪುನ್ನಿಯ ಕೂಗಾಟ ಕೇಳಿ ಹೋರಿರಾಮ ಓಡಿಕೊಂಡು ಬಂದ. ಅವನನ್ನು ನೋಡಿದೊಡನೆ ಪುನ್ನಿಯು ಇನ್ನಷ್ಟು ಜೋರಾಗಿ ಬೊಬ್ಬಿಡಲಾರಂಭಿಸಿದಳು. ಗೌಡನು ಸುಮ್ಮನೆ ಹೊಡೆಯುತ್ತಿದ್ದಾನೆಂದು ಹೋರಿರಾಮ ತಿಳಿದುಕೊಂಡ. ಪಾಲಾಗಿ ಬೇರೆಯಾದ ವಿಚಾರವನ್ನೆಲ್ಲ ಮರೆತು, ಹೋರಿರಾಮ ಕೋಪದಿಂದ ಬಂದು, ಗೌಡನನ್ನು ಹಿಡಿದೆಳೆಯುತ್ತ ಹೇಳಿದ – 'ನಿನಗೆ ಒಳ್ಳೆಯದಾಗಬೇಕೆಂದಿದ್ದರೆ ನಡೆ ಇಲ್ಲಿಂದ. ಇಲ್ಲವಾದರೆ ಜೀವ ಇಡಲಿಕ್ಕಿಲ್ಲ.

ನೀನು ಏನೆಂದು ತಿಳಿದುಕೊಂಡಿರುವೆ ? ನಮ್ಮ ಮನೆಯ ಹೆಂಗುಸರ ಮೇಲೆ ಕೈ ಮಾಡುವಷ್ಟು ಧೈರ್ಯ ಬಂತೇ ನಿನಗೆ ? '

ಗೌಡನು ಪ್ರಮಾಣ ಮಾಡಿ ಸತ್ಯಸ್ಥಿತಿ ಹೇಳತೊಡಗಿದ. ಅವನಾಗಿ ಹೆಂಗುಸಿನ ಮೇಲೆ ಕೈಮಾಡಿದ್ದಿಲ್ಲ. ಅವನಿಗೆ ಅಷ್ಟು ಬುದ್ಧಿ ಇಲ್ಲವೇ ? ಅವನು ಎಷ್ಟು ಸಮಾಧಾನ ಹೇಳಿದರೂ ಹೋರಿರಾಮನಿಗೆ ವಿಶ್ವಾಸವಾಗಲಿಲ್ಲ.

ಹೋರಿರಾಮ ಗದರಿಸಿ ಹೇಳಿದ– ' ಸುಮ್ಮನೆ ಕಣ್ಣಿಗೆ ಮಣ್ಣೆರಚಬೇಡ. ನೀನೇನೂ ಮಾಡದಿದ್ದರೆ ಇವಳೇಕೆ ಅಳುತ್ತಿದ್ದಳು ? ನಿನಗೆ ಹಣದ ಬಿಸಿ ಏರಿದ್ದರೆ ಅದನ್ನೆಲ್ಲ ಕಾರಿಸಿಯೇನು. ನಾವು ಪಾಲಾಗಿ ಬೇರಾಗಿದ್ದರೇನು ? ನಮ್ಮ ರಕ್ತ ಒಂದೇ ಅಲ್ಲವೇ ? ಕೆಟ್ಟ ದೃಷ್ಟಿಯಿಂದ ನೋಡಿದರೆ ಕಣ್ಣು ಕಿತ್ತು ಹಾಕಿಯೇನು. '

ಪುನ್ನಿ ಚಂಡಿಯಂತಾಗಿದ್ದಳು. ಅವಳು ಕುತ್ತಿಗೆ ಒಡೆಯುವ ಸ್ವರದಿಂದ ಗೌಡನತ್ತ ನೋಡುತ್ತ ಬೊಬ್ಬಿಡತೊಡಗಿದಳು – ' ನೀನು ನನ್ನನ್ನು ಹೊಡೆದುರುಳಿಸಲಿಲ್ಲವೇ ? ನಿನ್ನ ಮಗನ ಆಣೆ ಹಾಕಿ ಹೇಳು ನೋಡುವಾ ?'

ಗೌಡನಿಗೂ ಪುನ್ನಿಗೂ ಜಗಳ ತೊಡಗಿದ ವಿಚಾರ ಹೀರನಿಗೂ ತಿಳಿಯಿತು. ಒಡನೆಯೇ ತನ್ನ ಕೆಲಸವನ್ನು ಅಲ್ಲೇ ಬಿಟ್ಟು ಈ ಘಟನೆಯಾದ ಸ್ಥಳಕ್ಕೆ ಓಡಿ ಬಂದ. ಅವನು ಕೋಪದಲ್ಲಿ ಹೆಸರು ಹೋದವನು. ಗಿಡ್ಡ ದೇಹ, ತುಂಬಿದ ಎದೆ, ಪುಷ್ಟವಾದ ರಟ್ಟೆ. ಆದರೆ ಅವನಿಗೆ ಕೋಪ ಗೌಡನ ಮೇಲೆ ಬರಲಿಲ್ಲ, ಪುನ್ನಿಯ ಮೇಲೆಯೇ ಬಂದಿತು –'ಅವಳು ಗೌಡನ ಹತ್ತಿರ ಕಾದಾಟಕ್ಕೆ ಏಕೆ ನಿಲ್ಲಬೇಕು ? ಏಕೆ ತನ್ನ ಮರ್ಯಾದೆಯನ್ನು ಕೆಡಿಸಿಕೊಳ್ಳಬೇಕು? ಆ ಬಿದಿರ ಕೆಲಸದವನೊಡನೆ ಲಡಾಯಿ ಮಾಡಿದ್ದರಿಂದ ಏನವಳಿಗೆ ಲಾಭ ಸಿಕ್ಕೀತು? ಏನು ಬೇಕಾಗಿದ್ದರೂ ನನ್ನ ಹತ್ತಿರ ಹೇಳಬಾರದಿತ್ತೇ ? ಅವಳು, ಪರ ಪುರುಷನೊಡನೆ, ಮುಖವೆತ್ತಿ ಮಾತಾಡಲಿಕ್ಕಾದರೂ ಏಕೆ ಹೋಗಬೇಕಿತ್ತು? ಅಣ್ಣ ೧೫ ರೂಪಾಯಿಗೆ ಬಿದಿರನ್ನು ಕೊಟ್ಟ ಮೇಲೆ ಇವಳಿಗೆ ಮಧ್ಯ ಮಾತಾಡುವ ಅಗತ್ಯವೇನಿತ್ತು ? ' – ಈ ಎಲ್ಲ ಯೋಚನೆಯಿಂದ, ಬಂದವನೇ ಅವಳ ರಟ್ಟೆ ಹಿಡಿದು ಎಳೆದುಕೊಂಡು ಹೋಗಿ ಬಲವಾಗಿ ಗುದ್ದು ಏರಿಸತೊಡಗಿದ. – ' ಏ, ಮರ್ಯಾದೆ ಕೆಟ್ಟವಳೇ, ನಮ್ಮ ಮಾನವನ್ನೇ ತೆಗೆದು ಬಿಟ್ಟೆಯಲ್ಲ ? ಈ ಅಲ್ಪ ಮನುಷ್ಯರ ಹತ್ತಿರ ನೀನು ಲಡಾಯಿ ಮಾಡಿಕೊಂಡಿದ್ದರೆ ಯಾರ ಮಾನ ಹೋಗುವುದು ? ಹೇಳು – (ಮತ್ತೊಂದು

ಗುದ್ದು ಏರಿಸಿ) ನಾವಲ್ಲಿ ಹೊಟ್ಟೆಯ ಪಾಡಿಗಾಗಿ ಒದ್ದಾಡುತ್ತಿದ್ದರೆ ನೀನಿಲ್ಲಿ ಜಗಳಾಡಲು ತೊಡಗಿದೆಯಾ? ಮಾನಗೆಟ್ಟವಳು. ಹೊಂಡ ತೋಡಿ ಹೂತು ಬಿಟ್ಟೇನು.'

ಪುನ್ನಿಯು 'ಅಯ್ಯಯ್ಯೋ'–ಎಂದು ಬೊಬ್ಬಿಡುತ್ತಾ ಅವನಿಗೆ ಏನೇನೋ ಬೈಯಲಾರಂಭಿಸಿದಳು– 'ನಿನ್ನ ಹೊಟ್ಟೆಗೆ ಮಣ್ಣು ಬೀಳಲಿ. ನಿನ್ನ ಹೊಟ್ಟೆಗೆ ಬೆಂಕಿ ಬೀಳಲಿ. ನಿನಗೆ ಜ್ವರ ಹಿಡಿಯಲಿ. ನಿನಗೆ ದೇವರ ದಯದಿಂದ ಕುಷ್ಠ ಹಿಡಿದು ಕೈಕಾಲುಗಳೆಲ್ಲ ಕರಗಿಹೋಗಲಿ.'

ಹೀರ ಈ ಬೈಗಳನ್ನೆಲ್ಲ ಸುಮ್ಮನೆ ಕೇಳುತ್ತಿದ್ದ. ಆದರೆ ಕೊನೆಯ ಕೆಟ್ಟ ಮಾತು ಮಾತ್ರ ಅವನಿಗೆ ತಾಗಿ ಹೋಯಿತು. ಜ್ವರ, ಹೊಟ್ಟೆನೋವುಗಳಿಗೆ ಆವನು ಹೆದರುವವನಲ್ಲ. ಆದರೆ ಕುಷ್ಠ! ಆ ಕಷ್ಟಮಯ ಜೀವನ!— ಅವನು ಕೋಪದಿಂದ ಕಿಡಿ ಕಿಡಿಯಾದ. ಹಲ್ಲು ಕಚ್ಚಿಕೊಂಡು ಪುನ್ನಿಯ ಮೇಲೆ ಹಾರಿ, ಅವಳ ಜುಟ್ಟು ಹಿಡಿದು, ತಲೆಯನ್ನು ನೆಲಕ್ಕೆ ಜಜ್ಜಿ ಗದರಿಸತೊಡಗಿದ– 'ಕೈಕಾಲು ಕರಗಿ ನಾನು ಬಿದ್ದು ಬಿಟ್ಟರೆ ನೀನೇನು ನನ್ನನ್ನು ತಿನ್ನುವಿಯೇ? ನೀನೇ ನನ್ನ ಮಕ್ಕಳು ಮರಿಗಳನ್ನು ಸಾಕುವಿಯೇ? ಮನೆ ಮಾರುಗಳ ವ್ಯವಸ್ಥೆ ನೀನೇ ನೋಡುವಿಯೇ? ನಾನು ಬಿದ್ದು ಹೋದರೆ– ನೀನು ಬೇರೆ ಯಾರನ್ನಾದರೂ ಕಟ್ಟಿಕೊಂಡು ಬೀದಿ ಕಾಯಬಹುದು! ಮರ್ಯಾದೆ ಕೆಟ್ಟವಳು!'

ಪುನ್ನಿಯ ಈ ಪಾಡಿನಿಂದ ಗೌಡನಿಗೆ ದಯೆ ತೋರಿತು. ಅವನು ಹೀರ ನೊಡನೆ ಸಮಾಧಾನದಿಂದ ಹೇಳತೊಡಗಿದ– 'ಇನ್ನು ಬಿಡಿ ಹೀರಣ್ಣನವರೇ. ಹೋಗಲಿ, ಈಗ ಆದುದಾದರೂ ಏನು? ನಿಮ್ಮ ಹೆಂಡತಿ ನನಗೆ ಹೊಡೆದರು. ಆದರಿಂದ ನನಗೇನೂ ಬೇಸರವಿಲ್ಲ. ಹೋಗಲಿ ಬಿಡಿ.'

ಹೀರನು ಗೌಡನಿಗೂ ಗದರಿಸಿ ಹೇಳಿದ– 'ನೀನು ಸುಮ್ಮನಿರು. ನೀನೂ ನನ್ನ ಕೋಪಕ್ಕೆ ಗುರಿಯಾಗಬೇಡ. ಹೆಂಗುಸರ ಜಾತಿ ಹಾಳಾಗುವುದು ಹೀಗೆಯೇ. ಇವಳು– ಇಂದು ನಿನ್ನೊಡನೆ ಜಗಳಾಡಿದಳು; ನಾಳೆ ಇನ್ನೊಬ್ಬನ ಹತ್ತಿರ. ನೀನೇನೋ ಒಳ್ಳೆಯವನು– ಸುಮ್ಮನಿದ್ದೆ. ಇನ್ನಾರಾದರೂ ಆಗು ತ್ತಿದ್ದರೆ ಮೈಮೇಲೆ ಕೈಹಾಕುತ್ತಿದ್ದರು. ಆಗ ಏನಾದೀತು– ನೀನೇ ಯೋಚಿಸಿ ನೋಡು!'

ತಲೆಯಲ್ಲಿ ಈ ವಿಚಾರ ಬಂದು ಅವನ ಕೋಪ ಇನ್ನಷ್ಟು ಏರಿತು. ಅವನು ಪುನಃ ಹೆಂಡತಿಗೆ ಹೊಡೆಯ ಹೋದ. ಆಗ ಹೋರಿರಾಮು ಓಡಿ ಬಂದು ಅವನ

ಕೈ ಹಿಡಿದು ತಡೆದ–' ಅರೇ, ಆದದ್ದಾಯಿತಲ್ಲ. ದೊಡ್ಡ ಪರಾಕ್ರಮಿ! ಏ
ಅವಳನ್ನು ಕೊಚ್ಚಿ ತಿನ್ನುವಿಯೋ ?'

ಹೀರನು ಈಗಲೂ ಅಣ್ಣನಿಗೆ ಸ್ವಲ್ಪ ಗೌರವ ತೋರಿಸುತ್ತಿದ್ದ
ಇದಿರಿದುರಾಗಿ ಜಗಳಾಡುತ್ತಿದ್ದಿಲ್ಲ. ಬೇಕಿದ್ದರೆ – ಅವನು ಒಂದೇ ಭ
ಕೈಬಿಡಿಸಿಕೊಳ್ಳಬಹುದಿತ್ತು. ಆದರೂ ಅಣ್ಣನಿಗೆ ಇದಿರು ನಿಲ್ಲಲು ಅವನಿ
ವಿದ್ದಿಲ್ಲ. ಹಾಗಾಗಿ ಗೌಡನತ್ತ ನೋಡಿ ಹೇಳಿದ – 'ಇನ್ನೂ ಏನು ನೋಡ
ನಿಂತಿರುವೆ? ಹೋಗಿ ಬಿದಿರು ಕಡಿದುಕೋ. ನನ್ನದೂ ಒಪ್ಪಿಗೆ. ನೂ
ಹದಿನೈದು ರೂಪಾಯಿಯ ದರದಲ್ಲೇ ಕಡಿದುಕೊಂಡು ಹೋಗು.'

ಪುನ್ನಿ ಅಲ್ಲೇ ಸ್ವಲ್ಪ ದೂರದಲ್ಲಿ ಕೂತು ಬೊಬ್ಬೆ ಹೊಡೆಯುತ್ತ
ಇದ್ದಳು. ಈ ಮಾತು ಕೇಳಿದೊಡನೆಯೇ ಹಾರಿ ಬಿದ್ದು ತಲೆ ಬಡೆದುಕೊ
ಹೇಳಲಾರಂಭಿಸಿದಳು. – ' ನಿನ್ನ ಮನೆಗೆ ಬೆಂಕಿ ಬೀಳಲಿ. ನನಗೇ
ನಿನ್ನಂತಹ ಕಸಾಯಿಯ ಕೈಯಲ್ಲಿ ಸಿಕ್ಕಿ ನಾನು ಪೂರ್ಣ ಕೆಟ್ಟುಹೊ
ನೀನು ಹಾಳಾಗಿ ಹೋಗು.' ಹೀಗೆ ಹೇಳುತ್ತ ನೀರಿನ ಮರಿಗೆ ಅಲ್ಲೇ ಬಿ
ಮನೆಯ ಕಡೆಗೆ ಹೊರಟಳು. ಆಗ ಹೀರನು ಗರ್ಜಿಸಲಾರಂಭಿಸಿದ – ' ಎ
ನೀನು ಹೋಗುವುದು ? ನಡೆ – ಬಾವಿಯ ಹತ್ತಿರ. ಇಲ್ಲವಾದರೆ ನಿನ್ನ
ವನ್ನೇ ಕುಡಿದುಬಿಟ್ಟೇನು.'

ಪುನ್ನಿಯ ಕಾಲು ಬಿದ್ದುಹೋಯಿತು. ಈ ನಾಟಕದ ಎರಡನೆಯ ಅ
ವನ್ನು ಆಡಿ ತೋರಿಸಲಿಕ್ಕೆ ಅವಳಿಗಿಷ್ಟವಿದ್ದಿಲ್ಲ. ಹಾಗಾಗಿ ಸುಮ್ಮನೆ ಮ
ಯನ್ನೆತ್ತಿಕೊಂಡು ಬಾವಿಯ ಕಡೆ ಅಳುತ್ತಾ ಹೊರಟಳು. ಹೀರನೂ ಅ
ಹಿಂದೆಯೇ ಹೋದ.

ಹೋರಿರಾಮ ಆಗ ಹೇಳಿದ – ' ಇನ್ನು ಪುನಃ ಹೋಗಿ ಹೊಡೆಯಬೇ
ಆದರಿಂದ ಹೆಂಗುಸರು ನಾಚಿಕೆಕೆಟ್ಟವರಾಗುತ್ತಾರೆ.'

ಅಷ್ಟರಲ್ಲಿ ದನಿಯಳು ಬಾಗಿಲಲ್ಲಿ ಬಂದು ಇಣಿಕಿ ನೋಡಿ ನೋಡಿ ಹೆ
ದಳು – " ನೀವಲ್ಲಿ ಸುಮ್ಮನೆ ನಿಂತುಕೊಂಡು ಏನು ತಮಾಷೆ ನೋಡುತ್ತಿದ್ದೀ
ನೀವು, ಸುಮ್ಮಸುಮ್ಮನೆ ಬುದ್ಧಿವಾದ ಹೇಳುತ್ತ ಕೂತುಕೊಳ್ಳಿ. ನಿಮ್ಮ ಮಾ
ಯಾರು ಕೇಳುತ್ತಾರೆ? ಇವಳೇ ಹಿಂದಕ್ಕೆ ನಿಮ್ಮನ್ನು ' ಸುಟ್ಟಮೀಸೆಯ
ನೆಂದು ಒಳಗಿಂದಲೇ ಹೀಯಾಳಿಸಿದ್ದು ಮರೆತುಹೋಯಿತೇ? ಎಳೆ
ಹೆಂಗುಸು ಪರ ಪುರುಷರೊಡನೆ ಜಗಳಾಡಿದರೆ ಗದರಿಸುವುದು ಬೇಡವೇ?

ಹೋರಿರಾಮು ಮನೆಯ ಬಾಗಿಲಿಗೆ ಬಂದು ಕಠಿಣ ಸ್ವರದಿಂದ ಹೇಳಿದ – ' ಹಾಗಾದರೆ ನಾನೂ ನಿನಗೆ ಅದೇ ರೀತಿ ಹೊಡೆಯಲೋ ? '

' ಓಹೋ – ನೀವು ಎಂದೂ ಹೊಡೆಯುವುದೇ ಇಲ್ಲ! ದೊಡ್ಡ ಸಾಧು ಪುರುಷರು! '

' ಈ ರೀತಿ ಕನಿಕರ ಇಲ್ಲದೆ ಹೊಡೆಯುತ್ತಿದ್ದರೆ ನೀನು ಮನೆ ಬಿಟ್ಟು ಓಡಿಯೇ ಬಿಡುತ್ತಿದ್ದೆ. ಪುನ್ನಿಯು ಒಳ್ಳೆಯ ಗರ್ವದ ಹೆಂಗುಸು. '

' ಆಹಾ ! ಭಾರೀ ನೋವು ತಿಳಿದವರು! ಹಿಂದೆ ಯಾವಾಗಲೋ ಹೊಡೆದ ಪೆಟ್ಟಿನ ಗಾಯ ಇನ್ನೂ ಉಳಿದಿದೆ. ಹೀರನಿಗೆ ಹೊಡೆಯಲಿಕ್ಕೂ ಗೊತ್ತಿದೆ, ಮುದ್ದು ಮಾಡಲಿಕ್ಕೂ ಗೊತ್ತಿದೆ. ನಿಮಗೆ ಬರೀ ಹೊಡೆಯುವುದು ಮಾತ್ರ ಗೊತ್ತು; ಪ್ರೀತಿ ಮಾಡಲಿಕ್ಕೆ ಗೊತ್ತೇ ಇಲ್ಲ. ನಾನಾದ್ದರಿಂದ ಇಷ್ಟು ದಿನ ನಿಮ್ಮೊಡನಿದ್ದೇನೆ.'

' ಸಾಕು, ಇರಲಿ. ನಿನ್ನನ್ನು ನೀನೇ ಬಹಳವಾಗಿ ಹೊಗಳಿಕೊಳ್ಳಬೇಡ. ಹಿಂದೆ, ನೀನೇ ಸಿಟ್ಟಿನಿಂದ ತಾಯಿ ಮನೆಗೆ ಓಡಿ ಹೋಗುತ್ತಿದ್ದಿಲ್ಲವೇ? ಹಲವು ಸಲ ಬಂದು ದಮ್ಮಯ್ಯ ಹಾಕಿದ ಮೇಲೆಯೇ ಪುನಃ ಬರುತ್ತಿದ್ದೆ.'

' ನಿಮಗೆ ಅಗತ್ಯ ತೋರಿದಾಗ ಬಂದು ದಮ್ಮಯ್ಯ ಹಾಕುತ್ತಿದ್ದಿರಿ. ನೀವು ಬರುತ್ತಿದ್ದುದು ನನ್ನ ಮೇಲಿನ ಪ್ರೀತಿಯಿಂದಲ್ಲ. '

' ಆದ್ದರಿಂದಲೇ ನಾನು ಎಲ್ಲರ ಹತ್ತಿರವೂ ನಿನ್ನ ಗುಣವನ್ನು ಹೊಗಳುತ್ತಿರುವುದಲ್ಲವೇ ? '

ವೈವಾಹಿಕ ಜೀವನದ ಪ್ರಭಾತ ಕಾಲದಲ್ಲಿ ಪ್ರೇಮಲಾಲಸೆಯು ತನ್ನ ಕೆಂಬಣ್ಣದ ಮಾದಕ ಶಕ್ತಿಯೊಡನೆ ಉದಯಿಸಿ ಬಂದು, ಹೃದಯಾಕಾಶವನ್ನು ತನ್ನ ಮಧುರ ಸುಂದರ ಕಿರಣಗಳಿಂದ ಬೆಳಗಿಸುತ್ತದೆ. ಮತ್ತೆ ಮಧ್ಯಾಹ್ನದ ಪ್ರಖರ ತಾಪವುಂಟಾದಾಗ ಕ್ಷಣ ಕ್ಷಣಕ್ಕೂ ಆನಂದೋತ್ಸವವು ಎದ್ದು ಬಂದು ಭೂಮಿಯೇ ನಡುಗಿದಂತಾಗುವುದು. ಆ ಬಳಿಕ ಲಾಲಸೆಯ ಸುಂದರ ಆವರಣವು ದೂರವಾಗಿ, ವಾಸ್ತವಿಕತೆಯು ನಗ್ನರೂಪದಲ್ಲಿ ತೋರಿಬರುತ್ತದೆ. ಕೊನೆಗೆ ವಿಶ್ರಾಮಮಯ ಸಂಧ್ಯೆಯು ಬಂದಾಗ ಆ ಶೀತಲ ಶಾಂತ ವಾತಾವರಣದಲ್ಲಿ ಸೋತ ಪಥಿಕನಂತೆ ಮಾನವನು ಇಡೀ ದಿನದ ಯಾತ್ರೆಯ ವೃತ್ತಾಂತವನ್ನು ಹೇಳುತ್ತ, ಕೇಳುತ್ತ, ತಟಸ್ಥಭಾವದಿಂದಿರುತ್ತಾನೆ ; ಉಚ್ಚ ಶಿಖರದಲ್ಲಿದ್ದು ಪ್ರಪಂಚದಿಂದ ನಿರ್ಲಿಪ್ತನಾಗಿ ನೋಡುವವನಂತಾಗುತ್ತಾನೆ.

ದನಿಯಳ ಮುಖದ ಮೇಲೂ ಆಗ ಅನುರಾಗದ ಕಿರಣೋದಯ ವಾಯಿತು – ' ಆಹಾ ! ಭಾರೀ ಹೊಗಳಿಕೆ ನಡೆಸುವವರು ! ಎಲ್ಲಿಯಾದರೂ ಸ್ವಲ್ಪ ಕೆಲಸ ಕೆಟ್ಟುಹೋದರೆ ಕುತ್ತಿಗೆ ಕೊಯ್ಯಲಿಕ್ಕೇ ಬರುತ್ತೀರಿ. '

ಹೋರಿರಾಮನೂ ಮಧುರಸ್ವರದಿಂದ ಹೇಳಿದನು–' ಉಪಕಾರ ಸ್ಮರಣೆ ಇಲ್ಲದಿರುವ ಈ ನಿನ್ನ ಬುದ್ಧಿಯೇ ನನಗಾಗುವುದಿಲ್ಲ. ನಾನು ನಿನ್ನ ವಿಷಯ ಏನೆಲ್ಲ ಹೇಳಿದ್ದೆನೆಂದು ಬೋಲನನ್ನು ಕೇಳಿದ್ದೆಯಾ ? '

ದನಿಯಳು ವಿಷಯ ಬದಲಾಯಿಸಿ ಹೇಳಿದಳು – ' ನೋಡಿ, ಗೋಬರ ದನ ತೆಗೆದುಕೊಂಡು ಬರುತ್ತಾನೋ ಅಥವಾ ಬರಿಗೈಯಲ್ಲಿ ಬರುತ್ತಾನೋ ತಿಳಿಯದು ! '

' ಬೋಲ ಬಹಳ ಒಳ್ಳೆಯವನು. ಆದರೆ ಅವನ ಮಕ್ಕಳು ತೀರ ಕೆಟ್ಟ ವರು. ಎಲ್ಲರೂ ಒಟ್ಟಿಗೆ ಸೇರಿ ಎಲ್ಲಿ ಟೊಪ್ಪಿ ಹಾಕಿಬಿಡುತ್ತಾರೋ – ಎಂದು ಭಯ ನನಗೆ. '

ಅಷ್ಟರಲ್ಲಿ ಬೆವರೊರಸಿಕೊಂಡು ಬಂದ ಗೌಡ – ' ಹೋರಿಯಣ್ಣಾ, ಹೋಗಿ ಬಿದಿರು ಲೆಕ್ಕ ಮಾಡಿ ನೋಡಿ. ಆ ಮೇಲೆ ಕಟ್ಟಿಕೊಂಡು ಹೋಗಿ ಬಿಡುತ್ತೇನೆ ' ಎಂದ.

ಹೋರಿರಾಮನಿಗೆ ಬಿದಿರು ಲೆಕ್ಕ ಮಾಡುವ ಅವಶ್ಯಕತೆ ತೋರಲಿಲ್ಲ. ಗೌಡನು ಅಂತಹ ಮನುಷ್ಯನಲ್ಲ. ಹಾಗೆ ಒಂದೆರಡು ಬಿದಿರು ಹೆಚ್ಚಿಗೆ ಕಡಿದುಕೊಂಡು ಹೋದರೂ ಏನು ? ಆಗಾಗ್ಗೆ ಯಾರಾದರೂ ಬಂದು ಒಂದೆ ರಡು ಬಿದಿರು ಬೇಡಿಕೊಂಡು ಹೋಗುತ್ತಾರೆ. ಧನಿಗಳಲ್ಲಿ ಚಪ್ಪರಕ್ಕೆ ಬೇಕಾದರೆ ಡಜನ್‌ಗಟ್ಲೆ ಕಡಿದು ಸೂರೆ ಮಾಡುತ್ತಾರೆ !

ಅಷ್ಟರಲ್ಲಿ ಗೌಡನು ಏಳುವರೆ ರೂಪಾಯಿ ಲೆಕ್ಕ ಮಾಡಿ ಅವನ ಕೈಯಲ್ಲಿ ಹಾಕಿದ. ಹೋರಿರಾಮ ಹಣ ಲೆಕ್ಕ ಮಾಡಿ ಹೇಳಿದ – ' ಬಾಕಿ ಹಣ ತೆಗೆ. ಲೆಕ್ಕ ಪ್ರಕಾರ ಇನ್ನೂ ಎರಡುವರೆ ರೂಪಾಯಿ ಆಗಬೇಡವೇ ? '

ಗೌಡ ಆಗ ಮುಖ ತಿರುಗಿಸಿ ಹೇಳಿದ – ' ಹದಿನೈದು ರೂಪಾಯಿಯಲ್ಲಿ ಮಾತಾದುದು – ಹೌದೋ – ಅಲ್ಲವೋ ?'

' ಹದಿನೈದಕ್ಕಲ್ಲ; ಇಪ್ಪತ್ತು ರೂಪಾಯಿಗೆ. '

ಹೀರಣ್ಣನು ನಿಮ್ಮ ಇದಿರಲ್ಲೇ – ಹದಿನೈದು ರೂಪಾಯಿ – ಎಂದು ಹೇಳಿದ್ದಲ್ಲವೇ ? ಬೇಕಾದರೆ ಅವನನ್ನು ಕರೆತಂದೇನು.'

'ಮಾತೇನೋ ಇಪ್ಪತ್ತು ರೂಪಾಯಿ ದರದಲ್ಲಾದುದು. ಈಗ ನಿನಗೆ ಜಯವಾಗಿದೆ. ಏನು ಬೇಕಾದರೂ ಹೇಳು. ಆ ಎರಡೂವರೆ ರೂಪಾಯಿ ಇಟ್ಟುಕೊಂಡು ನೀನೊಬ್ಬ ರಾಜನಾಗಲಾರೆ.'

ಆದರೆ ಗೌಡ ಸಾಧಾರಣದ ಮನುಷ್ಯನಲ್ಲ. ಅವನೂ ಹೇಳಿದ– 'ಹಾಗಾದರೆ, ನೀನು ಮಾತ್ರ ತಮ್ಮಂದಿರ ಈ ಚಿಲ್ಲರೆ ದುಡ್ಡು ತಿಂದು ಹಾಕಿ ದೊಡ್ಡ ರಾಜನಾಗುವೆಯಾ? ಎರಡೂವರೆ ರೂಪಾಯಿಗಾಗಿ ಮೋಸ ಮಾಡ ಹೊರಟ ಮನುಷ್ಯ ನನಗೆ ಈಗ ಉಪದೇಶಕ್ಕೆ ಹೊರಟಿದ್ದಾನೆ! ಈಗ ಗುಟ್ಟನ್ನೆಲ್ಲ ಬಿಚ್ಚಿದರೆ ತಲೆ ತಗ್ಗಿಸಬೇಕಾದೀತು.'

ಹೋರಿರಾಮನಿಗೆ ಪೆಟ್ಟನಿಂದ ಹೊಡೆದಂತಾಯಿತು. ಗೌಡನು ರೂಪಾಯಿ ನೆಲದ ಮೇಲೆ ಹಾಕಿ ಬಿದಿರು ಹೊತ್ತುಕೊಂಡು ಹೋಗಿಯೇ ಬಿಟ್ಟ. ಹೋರಿರಾಮ ಬೇವಿನ ಮರದಡಿಯಲ್ಲಿ ಕೂತುಕೊಂಡು ಚಿಂತಿಸುತ್ತಲೇ ಇದ್ದ. ತಾನು ಎಷ್ಟು ಲೋಭಿ, ಸ್ವಾರ್ಥಿ – ಎಂಬಂಶ ಈಗ ಅವನಿಗೆ ಗೊತ್ತಾಯಿತು. ಗೌಡನು ಆ ಎರಡೂವರೆ ರೂಪಾಯಿ ಕೊಟ್ಟಿದ್ದರೆ– ತನ್ನ ಬುದ್ಧಿವಂತಿಕೆಯಿಂದಾಗಿ, ಸುಲಭದಲ್ಲಿ ರೂಪಾಯಿ ಲಾಭವಾಯಿತೆಂದು ಹಿಗ್ಗುತ್ತಿದ್ದನು. ಪೆಟ್ಟುತಿಂದ ಮೇಲೆಯೇ ಮನುಷ್ಯನಿಗೆ ಬುದ್ಧಿ ಬರುತ್ತದೆ.

ದನಿಯಳು – ಒಳಗಿದ್ದವಳು ಹೊರ ಬಂದಾಗ ನೆಲದ ಮೇಲೆ ಇದ್ದ ರೂಪಾಯಿ ನೋಡಿದಳು. ಲೆಕ್ಕ ಮಾಡಿ ಕೇಳಿದಳು – 'ಉಳಿದ ರೂಪಾಯಿ ಏನಾಯಿತು? ಹತ್ತು ಆಗಬೇಕಿತ್ತಲ್ಲ?'

ಹೋರಿರಾಮ ಮುಖ ಉದ್ದ ಮಾಡಿ ಹೇಳಿದ – 'ಹೀರ ೧೫ ರೂಪಾಯಿಗೆ ಕೊಟ್ಟ ಮೇಲೆ ನಾನೇನು ಮಾಡಲು ಸಾಧ್ಯವಿದೆ?'

'ಹೀರನು ಐದು ರೂಪಾಯಿಗೇ ಕೊಡಲಿ;–ನಾವು ಮಾತ್ರ ಆ ಕ್ರಯಕ್ಕೆ ಕೊಡುವುದಿಲ್ಲವೆಂದು ಹೇಳಬಾರದಿತ್ತೇ?'

'ಅಲ್ಲಿ ಪೆಟ್ಟು, ಬೊಬ್ಬೆ, ನಡೆಯುತ್ತಿರುವಾಗ ನಾನೇನು ಹೇಳಲಿ?'

ಹೋರಿರಾಮ ತನ್ನ ಅಪಜಯವನ್ನು ತನ್ನ ಮನಸ್ಸಿನೊಳಗೇ ಇಟ್ಟುಕೊಂಡ. ಅವನ ಸ್ಥಿತಿ, ಹಣ್ಣು ಕದಿಯಲಿಕ್ಕಾಗಿ ಮರವನ್ನೇರಿ, ಅಲ್ಲಿಂದ ಬಿದ್ದ ಮೇಲೆ ಧೂಳೊರಸಿಕೊಂಡು–ಯಾರೂ ನೋಡದಿದ್ದರೆ ಸಾಕು–ಎಂದು ಹೇಳುವವನಂತಾಗಿತ್ತು. ಜಯಿಸಿದ್ದರೆ ತನ್ನ ಬುದ್ಧಿವಂತಿಕೆಯ ವಿಚಾರ ಕೊಚ್ಚಿಕೊಳ್ಳಬಹುದಿತ್ತು. ಜಯವಾದಲ್ಲಿ ಎಲ್ಲ ತಪ್ಪೂ ಮಾಯವಾಗಿ ಹೋಗುತ್ತದೆ.

ದನಿಯಳು ಗಂಡನನ್ನು ಹೀಯಾಳಿಸತೊಡಗಿದಳು. ಇಂತಹ ಸುಸಂದರ್ಭ ಅವಳಿಗೆ ಅಪರೂಪಕ್ಕೇ ಸಿಗುತಿತ್ತು. ಯಾವಾಗಲೂ ಹೋರಿರಾಮು ಅವಳಿಗಿಂತ ಚತುರನಾಗಿದ್ದನು. ಇಂದು ಮಾತ್ರ ಆಟ ಅವಳ ಕೈಯಲ್ಲಿತ್ತು. ಹಾಗಾಗಿ ಕೈ ತಟ್ಟಿಕೊಂಡು ವ್ಯಂಗ್ಯವಾಗಿ ಹೇಳತೊಡಗಿದಳು – 'ಅಯ್ಯೋ, ಅದು ಹೇಗಾದೀತು ? ಪ್ರೀತಿಯ ತಮ್ಮ ೧೫ ರೂಪಾಯಿ ಎಂದ ಮೇಲೆ ನೀವು ಹೇಗೆ ಅಡ್ಡ ಬರುವುದು! ರಾಮ ರಾಮಾ! ಪ್ರೀತಿಯ ತಮ್ಮನ ಮುಖ ಸಣ್ಣದಾಗದೇ ? ಮಾತ್ರವಲ್ಲದೆ – ಪ್ರೀತಿಯ ತಮ್ಮನ ಮುದ್ದು ಮಡದಿಗೆ ಹಾಗೆ ಪೆಟ್ಟು ಬಿದ್ದು ಅನರ್ಥವಾಗುವಾಗ ನೀವು ಹೇಗೆ ಬಾಯಿ ಬಿಡುವುದು! ಆ ಸಂದರ್ಭದಲ್ಲಿ ನಿಮ್ಮ ಸರ್ವಸ್ವವನ್ನೂ ಯಾರಾದರೂ ದೋಚಿಕೊಂಡು ಹೋಗಿದ್ದರೂ ನಿಮಗೆ ಅರಿವಾಗುತ್ತಿದ್ದಿಲ್ಲ!'

ಹೋರಿರಾಮು ಸುಮ್ಮನೆ ಕೇಳುತ್ತಲೇ ಇದ್ದ; ಪಿಟ್ಟೆಂದು ಬಾಯಿ ತೆರೆಯ ಲಿಲ್ಲ. ಕೋಪ ಬಂತು, ರಕ್ತ ಬಿಸಿಯಾಯಿತು. ಅವನು ಹಲ್ಲು ಕಡಿಯ ತೊಡಗಿದ. ಆದರೆ ಬಾಯಿ ಮಾತ್ರ ಬಿಡಲಿಲ್ಲ. ಹಾರೆ ತೆಗೆದುಕೊಂಡು ಕಬ್ಬಿನ ಕೆಲಸಕ್ಕೆ ಹೊರಟು ಬಿಟ್ಟ.

ಆಗ ದನಿಯಳು ಮುಂದೆ ಬಂದು ಹಾರೆ ಎಳೆದುಕೊಳ್ಳುತ್ತ ಹೇಳಿದಳು – 'ಏನು ? ಈಗ ತಾನೇ ಬೆಳಗಾಯಿತೇ – ಕಬ್ಬಿನ ಕೆಲಸಕ್ಕೆ ಹೊರಡಲು ? ಸೂರ್ಯ ದೇವರು ನೆತ್ತಿಗೇರಿದ. ಕೈಕಾಲು ತೊಳೆದುಕೊಳ್ಳಿ – ಊಟಕ್ಕಾಯಿತು.'

'ನನಗೆ ಹಸಿವಿಲ್ಲ.'

ದನಿಯಳು ಗಾಯದ ಮೇಲೆ ಉಪ್ಪೆರಚಿದಳು – 'ಹೇಗೆ ಹಸಿವಾದೀತು ? ನಿಮ್ಮ ತಮ್ಮ ಇದೀಗ ದೊಡ್ಡ ದೊಡ್ಡ ಲಡ್ಡು ತಿನ್ನಿಸಿದ! ಇಂತಹ ಪ್ರೀತಿ, ವಿಶ್ವಾಸವುಳ್ಳ ಸಹೋದರರನ್ನು ದೇವರು ಎಲ್ಲರಿಗೂ ಕೊಡಲಿ.'

ಹೋರಿರಾಮುನಿಗೆ ಕೋಪ ತಡೆಯಲಾಗಲಿಲ್ಲ. – 'ಏನು ? ನಿನಗಿಂದು ನನ್ನ ಕೈಯಿಂದ ಫಲಾಹಾರ ತಿನ್ನಬೇಕೆಂದು ಆಶೆಯಾಗಿದೆಯೇ?' ಎಂದ ಅವನು.

ದನಿಯಳು ಕೃತಕ ವಿನಯ ಪ್ರದರ್ಶನ ಮಾಡುತ್ತ ಹೇಳಿದಳು – 'ಅಯ್ಯೋ, ಏನು ಹೇಳಲಿ ? ಯಾವಾಗಲೂ ನೀವು ನನ್ನನ್ನು ಮುದ್ದು ಮಾಡಿ ಮಾಡಿ ನನ್ನ ತಲೆ ತಿರುಗಿ ಹೋಗಿದೆ!'

'ನೀನು ನನ್ನನ್ನು ಮನೆಯಲ್ಲಿರಲು ಬಿಡುವೆಯೋ – ಇಲ್ಲವೋ ?'

‘ ನಿಮ್ಮ ಮನೆ, ನೀವೇ ಯಜಮಾನರು ! ನಾನ್ಯಾರು ನಿಮ್ಮನ್ನು ಮನೆಯಿಂದ ಹೊರ ಮಾಡಲಿಕ್ಕೆ ? ’

ಅಂತು ಏನು ಮಾಡಿದರೂ ದನಿಯಳ ಹತ್ತಿರ ಪೂರೈಸುವಂತಿದ್ದಿಲ್ಲ. ಅವನ ಸಾಮರ್ಥ್ಯವೇ ಉಡುಗಿ ಹೋಗಿತ್ತು. ಈ ವ್ಯಂಗ್ಯ ಬಾಣಗಳನ್ನು ತಡೆಯಲಿಕ್ಕೆ ಅವನಲ್ಲಿ ಯಾವ ಸಾಧನವೂ ಇದ್ದಿಲ್ಲ. ಮೆಲ್ಲಗೆ ಹಾರೆ ಕೆಳಗಿಟ್ಟು ಕೊಡ ತೆಗೆದುಕೊಂಡು ಬಾವಿಯ ಹತ್ತಿರ ಹೋದ. ಅರ್ಧ ಘಂಟೆಯ ನಂತರ ಮೆಲ್ಲಗೆ ಬಂದ. ಆದರೆ ಗೋಬರ ಅಷ್ಟು ಹೊತ್ತಾದರೂ ಬಂದಿರಲಿಲ್ಲ. ಹಾಗಾಗಿ ಒಬ್ಬನೇ ಹೇಗೆ ಊಟ ಮಾಡುವುದು ? – ಈ ಘಟಿಂಗ ಅಲ್ಲಿ ಹೋಗಿ ಸುಮ್ಮನೆ ಮಲಗಿರಬೇಕು. ಆ ಬೋಲನ ಮಗಳು – ಬಣ್ಣದ ಬೀಸಣಿಗೆ – ಜುನಿಯಳೊಬ್ಬಳು, ಅಲ್ಲಿದ್ದಾಳೆ. ಅವಳೊಡನೆ ನಗುತ್ತ, ಆಡುತ್ತ ಇರಬೇಕು. ಮೊನ್ನೆ ಸಹ ಅವಳ ಹಿಂದೆಯೇ ಹೋಗುತ್ತಿದ್ದ. ಅವನು ದನ ಕೊಡದಿದ್ದರೂ ಹಿಂದಕ್ಕೇಕೆ ಬರಬಾರದು ?

ದನಿಯಳಾಗ ಹೇಳಿದಳು – ‘ ನಿಂತು ನೋಡುವುದೇನನ್ನು ? ಗೋಬರ ಸಾಯಂಕಾಲವೇ ಬಂದಾನು.’

ಹೋರಿರಾಮ ಏನೂ ಹೇಳಲಿಲ್ಲ. ಪುನಃ ಏನಾದರೂ ಹೇಳಲಾರಂಭಿಸಿದರೆ ತುಂಬಾ ಕಷ್ಟ !

ಹಾಗಾಗಿ ಊಟಮಾಡಿ ಬೇವಿನ ಮರದಡಿಯಲ್ಲಿ ಸುಮ್ಮನೆ ಕೂತುಕೊಂಡ.

ಅಷ್ಟಾಗುವಾಗ ರೂಪಾ ಅಳುತ್ತ ಬಂದಳು. ಅವಳು ಸೊಂಟಕ್ಕೆ ಕೋಪೀನ ಮಾತ್ರ ಕಟ್ಟಿಕೊಂಡಿದ್ದಳು. ತಲೆ ಎಲ್ಲ ಕೆದರಿ ಹೋಗಿತ್ತು. ಬಂದು ಹೋರಿರಾಮನ ಎದೆಯ ಮೇಲೆ ಕೂತುಕೊಂಡಳು. ಅವಳ ಅಕ್ಕ ಸೋನೆ ಹೇಳಿದಳಂತೆ – ದನ ಬರುತ್ತದೆ ; ಅದರ ಸೆಗಣಿ ತಾನು ತೆಗೆಯುತ್ತೇನೆ – ಎಂಬುದಾಗಿ. ರೂಪಳಿಗೆ ಆದಾಗಲಿಲ್ಲ. ಸೋನೆಯು ಏನಂತಹ ಮಹಾರಾಣಿಯೇ, ಎಲ್ಲ ಸೆಗಣಿಯನ್ನು ತಾನೇ ತೆಗೆಯಲಿಕ್ಕೆ ? ರೂಪಳು ಯಾವ ವಿಚಾರದಲ್ಲಿ ಅವಳಿಗಿಂತ ಕಡಿಮೆ ? ಸೋನೆಯು ರೊಟ್ಟಿ ತಯಾರಿಸುತ್ತಾಳಾದರೆ ರೂಪಳು ಪಾತ್ರೆ ತೊಳೆಯುವುದಿಲ್ಲವೇ ? ಅವಳು ನೀರು ತರುತ್ತಾಳಾದರೆ, ಇವಳು ಹಗ್ಗ ತೆಗೆದುಕೊಂಡು ಬಾವಿಯ ಹತ್ತಿರ ಹೋಗುವುದಿಲ್ಲವೇ ? ಒಬ್ಬಳು ಗದ್ದೆಯ ಕೆಲಸಕ್ಕೆ ಹೋದರೆ ಇನ್ನೊಬ್ಬಳು ಎತ್ತುಗಳನ್ನು ಮೇಯಿಸುವುದಿಲ್ಲವೇ ? ಹಾಗಿರುವಾಗ ಸೋನೆಗೊಬ್ಬಳಿಗೇ ಏಕೆ ದನದ ಗೊಬ್ಬರವೆಲ್ಲ ಸಿಗ

ಬೇಕು? ಈ ಅನ್ಯಾಯವನ್ನು ರೂಪಳು ಹೇಗೆ ಸಹಿಸಿಯಾಳು?

ಹೋರಿರಾಮು ಅವಳ ಬಾಲಭಾವದಿಂದ ಮುಗ್ಧನಾಗಿ ಹೇಳಿದ – 'ಇಲ್ಲ; ದನದ ಸೆಗಣಿಯನ್ನು ನೀನೇ ತೆಗೆ. ಸೋನೆಯು ದನದ ಹತ್ತಿರ ಬಂದರೆ ಓಡಿಸಿ ಬಿಡುವಾ.'

ರೂಪಳು ಅಪ್ಪನ ಕುತ್ತಿಗೆಯ ಮೇಲೆ ಕೈಹಾಕಿ ಹೇಳಿದಳು – 'ಹಾಲು ಸಹ ನಾನೇ ಕರೆಯುತ್ತೇನೆ.'

'ಹೌದು, ಹೌದು. ನೀನೇ ಕರೆ. ನೀನಲ್ಲದೆ ಮತ್ತಾರು ಕರೆಯುವುದು?'

'ಆ ದನ ನನಗೇ.'

'ಆಗಲಿ, ಅದು ಸಂಪೂರ್ಣ ನಿನ್ನದೇ.'

ರೂಪಳು ಪ್ರಸನ್ನ ಚಿತ್ತಳಾಗಿ ತನ್ನ ವಿಜಯದ ವಾರ್ತೆಯನ್ನು ಸೋತ ಸೋನೆಗೆ ತಿಳಿಸಹೋದಳು – 'ದನ ನನ್ನದು. ಅದರ ಹಾಲು ಕರೆಯುವವಳು ನಾನೇ. ಅದರ ಸೆಗಣಿಯನ್ನೆಲ್ಲ ನಾನೇ ತೆಗೆಯುತ್ತೇನೆ. ನಿನಗೇನೂ ಸಿಗಲಿಕ್ಕೇ ಇಲ್ಲ.'

ಸೋನೆಯೂ ಪ್ರಾಯದಲ್ಲಿ ಎಳೆಯವಳೇ. ಬುದ್ಧಿಯೂ ಎಳೆಯದು. ದೇಹಸ್ಥಿತಿ ಮಾತ್ರ ಯುವತಿಯುಂತಾಗಿತ್ತು. ಯೌವನವು ಅವಳನ್ನು ಮುಂದಕ್ಕೆಳೆಯುತ್ತಿದ್ದರೆ – ಎಳೆತನವು ಹಿಂದಕ್ಕೆಳೆಯುತಿತ್ತು. ಕೆಲವು ಮಾತುಗಳಲ್ಲವಳು 'ಗ್ರೇಜ್ಯುವೇಟ್'ಗಳನ್ನೂ ಮೀರುವಂತಿದ್ದಳು; ಕೆಲ ವಿಚಾರದಲ್ಲಿ ಸಣ್ಣಮಕ್ಕಳಿಗಿಂತಲೂ ಕಳತೆ. ಉದ್ದವಾದ ದೇಹ, ಪ್ರಸನ್ನ ಮುಖ. ಕಣ್ಣುಗಳಲ್ಲಿ ಒಂದು ತರದ ಕಾಂತಿ ಇತ್ತು. ಕೂದಲಿಗೆ ಎಣ್ಣೆ ಇಲ್ಲ; ಕಣ್ಣಿಗೆ ಕಾಡಿಗೆ ಇಲ್ಲ. ಮೈಯಲ್ಲಿ ಆಭರಣವಿಲ್ಲ. ಅಂತೂ ಯೌವನದ ಶೋಭೆಯನ್ನು ಗೃಹಕೃತ್ಯದ ಹೊರೆಯು ತಡೆದಿಟ್ಟಂತೆ ಇತ್ತು.

ಸೋನೆಯು ರೂಪಳ ತಲೆಗೊಂದು ಕುಟ್ಟಿ ಹೊಡೆದು ಹೇಳಿದಳು – 'ಹೋಗು, ನೀನು ಸೆಗಣಿ ಗೋರುತ್ತಿರು. ನೀನು ಹಾಲು ಕರೆದಿಟ್ಟಾಗ ನಾನದನ್ನು ಕುಡಿದು ಬಿಡುತ್ತೇನೆ.'

'ಹಾಲನ್ನು ನಾನು ಬಾಯಿಮುಚ್ಚಿ ಬೀಗದೊಳಗೆ ಇಡದೆ ಬಿಡುತ್ತೇನೆಯೆ?'

'ನಾನು ಬೀಗ ಒಡೆದೇ ಹಾಲು ಕುಡಿಯುತ್ತೇನೆ.'

ಹೀಗೆ ಹೇಳುತ್ತ ಹಿತ್ತಿಲ ಕಡೆಗೆ ಅವಳು ಹೋಗಿಬಿಟ್ಟಳು. ಮಾವಿನ

ಕಾಯಿ ಹಣ್ಣಾಗಿದ್ದುವು. ಗಾಳಿ ಬರುವಾಗ ಹಣ್ಣುಗಳು ಉದುರುತ್ತಿದ್ದುವು. ಮರದ ಮೇಲಿನ ಕೆಂಬಣ್ಣದ ಹಣ್ಣುಗಳನ್ನು ನೋಡುತ್ತ ಎಳೆ ಮಕ್ಕಳು ಮರದಡಿಯಲ್ಲಿ ಕಾದಿರುತ್ತಿದ್ದರು. ರೂಪಳು ಆಕ್ಕನೊಡನೆ ಅಲ್ಲಿಗೆ ಹೋಗಿ ಸೇರಿದಳು. ಸೋನೆ ಯಾವ ಕೆಲಸ ತೊಡಗಿದರೂ ಅದನ್ನು ರೂಪಳು ಮಾಡುತ್ತಿದ್ದಳು. ಸೋನೆಯ ವಿವಾಹ ವಿಚಾರ ಆಗಾಗ್ಗೆ ಮಾತುಕತೆ ಬರುತ್ತಿತ್ತು. ಆದರೆ ರೂಪಳ ಮದುವೆಯ ವಿಚಾರ ಮಾತ್ರ ಯಾರೂ ಆಡುತ್ತಿರಲಿಲ್ಲ. ಅದರಿಂದಾಗಿ ಸ್ವತಃ ಅವಳೇ ತನ್ನ ಮದುವೆಗಾಗಿ ಹಟ ಹಿಡಿಯುತ್ತಿದ್ದಳು– ತನ್ನ ಗಂಡ ಹೇಗಿರುತ್ತಾನೆ; ಏನೇನು ತರುತ್ತಾನೆ? ತನಗೇನು ತಿನ್ನಿಸಿಯಾನು? ಏನು ತೊಡಿಸಿಯಾನು? – ಆದನ್ನೆಲ್ಲ ಅವಳೇ ವರ್ಣನೆ ಮಾಡಿಕೊಳ್ಳುತ್ತಿದ್ದಳು.

ಸಾಯಂಕಾಲವಾಯಿತು. ಹೋರಿರಾಮನಿಗೆ ಗದ್ದೆಯ ಕೆಲಸಕ್ಕೆ ಹೊರಡಲು ಮನಸ್ಸೇ ಬರಲಿಲ್ಲ. ತುಂಬ ಬೇಸರವಾಗಿತ್ತು. ಎತ್ತುಗಳಿಗೆ ಬಾಯಾರಿಕೆ ಕೊಟ್ಟು ಹೊಗೆಬತ್ತಿ ಸೇದಿಕೊಂಡು ಸುಮ್ಮನೆ ಯೋಚಿಸುತ್ತಿದ್ದ. ಈ ಸಲದ ಬೆಳೆಯಲ್ಲಿ, ಅಂಗಳದಿಂದಲೇ ಧಾನ್ಯ ಅಳೆದುಕೊಟ್ಟ ಬಳಿಕವೂ, ಅವನ ಮೇಲೆ ಹೆಚ್ಚುಕಡಿಮೆ ಮುನ್ನೂರರ ಸಾಲ ಉಳಿದಿತ್ತು. ಪ್ರತಿ ವರುಷವೂ ಸಾಧಾರಣ ನೂರು ರೂಪಾಯಿ ಬಡ್ಡಿಯದೇ ಏರುತ್ತ ಹೋಗುತ್ತಿತ್ತು. ಮಂಗಾರಾಮ ಸಾಹುಕಾರರ ಕೈಯಿಂದ ಐದು ವರ್ಷಗಳ ಹಿಂದೆ ಎತ್ತಿಗಾಗಿ ಎಪ್ಪತ್ತು ರೂಪಾಯಿ ತೆಗೆದುಕೊಂಡಿದ್ದನು. ಅದರಲ್ಲಿ ೬೦—೭೦ ರೂಪಾಯಿ ವರೆಗೆ ಆಗಾಗ್ಗೆ ಕೊಟ್ಟಿದ್ದನು. ಆದರೆ ಅದೆಲ್ಲ ಬಡ್ಡಿಗೇ ವಜಾ ಆಗಿ ಅಸಲು ಹಣ ಹಾಗೇ ಉಳಿದಿತ್ತು. ದಾತಾದೀನ ಪಂಡಿತರಿಂದ ಮೂವತ್ತು ರೂಪಾಯಿ ಸಾಲ ತೆಗೆದುಕೊಂಡು ಆಲುಗೆಡ್ಡೆ ನೆಟ್ಟಿದ್ದನು. ಬೆಳೆದ ಆಲುಗೆಡ್ಡೆಯನ್ನು ಕಳ್ಳರು ಕದ್ದುಕೊಂಡು ಹೋಗಿದ್ದರು. ಆದರೆ ಆ ಮೂವತ್ತು ರೂಪಾಯಿ ಈ ಮೂರು ವರ್ಷಗಳಲ್ಲಿ ನೂರಾಗಿತ್ತು. ಸಾಹುಕಾರ್ತಿ ದುಲಾರಿಯು ಆ ಊರಲ್ಲಿ ಒಂದು ಚಿಕ್ಕ ಅಂಗಡಿ ಇಟ್ಟುಕೊಂಡು ಎಣ್ಣೆ, ಬೆಲ್ಲ, ಹೊಗೆಸೊಪ್ಪು ಮುಂತಾದುವನ್ನು ಮಾರುತ್ತಿದ್ದಳು. ಹೋರಿರಾಮ ಪಾಲಾಗುವಾಗ ನಲ್ವತ್ತು ರೂಪಾಯಿ ತೆಗೆದುಕೊಂಡು ತಮ್ಮಂದಿರಿಗೆ ಕೊಟ್ಟಿದ್ದನು. ಅದು ಕೂಡ ಈಗ ಹೆಚ್ಚು ಕಡಿಮೆ ನೂರಕ್ಕೆ ಹತ್ತಿರವಾಗಿತ್ತು. ಏಕೆಂದರೆ – ಅವಳ ಬಡ್ಡಿ – ರೂಪಾಯಿಗೆ ಒಂದಾಣೆಯಂತಾಗಿತ್ತು. ಗೇಣಿಯ ರೂಪಾಯಿ ಸಹ ೨೫

ಬಾಕಿ ಇತ್ತು. ಅದರ ಮೇಲೆ ಈ ರಾಮೋತ್ಸವದ ಕಾಣಿಕೆಯ ಹಣಕ್ಕೆ ಯಾವ ವ್ಯವಸ್ಥೆಯೂ ಆಗಿದ್ದಿಲ್ಲ ಈ ಬಿದಿರಿನ ಹಣವೇನೋ ತಕ್ಕ ಕಾಲದಲ್ಲಿ ಬಂದಿತ್ತು ನಿಜ. ಆದರೆ ಯಾರಿಗೆ ಗೊತ್ತು ? ಇಲ್ಲಿ ಒಂದೇ ಒಂದು ಕಾಸು ಕೈಗೆ ಬಂದರೂ ಊರಲ್ಲೆಲ್ಲ ಸುದ್ದಿಯಾಗಿ ಹೋಗುತ್ತದೆ. ಸಾಲಗಾರರೆಲ್ಲ ನಾಲ್ಕೂ ಕಡೆಗಳಿಂದ ಮುತ್ತಿಗೆ ಹಾಕುತ್ತಾರೆ. ಏನೇ ಆಗಲಿ, ಇದರಲ್ಲಿ ಐದು ರೂಪಾಯಿಗಳನ್ನು ದನಿಗಳ ಕಾಣಿಕೆಯಾಗಿ ಕೊಟ್ಟೇ ಬಿಡುವುದು.

ಇದಲ್ಲದೆ ತಲೆಯ ಮೇಲೆ ಬೇರೆ ಎರಡು ದೊಡ್ಡ ಹೊರೆಗಳೂ ಬಂದು ನಿಂತಿವೆ – ಗೋಬರನ ಮತ್ತು ಸೋನೆಯ ಮದುವೆಗಳು. ಎಷ್ಟು ಕೈ ಗಿಡ್ಡ ಮಾಡಿದರೂ ಮುನ್ನೂರಕ್ಕಿಂತ ಕಡಮೆಗೆ ಈ ಕೆಲಸವಾಗುವುದಿಲ್ಲ. ಈ ಮುನ್ನೂರು ಯಾರ ಮನೆಯಿಂದ ತರುವುದು ? ಸಾಲ ತೆಗೆಯಬಾರದೆಂದು ಎಷ್ಟು ಗಟ್ಟಿ ಮನಸ್ಸು ಮಾಡಿದರೂ ಆಗುವುದಿಲ್ಲ. ದಿನದಿನಕ್ಕೆ ಬಡ್ಡಿ ಏರುತ್ತಾ ಹೋಗಿ ಮನೆ ಮಾರುಗಳೆಲ್ಲ ಏಲವಾಗಿ ಹೋಗಲಿಕ್ಕಿದೆಯೋ ಏನೋ ! ಮತ್ತೆ, ಹೆಂಡತಿ ಮಕ್ಕಳು ಗತಿ ಇಲ್ಲದೆ ಬಿಕ್ಕೆ ಬೇಡಬೇಕಾದೀತು– ಹೀಗೆ ಯೋಚಿಸುತ್ತ, ಹೊಗೆಬತ್ತಿಯ ಹೊಗೆ ಹಾರಿಸುತ್ತ, ಆವನು ತಲೆ ಕರಡು ಮಾಡಿಕೊಳ್ಳುತ್ತಿದ್ದನು.

ಈ ಯೋಚನೆಗಳು ಕಪ್ಪಗಿನ ಎತ್ತರವಾದ ಕೋಟೆಯಂತೆ ನಾಲ್ಕೂ ಕಡೆಗಳಿಂದ ಅವನನ್ನು ಆವರಿಸಿದ್ದುವು. ಹೊರ ಹೋಗಲಿಕ್ಕೆ ದಾರಿಯೇ ತೋರುತ್ತಿದ್ದಿಲ್ಲ. ಆದರೆ, ಆದರಲ್ಲಿಯೂ ಒಂದು ಸಂತೋಷದ ವಿಚಾರವೆಂದರೆ ಈ ರೀತಿಯ ಕಷ್ಟ ಅವನೊಬ್ಬನ ತಲೆಯ ಮೇಲೆಯೇ ಅಲ್ಲ. ಪ್ರಾಯಶಃ ಎಲ್ಲ ರೈತರ ಕತೆಯೂ ಇದೇ ಆಗಿತ್ತು. ಹೆಚ್ಚಿನವರ ಪರಿಸ್ಥಿತಿ ಇದಕ್ಕಿಂತಲೂ ನಿಕೃಷ್ಟವಾಗಿತ್ತು. ಸೋಬ ಮತ್ತು ಹೀರ ಇವನಿಂದ ಬೇರೆಯಾಗಿ ಇನ್ನೂ ಮೂರು ವರ್ಷ ಪೂರ್ತಿಯಾಗಿದ್ದಿಲ್ಲ. ಆದರೆ ಇಬ್ಬರ ತಲೆಯ ಮೇಲೂ ನಾಲ್ನೂರರ ಹೊರೆ ಬಂದಿದೆ. ಜಂಗಿಯು ಎರಡು ಜೋಡು ಎತ್ತುಗಳ ಸಾಗುವಳಿ ನಡೆಸುತ್ತಿದ್ದಾನೆ. ಆದರೆ ಒಂದು ಸಾವಿರಕ್ಕೂ ಮಿಕ್ಕಿ ಬಾಕಿ ಮಾಡಿಕೊಂಡಿದ್ದಾನೆ. ಜೀವಪ್ಪನ ಮನೆಯಲ್ಲಂತೂ ಬಿಕ್ಕೆ ಬೇಡುವವರಿಗೆ ಕೊಡಲಿಕ್ಕೂ ಹಿಡಿ ಧಾನ್ಯ ಸಿಗಲಿಕ್ಕಿಲ್ಲ. ಹೀಗಾಗಿ ಈ ಊರಲ್ಲಿ ಯಾರು ತಾನೆ ಸರಿಯಾಗಿ ಬದುಕಿಕೊಂಡಿದ್ದಾನೆ ?

ಒಡನೆಯೇ ಸೋನಾ ಮತ್ತು ರೂಪಾ– ಇಬ್ಬರೂ ಓಡಿ ಬಂದು, ಒಂದೇ

ಉಸುರಿಗೆ ಹೇಳಲಾರಂಭಿಸಿದರು – 'ಅಣ್ಣ ದನ ಹೊಡೆದುಕೊಂಡು ಬರುತ್ತಿದ್ದಾನೆ! ಮುಂದಿನಿಂದ – ದನ; ಹಿಂದಿನಿಂದ ಅಣ್ಣ !'

ಗೋಬರ ಬರುವುದನ್ನು ಮೊದಲು ಕಂಡಿದ್ದವಳು ರೂಪ. ಹಾಗಾದ್ದರಿಂದ ಈ ಸುದ್ದಿ ಹೇಳುವ ಸಂದರ್ಭ ಅವಳಿಗೇ ಸಿಗಬೇಕಿತ್ತು. ಆದರೆ ಈಗ ಸೋನೆಯು ಸರಿ ಪಾಲುಗಾರಳಾಗಿ ಬಂದಿದ್ದಾಳೆ! ಅದನ್ನು ಹೇಗೆ ಸಹಿಸಲು ಸಾಧ್ಯ ?

ಅವಳು ಮುಂದೆ ಹೋಗಿ ಪುನಃ ಹೇಳಿದಳು – 'ಮೊದಲು ನಾನೇ ನೋಡಿದ್ದು. ಒಡನೆಯೇ ಓಡಿ ಬಂದೆ. ಅಕ್ಕ ನೋಡಿದ್ದು ಆ ಮೇಲೆ.'

ಸೋನೆ ಈ ಮಾತನ್ನು ಒಪ್ಪುವವಳಲ್ಲ. ಅವಳು ಹೇಳಿದಳು – 'ನಿನಗೆಲ್ಲಿ ಅಣ್ಣನ ಗುರುತು ಸಿಕ್ಕಿತು ? ನೀನು ಹೇಳುತ್ತಿದ್ದೆ, ಯಾವುದೋ ಒಂದು ದನ ಬರುತ್ತಿದೆ ಎಂಬುದಾಗಿ. ಆಗ ನಾನು ಹೇಳಿದೆ–ಅದು ಅಣ್ಣ ಎಂಬುದಾಗಿ.'

ಇಬ್ಬರೂ ಪುನಃ ದನದ ಸ್ವಾಗತಕ್ಕಾಗಿ ಓಡಿದರು. ದನಿಯಾ ಮತ್ತು ಹೋರಿರಾಮು ದನ ಕಟ್ಟುವ ವ್ಯವಸ್ಥೆ ಮಾಡ ಹೊರಟರು. 'ಬೇಗನೆ ಅಕ್ಕಚ್ಚಿನ ಮರಿಗೆ ಹೊತು ಸರಿಮಾಡಿ ಬಿಡುತ್ತೇನೆ' ಎಂದ ಹೋರಿರಾಮು.

ದನಿಯಳ ಮುಖದಲ್ಲಿ ಯೌವನದ ಕಳೆಯೊಂದು ಮೂಡಿ ಬಂತು–'ಬೇಡ. ಮೊದಲು ಒಂದು ಪಾತ್ರೆಯಲ್ಲಿ ಸ್ವಲ್ಪ ತೌಡು ಮತ್ತು ಬೆಲ್ಲ, ನೀರಲ್ಲಿ ಬೆರಸಿ ನಾನು ತಂದುಕೊಡುತ್ತೇನೆ. ಪಾಪ ! ಬಿಸಿಲಲ್ಲಿ ಬಂದು ಸೋತಿರಬಹುದು. ಬಾಯಾರಿರಬಹುದು. ಆ ಮೇಲೆ ನೀವು ಮರಿಗೆ ಹೊತು ಸರಿಪಡಿಸಿ. ನಾನೂ ಸೇರುತ್ತೇನೆ ಬೇಕಾದರೆ ಸಹಾಯಕ್ಕೆ.'

'ಎಲ್ಲಿಯೋ ಒಂದು ಗಂಟೆ ಬಿದ್ದಿತ್ತಲ್ಲ? ಅದನ್ನು ಹುಡುಕಿಡು. ಗಂಟೆ ಕುತ್ತಿಗೆಗೆ ಕಟ್ಟಿದರೆ ಬಹು ಚಂದವಾಗುತ್ತದೆ.'

'ಸೋನಾ ಎಲ್ಲಿ ಹೋದಳು ? ಸಾಹುಕಾರ್ತಿಯ ಅಂಗಡಿಯಿಂದ ಸ್ವಲ್ಪ ಕರಿ ಬಣ್ಣದ ನೂಲು ತೆಗೆದುಕೊಂಡು ಬರಲಿ. ದನಕ್ಕೆ ಎಲ್ಲಿಯಾದರೂ ದೃಷ್ಟಿ ತಾಗದಂತೆ ನೋಡಬೇಡವೇ ?'

'ಇಂದು ನನ್ನ ಮನಸ್ಸಿನ ಹಿರಿಯ ಆಸೆಯೊಂದು ಪೂರ್ತಿ ಆದಂತಾಯಿತು.'

ದನಿಯಳು ತನ್ನ ಮನಸ್ಸಿನೊಳಗಿನ ಉತ್ಸಾಹವನ್ನು ಒತ್ತಿಹಿಡಿಯ ಬಯಸುತ್ತಿದ್ದಳು. ಈ ಹೊಸ ಸಂಪತ್ತು ಇನ್ನೇನಾದರೂ ಹೊಸ ಸಂಕಷ್ಟ ತಾರದಿದ್ದರೆ ಸಾಕೆಂದು ಅವಳ ನಿರಾಶಾಮಯ ಹೃದಯವು ಬಯಸುತ್ತಿತ್ತು.

ದನಿಯಳು ಆಕ್ಕಚ್ಚು ಸರಿಪಡಿಸುತ್ತಿದ್ದಾಗಲೇ ಗೋಬರನು ದನವನ್ನು ಹೊಡೆದುಕೊಂಡು, ಮಕ್ಕಳ ದೊಡ್ಡ ತಂಡದೊಡನೆ ಬಂದು ಸೇರಿದ. ಹೋರಿರಾಮ ಓಡಿ ಹೋಗಿ ದನದ ಕುತ್ತಿಗೆ ಹಿಡಿದು ಆಲಿಂಗಿಸಿದ. ದನಿಯಳು ತನ್ನ ಕೆಲಸ ಅರ್ಧದಲ್ಲೇ ಬಿಟ್ಟು ಯಾವುದೋ ಒಂದು ಹಳೆಯ ಬಟ್ಟೆಯ ಕಪ್ಪಾದ ಕಂಬಿಯನ್ನು ಹರಿದು ತಂದು ಆದರ ಕುತ್ತಿಗೆಗೆ ದೃಷ್ಟಿದೋಷ ನಿವಾರಣೆಗಾಗಿ ಕಟ್ಟಿದಳು.

ಹೋರಿರಾಮ ಶ್ರದ್ಧಾವಿಹ್ವಲ ನೇತ್ರಗಳಿಂದ ದನವನ್ನು ನೋಡುತಿದ್ದ. ಸಾಕ್ಷಾತ್ ನಂದಿನೀದೇವಿ ತನ್ನ ಮನೆಯಲ್ಲಿ ಪದಾರ್ಪಣ ಮಾಡಿದಂತೆ ಅವನಿಗೆ ಭಾಸವಾಗುತ್ತಿತ್ತು. ದೇವರ ದಯದಿಂದ ಇಂತಹ ಸುದಿನವನ್ನು ಕಾಣುವ ಭಾಗ್ಯವು ಒದಗಿ ಬಂತಲ್ಲ!

ದನಿಯಳೂ ಆತುರ ನೇತ್ರಗಳಿಂದ ನೋಡಿ ಹೇಳಿದಳು – 'ಸುಮ್ಮನೆ ನಿಂತುಕೊಂಡು ಏನು ನೋಡುತ್ತಿದ್ದೀರಿ? ಅಂಗಳದಲ್ಲಿ ಮರಿಗೆ ಹೂತು ದನ ಕಟ್ಟಲಿಕ್ಕೆ ಸ್ಥಳಮಾಡಬಾರದೇ?'

'ಈ ಒಳ ಅಂಗಳದಲ್ಲಿ ಎಲ್ಲಿದೆ ಜಾಗ?'

'ಬೇಕಾದಷ್ಟು ಇದೆ.'

'ನಾನು ಹೊರಗೆಯೇ ಗೂಟ ಹಾಕುತ್ತೇನೆ.'

'ಹುಚ್ಚರ ಹಾಗೆ ಮಾಡಬೇಡಿ. ಊರಿನ ಸ್ಥಿತಿ ತಿಳಿದು ಸಹ ತಿಳಿಯದವರಂತೆ ಮಾಡಬೇಡಿ.'

'ಎಲಾ, ಈ ಚಾಪೆಯಷ್ಟಗಲದ ಅಂಗಳದಲ್ಲಿ ದನ ಎಲ್ಲಿ ಕಟ್ಟುವುದಪ್ಪ?'

'ಯಾವ ವಿಚಾರ ನಿಮಗೆ ಗೊತ್ತಿಲ್ಲವೋ, ಅದರಲ್ಲಿ ಕೈ ಹಾಕಿ ಕೆಲಸ ಕೆಡಿಸಬೇಡಿ. ಪ್ರಪಂಚದ ವಿದ್ಯೆಗಳನ್ನೆಲ್ಲ ನೀವೊಬ್ಬರೇ ಕಲಿತುದಲ್ಲ.'

ಹೋರಿರಾಮನಿಗೆ ನಿಜವಾಗಿಯೂ ತನ್ನ ಅರಿವೇ ತನಗಿದ್ದಿಲ್ಲ. ಅವನ ಮಟ್ಟಿಗೆ ಗೋವೆಂದರೆ ಶ್ರದ್ಧೆ, ಭಕ್ತಿಗಳಿಗೆ ಅರ್ಹವಾದ ವಸ್ತು ಮಾತ್ರವೇ ಅಲ್ಲ. ಅದು ಸಜೀವ ದೈವೀ ಸಂಪತ್ತು. ಅದರಿಂದ ಅವನು ತನ್ನ ಮನೆ ಬಾಗಿಲ ಶೋಭೆಯನ್ನೂ, ಮನೆಯ ಗೌರವವನ್ನೂ, ಹೆಚ್ಚಿಸಬಯಸಿದ್ದನು. ಅವನ ಎಣಿಕೆಯಂತೆ ದಾರಿಯಲ್ಲಿ ಹೋಗುವ ಜನರು ಮನೆಯ ಹೊರ ಬಾಗಿಲಲ್ಲಿ ದನವನ್ನು ನೋಡಿ – ಇದು ಯಾರ ಮನೆಯೆಂಬುದಾಗಿ ಕೇಳಬಹುದು. ಆಗ ತಿಳಿದವರು–ಹೋರಿರಾಮ ಮಹಾಶಯನ ಮನೆಯೆಂದು ಹೇಳಬಹುದು.

ಆಗ ಹುಡುಗಿ ಇದ್ದವರಿಗೆ ಈ ಮನೆಯ ವಿಚಾರ ಆಸೆಯಾಗಬಹುದು! ಒಳಗಿನ ಅಂಗಳದಲ್ಲಿ ಕಟ್ಟಿದರೆ ಯಾರು ನೋಡುತ್ತಾರೆ? ಆದರೆ, ದನಿಯಳ ಶಂಕೆಯೆ ಬೇರೆ. ಅವಳು ದನವನ್ನು ಏಳು ಪರದೆಗಳ ಒಳಗೆ ಅಡಗಿಸಿಡಲೂ ಅಣಿಯಾಗಿದ್ದಳು. ಇಡೀ ದಿನ ಕೋಣೆಯೊಳಗೆ ಇಟ್ಟುಕೊಳ್ಳಲೂ ಸಿದ್ಧಳಿದ್ದಳು. ಈ ವರೆಗೆ ಪ್ರತಿ ಮಾತಿನಲ್ಲಿಯೂ ಹೋರಿರಾಮನಿಗೇ ಜಯವಾಗುತ್ತಿತ್ತು. ಅವನು ತನ್ನ ಪರವಾಗಿ ಹಟ ಹಿಡಿದಿರುತ್ತಿದ್ದನು. ದನಿಯಳು ಸೋತು ಹೋಗಬೇಕಾಗುತ್ತಿತ್ತು. ಆದರೆ ಇಂದು ಮಾತ್ರ ದನಿಯಳ ಇದಿರಲ್ಲಿ ಇವನ ಬೇಳೆ ಬೇಯಲಿಲ್ಲ. ಅವಳು ಜಗಳಕ್ಕೂ ತಯಾರಿದ್ದಳು. ಗೋಬರ, ಸೋನಾ, ರೂಪಾ – ಅಂತೂ ಇಡೀ ಮನೆಯೇ ಹೋರಿರಾಮನ ಕಡೆಗಿತ್ತು. ಆದರೆ ದನಿಯಳೊಬ್ಬಳೇ ಅವರೆಲ್ಲರನ್ನೂ ಸೋಲಿಸಿಬಿಟ್ಟಳು. ಇಂದು ಅವಳಲ್ಲಿ ಒಂದು ವಿಚಿತ್ರ ಆತ್ಮವಿಶ್ವಾಸದ, ಹೋರಿರಾಮನಲ್ಲಿ ವಿಚಿತ್ರ ವಿನಯದ ಉದಯವಾಗಿತ್ತು.

ಊರವರ ಸಂಭ್ರಮಕ್ಕೂ ಮಿತಿ ಇದ್ದಿಲ್ಲ. ದನವು ಪಲ್ಲಕ್ಕಿಯಲ್ಲಿ ಕೂತುಕೊಂಡೇನೂ ಬಂದುದಲ್ಲ. ಇಷ್ಟು ದೊಡ್ಡ ಘಟನೆ ನಡೆದು ಸಹ ಇಡೀ ಊರಲ್ಲಿ ಸಂಭ್ರಮ ನಡೆಯದೆ ಹೇಗೆ ಉಳಿದೀತು? ಸುದ್ದಿ ಕೇಳಿದವರೆಲ್ಲ ತಮ್ಮ ಎಲ್ಲ ಕೆಲಸ ಬಿಟ್ಟು ದನ ನೋಡಲಿಕ್ಕೆ ಓಡಿ ಬಂದರು. ಸಾಮಾನ್ಯ ರೀತಿಯ, ಊರಿನ ದನವಲ್ಲ ಇದು! ಬೋಲನ ಮನೆಯಿಂದ ಎಂಬತ್ತು ರೂಪಾಯಿಗೆ ತಂದುದು! ಆದರೆ ಈ ಹೋರಿರಾಮ ಎಲ್ಲಿಂದ ಎಂಬತ್ತು ರೂಪಾಯಿ ಕೊಟ್ಟಾನು? ಎಲ್ಲಿಯಾದರೂ ೬೦–೭೦ ಕೊಟ್ಟಿರಬಹುದು! ೫೦–೬೦ ರೂಪಾಯಿಯ ದನ ಬಂದುದೇ ಆ ಊರಿನ ಚರಿತ್ರೆಯಲ್ಲಿ ಅಭೂತಪೂರ್ವ ವಿಷಯವಾಗಿತ್ತು. ಐವತ್ತು ರೂಪಾಯಿಯ ಎತ್ತನ್ನಾದರೂ ತಂದವರಿದ್ದಾರೆ. ನೂರು ರೂಪಾಯಿಯದನ್ನೂ ತಂದವರಿದ್ದಾರೆ. ಆದರೆ ದನಕ್ಕೆ ಇಷ್ಟು ದೊಡ್ಡ ಗಂಟು ಕೊಟ್ಟು ಯಾವ ರೈತನು ತಂದು ಸಾಕಿಯಾನು? ಅಷ್ಟೆಲ್ಲ ರೂಪಾಯಿ ಕೊಟ್ಟು ದನ ಸಾಕಲಿಕ್ಕೆ ದೊಡ್ಡ ಗೌಳಿಗರಿಗೆ ಮಾತ್ರ ಸಾಧ್ಯ. ಈ ದನ–ಎಂದರೇನು?– ಸಾಕ್ಷಾತ್ ದೇವಿಯೇ! ನೋಡುವವರ, ಪರೀಕ್ಷಿಸುವವರ, ದೊಡ್ಡ ತಂಡವೇ ನೆರೆದಿತ್ತು. ಹೋರಿರಾಮ ಓಡಿ ಓಡಿ ಅವರಿಗೆಲ್ಲ ಸತ್ಕಾರ ಮಾಡುತ್ತಿದ್ದ. ಇಷ್ಟು ವಿನಮ್ರನಾಗಿ, ಇಷ್ಟು ಪ್ರಸನ್ನಚಿತ್ತನಾಗಿ ಅವನೆಂದೂ ಇದ್ದಿಲ್ಲ.

ಎಪ್ಪತ್ತುವರ್ಷ ಪ್ರಾಯದ ದಾತಾದೀನ್ ಪಂಡಿತರು ಕೋಲೂರಿಕೊಂಡು ಬಂದು ಹಲ್ಲಿಲ್ಲದ ಬಾಯಿಂದ ಕೇಳಿದರು – 'ಎಲ್ಲಿರುವೆ ಹೋರಿರಾಮ? ನಾವು

ಕೂಡ ನಿನ್ನ ದನ ಸ್ವಲ್ಪ ನೋಡಿ ಹೋಗಬಹುದೇ? ಬಹಳ ಚನ್ನಾಗಿದ್ದಾಳೆಂದು ಕೇಳಿದೆ.'

ಹೋರಿರಾಮು ಓಡುತ್ತ ಹೋಗಿ ಅವರಿಗೆ ನಮಸ್ಕಾರ ಮಾಡಿ ಅಭಿಮಾನ ಯುಕ್ತ ಆನಂದದೊಡನೆ ಅವರನ್ನು ಅಂಗಳಕ್ಕೆ ಕರೆತಂದ.

ಪಂಡಿತರು ತಮ್ಮ ಹಳೆಯ ಅನುಭವಯುಕ್ತ ನೇತ್ರಗಳಿಂದ ದನವನ್ನು ಸರಿಯಾಗಿ ನೋಡಿದರು. ಮುಖ, ಕೆಚ್ಚಲು, ಬೆನ್ನು, ಬಾಲ – ಎಲ್ಲವನ್ನೂ ಸರಿಯಾಗಿ ಪರೀಕ್ಷೆ ಮಾಡಿ ಹೇಳಿದರು–'ಯಾವ ದೋಷವೂ ಇಲ್ಲ ಮಗೂ. ತಲೆ, ಬಾಲ, ಎಲ್ಲವೂ ಸರಿಯಾಗಿದೆ. ದೇವರು ಕಣ್ಣು ತೆರೆದರೆ ನಿನ್ನ ಭಾಗ್ಯ ಅರಳೀತು. ಅಂತಹ ಒಳ್ಳೆಯ ಲಕ್ಷಣಗಳಿವೆ. ಹೊಟ್ಟೆಗೆ ಸರಿಯಾಗಿ ಹಾಕಬೇಕು. ಒಂದೊಂದು ಕರುವಿನಲ್ಲಿ ನೂರು ನೂರು ರೂಪಾಯಿ ತೆಗೆಯಬಹುದು.'

ಹೋರಿರಾಮು ಆನಂದ ಸಾಗರದಲ್ಲಿ ಮುಳುಗಿ ಏಳುತ್ತ ಹೇಳಿದ – 'ಎಲ್ಲ ತಮ್ಮಂತಹರ ಆಶೀರ್ವಾದ ಪಂಡಿತರೇ.'

ಪಂಡಿತರು ಬಾಯಿಯಲ್ಲಿದ್ದ ವೀಳ್ಯದೆಲೆಯ ರಸವನ್ನು ಅಂಗಳದ ಒಂದು ಬದಿಯಲ್ಲಿ ಉಗುಳುತ್ತ ಹೇಳಿದರು – 'ನನ್ನ ಆಶೀರ್ವಾದವಲ್ಲ ಮಗೂ – ಎಲ್ಲ ದೇವರ ದಯ ! ಆ ಪರಮಾತ್ಮನ ದಯ ! ಈಗ, ರೂಪಾಯಿ ನಗದಾಗಿ ಕೊಟ್ಟೆಯಾ ?'

ಹೋರಿರಾಮು ಲಕ್ಷ್ಯವಿಲ್ಲದೆ ಹಾರಿಸಿ ಬಿಟ್ಟ. ಸಾಲಗಾರರ ಮುಂದೆ ತನ್ನ ಸಮೃದ್ಧಿ ಪ್ರದರ್ಶನದ ಸುಸಂದರ್ಭ ಬಂದಾಗಲೂ ಅವನೆಂತು ಬಿಟ್ಟಾನು ? ಹಾಗಾಗಿ ಹೇಳಿದ – 'ಬೋಲಣ್ಣನೇನು ಸಾಮಾನ್ಯ ಮನುಷ್ಯನೆಂದು ತಿಳಿದಿರುವಿರೇ ? ಸರಿ – ನನದಾಗಿ ತೆಗೆದುಕೊಂಡೇ ಬಿಟ್ಟ !'

ಸಾಲಗಾರರ ಮುಂದೆ ಹೋರಿರಾಮು ಈ ರೀತಿ ಬೂಟಾಟಿಕೆ ತೋರಿಸಿದ್ದು ಒಂದು ರೀತಿಯಿಂದ ಹೆಡ್ಡುತನದ ಕೆಲಸವಾಯಿತು. ಆದರೆ ಪಂಡಿತರ ಮುಖದಲ್ಲಿ ಬೇಸರದ ಯಾವ ಚಿನ್ಹೆಯೂ ತೋರಿ ಬರಲಿಲ್ಲ. ಇವನ ಹೇಳಿಕೆಯಲ್ಲಿ– ಎಷ್ಟು ಸತ್ಯ, ಎಷ್ಟು ಸುಳ್ಳು, ಎಂಬಂಶ ಅವರ ಅನುಭವಪೂರ್ಣ ದೃಷ್ಟಿಗಳಿಂದ ಮರೆಮಾಜುವುದು ಕಷ್ಟ.

ಅವರು ಪ್ರಸನ್ನಮುಖದಿಂದಲೇ–'ಆಯಿತಪ್ಪಾ, ಏನೂ ತೊಂದರೆಯಿಲ್ಲ. ದೇವರು ಒಳ್ಳೇದು ಮಾಡಲಿ. ಕರು ಕುಡಿದಾದ ಮೇಲೂ, ಐದಾರು ಸೇರು ಹಾಲು ಸಿಗುವುದರಲ್ಲಿ ಸಂದೇಹವಿಲ್ಲ' ಎಂದರು.

ದನಿಯಳು ಒಡನೆಯೇ ಮಾತು ಸೇರಿಸಿದಳು – 'ಅಯ್ಯೋ, ಪಂಡಿತರೇ– ಅಷ್ಟು ಹಾಲು ಎಲ್ಲಿಂದ ಬಂದೀತು ? ಮುದುಕಿಯಾಗಿದ್ದಾಳೆಂದು ತೋರುತ್ತದೆ. ಆದಲ್ಲದೆ ಆವಳಿಗಾಗುವ ಮೇವು ಹಾಕಲಿಕ್ಕೆ ನಮ್ಮಲ್ಲೆಲ್ಲಿದೆ ?'

ದಾತಾದೀನ್ ಪಂಡಿತರು ಗುಟ್ಟು ತಿಳಿಯುವ ದೃಷ್ಟಿಯಿಂದ ನೋಡಿ ಆವಳ ದೀರ್ಘಾಲೋಚನೆಯನ್ನು ತಿಳಿದುಕೊಂಡರು. ಇದೇ ಗೃಹಿಣಿಯರ ಸರಿಯಾದ ಧರ್ಮ – ಇದ್ದುದನ್ನು ಆದಷ್ಟು ಮರೆ ಮಾಡಿಕೊಂಡಿರುವುದೇ ಉತ್ತಮ–ಎಂದು ಆವರು ಮನಸ್ಸಿನಲ್ಲಿಯೇ ಯೋಚಿಸಿಕೊಂಡು ಹೇಳಿದರು – 'ಆದರೆ ಹೊರಗೆ ಮಾತ್ರ ಕಟ್ಟಬೇಡಿ. ಅಷ್ಟು ಮಾತ್ರ ಹೇಳುತ್ತೇನೆ.'

ಆಗ ದನಿಯಳು ಜಯಶೀಲ ನೇತ್ರಗಳಿಂದ ಗಂಡನತ್ತ ನೋಡುವಾಗ – ಈಗಲಾದರೂ ಗೊತ್ತಾಯಿತೇ – ಎಂದು ಸೂಚಿಸುವಳೋ ಎಂಬಂತಿತ್ತು.

ಬಳಿಕ ಅವಳು ಪಂಡಿತರೊಡನೆ ಹೇಳಿದಳು – 'ಹೌದು ಪಂಡಿತರೇ, ಹೊರಗೇಕೆ ಕಟ್ಟಬೇಕು ? ದೇವರು ನಡೆಸಿದರೆ ಈ ಅಂಗಳದಲ್ಲೇ ಇನ್ನೂ ಮೂರು ದನಗಳನ್ನು ಕಟ್ಟಬಹುದು.'

ಇಡೀ ಊರೇ ದನ ನೋಡಲಿಕ್ಕೆ ಬಂದಿತ್ತು. ಬಾರದವರೆಂದರೆ ಸೋಬ ಮತ್ತು ಹೀರ. ಅವರು ಹೋರಿರಾಮನ ಖಾಸಾ ತಮ್ಮಂದಿರು. ಹೋರಿರಾಮನ ಹೃದಯದಲ್ಲಿ ಈಗಲೂ ತಮ್ಮಂದಿರನ್ನು ಕುರಿತು ಕೋಮಲ ಭಾವವಿತ್ತು. ಅವರಿಬ್ಬರೂ ಬಂದು ನೋಡಿ ಪ್ರಸನ್ನರಾಗುತ್ತಿದ್ದರೆ ಅವನ ಅಭಿಲಾಷೆ ಸಂಪೂರ್ತಿಯಾಗುತಿತ್ತು. ಸಾಯಂಕಾಲವಾಯಿತು. ಇಬ್ಬರೂ ನೇಗಿಲುಗಳನ್ನು ಹಿಡಿದುಕೊಂಡು ಆ ದಾರಿಯಾಗಿಯೇ ಹೋದರು. ಆದರೆ ಒಳಗೆ ಬರಲೂ ಇಲ್ಲ, ಕೇಳಲೂ ಇಲ್ಲ.

ಹೋರಿರಾಮ ಸ್ವಲ್ಪ ಸಂದೇಹಯುಕ್ತ ಸ್ವರದಿಂದ ಹೇಳಿದ – 'ಹೀರ, ಸೋಬ, ಬರಲೇ ಇಲ್ಲ. ಅವರಿಗೆ ಗೊತ್ತೇ ಇಲ್ಲವೋ ಏನೋ ?'

ದನಿಯಳೆಂದಳು – 'ಅವರನ್ನು ಕರೆಯಲಿಕ್ಕೆ ಹೋಗಬೇಕೆ ?'

'ನನ್ನ ಮಾತು ನೀನು ಅರ್ಥವೇ ಮಾಡಿಕೊಳ್ಳುವುದಿಲ್ಲವಲ್ಲ ? ಸುಮ್ಮನೆ ಜಗಳಕ್ಕೆ ಬರುತ್ತಿ. ದೇವರು ಇಂತಹ ಸೌಭಾಗ್ಯ ಕೊಟ್ಟ ಮೇಲೆ ನಾವು ತಲೆ ತಗ್ಗಿಸಿಯೇ ನಡೆಯಬೇಕು. ಮನುಷ್ಯ ತನ್ನ ಸಂಬಂಧಿಕರ ಬಾಯಿಂದ ಒಳ್ಳೇದು ಕೆಟ್ಟದು ಕೇಳ ಬಯಸಿದಷ್ಟು, ಹೊರಗಿನವರ ಬಾಯಿಂದ ಕೇಳ ಬಯಸುವುದಿಲ್ಲ. ಸಾವಿರಗಟ್ಲೆ ತಪ್ಪು ಮಾಡಿದರೂ ತಮ್ಮನು ತಮ್ಮನೇ

ಅಲ್ಲವೇ? ತಮ್ಮ ಪಾಲಿನ ಆಸ್ತಿಪಾಸ್ತಿಗಾಗಿ ಎಲ್ಲರೂ ಜಗಳ ಮಾಡಿಯೇ ಮಾಡುತ್ತಾರೆ. ಅದರಿಂದ, ಒಂದಾಗಿರುವ ರಕ್ತ ಬೇರೆಯಾದೀತೇ? ಆದ್ದರಿಂದ ಇಬ್ಬರನ್ನೂ ಕರೆದು ತೋರಿಸಲೇ ಬೇಕು. ಇಲ್ಲವಾದರೆ – ದನ ತಂದರು; ಆದರೆ ತಮಗೆ ಒಂದು ಮಾತು ಸಹ ಹೇಳಲೇ ಇಲ್ಲ – ಎಂಬುದಾಗಿ ಆ ಮೇಲೆ ಹೇಳಿಯಾರು.'

ದನಿಯಳು ಮುಖ ತಿರುಗಿಸಿ ಹೇಳಿದಳು – 'ನಾನು ನಿಮ್ಮೊಡನೆ ನೂರು ಸಲ, ಸಾವಿರ ಸಲ, ಹೇಳಿಯಾಯಿತು. ನಿಮ್ಮ ತಮ್ಮಂದಿರನ್ನು ನನ್ನ ಇದರಲ್ಲಿ ಹೊಗಳುವುದು ಬೇಡ. ಅವರ ಹೆಸರು ಕೇಳಿದೊಡನೆ ನನ್ನ ರಕ್ತವೇ ಕುದಿಯುತ್ತದೆ. ಇಡೀ ಊರಿನವರಿಗೆ ಗೊತ್ತಾಗಿದೆಯಂತೆ; ಅವರಿಗೆ ಮಾತ್ರ ವರ್ತಮಾನ ಸಿಕ್ಕಿಲ್ಲ, ಅಲ್ಲವೇ? ಅಥವಾ ಅವರು ಇರುವುದಾದರೂ ಅಷ್ಟು ದೂರದಲ್ಲಲ್ಲ. ಇಡೀ ಊರೇ ನೋಡಲಿಕ್ಕೆ ಬಂದಿದೆ. ಅವರಿಬ್ಬರ ಕಾಲಿಗೆ ವಾತ ಹಿಡಿದಿರುವಾಗ ಬರುವುದೆಂದರೆ ಹೇಗೆ? ನಮ್ಮ ಮನೆಗೆ ದನ ಬಂತೆಂದು ಕೇಳಿ ಹೊಟ್ಟೆಕಿಚ್ಚಾಗಿರಬೇಕು ಅವರಿಗೆ; ಎದೆ ಒಡೆದು ಹೋಗಿರಬೇಕು.'

ದೀಪ ಹಚ್ಚುವ ಸಮಯವಾಯಿತು. ದನಿಯಳು ಹೋಗಿ ನೋಡುವಾಗ ಬಾಟ್ಲಿಯಲ್ಲಿ ಸೀಮೆ ಎಣ್ಣೆ ಇದ್ದಿಲ್ಲ. ಬಾಟ್ಲಿ ತೆಗೆದುಕೊಂಡು ಎಣ್ಣೆ ತರಲಿಕ್ಕೆ ತಾನೇ ಹೊರಟಳು. ಹಣ ಇದ್ದಿದ್ದರೆ ರೂಪಳನ್ನು ಕಳುಹಿಸಬಹುದಿತ್ತು. ಈಗ ಕಡ ತರಬೇಕು. ಅಂಗಡಿಗೆ ಹೋಗಿ ಸಾಹುಕಾರ್ತಿಯ ಮುಖ ನೋಡಿ, ಏನಾದರೂ ರಾಗ ಮಾತಾಡಿದ ಮೇಲೆಯೇ ಕಡ ಸಿಗುತ್ತಿತ್ತು.

ಆಗ ಹೋರಿರಾಮ ರೂಪಳನ್ನು ಕರೆದು ಪ್ರೀತಿಯಿಂದ ತೊಡೆಯ ಮೇಲೆ ಕೂರಿಸಿ ಹೇಳಿದ – "ಸ್ವಲ್ಪ ಹೊರಗೆ ಹೋಗಿ ಹೀರಾ ಚಿಕ್ಕಪ್ಪ ಬಂದಿದ್ದಾನೆಯೇ – ಎಂದು ನೋಡಿ ಬರುವೆಯಾ? ಸೋಬ ಚಿಕ್ಕಪ್ಪನನ್ನೂ ನೋಡಿಬಿಟ್ಟು ಬಾ – ಅಪ್ಪ ನಿಮ್ಮನ್ನು ಬರಹೇಳಿದ್ದಾರೆ – ಎಂದು ಹೇಳು. ಬಾರದಿದ್ದರೆ ಕೈಹಿಡಿದು ಕರೆದುಕೊಂಡು ಬರಬೇಕು."

ರೂಪಳು ಥಟ್ಟನೆ ಉತ್ತರವಿತ್ತಳು – 'ಕಿರಿಯ ಚಿಕ್ಕಮ್ಮ ನನ್ನನ್ನು ಗದರಿಸುತ್ತಾಳೆ.'

'ಅವಳ ಹತ್ತಿರ ನೀನೇಕೆ ಹೋಗುವುದು? ಆದರೆ ಸೋಃಖಿ ಚಿಕ್ಕಮ್ಮ ನಿನ್ನನ್ನು ಬಹಳ ಪ್ರೀತಿಸುತ್ತಾಳಲ್ಲ?'

'ಆದರೆ ಸೋಬ ಚಿಕ್ಕಪ್ಪ ನನ್ನನ್ನು ಹೆದರಿಸುತ್ತಾರೆ. ಅವರು ಹೇಳು

ತ್ತಾರೆ . . . . ಇಲ್ಲ, ನಾನು ಹೇಳುವುದಿಲ್ಲ.'

'ಆಗಲಿ – ಏನು ಹೇಳುತ್ತಾನೆ ? ಹೇಳು.'

'ಹೆದರಿಸುತ್ತಾರೆ.'

'ಏನು ಹೇಳಿ ಹೆದರಿಸುತ್ತಾನೆ?'

'ನನ್ನನ್ನು ಕಂಡೊಡನೆಯೇ – ನಿನಗಾಗಿ ಒಂದು ಇಲಿ ಹಿಡಿದಿಟ್ಟದ್ದೇನೆ. ಕೊಂಡುಹೋಗಿ ಹುರಿದು ತಿನ್ನು – ಅಂತ ಹೇಳುತ್ತಾರೆ.'

ಹೋರಿರಾಮನಿಗೆ ಮನಸ್ಸಿನೊಳಗೇ ನಗು ಬಂತು—'ನೀನು ಹೇಳಬೇಕಿತ್ತು – ಮೊದಲು ನೀನು ತಿಂದು ತೋರಿಸು ; ಮತ್ತೆ ನಾನು ತಿನ್ನುತ್ತೇನೆ – ಎಂಬುದಾಗಿ' ಎಂದ ಅವನು.

'ಅಮ್ಮ – ಅವರ ಮನೆಗೆ ಹೋಗುವುದೇ ಬೇಡ – ಎನ್ನುತ್ತಾಳೆ.'

'ನೀನು ಅಮ್ಮನ ಮಗಳೇ ? ಅಲ್ಲ – ಅಪ್ಪನ ಮಗಳೇ ?'

ರೂಪಳು ಅವನ ಹೆಗಲ ಮೇಲೆ ಕೈಹಾಕಿ 'ಅಮ್ಮನ ಮಗಳು' ಎನ್ನುತ್ತಾ ನಗಲಾರಂಭಿಸಿದಳು.

'ಹಾಗಾದರೆ ನನ್ನ ತೊಡೆಯಿಂದ ಇಳಿದು ಹೋಗು. ಇನ್ನು ನೀನು ನನ್ನ ಬಟ್ಟಲಲ್ಲಿ ಊಟ ಸಹ ಮಾಡಬಾರದು.'

ಮನೆಯಲ್ಲಿ ಹೂವಿನ ಚಿತ್ರವಿದ್ದ ಬಟ್ಟಲು ಒಂದೇ ಇತ್ತು. ಹೋರಿರಾಮನ ಊಟ ಆ ಬಟ್ಟಲಲ್ಲಿ. ಆ ಹೂವಿನ ಬಟ್ಟಲಲ್ಲಿ ಉಣ್ಣುವ ಗೌರವ ಬರುವುದಕ್ಕಾಗಿ ರೂಪಳು ಹೋರಿರಾಮನೊಡನೆ ಊಟ ಮಾಡುತ್ತಿದ್ದಳು. ಆವಳು ಆ ಹೆಮ್ಮೆಯನ್ನು ಹೇಗೆ ಬಿಟ್ಟುಕೊಟ್ಟಾಳು ! ಹಾಗಾಗಿ ತಲೆಯಾಡಿಸಿ ಹೇಳಿದಳು, 'ಅಲ್ಲ, ನಿಮ್ಮ ಮಗಳು.'

'ಹಾಗಾದರೆ ನನ್ನ ಮಾತು ಕೇಳುವೆಯಾ ? ಅಲ್ಲ, ಅಮ್ಮನ ಮಾತು ಕೇಳುವೆಯಾ ?'

'ನಿಮ್ಮ ಮಾತು.'

'ಹಾಗಾದರೆ ಹೋಗಿ ಹೀರ ಮತ್ತು ಸೋಬನನ್ನು ಎಳೆದುಕೊಂಡು ಬಾ.'

'ಆಗ – ಅಮ್ಮನೆಲ್ಲಿಯಾದರೂ ಗದರಿಸಿದರೆ ?'

'ಅವಳಿಗೆ ಯಾರು ಹೇಳಹೋಗುವರು ?'

ರೂಪಳು ಹಾರಿಕೊಂಡು ಹೀರನ ಮನೆಗೆ ಓಡಿದಳು. ದ್ವೇಷದ ಮಾಯಾ ಜಾಲದಲ್ಲಿ ದೊಡ್ಡ ಮೀನುಗಳೇ ಸಿಕ್ಕಿ ಬೀಳುವುದು. ಚಿಕ್ಕ ಮೀನುಗಳು ಆ

ಬಲೆಯಲ್ಲಿ ಬೀಳುವುದೇ ಇಲ್ಲ; ಬಿದ್ದರೂ ಜಾರಿಬಿಡುತ್ತವೆ. ಘಾತಕವಾದ ಆ ಜಾಲವು ಅವಳ ಮಟ್ಟಿಗೆ ಆಟದ ವಸ್ತುವಾಗಿತ್ತು, ಭಯದ್ದಲ್ಲ. ಹೋರಿರಾಮ ಮತ್ತು ಸಹೋದರರೊಳಗೆ ಸರಿಯಾದ ಮಾತುಕತೆ ಈಗ ಇದ್ದಿಲ್ಲ. ಆದರೆ ರೂಪ ಮಾತ್ರ ಎರಡೂ ಮನೆಗೆ ಹೋಗಿ ಬರುತ್ತಿದ್ದಳು. ಮಕ್ಕಳೊಡನೆ ಎಂಥ ವೈರ?

ಆದರೆ ರೂಪಳು ಮನೆಯಿಂದ ಹೊರಟಿದ್ದಳು ಮಾತ್ರ. ದನಿಯಳು ಸೀಮೆ ಎಣ್ಣೆ ತೆಗೆದುಕೊಂಡು ಇದಿರುಬರುತ್ತಿದ್ದಳು. ಅವಳು ಕೋಪದಿಂದ ರೂಪಳನ್ನು ಕೇಳಿದಳು – 'ಕತ್ತಲೆಯ ಹೊತ್ತಿಗೆ ಎಲ್ಲಿಗೆ ಹೊರಟಿರುವೆ? ಈಗ ನೀನು ಯಾರನ್ನು ಕರೆಯಲಿಕ್ಕೂ ಹೋಗಬೇಕಾಗಿಲ್ಲ. ನಡೆ ಮನೆಗೆ.' ರೂಪಳಿಗೆ ತಾಯಿಗೆ ವಿರುದ್ಧವಾಗಿ ಹೋಗುವ ಧೈರ್ಯ ಬರಲಿಲ್ಲ.

ತಾಯಿಯು ಮಗಳ ಕೈ ಹಿಡಿದುಕೊಂಡು ಮನೆಗೆ ಬಂದಳು. ಬಂದವಳೇ ಗಂಡನತ್ತ ಕಣ್ಣರಳಿಸಿ ಹೇಳಿದಳು – 'ನಾನು ನಿಮ್ಮ ಹತ್ತಿರ ಸಾವಿರ ಸರ್ತಿ ಹೇಳಿದೆ. ನನ್ನ ಮಕ್ಕಳನ್ನು ಇನ್ನೊಬ್ಬರ ಮನೆಗೆ ಕಳಿಸಬೇಡಿ–ಎಂಬುದಾಗಿ. ಅಷ್ಟು ಪ್ರೇಮವಿದ್ದಲ್ಲಿ ನೀವೇ ಹೋಗಿ ಏಕೆ ಕರೆದುಕೊಂಡು ಬರಬಾರದು? ನಿಮಗೆ ಹೊಟ್ಟೆ ತುಂಬಿಸಲಿಕ್ಕೆ ಈಗಲೇ ಸಮಯವಾಗಿಲ್ಲ!'

ಹೋರಿರಾಮ ದನ ಕಟ್ಟಲಿಕ್ಕೆ ಸ್ಥಳ ಸರಿಮಾಡುತ್ತಿದ್ದ. ಕೈಗೆ ಕೆಸರಾಗಿತ್ತು. ಅವನು ಏನೂ ತಿಳಿಯದವನಂತೆ ಹೇಳಿದ – 'ಯಾವ ವಿಚಾರದಲ್ಲಿ ನೀನು ಗಲಾಟೆ ಮಾಡುತ್ತಿರುವೆಯಪ್ಪಾ? ಕುರುಡ ಗಾಳಿಯನ್ನು ಊದುತ್ತಿರುವಂತಾಗಿದೆಯಲ್ಲ – ನಿನ್ನ ಕತೆ?'

ದನಿಯಳಿಗೆ ದೀಪಕ್ಕೆ ಎಣ್ಣೆ ಹಾಕಲಿಕ್ಕಿತ್ತು. ಆದ್ದರಿಂದ ಆಗ ಚರ್ಚೆ ಮಾಡಲಿಕ್ಕೆ ಅವಳಿಗೆ ಸಮಯವಿದ್ದಿಲ್ಲ. ರೂಪಳು ಮಕ್ಕಳೊಡನೆ ಆಟಕ್ಕೆ ಹೋಗಿ ಸೇರಿದಳು.

ರಾತ್ರಿ ಒಂದು ಜಾವ ದಾಟಿತು. ಅಷ್ಟರಲ್ಲಿ ಹೊಸ ಹಟ್ಟಿಯ ಕೆಲಸ ಮುಗಿಯಿತು. ಅಕ್ಕಚ್ಚು ಹಸೆಹುಲ್ಲು – ಎಲ್ಲ ಹಾಕಿದ್ದರೂ ದನವು ಮಾತ್ರ, ಹೊಸದಾಗಿ ಮಾವನ ಮನೆ ಸೇರಿದ ಸೊಸೆಯಂತೆ ಉದಾಸೀನವಾಗಿತ್ತು. ಹುಲ್ಲಿಗೆ ಬಾಯಿ ಕೂಡ ಹಾಕುತ್ತಿದ್ದಿಲ್ಲ. ಹೋರಿರಾಮ ಮತ್ತು ಗೋಬರ ಅರ್ಧ ತಿಂದ ರೊಟ್ಟಿಯನ್ನು ಹಿಡಿದುಕೊಂಡು ಬಂದರು. ಆದರೆ ದನವು ಅದನ್ನು ಮೂಸಿ ಕೂಡ ನೋಡಲಿಲ್ಲ. ಇದೊಂದು ದೊಡ್ಡ ವಿಷಯವೇನಲ್ಲ. ದನಗಳಿಗೂ ಮನೆ ಬಿಟ್ಟ ವ್ಯಸನ ಇದ್ದೇ ಇರುತ್ತದೆ.

ಹೊರಗೆ ಮಂಚದ ಮೇಲೆ ಕೂತುಕೊಂಡು ಗುಡುಗುಡಿ ಸೇದಲಾರಂಭಿಸಿದಾಗ ಹೋರಿರಾಮನಿಗೆ ಪುನಃ ಸಹೋದರರ ನೆನಪಾಯಿತು. ಇಂದಿನಂಥ ಶುಭಸಂದರ್ಭದಲ್ಲಿ ಅವನು ತನ್ನ ಸಹೋದರರ ಉಪೇಕ್ಷೆ ಮಾಡಲಾರ. ಅವನ ಹೃದಯವು ಈ ಹೊಸ ವೈಭವದಿಂದ ವಿಶಾಲವಾಗಿತ್ತು. ಸಹೋದರರಿಂದ ಬೇರೆಯಾಗಿದ್ದರೆ ತಾನೆ ಏನಾಯಿತು? ಅವರೇನೂ ವೈರಿಗಳಲ್ಲವಲ್ಲ! ಇದೇ ದನ ಮೂರು ವರ್ಷಗಳ ಮೊದಲು ಬಂದಿದ್ದರೆ ಅವರೆಲ್ಲರೂ ಈ ದನದ ಸಮಾನಾಧಿಕಾರಿಗಳಾಗುತ್ತಿದ್ದಿಲ್ಲವೇ? ಅಥವಾ ನಾಳೆಯಿಂದ ದನ ಹಾಲು ಕೊಡಲಾರಂಭಿಸಿದರೆ ಆಗಾಗ್ಗೆ ತಮ್ಮಂದಿರ ಮನೆಗೆ ಅವನು ಹಾಲು ಕಳುಹಿಸದೆ ಇರುವನೇ? ಅವನ ಧರ್ಮಮಾರ್ಗ ಕುಟಿಲ ರೀತಿಯುದಲ್ಲ. ಅಥವಾ ಅವರು ಕೇಡು ಎಣಿಸಿದರೂ ಇವನೇಕೆ ಎಣಿಸಬೇಕು? ಅವರವರ ಕರ್ಮಕ್ಕೆ ಅವರವರು ಹೋಗುತ್ತಾರೆ!

ಅವನು ಹೊಗೆಬತ್ತಿಯನ್ನು ಕೆಳಗಿಟ್ಟು ಹೀರನ ಮನೆಯತ್ತ ಹೊರಟ. ಸೋಬನ ಮನೆಯೂ ಅಲ್ಲೇ ಹತ್ತಿರವೇ ಇತ್ತು. ಇಬ್ಬರೂ ಅವರವರ ಮನೆ ಬಾಗಿಲಲ್ಲಿ ಮಲಗಿದ್ದರು. ಸಾಕಷ್ಟು ಕತ್ತಲೆಯೂ ಇತ್ತು. ಹೋರಿರಾಮ ಬಂದುದು ಅವರಿಗೆ ಗೊತ್ತಾಗಲಿಲ್ಲ. ಇಬ್ಬರೊಳಗೆ ಏನೋ ಮಾತುಕತೆಯಾಗುತ್ತಿತ್ತು. ಹೋರಿರಾಮ ಅಲ್ಲೇ ನಿಂತು ಅವರ ಮಾತುಕತೆಗೆ ಕಿವಿ ಕೊಟ್ಟ. ಯಾರಿಗೆ ತಾನೆ ಸ್ವವಿಚಾರದ ಚರ್ಚೆ ಕೇಳಲಿಕ್ಕೆ ಕುತೂಹಲವಿರುವುದಿಲ್ಲ?

ಹೀರ ಹೇಳುತ್ತಿದ್ದ –'ನಾವು ಒಟ್ಟಾಗಿ ಇರುವವರೆಗೆ ಒಂದು ಆಡು ಸಹ ತೆಗೆಯಲಿಲ್ಲ. ಈಗ ಮಾತ್ರ ಇಂಗ್ಲಿಶ್ ದನ ತಂದಿದ್ದಾನೆ. ಆದರೆ ತಮ್ಮಂದಿರ ದುಡ್ಡು ಒಳ ಹಾಕಿ ಯಾರೂ ಒಳ್ಳೇದಾದುದನ್ನು ನಾನು ನೋಡಿಲ್ಲ.'

ಆಗ ಸೋಬ ಹೇಳಿದ –'ಎಂಥ ಅನ್ಯಾಯದ ಮಾತಾಡುತ್ತಿರುವೆ ಹೀರಾ? ಅಣ್ಣ ಒಂದೊಂದು ಪೈಯ ಲೆಕ್ಕವನ್ನೂ ಕೊಟ್ಟಿದ್ದ. ಅವನು ಮೊದಲಿಂದಲೇ ಹಣ ಗಂಟು ಕಟ್ಟಿಟ್ಟಿದ್ದನೆಂದು ನಾನು ಒಪ್ಪಲಾರೆ.'

'ನೀನು ಒಪ್ಪು – ಒಪ್ಪದಿರು. ಈ ಹಣ ಮಾತ್ರ ಮೊದಲಿನ ಸಂಪಾದನೆ. ಅದು ಖಂಡಿತ.'

'ಯಾರ ಮೇಲೂ ಸುಳ್ಳು ಅಪರಾಧ ಹೊರಿಸಬಾರದು.'

'ಹಾಗಾದರೆ ಈ ರೂಪಾಯಿ ಎಲ್ಲಿಂದ ಬಂತು? ಈ ಹಣದ ಮಳೆ

ಎಲ್ಲಿಂದ ಬಂತು? ಅವನಷ್ಟೇ ಗದ್ದೆ ನಮಗೂ ಇದೆ. ನಮ್ಮ ಕೈಯಲ್ಲಿ ಏಕೆ ಹೆಣ ಸುಡಲಿಕ್ಕೂ ಒಂದು ಕಾಸು ಉಳಿಯುವುದಿಲ್ಲ? ಅವನಷ್ಟೇ ಉತ್ಪತ್ತಿ ನಮಗೂ ಇದೆ. ಅವನ ಮನೆಗೆ ಮಾತ್ರ ಏಕೆ ದನ ಬಂತು?'

'ಸಾಲ ತಂದಿರಬೇಕು.'

'ಹೌದೌದು. ಬೋಲನೇ ಸಾಲ ಕೊಡುವವನು?'

'ಅದೇನೇ ಆಗಲಿ. ದನವೇನೋ ಬಹಳ ಚನ್ನಾಗಿದೆ. ಗೋಬರ ಹೊಡೆದು ಕೊಂಡು ಬರುವಾಗ ದಾರಿಯಲ್ಲಿ ನೋಡಿದೆ.'

'ಮೋಸದ ಹಣ ಹೇಗೆ ಬರುತ್ತದೋ – ಹಾಗೆಯೇ ಹೋಗುತ್ತದೆ. ದೇವರು ಮನಸ್ಸು ಮಾಡಿದರೆ ಹೆಚ್ಚು ದಿನ ದನ ಮನೆಯಲ್ಲಿ ಉಳಿಯಲಿಕ್ಕಿಲ್ಲ.'

ಹೋರಿರಾಮನಿಗೆ ಇದಕ್ಕಿಂತ ಹೆಚ್ಚಿಗೆ ಕೇಳಲಾಗಲಿಲ್ಲ. ಹಿಂದಿನ ವಿಚಾರಗಳನ್ನೆಲ್ಲ ಮರೆತು ಬಿಟ್ಟು, ಅವನು ತನ್ನ ಹೃದಯದಲ್ಲಿ ಸ್ನೇಹ-ಸೌಹಾರ್ದಗಳನ್ನು ತುಂಬಿ ಸಹೋದರರ ಹತ್ತಿರ ಬಂದಿದ್ದ. ಆದರೆ ಈ ಆಘಾತ ಅವನ ಹೃದಯವನ್ನು ಒಡೆದುಬಿಟ್ಟಂತಾಗಿತ್ತು. ಆ ದ್ವೇಷದ ಪ್ರವಾಹವು ಹುಲ್ಲು ಸೊಪ್ಪುಗಳಿಂದ ತಡೆದು ನಿಲ್ಲಿಸಲು ಸಾಧ್ಯವಾಗುವಂತಹದಲ್ಲ. ಒಮ್ಮೆ ಅವನಿಗೆ, ಈ ಮಾತಿಗೆ ಸರಿಯಾದ ಉತ್ತರ ಕೊಡಬೇಕೆಂದು ತೋರಿ ಬಂತು. ಆದರೆ ಮಾತು ಮೇಲೆ ಮೇಲೆ ಬೆಳೆದು ಹೋಗಬಹುದೆಂದು ಸುಮ್ಮನಾದ. ಆದರೆ ತನ್ನ ಅಂತಃಕರಣ ಸರಿಯಾಗಿದ್ದರೆ ತಾನು ಯಾರಿಗೇಕೆ ಹೆದರಬೇಕು? ದೇವರ ದೃಷ್ಟಿಯಲ್ಲಿ ಅವನು ನಿರ್ದೋಷಿ. ಅವನು ಹಾಗೇ ಹಿಂದಿರುಗಿ ಹೊರಟು ಬಿಟ್ಟ. ಬಂದು ಪುನಃ ಹೊಗೆಬತ್ತಿ ಸೇದಲಾರಂಭಿಸಿದ. ಆದರೆ ಬೇಸರದ ವಿಷವು ಮಾತ್ರ ಪ್ರತಿ ಕ್ಷಣವೂ ಅವನ ನರನಾಡಿಗಳಲ್ಲಿ ಹರಿದು ಹೋಗುತ್ತಿತ್ತು. ಅವನು ಮಲಗಿ ನಿದ್ರಿಸಲು ಯೋಚಿಸಿದ. ಆದರೆ ನಿದ್ದೆ ಬರಲಿಲ್ಲ. ಎತ್ತುಗಳ ಬಳಿಗೆ ಹೋಗಿ ಅವನ್ನು ಮಾಲೀಸು ಮಾಡಿದ. ಆದರೂ ಬೇಸರ ಕಡಮೆಯಾಗಲಿಲ್ಲ. ಮತ್ತೆ ಪುನಃ ಬಂದು ಒಂದು ಹೊಗೆಬತ್ತಿ ಹಿಡಿಸಿ ಸೇದಲಾರಂಭಿಸಿದ. ಆದರೆ ಅದರಲ್ಲಿ ರುಚಿಯೇ ಇದ್ದಿಲ್ಲ. ಆ ವಿಷವು ಅವನ ಚೇತನಶಕ್ತಿಯನ್ನೇ ಉಡುಗಿಸಿ ಬಿಟ್ಟಂತಾಗಿತ್ತು. ಆ ಅರೆಹುಚ್ಚಿನ ಪರಿಸ್ಥಿತಿಯಲ್ಲೇ ಅವನು ಒಳಗೆ ಹೋದ. ಬಾಗಿಲು ತೆರೆದೇ ಇತ್ತು. ಒಳ ಅಂಗಳದ ಒಂದು ಬದಿಯಲ್ಲಿ ಚಾಪೆಯ ಮೇಲೆ ಮಲಗಿದ್ದ ಧನಿಯಳು ಸೋನೆಯ ಮೂಲಕ ಕಾಲು ಒತ್ತಿಸಿಕೊಳ್ಳುತ್ತಿದ್ದಳು. ಯಾವಾಗಲೂ ಕತ್ತ

ಲಾದೊಡನೆ ಗೊರಕೆ ಹೊಡೆಯುತ್ತಿದ್ದ ರೂಪಳು ಇಂದು ಎಚ್ಚರವಿದ್ದು ದನದ ಮುಖ ತುರಿಸುತ್ತಿದ್ದಳು.

ಹೋರಿರಾಮ ದರದರನೆ ಹೋಗಿ ದನದ ಹಗ್ಗವನ್ನು ಗೂಟದಿಂದ ಬಿಡಿಸಿದ. ಹಾಗೆಯೇ ದನವನ್ನು ಬಾಗಿಲ ಹತ್ತಿರ ಎಳೆದುಕೊಂಡು ಹೊರಟ. ದನವನ್ನು ಆಗಲೇ ಬೋಲನ ಮನೆಯಲ್ಲಿ ಬಿಟ್ಟು ಬರುವ ದೃಢ ನಿಶ್ಚಯವನ್ನು ಅವನು ಮಾಡಿದ್ದ. ಇಷ್ಟು ದೊಡ್ಡ ಕಳಂಕದ ಹೊರೆಯನ್ನು ಕಟ್ಟಿಕೊಂಡು ಆತ ದನವನ್ನು ತನ್ನ ಮನೆಯಲ್ಲಿಟ್ಟುಕೊಳ್ಳಲು ಬಯಸಲಿಲ್ಲ. ಎಷ್ಟಕ್ಕೂ ಅದು ಬೇಡ – ಎಂದಾಗಿತ್ತು.

ಆಗ ದನಿಯಾ ಕೇಳಿದಳು – 'ಈ ಕಾಳ ರಾತ್ರಿಯಲ್ಲಿ ದನ ಬಿಡಿಸಿಕೊಂಡು ಎಲ್ಲಿಗೆ ಹೋಗುವಿರಿ ?'

ಒಂದು ಹೆಜ್ಜೆ ಮುಂದಿಟ್ಟು – 'ಇವಳನ್ನು ಬೋಲನ ಮನೆಗೇ ಹಿಂದೆ ಕರೆದುಕೊಂಡು ಹೋಗುತ್ತೇನೆ' ಎಂದ ಹೋರಿರಾಮ.

ಆಗ ದನಿಯಳಿಗೆ ವಿಸ್ಮಯವಾಯಿತು. ಎದ್ದು, ಅಡ್ಡ ಬಂದು ಹೇಳಿದಳು – 'ಹಿಂದಕ್ಕೇಕೆ ಬಿಟ್ಟು ಬರುವುದು ? ಹಿಂದೆ ಕೊಡಲಿಕ್ಕಾಗಿಯೇ ತಂದುದೇ ?'

'ಹೌದು ; ಇದನ್ನು ಹಿಂದಕ್ಕೆ ಬಿಟ್ಟು ಬಂದರೇನೇ ಕ್ಷೇಮ.'

'ಏಕೆ ? ವಿಚಾರವೇನು ನಡೆಯಿತು ? ಅಷ್ಟು ಸಡಗರದಿಂದ ತಂದಿರಿ ! ಈಗ ಪುನಃ ಹಿಂದಿರುಗಿಸುವಿರಲ್ಲ ! ಏಕೆ ? ಬೋಲಣ್ಣ ಈಗಲೇ ರೂಪಾಯಿ ಕೇಳುವರೇ ?'

'ಇಲ್ಲ ; ಬೋಲಣ್ಣ ಈಗ ಇಲ್ಲಿಗೆ ಬಂದಿದ್ದಾನೆಯೇ ?'

'ಮತ್ತೇನಾಯಿತು ?'

'ನೀನು ಕೇಳಿ ಏನು ಮಾಡುವೆ ?'

ದನಿಯಳು ಮುಂದೆ ಹಾರಿ ಅವನ ಕೈಯಿಂದ ಹಗ್ಗ ಎಳೆದುಕೊಂಡಳು. ಅವಳ ಚಪಲ ಬುದ್ಧಿಯು ಹಾರುತ್ತಿರುವ ಹಕ್ಕಿಯನ್ನು ಹಿಡಿದಂತಾಯಿತು. ಬಳಿಕ ಅವಳು ಗದರಿಸಲಾರಂಭಿಸಿದಳು – 'ನಿಮಗೆ ತಮ್ಮಂದಿರ ಭಯವಾಗುವುದಿದ್ದರೆ ಹೋಗಿ ಅವರ ಕಾಲ ಮೇಲೆ ಬೀಳಿರಿ. ನನಗಾರ ಭಯವೂ ಇಲ್ಲ. ನಮ್ಮ ಒಳ್ಳೆಯದನ್ನು ನೋಡಿ ಯಾರದಾದರೂ ಎದೆ ಒಡೆಯುವುದಿದ್ದರೆ ಒಡೆದು ಹೋಗಲಿ. ನನಗದರ ಲಕ್ಷ್ಯವಿಲ್ಲ.'

ಹೋರಿರಾಮ ವಿನೀತಸ್ವರದಿಂದ ಹೇಳಿದ– 'ಮೆಲ್ಲನೆ ಮಾತಾಡ
ಮಹಾರಾಯಿತಿ. ಯಾರಾದರೂ ಕೇಳಿದರೆ– ಇಷ್ಟು ರಾತ್ರಿಯಾದರೂ ಇವ
ಜಗಳ ಮುಗಿಯಲಿಲ್ಲವಲ್ಲ– ಎಂದು ಹೇಳಿಯಾರು. ನಾನು ನನ್ನ ಕಿ
ಗಳಿಂದಲೇ ಏನು ಕೇಳಿ ಬಂದೆನೋ– ಅದನ್ನು ನೀನೇನು ಬಲ್ಲೆ? ಪಾಲಾಗ
ವಾಗ ನಾನು ಹಣ ಒಳಹಾಕಿ ತಮ್ಮಂದಿರಿಗೆ ಮೋಸ ಮಾಡಿದ್ದೆ; ಆ ಹಣ
ಈಗ ಹೊರಬರುತ್ತಿದೆ– ಎಂದು ಮೊದಲಾಗಿ ಅಲ್ಲಿ ಚರ್ಚೆ ನಡೆಯುತ್ತಿದೆ.'

'ಹೀರ ಹೇಳುತ್ತಿರಬೇಕು ಹೀಗೆ.'

'ಇಡೀ ಊರೇ ಹೇಳುತ್ತಿದೆ. ಬರೇ ಹೀರನ ಮೇಲೆ ಏಕೆ ದೂರು ಹಾಕ
ಬೇಕು?'

'ಊರಿಡೀ ಹೇಳುತ್ತಿಲ್ಲ. ಹೀರನೊಬ್ಬನೇ ಹೇಳುತ್ತಿರಬೇಕು. ನಾನಿ
ಗಲೇ ಹೋಗಿ ನಿಮ್ಮಪ್ಪ ಎಷ್ಟು ಹಣ ಮಾಡಿಟ್ಟು ಹೋಗಿದ್ದಾರೆ– ಎಂಬ
ದಾಗಿ ಕೇಳುತ್ತೇನೆ. ಈ ಪೋಲಿಗಳಿಂದಾಗಿ ನಾವು ಹಾಳಾಗಿ ಹೋದುದು
ಬೇರೆ– ಈಗ ಈ ಮಾತು ಬೇರೆಯೇ? ಸಾಕಿ ಸಲಹಿ ಈ ಪುಂಡರನ್ನು
ದೊಡ್ಡದು ಮಾಡಿದ್ದು ನಾವು! ಅದರ ಮೇಲೆ ನಾವೇ ಮೋಸಗಾರರೇ?
ನಾನು ಮೊದಲೇ ಹೇಳಿದ್ದೇನೆ– ದನ ಮನೆಯಿಂದ ಹೊರಗೆ ಕೊಂಡುಹೋದರ
ಅನರ್ಥವಾದೀತು! ಹೌದು, ನಾವು ರೂಪಾಯಿ ಅಡಗಿಸಿಟ್ಟದ್ದೇವೆ; ಮೋಸ
ಮಾಡಿದ್ದೇವೆ! ಒಂದು ಗುಡಾಣದಲ್ಲಿ ನಾನು ಚಿನ್ನದ ನಾಣ್ಯಗಳನ್ನು ಕೂಡಿ
ಟ್ಟದ್ದೇನೆ! ಹೀರ, ಸೋಬ, ಏನು ಬೇಕಾದರೂ ಮಾಡಲಿ. ರೂಪಾಯಿ
ನಾವೇಕೆ ಇಟ್ಟುಕೊಳ್ಳಬಾರದು? ಆ ಇಬ್ಬರು ಪುಂಡರಿಗೂ ನಾವು ಮದುವೆ
ಮಾಡಿಲ್ಲವೇ? ಪ್ರಸ್ತ ನಡೆಸಿಲ್ಲವೇ?'

ಹೋರಿರಾಮ ಕಂಗಾಲಾಗಿ ಹೋದ. ದನಿಯುಳು ಅವನ ಕೈಯಿಂದ ಹಗ್ಗ
ಎಳೆದುಕೊಂಡು ಬಂದು ದನವನ್ನು ಮೊದಲಿನಂತೆಯೇ ಬಲವಾಗಿ ಗೂಟಕ್ಕೆ
ಕಟ್ಟಿದಳು. ಹಾಗೆಯೇ ಬಾಗಿಲತ್ತ ಹೋದಳು. ಹೋರಿರಾಮ ಅವಳನ್ನು
ತಡೆಯಲು ಬಯಸಿದ. ಆದರೆ ಅಷ್ಟರಲ್ಲಿ ಅವಳು ಹೊರಗೆ ಹೋಗಿ
ಆಗಿತ್ತು. ಅವನು ಅಲ್ಲೇ ತಲೆಯಮೇಲೆ ಕೈಯಿಟ್ಟುಕೊಂಡು ಕೂತುಕೊಂಡ.
ಹೊರಗೆ ಹೋಗಿ ಅವಳನ್ನು ಹಿಡಿದು ತರುವ ನಾಟಕವನ್ನು, ಹೊರಗಿನವರಿಗೆ
ಅವನು ತೋರಿಸಬಯಸಲಿಲ್ಲ. ಅವಳ ಕೋಪದ ಪರಿಚಯ ಅವನಿಗೆ
ಚೆನ್ನಾಗಿತ್ತು. ಕೋಪ ಬಂದರೆ ಅವಳು ಚಂಡಿಯೇ. ಹೊಡೆದರಲ್ಲ–

ಕೊಚ್ಚಿ ಹಾಕಿದರೂ ಅವಳು ಕೇಳುವವಳಲ್ಲ.

ಆದರೆ ಹೀರನೂ ಕೋಪದಲ್ಲಿ ಸಾಮಾನ್ಯನಲ್ಲ. ನಾನೇಕೆ ಈ ಬೆಂಕಿ ತಾಗಿಸಿದೆ – ಎಂದು ಹೋರಿರಾಮನಿಗೆ ತನ್ನ ಮೇಲೆಯೇ ಕೋಪ ಬರ ತೊಡಗಿತು. ವಿಚಾರವನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದರೆ – ಈ ತಂಟೆಯೇ ಏಳುತ್ತಿರಲಿಲ್ಲ. ಒಡನೆಯೇ ದನಿಯಳ ಕರ್ಕಶ ಸ್ವರ ಕಿವಿಗೆ ಬಿತ್ತು. ಹೀರನ ಗರ್ಜನೆಯೂ ಕೇಳಿ ಬಂತು! ಪುನ್ನಿಯ ತೀಕ್ಷ್ಣ ಧ್ವನಿಯೂ ಜೊತೆಗೇ ಇದೆ! ಒಡನೆಯೇ ಅವನಿಗೆ ಗೋಬರನ ನೆನಪಾಯಿತು. ಹೊರಗೆ ಹಾರಿ ಅವನ ಮಂಚ ನೋಡಿದ. ಗೋಬರ ಅಲ್ಲಿದ್ದಿಲ್ಲ! ಹೋರಿರಾಮ ಗಾಬರಿಯಾದ. ಗೋಬರನೂ ಹೋಗಿ ಅದರಲ್ಲಿ ಸೇರಿದರೆ ಕ್ಷೇಮವಾಗಲಿಕ್ಕಿಲ್ಲ. ಅವನದು ಬಿಸಿ ರಕ್ತ! ಏನು ಮಾಡಿಬಿಟ್ಟಾನೆಂದು ಹೇಳ ಬರುವುದಿಲ್ಲ. ಆದರೆ ತಾನು ಅಲ್ಲಿಗೆ ಹೇಗೆ ಹೋಗುವುದು? ಹೀರ ಹೇಳಿಯಾನು –'ನಿನಗೆ ಬಾಯಿ ಬರುವುದಿಲ್ಲ; ಆದ್ದರಿಂದ ಈ ರಾಕ್ಷಸಿಯನ್ನು ಜಗಳಕ್ಕಾಗಿ ಕಳಿಸಿರುವೆಯಾ?'– ಎಂಬುದಾಗಿ. ಅಲ್ಲಿ ಮಹಾ ಕೋಲಾಹಲವೇ ನಡೆದಿತ್ತು. ಇಡೀ ಊರಿಗೇ ಎಚ್ಚರವಾಯಿತು. ಮನೆಗೆ ಬೆಂಕಿ ಬಿದ್ದಿದೆಯೋ ಏನೋ ಎಂಬಂತೆ ಜನರೆಲ್ಲ ಓಡಿಕೊಂಡು ಬರುತ್ತಿದ್ದರು.

ಇಷ್ಟು ಹೊತ್ತಿನ ವರೆಗೆ ಹೋರಿರಾಮ ಸುಮ್ಮನಿದ್ದ. ಇನ್ನು ಅವನಿಂದ ಸುಮ್ಮನಿರಲಾಗಲಿಲ್ಲ. ಅವನಿಗೆ ದನಿಯಳ ಮೇಲೆ ಬಹಳ ಕೋಪ ಬಂತು. ಏಕೆ ಅವಳು ಮೇಲೆ ಬಿದ್ದು ಜಗಳಕ್ಕೆ ಹೋಗಬೇಕು? ಮನೆಯೊಳಗೆ ಕೂತುಕೊಂಡು ಎಷ್ಟು ಬೇಕಾದರೂ ಮಾತಾಡಲಿ. ಇದೀಗ ಕಷ್ಟಕ್ಕೆ ಬಂತಲ್ಲ! ಅವನು ಸಾಧು ರೈತನಾದ್ದರಿಂದ ಜಗಳವೆಂದರೆ ದೂರವಾಗುತ್ತಿದ್ದನು. ನಾಲ್ಕು ಮಾತು ಕೇಳಿಕೊಂಡು ಸುಮ್ಮನಿರುವುದು, ದೊಡ್ಡ ಜಗಳವೆಬ್ಬಿಸುವುದಕ್ಕಿಂತ ಉತ್ತಮವೆಂದು ಅವನು ತಿಳಿದಿದ್ದನು. ಇನ್ನೆಲ್ಲಿಯಾದರೂ ಹೊಡೆದಾಟವೇ ಮೊದಲಾದರೆ – ಪೋಲೀಸರ ಕೈಯಲ್ಲಿ ಸಿಕ್ಕಿ ಬೀಳುವುದು, ದಮ್ಮಯ್ಯ ಗುಡ್ಡೆ ಹಾಕಿಕೊಂಡು ಕೋರ್ಟು ಕಚೇರಿ ಬಾಗಿಲು ಕಾಯುವುದು – ಇತ್ತ ಜಮೀನು ಗಿಮೀನು ಎಲ್ಲ ಕೆಟ್ಟು ಹೋಗುವುದು. ಇದನ್ನೆಲ್ಲ ಯೋಚಿಸಿ ಅವನು ಜಗಳವೆಂದರೆ ದೂರದಿಂದಲೇ ನಮಸ್ಕರಿಸುತ್ತಿದ್ದ.

ಆದರೆ ಅವನಿಗೆ ಹೀರನ ಮೇಲೆ ಏನು ಅಧಿಕಾರ? ದನಿಯಳನ್ನೇನೋ ಬಲಾತ್ಕಾರದಿಂದ ಎಳೆದು ತರಬಲ್ಲ. ಹೆಚ್ಚೆಂದರೆ ಅವಳು ಸ್ವಲ್ಪ ಬೈದಾಳು.

ಒಂದೆರಡು ದಿನ ಕೋಪದಿಂದಿದ್ದಾಳು. ಏನೆಂದರೂ ಆವಳ ದೆಸೆಯಿಂದ
'ಪೋಲಿಸ್ ಸ್ಟೇಶನ್' ಗಲಾಟೆ ಬರಲಾರದು. ಇದನ್ನೆಲ್ಲ ಯೋಚಿಸಿ ಆತ
ಮನೆಯಿಂದ ಹೊರಟು ಹೀರನ ಮನೆಯ ಹಿಂದೆ ಗೋಡೆಯ ಮರೆಗೆ ನಿಂತ
ಸಮರ್ಥ ಸೇನಾಪತಿಯಂತೆ, ರಂಗಕ್ಕಿಳಿಯುವ ಮೊದಲು ಅಲ್ಲಿಯ ಪರಿಸ್ಥಿ
ಯನ್ನು ತಿಳಿದುಕೊಳ್ಳಬಯಸಿದ. ಒಂದು ವೇಳೆ ತನ್ನ ಪಕ್ಷಕ್ಕೇ ಜಯವಾಗು
ವಂತಿದ್ದರೆ– ಅವನು ಕೈಹಾಕುವ ಅಗತ್ಯವೇ ಇದ್ದಿಲ್ಲ. ಸೋಲು ಬರುವ
ಸಂದರ್ಭವಿದ್ದರೆ ಅವನು ಕೂಡಲೇ ಹಾರಬೇಕಾಗುತ್ತಿತ್ತು. ನೋಡುವಾಗ
೨೦–೨೫ ಮಂದಿ ಅಲ್ಲಿ ನೆರೆದಿದ್ದರು. ದಾತಾದೀನ್‌ಪಂಡಿತರು, ಪಟೇಶ್ವರಿ
ಲಾಲರು, ಹಾಗೂ ಉಳಿದ ಹಲವು ಮಂದಿ, ಜನರು, ಸೇರಿದ್ದರು. ದನಿಯಾ
ಬಲ ಕಡಿಮೆಯಾದಂತಿತ್ತು. ಅವಳ ಉಗ್ರತನದಿಂದಾಗಿ ಜನಮತವು
ಅವಳಿಗೆ ವಿರುದ್ಧವಾಗಲಾರಂಭಿಸಿತ್ತು. ಅವಳು ಯುದ್ಧನೀತಿಯಲ್ಲಿ ಅಷ್ಟು
ಚತುರಳಲ್ಲ. ಕೋಪದ ಭರದಲ್ಲಿ ಬಹು ಕಠಿನವಾದ ಮಾತನ್ನು ಎಸೆಯು
ತ್ತಿದ್ದುದರಿಂದ ಜನರ ಸಹಾನುಭೂತಿ ಅವಳಿಂದ ದೂರವಾಗುತ್ತಲಿತ್ತು.

ಅವಳು ಗರ್ಜಿಸುತ್ತಿದ್ದಳು– 'ನಮ್ಮನ್ನು ನೋಡಿ ನಿನಗೇಕೆ ಇಷ್ಟು
ಹೊಟ್ಟೆಕಿಚ್ಚು? ನಿನ್ನ ಎದೆ ಏಕೆ ಇಷ್ಟು ಒಡೆಯುತ್ತಿದೆ? ನಾವು ನಿನ್ನನ್ನು
ಸಾಕಿ ಸಲಹಿ ದೊಡ್ಡದು ಮಾಡಿದ್ದಕ್ಕೆ ಇದೇಯೋ ನೀನು ಕೊಡುವ ಬಹು
ಮಾನ? ನಾವು ನಿನಗೆ ಆಶ್ರಯ ಕೊಡದಿರುತ್ತಿದ್ದರೆ ಎಲ್ಲಿಯಾದರೂ ಬಿಕ್ಷೆ
ಬೇಡಿಕೊಂಡಿರಬೇಕಾಗುತ್ತಿತ್ತು. ಮರದ ನೆರಳು ಸಹ ಸಿಗುತ್ತಿರಲಿಲ್ಲ.'

ಈ ಮಾತುಗಳು ಬೇಡವಾದವುಗಳೆಂದು ತೋರಿತು ಹೋರಿರಾಮನಿಗೆ.
ತಮ್ಮಂದಿರನ್ನು ಸಾಕಿ ಸಲಹುವದು ಅವನ ಕರ್ತವ್ಯವಾಗಿತ್ತು. ಅವರ
ಪಾಲಿನ ಉತ್ಪತ್ತಿ ಅವನ ಕೈಗೇ ಬರುತ್ತಿತ್ತು. ಹಾಗಿರುವಾಗ ಹೇಗೆ ಸಾಕ
ದಿರಬಹುದು? ಹಾಗಲ್ಲದಿದ್ದರೆ ಊರಲ್ಲಿ ಮುಖ ತೋರಿಸಲಿಕ್ಕೆ ಸಾಧ್ಯವಿತ್ತೇ?

ಆಗ ಹೀರನ ಉತ್ತರ ಹೊರಟಿತು– 'ಅದೆಲ್ಲ ನಮಗೆ ಗೊತ್ತಿಲ್ಲ. ನಿನ್ನ
ಮನೆಯಲ್ಲಿ ನಾಯಿಯ ಹಾಗೆ ಒಂದು ತುಂಡು ರೊಟ್ಟಿ ತಿಂದಿದ್ದರೆ ದಿನವಿಡೀ
ಕೆಲಸ ಮಾಡುತ್ತಿದ್ದೆವು. ಹಾಗಿದ್ದರೂ ಸಹ ನಾವು ಮಕ್ಕಳಾಟಿಕೆ ಮುಗಿಸಿ
ದೊಡ್ಡವರಾದೆವು. ದಿನವಿಡೀ ಹಸಿ ಗೊಬ್ಬರ ಹೊರುವುದು ತಪ್ಪುತ್ತಿರಲಿಲ್ಲ.
ಅಷ್ಟಾಗಿಯೂ ಹತ್ತುಸಲ ಬೈದಲ್ಲದೆ ಆ ಒಂದು ಒಣ ರೊಟ್ಟಿಯ ತುಂಡನ್ನೂ
ನೀನು ಕೊಡುತ್ತಿರಲಿಲ್ಲ. ನಿನ್ನಂತಹ ರಾಕ್ಷಸಿಯ ಕೈಯಲ್ಲಿ ಸಿಕ್ಕಿ ಹೋಗಿ

ನಮ್ಮ ಜೀವನವೇ ಹಾಳಾಗಿ ಹೋಯಿತು.'

ದನಿಯುಳು ಆಗ ಮತ್ತೂ ಜೋರಾಗಿ ಹೇಳಿದಳು – 'ಸ್ವಲ್ಪ ಬಿಗಿ ಹಿಡಿದು ಮಾತಾಡು. ಇಲ್ಲವಾದರೆ ನಿನ್ನ ನಾಲಗೆ ಸೀಳಿಬಿಟ್ಟೇನು. ರಾಕ್ಷಸಿ ನಾನಲ್ಲ; ನಿನ್ನ ಹೆಂಡತಿ. ತಲೆ ಇಲ್ಲದ ಷಂಢ ನೀನು. ಮರ್ಯಾದೆ ಕೆಟ್ಟ ಬಕಾಸುರ.'

ಆಗ ದಾತಾದೀನ್ ಪಂಡಿತರು ತಡೆದರು – 'ಅಂತಹ ಕೆಟ್ಟ ಮಾತು ಏಕೆ ದನಿಯಾ? ಹೆಂಗುಸಾದವಳು ಸ್ವಲ್ಪ ಮಿತವಾಗಿ ಮಾತಾಡಬೇಕು. ಅವನನ್ನೇಕೆ ಕೆಣಕುವೆ?'

ಪಟೇಶ್ವರೀಲಾಲರೂ ಅದನ್ನೇ ಸಮರ್ಥಿಸಿದರು – 'ಮಾತಿಗೆ ಉತ್ತರ ವಾಗಿ ಮಾತು ಕೊಡಬೇಕು; ಬೈಯುವುದಲ್ಲ. ಅವನು ಸಣ್ಣದಿರುವಾಗ ನೀನವನನ್ನು ಸಾಕಿದ್ದರೆ ಅವನ ಪಾಲಿನ ಆಸ್ತಿಯೂ ನಿನ್ನಧೀನವಿತ್ತೆಂದು ನೀನೇಕೆ ಎಣಿಸುವುದಿಲ್ಲ?'

ಎಲ್ಲರೂ ಒಟ್ಟಿಗೆ ಸೇರಿ ತನ್ನನ್ನು ಸೋಲಿಸ ಯೋಚಿಸುವರೆಂದು ಈಗ ದನಿಯುಳಿಗೆ ತಿಳಿಯಿತು. ಆಲ್ಲಿಗೆ ಅವಳು ನಾಲ್ಕೂ ಕಡೆಗಳಿಂದ ಬರುವ ಸೇನೆಗೂ ಉತ್ತರ ಕೊಡಲಿಕ್ಕೆ ಅಣಿಯಾದಳು – 'ಒಳ್ಳೇದು. ಅದಿರಲಿ. ಎಲ್ಲರ ಕತೆಯೂ ಗೊತ್ತಿದೆ ನನಗೆ. ಈ ಊರಿಗೆ ಬಂದು ಇಪ್ಪತ್ತು ವರ್ಷ ದಾಟಿತು. ಈಗ, ನಾನು ಮಾತ್ರ ಬೈಯುತ್ತಿರುವುದು; ಅವನು ನನ್ನ ಮೇಲೆ ಹೂಮಳೆ ಕರೆಯುತ್ತಿದ್ದಾನಲ್ಲವೆ?'

ಆಗ ದುಲಾರಿ ಸಾಹುಕಾರ್ತಿಯು ಬೆಂಕಿಗೆ ತುಪ್ಪ ಸೇರಿಸಿದಳು – 'ಇವಳೇನು ಸಾಮಾನ್ಯ ತರದ ಹೆಂಗುಸಲ್ಲಪ್ಪ! ಗಂಡುಸರ ಬಾಯಿಯನ್ನೇ ಕಟ್ಟಿಸಿ ಬಿಡುತ್ತಾಳೆ! ಹೋರಿರಾಮ ಸಾಧುಸ್ವಭಾವದ ಮನುಷ್ಯನಾದ್ದರಿಂದ ಇವಳೊಡನೆ ದಿನ ತೆಗೆದ! ಬೇರೆ ಯಾರಾದರಾಗುತ್ತಿದ್ದರೆ ಒಂದು ದಿನ ಕೂಡ ನಡೆಯುತ್ತಿರಲಿಲ್ಲ.'

ಈ ಸಂದರ್ಭದಲ್ಲಿ ಹೀರ ಸ್ವಲ್ಪ ಮೆತ್ತಗಾಗಿದ್ದರೆ ಅವನಿಗೆ ಜಯವಾಗುತ್ತಿತ್ತು. ಆದರೆ ಈ ಬೈಸುಗಳನ್ನು ಕೇಳಿ ಅವನ ಪ್ರಜ್ಞೆ ಅವನಧೀನ ಉಳಿಯಲಿಲ್ಲ. ಇತರರೂ ಅವನ ಪಕ್ಷದಲ್ಲಿರುವುದನ್ನು ಕಂಡು ಅವನು ಹುಲಿಯಂತಾದ. ಕುತ್ತಿಗೆ ಒಡೆಯುವ ಸ್ವರದಲ್ಲಿ ಹೇಳಿದ ಅವನು–'ನಡೆ ನನ್ನ ಮನೆ ಬಾಗಿಲಿಂದ. ಇಲ್ಲವಾದರೆ ಮೆಟ್ಟಿನಿಂದ ಬಾರಿಸಿಯೇನು. ಜುಟ್ಟು ಹಿಡಿದು ಎಳೆದೇನು. ಬೈಯುತ್ತಿದ್ದಾಳೆ ರಾಕ್ಷಸಿ! ಮಗನ ಗರ್ವವಿರಬೇಕು – ರಕ್ತ. . .'

ಅಲ್ಲಿಗೆ ಪರಿಸ್ಥಿತಿಯೇ ಬದಲಾಯಿತು. ಹೋರಿರಾಮನ ರಕ್ತವೂ ಬಿಸಿ ಆಯಿತು. ಅವನು ಮುಂದೆ ಹೋಗಿ ಹೇಳಿದ–'ಇರಲಿ ಸಾಕು. ಸ್ವಲ್ಪ ಬಾಯಿ ಮುಚ್ಚಿಕೊಂಡು ಹೋಗು ಹೀರಾ. ಇನ್ನು ಕೇಳಲಿಕ್ಕೆ ಆಗುವುದಿಲ್ಲ. ಇವಳ ವಿಚಾರ ನಾನೇನು ಹೇಳಲಿ? ಇವಳಿಂದಾಗಿಯೇ ನನ್ನ ಮುಖಕ್ಕೆ ಮಸಿ ತಾಗಿತು. ಏಕಿವಳು ನಾಲಗೆ ತಡೆದುಕೊಳ್ಳುವುದಿಲ್ಲವೋ ನನಗೆ ತಿಳಿಯುವುದಿಲ್ಲ.'

ನಾಲ್ಕೂ ಕಡೆಗಳಿಂದ ಹೀರನ ಮೇಲೆ ನಿಂದಾವಚನಗಳ ಸುರಿಮಳೆ ಆಗ ತೊಡಗಿತು. ಸೇರಿದವರು ಹೀರನನ್ನು ಹೀಯಾಳಿಸಲಾರಂಭಿಸಿದರು. ಒಬ್ಬ ಅವನನ್ನು – ನಿರ್ಲಜ್ಜನೆಂದ. ಇನ್ನೊಬ್ಬ ಪುಂಡ – ಎಂದ. ಹೋರಿರಾಮನ ಈ ನಮ್ರ ವಚನಗಳಿಂದಾಗಿ ಕತೆಯೇ ಬದಲಾಗಿ ಹೋಯಿತು.

ಹೀರನೂ ಎದ್ದ. ಇಡೀ ಊರೇ ಅವನಿಗೆ ವಿರುದ್ಧವಾಯಿತು. ಈಗ ಸುಮ್ಮನಿರುವುದರಿಂದಲೇ ಅವನಿಗೆ ಸುಖವಿತ್ತು. ಕೋಪವಿದ್ದರೂ ಅವನಲ್ಲಿ ಸ್ವಲ್ಪ ಸ್ಮೃತಿ ಉಳಿದಿತ್ತು.

ದನಿಯಳೂ ತುಂಬಾ ದುಃಖದಿಂದ ಹೇಳಿದಳು – 'ಕಿವಿ ಬಿಡಿಸಿಕೊಂಡು ಕೇಳಿಕೊಳ್ಳಿ. ತಮ್ಮಂದಿರಿಗೋಸ್ಕರ ಜೀವ ಕೊಡುತ್ತಿದ್ದಿರಲ್ಲ! ಇವರು ನಿಮ್ಮ ತಮ್ಮಂದಿರೇ? ಇವರ ಮುಖ ನೋಡಬಾರದು. ಇವರು ನನಗೆ ಮೆಟ್ಟಿಂದ ಹೊಡೆಯುವರಂತೆ! ಸಾಕೆ ಸಲಹಿ. . . . . .'

ಆಗ ಹೋರಿರಾಮ ತಡೆದ – 'ಮತ್ತೂ ಮತ್ತೂ ಬೊಗಳುವುದೇಕೆ? ಮನೆಗೆ ಹೋಗು ನೋಡುವಾ!'

ದನಿಯಳು ನೆಲದ ಮೇಲೆ ಕೂತುಕೊಂಡು ಆರ್ತಸ್ವರದಿಂದ ಕೂಗಾಡ ತೊಡಗಿದಳು–'ಇನ್ನು ಈಗ ನಾನು ಇವನ ಮೆಟ್ಟಿನ ಪೆಟ್ಟು ತಿಂದೇ ಹೋಗುವುದು. ಇವನ ಪಂಥ ನೋಡಬೇಕು - ಎಲ್ಲಿದ್ದಾನೆ ನನ್ನ ಮಗ ಗೋಬರ? ಈಗ ಇಲ್ಲದವನು ಮತ್ತ್ಯಾವಾಗ ಪ್ರಯೋಜನಕ್ಕೆ ಬಂದಾನು? ನಿನ್ನ ತಾಯಿಗೆ ಮೆಟ್ಟಿಂದ ಬೀಳುವುದನ್ನು ನೋಡಿಯೂ ಸುಮ್ಮನಿರುವೆಯಾ?'

ದನಿಯಳು ಹೀಗೆ ಬೊಬ್ಬಿಡುತ್ತ ತನ್ನ ಕೋಪದೊಡನೆ ಹೋರಿರಾಮನ ಕೋಪವನ್ನೂ ಕ್ರಿಯಾಶೀಲವಾಗಿ ಮಾಡಲಾರಂಭಿಸಿದಳು. ಅವಳು ಕೆಂಡ ಊದಿ ಊದಿ ಬೆಂಕಿ ಎಬ್ಬಿಸ ಬಯಸುತ್ತಿದ್ದಳು. ಹೀರನು ಪರಾಜಿತನಂತೆ ಹಿಂದೆ ಹೋದ. ಪುನ್ನಿ ಅವನ ಕೈಹಿಡಿದು ಮನೆಯ ಕಡೆ ಎಳೆದುಕೊಂಡು

ಹೋದಳು. ಆಗ ಫಕ್ಕನೆ ದನಿಯಾಳು ಹಾರಿ ಹೀರನ ಹತ್ತಿರ ಹೋಗಿ ಗದರಿಸಿ ಕೇಳ ತೊಡಗಿದಳು – 'ಎಲ್ಲಿ ಹೋಗುತ್ತೀ? ಹೊಡೆ ನೋಡುವ ಮಟ್ಟಿಂದ? ಹೊಡೆ; ನೋಡುವ ನಿನ್ನ ಸಾಮರ್ಥ್ಯ? . . .'

ಹೋರಿರಾಮು ಓಡಿ ಹೋಗಿ ಅವಳ ಕೈಹಿಡಿದು ಎಳೆದುಕೊಂಡು ತನ್ನ ಮನೆಯತ್ತ ಹೋದ.

೫

ಅತ್ತ ಗೋಬರನು ರಾತ್ರಿಯ ಊಟ ಮುಗಿಸಿ ಗೊಲ್ಲರ ಕೇರಿಗೆ ಹೋಗಿ ಸೇರಿದ್ದ. ಆ ದಿನ ಬೆಳಗ್ಗೆ ಜುನಿಯಾಳೊಡನೆ ಬಹಳ ಮಾತುಕತೆ ನಡೆದಿತ್ತು. ಅವನು ದನ ತೆಗೆದುಕೊಂಡು ಬರುವಾಗ ಅರ್ಧ ದಾರಿಯ ತನಕ ಜುನಿಯಾಳು ಅವನೊಡನೆ ಬಂದಿದ್ದಳು. ಗೋಬರನೊಬ್ಬನೇ ಹೇಗೆ ದನ ಹೊಡೆದುಕೊಂಡು ಬಂದಾನು? ಪರಿಚಯವಿಲ್ಲದ ಮನುಷ್ಯನೊಡನೆ ಆ ದನ ಎಲ್ಲಿಯಾದರೂ ಹುಚ್ಚುಗಟ್ಟಿದರೆ! ಸ್ವಲ್ಪ ದೂರ ಬಂದ ಬಳಿಕ ಜುನಿಯಾಳು ಭಾವ ಪರಿಪೂರ್ಣ ದೃಷ್ಟಿಯಿಂದ ಗೋಬರನನ್ನು ನೋಡಿ ಹೇಳಿದಳು–'ಇನ್ನು ಯಾವಾಗ ನೀನಿತ್ತ ಬರುವುದೋ – ಏನೋ? ಅಥವಾ ಏಕಾಗಿ ಬರಬೇಕು?'

ನಿನ್ನೆಯ ತನಕ ಗೋಬರನು ಹುಡುಗನೇ ಆಗಿದ್ದ. ಊರಲ್ಲಿಷ್ಟ ಹುಡುಗಿಯ ರೆಲ್ಲ ಅವನಿಗೆ ಅಕ್ಕ ತಂಗಿಯರಂತಿದ್ದರು. ಅವರು ಎಲ್ಲಿಯಾದರೂ ಇವನಿಗೆ ಚೇಷ್ಟೆ ಮಾಡಿದ್ದರೂ ಆದು ಬರಿಯ ಸರಳ ವಿನೋದವೇ ಆಗಿತ್ತು. ಅವರ ದೃಷ್ಟಿಯಲ್ಲಿ, ಅವನಲ್ಲಿ ಯೌವನದ ಪುಷ್ಪೋದಯ ಮಾತ್ರವಾಗಿತ್ತು; ಫಲೋದಯವಾಗುವ ವರೆಗೆ ಅವನ ಮೇಲೆ ಕಲ್ಲೆಸೆಯುವುದು ವ್ಯರ್ಥ. ಅದೂ ಅಲ್ಲದೆ ಎಲ್ಲಿಂದಲೂ ಪ್ರೋತ್ಸಾಹ ಸಿಗದ ಕಾರಣ ಅವನ ಕುಮಾರಭಾವವು ಅವನ ದೇಹ ಬಿಟ್ಟು ಹೋಗಿಯೇ ಇದ್ದಿಲ್ಲ. ಜುನಿಯಾಳ ವಂಚಿತವಾದ ಮನಸ್ಸು ಅತ್ತಿಗೆಯಂದಿರ ವ್ಯಂಗ್ಯವಚನ, ಹಾಸವಿಲಾಸಗಳಿಂದ ಪ್ರಲೋಭಗೊಂಡಿದ್ದು, ಇಂದು ಗೋಬರನ ಕುಮಾರಭಾವದ ಮೇಲೆಯೇ ಆಸೆ ಪಡತೊಡಗಿತು. ತರಗೆಲೆಯ ಶಬ್ದ ಕೇಳಿದೊಡನೆ ಮಲಗಿದ್ದ ಮೃಗವು ಎದ್ದುಬಿಡುವಂತೆ, ಇಂದು ಅವಳ ಬೆಡಗು ಬಿನ್ನಾಣ ಕಂಡೊಡನೆಯೇ ಅವನ ಯೌವನವು ಜಾಗೃತವಾಯಿತು.

ಗೋಬರನು ಹೆಚ್ಚಿನ ಮುಚ್ಚುಮರೆಯಿಲ್ಲದ ರಸಿಕತೆಯಿಂದ ಹೇಳತೊಡಗಿದ–'ಭಿಕ್ಷೆ ಸಿಗುವ ಆಸೆ ಇದ್ದರೆ, ಬೇಡುವವನು ದಿನವಿಡೀ ಮಾತ್ರವೇ ಅಲ್ಲ–ರಾತ್ರಿ ಸಹ ದಾತನ ಮನೆಬಾಗಿಲಿಗೆ ಬಂದು ಕಾದಿರುತ್ತಾನೆ.'

ಜುನಿಯಳು ಕಣ್ಣು ತಿರುಗಿಸಿ ಹೇಳಿದಳು–'ಹಾಗಾದರೆ ನಿನಗೆ ಸಹ ಮಾತಿನ ಅರ್ಥವಾಗುತ್ತಿದೆ!'

ಗೋಬರನ ನರನಾಡಿಗಳಲ್ಲಿ ಹರಿಯುವ ರಕ್ತವು ಬಿಸಿ ಏರಿತ್ತು. ಅವನು ಹೇಳಿದ–'ಒಂದು ವೇಳೆ ಹಸಿದ ಮನುಷ್ಯ, ಕೈಚಾಚಿ ಬೇಡಿದರೂ ಅವನನ್ನು ಕ್ಷಮಿಸಬೇಡವೇ?'

ಜುನಿಯಳು ಗೋಬರನನ್ನು ಮತ್ತೂ ಆಳವಾದ ನೀರಿಗಿಳಿಸಿದಳು–'ಭಿಕ್ಷುಕನು ಹತ್ತು ಮನೆ ಬಾಗಿಲು ತಿರುಗುತ್ತಿದ್ದರೆ ಅವನ ಹೊಟ್ಟೆ ಹೇಗೆ ತುಂಬೀತು? ನಾನು ಅಂತಹರಿಗೆ ಮುಖವನ್ನೂ ತೋರಿಸಲಾರೆ. ಅಂಥವರು ಬೀದಿ ಬೀದಿ ಸಿಗುತ್ತಾರೆ ಅಥವಾ, ಆ ಭಿಕ್ಷುಕ ಕೊಡುವುದಾದರೂ ಏನನ್ನು?–ಬರೀ ಆಶೀರ್ವಾದ! ಈ ಒಣ ಆಶೀರ್ವಾದಗಳಿಂದ ಹೊಟ್ಟೆಯೇನೂ ತುಂಬಲಾರದು ತಾನೇ?'

ಮಂದಬುದ್ಧಿಯ ಗೋಬರನಿಗೆ ಜುನಿಯಳ ಈ ಮಾತಿನ ಅರ್ಥವಾಗಲಿಲ್ಲ. ಜುನಿಯಳು ಎಳೆತನದಿಂದಲೇ ಗಿರಾಕಿಗಳ ಮನೆಗೆ ಹಾಲು ತೆಗೆದುಕೊಂಡು ಹೋಗುತ್ತಿದ್ದಳು. ಮಾವನ ಮನೆಯಲ್ಲೂ ಅವಳು ಹಾಲು ಮಾರುವ ಕೆಲಸ ಮಾಡಬೇಕಾಗಿತ್ತು. ಇಂದು ಸಹ ಮೊಸರು ಮಾರುವ ಕಾರ್ಯಭಾರ ಅವಳದೇ. ಅವಳಿಗೆ ತರತರದ ಜನರ ಪರಿಚಯವಾಗಿತ್ತು. ಎರಡು ಮೂರು ರೂಪಾಯಿ ಸಹ ಕೆಲ ವೇಳೆ ಅವಳ ಕೈಗೆ ಬರುತ್ತಿತ್ತು. ಸ್ವಲ್ಪ ಸಮಯದ ವರೆಗೆ ಮನೋರಂಜನೆಯೂ ನಡೆದು ಹೋಗುತ್ತಿತ್ತು. ಆದರೆ ಆ ಸುಖವು ಅವಳ ಮಟ್ಟಿಗೆ ಕಡ ತಂದ ವಸ್ತುವಿನಿಂದ ಒದಗಿದಂತಿತ್ತು. ಅದು ಹೆಚ್ಚು ಬಾಳುವಂತಹದೂ ಅಲ್ಲ; ಅದರಲ್ಲಿ ಆತ್ಮಸಮರ್ಪಣೆಯೂ ಇದ್ದಿಲ್ಲ, ಅಧಿಕಾರವೂ ಇದ್ದಿಲ್ಲ. ಅವಳಿಗೆ ಬೇಕಾಗಿದ್ದುದು ದೋಷರಹಿತ– ಸಾಯಲಿಕ್ಕೂ, ಬದುಕಲಿಕ್ಕೂ ಸಿದ್ಧವಿರುವ–ಪ್ರೇಮ; ಮಿಂಚುಹುಳದ ಕ್ಷಣಿಕ ಬೆಳಕಲ್ಲ. ಅವಳಿಗೆ ಬೇಕಾಗಿದ್ದುದು ದೀಪದ ಸ್ಥಾಯೀ ಪ್ರಕಾಶ. ಅವಳೊಬ್ಬ ಗೃಹಸ್ಥನ ಮಗಳಾಗಿದ್ದಳು. ಅವಳ ಗೃಹಣೀತ್ವದ ಆಸೆಯನ್ನು ರಸಿಕರ ಹುಚ್ಚುಪ್ರೇಮವು ಕೆಡಿಸಿದ್ದಿಲ್ಲ.

ಗೋಬರನು ಆಶಾಪೂರ್ಣ ದೃಷ್ಟಿಯಿಂದ ನೋಡಿ ಹೇಳಿದ–'ಭಿಕ್ಷುಕ

ನಿಗೆ ಒಂದೇ ಮನೆಯಲ್ಲಿ ಹೊಟ್ಟೆತುಂಬ ಸಿಕ್ಕಿದರೆ ಅವನು ಮನೆ ಮನೆಗೆ ಬೇಡಲು ಏಕೆ ಹೋಗಬೇಕು ? '

ಜುನಿಯಳು ದಯಾಪೂರ್ಣ ದೃಷ್ಟಿಯಿಂದ ಅವನತ್ತ ಇಣಿಕಿ ನೋಡಿದಳು – ಎಂತಹ ಸಾಧು ಮನುಷ್ಯ ? ಹೆಚ್ಚಿಗೆ ಯಾವುದೂ ಅರ್ಥವೇ ಆಗುವುದಿಲ್ಲ !

' ಭಿಕ್ಷುಕನಿಗೆ ಒಂದೇ ಮನೆಯಲ್ಲಿ ಹೊಟ್ಟೆತುಂಬ ಹೇಗೆ ಸಿಕ್ಕೀತು ? ಒಂದು ಮುಷ್ಟಿ ಮಾತ್ರ ಸಿಕ್ಕೀತು. ನಿನ್ನ ಸರ್ವಸ್ವವನ್ನೂ ಕೊಟ್ಟರೇನೇ ನಿನಗೆ ಸರ್ವಸ್ವವೂ ಸಿಕ್ಕೀತು. '

' ನನ್ನ ಹತ್ತಿರ ಏನಿದೆ ಜುನಿಯಾ ? '

' ನಿನ್ನ ಹತ್ತಿರ ಏನೂ ಇಲ್ಲವೇ ? ನನ್ನ ದೃಷ್ಟಿಯಲ್ಲಿ – ದೊಡ್ಡ ದೊಡ್ಡ ಲಕ್ಷಾಧಿಪತಿಗಳಲ್ಲಿಯೂ ಇಲ್ಲದ ಸಂಪತ್ತು ನಿನ್ನಲ್ಲಿದೆ. ನೀನು ನನ್ನಲ್ಲಿ ಭಿಕ್ಷೆ ಬೇಡುವುದಲ್ಲ. ನನ್ನನ್ನೇ ಕ್ರಯಕ್ಕೆ ತೆಗೆಯಬಲ್ಲೆ. '

ಗೋಬರನು ಚಕಿತ ನೇತ್ರಗಳಿಂದ ಅವಳನ್ನು ನೋಡತೊಡಗಿದ.

ಜುನಿಯಳು ಪುನಃ ಹೇಳಿದಳು – ' ಆದರೆ ಕ್ರಯ ಎಷ್ಟು ಕೊಡಬೇಕಾದೀತೆಂದು ಗೊತ್ತೇ ? ನನ್ನವನೇ ಆಗಿರಬೇಕಾದೀತು ನೀನು. ಬೇರೆ ಯಾರ ಮುಂದಾದರೂ ಕೈಚಾಚಿದರೆ ಮನೆಯಿಂದ ಹೊರಮಾಡಿಯೇನು. '

ಕತ್ತಲೆಯಲ್ಲಿ ಹರಡುತ್ತಿರುವ ಗೋಬರನಿಗೆ ಇಚ್ಛಿಸಿದ ವಸ್ತು ಸಿಕ್ಕಿದಂತಾಯಿತು. ಒಂದು ವಿಚಿತ್ರ – ಭಯ ಮಿಶ್ರಿತ – ಆನಂದದಿಂದ ಅವನ ರೋಮ ರೋಮವೂ ಪುಲಕಿತವಾಯಿತು. ಆದರೆ – ಇದು ಹೇಗಾದೀತು ? ಜುನಿಯಳನ್ನು ಇಡಿಸಿಕೊಂಡರೆ – ಇಟ್ಟುಕೊಂಡವಳೊಡನೆ ಮನೆಯಲ್ಲಿ ಹೇಗೆ ಇರಲು ಸಾಧ್ಯ ? ಜಾತಿಕಟ್ಟಿನ ಗಲಾಟೆಯೂ ಏಳಬಹುದು. ಊರವರೆಲ್ಲ ಗಲಭೆ ಎಬ್ಬಿಸಿಯಾರು ಎಲ್ಲರೂ ಶತ್ರುಗಳಾದಾರು. ಅಮ್ಮನಂತು ಇವಳನ್ನು ಮನೆಯೊಳಗೆ ಕಾಲಿಡಲಿಕ್ಕೇ ಬಿಡಲಿಕ್ಕಿಲ್ಲ.

ಆದರೆ ಹೆಂಗುಸಾದ ಇವಳೇ ಹೆದರುವುದಿಲ್ಲವಾದರೆ ಗಂಡುಸಾದ ತಾನು ಏಕೆ ಹೆದರಬೇಕು? ಹೆಚ್ಚೆಂದರೆ ತನ್ನನ್ನು ಮನೆಯಿಂದ ಹೊರ ಮಾಡಿಯಾರು. ಹೊರ ಮಾಡಿದರೇನು? ಬೇರೆಯಾಗಿರಲು ಸಾಧ್ಯವಿಲ್ಲವೇ ? ಜುನಿಯಳಂತಹ ಸರ್ವೋತ್ಕೃಷ್ಟ ಯುವತಿ ಊರಲ್ಲಿ ಇನ್ನಾರಿದ್ದಾರೆ? ಎಂತಹ ಬುದ್ಧಿವಂತಿಕೆಯ ಮಾತು ಆಡುತ್ತಾಳೆ ! ನಾನು ಅವಳಿಗೆ ಸಮಾನನಲ್ಲವೆಂದು ಅವಳಿಗೆ ಗೊತ್ತಿ

ಲ್ಲವೇ? ಆದರೂ ನನ್ನನ್ನು ಪ್ರೇಮಿಸುತ್ತಾಳೆ. ನನ್ನವಳಾಗಲಿಕ್ಕೆ ಒಪ್ಪಿದ್ದಾಳೆ. ಊರಿನವರು ಒಂದು ಪಕ್ಷ ಹೊರಹಾಕಿದರೂ ಇಡೀ ಪ್ರಪಂಚದಲ್ಲಿ ಬೇರೆ ಊರೇ ಇಲ್ಲವೇ? ಅಥವಾ ಈ ಊರನ್ನಾದರೂ ಏಕೆ ಬಿಡಬೇಕು? ಮಾತಾದೀನನು ಸಮಗಾರರ ಹುಡುಗಿಯನ್ನು ಇಡಿಸಿಕೊಂಡಿದ್ದಾನೆ. ಆದರೆ ಯಾರೇನು ಮಾಡಿದ್ದಾರೆ ಅವನಿಗೆ? ದಾತಾದೀನ ಪಂಡಿತರು ಹಲ್ಲು ಕಟಕಟ ಕಡಿದು ಸುಮ್ಮನಾದರು. ಈಗಲೂ ಸಹ ಮಾತಾದೀನನು ತನ್ನ ಧರ್ಮವನ್ನು ಕಾಪಾಡಿಕೊಂಡೇ ಇದ್ದಾನೆ. ನಿತ್ಯವೂ ಸ್ನಾನ ಪೂಜೆ ಮಾಡದೆ ಬಾಯಿಗೆ ನೀರು ತೆಗೆದುಕೊಳ್ಳುವುದಿಲ್ಲ ಮೊದಮೊದಲು ಅವಳ ಅಡಿಗೆ ಬೇರೆ ನಡೆಯುತಿತ್ತು. ಆದರೆ ಈಗೀಗ ಅಡಿಗೆ ಊಟ ಸಹ ಒಟ್ಟಿಗೇ ನಡೆಯುತ್ತಿದೆ. ಹಾಗೆಯೇ–ಜಿಂಗುರೀಸಿಂಹರು ಬ್ರಾಹ್ಮಣರ ಹೆಂಗುಸನ್ನೇ ಇಡಿಸಿಕೊಂಡಿದ್ದಾರೆ. ಅವರಿಗೆ ಯಾರೇನು ಮಾಡಿದರು? ಅವರಿಗೆ ಮೊದಲೆಷ್ಟು ಆದರ ಮನ್ನಣೆಗಳಿತ್ತೋ–ಅಷ್ಟೇ ಈಗಲೂ ಇದೆ. ಮಾತ್ರವಲ್ಲದೆ ಈಗ ಹೆಚ್ಚುತ್ತಲೂ ಇದೆ. ಮೊದಲು ಯಾರ್‍ಯಾರ ಕೆಲಸ ಹುಡುಕುತ್ತ ಹೋಗುತ್ತಿದ್ದರು. ಈಗ ಅವಳ ದುಡ್ಡಿನಿಂದ ಹಣದ ವಹಿವಾಟು ನಡೆಸುತ್ತಿದ್ದಾರೆ!– ಈ ಮೊದಲಾದ ವಿಚಾರವೆಲ್ಲ ಗೋಬರನ ತಲೆಯಲ್ಲಿ ಮೂಡಿ ಮಾಯವಾಯಿತು. ಆದರೆ ಅದಕ್ಕೆ ಮೊದಲು, ಜುನಿಯಳ ವಿಚಾರವನ್ನೇ ಗಟ್ಟಿಮಾಡಿಕೊಳ್ಳುವ ನಿಶ್ಚಯದಿಂದ ಕೇಳಿದ– 'ನೀನು ಮನಃಪೂರ್ವಕವಾಗಿ ಹೇಳುತ್ತಿದ್ದಿಯೇ ಜುನಾ?–ಅಲ್ಲ, ಬರೇ ಆಸೆ ಮಾತ್ರ ತೋರಿಸುತ್ತಿರುವೆಯಾ? ನಾನಂತು ಸಂಪೂರ್ಣ ನಿನ್ನವನಾಗಿ ಹೋಗಿದ್ದೇನೆ. ಹಾಗೆಯೇ ನೀನೂ ನನ್ನವಳಾಗಿರುವೆಯೂ?'

'ನೀನು ನನ್ನವನಾಗಿರುವೆಯಾ? ಅದನ್ನು ನಾನು ಹೇಗೆ ತಿಳಿಯಲಿ?'

'ನೀನು ನನ್ನ ಜೀವವನ್ನೇ ಕೇಳಿದರೂ ಕೊಟ್ಟು ಬಿಟ್ಟೇನು.'

'ಜೀವ ಕೊಡುವುದರ ಅರ್ಥವಾದರೂ ನಿನಗೆ ಗೊತ್ತಿದೆಯೆ?'

'ನೀನೇ ಕಲಿಸಬಹುದಲ್ಲ?'

ಜುನಿಯಳು ಅವನ ಬೆನ್ನ ಮೇಲೆ ಮೆಲ್ಲಗೆ ಒಂದು ಏಟು ಏರಿಸಿ ಹೇಳಿದಳು–"ಎಲ್ಲರ ಹಾಗೆ ನೀನೂ ಮುಖಸ್ತುತಿ ಮಾಡಲು ಮೊದಲುಮಾಡಿದೆಯಲ್ಲ! ನಾನೆಂತಹಳೆಂದು ನನಗೆ ಗೊತ್ತಿದೆ. ಆದರೆ ಈ ಜನರಿಗೆ ಬರೇ ನನ್ನ ಯೌವನ ಬೇಕು. ಒಂದು ಗಳಿಗೆಯ ಮಟ್ಟಿಗೆ ಮನಸ್ಸನ್ನು ಸಂತೋಷಗೊಳಿಸಲಿಕ್ಕೆ ಮತ್ತೇನು ಬೇಕು? ಜನ್ಮವಿಡೀ ಯಾರೊಡನೆ ಜೀವಿಸಿಕೊಂಡಿರ

ಬೇಕೋ – ಅವಳಲ್ಲಿ ಮಾತ್ರ ಗುಣ ದೋಷ ನೋಡುವುದು. ಇಂದಿನ ದೊಡ್ಡ ದೊಡ್ಡ ಮನೆಗಳವರ ವಿಚಿತ್ರ ಲೀಲೆಯನ್ನು ಕಣ್ಣಾರೆ ಕಂಡಿದ್ದೇನೆ, ಕಿವಿಯಾರೆ ಕೇಳಿಯೂ ಇದ್ದೇನೆ. ನನ್ನ ಮಾವನ ಮನೆ ಇದ್ದ ಬೀದಿಯಲ್ಲೇ ಗಬ್‌ಡೂರಾಯರೆಂಬ ಕಾಶ್ಮೀರಿಯು ಇರುತ್ತಿದ್ದರು. ಅವರು ಬಹು ದೊಡ್ಡ ಮನುಷ್ಯ ! ಅವರ ಮನೆಯಲ್ಲಿ ದಿನಕ್ಕೆ ಐದಾರು ಸೇರು ಹಾಲು ಖರ್ಚಾಗುತ್ತಿತ್ತು. ಅವರಿಗೆ ಮೂವರು ಹುಡುಗಿಯರು. ಮೂವರೂ ೨೦–೨೫ ವರ್ಷ ಪ್ರಾಯ ಮಿಕ್ಕಿದವರು. ಒಬ್ಬರಿಂದೊಬ್ಬರು ಚಂದ ! ಮೂವರೂ ದೊಡ್ಡ ಕಾಲೇಜಿನಲ್ಲಿ ಓದಲಿಕ್ಕೆ ಹೋಗುತ್ತಿದ್ದರು. ಅವರಲ್ಲಿ ಒಬ್ಬಳು ಕಾಲೇಜಿನಲ್ಲಿ ಕಲಿಸುವ ಕೆಲಸವನ್ನೂ ಮಾಡುತ್ತಿದ್ದಳು. ತಿಂಗಳಿಗೆ ಮುನ್ನೂರು ರೂಪಾಯಿ ಸಂಬಳ ಬರುತ್ತಿತ್ತು ! ಅವರೆಲ್ಲರಿಗೂ ಸಿತಾರ್ ನುಡಿಸಲಿಕ್ಕೆ, ಹಾರ್ಮೋನಿಯಂ ಬಾರಿಸಲಿಕ್ಕೆ, ಹಾಡಲಿಕ್ಕೆ, ಕುಣಿಯಲಿಕ್ಕೆ – ಎಲ್ಲ ಗೊತ್ತಿತ್ತು. ಆದರೆ ಯಾರೂ ಮದುವೆ ಮಾಡಿಕೊಂಡಿದ್ದಿಲ್ಲ. ಯಾವ ಗಂಡುಸಿನ ಮೇಲೂ ಅವರಿಗೆ ಮನಸ್ಸಾಗುತ್ತಿರಲಿಲ್ಲವೋ, ಅಥವಾ ಅವರ ಮೇಲೆ ಯಾವ ಗಂಡುಸಿಗೂ ಪ್ರೀತಿಯಾಗುತ್ತಿರಲಿಲ್ಲವೋ–ದೇವರೇ ಬಲ್ಲ. ಒಂದು ಸಲ ಹಾಲು ಕೊಂಡು-ಹೋದವಳು ನಾನೇ ಕೇಳಿದೆ. ಅದಕ್ಕವಳು ನಗುತ್ತಾ – 'ನಮಗೆ ಈ ವರೆಗೆ ಆ ರೋಗವೇ ತಾಗಲಿಲ್ಲ'–ಎಂಬುದಾಗಿ ಉತ್ತರವಿತ್ತಳು. ಆದರೆ ಒಳಗಿಂದೊಳಗೆ ಅವಳು ಚಲ್ಲಾಟ ನಡೆಸುತ್ತಲೇ ಇದ್ದಾಳೆ. ಯಾವಾಗ ನೋಡಿದರೂ ಮೂರು ನಾಲ್ಕು ಜನ ಪುಂಡರು ಅವಳಿಗೆ ಸುತ್ತು ಹಾಕಿಕೊಂಡೇ ಇದ್ದಾರೆ. ಎಲ್ಲರಿಗಿಂತಲೂ ದೊಡ್ಡವಳು–ಕೋಟು ಪ್ಯಾಂಟು ಹಾಕಿಕೊಂಡು, ಕುದುರೆಯ ಮೇಲೇರಿ, ಗಂಡುಸರೊಡನೆ ತಿರುಗಾಡಲಿಕ್ಕೂ ಹೋಗುತ್ತಿದ್ದಳು. ಇಡೀ ನಗರದಲ್ಲೇ ಅವಳ ಲೀಲೆ ಪ್ರಸಿದ್ಧವಾಗಿತ್ತು. ಪಾಪ! ಗಬ್‌ಡೂರಾಯರು ಮುಖಕ್ಕೆ ಮಸಿ ತಾಗಿದವರಂತೆ ತಲೆ ತಗ್ಗಿಸಿಕೊಂಡೇ ಇರುತ್ತಿದ್ದರು. ಆಗಾಗ ಹುಡುಗಿಯರನ್ನು ಗದರಿಸುತ್ತಿದ್ದರು ; ಅವರಿಗೆ ಬೋಧಿಸುತ್ತಿದ್ದರು. ಆಗ ಅವರೆಲ್ಲ ಒಟ್ಟಾಗಿ ಉತ್ತರ ಕೊಡುತ್ತಿದ್ದರು – 'ನಿಮಗೆ ನಮ್ಮ ವೈಯಕ್ತಿಕ ವಿಚಾರದಲ್ಲಿ ಮಾತಾಡುವ ಅಧಿಕಾರವೇ ಇಲ್ಲ ; ನಮ್ಮ ಇಷ್ಟ ಬಂದಂತೆ ನಾವು ಮಾಡುತ್ತೇವೆ'–ಎಂಬುದಾಗಿ. ಪಾಪದ ಮುದುಕ – ಈ ಪ್ರಾಯ ಬಂದ ಹುಡುಗಿಯರಿಗೆ ಮತ್ತೇನು ಮಾಡಿಯಾರು ? ಆದರೆ ಇದೆಲ್ಲ ದೊಡ್ಡ ಮನುಷ್ಯರ ಮಾತು. ಅವರನ್ನು ಆಕ್ಷೇಪಿಸುವವರು ಯಾರು ? ಅವರು ಮಾಡಿದ್ದೆಲ್ಲ ಸರಿಯೇ. ಅವ

ರಿಗೆ ಜಾತಿ ನೀತಿಯು, ಹತ್ತು ಸಮಸ್ತರ, ಲಕ್ಷ್ಯವೇ ಇಲ್ಲ.

“ಆದರೆ ದಿನ ದಿನಕ್ಕೆ ಮನುಷ್ಯರ ಬುದ್ಧಿ ಏಕೆ ಹಾಳಾಗುತ್ತಿದೆ ಎಂದೇ ನನಗರ್ಥವಾಗುವುದಿಲ್ಲ. ಮನುಷ್ಯನು ಆಡು ದನಗಳಿಗಿಂತಲೂ ಕಳತೆಯುವನೇನು ? ಆದರೆ ಇದರಲ್ಲಿ ಯಾರನ್ನೂ ನಾನು ದೂರುವುದಿಲ್ಲ. ನಾವು ನಮ್ಮ ಮನಸ್ಸನ್ನು ಹೇಗೆ ಇಟ್ಟುಕೊಳ್ಳುತ್ತೇವೆಯೋ ಹಾಗೆ ನಡೆಯುತ್ತದೆ. ದಿನ-ನಿತ್ಯ ರೊಟ್ಟಿ ಸಾರು ತಿಂದು-ತಿಂದು, ಬಾಯಿಯ ರುಚಿ ಬದಲಾಯಿಸಲಿಕ್ಕಾಗಿ, ಒಮ್ಮೊಮ್ಮೆ ಹಲ್ವಾ ಪೂರಿ ಬಯಸುವವರನ್ನು ನಾನು ಕಂಡಿದ್ದೇನೆ. ಮನೆಯ ರೊಟ್ಟಿ ಸಾರು ನೋಡಿದೊಡನೆ ಜ್ವರ ಬರುವವರನ್ನೂ ಕಂಡಿದ್ದೇನೆ. ಸದಾ ತಮ್ಮ ಒಣ ರೊಟ್ಟಿ ಸಾರಿನಿಂದಲೇ ತೃಪ್ತರಾಗಿರುವ ಮತ್ತೆ ಕೆಲವರನ್ನೂ ನೋಡಿದ್ದೇನೆ. ಹಲ್ವಾ ಪೂರಿಗಳ ಯೋಚನೆಯೇ ಅವರಿಗಿಲ್ಲ. ನನ್ನ ಇಬ್ಬರು ಅತ್ತಿಗೆಯಂದಿರನ್ನೇ ನೋಡು. ನನ್ನ ಅಣ್ಣಂದಿರು – ಕುರುಡರೂ ಅಲ್ಲ, ಕಿವುಡರೂ ಅಲ್ಲ; ಇತರ ಯುವಕರಂತೆಯೇ ಗಟ್ಟಿಮುಟ್ಟಾಗಿ ಇರುವರು. ಆದರೆ ಅತ್ತಿಗೆಯಂದಿರ ಕಣ್ಣಿಗೆ ಅವರು ಹಿಡಿಯುವುದಿಲ್ಲ. ಅವರಿಗೆ ಯಾವಾಗಲೂ ಚಿನ್ನ ಆಭರಣ, ಸೀರೆ ರವಕೆ, ಹಣ್ಣು ಮಿಠಾಯಿ – ತರುವವರಾಗಬೇಕು ! ಆಭರಣ, ಸೀರೆ, ಮಿಠಾಯಿ – ಇವುಗಳಲ್ಲಿ ನನಗೂ ಪ್ರೀತಿ ಇದೆ. ಆದರೆ ಅದಕ್ಕಾಗಿ ಮರ್ಯಾದೆ ಕೂಡ ಬಿಡಲು ತಯಾರಾಗುವುದಿದ್ದರೆ – ದೇವರೇ ಕಾಪಾಡಬೇಕು ! ಒಳ್ಳೆಯದಾಗಲಿ – ಕೆಟ್ಟದಾಗಲಿ – ಒಬ್ಬನೊಡನೆಯೇ ಬಾಳುವೆ ನಡೆಸಿಕೊಂಡಿರುವುದೇ ನನಗೆ ಪ್ರಿಯವಾದುದು.

“ಹೆಚ್ಚು ಯೋಚಿಸಿದರೆ ಗಂಡಸರೇ ಹೆಂಗುಸರನ್ನು ಕೆಡಿಸುವುದು. ಗಂಡುಸು ಅತ್ತ ಇತ್ತ ಕಣ್ಣು ತಿರುಗಿಸಲಿಕ್ಕೆ ತೊಡಗಿದರೆ ಹೆಂಗುಸೂ ಕಣ್ಣು ಹಾರಿಸುತ್ತಾಳೆ. ಗಂಡುಸು ಬೇರೆ ಹೆಂಗುಸಿನ ಹಿಂದೆ ಓಡಿದರೆ ಹೆಂಗುಸೂ ಹಾಗೆ ಮಾಡುತ್ತಾಳೆ. ಗಂಡುಸಿಗೆ ಹೆಂಗುಸಿನ ಅತ್ಯಾಚಾರವು ಎಷ್ಟು ಅಸಹ್ಯವಾಗಿ ಕಾಣುತ್ತದೋ ಹೆಂಗುಸಿಗೂ ಗಂಡುಸಿನ ವಿಚಾರದಲ್ಲೂ ಅಷ್ಟೇ ಆಗುತ್ತದೆ. ನಾನು ನನ್ನ ಹಿಂದಿನ ಗಂಡನ ಹತ್ತಿರವೂ ಇದನ್ನೇ ಸ್ಪಷ್ಟವಾಗಿ ಹೇಳಿದ್ದೆ – ‘ನೀನು ಅತ್ತ ಇತ್ತ ಕಣ್ಣು ಹಾಕಲಿಕ್ಕೆ ಆರಂಭಿಸಿದರೆ, ನಾನೂ ನನ್ನ ಇಷ್ಟ ಬಂದಂತೆ ಮಾಡಿಯೇನು’ – ಎಂಬುದಾಗಿ. ನೀನು ಮಾತ್ರ ಮನಸ್ಸು ಬಂದಂತೆ ಇದ್ದುಬಿಟ್ಟು ಬಾಕಿಯವರನ್ನೆಲ್ಲ ಪೆಟ್ಟಿನ ಹೆದರಿಕೆ ತೋರಿಸಿ ಕೈಯೊಳಗೆ ಇಟ್ಟುಕೊಳ್ಳುವೆನೆಂದರೆ – ಅದಾಗದು. ನೀನು ಇದಿರಿದಿರು ನಡೆಸಿದರೆ ಅವಳು

ಗುಟ್ಟಾಗಿ ನಡೆಸುತ್ತಾಳೆ! ಅವಳನ್ನು ದುಃಖಗೊಳಿಸಿ ನೀನು ಸುಖಿಯಾಗಲಾರೆ."

ಗೋಬರನ ಮಟ್ಟಿಗೆ ಇದೆಲ್ಲ ಒಂದು ಹೊಸ ಪ್ರಪಂಚದ ಮಾತಾಗಿತ್ತು. ಅವನು ತನ್ಮಯನಾಗಿ ಕೇಳುತ್ತಲೇ ಇದ್ದ. ಒಮ್ಮೊಮ್ಮೆ ತನ್ನಷ್ಟಕ್ಕೇ ಅವನ ಕಾಲು ನಿಂತು ಹೋಗುತ್ತಿದ್ದುವು. ಮತ್ತೆ ಪುನಃ ಚೇತನಗೊಂಡು ಮುಂದೆ ಸಾಗುತ್ತಿದ್ದುವು. ಜುನಿಯಳು ಮೊತ್ತ ಮೊದಲು ಅವನನ್ನು ತನ್ನ ರೂಪದಿಂದ ಮೋಹಗೊಳಿಸಿದ್ದಳು. ಈಗ ತನ್ನ ಜ್ಞಾನ ಮತ್ತು ಅನುಭವಪೂರ್ಣವಾದ ಮಾತುಗಳಿಂದ, ತನ್ನ ಸತೀ ಧರ್ಮದ ವರ್ಣನೆಯಿಂದ, ಮುಗ್ಧಗೊಳಿಸಿಬಿಟ್ಟಳು. ಇಂತಹ ರೂಪ, ಗುಣ, ಜ್ಞಾನಗಳ ಆಗರವು ಅವನಿಗೆ ಸಿಕ್ಕಿ ಹೋದರೆ – ಅವನೇ ಪುಣ್ಯಾತ್ಮ! ಹಾಗಿರುವಾಗ ಅವನು ಜಾತಿ, ನೀತಿ, ಸಂಪ್ರದಾಯಗಳಿಂದೆಲ್ಲ ಏಕೆ ಹೆದರಿರಬೇಕು?

ಅವನ ಮುಖದ ಬಣ್ಣ ಸಾಕಷ್ಟು ಬದಲಾದುದನ್ನು ಜುನಿಯಾ ಕಂಡಳು. ಬಳಿಕ ಎದೆಯ ಬಟ್ಟೆ ಸರಿ ಮಾಡಿಕೊಂಡು, ನಾಲಗೆಯನ್ನು ಹಲ್ಲುಗಳಿಂದ ಕಚ್ಚಿ ಹಿಡಿದುಕೊಂಡು – 'ಎಲಾ – ನಿಮ್ಮ ಊರು ಬಂದಾಯಿತು. ನೀನು ಕೂಡ ಒಳ್ಳೆಯ ಮನುಷ್ಯ! ಹಿಂದಿರುಗಿ ಹೋಗಲಿಕ್ಕೆ ಹೇಳಲೇ ಇಲ್ಲವಲ್ಲ?' – ಎನ್ನುತ್ತ ಹಿಂದಿರುಗಿದಳು.

ಗೋಬರನು ಒತ್ತಾಯಪೂರ್ವಕವಾಗಿ ಹೇಳಿದ – 'ಒಂದು ಕ್ಷಣದ ಮಟ್ಟಿಗೆ ನಮ್ಮ ಮನೆಗೇಕೆ ಬರುವುದಿಲ್ಲ? ಅಮ್ಮ ಕೂಡ ನಿನ್ನನ್ನು ನೋಡಿ ಬಿಡಲಿ.'

ಜುನಿಯಳು ಲಜ್ಜೆಯಿಂದ ಕಣ್ಣುಗಳನ್ನು ತಿರುಗಿಸಿ ಹೇಳಿದಳು – 'ನಿನ್ನ ಮನೆಗೆ ಹೀಗೇ ಬರಲಿಕ್ಕಿಲ್ಲ. ಇಷ್ಟು ದೂರದ ವರೆಗೆ ನಿನ್ನೊಡನೆ ಹೇಗೆ ಬಂದೆನೆಂದೇ ನನಗಾಶ್ಚರ್ಯ. ಆಗಲಿ; ಹೇಳು – ಇನ್ನಾವಾಗ ಬರುವೆ? ಇಂದು ರಾತ್ರೆ ನಮ್ಮ ಮನೆಯಲ್ಲಿ ಒಳ್ಳೆಯ ಸಂಗೀತ ನಡೆಯುವುದು. ಬಂದು ಬಿಡು. ನಾನು ನಮ್ಮ ಹಿತ್ತಿಲಲ್ಲಿ ಕಾದಿರುತ್ತೇನೆ.'

'ಒಂದು ವೇಳೆ ಕಾದಿರದಿದ್ದರೆ?'

'ಬಂದ ಹಾಗೇ ಹಿಂದೆ ಹೋಗಿ ಬಿಡು.'

'ಮತ್ತೆ ನಾನು ಬರಲಿಕ್ಕೇ ಇಲ್ಲ.'

'ಬರಲೇ ಬೇಕು. ಹೇಳಿದ್ದೇನೆ ನೋಡು.'

'ನೀನು ಕೂಡ ಅವಶ್ಯ ಸಿಗಲೇ ಬೇಕು. ಹಾಗೆ ಮಾತು ಕೊಡುವೆಯಾ?'

'ನಾನು ಮಾತು ಕೊಡಲಿಕ್ಕಿಲ್ಲ.'

'ಹಾಗಾದರೆ ನಾನು ಬರಲಿಕ್ಕೂ ಇಲ್ಲ.'

'ನನಗೋಸ್ಕರ . . . .' ಜುನಿಯಳು ಬೆರಳು ತೋರಿಸಿ ಹೋಗಿಯೇ ಬಿಟ್ಟಳು. ಪ್ರಥಮ ಸಮಾಗಮದಲ್ಲೇ ಒಬ್ಬರು ಇನ್ನೊಬ್ಬರ ಮೇಲೆ ತಮ್ಮ ತಮ್ಮ ಅಧಿಕಾರ ಹೊಂದಿಸಿಕೊಂಡಿದ್ದರು. 'ಗೋಬರ ಬಂದೇ ಬರುತ್ತಾನೆ; ಬಾರದೆ ಎಲ್ಲಿ ಹೋಗುತ್ತಾನೆ, ನೋಡುವ' – ಎಂದು ಜುನಿಯಳೆಣಿಸಿಕೊಂಡು ಹೋದಳು. 'ಅವಳು ಸಿಕ್ಕಿಯೇ ಸಿಗುತ್ತಾಳೆ; ಸಿಗದೆ ಎಲ್ಲಿ ಹೋಗುತ್ತಾಳೆ, ನೋಡುವ' – ಎಂದು ಗೋಬರನೂ ಎಣಿಸುತ್ತ ಹೋದ.

ಬಳಿಕ ತಾನೊಬ್ಬನೇ ದನ ಹೊಡೆದುಕೊಂಡು ಹೋಗುವಾಗ ಸ್ವರ್ಗ ದಿಂದ ಇಳಿದು ಬಂದವನಂತೆ ತೋರತೊಡಗಿತು ಅವನಿಗೆ.

೬

ದನ ಬಂದಂದಿನಿಂದ ಹೋರಿರಾಮನ ಮನೆಗೊಂದು ಹೊಸ ಶೋಭೆಯೇ ಮೂಡಿ ಬಂದಂತಿತ್ತು. ದನಿಯಳ ಹೆಮ್ಮೆಯಂತು ಅಂಕೆ ಮೀರಿ ಹೋಗುವುದ ರಲ್ಲಿತ್ತು. ಯಾವಾಗ ನೋಡಿದರೂ ದನದ್ದೇ ಮಾತು, ಕತೆ, ಚರ್ಚೆ.

ಮೇವು ಮುಗಿದು ಹೋಗಿತ್ತು. ಕಬ್ಬು ಒಣಗಲಾರಂಭಿಸಿತ್ತು. ಅದರ ಚಿಗುರನ್ನೇ ಕೊಯಿದು ತಂದು ದನಕರುಗಳಿಗೆ ಕೊಡಬೇಕಾಗಿತ್ತು. ಯಾವಾಗ ಮಳೆ ಬಂದೀತು! ಎಂದಿಗೆ ಹುಲ್ಲು ಬೆಳೆದೀತು – ಎಂಬುದಾಗಿ ಎಲ್ಲರ ದೃಷ್ಟಿಯೂ ಆಕಾಶದತ್ತನೇ ಇತ್ತು. ಅರ್ಧ ಆಶಾಢ ಮುಗಿದು ಹೋದರೂ ಮಳೆ ಇಲ್ಲವೇ ಇಲ್ಲ.

ಫಕ್ಕನೆ ಒಂದು ದಿನ ಮೋಡ ಏರಿ ಬಂತು. ಹಾಗೆಯೇ ಆಷಾಢದ ಮೊದಲ ಮಳೆ ಬಿತ್ತು. ರೈತರೆಲ್ಲ ನೊಗ ನೇಗಿಲು ತೆಗೆದುಕೊಂಡು ಗದ್ದೆ ಉಳಲಿಕ್ಕೆ ಹೊರಟಿದ್ದರು -- ಮಾತ್ರ. ರಾಯ್‌ಸಾಹೇಬರ ಏಜಂಟರು ಬಂದು – ಬಾಕಿ ಗೇಣಿಯನ್ನು ಸಲಾಯಿಸುವ ಮೊದಲು ಯಾರೂ ಗದ್ದೆಯಲ್ಲಿ ನೇಗಿಲೂರ ಬಾರದೆಂದು ಹೇಳಿಹೋದರು. ರೈತರ ತಲೆಯಮೇಲೆ ವಜ್ರಾಘಾತವೇ ಆದಂತಾ ಯಿತು. ಈ ಸಮಯದಲ್ಲಿ ಇದೆಂತಹ ಆಜ್ಞೆ! ಯಾರೂ ಊರು ಬಿಟ್ಟು

ಹೋಗುವುದಿಲ್ಲ ತಾನೆ! ಗದ್ದೆಯನ್ನು ಉಳದಿದ್ದರೆ ರೂಪಾಯಾದರೂ ಎಲ್ಲಿಂದ ಬರುವುದು? ರೈತರು ಹಣತೆಗೆಯುವುದಿದ್ದರೂ ಗದ್ದೆಯ ಮೂಲಕವೇ ತಾನೆ!

ಎಲ್ಲರೂ ಸೇರಿಕೊಂಡು ಧನಿಗಳ ಏಜಂಟರಲ್ಲಿಗೆ ಹೋಗಿ ಕಣ್ಣೀರು ಸುರಿಸಿದರು. ಏಜಂಟರ ಹೆಸರು ನೋಖೆರಾಮ ಪಂಡಿತರು. ಮನುಷ್ಯ ಅಷ್ಟು ಕೆಟ್ಟವರಾಗಿದ್ದಿಲ್ಲ. ಆದರೆ ಧನಿಗಳ ಅಪ್ಪಣೆ! ಅದನ್ನು ಮೀರುವುದು ಹೇಗೆ? ಸ್ವಲ್ಪವೇ ದಿನಗಳ ಮೊದಲು ರಾಯ್ ಸಾಹೇಬರು ಹೋರಿರಾಮನೊಡನೆ ಧರ್ಮ ದಯೆಗಳ ಕುರಿತು ಎಷ್ಟೆಲ್ಲ ಮಾತಾಡಿದ್ದರು! ಅದರ ಮೇಲೆ ಇಂದು ಈಗ ರೈತರ ಮೇಲೆ ಈ ತರದ ಬಲಾತ್ಕಾರ! ಹೋರಿರಾಮ ಒಮ್ಮೆ ಧನಿಗಳ ಹತ್ತಿರ ಹೋಗಲು ಅಣಿಯಾದ. ಆದರೆ ಪುನಃ ಯೋಚನೆ ಬಂತು–'ಒಮ್ಮೆ ಧನಿಗಳು ಹುಕುಂ ಕೊಟ್ಟು ಏಜಂಟರ ಮೂಲಕ ಹೇಳಿ ಕಳುಹಿಸಿದ ಮೇಲೆ ಅದನ್ನು ಬದಲಾಯಿಸುವರೇ? ನಾನೊಬ್ಬನು ಮಾತ್ರ ಮುಂದೆ ಹೋಗಿ ಏಕೆ ಕೆಟ್ಟವನಾಗಬೇಕು? ಇನ್ನಾರೂ ಎಂದಿಗೂ ತುಟಿ ಬಿಚ್ಚುವುದೇ ಇಲ್ಲವೆಂದಾದ ಮೇಲೆ ನಾನೊಬ್ಬನೇ ಏಕೆ ಮುಂದೆ ಹೋಗಿ ಬೆಂಕಿಯಲ್ಲಿ ಬೀಳಬೇಕು? ಎಲ್ಲರ ತಲೆಗೆ ಬಂದುದು ನನ್ನ ತಲೆಗೂ ಬರಬಹುದು. ಅಷ್ಟೆ ತಾನೆ!'

ಒಕ್ಕಲುಗಳಲ್ಲೆಲ್ಲ ಕಳವಳ ಹಬ್ಬಿ ಹೋಯಿತು. ಎಲ್ಲರೂ ಊರಿನ ಹಣವಂತರ ಬಳಿ ಸಾಲಕ್ಕಾಗಿ ಓಡಿದರು. ಊರಲ್ಲಿ ಮಂಗಾರಾಮರು ಇತ್ತೀಚೆ ಹೆಸರು ಹೋದ ಹಣವಂತರು. ಈ ವರ್ಷದ ಸಣಬಿನಲ್ಲಿ ಅವರಿಗೆ ಒಳ್ಳೆಯ ಲಾಭವಾಗಿತ್ತು. ಅವರಿಗೆ ಗೋದಿ ಮತ್ತು ಅವರೆಯಲ್ಲಿಯೂ ಕಡಿಮೆ ಬಂದಿದ್ದಿಲ್ಲ. ಇವರಲ್ಲದೆ–ದಾತಾದೀನ್ ಪಂಡಿತರು, ದುಲಾರಿ ಸಾಹುಕಾರ್ತಿ ಸಹ ಹಣದ ವಹಿವಾಟು ನಡೆಸುತ್ತಿದ್ದರು. ಎಲ್ಲರಿಗಿಂತಲೂ ದೊಡ್ಡ ಮನುಷ್ಯ ಜಿಂಗುರೀ ಸಿಂಹರು. ಅವರು ನಗರದ ಒಬ್ಬ ದೊಡ್ಡ ಹಣಗಾರನ ಏಜಂಟರೂ ಆಗಿದ್ದರು. ಅವರ ಕೈಕೆಳಗೆ ಹಲವು ಜನರಿದ್ದರು. ಅಕ್ಕ ಪಕ್ಕದ ಹಳ್ಳಿಗಳಲ್ಲಿ ತಿರುಗಾಡಿ, ಸಾಲ ಕೊಟ್ಟು, ಬಡ್ಡಿ ಸಮೇತ ವಸೂಲು ಮಾಡುತ್ತಿದ್ದರು. ಇವರಿಷ್ಟು ಮಂದಿಯಲ್ಲದೆ ಇನ್ನೂ ಕೆಲವು ಜನ ಚಿಕ್ಕಪುಟ್ಟ ಹಣಗಾರರೂ ಇದ್ದರು. ಅವರು ನೋಟು ಚೀಟಿಗಳಿಲ್ಲದೆಯೂ ಎರಡಾಣೆ ಬಡ್ಡಿಯಿಂದ ಸಾಲ ಕೊಡುತ್ತಿದ್ದರು. ಹಳ್ಳಿಯಲ್ಲಿ ನಾಲ್ಕಾರು ರೂಪಾಯಿ ಕೈಯಲ್ಲಾದೊಡನೆ ಒಬ್ಬ ಹಣವಂತನೆಂದಾಗಿ ಹಣದ ಕೊಡುಕೊಳ್ಳುವುದನ್ನು ನಡೆಸುತ್ತಿದ್ದ. ಬಂದಾಸೊಮ್ಮೆ ಹೋರಿರಾಮ ಸಹ ಹಣಗಾರನೆಂದಾಗಿತ್ತು.

ಆದರ ಪ್ರಭಾವದಿಂದಾಗಿ ಈಗಲೂ ಅವನ ಕೈಯಲ್ಲಿ ಹೂತಿಟ್ಟ ಹಣ ಧಾರಾಳ ಇದೆ ಎಂಬ ನಂಬಿಕೆ ಉಳಿದಿತ್ತು. ಆದರೆ ಆ ಹಣ ಈಗ ಹೋಯಿತೆಲ್ಲಿಗೆ? ಪಾಲಾಗುವಾಗಲೂ ಹೊರ ಬರಲಿಲ್ಲ. ತೀರ್ಥಯಾತ್ರೆ – ಭೋಜನ ಸಮಾರಂಭ– ಇದಾವುದನ್ನೂ ಆತ ಮಾಡಲಿಲ್ಲ. ಆದರೂ ಆ ಹಣ ಎಲ್ಲಿ ಹೋಯಿತು? ಮೆಟ್ಟು ಹರಿದು ಹೋದರೂ ಆದರ ಗಾಯು ಗುಣವಾಗಲಿಲ್ಲ – ಎಂಬಂತಾಗಿತ್ತು ಈ ನಂಬಿಗೆಯ ಪರಿಣಾಮ.

ಅಂತು, ಒಬ್ಬೊಬ್ಬ ರೈತ ಒಂದೊಂದು ದೇವತೆಯನ್ನು ಸಂತೋಷಗೊಳಿಸಬೇಕಾಯಿತು. ಒಬ್ಬ ಒಂದಾಣೆ ಬಡ್ಡಿಯಲ್ಲಿ ಸಾಲ ತೆಗೆದುಕೊಂಡರೆ ಇನ್ನೊಬ್ಬ ಎರಡಾಣೆ ಬಡ್ಡಿಯ ಮೇಲೆ. ಹೋರಿರಾಮನಲ್ಲಿ ಆತ್ಮಾಭಿಮಾನ ಕುಂದಿಹೋಗಿದ್ದಿಲ್ಲ. ಒಮ್ಮೆ ತೆಗೆದುಕೊಂಡದ್ದೇ ಬಾಕಿ ಇರುವಾಗ ಪುನಃ ಅವರನ್ನೇ ಯಾವ ಮುಖದಿಂದ ಕೇಳಹೋಗುವುದು? ಈಗ ಅವನಿಗೆ ಜಿಂಗುರೀಸಿಂಹರಲ್ಲದೆ ಇನ್ನಾರೂ ತೋರಿ ಬರಲಿಲ್ಲ. ಆದರೆ ಅವರು, ಸರಿಯಾದ ಕೈಕಾಗದ ಬರೆಸಿಕೊಳ್ಳುತ್ತಿದ್ದರು. ಕಾಣಿಕೆ ಬೇರೆ, ಸ್ಟಾಂಪ್ ಫೀಸ್ ಬೇರೆ, ಬರೆವಣಿಗೆ ಫೀಸು ಬೇರೆ. ಎಲ್ಲ ಆದ ಮೇಲೆ ಒಂದು ವರ್ಷದ ಬಡ್ಡಿ ಮೊದಲೇ ಕಡಿದಿಟ್ಟುಕೊಳ್ಳುತ್ತಿದ್ದರು. ಅಂತು ಇಪ್ಪತ್ತೈದು ರೂಪಾಯಿಗೆ ಕೈಕಾಗದ ಬರೆದುಕೊಟ್ಟರೆ ಕಷ್ಟದಿಂದ ಹದಿನೇಳು ರೂಪಾಯಿ ಸಿಗುತ್ತಿತ್ತು. ಆದರೆ ಈ ಕಷ್ಟ ಕಾಲದಲ್ಲಿ ಬೇರೇನು ಮಾಡಲು ಸಾಧ್ಯವಿದೆ? ರಾಯ್ ಸಾಹೇಬರು ಜೋರು ಮಾಡುತ್ತಿದ್ದಾರೆ! ಹಾಗಿರುವಾಗ ಇನ್ನಾರ ಹತ್ತಿರ ಆತ ಕೈನೀಡ ಹೋಗುವುದು?

ಜಿಂಗುರೀಸಿಂಹರು ಶಾಲುಹೊದ್ದು ಕೂತುಕೊಂಡು ಹಲ್ಲುಜ್ಜುತ್ತಿದ್ದರು. ಗಿಡ್ಡ, ದಪ್ಪ, ಕಪ್ಪಾದ ದೇಹ; ಬೋಳು ತಲೆ, ಉದ್ದ ಮೂಗು, ತುಂಬಿದ ಮೀಸೆ. ಅಂತೂ ನೋಡುವಾಗ ಸಮರ್ಥ ವಿದೂಷಕನಂತೆ ತೋರಿಬರುತ್ತಿದ್ದರು. ಅವರು ದೊಡ್ಡ ಹಾಸ್ಯಗಾರರೂ ಆಗಿದ್ದರು. ಈ ಊರನ್ನು ಮಾವನ ಮನೆಯಾಗಿ ಮಾಡಿಕೊಂಡು, ಊರ ಗಂಡುಸರೊಡನೆ ಮಾವ, ಭಾವ – ಎಂದೂ, ಹೆಂಗುಸರೊಡನೆ ಅತ್ತೆ, ಅತ್ತಿಗೆ – ಎಂದೂ ಹೇಳುತ್ತ, ಸುಖವಾಗಿ ದಿನಗಳೆಯುತ್ತಿದ್ದರು. ಊರಿನ ಮಕ್ಕಳೆಲ್ಲ ಅವರನ್ನು ಹನುಮನಾಯಕನೆಂದು ಕರೆಯುತ್ತಿದ್ದರು. ಕೋಪದಿಂದ ಜಿಂಗುರೀಸಿಂಹರು ಆಗ – 'ನಿಮ್ಮ ಕಣ್ಣು ಒಡೆದು ಹೋಗಲಿ, ನಿಮ್ಮ ಮನೆಗೆ ಬೆಂಕಿ ಬೀಳಲಿ' – ಎಂದು ಮೊದಲಾಗಿ

ಆಶೀರ್ವಾದ ಕೊಡುತ್ತಿದ್ದರು. ಆದರೆ ಮಕ್ಕಳು ಇದಕ್ಕೆಲ್ಲ ಹೆದರುತ್ತಿದ್ದಿಲ್ಲ. ಹಾಗಿದ್ದರೂ ಜಿಂಗುರೀಸಿಂಹರು ಲೇವಾದೇವಿಯ ವಿಚಾರದಲ್ಲಿ ಬಹಳ ಕಠಿಣ ಮನಸ್ಸಿನವರಾಗಿದ್ದರು. ಬಡ್ಡಿಯ ಒಂದು ಪೈ ಸಹ ಬಿಡುತ್ತಿದ್ದಿಲ್ಲ. ಹಾಗೆಯೇ, ಮ್ಯಾದೆಗೆ ರೂಪಾಯಿ ಸಿಗದಿದ್ದರೆ ಮನೆ ಬಾಗಿಲು ಬಿಟ್ಟು ಏಳುತ್ತಿರಲಿಲ್ಲ.

ಹೋರಿರಾಮನು ಹೋಗಿ, ನಮಸ್ಕಾರ ಹಾಕಿ, ತನ್ನ ಸಂಕಷ್ಟ ಸಮಾಚಾರಗಳನ್ನೆಲ್ಲ ವಿವರಿಸಿದ.

ಮುಗುಳ್ನಗುತ್ತ – 'ಆ ಹಿಂದಿನ ರೂಪಾಯಿಯನ್ನೆಲ್ಲ ಏನು ಮಾಡಿದೆ ?' ಎಂದರು ಜಿಂಗುರೀ ಸಿಂಹರು.

'ಹಿಂದಿನ ರೂಪಾಯಿ ಇದ್ದಿದ್ದರೆ ಈ ಸಾಲಗಾರರ ಕೈಯಿಂದ ಜುಟ್ಟು ಬಿಡಿಸಿಕೊಳ್ಳುತ್ತಿದ್ದಿಲ್ಲವೆ ? ಬಡ್ಡಿ ಏರುತ್ತ ಹೋಗುವುದೆಂದರೆ ಅದೊಂದು ಸಂತೋಷದ ಸಮಾಚಾರವೇ ?'

'ಎಷ್ಟು ಬಡ್ಡಿ ಏರಿದರೂ ಹೂತಿಟ್ಟ ಹಣ ತೆಗೆಯಬಾರದೆಂದಿರುವೆಯೋ-ಏನೋ! ನಿಮ್ಮೆಲ್ಲರ ಕತೆಯೇ ಹಾಗೆ.'

'ಹಾಗೆ ಹಣ ಹೂತಿಡುವುದಾದರೂ ಎಲ್ಲಿಂದ ರಾಯರೇ ? ಇಲ್ಲಿ ಈಗ ಊಟಕ್ಕೇ ಗತಿ ಇಲ್ಲವಾಗಿದೆ. ಹುಡುಗನಿಗೆ ಪ್ರಾಯ ಬಂದಿದೆ. ದೊಡ್ಡ ಹುಡುಗಿಯೂ ಮದುವೆಗೆ ಆಗಿದ್ದಾಳೆ. ಹಣ ಇದ್ದಿದ್ದರೆ ಮತ್ಯಾವುದಕ್ಕಾಗಿ ಹೂತಿಡಬೇಕು ?'

ಜಿಂಗುರೀ ಸಿಂಹರು ಹೋರಿರಾಮನ ಮನೆ ಬಾಗಿಲಲ್ಲಿ ದನ ನೋಡಿದಂದಿನಿಂದ ಅದರ ಮೇಲೆ ಕಣ್ಣಿಟ್ಟುಕೊಂಡೇ ಇದ್ದರು. ಐದು ಸೇರಿಗೆ ಕಡಿಮೆ ಹಾಲಿಲ್ಲವೆಂದು ದನದ ಹೆಗ್ಗಳಿಕೆಯನ್ನು ಹೋರಿರಾಮನ ಮನೆಯವರು ಹೇಳುತ್ತಲೇ ಇದ್ದರು. ಹಾಗಾಗಿ ಈ ಸಂದರ್ಭದಲ್ಲೇ ಹೋರಿರಾಮನನ್ನು ಹಿಡಿದು, ದನ ಒಳಗೆ ಹಾಕಿ ಬಿಡಬೇಕೆಂದು ಜಿಂಗುರೀಸಿಂಹರು ಯೋಚಿಸಿ ಹೇಳಿದರು–

'ಕೈಯಲ್ಲಿ ಈಗೇನೂ ಇಲ್ಲವೆಂದು ನೀನೇ ಒಪ್ಪಿದೆ. ಎಷ್ಟು ರೂಪಾಯಿ ಬೇಕೋ ಅಷ್ಟು ತೆಗೆದುಕೊಂಡು ಹೋಗು. ಆದರೆ ನಿನ್ನ ಒಳ್ಳೆಯದಕ್ಕಾಗಿಯೇ ಹೇಳುತ್ತಿದ್ದೇನೆ– ಏನಾದರೂ ನಗ ನಾಣ್ಯ ಇದ್ದರೆ ಅದನ್ನು ಅಡವು ಇಟ್ಟು ರೂಪಾಯಿ ತೆಗೆದುಕೊ. ಸ್ಟಾಂಪಿನಲ್ಲಿ ಬರೆಸಿದರೆ ಬಡ್ಡಿ ಹೆಚ್ಚು. ಕೊನೆಗೆ ಅದು ಏರುತ್ತ ಹೋಗಿ ತೊಂದರೆಯಲ್ಲಿ ಬೀಳಬೇಕಾದೀತು!'

ಮನೆಯಲ್ಲಿ ಆಭರಣದ ನೂಲು ಸಹ ಇಲ್ಲವೆಂದು ಹೋರಿರಾಮ ಪ್ರಮಾಣ

ಮಾಡಿ ಹೇಳಿದ. ದನಿಯಳ ಕೈಗೆ ಒಂದೊಂದು ಬಳೆ ಇದ್ದರೂ ಅದು ಗಿಲೀಟಿನ ದಾಗಿತ್ತು.

ಜಿಂಗುರೀಸಿಂಹರು ಸಹಾನುಭೂತಿಯುಕ್ತ ಸ್ವರದಿಂದ ಹೇಳಿದರು – 'ಹಾಗಾದರೆ ಒಂದು ಕೆಲಸ ಮಾಡು. ನಿಮ್ಮಲ್ಲಿ ಆ ಹೊಸ ದನ ಬಂದಿದೆಯಲ್ಲ? ಅದನ್ನು ನನಗೆ ಮಾರಿ ಬಿಡು. ಬಡ್ಡಿ, ಸ್ಟಾಂಪು, ಯಾವ ತೊಂದರೆಯೂ ಇಲ್ಲದಂತಾಗುತ್ತದೆ. ನಾಲ್ಕು ಜನರು ಎಷ್ಟು ಬೆಲೆ ಹೇಳುತ್ತಾರೋ-ಅಷ್ಟು ಕೊಟ್ಟು ಬಿಡುತ್ತೇನೆ. ನೀನು ಬಹಳ ಪ್ರೀತಿಯಿಂದ ಅದನ್ನು ತಂದಿದ್ದ ಕಾರಣ ಮಾರಲು ಮನಸ್ಸು ಬರಲಿಕ್ಕಿಲ್ಲ. ಅದು ನನಗೆ ಗೊತ್ತು. ಆದರೆ ಈ ಕಷ್ಟದಿಂದೊಮ್ಮೆ ಮೇಲೆ ಬೀಳಬೇಕಲ್ಲ!'

ಈ ಮಾತು ಕೇಳಿದಾಗ ಒಮ್ಮೆ ಹೋರಿರಾಮನಿಗೆ ನಗು ಬಂತು. ಈ ಸೂಚನೆಯನ್ನು ಶಾಂತ ಮನಸ್ಸಿನಿಂದ ಯೋಚಿಸಿ ನೋಡಲಿಕ್ಕೂ ಅವನು ಬಯಸುತ್ತಿದ್ದಿಲ್ಲ. ಆದರೆ ಜಿಂಗುರೀಸಿಂಹರು ಸಾಲದಿಂದ ಒದಗುವ – ಒಳ್ಳೇದು ಕೆಟ್ಟುದು – ಎಲ್ಲವನ್ನೂ ಸರಿಯಾಗಿ ವಿವರಿಸಿ ಹೇಳಿದ್ದರು. ಸಾಲಗಾರರ ಕಾಟದ ಭೀಷಣ ರೂಪವನ್ನೂ ತೋರಿಸಿದ್ದರು.

ಒಮ್ಮೆಗೇ, ಅವರು ಹೇಳುತ್ತಿರುವುದು ನಿಜವೆಂದು ಹೋರಿರಾಮನಿಗೆ ತೋರಿ ಬಂತು. ಕೈಯಲ್ಲಿ ರೂಪಾಯಿ ಆದಾಗ ಪುನಃ ದನ ತೆಗೆಯಬಾರದೇ? ಮೂವತ್ತು ರೂಪಾಯಿಗೆ ನೋಟು ಬರೆದು ಕೊಟ್ಟರೆ ರೂಪಾಯಿ ಸಿಕ್ಕುವುದು ಬರಿಯ ಇಪ್ಪತ್ತೈದೋ – ಏನೋ! ಅದನ್ನು ಮೂರು ನಾಲ್ಕು ವರ್ಷಗಳ ವರೆಗೆ ಕೊಡದಿದ್ದರೆ – ಭರ್ತಿ ನೂರಾಗುತ್ತದೆ. ಸಾಲವೆಂದರೆ,– ಒಮ್ಮೆ ಬಂದ ಮೇಲೆ ಪುನಃ ಹೊರಟು ಹೋಗುವ ಸುದ್ದಿ ಕೂಡ ತೆಗೆಯದ ಅತಿಥಿಯಂತೆ-ಎಂಬುದು ಅವನ ಅನುಭವಕ್ಕೆ ಬಂದಿತ್ತು.

ಅವನು ಸ್ವಲ್ಪ ಯೋಚಿಸಿ ಹೇಳಿದ – 'ನಾನು ಮನೆಗೆ ಹೋಗಿ ಎಲ್ಲರ ಸಲಹೆ ಕೇಳಿ ಹೇಳುತ್ತೇನೆ, ಆಗದೇ?'

'ಸಲಹೆ ಕೇಳುವುದೇನು? ಸಾಲ ತೆಗೆದುಕೊಳ್ಳಲಿಕ್ಕೆ ತೊಡಗಿದರೆ ಮನೆ ಮಾರೆಲ್ಲ ದಿವಾಳಿಯಾಗಿ ಹೋದೀತಲ್ಲ!'

'ಅದು ನನಗೆ ಗೊತ್ತು, ರಾಯರೇ. ಆದರೂ ಕೇಳಿ ಬಂದು ಉತ್ತರ ಕೊಡುತ್ತೇನೆ.'

ಆತ ಮನೆಗೆ ಬಂದು ಈ ಪ್ರಸ್ತಾಪ ತೆಗೆದ ಮಾತ್ರಕ್ಕೇ ಮನೆಯಲ್ಲೆಲ್ಲ

ಗಲಾಟೆ ಎದ್ದು ಬಿಟ್ಟಿತು. ದನಿಯಳೇಸೋ ಹೆಚ್ಚು ಬೊಬ್ಬೆ ಹೊಡೆಯಲಿಲ್ಲ. ಇಬ್ಬರು ಮಕ್ಕಳಂತೂ ಇಡೀ ಭೂಮಿಯೇ ತಲೆ ಕೆಳಗಾಗುವಂತೆ ಮಾಡಿದರು, ನಮ್ಮ ದನ ನಾವು ಬಿಡಲಿಕ್ಕಿಲ್ಲ. ಹಣ ಎಲ್ಲಿಂದ ಬೇಕಾದರೂ ಮಾಡಿ. ಈ ದನ ಮಾರುವುದಕ್ಕಿಂತ ತನ್ನನ್ನೇ ಮಾರಿ ಬಿಡಿ ' ಎಂದು ಸೋನೆಯು ಖಡಾ ಖಡಿಯಾಗಿ ಹೇಳಿದಳು. ಇದರಿಂದಾಗಿ ಹೋರಿರಾಮ ಉಭಯ ಸಂಕಟದಲ್ಲಿ ಸಿಕ್ಕಿ ಹೋದ.

ಇಬ್ಬರು ಹುಡುಗಿಯರೂ ದನವೆಂದರೆ ನಿಜವಾಗಿ ಜೀವ ಕೊಡುತ್ತಿದ್ದರು. ರೂಪಳಂತೂ ಯಾವಾಗಲೂ ಅದರ ಹತ್ತಿರವೇ ಇದ್ದು, ಅದರ ಹೊಟ್ಟೆಗೆ ಕೊಡುವ ಮೊದಲು ತಾನೇನನ್ನೂ ತಿನ್ನುತ್ತಿದ್ದಿಲ್ಲ. ದನವು ಎಷ್ಟು ಪ್ರೀತಿಯಿಂದ ಅವಳ ಕೈ ನೆಕ್ಕುತ್ತಿತ್ತು! ಎಷ್ಟು ಸ್ನೇಹಯುಕ್ತ ದೃಷ್ಟಿಯಿಂದ ಅವಳನ್ನು ನೋಡುತ್ತಿತ್ತು! ಅದರ ಕರು ಎಷ್ಟು ಚಂದ! ಅದರ ನಾಮಕರಣ ಸಹ ರೂಪಳೇ ಮಾಡಿದ್ದು – 'ಮಟರೂ' ಎಂಬುದಾಗಿ. ರಾತ್ರಿ ಕರುವನ್ನು ತನ್ನ ಹತ್ತಿರವೇ ಮಲಗಿಸಿಕೊಳ್ಳುತ್ತಿದ್ದಳು.

ಈ ದನದ ವಿಚಾರದಲ್ಲಿ ಅಕ್ಕತಂಗಿಯರೊಳಗೆ ಕಾದಾಟಗಳೂ ಆಗಿ ಹೋಗಿದ್ದುವು. ಸೋನೆ ಹೇಳುತ್ತಿದ್ದಳು – ದನ ತನ್ನನ್ನು ಹೆಚ್ಚಿಗೆ ಪ್ರೀತಿಸುತ್ತದೆಂದು; ರೂಪಳು ತನ್ನನ್ನು ಹೆಚ್ಚೆಂದು. ಇದರ ನಿರ್ಣಯ ಈ ವರೆಗೂ ಆಗಿದ್ದಿಲ್ಲ. ಮಾತ್ರವಲ್ಲದೆ ಈ ವ್ಯಾಜ್ಯ ಮುಗಿದೂ ಇದ್ದಿಲ್ಲ.

ಆದರೆ ಹೋರಿರಾಮ ಹಿಂದೆ ಮುಂದೆ ಹೋಗಿ ಹೇಗಾದರೂ ಮಾಡಿ ದನಿಯಳನ್ನು ಒಪ್ಪಿಸಿದ. ಮಿತ್ರನಿಂದ ದನ ಕಡ ತೆಗೆದುಕೊಂಡು ಬಂದು ಅದನ್ನು ಮಾರಿಬಿಡುವುದು ಬಹಳ ಹೀನಕೆಲಸವಾಗಿತ್ತು – ನಿಜ. ಆದರೆ ಕಷ್ಟದಲ್ಲಿ ಸಿಕ್ಕಿ ಬಿದ್ದಾಗ ಮನುಷ್ಯನ ಧರ್ಮಾಧರ್ಮಗಳೆಲ್ಲ ತಲೆಮರೆಸಿಕೊಂಡು ಓಡಿ ಹೋಗುತ್ತವೆ. ಗೋಬರನೂ ಹೆಚ್ಚು ಅಡ್ಡಿ ಬರಲಿಲ್ಲ. ಇತ್ತೀಚೆ ಅವನು ಬೇರೆಯೇ ಒಂದು ಹುಚ್ಚಿನಲ್ಲಿ ಬಿದ್ದಿದ್ದ. ಅಂತು ರಾತ್ರೆ, ಮಕ್ಕಳು ಮಲಗಿದ ಮೇಲೆ, ದನವನ್ನು ಜಿಂಗುರೀಸಿಂಹರಲ್ಲಿ ಬಿಟ್ಟು ಬರುವುದೆಂದು ತಕ್ಕ ಮಟ್ಟಿನ ನಿಶ್ಚಯವಾಯಿತು.

ಹಗಲು ಹೊತ್ತು ಹೇಗೂ ಕಳೆದುಹೋಯಿತು. ಕತ್ತಲಾಯಿತು. ಇಬ್ಬರು ಹುಡುಗಿಯರೂ ಗಂಟೆ ಎಂಟಾಗುವಾಗ ಉಂಡು ತಿಂದು ಮಲಗಿದರು. ಗೋಬರನು ಈ ಕರುಣ ದೃಶ್ಯವನ್ನು ಕಾಣಲಾಗದವನಂತೆ ಎಲ್ಲಿಯೋ ಓಡಿಬಿಟ್ಟಿದ್ದ.

ದನ ಮನೆ ಬಿಟ್ಟು ಹೋಗುವುದನ್ನು ಅವನು ಹೇಗೆ ನೋಡಿಯಾನು ! ತನ್ನ ಕಣ್ಣೀರನ್ನು ಹೇಗೆ ತಡೆದುಕೊಂಡಾನು ! ಹೋರಿರಾಮನು ಕೂಡ ಹೊರಗಿಂದ ಬಹಳ ಕಠೋರ ಮನಸ್ಕನಾಗಿದ್ದ. ಆದರೆ ಮನಸ್ಸು ಮಾತ್ರ ಚಂಚಲವಾಗಿಯೇ ಇತ್ತು. ಅವನು ದನದ ಮುಂದುಗಡೆ ಹೋಗಿ ನಿಂತ. ನೋಡುವಾಗ ಅದರ ಕಪ್ಪಾದ ಕಣ್ಣುಗಳಲ್ಲಿ ನೀರು ತುಂಬಿ ಬಂದಿತ್ತು. ಅದು ತನ್ನನ್ನು ನೋಡಿ ಏನೋ ಹೇಳುತ್ತಿರುವಂತೆ ತೋರಿಬಂತು ಅವನಿಗೆ–' ನಾಲ್ಕೇ ದಿನಗಳಲ್ಲಿ ನಿನ್ನ ಮನಸ್ಸಿಗೆ ಬೇಸರ ಬಂದು ಹೋಯಿತೇ ? ತನ್ನ ಜೀವವಿರುವ ತನಕ ಇದನ್ನು ಮಾರುವುದಿಲ್ಲವೆಂದು ನೀನು ಮಾತು ಕೊಟ್ಟಿದ್ದೆಯಲ್ಲ ? ಇದೇಯೇ ನಿನ್ನ ಮಾತು? ನಾನು ನಿನಗೆ ಯಾವ ವಿಚಾರದಲ್ಲೂ ತೊಂದರೆ ಕೊಟ್ಟಿದ್ದಿಲ್ಲ. ಒಣಗಿದ, ಬೇಡವಾದ, ವಸ್ತುವನ್ನು ಕೊಟ್ಟದ್ದನ್ನು ತಿಂದು ಸಂತುಷ್ಟಳಾಗಿರುತ್ತಿದ್ದೆ. ಹೌದೇ – ಅಲ್ಲವೇ ? ' ಎಂದು ಮೊದಲಾಗಿ ಹೀನೈಸುತ್ತಿರುವಂತೆ ತೋರಿಬಂತು.

ಆಗ ದನಿಯಳೆಂದಳು – ' ಹುಡುಗಿಯರಿಬ್ಬರೂ ನಿದ್ದೆ ಮಾಡಿದರು. ಈಗಲೇ ಏಕೆ ದನವನ್ನು ಕರೆದುಕೊಂಡು ಹೋಗಬಾರದು ? ಮಾರಲೇ ಬೇಕೆಂದು ನಿಶ್ಚಯಿಸಿದ ಮೇಲೆ ಈಗಲೇ ಮಾರಿಬಿಡಿ. '

ಹೋರಿರಾಮ ನಡುಗುವ ಸ್ವರದಿಂದ ಹೇಳಿದ – ' ನನ್ನ ಕೈಯೇ ಬರುವುದಿಲ್ಲ ದನಿಯಾ. ಅವಳ ಮುಖ ನೋಡಲಾಗುವುದಿಲ್ಲ. ಹೋಗಲಿ. ಹಣ–ಬಡ್ಡಿ ಕೊಟ್ಟೇ ತೆಗೆದುಕೊಳ್ಳುವಾ. ದೇವರು ಒಳ್ಳೇದು ಮಾಡಿದರೆ ಮರು ಪಾವತಿ ಮಾಡಲಿಕ್ಕೂ ಆದೀತು. ಒಮ್ಮೆ ಈ ಸಲ ಕಬ್ಬು ನೆಟ್ಟಾಗಲಿ. ಮತ್ತೆ ದೇವರಿದ್ದಾನೆ. '

ದನಿಯಳೂ ಗರ್ವಯುಕ್ತ ಪ್ರೇಮದಿಂದ ಅವನತ್ತ ನೋಡಿ ಹೇಳಿದಳು – ' ಮತ್ತೇನು ? ಇಷ್ಟು ತಪಸ್ಸು ಮಾಡಿಯಾದ ಮೇಲೆ ಮನೆ ಬಾಗಿಲಿಗೆ ದನ ಬಂತು. ಅದನ್ನೂ ಮಾರುವುದೆಂದರೆ ಅರ್ಥವಿದೆಯೇ ? ರೂಪಾಯಿ ನಾಳೆ ಬಡ್ಡಿಗೇ ತೆಗೆದುಕೊಳ್ಳಿ. ಬೇರೆ ಸಾಲವನ್ನೆಲ್ಲ ಪಾವತಿ ಮಾಡುವಾಗ ಇದನ್ನೂ ಮುಗಿಸಿಬಿಡಬಹುದು. '

ಒಳಗಿಂದ ಬಹಳ ಸೆಕೆ ಇತ್ತು. ಗಾಳಿ ನಿಂತಿತ್ತು. ಒಂದು ಎಲೆ ಸಹ ಅಲುಗಾಡುತ್ತಿರಲಿಲ್ಲ. ಮೋಡ ಕವಿದಿತ್ತು. ಆದರೆ ಮಳೆಯ ಲಕ್ಷಣವಿದ್ದಿಲ್ಲ. ಹೋರಿರಾಮ ದನವನ್ನು ಬಿಚ್ಚಿ ಹೊರಗೆ ಗಾಳಿಯಲ್ಲಿ ಕಟ್ಟಬಯಸಿದ. ಆಗ

ದನಿಯುಳು – ದನವನ್ನು ಹಟ್ಟಿಯಿಂದ ಬಿಚ್ಚುವುದೇಕೆಂದು ಕೇಳಿದಾಗ ಅವನು ‘ ಗಾಳಿಯಲ್ಲಿ ಹೊರಗೆ ಕಟ್ಟಿ ಬಿಡುವಾ. ಗಾಳಿಗೆ ಸ್ವಲ್ಪ ಸುಖವಾಗಿರಲಿ’ – ಎನ್ನುತ್ತ ಹೊರಗೆ ಕಟ್ಟಿದ. ಬಳಿಕ ಹಾಗೆಯೇ ತನ್ನ ದೊಡ್ಡ ತಮ್ಮ ಸೋಬ ನನ್ನು ನೋಡಹೋದ.

ಸೋಬನಿಗೆ ಇತ್ತ ಕೆಲ ದಿನಗಳಿಂದ ಕೆಮ್ಮು ನೆಗಡಿಗಳಿಂದಾಗಿ ಆರೋಗ್ಯ ಸರಿಯಾಗಿದ್ದಿಲ್ಲ. ಮದ್ದು ಮಂತ್ರ ಮಾಡಿಸಲಿಕ್ಕೆ ಹಣವಿದ್ದಿಲ್ಲ. ಹೊಟ್ಟೆ ಬಟ್ಟೆ ಗಳಿಗೇ ಕಷ್ಟವಾದ ಮೇಲೆ ಮದ್ದಿನ ಮಾತೆಲ್ಲಿಂದ ? ಇದರಿಂದಾಗಿ ಅವನ ಪರಿ ಸ್ಥಿತಿ ದಿನದಿಂದ ದಿನಕ್ಕೆ ಕೆಡಲಾರಂಭಿಸಿತು. ಸೋಬನು ತುಂಬಾ ಸಹನಶೀಲ ಮನುಷ್ಯ. ತಂಟೆ ತಕರಾರುಗಳಿಂದ ದೂರವಿರುವವನು. ಯಾರ ಗೋಜಿಗೂ ಹೋಗುವವನಲ್ಲ. ತಾನಾಯಿತು ; ತನ್ನ ಕೆಲಸವೂ ಆಯಿತು. ಹೋರಿರಾಮ ನಿಗೆ ಅವನ ಮೇಲೆ ಒಂದು ತರದ ವಿಶ್ವಾಸವಿತ್ತು. ಅವನಿಗೂ ಹೋರಿರಾಮನ ಮೇಲೆ ಒಂದು ತರದ ಗೌರವವಿತ್ತು. ಅವನಲ್ಲಿ ಹೋದ ಮೇಲೆ ರೂಪಾಯಿಯ ಮಾತುಕತೆ, ರಾಯ್‌ಸಾಹೇಬರ ಹೊಸ ಆಜ್ಞೆಯ ವಿಚಾರ–ಎಲ್ಲವೂ ಬಂದು ಹೋಯಿತು.

ಸಾಧಾರಣ ಹನ್ನೊಂದು ಗಂಟೆ ರಾತ್ರಿಯಾಗುವಾಗ ಹೋರಿರಾಮ ಮನೆ ಯತ್ತ ಬಂದ. ಬಂದು ಒಳ ಹೊಕ್ಕುವಾಗ ಯಾರೋ ಒಬ್ಬ ವ್ಯಕ್ತಿ ದನದ ಹತ್ತಿರ ಇದ್ದುದು ತೋರಿಬಂತು. ನೋಡಿ ‘ ಯಾರಲ್ಲಿ ? ’ ಎಂದು ಕೇಳಿದ.

ಆಗ ಹೀರ ಹೇಳಿದ – ‘ ನಾನಣ್ಣ. ನಿಮ್ಮ ಹಟ್ಟಿಯ ಒಲೆಯಿಂದ ಬೆಂಕಿ ಕೊಂಡುಹೋಗಲಿಕ್ಕೆ ಬಂದೆ.’

ತನ್ನ ಒಲೆಯಿಂದ ಹೀರ ಬೆಂಕಿ ಕೊಂಡುಹೋಗಲಿಕ್ಕೆ ಬಂದಿದ್ದಾನೆ, ಎಂಬ ಮಾತಿನಿಂದಲೇ ಅವನಿಗೆ ತಮ್ಮನ ಮೇಲೆ ಆತ್ಮೀಯತೆ ತೋರಿ ಬಂತು. ಊರಲ್ಲಿ ಬೇರೆ ಕೂಡ ಒಲೆಗಳಿವೆ. ಎಲ್ಲಿಯೂ ಬೆಂಕಿ ಸಿಕ್ಕೀತು. ಆದರೂ ಇಲ್ಲಿಗೆ ಬಂದುದು ಅವನು ನಮ್ಮವನೇ ಆದ್ದರಿಂದ ತಾನೆ !

ಊರಿನ ಹೆಚ್ಚಿನ ಜನರು ಇಲ್ಲಿಗೇ ಬೆಂಕಿಗಾಗಿ ಬರುತ್ತಿದ್ದರು. ಅಷ್ಟು ಒಳ್ಳೆಯ ಒಲೆ ಹೋರಿರಾಮನದು. ಆದರೆ ಹೀರನು ಬಂದ ಉದ್ದೇಶವೇ ಬೇರೆ. ಅದು ಕೂಡಾ ಆ ದಿನದ ದೊಡ್ಡ ಜಗಳದ ಮೇಲೆ. ಹೀರನು ಕಪಟಶೀಲನಲ್ಲ ವಾದರೂ ಹಟವಾದಿ !

ಹೋರಿರಾಮ ಸ್ನೇಹಯುಕ್ತ ಸ್ವರದಿಂದ – ‘ ಹೊಸ ಹೊಗೆಸೊಪ್ಪಿದೆ–

ಬೇಕೇ ?' ಎಂದು ಕೇಳಿದ.

'ಬೇಡ. ನಾನೂ ಇಂದು ಹೊಗೆಸೊಪ್ಪು ತಂದಿದ್ದೇನೆ.'

'ಆದರೆ, ಇಂದು ಸೋಬ ಬಹಳ ನಿಸ್ತ್ರಾಣವಾಗಿ ಕಾಣುತ್ತಾನೆ ಅಲ್ಲವೇ ?'

'ಯಾವ ಔಷಧಿಯನ್ನೂ ಆತ ತೆಗೆದುಕೊಳ್ಳುವುದಿಲ್ಲ. ಮತ್ತೇನು ಮಾಡ ಬರುತ್ತದೆ ? ಅವನು ಹೇಳುವ ಪ್ರಕಾರ – ಡಾಕ್ಟರ್ರು, ವೈದ್ಯರು, ಹಕೀಮರು ಎಲ್ಲರೂ ಪ್ರಯೋಜನಕ್ಕೆ ಬಾರದವರು ; ಅವನು ಮತ್ತು ಅವನ ಹೆಂಡತಿ ಇಬ್ಬರೇ ಬಹಳ ಬುದ್ಧಿವಂತರು !'

ಹೋರಿರಾಮ ಚಿಂತೆಯಿಂದ ಹೇಳಿದ – "ಅವನಲ್ಲಿರುವ ಒಂದು ಕೆಟ್ಟ ಗುಣವೆಂದರೆ ಅದೇ. ಎಲ್ಲರೂ ಹಾಸಿಗೆ ಹಿಡಿದಾಗ ಕೋಪಗೊಂಡು ಪಿರಿ ಪಿರಿ ಮಾಡುತ್ತಿರುತ್ತಾರೆ – ನಿಜ. ನಿನಗೆ ನೆನಪುಂಟೋ – ಇಲ್ಲವೋ ? ನಿನಗೆ ಹಿಂದೊಮ್ಮೆ 'ಇಂಪೆಂಜಾ' ಜ್ವರ ಬಂದಾಗ ನೀನು ಔಷಧಿ ತೆಗೆದು ಎಸೆದು ಬಿಡುತ್ತಿದ್ದೆ. ಆಗ ನಾನು ನಿನ್ನ ಎರಡೂ ಕೈಗಳನ್ನು ಬಿಗಿಯಾಗಿ ಹಿಡಿಯು ತ್ತಿದ್ದೆ. ಆಗ ನಿನ್ನತ್ತಿಗೆ ಬಾಯಿಗೆ ಔಷಧಿ ಹೊಯ್ಯುತ್ತಿದ್ದಳು. ಆದಕ್ಕಾಗಿ ನೀನು ಅವಳಿಗೆ ಚನ್ನಾಗಿ ಬೈಯ್ಯುತ್ತಿದ್ದೆ."

'ಹೌದಣ್ಣ ; ಅದು ಹೇಗೆ ಮರೆತುಹೋದೀತು ! ನೀನು ಅಷ್ಟೆಲ್ಲ ಮಾಡದಿರುತ್ತಿದ್ದರೆ ನಿನ್ನೊಡನೆ ಕಾದಾಡಲಿಕ್ಕೆ ನಾನು ಬದುಕಿಯೇ ಉಳಿಯು ತ್ತಿದ್ದಿಲ್ಲ.'

ತಮ್ಮನ ಸ್ವರ ಕಟ್ಟಿ ಬಂದುದು ಹೋರಿರಾಮನಿಗೆ ತಿಳಿದು ಬಂತು. ಅವನ ಕುತ್ತಿಗೆಯೂ ಕಟ್ಟಿ ಬಂತು.

'ಲಡಾಯಿ, ಜಗಳ – ಎಲ್ಲ ಸಂಸಾರದಲ್ಲಿ ಧರ್ಮವೇ – ಮಗೂ ! ಅದ ರಿಂದಾಗಿ, ನಮ್ಮವರೆನ್ನುವವರು ಎಂದೂ ಬೇರೆಯಾಗುವುದಿಲ್ಲ. ಒಂದು ಕುಟುಂಬದಲ್ಲಿ ನಾಲ್ಕಾರು ಜನರಿದ್ದ ಮೇಲೆ ಚರ್ಚೆ, ಜಗಳ, ಆಗಿಯೇ ಆಗು ತ್ತದೆ. ಒಬ್ಬನಿಗೆ ಹಿಂದೆ ಮುಂದೆ ಯಾರೂ ಇಲ್ಲದಿದ್ದರೆ ಅವನು ಯಾರೊಡನೆ ಜಗಳಾಡಿಯಾನು ?'

ಇಬ್ಬರೂ ಒಟ್ಟಾಗಿ ಹೊಗೆಬತ್ತಿ ಸೇದಿದರು. ಹೀರ ಅವನ ಮನೆಗೆ ಹೋದ ; ಹೋರಿರಾಮ ಒಳಗೆ ಬಂದ.

ಆಗ ದನಿಯಳು ಕೋಪದಿಂದ ಹೇಳಲಾರಂಭಿಸಿದಳು – 'ನಿಮ್ಮ ಸುಪು ತ್ರನ ಆಟ ನೋಡಿದಿರಲ್ಲವೇ? ಇಷ್ಟು ರಾತ್ರಿಯಾಯಿತು ! ಇನ್ನು ಸಹ

ಅವನ ತಿರುಗಾಟ ಮುಗಿಯುಲಿಲ್ಲ. ನನಗೆಲ್ಲ ಗೊತ್ತಾಗಿದೆ. ಅದು ಈಗ ಗುಟ್ಟಾಗಿ ಉಳಿದಿಲ್ಲ. ಬೋಲನ ಮಗಳು – ಆ ರಂಡೆ ಜುನಿಯುಳಿಲ್ಲವೇ ? ಅವಳ ಬಲೆಯಲ್ಲಿ ಇವನು ಸಿಕ್ಕಿ ಹೋಗಿದ್ದಾನಂತೆ.'

ಹೋರಿರಾಮನ ಕಿವಿಗೂ ಈ ಸುದ್ದಿಯ ಗಾಳಿ ತಾಗಿತ್ತು. ಆದರೆ ಅವನು ಅದನ್ನು ನಂಬಿದ್ದಿಲ್ಲ. ಪಾಪ! ಗೋಬರನಿಗೆ ಇದೆಲ್ಲ ಹೇಗೆ ತಿಳಿದೀತು – ಎಂದು ಅವನ ಯೋಚನೆ. ಆದ್ದರಿಂದ ಅವನು – 'ಯಾರು ನಿನಗೆ ಹೇಳಿದ್ದು?' ಎಂದು ಕೇಳಿದ.

ದನಿಯುಳು ಇನ್ನಷ್ಟು ಪ್ರಚಂಡಳಾದಳು – 'ನಿಮಗೆ ಗೊತ್ತೇ ಆಗಿಲ್ಲವೇ ? ಎಲ್ಲೆಲ್ಲೂ ಇದೇ ಚರ್ಚೆ ನಡೆಯುತ್ತಿದೆ. ಅವಳೊಬ್ಬ ದೊಡ್ಡ ಹರಾಮಿ ! ಹತ್ತು ಬಾವಿಯ ನೀರು ಕುಡಿದವಳು ! ಅವಳು ಇವನನ್ನು ಮಂಗನ ಹಾಗೆ ಕುಣಿಸುತ್ತಿದ್ದಾಳೆ! ಇವನು ಈಗ ಜೀವ ಕೊಡಲಿಕ್ಕೂ ಸಿದ್ಧನಾಗಿದ್ದಾನಂತೆ! ಇವನಿಗೆ ಸ್ವಲ್ಪ ನೀವಾದರೂ ಹೇಳಿ ನೋಡಿ. ಎಲ್ಲಿಯಾದರೂ ಕೆಲಸ ಮೀರಿ ಹೋದರೆ ಮತ್ತೆ ಗತಿಯೇ ಇಲ್ಲವಾದೀತು.'

ಹೋರಿರಾಮನ ಮನಸ್ಸೂ ಚಂಚಲವಾಯಿತು. ಅವನೆಂದ – 'ಜುನಿಯುಳು ನೋಡುವಾಗ ಕೆಟ್ಟವಳಂತೆ ಕಾಣುವುದಿಲ್ಲ. ಅವಳೊಡನೆ ಏಕೆ ನೆಂಟಸ್ತಿಕೆ ನಡೆಸಬಾರದು ? ಇಷ್ಟು ಸುಲಭದಲ್ಲಿ ಇಂತಹ ಹುಡುಗಿ ಬೇರೆಲ್ಲಿ ಸಿಕ್ಕಿಯಾಳು ?'

ದನಿಯುಳಿಗೆ ಈ ಮಾತು ಬಾಣದಂತೆ ತಾಕಿತು – 'ಆ ರಂಡೆ ನನ್ನ ಮನೆ ಬಾಗಿಲಿಗೆ ಬಂದರೆ ಅವಳ ಮುಖಕ್ಕೆ ಬೆಂಕಿ ಇಟ್ಟೇನು. ಗೋಬರ ಅವಳಿಗೆ ಬೇಕಿದ್ದರೆ – ಅವನನ್ನು ಕರೆದುಕೊಂಡು ಎಲ್ಲಿ ಬೇಕಾದರೂ ಹೋಗಲಿ.'

'ಅಲ್ಲ; ಗೋಬರ ಅವಳನ್ನು ಈ ಮನೆಗೇ ಕರೆದು ತಂದರೆ ?'

'ಹೊಡೆದು ಹೊರ ಮಾಡಬೇಕು. ಆ ಮುಂಡೆಯ ಸಂಬಂಧ ಮಾಡಿಕೊಂಡರೆ ನಮ್ಮ ಹುಡುಗಿಯರನ್ನು ಯಾರ ಕುತ್ತಿಗೆಗೆ ಕಟ್ಟುವುದು ? ನಮ್ಮ ಜಾತಿಕಟ್ಟಿನಲ್ಲಿ, ಮತ್ತೆ ನಿಮ್ಮನ್ನಾರು ಕೇಳಿಯಾರು ? ಮನೆ ಬಾಗಿಲಿಗೆ ಒಂದು ನಾಯಿ ಸಹ ಬರಲಾರದು; ಗೊತ್ತೇ ?'

'ಅವಳಿಗೆ ಅದೆಲ್ಲ ಏನು ಗೊತ್ತು ?'

'ನನ್ನ ಮಗನನ್ನು ನಾನು ಹಾಗೇನೂ ಬಿಡಲಿಕ್ಕಿಲ್ಲ. ಜೀವ ತೆಗೆದುಕೊಂಡು, ಈ ತನಕ ಸಾಕಿ ದೊಡ್ಡದು ಮಾಡಿದ್ದೇನೆ! ಈಗ – ಅವಳು ಬಂದು

ಯಜಮಾನಿಕೆ ನಡೆಸುವುದೇ ? ಆ ತಾಟಕಿಯ ಮುಖಕ್ಕೆ ಬೆಂಕಿ ಇಟ್ಟೇನು.'

ಒಡನೆಯೇ ಗೋಬರನು ಓಡಿ ಬಂದು ಗಾಬರಿಯ ಸ್ವರದಿಂದ ಹೇಳಿದ– ' ನಮ್ಮ ದನ– ಸುಂದರಿಗೇನಾಗಿದೆ? ಕಾಳ ಸರ್ಪವೇನಾದರೂ ಬಂದು ಕಡಿಯಿತೆ? ಪಾಪ ! ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದಾಳೆ.'

ಹೋರಿರಾಮು ಕೂಡಲೇ ಎದ್ದು–'ಏನದು–ಅಪಶಕುನ ಮಾತಾಡುತ್ತಿರುವೆ? ಈಗ ತಾನೆ ನೋಡಿ ಬಂದೆ – ಮಲಗಿದ್ದಳು' – ಎನ್ನುತ್ತಾ ಹೊರಗೆ ಓಡಿ ಬಂದ.

ಉಳಿದಿಬ್ಬರೂ ಅವನನ್ನು ಹಿಂಬಾಲಿಸಿದರು. ದೀಪ ಹಿಡಿದು ನೋಡಿದಾಗ ಸುಂದರಿಯ ಬಾಯಿಂದ ನೊರೆ ಬರುತ್ತಿತ್ತು. ಕಣ್ಣು ಮೇಲಾಗಿತ್ತು. ಹೊಟ್ಟೆ ಉಬ್ಬಿ ಬಂದಿತ್ತು. ನಾಲ್ಕೂ ಕಾಲು ನೀಳವಾಗಿ ಬಿದ್ದಿದ್ದುವು. ದನಿಯಳು ತಲೆ ಬಡೆದುಕೊಳ್ಳತೊಡಗಿದಳು. ಹೋರಿರಾಮು ದಾತಾದೀನ್ ಪಂಡಿತರಲ್ಲಿಗೆ ಓಡಿದ. ಆ ಊರಲ್ಲಿ ಅವರು ಪಶು ಚಿಕಿತ್ಸೆಯ ಪಂಡಿತರೂ ಆಗಿದ್ದರು. ಅವರು ಮಲಗಲು ಅಣಿಯಾಗಿದ್ದರು. ಈ ಸುದ್ದಿ ಕೇಳಿ ಓಡಿಕೊಂಡೇ ಬಂದರು. ಒಂದೇ ಗಳಿಗೆಯಲ್ಲಿ ಇಡೀ ಊರಿನ ಜನ ಬಂದು ಸೇರಿತು. ದನಕ್ಕೆ ಯಾರಾದರೂ ಏನೋ ತಿನ್ನಿಸಿರಬೇಕು! ಲಕ್ಷಣ ಸ್ಪಷ್ಟವಾಗಿತ್ತು. ಸರಿಯಾದ ವಿಷ ಕೊಟ್ಟಿರಬೇಕು. ಆದರೆ ಊರಲ್ಲಿ ದನಕ್ಕೆ ವಿಷ ತಿನ್ನಿಸುವ ಗ್ರಾಮಕಂಟಕಿ ಯಾರಿದ್ದಾನು ? ಅಂತಹ ಚಂಡಾಲ ಊರಲ್ಲಿ ಈ ವರೆಗೆ ಇದ್ದಿಲ್ಲ. ಆದರೆ, ಹೊರಗಿಂದ ಹೊಸದಾಗಿ ಈ ಊರಿಗೆ ಯಾರು ಬಂದಿದ್ದಾರೆ ? ಯಾರ ಮೇಲೂ ಸಂದೇಹಕ್ಕೆಡೆಯಾಗುವ ವೈರ, ಹೋರಿರಾಮುನಿಗಿದ್ದಿಲ್ಲ. ಹೀರನೊಡನೆ ಏನೋ ಜೇಡದ ಮಾತು ನಡೆದಿತ್ತು. ಆದರೆ ಅದು ಅಣ್ಣ ತಮ್ಮಂದಿರೊಳಗಿನ ಜಗಳ. ಎಲ್ಲರಿಗಿಂತಲೂ ಹೆಚ್ಚಿನ ದುಃಖವಂತ ಹೀರನೇ ಆಗಿದ್ದನು – ಇಂತಹ ಕೊಲೆಪಾತಕ ಮಾಡಿದವನು ಸಿಕ್ಕಿ ಬಿದ್ದರೆ – ಅವನ ರಕ್ತ ಕುಡಿದುಬಿಟ್ಟೇನೆಂದು ಅವನೇ ಬೊಬ್ಬೆ ಹೊಡೆಯುತ್ತಿದ್ದ. ಅವನು ಕೋಪಿಷ್ಟನಾದರೂ ಇಷ್ಟು ನೀಚನಾಗಿರಲಾರ.

ಅರ್ಧ ರಾತ್ರಿಯ ತನಕ ಗದ್ದಲ ನಡೆಯುತ್ತಲೇ ಇತ್ತು. ಎಲ್ಲರೂ ಹೋರಿರಾಮುನ ದುಃಖದಲ್ಲಿ ಸಹಭಾಗಿಗಳಾದರು. ದನವನ್ನು ಕೊಂದವನಿಗೆ ಎಲ್ಲರೂ ಬೈಯ್ಯುತ್ತಿದ್ದರು. ಅವನು ಆಗ ಸಿಕ್ಕಿ ಬಿಡುತ್ತಿದ್ದರೆ ಅವನ ಪ್ರಾಣ ಇಡುತ್ತಿರಲಿಲ್ಲ. ಹೀಗೆಲ್ಲ ನಡೆಯುವುದಾದರೆ, ತುರು ಕರುಗಳನ್ನು ಇನ್ನು

ಹೊರಗಿಂದ ಕಟ್ಟಲಿಕ್ಕಿದೆಯೇ ? ಈ ತನಕ ಎಲ್ಲರ ದನ ಕರುಗಳೂ ರಾತ್ರಿ ಹಗಲು ಹೊರಗೇ ಇರುತ್ತಿದ್ದುವು. ಯಾರಿಗೂ ಆ ವಿಷಯದ ಯೋಚನೆ ಇದ್ದಿಲ್ಲ. ಇದೀಗ ಊರಿಗೆ ಹೊಸ ಮಾರಿಯೇ ಬಂದಂತಾಯಿತು. ದನ ವೆಂದರೆ ಎಂತಹ ದನ! ಸಾಕ್ಷಾತ್ ದೇವತೆಯೇ ಆಗಿದ್ದಳು! ಹಾಲು ಐದು ಸೇರಿಗೆ ಕಡಮೆ ಇದ್ದಿಲ್ಲ! ಒಂದೊಂದು ಕರುವಿನಲ್ಲಿ ನೂರು ನೂರು ರೂಪಾಯಿ ಬರಬಹುದಿತ್ತು! ದನ ಬಂದು ಹೆಚ್ಚು ದಿನ ಕೂಡಾ ಆಗಿದ್ದಿಲ್ಲ. ಈ ವಜ್ರ ಪಾತ ಆಗಿಯೇ ಹೋಯಿತು!

ಎಲ್ಲ ಜನರೂ ತಮ್ಮ ತಮ್ಮ ಮನೆಗೆ ಹೋದ ಮೇಲೆ ದನಿಯಳು ಗಂಡ ನನ್ನು ಬೈಯ್ಯತೊಡಗಿದಳು –‘ ನಿಮಗೆ ನಾನು ಎಷ್ಟು ಸಲ ಹೇಳಿದೆ! ಆದರೂ ನೀವು ನಿಮ್ಮ ಮನಸ್ಸಿಗೆ ತೋರಿದ್ದನ್ನೇ ಮಾಡಿದಿರಿ. ದನ ಹೊರಗೆ ಕೊಂಡುಹೋಗ ಬೇಡಿ–ಬೇಡಿ – ಎಂಬುದಾಗಿ ಹೇಳುತ್ತಲೇ ಇದ್ದರೂ ನೀವು ಕೇಳಲಿಲ್ಲ. ನಮ್ಮ ಅದೃಷ್ಟ ಅಷ್ಟು ಒಳ್ಳೇದಲ್ಲವೆಂದು ಹೇಳಿದರೂ ನೀವು ಕೇಳಿದಿರೇ? ಸೆಕೆಯಾಗುವುದಂತೆ ದನಕ್ಕೆ – ಸೆಕೆ! ಈಗ ಚನ್ನಾಗಿ ತಂಪಾಯಿ ತಲ್ಲ! ನಿಮ್ಮ ಆತ್ಮಕ್ಕೂ ತಂಪಾಗಿರಬೇಕು! ಜಿಂಗುರೀ ಸಿಂಹರು ಕೇಳಿದೊಡ ನೆಯೇ ಕೊಟ್ಟುಬಿಡುತ್ತಿದ್ದರೆ ಈ ತೊಂದರೆಯೇ ಇರುತ್ತಿದ್ದಿಲ್ಲ. ಕೆಟ್ಟ ಸಂಗತಿ ನಡೆಯುಲಿರುವಾಗ ನಮ್ಮ ಬುದ್ಧಿಯೇ ಕೆಟ್ಟುಹೋಗುತ್ತದೆ. ಇಷ್ಟು ದಿನ ಮನೆಯೊಳಗಿರುವಾಗ ಸೆಕೆಯಾಗಲಿಲ್ಲ. ಪಾಪ ! ಎಷ್ಟು ಬೇಗನೆ ಮನೆಯುವರ ಪರಿಚಯು ಮಾಡಿಕೊಂಡಿದ್ದಳು ! ಮಕ್ಕಳು ಅವಳ ಕೊಂಬು ಹಿಡಿದು ಆಡುತ್ತಿ ದ್ದರು. ತಲೆ ಸಹ ಅಲ್ಲಾಡಿಸುತ್ತಿರಲಿಲ್ಲ. ಮರಿಗೆಯಲ್ಲಿ ಏನು ಹಾಕಿದರೂ ತಿಂದು ನೆಕ್ಕಿ ನಿರ್ಮಲಗೊಳಿಸುತ್ತಿದ್ದಳು. ಅವಳು ನಿಜವಾಗಿಯೂ ಲಕ್ಷ್ಮಿಯೇ ಆಗಿದ್ದಳು ! ಈ ಭಾಗ್ಯಹೀನರ ಮನೆಯಲ್ಲೇಕೆ ಇದ್ದಾಳು ? ಸೋನೆ, ರೂಪ, ಸಹ ಈ ಗಲಾಟೆಯಿಂದಾಗಿ ಎಚ್ಚತ್ತು ಕಂಗಾಲಾಗಿ ನೋಡುತ್ತಿದ್ದರು. ಆ ದನದ ಸೇವೆಯು ಭಾರ ಹೆಚ್ಚಿನಂಶ ಅವರಿಬ್ಬರ ಮೇಲೆಯೇ ಇತ್ತು. ಇಬ್ಬರೂ ಊಟ ಮಾಡಿ ಏಳುವಾಗ ತಮ್ಮ ಪಾಲಿಂದ ಒಂದೊಂದು ತುಂಡು ರೊಟ್ಟಿ ತಂದು ಸ್ವತಃ ಕೊಡುತ್ತಿದ್ದರು. ಅವಳು ಹೇಗೆ ನಾಲಿಗೆ ಚಾಚಿ ತಿನ್ನುತ್ತಿದ್ದಳು! ಅವರ ಕೈಯು ರೊಟ್ಟಿ ಸಿಗುವ ತನಕ ಇಣಿಕಿ ನೋಡುತ್ತಲೇ ಇರುತ್ತಿದ್ದಳು. ನಮ್ಮ ಭಾಗ್ಯವೇ ಕೆಟ್ಟು ಹೋಯಿತಲ್ಲ!’

ಗೋಬರನೂ ಇಬ್ಬರು ಹುಡುಗಿಯರೂ ಅತ್ತು ಅತ್ತು ಮಲಗಿಕೊಂಡರು.

ಹೋರಿರಾಮನೂ ಅಲ್ಲೇ ಒರಗಿದ. ಅವನ ತಲೆಯ ಹತ್ತಿರ ಕುಡಿಯುವ ನೀರಿನ ತಂಬಿಗೆ ಇಡಲಿಕ್ಕೆ ದನಿಯಳು ಬಂದಾಗ ಮೆಲ್ಲನೆ ಹೇಳಿದ – 'ಒಂದು ಯೋಚನೆ ಇದೆ. ನೀನು ಅದನ್ನು ಯಾರೊಡನೆಯೂ ಹೇಳಬಾರದು.'

ಆಗ ದನಿಯಳು – 'ಆಗಲಿ, ಕೇಳುವಾ!' ಎಂದಳು.

'ಸರಿ; ನಿನಗೆ ಯಾರ ಮೇಲಾದರೂ ಸಂದೇಹವಿದೆಯೇ?'

'ನನಗೆ ಯಾರ ಮೇಲೂ ಸಂದೇಹವಿಲ್ಲ. ಯಾರೋ ಹೊರಗಿನ ಮನುಷ್ಯ ನಿರಬೇಕು.'

'ಯಾರ ಹತ್ತಿರವೂ ಹೇಳುವುದಿಲ್ಲ – ತಾನೆ?'

'ಇಲ್ಲ; ಹೇಳುವುದಿಲ್ಲ.'

'ಯಾರ ಹತ್ತಿರವಾದರೂ ಹೇಳಿದರೆ ಕೊಂದೇ ಹಾಕಿಯೇನು.'

'ನನ್ನನ್ನು ಕೊಂದು ಹಾಕಿ ನಿಮಗೇನು ಸುಖ ದೊರಕೀತು? ನಿಮಗೆ ಬೇರೆ ಹುಡುಗಿ, ಇನ್ನು ಸಿಗಲಿಕ್ಕೂ ಇಲ್ಲ. ಜೀವದಲ್ಲಿರುವ ತನಕ ನಿಮ್ಮ ಮನೆ ಮಾರು ನೋಡಿಕೊಂಡೆ. ನಾನು ಸತ್ತ ನಂತರ ತಲೆಯ ಮೇಲೆ ಕೈ ಇಟ್ಟು ಕೊಂಡು ಅಳುವಾಗ ಗೊತ್ತಾಗಬಹುದು. ಈಗ ನಾನು ಕೆಟ್ಟವಳಾದರೂ ಆಗ – ಕಣ್ಣೀರು ಸುರಿವಾಗ – ನನ್ನ ಒಳ್ಳೆಯತನ ತಿಳಿಯಬಹುದು!'

'ಅದು ಹೋಗಲಿ. ನನಗೇನೋ ಹೀರನ ಮೇಲೆಯೇ ಸಂದೇಹ!'

'ಸುಳ್ಳು; ತೀರಾ ಸುಳ್ಳು. ಹೀರ ಅಷ್ಟು ಕೆಟ್ಟವನಲ್ಲ. ಅವನ ಬಾಯಿ ಮಾತ್ರ ಕೆಟ್ಟುದು.'

'ನಾನು ಕಣ್ಣಾರೆ ಕಂಡಿದ್ದೇನೆ. ನಿನ್ನ ಕುತ್ತಿಗೆಯಾಣೆ ಹೌದು.'

'ನೀವು ಕಣ್ಣಾರೆ ಕಂಡಿರೇ? ಯಾವಾಗ?'

"ಆಗಲೇ. ನಾನು ಸೋಬನನ್ನು ನೋಡಿ ಬಂದೆನಲ್ಲ? ಆಗ ಆತ ಸುಂದರಿಯ ಹತ್ತಿರವೇ ಇದ್ದ. 'ಯಾರದು' – ಎಂತ ಕೇಳಿದ್ದಕ್ಕೆ – 'ನಾನು, ಹೀರಾ – ಒಲೆಯಿಂದ ಬೆಂಕಿ ಕೊಂಡುಹೋಗಲಿಕ್ಕೆ ಬಂದೆ' – ಎಂದು ಹೇಳಿದ. ಆ ಮೇಲೆ ನನ್ನೊಡನೆ ಸ್ವಲ್ಪ ಮಾತಾಡುತ್ತಲೂ ಇದ್ದ. ಸನ್ನೊಡನೆ ಗುಡು ಗುಡಿ ಕೂಡ ಸೇದಿದ. ಬಳಿಕ ಅವನು ಅತ್ತ ಹೋದ; ನಾನಿತ್ತ ಬಂದೆ. ಅಷ್ಟರಲ್ಲೇ ಗೋಬರ ಬಂದು ಬೊಬ್ಬೆ ಎಬ್ಬಿಸಿದ. ನಾನು ದನವನ್ನು ಹೊರಗೆ ಕಟ್ಟಿ ಸೋಬನ ಮನೆಗೆ ಹೋಗಿದ್ದಾಗ ಅವನು ಅಲ್ಲಿಗೆ ಬಂದು ದನಕ್ಕೇನೋ ತಿನ್ನಿಸಿ ಹೋಗಿರಬೇಕು. ಆ ಮೇಲೆ ಪುನಃ – ಸತ್ತಿದ್ದಾಳೋ ಇಲ್ಲವೋ –

ಎಂದು ನೋಡಲು ಬಂದಿರಬೇಕು."

ದನಿಯಳು ನಿಟ್ಟುಸಿರು ಬಿಟ್ಟು ಹೇಳಿದಳು – ' ಇವರೆಲ್ಲ ತಮ್ಮಂದಿರು ! ಕುತ್ತಿಗೆ ಕೊಯ್ಯಲಿಕ್ಕೂ ಹಿಂಜರಿಯುವವರಲ್ಲ. ಅಬ್ಬಾ ! ಹೀರನ ಮನಸ್ಸು ಇಷ್ಟು ಕ್ರೂರವಾಗಿದೆಯೇ ? ಆ ಮನೆಮುರುಕನನ್ನು ನಾನು ಸಾಕಿ ಸಲಹಿ ದೊಡ್ಡದು ಮಾಡಿದ್ದೆ. '

' ಆಗಲಿ. ಹೋಗಿ ಮಲಗಿಕೋ. ಮರೆತು ಕೂಡ, ಯಾರೊಡನೆಯೂ ಹೇಳಬೇಡ. '

' ಏನು ! ನಾಳೆ ಬೆಳಗಾದೊಡನೆ ಕೆಂಪು ಟೊಪ್ಪಿಯವರ ಟೇಶನ್ನಿಗೆ – ಅವನನ್ನು ಕಳಿಸದಿದ್ದರೆ–ನಾನು ತಂದೆಯ ಮಗಳಲ್ಲ. ಇಂತಹ ಕೊಲೆ ಪಾತಕಿ ನಿಮ್ಮ ತಮ್ಮನಾಗಿರಲಿಕ್ಕೆ ಯೋಗ್ಯನೇ ? ಈತ ನಮ್ಮ ಕಡು ವೈರಿ. ಅಂತಹ ಕಡುಹಗೆಯನ್ನು ಹಿಡಿಸಿ ಜೈಲಿಗೆ ಕಳಿಸಿದರೂ ಪಾಪ ಬರಲಾರದು. ಬಿಟ್ಟರೇನೇ ಪಾಪ ಬರಬಹುದು. '

ಹೋರಿರಾಮ ಗದರಿಸಿದ – ' ನೋಡು – ಸಾರಿ ಹೇಳಿದ್ದೇನೆ. ಬಾಯಿ ಬಿಟ್ಟರೆ ಅನರ್ಥವಾದೀತು. '

ದನಿಯಳು ಆವೇಶದಿಂದ ಹೇಳಿದಳು – ' ಅನರ್ಥವಲ್ಲ, ಅನರ್ಥದ ಅಪ್ಪ ಬಂದರೂ ನಾನು ಬಿಡುವವಳಲ್ಲ. ಅವನನ್ನು ಕತ್ತಲು ಕೋಣೆಗೆ ಕಳಿಸದೆ ಬಿಡಲಿಕ್ಕೇ ಇಲ್ಲ. ಅವನು ಅಲ್ಲಿ ಮೂರು ವರ್ಷ ರಾಗಿ ಬೀಸಬೇಕು, ಮೂರು ವರ್ಷ ! ಅಲ್ಲಿಂದ ಬಂದ ಮೇಲೆ ಜಾತಿ ಸಿಗಬೇಕಾದರೆ–ತೀರ್ಥಯಾತ್ರೆ ಮಾಡಬೇಕು. ನಿಮ್ಮ ಹತ್ತಿರವೇ – ಮಗನ ತಲೆಯ ಮೇಲೆ ಕೈಯಿಡಿಸಿ ಸಾಕ್ಷಿ ಹೇಳಿಸುತ್ತೇನೆ. '

ಹೀಗೆ ಹೇಳುತ್ತಿದ್ದಂತೆಯೇ ಅವಳು ಒಳಹೋಗಿ ಬಾಗಿಲು ಮುಚ್ಚಿಕೊಂಡು ಮಲಗಿದಳು. ಹೊರಗಿಂದ ಹೋರಿರಾಮನೂ ತನ್ನ ಅದೃಷ್ಟವನ್ನು ನಿಂದಿಸಿಕೊಳ್ಳುತ್ತ ಬಿದ್ದುಕೊಂಡ. ಅವನ ಹೊಟ್ಟೆಯಲ್ಲೇ ಆ ವಿಷಯ ನಿಲ್ಲಲಾರದೆ ಹೋದ ಮೇಲೆ ದನಿಯಳ ಹೊಟ್ಟೆಯಲ್ಲಿ ಹೇಗೆ ನಿಂತೀತು ? ಇನ್ನು ಈ ಹಟಗಾರ್ತಿ ಬಿಡುವವಳೇ ಅಲ್ಲ ! ಅವಳು ಹಟ ಹಿಡಿದುಬಿಟ್ಟರೆ ಯಾರ ಮಾತೂ ಕೇಳುವವಳಲ್ಲ. ಇಂದು ಅವನು ಬಹು ದೊಡ್ಡ ತಪ್ಪು ಕೆಲಸ ಮಾಡಿದಂತಾಯಿತು.

ನಾಲ್ಕೂ ಕಡೆಗಳಲ್ಲಿ ನಿಶ್ಶಬ್ದ ಅಂಧಕಾರ ಕವಿದಿತ್ತು. ಎತ್ತುಗಳ ಕುತ್ತಿ

ಗೆಯ ಗಂಟೆಯು ಮಾತ್ರ ಒಮ್ಮೊಮ್ಮೆ ಶಬ್ದ ಮಾಡುತ್ತಿತ್ತು. ಅಲ್ಲಿಂದಲೇ ಸ್ವಲ್ಪ ದೂರದಲ್ಲಿ ದನದ ಹೆಣ ಬಿದ್ದಿತ್ತು. ಹೋರಿರಾಮು ಘೋರ ಪಶ್ಚಾತ್ತಾಪದಿಂದ ಅತ್ತ ಇತ್ತ ಹೊರಳಾಡುತ್ತಿದ್ದ. ಆ ಅಂಧಕಾರದಲ್ಲಿ ಬೆಳಕಿನ ರೇಖೆ ಸಹ ತೋರಿಬರುತ್ತಿರಲಿಲ್ಲ.

೭

ಬೆಳಗಾದೊಡನೆ ಹೋರಿರಾಮನ ಮನೆ ಬಾಗಿಲಲ್ಲಿ ದೊಡ್ಡ ಗದ್ದಲ ಆರಂಭವಾಯಿತು. ಹೋರಿರಾಮನು ದನಿಯಳಿಗೆ ಹೊಡೆಯುತ್ತಿದ್ದ. ದನಿಯಳು ಅವನಿಗೆ ಬೈಯ್ಯುತ್ತಿದ್ದಳು. ಹುಡುಗಿಯರಿಬ್ಬರೂ ದೂರ ನಿಂತು ಅಳುತ್ತಿದ್ದರು. ಗೋಬರನು ತಾಯಿಯನ್ನು ಕಾಪಾಡಲು ಪ್ರಯತ್ನಿಸುತ್ತಿದ್ದ. ಅವನು ಪುನಃ ಪುನಃ ತಂದೆಯ ಕೈಹಿಡಿದು ಹಿಂದಕ್ಕೆಳೆಯುತ್ತಿದ್ದ. ದನಿಯಳ ಬಾಯಿಂದ ಮತ್ತೆ ಪುನಃ ಬೈಯುವ ಮಾತು ಹೊರಟೊಡನೆಯೇ, ಹೋರಿರಾಮನು ತನ್ನ ಕೈ ಬಿಡಿಸಿಕೊಂಡು ಪುನಃ ಮೂರು ನಾಲ್ಕು ಏಟು ಬಾರಿಸಿದ. ಅವನ ಮುದಿಕೋಪವು ಅವನ ಗುಪ್ತ, ಸಂಚಿತ ಶಕ್ತಿಯನ್ನೆಲ್ಲ ಹೊರಗೆಳೆಯುತ್ತಿರುವಂತೆ ತೋರುತ್ತಿತ್ತು. ಇಡೀ ಊರಲ್ಲೇ ಗಲಭೆ ಹಬ್ಬಿಹೋಯಿತು. ಜನರೆಲ್ಲ ಗಂಡ ಹೆಂಡಿರೊಳಗಿನ ಈ ಕಚ್ಚಾಟವನ್ನು ಬಿಡಿಸುವ ನೆಪದಿಂದ ತಮಾಷೆ ನೋಡಲಿಕ್ಕೆ ಬಂದು ಸೇರಿದರು. ಸೋಬನೂ ಕೋಲೂರಿಕೊಂಡು ಮೆಲ್ಲಗೆ ಬಂದು ಸೇರಿದ. ದಾತಾದೀನ್ ಪಂಡಿತರು ಬಂದು ಗದರಿಸಲಾರಂಭಿಸಿದರು – 'ಇದೇನು ಹೋರಿರಾಮು ? ನೀನೂ ಹುಡುಗಾಟಿಕೆ ಮಾಡುವುದೇ ? ಮನೆಯಾಕೆಗೆ ಈ ರೀತಿಯೂ ಹೊಡೆಯುವುದಿದೆಯೇ ? ನಿನಗೆ ಈ ವರೆಗೆ ಈ ರೋಗವಿದ್ದಿಲ್ಲ. ಈಗ ಅದನ್ನು ಹೀರನಿಂದ ಪಡೆದುಕೊಂಡೆಯಾ ?'

ಹೋರಿರಾಮು ಅವರನ್ನು ತಡೆದು ಹೇಳಿದ – 'ಸ್ವಾಮಿ, ಈ ಸಲ ನೀವು ಮಾತಾಡಬೇಡಿ. ಇಂದು ಇವಳಿಗೆ ಹಿಡಿದ ಭೂತ ಬಿಡಿಸಿಯೇ ಬಿಡುತ್ತೇನೆ. ನಾನು ಎಷ್ಟು ಸಲಿಗೆ ಕೊಡುತ್ತೇನೋ – ಅಷ್ಟೇ ಇವಳು ತಲೆಯ ಮೇಲೆ ಏರುತ್ತಿದ್ದಾಳೆ.'

ಆಗ ದನಿಯಳೂ ಹೇಳ ತೊಡಗಿದಳು : 'ಇವರ ಕೊಲೆಪಾತಕಿ ತಮ್ಮಂದಿ

ರನ್ನು ಜೈಲಿಗೆ ಕಳಿಸಿದ ಬಳಿಕವೇ ನಾನು ನೀರು ಮುಟ್ಟಿಯೇನು. ಇವರ ತಮ್ಮನು ದನಕ್ಕೆ ವಿಷ ಕೊಟ್ಟು ಕೊಂದು ಹಾಕಿದ್ದಾನೆ! ಅದಕ್ಕೆ ನಾನು ಟೇಶನ್ನಿಗೆ 'ರಿಪೋರ್ಟ್' ಮಾಡಲಿಕ್ಕೆ ಹೊರಟಾಗ ಈ ಬುದ್ಧಿಗೇಡಿ ನನ್ನನ್ನು ಹೊಡೆಯುತ್ತಿದ್ದಾರೆ. ಇವರಿಗಾಗಿ ನನ್ನ ಜೀವವನ್ನೇ ಸವೆಸಿದ್ದೇನೆ. ಅದಕ್ಕೇ– ನನಗೆ ಈಗ ಬಹುಮಾನ ಸಿಗುತ್ತಿದೆ!'

ಹೋರಿರಾಮನು ಕಣ್ಣು ಕೆರಳಿಸಿ, ಹಲ್ಲು ಕಚ್ಚಿಕೊಂಡು ಹೇಳಿದ– 'ಪುನಃ ಅದೇ ಮಾತು ಬೊಗಳುತ್ತಾಳೆ. ಹೀರ ವಿಷ ತಿನ್ನಿಸಿದ್ದನ್ನು ನೀನು ನೋಡಿರುವೆಯಾ?'

'ಹೀರನು ದನದ ಹತ್ತಿರ ಕಳ್ಳನ ಹಾಗೆ ನಿಂತುಕೊಂಡಿದ್ದಿಲ್ಲವೇ? ನೀವು ಅದನ್ನು ನೋಡಿಲ್ಲವೆಂದು ಪ್ರಮಾಣ ಮಾಡಿ ಹೇಳುವಿರಾ?'

'ಹೌದು; ನಾನು ನೋಡಿಲ್ಲ. ಪ್ರಮಾಣ ಮಾಡಿ ಹೇಳುತ್ತೇನೆ.'

'ಮಗನ ತಲೆಯ ಮೇಲೆ ಕೈ ಇಟ್ಟು ಪ್ರಮಾಣ ಮಾಡಿ ಹೇಳಿ ನೋಡುವಾ?'

'ಹೋರಿರಾಮು ಗೋಬರನ ತಲೆಯ ಮೇಲೆ ನಡುಗುತ್ತಿರುವ ತನ್ನ ಕೈಯನ್ನಿಟ್ಟು, ನಡುಗುತ್ತಿರುವ ಸ್ವರದಿಂದ ಹೇಳಿಯೇ ಬಿಟ್ಟ – 'ಮಗನಾಣೆಗೂ ಹೌದು. ನಾನು ಹೀರನನ್ನು ದನದ ಹತ್ತಿರ ಕಾಣಲಿಲ್ಲ.'

ದನಿಯಳು ಭೂಮಿಯ ಮೇಲೆ ಉಗುಳಿಬಿಟ್ಟು ಗದರಿಸಲಾರಂಭಿಸಿದಳು – 'ಥೂ – ಸುಳ್ಳು ಮಾತು! ಹಾಳಾಗಿ ಹೋಗಿ. ಸ್ವತಃ ನನ್ನೊಡನೆ, ಹೀರನು ಕಳ್ಳನ ಹಾಗೆ ದನದ ಹತ್ತಿರ ನಿಂತು ಕೊಂಡಿದ್ದ – ಎಂಬುದಾಗಿ ಹೇಳಿ, ಈಗ ತಮ್ಮನ ಪಕ್ಷಕ್ಕೆ ಸೇರಿಕೊಂಡು ಸುಳ್ಳು ಬೊಗಳುತ್ತಿದ್ದಾರೆ! ಎಲ್ಲಿಯಾದರೂ ನನ್ನ ಮಗನ ಒಂದೇ ಒಂದು ತಲೆಗೂದಲು ಕೊಂಕಿದರೆ ಇಡೀ ಮನೆಗೆ ಬೆಂಕಿ ಕೊಟ್ಟೇನು. ಎಲ್ಲವನ್ನೂ ಸುಟ್ಟುಹಾಕಿಯೇನು. ದೇವರೇ! ಅಷ್ಟು ಸರಿಯಾಗಿ ಹೇಳಿದ್ದ ಮನುಷ್ಯ ಈಗ ಮಾತನ್ನೇ ತಿರುಗಿಸುತ್ತಿದ್ದಾರಲ್ಲ – ನಾಚಿಕೆ ಇಲ್ಲದೆ!'

ಹೋರಿರಾಮು ಕಾಲನ್ನೆತ್ತಿ ಹೇಳಿದ – 'ಇನ್ನೂ ಹೆಚ್ಚಿಗೆ ಕೋಪ ಬರಿಸಬೇಡ, ನೋಡು; ಒಳ್ಳೇದಾಗಲಿಕ್ಕಿಲ್ಲ.'

'ಹೇಗೂ ಹೊಡೆಯುತ್ತ ಇದ್ದಿರಲ್ಲ; ಇನ್ನೂ ಹೊಡೆಯಿರಿ. ನೀವು ತಂದೆಗೆ ಹುಟ್ಟಿದವರಾದರೆ ನನ್ನನ್ನು ಕೊಂದ ಬಳಿಕವೇ ನೀರು ಕುಡಿಯಬೇಕು. ಪಾಪಿ!

ಹೊಡೆದು ಹೊಡೆದು ನನ್ನ ಜೀವವನ್ನೇ ಅರ್ಧ ಮಾಡಿದ್ದಾರೆ! ಇನ್ನೂ ಇವರಿಗೆ ತೃಪ್ತಿಯಾಗಲಿಲ್ಲ. ನನ್ನನ್ನು ಹೊಡೆದುದರಿಂದ ಬಹು ದೊಡ್ಡ ವೀರನಾದೆನೆಂದು ತಿಳಿದಿದ್ದಾರೆ! ತಮ್ಮಂದಿರ ಇದಿರಲ್ಲಿ ಮಾತ್ರ ನೀರಲ್ಲಿ ಬಿದ್ದ ಇಲಿಯಂತಾಗುತ್ತಾರೆ. ಪಾಪಿ! ಕೊಲೆಪಾತಕಿ!'

ದನಿಯಳು ಜೋರಾಗಿ ಅಳಲಾರಂಭಿಸಿದಳು–' ಈ ಮನೆಗೆ ಬಂದು ನಾನು ಏನೆಲ್ಲ ಪಾಡು ಪಡಲಿಲ್ಲ! ಹೊಟ್ಟೆಗಾಗಿ ಯಾವ ಯಾವ ವೇಷ ಹಾಕಲಿಲ್ಲ! ಒಂದೊಂದು ಕಾಳು ಸಹ ಜಾಗ್ರತೆಯಿಂದ ಕಾಪಾಡಿದೆ. ಒಂದೊಂದು ಕಾಸನ್ನೂ ಉಳಿಸಿದೆ. ಮನೆಯುವರಿಗೆಲ್ಲ ಹೊಟ್ಟೆಗೆ ಹಾಕಿ ನಾನು ನೀರು ಕುಡಿದು ಮಲಗುತ್ತಿದ್ದೆ! ಅದಕ್ಕೇ ಈಗ ನನಗೆ ಈ ಪುರಸ್ಕಾರ ದೊರೆಯುತ್ತಿದೆ. ದೇವರು ಈ ಅನ್ಯಾಯಗಳನ್ನೆಲ್ಲ ನೋಡಿಯೂ ಸುಮ್ಮನಿದ್ದಾನಲ್ಲ! ದ್ರೌಪದಿಯ ಮಾನರಕ್ಷಣೆ ಮಾಡಿದ ಆ ಕೃಷ್ಣ ಇಂದು ಏಕೆ ಬರುವುದಿಲ್ಲ? ಅಯ್ಯೋ ದೇವರೇ!'

ಜನಮತವು ಮೆಲ್ಲಮೆಲ್ಲನೆ ದನಿಯಳತ್ತವೇ ಸರಿಯತೊಡಗಿತು. ದನಕ್ಕೆ ವಿಷಕೊಟ್ಟದ್ದು ಹೀರನೇ ಎಂಬ ವಿಚಾರದಲ್ಲಿ ಯಾರಿಗೂ ಸಂದೇಹವೇ ಉಳಿಯಲಿಲ್ಲ. ಹೋರಿರಾಮು ಸುಳ್ಳು ಪ್ರಮಾಣ ಮಾಡಿದ್ದೆಂಬುದೂ ಗೊತ್ತಾಯಿತು. ಗೋಬರನ ಮನಸ್ಸಿನಲ್ಲಿ–ಆಗ ತಾನೇ ತಂದೆ ಮಾಡಿದ ಸುಳ್ಳು ಪ್ರಮಾಣ–ಅದರ ಪರಿಣಾಮವಾಗಿ ತನಗೆ ಬರಬಹುದಾದ ವಿಪತ್ತಿನ ಯೋಚನೆ–ಇವೆಲ್ಲ ತಂದೆಯ ಮೇಲೆ ಬಲವಾದ ಬೇಸರವನ್ನುಂಟುಮಾಡಿತು.

ಅಷ್ಟಾಗುವಾಗ ಪಂಡಿತರು ಮುಂದೆ ಬಂದು ಹೋರಿರಾಮುನನ್ನು ಚನ್ನಾಗಿ ಗದರಿಸಿದ ಕಾರಣ ಆತನು ಸೋತು ಹೋಗಿ ಸುಮ್ಮನೆ ಹೊರಗೆ ಹೋಗಬೇಕಾಯಿತು. ಅಂತು ಸತ್ಯಕ್ಕೆ ವಿಜಯವಾಯಿತು.

ಅಷ್ಟರಲ್ಲಿ ಪಂಡಿತರು–'ಸೋಬಾ, ನಿನಗೇನಾದರೂ ಗೊತ್ತಿದೆಯೇ–ಏನಾಯಿತೆಂಬುದಾಗಿ?'–ಸೋಬನೊಡನೆ ಕೇಳಿದರು.

ನೆಲದಲ್ಲಿ ಕೋಲೂರಿ ಕೂತುಕೊಂಡು ಸೋಬ ಹೇಳಿದ–' ಸ್ವಾಮಿ,–ನಾನು ಮನೆ ಬಿಟ್ಟು ಹೊರಟು ದಿನ ಎಂಟಾಯಿತು. ಹೋರಿರಾಮಣ್ಣ ಆಗಾಗ್ಗೆ ಬಂದು ಏನಾದರೂ ಮನೆಯಲ್ಲಿ ಕೊಟ್ಟು ಬರುತ್ತಿದ್ದಾರೆ. ಅದನ್ನೇ ಬೇಯಿಸಿ ಕುಡಿದು, ದಿನ ಹೋಗುತ್ತಿದೆ. ಕಳೆದ ರಾತ್ರಿ ಸಹ ಅವರು ನನ್ನ ಹತ್ತಿರ ಬಂದಿದ್ದರು. ಯಾರೇನು ಮಾಡಿದರೆಂದು ನನಗೇನು ಗೊತ್ತು

ವಿೂ? ಹೌದು – ನಿನ್ನೆ ಸಾಯಂಕಾಲ ಹೀರ ನನ್ನ ಮನೆಗೆ ಪಿಕ್ಕಾಸು
ಳಲಿಕ್ಕೆ ಬಂದಿದ್ದ. ಕೇಳಿದ್ದಕ್ಕೆ, ಒಂದು ಬೇರು ಅಗೆಯಲಿಕ್ಕಿದೆಯೆಂದು
ೀಳಿದ. ಆ ಮೇಲೆ ನಾನವನನ್ನು ಕಾಣಲಿಲ್ಲ.'

ದನಿಯಳು ಈ ಮಾತು ಕೇಳಿದೊಡನೆಯೇ ಪುನಃ ಹಾರಿ ಬಿದ್ದಳು —
ಂಡಿತರೇ – ಇದು ಅವನದೇ ಕೆಲಸ. ಸೋಬನ ಮನೆಯಿಂದ ಪಿಕ್ಕಾಸು
ದುಕೊಂಡು ಬಂದು, ಯಾವುದೋ ಒಂದು ವಿಷದ ಬೇರು ಅಗೆದು ತಂದು
ಕ್ಕೆ ತಿನ್ನಿಸಿರಬೇಕು. ಆ ದಿನ ರಾತ್ರಿ ಜಗಳವಾದಂದಿನಿಂದ ಅವನು ಸಮಯ
ಯುತ್ತಲೇ ಇದ್ದಿರಬೇಕು.'

ಪಂಡಿತರೆಂದರು – 'ಈ ಮಾತು ಹೌದಾದರೆ ಅವನಿಗೆ ಆ ಗೋಹತ್ಯದ
ಪ ಬಾರದೆ ಹೋದೀತೆ ? ಪೋಲೀಸಿನವರು ಏನಾದರೂ ಮಾಡಲಿ–ಮಾಡ
ಲಿ. ಧರ್ಮದೇವತೆಯು ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಸದೆ ಇರುವುದಿಲ್ಲ.
ಪಾ ! ನೀನು ಹೋಗಿ ಆ ಹೀರನನ್ನು ಕರೆದುಕೊಂಡು ಬಾ. ಪಂಡಿತರು
ನ್ನನ್ನು ಕರೆಯುತ್ತಾರೆ – ಎಂಬುದಾಗಿ ಹೇಳು. ಅವನು ಹತ್ಯೆ ಮಾಡಿಲ್ಲ
ದರೆ ತುಳಸೀಕಟ್ಟೆಯ ಮುಂದೆ ಗಂಗಾಜಲ ಹಿಡಿದು ಪ್ರಮಾಣ ಮಾಡಲಿ.'

ಆಗ ದನಿಯಳೆಂದಳು – 'ಅವನ ಪ್ರಮಾಣ--ಗಿಮಾಣ–ಯಾವುದನ್ನೂ
ಬಲಿಕ್ಕಾಗುವುದಿಲ್ಲ. ಪ್ರಮಾಣ ಥಟ್ಟನೆ ಮಾಡಿಯಾನು. ಇವರೇ –
ಬಹು ದೊಡ್ಡ ಧರ್ಮಾತ್ಮರೇ – ಸುಳ್ಳು ಪ್ರಮಾಣ ಮಾಡಿದ ಮೇಲೆ ಆ
ೀರನ ಮಾತೇನು ಹೇಳುವುದು ?'

ಗೋಬರನೆಂದ – 'ಮಾಡಲಿ ಸುಳ್ಳು ಪ್ರಮಾಣ. ವಂಶವೇ ನಾಶವಾಗಿ
ೋಗುತ್ತದೆ! ಪಾಪ, ಮುದುಕರು ಬದುಕಿಕೊಂಡಿರಲಿ. ಯುವಕರೆಲ್ಲ
ೀವಿಸಿದ್ದು ಏನು ಪ್ರಯೋಜನ ?'

ರೂಪಳು ಒಂದು ಕ್ಷಣದಲ್ಲಿ ಬಂದು ಹೇಳಿದಳು – 'ಹೀರ ಚಿಕ್ಕಪ್ಪ
ನೆಯಲ್ಲಿಲ್ಲ ಪಂಡಿತರೇ. ಎಲ್ಲಿಯೋ ಹೊರಟು ಹೋಗಿದ್ದಾರೆಂದು ಚಿಕ್ಕಮ್ಮ
ೀಳುತ್ತಿದ್ದಾರೆ.'

ಪಂಡಿತರು ಗಡ್ಡ ತಿಕ್ಕಿಕೊಳ್ಳುತ್ತ ಹೇಳಿದರು – 'ಎಲ್ಲಿ ಹೋಗಿದ್ದಾನೆಂದು
ೀನು ಕೇಳಲಿಲ್ಲವೇ? ಅಥವಾ ಮನೆಯಲ್ಲೇ ಅಡಗಿ ಕೂತುಕೊಂಡಿರುವನೋ?
ೋನಾ ! ನೀನು ಹೋಗಿ ಮನೆಯೊಳಗಿರುವನೋ – ಎಂದು ನೋಡಿ
ರುವೆಯಾ ?'

ದನಿಯಾ ಆಗ ತಡೆದಳು – ‘ ಅವಳನ್ನು ಕಳಿಸಬೇಡಿ ಪಂಡಿತರೇ. ಅ
ತಲೆಯ ಮೇಲೆ ಕೊಲೆಪಾತಕ ಇರುವಾಗ ಆತ ಏನು ಮಾಡಿಯಾನೆಂ
ಹೇಳುವುದೇ ಕಷ್ಟ. ’

ಸ್ವತಃ ಪಂಡಿತರೇ ಕೋಲೂರಿಕೊಂಡು ಹೋಗಿ ವಿಚಾರಿಸಿ, ಅವ
ಎಲ್ಲಿಯೋ ನಿಜವಾಗಿಯೂ ಹೋಗಿದ್ದಾನೆಂದು ಸುದ್ದಿ ತಂದರು – ‘ಜೋಳಿ
ದಂಡ ತೆಗೆದುಕೊಂಡು, ಪುನ್ನಿ ಅಡಗಿಸಿಟ್ಟಿದ್ದ ಐದು ರೂಪಾಯಿಯನ
ಹಿಡಿದುಕೊಂಡು, ಹೋದನಂತೆ. ಎಲ್ಲಿ ಹೋಗುವುದೆಂದು ಕೇಳಿದಾಗ ಉತ್ತ
ಸಹ ಕೊಡದೆ ಹೊರಟು ಹೋದನಂತೆ ! ’

ಚನಿಯಳೂ ತಗ್ಗಿದ ಸ್ವರದಿಂದ ಹೇಳಿದಳು – ‘ ಮುಖಕ್ಕೆ ಮಸಿಯಾ
ರಿಂದ ಎಲ್ಲಿಯೋ ಓಡಿ ಹೋಗಿರಬೇಕು. ’

‘ಹೋಗುವುದೆಲ್ಲಿಗೆ? ಗಂಗಾಸ್ನಾನಕ್ಕಾಗಿ ಹೋಗಿರಬೇಕು’–ಸೋಬನೆಂ

ದನಿಯಾ ಕೇಳಿದಳು – ‘ ತೀರ್ಥಯಾತ್ರೆಗೆ ಹೋಗುವುದಿದ್ದರೆ ರೂಪಾ
ಏಕೆ ? ಈಗೇನೂ ಹಬ್ಬಗಿಬ್ಬ ಸಹ ಇಲ್ಲ. ’

ಈ ಶಂಕೆಗೆ ಉತ್ತರವೇನೂ ದೊರೆಯಲಿಲ್ಲ. ಅಂತೂ ಸಂದೇಹ ಕಡಿ
ಯಾಗಿ ಆ ವಿಚಾರದ ನಿಶ್ಚಯವೇ ಆದಂತಾಯಿತು.

ಇಂದು ಹೋರಿರಾಮನ ಮನೆಯಲ್ಲಿ ಅಗ್ನಿಪ್ರತಿಷ್ಠೆಯೂ ಆಗಲಿ
ಎತ್ತುಗಳಿಗೆ ನೀರು ಸಹ ಯಾರೂ ಕೊಡಲಿಲ್ಲ. ಇಡೀ ಊರಲ್ಲೇ
ಸಮಾಚಾರ ಹಬ್ಬಿತು. ನಾಲ್ಕು ಜನ ಸೇರಿದಲ್ಲೆಲ್ಲ ಇದೇ ಮಾತು ಕ
ಹೀರನು ಓಡಿಯೇ ಹೋಗಿದ್ದಾನೆ. ಅವನಿಗೆ ತಿಳಿದಿರಬೇಕು – ಗುಟ್ಟು ರಟ
ಯಿತು ಎಂದು. ಇನ್ನೀಗ ಜೈಲಿಗೆ ಹೋಗಬೇಕಾದೀತು. ಆದರ ಮೇಲೆ
ಗೋಹತ್ಯೆಯ ಪಾಪ ! ಅದಕ್ಕೇ ಓಡಿರಬೇಕು. ‘ ಹೇಳದೆ ಕೇಳದೆ ಓ
ಬಿಟ್ಟರಲ್ಲಾ’ – ಎಂಬುದಾಗಿ ಪುನ್ನಿಯೂ ಅಳುತ್ತಿದ್ದಳು.

ಈ ಕತೆಯಲ್ಲಿದ್ದ ಕುಂದನ್ನು ಸಾಯಂಕಾಲ ಪೋಲಿಸ್ ಇನ್ಸ್‌ಪೆಕ್ಟರ
ಬಂದು ಭರ್ತಿಮಾಡಿದರು.

ಊರಿನ ಶಾನುಭಾಗರು ಈ ಘಟನೆಯ ರಿಪೋರ್ಟು ಮಾಡಿದ್ದರು. ಅ
ಅವರ ಮುಖ್ಯಕರ್ತವ್ಯ ತಾನೆ! ಹಾಗಾದ ಮೇಲೆ ಪೋಲಿಸ್ ಇನ್ಸ್‌ಪೆಕ್ಟರರು
ತಮ್ಮ ಕರ್ತವ್ಯದಿಂದ ಎಂದೂ ಭ್ರಷ್ಟರಾಗುವುದಿಲ್ಲ. ಈಗ ಊರಿನವ
ಸಹ ಅವರ ಸೇವೆ, ಪೂಜೆ, ಮಾಡಿ ತಮ್ಮ ಕರ್ತವ್ಯಪಾಲನೆ ಮಾಡಲೇ ಬೇಕ

ದಾತಾದೀನ್ ಪಂಡಿತರು, ಜಿಂಗುರೀಸಿಂಹರು, ನೋಖೇರಾಮರು ಮತ್ತು ಅವರ ನಾಲ್ಕು ಮಂದಿ ಪೇದೆಗಳು, ಮಂಗಾರಾಮ ಸಾಹುಕಾರರು, ಪಟೇಶ್ವರೀಲಾಲರು, – ಅಂತು ಹೆಚ್ಚು ಕಡಿಮೆ ಎಲ್ಲರೂ ಬಂದು ಸೇರಿದರು. ಬಂದವರೆಲ್ಲ ಬಗ್ಗಿ ಕೈಮುಗಿದು ಇನ್ಸ್‌ಪೆಕ್ಟರರ ಮುಂದೆ ನಿಂತುಕೊಂಡರು. ಮೊದಲು ಹೋರಿರಾಮನ ವಾಕ್ಮೂಲವಾಯಿತು. ಅವನು ಇನ್ಸ್‌ಪೆಕ್ಟರರ ಮುಂದೆ ಬಂದು ನಿಂತುದು ಇದೇ ಮೊದಲ ಸಲ. ದೇಹಾಂತ ಶಿಕ್ಷೆಯಾಗಿ ಹೋಗುವಷ್ಟು ಭಯ ಅವನಿಗಾಗಿತ್ತು. ದನಿಯಳ ಬೆನ್ನಿಗೆ ಏಟು ಕೊಡುವಾಗ ಅವನ ಅಂಗಾಂಗಗಳು ಉಬ್ಬಿಬರುತ್ತಿದ್ದುವು. ಈಗ ಇನ್ಸ್‌ಪೆಕ್ಟರರ ಇದಿರಲ್ಲಿ ಮಾತ್ರ ಆತ ಆನೆಯು ಹಾಗೆ ಕುಗ್ಗಿ ಹೋಗಿದ್ದ. ಇನ್ಸ್‌ಪೆಕ್ಟರರು ಯೋಚನಾಪೂರ್ಣ ನೇತ್ರಗಳಿಂದ ಅವನ ಒಳ ಹೃದಯದ ತನಕ ನೋಡಿಬಿಟ್ಟಿದ್ದರು. ಮನುಷ್ಯರ ಗುಟ್ಟು ತಿಳಿಯುವುದರಲ್ಲಿ ಅವರಿಗೆ ಒಳ್ಳೆಯ ಅನುಭವವಿತ್ತು. ಓದಿನಿಂದ ಪಡೆದ ಮನೋವಿಜ್ಞಾನ ಮಾತ್ರವೇ ಅಲ್ಲ; ವ್ಯಾವಹಾರಿಕ ಮನೋವಿಜ್ಞಾನವೂ ಅವರಿಗೆ ಚನ್ನಾಗಿ ಗೊತ್ತು. ಇಂದು ಬೆಳಗ್ಗೆ ಅವರು ಒಳ್ಳೆಯವರ ಮುಖ ನೋಡಿ ಎದ್ದಿರಬೇಕು! ಇವನ ಮಟ್ಟಿಗೆ ಒಂದೇ ಗುಟುಕು ಸಾಕೆಂದು ಅವನ ಮುಖವೇ ಹೇಳುತ್ತಿತ್ತು.

'ನಿನಗೆ ಯಾರ ಮೇಲೆ ಸಂಶಯ ಇದೆ?' – ಇನ್ಸ್‌ಪೆಕ್ಟರರು ಕೇಳಿದರು.

ಹೋರಿರಾಮ–'ನನಗೆ ಯಾರ ಮೇಲೂ ಸಂದೇಹ ಇಲ್ಲ ಸ್ವಾಮಿ. ದನ ತನ್ನಷ್ಟಕ್ಕೇ ಸತ್ತು ಹೋಯಿತು. ಬಹಳ ಮುದುಕಿಯಾಗಿತ್ತು'–ಎಂದ, ನೆಲ ಮುಟ್ಟಿ ಕೈ ಜೋಡಿಸಿ.

ಅವನ ಹಿಂದೆಯೇ ನಿಂತಿದ್ದ ದನಿಯಳು ಕೂಡಲೇ ಮುಂದಕ್ಕೆ ಹಾರಿ ಹೇಳಿದಳು –'ದನ ಕೊಂದುದು ನಿಮ್ಮ ತಮ್ಮ ಹೀರ. ನೀವು ಹೇಳಿದ್ದನ್ನೆಲ್ಲ ಒಪ್ಪಿಕೊಳ್ಳಲಿಕ್ಕೆ ಸರಕಾರವೇನೂ ಕುರುಬನಲ್ಲ. ಅದರ ವಿಚಾರಣೆಗೆಂದೇ ಅವರು ಈಗ ಬಂದದ್ದು.'

ಇನ್ಸ್‌ಪೆಕ್ಟರರು ಕೇಳಿದರು –'ಯಾರು ಈ ಹೆಂಗುಸು?'

ಸೇರಿದ ಅನೇಕ ಜನರಿಗೆ ಇನ್ಸ್‌ಪೆಕ್ಟರರ ಹತ್ತಿರ ಮಾತಾಡುವ ಸುಯೋಗವು ಒದಗಿದಂತೆ ತೋರಿತು. ಎಲ್ಲರೂ ಒಟ್ಟಾಗಿ ಹೇಳಿದರು–'ಅವಳು ಹೋರಿರಾಮನ ಹೆಂಡತಿ.' ಹೀಗೆ ಹೇಳುವಾಗ ಪ್ರತಿಯೊಬ್ಬನೂ ತಾನು ಮೊದಲು ಹೇಳಿದ್ದು, ತಾನೇ ಮೊದಲು–ಎಂಬುದಾಗಿ ಸಂತೋಷ ಪಟ್ಟುಕೊಂಡನು.

'ಹಾಗಾದರೆ ಆ ಹೀರನನ್ನೇ ಕರೆಯಿರಿ. ಅವನ ವಾಕ್ಮೂಲವನ್ನೇ ಮೊದಲು ಬರೆದುಕೊಂಡು ಬಿಡುವಾ. ಎಲ್ಲಿದ್ದಾನೆ – ಅವನು ?'

ಸೇರಿದ ಜನರೆಲ್ಲ ಏಕಸ್ವರದಿಂದ ಹೇಳಿದರು – 'ಅವನು ಇಂದು ಬೆಳಿಗ್ಗೆಯೇ, ಎಲ್ಲಿಗೋ ಹೋಗಿಬಿಟ್ಟಿದ್ದಾನೆ ಸ್ವಾಮಿ.'

'ಹಾಗಾದರೆ ನಾನವನ ಮನೆಯ ಜಪ್ತಿ ನಡೆಸಬೇಕಾಗುವುದು!'

ಮನೆಯ ಜಪ್ತಿ! ಹೋರಿರಾಮನ ಶ್ವಾಸವೇ ಕಟ್ಟಿಬಂತು. ಆವನ ತಮ್ಮನ ಮನೆ ಜಪ್ತಿ ನಡೆಯುವುದು – ಅದು ಕೂಡಾ ತಮ್ಮನು ಮನೆಯಲ್ಲಿಲ್ಲದಾಗ! ಆದರೆ, ಹೋರಿರಾಮ ಜೀವದಲ್ಲಿರುವ ತನಕ – ಅವನ ಕಣ್ಣೆದುರು ಈ ಜಪ್ತಿ ಆಗಲೇಬಾರದು. ಈಗ ಅವನಿಗೆ ಧನಿಯಳೊಡನೆ ಯಾವ ಸಂಬಂಧವೂ ಇಲ್ಲ. ಅವಳು ಎಲ್ಲಿಗೆ ಬೇಕೋ – ಅಲ್ಲಿಗೆ ಹೋಗಲಿ. ಅವಳು ಈತನ ಮರ್ಯಾದೆ ತೆಗೆಯಲಿಕ್ಕೆ ನಿಂತ ಮೇಲೆ ಅವಳು ಇನ್ನು ಇವನ ಮನೆಯಲ್ಲಿರಬಹುದೇ ? ಅವಳಿಗೇನಾದರೂ ಬುದ್ಧಿ ಬರಬೇಕಾದರೆ ಬೀದಿ ಬೀದಿ ತಿರುಗಿದ ಮೇಲೆಯೇ.

ಊರಿನ ಜನರೆಲ್ಲ ಈ ಮಹಾ ಸಂಕಟದಿಂದ ಪಾರಾಗುವ ಹಂಚಿಕೆ ಏನೆಂದು ಯೋಚಿಸಲು ಗುಟ್ಟಾಗಿ ಮಾತಾಡಲಾರಂಭಿಸಿದರು.

ದಾತಾದೀನ್ ಪಂಡಿತರೆಂದರು – 'ಇದೆಲ್ಲ ಹಣ ಸಂಪಾದನೆಯ ಉಪಾಯ. ಹೀರನ ಮನೆಯಲ್ಲಿ ಏನಾದರೂ ಇದೆಯೋ – ಎಂದು ಕೇಳಿ ನೋಡಬೇಕಾದರೆ.'

ಪಟೇಶ್ವರೀಲಾಲರು ಉದ್ದ ದೇಹದ ಮನುಷ್ಯ; ಅನುಭವಸ್ಥರು. ಹಾಗಾಗಿ ತನ್ನ ಕಪ್ಪು ಉದ್ದ ಮುಖವನ್ನು ಇನ್ನಷ್ಟು ಉದ್ದಮಾಡಿ ಹೇಳಿದರು – 'ಇಲ್ಲಿ ಬಂದುದು ಮತ್ತೇಕೆ ? ಇಲ್ಲಿ ಬಂದವರು ಎಂದಾದರೂ ಬರಿಗೈಯಲ್ಲಿ ಹೋಗಿದ್ದಾರೆಯೇ ?'

ಜಿಂಗುರೀಸಿಂಹರು ಹೋರಿರಾಮನ ಕಿವಿಯಲ್ಲಿ ಹೇಳಿದರು – 'ಏನಾದರೂ ಕೊಡಲಿಕ್ಕಿದ್ದರೆ ಬೇಗ ತೆಗೆ. ಇಲ್ಲವಾದರೆ ಬಚಾವಾಗಲಿಕ್ಕಿಲ್ಲ.'

ಇನ್ಸ್‌ಪೆಕ್ಟರರು ಪುನಃ ಗರ್ಜಿಸಿದರು – 'ಹೀರನ ಮನೆ ಜಪ್ತಿಗೆ ಹೊರಟೆ ನಾನು.'

ಹೋರಿರಾಮನ ಮುಖ ಒಣಗಿಯೇ ಹೋಯಿತು. ದೇಹದ ರಕ್ತವೆಲ್ಲ ಆರಿಹೋದಂತಾಯಿತು. ಜಪ್ತಿ ಆಗುವ ಮನೆ ತನ್ನದಾದರೇನು, ತಮ್ಮನದಾದರೇನು, ಎರಡೂ ಅವನ ಮಟ್ಟಿಗೆ ಒಂದೇ ಆಗಿತ್ತು. ಈಗ ಬೇರೆಯಾಗಿ

ದ್ದರೂ ಹೀರ ಅವನ ತಮ್ಮನೆಂಬುದು ಜಗತ್ತಿಗೇ ಗೊತ್ತಿದೆ. ಆದರೆ ಈಗ ಅವನೇನು ಮಾಡಿಯಾನು ಪಾಪ? ಕೈಯಲ್ಲಿ ರೂಪಾಯಿ ಇರುತ್ತಿದ್ದರೆ ಆಗಲೇ ಐವತ್ತು ರೂಪಾಯಿ ತಂದು ಇನ್‌ಸ್ಪೆಕ್ಟರರ ಚರಣಕಮಲಗಳ ಮೇಲೆ ಕಾಣಿಕೆಯಾಗಿಟ್ಟು ತನ್ನ ಮಾನ, ಮರ್ಯಾದೆ ಎಲ್ಲವೂ ನಿಮ್ಮ ಕೈಯಲ್ಲಿದೆ – ಎಂದು ಹೇಳುತ್ತಿದ್ದ. ಆದರೆ ಅವನ ಕೈಯಲ್ಲಿ ವಿಷ ತಿನ್ನಲಿಕ್ಕೂ ಒಂದು ಪೈ ಇಲ್ಲ. ದನಿಯಳ ಹತ್ತಿರ ಎಲ್ಲಿಯಾದರೂ ಮೂರು ನಾಲ್ಕು ರೂಪಾಯಿ ಇರಲಿಕ್ಕೂ ಸಾಕು. ಆದರೆ ಆ ಬಜಾರಿಯು ಏಕೆ ಕೊಟ್ಟಾಳು? ಹೀಗೆ ಯೋಚಿಸುತ್ತ ಅವನು ಮರಣದಂಡನೆ ಆದವನಂತೆ ತಲೆ ತಗ್ಗಿಸಿಕೊಂಡು, ತನ್ನ ಅಪಮಾನದ ತೀವ್ರವೇದನೆಯನ್ನನುಭವಿಸುತ್ತ, ಸುಮ್ಮನೆ ನಿಂತುಕೊಂಡ.

ದಾತಾದೀನರು ಬಂದು ಹೋರಿರಾಮನಿಗೆ ಸೂಚನೆ ಇತ್ತರು – ‘ ಈಗ ಈ ರೀತಿ ಸುಮ್ಮನೆ ಕೂತರೆ ಕೆಲಸವಾಗಲಿಕ್ಕಿಲ್ಲ ಏನಾದರೂ ರೂಪಾಯಿಯ ವ್ಯವಸ್ಥೆ ಇದ್ದರೆ ಮಾಡು.’

ಹೋರಿರಾಮ ದೀನಸ್ವರದಿಂದ ಹೇಳಿದ – ‘ ಈಗ ನಾನೇನು ವ್ಯವಸ್ಥೆ ಮಾಡಲಿ ಸ್ವಾಮಿ! ಈ ಮೊದಲಿನ ಹೊಂಡವೇ ತಲೆ ವರೆಗೆ ಬಂದಿದೆ. ಇನ್ನು ಪುನಃ ಯಾವ ಮುಖದಿಂದ ಕೇಳಲಿ? ಹೇಗಾದರೂ ಮಾಡಿ, ತಾವು ಈ ಒಂದು ಸಂಕಷ್ಟದಿಂದ ನನ್ನನ್ನು ಪಾರು ಮಾಡಿದರೆ ಪ್ರತಿಯೊಂದು ಪೈ ಸಹ ಮರುಪಾವತಿ ಮಾಡಿಯೇನು. ನಾನು ಸತ್ತರೂ ಗೋಬರನಿದ್ದಾನೆ.’

ಇನ್ಸ್‌ಪೆಕ್ಟರರಿಗೆ ಎಷ್ಟು ಕಾಣಿಕೆ ಕೊಡುವುದೆಂಬ ವಿಚಾರದಲ್ಲಿ ಊರ ಮುಂದಾಳುಗಳೊಳಗೆ ಮಾತುಕತೆ ನಡೆಯತೊಡಗಿತು. ದಾತಾದೀನರು ಐವತ್ತರ ಪ್ರಸ್ತಾಪ ತೆಗೆದರು. ಜಿಂಗುರೀಸಿಂಹರು ನೂರಕ್ಕೆ ಕಡಿಮೆಯಲ್ಲಿ ಕೆಲಸ ನಡೆಯಲಿಕ್ಕಿಲ್ಲವೆಂದು ಅನುಮಾನಪಟ್ಟರು. ನೋಖೇರಾಮರೂ ನೂರರ ಪಕ್ಷವನ್ನೇ ಹಿಡಿದರು. ಆದರೆ ಹೋರಿರಾಮನ ಮಟ್ಟಿಗೆ ನೂರು ಮತ್ತು ಐವತ್ತರೊಳಗೆ ವ್ಯತ್ಯಾಸವೇ ಇದ್ದಿಲ್ಲ. ಈ ಜಿಡ್ಡಿಯ ಸಂಕಷ್ಟವು ಒಮ್ಮೆ ಅವನ ತಲೆಯಿಂದ ಜಾರಿದ್ದರೆ ಸಾಕಿತ್ತು. ಸತ್ತವನನ್ನು ಐದು ಮಣ ಸೌದೆ ಯಲ್ಲಿ ಸುಟ್ಟರೂ ಒಂದೇ, ಹತ್ತು ಮಣ ಸೌದೆಯಲ್ಲಿ ಸುಟ್ಟರೂ ಒಂದೇ ತಾನೆ!

ಆದರೆ ಪಟೇಶ್ವರೀಲಾಲರಿಗೆ ಈ ಅನ್ಯಾಯ ನೋಡಲಾಗಲಿಲ್ಲ. ಕಳ್ಳತನ ದರೋಡೆಗಳೇನೂ ನಡೆದಿಲ್ಲ ತಾನೆ? ಹಾಗಿರುವಾಗ ಈ ಜಿಡ್ಡಿಗೆ ಇಪ್ಪತ್ತು ರೂಪಾಯಿ ಸಾಲದೇ? – ಎಂದರು ಅವರು.

ಉಳಿದ ಮುಂದಾಳುಗಳೆಲ್ಲ ಅವರನ್ನು ಧಿಕ್ಕರಿಸಿದರು – 'ಹಾಗಾದರೆ ನೀವೇ ಇನ್ಸ್‌ಪೆಕ್ಟರರ ಹತ್ತಿರ ಮಾತಾಡಬೇಕು. ನಾವು ಹತ್ತಿರ ಸಹ ಬರಲಾರೆವು. ಅವರ ಗದರಿಕೆಯನ್ನು ಯಾರು ಸಹಿಸುವುದು ?'

ಹೋರಿರಾಮ ಪಟೇಶ್ವರೀಲಾಲರ ಕಾಲ ಮೇಲೆ ಬಿದ್ದು – 'ಲಾಲರೇ, ನನ್ನನ್ನು ಉದ್ಧಾರ ಮಾಡಿ. ಜೀವದಲ್ಲಿರುವ ವರೆಗೆ ನಿಮ್ಮ ಹೆಸರು ಮರೆಯಲಿಕ್ಕಿಲ್ಲ' ಎಂದು ಬೇಡಿಕೊಂಡ.

ಇನ್ಸ್‌ಪೆಕ್ಟರರು ತಮ್ಮ ವಿಶಾಲವಾದ ಎದೆಯ ಮತ್ತು ದೊಡ್ಡ ಹೊಟ್ಟೆಯ ಸರ್ವಶಕ್ತಿಯನ್ನೂ ಉಪಯೋಗಿಸಿ ಗದರಿಸಿದರು – 'ಎಲ್ಲಿದೆ ಹೀರನ ಮನೆ ? ಅವನ ಮನೆ ಜಡ್ತಿ ಈಗಲೇ ಆಗಬೇಕು.'

ಪಟೇಶ್ವರೀಲಾಲರು ಮುಂದೆ ಬಂದು ಅವರ ಕಿವಿಯಲ್ಲಿ ಹೇಳಿದರು-'ಜಡ್ತಿ ನಡೆಸಿ ಮಾಡುವುದಾದರೂ ಏನು ಸ್ವಾಮಿ ? ಅವನ ಅಣ್ಣನೇ ನಿಮ್ಮಧೀನದಲ್ಲಿದ್ದಾನಲ್ಲವೇ ?'

ಅವರಿಬ್ಬರೂ, ಬಳಿಕ ಬೇರೊಂದೆಡೆ ಹೋಗಿ ಏನೋ ಮಾತು ಕತೆ ನಡೆಸಿದರು –

'ಆ ಮನುಷ್ಯ ಹೇಗೆ ?'

'ಬಹಳ ಬಡವ ಸ್ವಾಮಿ. ಊಟಕ್ಕೇ ಗತಿ ಇಲ್ಲ.'

'ನಿಜವಾಗಿಯೂ ?'

'ಹೌದು ಸ್ವಾಮಿ. ಸತ್ಯ ಸ್ಥಿತಿಯನ್ನೇ ಹೇಳುವುದು.'

'ಅರೆ! ಐವತ್ತು ರೂಪಾಯಿಗೂ ಗತಿ ಇಲ್ಲವೇ ?'

'ಎಲ್ಲಿಂದ ಸ್ವಾಮಿ? ಅವನ ಹತ್ತಿರ ಹತ್ತು ಸಿಕ್ಕಿದರೆ ಸಾವಿರವೆಂದು ತಿಳಿಯಬೇಕು. ಐವತ್ತಕ್ಕೆ ಆತ ಐವತ್ತು ಜನ್ಮ ಕಳೆಯಬೇಕಾದೀತು. ಅದು ಕೂಡಾ ಸಾಲ ಕೊಡುವವರಿದ್ದರೆ !'

ಇನ್ಸ್‌ಪೆಕ್ಟರರು ಒಂದು ನಿಮಿಷ ಯೋಚನೆಮಾಡಿ ಹೇಳಿದರು – 'ಹಾಗಾದರೆ ಆವನನ್ನು ಹಿಡಿಸಿ ಏನು ಪ್ರಯೋಜನ ? ತನ್ನಷ್ಟಕ್ಕೇ ಸಾಯ ಹೊರಟವನನ್ನು ನಾವೇಕೆ ಕೊಲ್ಲ ಹೋಗಬೇಕು ?'

ಪಟ್ಟೇಶ್ವರೀಲಾಲರ ಬಾಣ, ಗುರಿಯನ್ನು ಮೀರಿ ಸ್ವಲ್ಪ ಮೇಲಕ್ಕೆ ಹೋಗಿ ತಾಗಿತು. ಹಾಗಾಗಿ ಹೇಳಿದರು – 'ಅಲ್ಲ ಸ್ವಾಮಿ, ಹಾಗೆ ಮಾಡಬೇಡಿ. ಮತ್ತೆ – ನಾವಾದಗೂ ಎಲ್ಲಿ ಹೋಗುವುದು ? ನಮಗಾದರೂ ಬೇರೆ

ಾವಿ ಇದೆಯೇ ?'

'ನೀವು ಈ ಇಲಾಖೆಯ ಶಾನುಭಾಗರು. ನೀವೂ ಈ ಮಾತು ಆಡುವುದೇ?'

'ನಿಮ್ಮ ಹೆಸರಲ್ಲಿ ನಮಗೂ ಏನಾದರೂ ಸಿಗಬೇಕಾದರೆ ಇಂತಹ ಸಂದರ್ಭದಲ್ಲೇ. ಇಲ್ಲವಾದರೆ ಶಾನುಭಾಗರನ್ನು ಯಾರು ಕೇಳುತ್ತಾರೆ ?'

'ಹಾಗಾದರೆ ಹೋಗಿ ; ಮೂವತ್ತು ರೂಪಾಯಿ ಕೊಡಿಸಿ. ಅದರಲ್ಲಿ ಪ್ಪತ್ತು ನಮಗೆ, ಹತ್ತು ನಿಮಗೆ. ಉಳಿದ ನಾಲ್ಕು ಜನ ಊರ ಮುಂದಾಳು ೀಗೂ ಏನಾದರೂ ಕೊಡಿಸಿ. ಬೇಗ, ನನಗೆ ತಡವಾಗುತ್ತಿದೆ.'

ಪಟೇಶ್ವರೀ ಲಾಲರು ಹೋಗಿ ಜಿಂಗುರೀ ಸಿಂಹರಿಗೆ ಸೂಚನೆ ಕೊಟ್ಟರು. ಂಗುರೀ ಸಿಂಹರು ಹೋರಿರಾಮನನ್ನು ಕೈ ಸನ್ನೆಯಿಂದ ಕರೆದರು. ಮನೆಗೆ ೆದುಕೊಂಡು ಹೋಗಿ ಮೂವತ್ತು ರೂಪಾಯಿ ಲೆಕ್ಕ ಮಾಡಿಕೊಟ್ಟು ಮೆಲ್ಲಗೆ ಳಿದರು – 'ಇಂದೇ ರಾತ್ರಿ ಕೈಕಾಗದ ಬರೆಸಿ ಕೊಟ್ಟುಬಿಡು. ಈಗ, ನಿನ್ನ ುಖ ನೋಡಿ ಕೊಡುತ್ತಿದ್ದೇನೆ.'

ಹೋರಿರಾಮ ಪ್ರಸನ್ನ ಮುಖದಿಂದ ರೂಪಾಯಿ ತೆಗೆದುಕೊಂಡ. ಬಳಿಕ ನನ್ನು ತನ್ನ ಬಟ್ಟೆಯ ತುದಿಯಲ್ಲಿ ಕಟ್ಟಿಕೊಂಡು ಇನ್ಸ್‌ಪೆಕ್ಟರರ ಹತ್ತಿರ ೋದ.

ಆಗ ಥಟ್ಟನೆ ಹಾರಿಕೊಂಡು ದನಿಯಳು ಮುಂದೆ ಬಂದಳು. ಬಂದು ವನ ಕೈಯಿಂದ ಆ ಬಟ್ಟೆಯನ್ನು ಬಲವಾಗಿ ಸೆಳೆದುಕೊಂಡಳು. ಹಣ ಸರಿ ಾಗಿ ಬಟ್ಟೆಯಲ್ಲಿ ಕಟ್ಟಿರಲಿಲ್ಲ. ಎಳೆದ ಕೂಡಲೇ ಗಂಟು ಬಿಚ್ಚಿಹೋಗಿ ಣ್ಯಗಳೆಲ್ಲಾ ನೆಲದಮೇಲೆ ಹರಡಿಕೊಂಡವು. ದನಿಯಾ ಸರ್ಪಿಣಿಯ ಹಾಗೆ ುಸುಗುಟ್ಟುತ್ತಾ – 'ಈ ರೂಪಾಯನ್ನೆಲ್ಲಾ ಎಲ್ಲಿಗೆ ತೆಗೆದುಕೊಂಡು ೋಗುವಿರಿ ? ಒಳ್ಳೇದಾಗಬೇಕೆಂದಿದ್ದರೆ ಆ ಎಲ್ಲ ರೂಪಾಯಿಯನ್ನೂ ಹಿಂದೆ ೊಟ್ಟುಬಿಡಿ. ಮನೆಯಲ್ಲಿ ನಾವೆಲ್ಲ ರಾತ್ರಿ - ಹಗಲು ಒದ್ದಾಡಿ, ಒಂದೊಂದು ಳು ಸಹ ಹಾಳಾಗದಂತೆ ಉಳಿಸಿದ್ದೇವೆ; ನಮಗೊಂದು ತುಂಡು ಬಟ್ಟೆಗೂ ಿ ಇಲ್ಲ! ಈಗ ಮಾತ್ರ ಹಿಡಿ ತುಂಬ ರೂಪಾಯಿ ಹಿಡಿದುಕೊಂಡು ಹೊರ ರುವಿರಿ, ಮರ್ಯಾದೆ ಉಳಿಸಿಕೊಳ್ಳಲಿಕ್ಕೆ ! ಯಾರ ಮನೆಯಲ್ಲಿ ಒಂದು ಚಿಕ್ಕ ಲಿ ಕೂಡಾ ಬದುಕಲಿಕ್ಕಿಲ್ಲವೋ – ಅಂಥವರಿಗೆ ಮರ್ಯಾದೆಯಂತೆ – ರ್ಯಾದೆ! ಇನ್ಸ್‌ಪೆಕ್ಟರರು ಜಪ್ತಿ ಮಾಡಲೇ ಬೇಕು. ಎಲ್ಲಿ ಬೇಕೋ ಅಲ್ಲಿ ಪ್ತಿ ನಡೆಸಲಿ. ಅತ್ತ, ನಮ್ಮ ನೂರು ರೂಪಾಯಿಯ ದನ ಹೋಯಿತು.

ಇತ್ತ, ಆದರ ಮೇಲೆ ಈ ಕಾಣಿಕೆ ಬೇರೆ! ಅಬ್ಬ–ನಿಮ್ಮ ಮರ್ಯಾದೆಯೇ?
ಎಂದಳು.

ಹೋರಿರಾಮ ರಕ್ತದ ಗುಟುಕು ಕುಡಿದವನಂತೆ ಸುಮ್ಮನಾದ. ನೆರೆದ
ರೆಲ್ಲ ನಡುಗಲಾರಂಭಿಸಿದರು. ಮುಂದಾಳುಗಳ ತಲೆ ಕೆಳಗಾಯಿತು. ಇನ್
ಪೆಕ್ಟರರ ಮುಖವೂ ಸ್ವಲ್ಪ ಇಳಿದು ಹೋಯಿತು. ಅವರ ಜೀವನದಲ್ಲಿ ಇಂತಹ
ಗಂಡಾಂತರ ಈ ವರೆಗೆ ಅನುಭವಕ್ಕೆ ಬಂದಿದ್ದಿಲ್ಲ.

ಹೋರಿರಾಮ ಸ್ತಂಭಿತನಾಗಿ ನಿಂತಿದ್ದ. ದನಿಯಳು ಈ ರೀತಿ ಹತ್ತು ಜನ
ಇದಿರಲ್ಲಿ ಮುಖಭಂಗಮಾಡಿದ್ದು ಅವನ ಜೀವನದಲ್ಲಿ ಇದೇ ಮೊದಲ ಸಲ
ಆದು ಕೂಡ ಎಷ್ಟೊಂದು ದೊಡ್ಡ ಅಪಮಾನ! ಇನ್ನು ಅವನು ಊರಲ್ಲಿ ಮುಖ
ತೋರಿಸುವುದು ಹೇಗೆ?

ಆದರೆ ಇನ್ಸ್‌ಪೆಕ್ಟರರು ಅಷ್ಟು ಸುಲಭದಲ್ಲಿ ಸೋಲುವವರಲ್ಲ. ಅವರು
ಕಣ್ಣು ಕೆಂಪುಮಾಡಿ ಹೇಳಿದರು – 'ಇದರ ಗುಟ್ಟು ಈಗ ನನಗೆ ಗೊತ್ತಾ
ಯಿತು. ಈ ರಾಕ್ಷಸಿಯೇ ಹೀರನನ್ನು ಸಿಕ್ಕಿಸಿ ಹಾಕಲಿಕ್ಕಾಗಿ, ತಾನೇ ದನಕೆ
ವಿಷ ಕೊಟ್ಟು ಕೊಂದಿರಬೇಕು. ಆದು ನಿಶ್ಚಯ.'

ದನಿಯಳು ಮುಂದೆ ಹಾರಿ, ಕೈಕಾಟಮಾಡಿ ಹೇಳತೊಡಗಿದಳು–'ಹೌದು
ನಾನೇ ವಿಷ ಕೊಟ್ಟೆ. ನನ್ನದೇ ದನ. ನಾನೇ ಕೊಂದೆ. ಹೌದು; ಬೇರೆ ಯಾ
ದನವೂ ಅಲ್ಲ ತಾನೆ? ನಿಮ್ಮ ವಿಚಾರಣೆಯಲ್ಲಿ ಆದೇ ತೋರಿ ಬರುವುದಾದ
ಹಾಗೆಯೇ ಬರೆದುಕೊಳ್ಳಿ. ನನ್ನ ಕೈಗೇ ಬೇಕಾದರೆ ಕೋಳ ಹಾಕಿ. ನಿಮ
ನ್ಯಾಯಬುದ್ಧಿ, ಯೋಚನೆಯ ಶಕ್ತಿ, ಎಲ್ಲವೂ ತಿಳಿದುಹೋಯಿತು. ಬಡವ
ಕುತ್ತಿಗೆ ಕೊಯ್ಯುವ ವಿಚಾರ ಬೇರೆ, ಹಾಲಿನದು ಹಾಲಿಗೆ ನೀರಿನದು ನೀರಿ
ಮಾಡುವ ಶಕ್ತಿ ಬೇರೆ.'

ಹೋರಿರಾಮ ಕಣ್ಣಲ್ಲಿ ಬೆಂಕಿಕಾರುತ್ತ ದನಿಯಳ ಮೇಲೆ ಹಾರಿದ. ಆ
ಗೋಬರ ಮುಂದೆ ಹಾರಿ ಅಡ್ಡ ನಿಂತು ಉಗ್ರಸ್ವರದಿಂದ ಹೇಳಿದ–'ಅಪ್ಪಾ
ಈಗ ಬಹಳ ನಡೆದು ಹೋಯಿತು. ನಡೆಯಿರಿ – ಹಿಂದಕ್ಕೆ. ಇಲ್ಲವಾದರೆ ನೀವು
ನನ್ನ ಮುಖ ನೋಡಲಾರಿರಿ. ನಾನು ನಿಮ್ಮ ಮೇಲೆ ಕೈಯೆತ್ತಲಾರೆ. ಅಂತಹ
ದುಷ್ಟ ಮಗ ನಾನಲ್ಲ! ಇಲ್ಲೇ, ನಿಮ್ಮೆದುರಲ್ಲೇ ಕುತ್ತಿಗೆ ಕಡಿದುಕೊಂಡೇನು.

ಹೋರಿರಾಮ ಹಿಂದೆ ಸರಿದ. ಪುನಃ ದನಿಯಳು ಸಿಂಹಿಣಿಯಂತೆ ಗರ್ಜಿಸ
ಲಾರಂಭಿಸಿದಳು – 'ನೀನು ಏಳು ಗೋಬರ. ಇವರು ನನಗೇನು ಮಾಡುತ್ತಾರೆ

ನೋಡುವಾ. ಇನ್ಸ್‌ಪೆಕ್ಟರರೂ ಇಲ್ಲೇ ಇದ್ದಾರೆ! ಇವರ ಧೈರ್ಯ ನೋಡುವಾ. ಮನೆ ಜಪ್ತಿಮಾಡಿದರೆ ಇವರ ಮರ್ಯಾದೆ ಹೋಗುವುದಂತೆ! ಇಡೀ ಊರಿನ ಜನರ ಮುಂದೆ ಹೆಂಡತಿಗೆ ಹೊಡೆದರೆ ಮರ್ಯಾದೆ ಹೋಗುವುದಿಲ್ಲ! ಇದೇ ತಾನೆ ವೀರರ ಧರ್ಮ! ಅಷ್ಟು ದೊಡ್ಡ ವೀರನಾದರೆ ಯಾರಾದರೂ ಗಂಡಸ ರೊಡನೆ ಕಾದಾಡಲಿ. ಕೈಹಿಡಿದ ಹೆಂಡತಿಗೆ ಬಡೆದಮಾತ್ರಕ್ಕೆ ನೀವು ದೊಡ್ಡ ಶೂರನಾಗಲಾರಿರಿ. ಇವಳಿಗೆ ಅನ್ನ ಬಟ್ಟೆ ತಾನು ಕೊಡುತ್ತಿದ್ದೇನೆಂದು ನೀವು ತಿಳಿದಿರಬಹುದು. ಇಂದಿನಿಂದ ನಿಮ್ಮ ಮನೆ ನೀವೇ ನೋಡಿಕೊಳ್ಳಿ. ಇದೇ ಊರಲ್ಲಿ- ನಿಮ್ಮ ಇದಿರಲ್ಲೇ–ರಾಗಿ ಬೀಸಿಕೊಂಡು ಸುಖವಾಗಿ ಜೀವನ ನಡೆಸು ತ್ತೇನೋ ಇಲ್ಲವೋ, ಎಂಬುದಾಗಿ ನೋಡಿ. ನಿಮ್ಮ ಸಂಗಡದ ಜೀವನಕ್ಕಿಂತ ಎಷ್ಟೋ ಪಾಲು ಒಳ್ಳೆಯ ರೀತಿಯಲ್ಲಿದ್ದೇನು. ನೋಡಿ ಬೇಕಾದರೆ.'

ಹೋರಿರಾಮ ಸೋತು ಹೋದ. ಹೆಂಗುಸಿನ ಎದುರು ಗಂಡುಸು ಎಷ್ಟು ನಿರ್ಬಲ, ಎಷ್ಟು ನಿರುಪಾಯ–ಎಂಬುದು ಅವನಿಗೆ ಈಗ ತಿಳಿದು ಬಂತು.

ಮುಂದಾಳುಗಳೆಲ್ಲ ಸೇರಿ ರೂಪಾಯಿಗಳನ್ನು ಹೆಕ್ಕಿ ಒಟ್ಟುಮಾಡಿ ಇನ್ಸ್‌ಪೆಕ್ಟರರನ್ನು ಅಲ್ಲಿಂದ ಹೊರಡುವುದಕ್ಕೆ ಸನ್ನೆಮಾಡಿದರು. ಆಗ ದನಿಯಳು ಮತ್ತೂ ನಾಲ್ಕು ಬಿಸಿ ಬಿಸಿ ಮಾತು ಏರಿಸಿದಳು – 'ಅದು ಯಾರ ರೂಪಾಯಿಯೋ – ಅವರಿಗೇ ಅದನ್ನು ಕೊಟ್ಟುಬಿಡಿ. ನಮಗೆ ಯಾರಿಂದಲೂ ಸಾಲ ಬೇಡ. ನಾನು ಒಂದು ಪೈ ಕೂಡ ಈ ವಿಷಯಕ್ಕೆ ಕೊಡಲಿಕ್ಕಿಲ್ಲ. ಏನು ಬೇಕಾದರೂ ಬರಲಿ. ಗೇಣಿ ಬಾಕಿಯನ್ನು ಸಲ್ಲಿಸಲಿಕ್ಕಾಗಿ ಸಾಲ ಕೇಳಿದಾಗ ಒಂದು ಚಿಕ್ಕಾಸು ಕೂಡಾ ಯಾರೂ ಕೊಡಲಿಲ್ಲ. ಈಗ ಮಾತ್ರ ಒಂದು ಹಿಡಿ ಹಿಡಿ ರೂಪಾಯಿ ಜಣಜಣನೆ ತೆಗೆದು ಕೊಟ್ಟಿದ್ದಾರೆ. ಇವರ ಗುಟ್ಟೆಲ್ಲ ನನಗೆ ಗೊತ್ತು - ಇದರಲ್ಲಿ ಪಾಲು, ಹಂಚೋಣ – ಎಲ್ಲ ನಡೆಯಲಿಕ್ಕಿದೆ. ಎಲ್ಲರ ಬಾಯಿಯೂ ಸಿಹಿಯಾಗಲಿದೆ. ಬಡಬಗ್ಗರ ರಕ್ತಕುಡಿಯುವ ಬಡ್ಡಿ, ಕಾಣಿಕೆ, ಹುಲ್ಲು, ಮೇವು – ಎಲ್ಲದಕ್ಕೂ ಬಡಪಾಯಿಗಳನ್ನು ಸುಲಿಯುವ, ಈ ಪಾತಕಿ ಶಾನುಭಾಗನಂತವನು ಊರಿನ ಮುಂದಾಳು ಬೇರೆ! ಇವರಿಗೆ ಸ್ವರಾಜ್ಯ ಬೇಕಂತೆ! ಜೈಲಿಗೆ ಹೋದ ಮಾತ್ರದಿಂದಲೇ ಸ್ವರಾಜ್ಯ ಸಿಗಲಾರದು. ಸ್ವರಾಜ್ಯ ಸಿಗುವುದು – ಧರ್ಮದಿಂದ – ನ್ಯಾಯದಿಂದ!'

ಮುಂದಾಳುಗಳ ಮುಖಕ್ಕೆ ಮಸಿ ಹಚ್ಚಿದಂತಾಯಿತು. ಇನ್ಸ್‌ಪೆಕ್ಟರರ ಮುಖಕ್ಕೆ ಹಿಡಿಸೂಡಿಯಿಂದ ಹೊಡೆದಂತಾಯಿತು! ಅವರು ಮರ್ಯಾದೆ

ಉಳಿಸಿಕೊಳ್ಳುವುದಕ್ಕೋಸ್ಕರ ಹೀರನ ಮನೆಯತ್ತ ಹೊರಟರು.

ದಾರಿಯಲ್ಲಿ ಇನ್ಸ್‌ಪೆಕ್ಟರರು–'ಭಾರೀ ಧೈರ್ಯದ ಹೆಂಗುಸಪ್ಪಾ!' ಎಂದು ಒಪ್ಪಿಕೊಂಡರು.

ಪಟೇಶ್ವರೀಲಾಲರು ಹೇಳಿದರು – 'ಬರೇ ಧೈರ್ಯ ಮಾತ್ರವಲ್ಲ. ಸ್ವಭಾವವೂ ಬಹಳ ಕರ್ಕಶ. ಇಂತಹ ಹೆಂಗುಸರಿಗೆ ಗುಂಡಿನಿಂದ ಹೊಡೆಯಬೇಕು.'

'ನಿಮಗೆಲ್ಲ ಸರಿಯಾಗಿ ಮಂಗಳಾರತಿ ಮಾಡಿದಳು! ಸಿಕ್ಕಿದ ನಾಲ್ಕು ರೂಪಾಯಿಯೂ ಹೋಯಿತು.'

'ಒಡೆಯರ ಇಪ್ಪತ್ತು ರೂಪಾಯಿ ಸಹ ಹೋಯಿತಲ್ಲ!'

'ನನ್ನ ರೂಪಾಯಿ ಎಲ್ಲಿ ಹೋದೀತು? ಅವನು ಕೊಡದಿದ್ದರೆ ಊರಿನ ಮುಂದಾಳುಗಳು ಕೊಟ್ಟಾರು, ಇಪ್ಪತ್ತು ರೂಪಾಯಿಗೆ ಬದಲಾಗಿ – ಸರಿಯಾಗಿ ಐವತ್ತು ರೂಪಾಯಿ! ನೀವೆಲ್ಲ ಕೂಡಲೆ ಅದರ ವ್ಯವಸ್ಥೆ ಮಾಡಿ.'

ಪಟೇಶ್ವರೀ ಲಾಲರು ನಗುತ್ತ ಹೇಳಿದರು – 'ಒಡೆಯರು ಬಹಳ ಕುಶಾಲು ಬಾಯಿಯ ಜನ.'

ದಾತಾದೀನರೂ ಸ್ವರ ಸೇರಿಸಿದರು – 'ದೊಡ್ಡ ಮನುಷ್ಯರ ಲಕ್ಷಣವೇ ಅದು. ಇಂತಹ ಭಾಗ್ಯವಂತರ ದರ್ಶನ ಸಿಗುವುದೇ ದುರ್ಲಭ.'

ಇನ್ಸ್‌ಪೆಕ್ಟರರು ಕಣ್ಣು ಕೆರಳಿಸಿ ಕಠೋರ ಸ್ವರದಿಂದ ಹೇಳಿದರು – 'ಈ ಹುಡುಗಾಟವನ್ನೆಲ್ಲ ಆ ಮೇಲೆ ನೋಡುವಾ. ನಿಂತ ಹೆಜ್ಜೆಯ ಮೇಲೆ ನನಗೆ ಐವತ್ತು ರೂಪಾಯಿ ಸಿಗಲೇ ಬೇಕು. ಇದರಲ್ಲೇನಾದರೂ ಹೆಚ್ಚು ಕಡಿಮೆಯಾದರೆ ನಿಮ್ಮ ನಾಲ್ಕು ಜನರ ಮನೆಯನ್ನು ಜಪ್ತಿ ಮಾಡಿಯೇನು. ಜಾಗ್ರತೆ! ಈಗ ಪೂರ್ಣ ತಿಳಿದು ಹೋಯಿತು – ನೀವೆಲ್ಲ ಸೇರಿ ಹೋರಿರಾಮ ಮತ್ತು ಹೀರನನ್ನು ಹಿಡಿಸಿ ಹಾಕಿ ಅವರಿಂದ ಐವತ್ತು, ನೂರು, ಹೊಡೆಯಲಿಕ್ಕೆ ಹೂಡಿದ ಮೋಸ ಇದು, ಎಂದು.'

ಊರ ಮುಂದಾಳುಗಳೆಲ್ಲ ಈ ತನಕ, ಇನ್ಸ್‌ಪೆಕ್ಟರರು ತಮಾಷೆ ನಡೆಸುತ್ತಿದ್ದಾರೆಂದೇ ತಿಳಿದಿದ್ದರು.

ಜಿಂಗುರೀಸಿಂಹರು ಕಣ್ಣು ಮೇಲೆ ಮಾಡಿ ಹೇಳಿದರು – 'ತೆಗೆಯಿರಿ ಐವತ್ತು ರೂಪಾಯಿ, ಶಾನುಭಾಗರೇ.'

ನೋಖೇರಾಮರೂ ಅದನ್ನೇ ಸಮರ್ಥಿಸಿ ಹೇಳಿದರು – 'ಇದು ಹೇಗೂ ಶಾನುಭಾಗರ ಇಲಾಖೆಯೇ ಸರಿ. ಇದರ ವ್ಯವಸ್ಥೆ ಅವರೇ ಮಾಡಬೇಕಲ್ಲವೇ?'

ಪಂಡಿತ ನೋಖೇರಾಮರ ಮನೆಯಂಗಳ ಬಂತು. ಇನ್ಸ್‌ಪೆಕ್ಟರರು ಅಲ್ಲೇ ಒಂದು ಬೆಂಚಿನ ಮೇಲೆ ಕೂತುಕೊಂಡು ಗದರಿಸಿದರು—'ನೀವೆಲ್ಲ ಏನು ನಿಶ್ಚಯ ಮಾಡಿದಿರಿ? ರೂಪಾಯಿ ಕೊಡಿಸುತ್ತೀರೋ ಅಥವಾ ಜಪ್ತಿಮಾಡಿಸಿ ಕೊಳ್ಳುತ್ತೀರೋ?'

ದಾತಾದೀನರು ಮೆಲ್ಲನೆ ಬಾಯಿ ತೆರೆದರು—'ಆದರೆ . . .'

'ಆದರೆ–ಗೀದರೆ–ಯಾವುದೂ ನಾನು ಕೇಳುವವನಲ್ಲ.'

ಜಿಂಗುರೀ ಸಿಂಹರು ಸಾಹಸಪೂರ್ವಕವಾಗಿ ಹೇಳಿದರು—'ಸ್ವಾಮೀ, ಇದೆಲ್ಲ....'

'ಅದೆಲ್ಲ– ಅಗತ್ಯವಿಲ್ಲ. ನಾನು ಹದಿನೈದು ನಿಮಿಷದ ಸಮಯ ಕೊಡುತ್ತೇನೆ. ಅಷ್ಟರಲ್ಲಿ ಸರಿಯಾಗಿ ಐವತ್ತು ರೂಪಾಯಿ ಬಾರದಿದ್ದರೆ ನಿಮ್ಮೆಲ್ಲರ ಮನೆಯನ್ನೂ ಜಪ್ತಿ ಮಾಡಿಯೇ ಬಿಡುತ್ತೇನೆ, ನೋಡಿಕೊಳ್ಳಿ.'

ಪಟೇಶ್ವರೀಲಾಲರು ಸ್ವಲ್ಪ ಕೋಪಗೊಂಡವರಂತೆ ಹೇಳಿದರು—"ನಿಮ್ಮ ಇಚ್ಛೆ; ಜಪ್ತಿ ನಡೆಸಿರಿ. ಇದೀಗ ಒಳ್ಳೆಯ ಮಾತು! ಯಾರೋ 'ಕೇಸು' ನಡೆಸುವುದು! ಯಾರನ್ನೋ ಹಿಡಿಯುವುದು!"

'ನಾನು ಇಪ್ಪತ್ತೈದು ವರ್ಷಗಳಿಂದ ಈ ಕೆಲಸ ನೋಡುತ್ತಿದ್ದೇನೆ–ಗೊತ್ತೆ?'

'ಆದರೆ ಇಂತಹ ಬಲಾತ್ಕಾರ ಎಂದೂ ಆಗಿಲ್ಲ.'

'ನಿಮಗೆ ಬಲಾತ್ಕಾರ ಗೊತ್ತಿಲ್ಲವೇ? ಅದನ್ನೂ ತೋರಿಸಿ ಬಿಡಬೇಕೇ? ಒಬ್ಬೊಬ್ಬರನ್ನೇ ಐದೈದು ವರ್ಷ ಕಳಿಸಿಯೇನು! ಅದೀಗ ನನ್ನ ಎಡಗೈಯ ಕೆಲಸ. ನಾಳೆ ಬೆಳಗ್ಗೆಯೇ ಇಡೀ ಊರನ್ನೇ ಕಠಿಣ ಶಿಕ್ಷೆಗೆ ಗುರಿ ಮಾಡಿಸಿಯೇನು. ಏನೆಂದು ತಿಳಿದುಕೊಂಡಿದ್ದೀರಿ ನೀವೆಲ್ಲ?'

ಆ ನಾಲ್ಕು ಮಂದಿಯೂ ಒಂದು ಬದಿಗೆ ಹೋಗಿ ಯೋಚನೆ ಮಾಡಲಾರಂಭಿಸಿದರು.

ಮತ್ತೇನಾಯಿತು ಎಂಬುದು ಯಾರಿಗೂ ಗೊತ್ತಿಲ್ಲ. ಇನ್ಸ್‌ಪೆಕ್ಟರರು ಸಂತೋಷಚಿತ್ತರಾದರು. ಹಾಗೆಯೇ ಕುದುರೆಯನ್ನೇರಿ ಹೊರಟರು. ಆ ನಾಲ್ಕು ಜನ ಸಜ್ಜನರೂ ಓಡಿಕೊಂಡು ಸ್ವಲ್ಪ ದೂರದ ತನಕ ಅವರ ಹಿಂದೆಯೇ ಹೋದರು. ಕುದುರೆ ದೂರ ಹೋದ ಮೇಲೆ ನಾಲ್ವರೂ ಹಿಂದಿರುಗಿ ಬಂದರು. ಹಿಂದಿರುಗಿ ಬರುತ್ತಿರುವ ಅವರು – ತಮ್ಮ ಪ್ರೀತಿಪಾತ್ರ ವ್ಯಕ್ತಿಯ ಅಂತ್ಯ

ಕ್ರಿಯೆ ಮುಗಿಸಿಕೊಂಡು ಸ್ಮಶಾನದಿಂದ ಬರುವವರಂತೆ ತೋರುತ್ತಿದ್ದರು.

ಆಗ ದಾತಾದೀನ್ ಪಂಡಿತರೆಂದರು – 'ನನ್ನ ಶಾಪ ಅವನಿಗೆ ತಾಗದಿದ್ದರೆ ನಾನು ಬ್ರಾಹ್ಮಣನಲ್ಲ.'

ನೋಖೇರಾಮರೂ ಅದನ್ನೇ ಸಮರ್ಥನೆ ಮಾಡಿದರು–'ಅಂತಹ ಮೋಸದ ಹಣ ಫಲಕ್ಕೆ ಬಂದುದನ್ನು ನಾನು ಕಂಡಿಲ್ಲ.'

ಪಟೇಶ್ವರೀಲಾಲರೂ ಭವಿಷ್ಯವಾಣಿ ಹೇಳಿದರು–'ಮೋಸದ ಹಣ ಮೋಸದಲ್ಲೇ ಹೋದೀತು.'

ಜಿಂಗುರೀಸಿಂಹರಿಗೆ ಇಂದು ದೇವರ ನ್ಯಾಯಪರತೆಯ ಮೇಲೆಯೇ ಸಂದೇಹ ಬಂದು ಹೋಗಿತ್ತು – 'ಆ ದೇವರು ಏನಾಗಿದ್ದಾನೋ - ಯಾರಿಗೆ ಗೊತ್ತು? ಇಂತಹ ಅನ್ಯಾಯ ನೋಡಿಯೂ ದೇವರು ಪಾಪಿಗಳಿಗೆ ಶಿಕ್ಷೆ ಕೊಡುವುದಿಲ್ಲವಲ್ಲ!'

ಈ ಸಂದರ್ಭದಲ್ಲಿ ಆ ನಾಲ್ವರ ಮುಖಗಳೂ ಉತ್ತಮ ಭಾವಚಿತ್ರ ತೆಗೆಯಲಿಕ್ಕೆ ಯೋಗ್ಯವಾಗಿದ್ದುವು.

೮

ಹೀರನ ಪತ್ತೆ ಎಲ್ಲೆಲ್ಲೂ ಆಗಲಿಲ್ಲ. ದಿನಗಳು ಉರುಳುತ್ತಲೇ ಇದ್ದುವು. ತನ್ನಿಂದ ಎಷ್ಟೆಲ್ಲ ಹುಡುಕಾಟ, ಓಡಾಟ ಸಾಧ್ಯವಿತ್ತೋ – ಅದನ್ನೆಲ್ಲ ಮಾಡಿದ ಹೋರಿರಾಮ. ಕೊನೆಗೆ ಸೋತು ಹೋಗಿ ಆತ ಸುಮ್ಮನಾಗಬೇಕಾಯಿತು.

ಇತ್ತ ಬೇಸಾಯದ ಕೆಲಸವೂ ಆಗಬೇಕಿತ್ತು. ಅವನೊಬ್ಬನೇ ಏನೆಲ್ಲ ಮಾಡಿಯಾನು? ತನ್ನ ಗದ್ದೆಗಿಂತಲೂ ಹೆಚ್ಚಿನ ಯೋಚನೆ ಅವನಿಗೆ ಪುನ್ನಿಯ ಗದ್ದೆಯದಾಗಿತ್ತು. ಈಗಂತು, ಕೇಳುವವರಿಲ್ಲದ್ದರಿಂದ ಅವಳು ಇನ್ನಷ್ಟು ಪ್ರಚಂಡಳಾಗಿದ್ದಳು. ಈಗ ಅವಳನ್ನು ತೃಪ್ತಿಪಡಿಸುವುದೇ ಕಷ್ಟವಾಗಿತ್ತು. ಹೀರನಿರುವಾಗ ಅವಳನ್ನು ಕೊಂಚ ಹಿಡಿತದಲ್ಲಿಟ್ಟಿದ್ದ. ಅವನೇ ಈಗ ಇಲ್ಲದ್ದರಿಂದ ಅವಳನ್ನು ಕೇಳುವವರಾರು?

ಹೀರನು ಆಸ್ತಿಯ ಸಮ ಪಾಲುಗಾರ, ತಮ್ಮ, ಎಂದಾದ ಮೇಲೆ, ಈಗ– ಅಬಲೆ ಪುನ್ನಿಯ ಯೋಗಕ್ಷೇಮ ಹೋರಿರಾಮ ನೋಡಬೇಡವೇ? ಅವ

ಳಿಗೂ ಈತನ ಸಾಧು ಸ್ವಭಾವದ ಪರಿಚಯ ಚನ್ನಾಗಿತ್ತು. ಅದರಿಂದಾಗಿ, ಆವನಿಂದ ಆದಷ್ಟು ದಂಡವನ್ನು ಅವಳು ತೆಗೆದುಕೊಳ್ಳುತ್ತಲೇ ಇದ್ದಳು. ಇದರ ಪರಿಣಾಮವಾಗಿ ಧನಿಗಳ ಆಳು ಕೂಡ ಆವಳಿಂದ ಬಾಕಿ ಗೇಣಿ ವಸೂಲು ಮಾಡುವ ತಾಪತ್ರಯಕ್ಕೆ ಹೋಗುತ್ತಲೇ ಇದ್ದಿಲ್ಲ. ಆವಳು ಸಲ್ಲಿಸಿದ ಅಲ್ಪ ಪೂಜೆಯಿಂದಲೇ ಅವನು ತೃಪ್ತನಾಗಿ ಹೋಗುತ್ತಿದ್ದ. ಅದರೆ ಹೋರಿರಾಮ ತನ್ನ ಬಾಕಿ ಗೇಣಿಯೊಡನೆ ಹೀರನ ಬಾಕಿಯನ್ನೂ ಸಂದಾಯ ಮಾಡುವುದಕ್ಕಾಗಿ ಸಾಲ ತೆಗೆಯಲು ಅಣಿಯಾಗಿದ್ದನು.

ಶ್ರಾವಣ ಮಾಸದಲ್ಲಿ ಎಲ್ಲೆಲ್ಲಿಯೂ ಬೇಸಾಯದ ಕೆಲಸ ಭರದಿಂದ ನಡೆಯುತ್ತಿತ್ತು. ಅದರಿಂದಾಗಿ ಕೂಲಿಯ ಜನರೇ ಸಿಗುತ್ತಿರಲಿಲ್ಲ. ಆದರೆ ಹೋರಿರಾಮ ತನ್ನ ಗದ್ದೆಯ ಕೆಲಸ ಮಾಡದಿದ್ದರೂ ಪುನ್ನಿಯ ಬೇಸಾಯವನ್ನು ಮಾಡದಿರುವುದು ಹೇಗೆ?

ಅಂತು ಈಗ ಹೋರಿರಾಮನೇ ಅವಳ ಸಂರಕ್ಷಕ. ರಾತ್ರಿಯಾಗುವ ತನಕ ದುಡಿದು ದುಡಿದು ಆವಳ ಗದ್ದೆಯ ಕೆಲಸ ಮುಗಿಸಿದ. ಪುನ್ನಿಗೆ ಕಷ್ಟ ಬಂದರೆ ಊರಿನವರು ಹೋರಿರಾಮನತ್ತ ನೋಡಿ ನಗಾಡಲಾರರೇ? ಈ ತರದ ಯೋಚನೆಯಿಂದಾಗಿ ಅವನ ಗದ್ದೆಯಲ್ಲಿ ಒಳ್ಳೆಯ ಬೆಳೆ ಬರಲೇ ಇಲ್ಲ. ಆದರೂ ಪುನ್ನಿಯ ಗದ್ದೆಗಳಿಂದ ಬಂದ ಧಾನ್ಯ ಪತಾಯದಲ್ಲಿ ಹಿಡಿಯುದಷ್ಟಾಗಿತ್ತು.

ಹೋರಿರಾಮ ಮತ್ತು ದನಿಯರೊಳಗೆ ಆ ದಿನದಿಂದ ಮನಸ್ಸೇ ಮುದುಡಿ ಹೋಗಿತ್ತು. ಗೋಬರನು ಸಹ ಹೋರಿರಾಮನೊಡನೆ ಮಾತುಕತೆ ಬಿಟ್ಟಿದ್ದನು. ತಾಯಿ ಮತ್ತು ಮಗ ಸೇರಿ ಒಂದು ರೀತಿಯಲ್ಲಿ ಹೋರಿರಾಮನಿಗೆ ಬಹಿಷ್ಕಾರವನ್ನೇ ಹಾಕಿದ್ದರು. ಹಾಗಾಗಿ ಆತನು ತನ್ನ ಮನೆಯಲ್ಲೇ ಒಬ್ಬ ಪರದೇಶಿಯಂತಾದ. ಎರಡು ದೋಣಿಗಳಲ್ಲಿ ಸವಾರಿ ಮಾಡುವವನ ಪಾಡಾಗಿತ್ತು ಅವನದು.

ಊರವರಿಗೆ ಆವನ ಮೇಲೆ ಇದ್ದ ಗೌರವವೂ ಈಗ ಕಡಿಮೆಯಾಗಿತ್ತು. ದನಿಯಳು ಈಗ ತನ್ನ ಸಾಹಸದಿಂದಾಗಿ ಊರ ಸ್ತ್ರೀಯರ ಮೇಲೆ ಮಾತ್ರವೇ ಅಲ್ಲ, ಪುರುಷರ ಮೇಲೂ ನಾಯಕತ್ವವನ್ನು ಪಡೆದಿದ್ದಳು. ಹಲವು ತಿಂಗಳುಗಳ ವರೆಗೆ ಅಕ್ಕಪಕ್ಕದ ಊರುಗಳಲ್ಲಿ ಈ ವಿಚಾರದ ಚರ್ಚೆಯೇ ನಡೆಯುತ್ತಿತ್ತು.

ಕೆಲ ವೇಳೆ ಅಲೌಕಿಕ, ಅದ್ಭುತ, ರೂಪವನ್ನೂ ತಾಳಿಬಿಡುತ್ತಿತ್ತು ಈ ಕತೆ– ಅವಳ ಹೆಸರು ದನಿಯಳೆಂಬುದಾಗಿ; ಅವಳಿಗೆ ಮಹಾಕಾಳಿಯು ಸಿದ್ಧಿಯಿದೆ. ಪೋಲೀಸು ಇನ್ಸ್‌ಪೆಕ್ಟರರು ಅವಳ ಗಂಡನ ಕೈಗೆ ಕೋಳ ಹಾಕಿದೊಡನೆ ದನಿಯಳು ಮಹಾಕಾಳಿಯ ಧ್ಯಾನ ಮಾಡಿದಳು! ಒಡನೆಯೇ ಅವಳ ಮೈಮೇಲೆ ದೇವಿ ಬಂದಳು! ಆಗ ಆಕೆಯ ಮೈಯಲ್ಲಿ ಅಪಾರ ಶಕ್ತಿ ಮೂಡಿ ಬಂದು ತನ್ನ ಗಂಡನ ಕೈಯ ಕೋಳವನ್ನು ತುಂಡು ಮಾಡಿ ಹಾಕಿದಳು! ಮಾತ್ರವಲ್ಲದೆ ಇನ್ಸ್‌ಪೆಕ್ಟರರ ಮೀಸೆಯನ್ನೂ ಹರಿದುಹಾಕಿ ಬಿಟ್ಟಳು. ಬಳಿಕ ಆ ಇನ್ಸ್‌ಪೆಕ್ಟರನನ್ನು ಉರುಳಿಸಿ ಹಾಕಿ ಎದೆಯ ಮೇಲೆ ಕೂತುಕೊಂಡಾಗ ಆತ ಬಹಳ ದಮ್ಮಯ್ಯಗುಡ್ಡೆ ಹಾಕಿದ. ಕೊನೆಗೆ ಅವನನ್ನು ಉದಾರತನದಿಂದ ಬಿಟ್ಟುಬಿಟ್ಟಳು . . . . ಇತ್ಯಾದಿ, ಇತ್ಯಾದಿ.

ಆ ಬಳಿಕ ಕೆಲವು ದಿನಗಳ ತನಕ ಕೆಲವರೆಲ್ಲ ದನಿಯಳ ದರ್ಶನಕ್ಕೆ ಸಹ ಬರುತ್ತಿದ್ದರು. ಈಗ ಆ ಕತೆಯೆಲ್ಲ ಹಳೆಯದಾಗುತ್ತ ಬಂತು. ಆದರೂ ಅವಳ ಮೇಲಿನ ಗೌರವ ಮಾತ್ರ ಹೆಚ್ಚುತ್ತಲೇ ಇತ್ತು. ಅವಳಲ್ಲಿ ಅದ್ಭುತ ಶಕ್ತಿ ಇದ್ದು ಸಂದರ್ಭ ಬಂದರೆ ಆಕೆ ಗಂಡುಸರ ಕಿವಿ ಸಹ ಕತ್ತರಿಸಿ ಬಿಟ್ಟಾಳು – ಎಂದು ಹೇಳಿಕೊಳ್ಳುತ್ತಿದ್ದರು ಜನ.

ಆದರೆ ದನಿಯಳಲ್ಲಿ ಮೆಲ್ಲಮೆಲ್ಲನೆ ಒಂದು ತರದ ಪರಿವರ್ತನೆಯಾಗ ತೊಡಗಿತು. ಹೋರಿರಾಮು ಪುನ್ನಿಯ ಗದ್ದೆಯ ಕೆಲಸದಲ್ಲೇ ಮಗ್ನನಾಗಿರುವುದನ್ನು ನೋಡಿಯೂ ಕೂಡ ಅವಳೇನೂ ಹೇಳುತ್ತಿರಲಿಲ್ಲ. ಇತ್ತೀಚೆಗೆ ಅವಳಿಗೂ ಪುನ್ನಿಯ ವಿಚಾರದಲ್ಲಿ ಸ್ವಲ್ಪ ದಯೆ ತೋರಿಬರುತ್ತಿತ್ತು. ಅವಳ ವೈರಭಾವನೆಗೆ ಹೀರನು ಮನೆಬಿಟ್ಟು ಓಡಿಹೋದುದರಿಂದಲೇ ತೃಪ್ತಿಯಾಗಿತ್ತು.

ಈ ಮಧ್ಯದಲ್ಲಿ ಹೋರಿರಾಮುನಿಗೆ ಜ್ವರ ಬರಲಾರಂಭಿಸಿತು. ಅಲ್ಲಲ್ಲಿ ಜ್ವರದ ಕಾಟ ಹಬ್ಬಿ ಹೋಗಿತ್ತು. ಹೋರಿರಾಮುನೂ ಈ ಕೆಟ್ಟ ರೋಗಕ್ಕೆ ಗುರಿಯಾಗಿ ಬಿಟ್ಟ. ಇದೀಗ ಬಹು ವರ್ಷಗಳ ನಂತರ ಬಂದ ಜ್ವರವಾಗಿತ್ತು ಅವನಿಗೆ. ಆದ್ದರಿಂದ ಅದು ಆ ಹಗೆಯನ್ನೆಲ್ಲ ತೀರಿಸುತ್ತಿರುವಂತೆ ತೋರಿಬಂತು.

ಒಂದು ತಿಂಗಳ ವರೆಗೆ ಹೋರಿರಾಮು ಮಂಚದ ಮೇಲೆ ಬಿದ್ದುಕೊಂಡೇ ಇದ್ದ. ಅದರಿಂದಾಗಿ ಅವನು ಪೂರ್ಣ ಸೋತು ಹೋದ. ಆದರೆ ಈ

ರೋಗ ದನಿಯಳ ಮೇಲೆ ಒಂದು ತರದ ಜಯವನ್ನು ಸಂಪಾದಿಸಿತ್ತು. ಪತಿಯು ಸಾಯುವ ಸ್ಥಿತಿಯಲ್ಲಿರುವಾಗ ಅವನೊಡನೆ ಎಂತಹ ವೈರ? ಇಂತಹ ಪರಿಸ್ಥಿತಿಯಲ್ಲಿ ವೈರಿಗಳ ಮೇಲಿನ ವೈರವೂ ದೂರ ಓಡುತ್ತದೆ. ಹಾಗಿರುವಾಗ ಹೆಂಡತಿಯ ಮನಸ್ಸಿನಲ್ಲಿ ಕೈ ಹಿಡಿದ ಗಂಡನನ್ನು ಕುರಿತ ಮನಸ್ತಾಪ ಉಳಿಯುವುದೆ? ಬೇಕಾದಷ್ಟು ಕೆಡುಕು ಅವನಲ್ಲಿರಲಿ. ಆದರೂ ತಾನು ಅವನೊಡನೆಯೇ ತಾನೆ ಜೀವನದ ಇಪ್ಪತ್ತೈದು ವರ್ಷಗಳನ್ನು ಕಳೆದುದು? ಸುಖ ಭೋಗಿಸಿದ್ದರೂ ಅವನೊಡನೆಯೇ; ದುಃಖ ಅನುಭವಿಸಿದ್ದರೂ ಅವನೊಡನೆಯೇ. ಅವನು ಒಳ್ಳೆಯವನಾಗಲಿ, ಕೆಟ್ಟವನಾಗಲಿ; ಎಷ್ಟಾದರೂ ತನ್ನವನೇ – ಅಲ್ಲವೇ? ಯಾವುದೋ ವಿಷ ಘಳಿಗೆಯಲ್ಲಿ ಎಲ್ಲರಿದಿರೇ ತನ್ನನ್ನು ಹೊಡೆದ; ಇಡೀ ಊರವರ ಇದಿರೇ ಮರ್ಯಾದೆ ತೆಗೆದ! ಆದರೆ ಆ ದಿನದಿಂದ ಎಷ್ಟು ನಾಚಿಕೆ ಪಡುತ್ತಿದ್ದಾನೆ! ಮುಖವೆತ್ತಿ ಸರಿಯಾಗಿ ನೋಡುವುದು ಕೂಡಾ ಇಲ್ಲ! ಊಟಕ್ಕೆ ಬಂದರೆ ತಲೆ ಕೆಳಗಿಟ್ಟೇ ಉಣ್ಣುತ್ತಾನೆ; ಹಾಗೇ ಹೋಗುತ್ತಾನೆ. ತಾನು ಏನಾದರೂ ಹಂಗಿಸಿಬಿಡುವೆನೋ – ಎಂದು ಹೆದರಿಕೊಂಡೇ ಇರುತ್ತಾನೆ.

ಹೋರಿರಾಮು ರೋಗಮುಕ್ತನಾಗಿ ಎದ್ದಾಗ ಗಂಡಹೆಂಡಿರೊಳಗೆ ರಾಜಿಯಾಗಿತ್ತು.

ಒಂದು ದಿನ ದನಿಯಳೆಂದಳು – 'ನಿನಗೆ ಆ ದಿನ ಅಂತಹ ಕೋಪ ಹೇಗೆ ಬಂತಪ್ಪ? ನನಗಂತು ಎಷ್ಟೇ ಕೋಪ ಬಂದರೂ ಕೈ ಎತ್ತಲಿಕ್ಕೇ ಮನಸ್ಸು ಬರುವುದಿಲ್ಲ.'

ಹೋರಿರಾಮು ನಾಚುತ್ತ ಉತ್ತರವಿತ್ತ – 'ಈಗ ಅದರ ಮಾತೆತ್ತಬೇಡ ದನಿಯಾ. ನನ್ನ ದೇಹದಲ್ಲಿ ಅಂದು ಏನೋ ಭೂತಸಂಚಾರವಾಗಿರಬೇಕು. ಆದರಿಂದ ನನಗೆ ಎಷ್ಟು ಕಸಿವಿಸಿಯಾಗುತ್ತಿದೆಯೆಂದು – ನನಗೇ ಗೊತ್ತು.'

'ಒಂದು ವೇಳೆ ಆ ಕೋಪದಲ್ಲಿ ನಾನು ಸತ್ತೇ ಹೋಗಿದ್ದರೆ?'

'ಹಾಗಾಗಿದ್ದರೆ, ಸುಮ್ಮನೆ ಅಳುತ್ತ ಇರಲಿಕ್ಕಾಗಿ ನಾನು ಬದುಕಿರುತ್ತಿದ್ದೆನೆ? ನನ್ನ ಹೆಣವೂ ನಿನ್ನೊಡನೆಯೇ ಚಿತೆಗೇರುತ್ತಿತ್ತು.'

'ಬಾಯಿ ಮುಚ್ಚಿಕೊಳ್ಳಿ. ಸುಮ್ಮನಾದರೂ ಏಕೆ ಕೆಟ್ಟ ಮಾತಾಡುತ್ತೀರಿ?'

'ಈಗ, ಆ ದನವೇನೋ ಸತ್ತಿತು; ಹೋಯಿತು. ಆದರೆ ಅದು ನನ್ನ

ತಲೆಯ ಮೇಲೆ ದೊಡ್ಡ ವಿಪತ್ತನ್ನೇ ತಂದು ಹಾಕಿ ಹೋಯಿತು. ಈ ಪುನ್ನಿಯ ಗಲಾಟೆ ನನ್ನ ಜೀವತೆಗೆಯುತ್ತಿದೆ – ಈಗ. '

'ಆದಕ್ಕಾಗಿಯೇ – ಮನೆಗೆ ಹಿರಿಯನನ್ನಾಗಿ ದೇವರು ಹುಟ್ಟಿಸಬಾರದು ಎಂಬುದಾಗಿ ಹೇಳುತ್ತಾರೆ. ಕಿರಿಯರ ವಿಚಾರ ಯಾರೂ ನಗಾಡುವುದಿಲ್ಲ. ಒಳ್ಳೇದು ಕೆಟ್ಟುದು – ಎಲ್ಲವೂ ಹಿರಿಯನ ತಲೆಗೇ ಬರುವುದು.'

ಮಾಘಮಾಸ! ಬಲವಾದ ಚಳಿಯಾರಂಭವಾಗಿತ್ತು. ರಾತ್ರಿ ಗಾಢಾಂಧ ಕಾರ ತುಂಬಿ ಬಂದಿತ್ತು. ಒಂದು, ಆಷಾಢ ಮಾಸದ ಜಡೆಮಳೆಯ ರಾತ್ರಿ; ಮತ್ತೊಂದು, ಮಾಘ ಮಾಸದ ಕಡು ಚಳಿಯ ರಾತ್ರಿ. ಇವು ಬಡ ಒಕ್ಕಲಿಗ ನಿಗೆ ಬಹು ಕಷ್ಟದ ಕಾಲ.

ಕಣ್ಣು ಕುಕ್ಕಿದರೂ ಕಾಣದಂತಹ ಕಗ್ಗತ್ತಲೆ. ಹೋರಿರಾಮ ರಾತ್ರಿ ಊಟ ಮಾಡಿ, ಪುನ್ನಿಯ ಹಾಗೂ ತನ್ನ ಕಡಲೆಯ ಗದ್ದೆ ಕಾಯುವುದಕ್ಕಾಗಿ ಹೊರಟಿದ್ದಾನೆ. ಹೋಗಿ ಗದ್ದೆಯಲ್ಲಿರುವ ಗುಡಿಸಲಿನಲ್ಲಿ ಮಲಗಿಕೊಂಡ. ಚಳಿ ಯನ್ನು ಮರೆತು ನಿದ್ರಿಸಬೇಕೆಂದು ಎಣಿಸಿದ್ದನವನು. ಆದರೆ ಅಲ್ಲಲ್ಲಿ ತೂತಾದ ಕಂಬಳಿ, ಹರಿದು ಹೋದ ಒಳ ಅಂಗಿ, ಶೀತಗಾಳಿಯಿಂದ ಒದ್ದೆಯಾದಂತಿರುವ ಹುಲ್ಲಿನ ಹಾಸು – ಇಷ್ಟೆಲ್ಲ ಶತ್ರುಗಳನ್ನು ಜಯಿಸಿ ಬರುವ ಸಾಹಸ ಆ ನಿದ್ದೆ ಗಿರಲಿಲ್ಲ. ಇಂದು ಹೊಗೆಸೊಪ್ಪು ಕೂಡಾ ಮುಗಿದುಹೋಗಿತ್ತು. ಇಲ್ಲವಾ ದರೆ ಅದನ್ನು ಬಾಯಲ್ಲಿಟ್ಟುಕೊಂಡು ಸಮಯ ಕಳೆಯಬಹುದಿತ್ತು. ಬೆಂಕಿ ಯನ್ನೂ ಬೆರಣೆಯ ಚೂರುಗಳನ್ನೂ ಅವನು ತಂದಿದ್ದ. ಆದರೆ ಶೀತಗಾಳಿಯಲ್ಲಿ ಅದು ಕೂಡಾ ನಂದಿಹೋಗಿತ್ತು. ಕೊನೆಗೆ ಹೇಗೋ ಮುದುಡಿ ಮಲಗಿಕೊಂಡ. ತ್ರಾಣವಿಲ್ಲದ, ಒಡೆದ, ಕಾಲುಗಳನ್ನು ಎದೆಗವಚಿಕೊಂಡು, ಕೈಗಳನ್ನು ತೊಡೆ ಗಳೆಡೆಯಲ್ಲಿ ಸೇರಿಸಿಕೊಂಡು, ಮುಖವನ್ನು ಕಂಬಳಿಯೊಳಗೆ ಸೇರಿಸಿಕೊಂಡು, ತನ್ನ ಬಿಸಿ ಶ್ವಾಸದಿಂದಲೇ ತನ್ನನ್ನು ಬೆಚ್ಚಗೆ ಮಾಡಿಕೊಳ್ಳಲಿಕ್ಕೆ ಅವನು ಪ್ರಯತ್ನಿಸತೊಡಗಿದ. ಆ ಒಳ ಅಂಗಿ ಕೊಂಡು ತಂದು ಐದು ವರ್ಷವಾಗಿತ್ತು. ದನಿಯಳು ಒಂದು ತರದ ಒತ್ತಾಯದಿಂದಲೇ ಅದನ್ನು ಕೊಂಡಿದ್ದಳು – ಅದು ಕೂಡ ಒಬ್ಬ ಕಾಬೂಲಿನವನು ಮನೆಬಾಗಿಲಿಗೆ ಮಾರಿಕೊಂಡು ಬಂದಾಗ. ಆ ವಿಚಾರದಲ್ಲಿ ಗಂಡಹೆಂಡಿರಲ್ಲಿ ಎಷ್ಟು ಚರ್ಚೆಯಾಗಿತ್ತು!

ಆ ಕಂಬಳಿಯಂತೂ ಅವನು ಹುಟ್ಟುವುದಕ್ಕೂ ಮುಂಚಿನದು. ಎಳೆತನ ದಲ್ಲಿ ತಂದೆಯೊಡನೆ ಅವನು ಅದರಲ್ಲೇ ಮಲಗುತ್ತಿದ್ದ. ಯೌವನದಲ್ಲಿ

ಗೋಬರನನ್ನು ಕಟ್ಟಿಕೊಂಡು ಆದರಲ್ಲೇ ಕಾಲ ಕಳೆದಿದ್ದ. ಈಗ ಮುದಿತನ ದಲ್ಲೂ ಆ ಕಂಬಳಿಯೇ ಅವನ ಸಂಗಾತಿಯಾಗಿದೆ. ರೊಟ್ಟಿಯ ರುಚಿಯನ್ನು ಹೆಚ್ಚಿಸುತ್ತಿದ್ದ ಆ ಹಲ್ಲುಗಳೂ ಈಗ ಬಾಯಲ್ಲಿ ಬಹಳ ಇಲ್ಲವಾಗಿವೆ. ಇದ್ದ ಹಲ್ಲುಗಳೂ ನೋವನ್ನು ಹೆಚ್ಚಿಸುವಂಥವು. ಜೀವನದಲ್ಲಿ ಗೇಣಿ ಮತ್ತು ಸಾಲ ಪಾವತಿ ಮಾಡಿ ಏನಾದರೂ ಉಳಿದುದೆಂಬುದು ಎಂದಿಗೂ ಇಲ್ಲ. ಅದರ ಮೇಲೆ ಕುಳಿತಲ್ಲಿಯೇ ಈ ಒಂದು ಹೊಸ ಕುತ್ತು ಬೇರೆ ಬಂದು ಸೇರಿತು. ಪುನ್ನಿಯ ಕೆಲಸ ಮಾಡದಿದ್ದರೆ ಊರಿನವರೆಲ್ಲ ನಗಾಡಿಯಾರು. ಮಾಡಿದರೆ, ಜನರು ಏನು ಹೇಳುತ್ತಾರೋ ಏನೋ – ಎಂದು ಸಂಶಯಪಡಲಿಕ್ಕಾಯಿತು. ಪುನ್ನಿಯ ಬೆಳೆಯನ್ನೆಲ್ಲ ತನ್ನ ಮನೆಗೆ ಸಾಗಿಸಿ, ಅವಳಿಗೆ ಇವನು ಮೋಸ ಮಾಡುತ್ತಿದ್ದಾ ನೆಂದು ಜನರು ಹೇಳುತ್ತಿದ್ದಾರೋ – ಏನೋ ! ಅಂತು ಇದರಿಂದ ಲಾಭ ವೆಂದರೆ ಕೆಟ್ಟ ಹೆಸರು ಮಾತ್ರ.

ಅತ್ತಣಿಂದ ಬೋಲಣ್ಣನು–ಎಲ್ಲಿಯಾದರೂ ನೆಂಟಸ್ತಿಕೆ ಗೊತ್ತುಮಾಡು; ತನಗೆ ಸಮಯವೇ ಹೋಗುವುದಿಲ್ಲ – ಎಂಬುದಾಗಿ ಪೀಡಿಸುತ್ತಿದ್ದಾನೆ. ಪುನ್ನಿಯ ಗುಣ ನಡತೆ ಇತ್ತೀಚೆ ಸರಿಯಾಗಿಲ್ಲ – ಎಂಬುದಾಗಿ ಸೋಬನು ಆಗಾಗ್ಗೆ ಹೇಳುತ್ತಲೇ ಇದ್ದಾನೆ. ಅಂತು, ಅವಳು ಒಳ್ಳೆಯವಳಾಗಲಿ ಕೆಟ್ಟವಳಾಗಲಿ – ಅವಳ ಗೃಹಕೃತ್ಯ ವಿಚಾರ ನೋಡಿಕೊಳ್ಳಲೇ ಬೇಕಲ್ಲವೇ ?

ದನಿಯಳ ಮನಸ್ಸು ಸಹ ಇನ್ನೂ ಪೂರ್ತಿ ನಿರ್ಮಲವಾಗಲಿಲ್ಲ. ನಾಲ್ಕು ಜನರ ಇದಿರಲ್ಲಿ ತನ್ನನ್ನು ಹೊಡೆಯಬಾರದಿತ್ತೆಂಬ ಆವಳ ಮನಸ್ಸಿನೊಳಗಿನ ದೊಡ್ಡ ಉದ್ವೇಗ ಇನ್ನೂ ಇದ್ದೇ ಇದೆ. ಅವಳೊಂದಿಗೆ ಇಪ್ಪತ್ತೈದು ವರ್ಷ ಗಳ ಜೀವನ ನಡೆಸಿಯಾಯಿತು. ಅಂಥವಳಿಗೆ ಹತ್ತು ಜನರ ಮುಂದೆ ಹೊಡೆದುದು ತನ್ನ ನೀಚತನವೇ ಸರಿ. ಆದರೆ ಅವಳೂ ತನ್ನ ಮರ್ಯಾದೆ ತೆಗೆಯಲಿಕ್ಕೆ ಹಿಂದೆಗೆಯಲಿಲ್ಲ. ಎಲ್ಲರ ಇದಿರಿಗೇ ಸಿಡುಕಿನಿಂದ ಹೇಗೆ ಮಾತಾಡಿಬಿಟ್ಟಳು! ಏನೆಲ್ಲ ಮಾಡಿಬಿಟ್ಟಳು! ಆ ಮೇಲೆ ತನ್ನೊಡನೆ ಮಾತಾಡುವುದನ್ನೂ ನಿಲ್ಲಿಸಿಬಿಟ್ಟಳು! ಏನು ಹೇಳುವುದಿದ್ದರೂ ಸೋನೆ ಮತ್ತು ರೂಪಳ ಮೂಲಕ ಹೇಳಿಕಳುಹಿಸ ತೊಡಗಿದಳು. ಈಗ ಅವಳ ಉಡುವ ಸೀರೆ ಎಲ್ಲ ಹರಿದು ಹೋಗಿದೆ. ಆದರೆ ನಿನ್ನೆ ಕೂಡ ಸೋನೆಗೆ ಸೀರೆ ಯಾಗಬೇಕೆಂದು ಹೇಳಿದಳೇ ಹೊರತು ತನ್ನ ಸೀರೆಯ ಮಾತೇ ಎತ್ತಲಿಲ್ಲ. ಸೋನೆಯ ಸೀರೆಗೆ ಹೊಲಿಗೆ ಹಾಕಿ ಒಂದೆರಡು ತಿಂಗಳು ದೂಡಲೂ ಬಹುದು.

ಆದರೆ ಅವಳ ಸೀರೆ ಚೂರು ಚೂರಾಗಿ ಹೋಗಿದೆ. ಅವಳು ಬಾಯಿ ಬಿಟ್ಟು ಹೇಳದಿದ್ದರೂ ನಾನೇ ಅವಳಿಗೆ ಬೇಕಾದ ಬಟ್ಟೆ ತೆಗೆಸಿಕೊಡಬೇಡವೇ? ಅಂತು, ಈ ರೋಗದಿಂದಾಗಿ ಅವಳ ಮನಸ್ಸೀಗ ಮೆತ್ತಗಾಗಿ ಹೋಗಿದೆ. ಎಲ್ಲಿಯ ವರೆಗೆ ಹೀಗೆ ಮುಖ ಮುದುಡಿಸಿಕೊಂಡಿರುವಳೋ – ದೇವರೇ ಬಲ್ಲ!

ಆದರಲ್ಲಿಯೂ ಇಂದು ನಡೆದ ಸರಸ ಸಲ್ಲಾಪದಿಂದ ಹಸಿದವನಿಗೆ ಮೃಷ್ಟಾನ್ನಭೋಜನ ಸಿಕ್ಕಿದಂತಾಯಿತು. ಇಂದು ಅವಳು ಮನಬಿಚ್ಚಿ ಮಾತಾಡಿದ್ದಳು. ಒಮ್ಮೆ, ಅವಳ ಕಾಲುಗಳ ಮೇಲೆ ತನ್ನ ತಲೆಯನ್ನಿಟ್ಟು–ಇಕೋ, ನಾನು ನಿನಗೆ ಹೊಡೆದಿದ್ದೇನೆ; ನೀನು ಪ್ರತಿಯಾಗಿ ಎಷ್ಟು ಬೇಕೋ ಅಷ್ಟು ಹೊಡೆ, ಎಂದು ಹೇಳಿ ಬಿಡಲಿಯೋ – ಎಂದವನಿಗೆ ತೋರಿಬಂದಿತು.

ಫಕ್ಕನೆ, ಅವನಿಗೆ ಗುಡಿಸಲು ಬಳಿಯೇ ಬಳೆಗಳ ಸದ್ದು ಕೇಳಿ ಬಂತು. ಕಿವಿಗೊಟ್ಟು ಕೇಳಿದ – ಹೌದು ; ಯಾರೋ ಇದ್ದಾರೆ. ಊರ ಶಾನುಭೋಗರ ಮಗಳಿರಬೇಕು! ಪಂಡಿತರ ಮನೆಯವಳಿರಲಿಕ್ಕಿಲ್ಲ. ಕಡಲೆಕಾಯಿ ಕದ್ದುಕೊಂಡು ಹೋಗಲಿಕ್ಕೆ ಬಂದಿರಬೇಕು. ಈ ಜನರ ಬುದ್ಧಿ – ಇಷ್ಟರ ಮಟ್ಟಿಗೆ ಏಕೆ ಕೆಟ್ಟು ಹೋಗಿದೆಯೋ ದೇವರು ಬಲ್ಲ! ಇಡೀ ಊರಲ್ಲೇ ಇವರು ಬಹಳ ಒಳ್ಳೆಯ ಬಟ್ಟೆ ಉಟ್ಟುಕೊಳ್ಳುವ ಜನ. ಬಹಳ ಚನ್ನಾಗಿ ತಿನ್ನುತ್ತಾರೆ. ಮನೆಯಲ್ಲಿ ಸಾವಿರಾರು ರೂಪಾಯಿ ಹೂತಿಟ್ಟದ್ದಾರೆ. ಲೇವಾದೇವಿ ನಡೆಸುತ್ತಿದ್ದಾರೆ. ಜನರಿಂದ ಕಪ್ಪ ಕಾಣಿಕೆ ತೆಗೆದುಕೊಳ್ಳುತ್ತಿದ್ದಾರೆ! ಒಂದಲ್ಲ ಒಂದು ಹುಯಿಲೆಬ್ಬಿಸಿ ನಮ್ಮನ್ನು ಚಟ್ನಿಮಾಡುತ್ತಿದ್ದಾರೆ! ಇಷ್ಟಿದ್ದರೂ ಇಂಥ ಅಲ್ಪ ಕೆಲಸ! ತಂದೆಯ ಬುದ್ಧಿ ಹೇಗೋ – ಹಾಗೇ ಮಕ್ಕಳ ಬುದ್ಧಿ. ಅದರಲ್ಲಿಯೂ ಸ್ವತಃ ತಾನು ಬಾರದೆ ಹೆಂಗುಸರು ಮಕ್ಕಳನ್ನು ಕಳುಹಿಸುತ್ತಾನೆ! ಈಗಲೇ ಹೋಗಿ ಕೈಹಿಡಿದುಬಿಟ್ಟರೆ–ಅವರ ಎಲ್ಲ ಮರ್ಯಾದೆಯೂ ಕರಗಿ ಹೋದೀತು. ಈ ದೊಡ್ಡ ಮನುಷ್ಯರೆಲ್ಲ – ಎಷ್ಟು ನೀಚ ಬುದ್ಧಿಯವರಪ್ಪಾ! ಈ ಹೆಂಗುಸರ ಕೈಹಿಡಿದರೆ ಮಾತ್ರ ಸಾಲದು ; ಅವರ ಮುಖದತ್ತವೂ ನೋಡಬೇಕಾಗ ಬಹುದೋ – ಏನೋ! ಹೋಗಲಿ; ಎಷ್ಟು ಬೇಕಾದರೂ ಹರಿದುಕೊಳ್ಳಲಿ. ದೊಡ್ಡ ಮನುಷ್ಯರು ತಮ್ಮ ಮರ್ಯಾದೆ ಕಾಪಾಡಿಕೊಳ್ಳದಿದ್ದರೂ, ಅಲ್ಪ ಮನುಷ್ಯರಾದರೂ ಅವರ ಮರ್ಯಾದೆ ಉಳಿಸಬೇಡವೇ?

ಅಲ್ಲ; ಇದು ದನಿಯಾ! ನನ್ನನ್ನು ಕರೆಯುತ್ತಿದ್ದಾಳೆ!

ದನಿಯಾ ಪುನಃ ಕರೆದಳು – 'ಏನು ? ನಿದ್ದೆ ಬಂದಿದೆಯೋ – ಅಲ್ಲ, ಎಚ್ಚರವಿದೆಯೊ ?'

ಹೋರಿರಾಮು ಅವಸರವಸರವಾಗಿ ಎದ್ದು ಗುಡಿಸಲಿನಿಂದ ಹೊರಗೆ ಬಂದ. ಇಂದು ದೇವಿಯು ಪ್ರಸನ್ನಳಾಗಿದ್ದಾಳೆಂದು ತೋರುತ್ತದೆ. ಆದ್ದರಿಂದಲೇ ಈಗ ವರದಾನ ಕೊಡಲಿಕ್ಕೆ ಬಂದಿದ್ದಾಳೆ. ಆದರೆ ರಾತ್ರಿ ಬಹಳ ದಾಟಿ ಹೋಯಿತು. ಈಗ, ಇವಳು ಬಂದುದು ಏನೋ ಒಂದು ಸಂಶಯಕ್ಕೆ ಕಾರಣವಾಗುತ್ತದೆ. ಅಲ್ಲ; ಏನಾದರೂ ಇರಲೇ ಬೇಕು – 'ಈ ಚಳಿಯಿಂದಾಗಿ ನಿದ್ದೆ ಎಲ್ಲಿ ಬರುತ್ತದೆ ? ಈ ಚಳಿ ಗಾಳಿಯಲ್ಲಿ ನೀನಾದರೂ ಹೇಗೆ ಬಂದೆ? ವಿಶೇಷವೇನೂ ಇಲ್ಲವಲ್ಲ ?' ಎಂದ ಅವನು.

'ಹೌದು; ಎಲ್ಲ ಸರಿಯಾಗಿಯೇ ಇದೆ.'

'ಗೋಬರನನ್ನು ಕಳುಹಿಸಿ ನನ್ನನ್ನು ಕರೆಸಬಹುದಿತ್ತಲ್ಲ ?'

ದನಿಯಳು ಯಾವ ಉತ್ತರವನ್ನೂ ಕೊಡಲಿಲ್ಲ. ಗುಡಿಸಲ ಒಳಗೆ ಬಂದು ಹುಲ್ಲುಮಂಚದ ಮೇಲೆ ಕೂತುಕೊಂಡು ಹೇಳಿದಳು – 'ಗೋಬರ ನಮ್ಮ ಮುಖಕ್ಕೆ ಮಸಿ ಹಚ್ಚಿಯೇ ಬಿಟ್ಟ. ಅವನ ವಿಚಾರ ಏನು ಹೇಳುವುದು? ನನಗೆ ಯಾವ ಭಯವಿತ್ತೋ ಅದು ಆಗಿಯೇ ಹೋಯಿತು.'

'ಏನು ? ಏನಾಯಿತು ? ಯಾರ ಕೈಯಿಂದಾದರೂ ಪೆಟ್ಟು ತಿಂದನೆ ?'

'ಏನು ಹೇಳಲಿ! ಹೋಗಿ ಕೇಳಿ – ಆ ಮುಂಡೆಯನ್ನೇ.'

'ಯಾವ ಮುಂಡೆಯನ್ನು ? ನೀನೇನು ಹೇಳುತ್ತಿರುವೆ ? ಏನು ಹುಚ್ಚು-ಗಿಚ್ಚು ಹಿಡಿದಿದೆಯೇ ?'

'ಹುಚ್ಚು ಹೇಗೆ ಹಿಡಿಯದಿದ್ದೀತು? ಕೇಳಿದಾಗ ಎದೆ ಒಡೆದು ಹೋಗುವಂತಾಯಿತು.'

ಹೋರಿರಾಮನ ಮನಸ್ಸಿಗೆ ಒಂದು ಬೆಳಕಿನ ರೇಖೆ ತೋರಿ ಬಂತು –

'ಯಾರವಳು ? ಏನಾಯಿತು ? ಸ್ಪಷ್ಟವಾಗಿ ಏಕೆ ಹೇಳುವುದಿಲ್ಲ ?'

'ಅವಳೇ – ಆ ಜುನಿಯಾ ; ಮತ್ಯಾರು ?'

'ಏನು ? ಜುನಿಯಾ ಇಲ್ಲಿ ಬಂದಳೇ ?'

'ಇಲ್ಲಿ ಬಾರದೆ ಮತ್ತೆಲ್ಲಿ ಹೋಗುವುದು ಅವಳು ?'

'ಗೋಬರ ಮನೆಯಲ್ಲಿಲ್ಲವೇ ?'

'ಗೋಬರನ ಸುಳಿವೇ ಇಲ್ಲ. ಎಲ್ಲಿಗೆ ಓಡಿ ಹೋಗಿದ್ದಾನೆಂದು ಗೊತ್ತೇ

ಇಲ್ಲ. ಇವಳಿಗೆ ಐದು ತಿಂಗಳ ಹೊಟ್ಟೆ ಬಂದಿದೆಯಂತೆ!'

ಹೋರಿರಾಮನಿಗೆ ಎಲ್ಲವೂ ಈಗ ತಿಳಿಯಿತು. ಗೋಬರನು ಆಗಾಗ್ಗೆ ಗೊಲ್ಲರ ಕೇರಿಗೆ ಹೋಗುತ್ತಿದ್ದಾಗ ಇವನಿಗೆ ಸ್ವಲ್ಪ ಸಂಶಯವಾಗಿತ್ತು. ಆದರೆ ಅವನು ಅಂತಹ 'ಲಂಪಟ'ನೆಂದು ಈತ ಎಣಿಸಿದ್ದಿಲ್ಲ. ಪ್ರಾಯ ಬಂದ ಹುಡುಗರಲ್ಲಿ ಒಂದು ತರದ ರಸಿಕತೆ ಇದ್ದೇ ಇರುತ್ತದೆ. ಅದೊಂದು ಹೊಸ ವಿಚಾರವಲ್ಲ. ಆದರೆ ಆಕಾಶದಲ್ಲಿ ಹತ್ತಿಯ ಉಂಡೆಯಂತಿದ್ದ ಚಿಕ್ಕ ಬಿಳಿ ಮೋಡವನ್ನು ನೋಡಿ ಹೋರಿರಾಮ ಅಲಕ್ಷ್ಯದಿಂದ ನಕ್ಕು ಬಿಟ್ಟಿದ್ದ. ಆದರೆ ಆದೇ ಮೋಡ ದೊಡ್ಡದಾಗಿ ಬೆಳೆದು ಇಡೀ ಆಕಾಶವನ್ನೇ ಅಂಧಕಾರಮಯವಾಗಿ ಮಾಡೀತೆಂದು – ಅವನೆಣಿಸಿದ್ದಿಲ್ಲ. ಗೋಬರ ಇಂತಹ ಲಂಪಟನೇ? ಅವನೊಬ್ಬ ಪಾಪದ ಹುಡುಗ! ನಿನ್ನೆಯ ವರೆಗೆ ಮಗುವೇ ಆಗಿದ್ದವನು. ಅವನಿಗೆ ಹೊಟ್ಟೆಯ ಚಿಂತೆಯೂ ಇಲ್ಲ, ಹತ್ತು ಸಮುಸ್ತರ ಭಯವೂ ಇಲ್ಲ. ಆದರೆ ಇನ್ನು ಮುಂದಕ್ಕೆ, ಜುನಿಯಳು ತನ್ನ ಮನೆಯಲ್ಲಿ ಹೇಗೆ ಬಂದು ಇದ್ದಾಳೆಂಬ ಯೋಚನೆಯೂ ಬೇಡವೇ? ಅದರ ಮೇಲೆ ಆ ಹುಡುಗ ಲಜ್ಜಾಶೀಲ, ಆತ್ಮಾಭಿಮಾನಿ! ಮುಂದಿನ ಅಪಮಾನ ತೊಂದರೆಗಳಿಗೆ ಹೆದರಿ ಎಲ್ಲಿಯಾದರೂ, ಏನಾದರೂ ಮಾಡಿಕೊಂಡರೆ!

ಅವನು ಗಾಬರಿಯಾಗಿ ಹೇಳಿದ – 'ಗೋಬರ ಎಲ್ಲಿಗೆ ಹೋಗಿದ್ದಾನೆಂದು ಜುನಿಯಳಿಗೆ ಗೊತ್ತಿಲ್ಲವೇ? ಅವಳಿಗೆ ಹೇಳಿಯೇ ಹೋಗಿರಬೇಕು.'

ದನಿಯಳು ಸಿಡುಕಿನಿಂದ ಹೇಳಿದಳು – 'ನಿಮ್ಮ ಬುದ್ಧಿಗೆ ಏನಾಗಿದೆ? ಅವನ ಪ್ರೀತಿಯ ರಾಣಿ ಇಲ್ಲಿರುವಾಗ ಅವನೆಲ್ಲಿಗೆ ಓಡಿ ಹೋದಾನು? ಇಲ್ಲಿಯೇ ಎಲ್ಲಿಯಾದರೂ ಅಡಗಿರಬೇಕು. ಹಾಗೆ ತಪ್ಪಿಸಿಕೊಂಡು ಹೋದರೂ, ಆತ ಏನು – ಮೊಲೆಹಾಲು ಕುಡಿಯುವ ಮಗುವೇ? ನನಗೀಗ ಆ ಸುಟ್ಟ ಮೋರೆಯ ಜುನಿಯಳ ಚಿಂತೆ ಹಿಡಿದಿದೆ. ನನ್ನ ಮನೆಯಲ್ಲಿ ಅವಳನ್ನು ಒಂದು ಕ್ಷಣದ ಮಟ್ಟಿಗೂ ಇರಲಿಕ್ಕೆ ಬಿಡಲಾರೆ. ಅವನು ಆ ದಿನ ದನ ತರಲಿಕ್ಕೆ ಹೋದಂದಿನಿಂದಲೇ ಅವರವರೊಳಗೆ ಕೈ ಆಗಿರಬೇಕು. ಹೊಟ್ಟೆ ಬಾರದಿರುತ್ತಿದ್ದರೆ ಇನ್ನೂ ಗುಟ್ಟು ಹೊರಬರುತ್ತಿರಲಿಲ್ಲ. ಗರ್ಭ ಮೇಲೆ ಬಂದ ಬಳಿಕ ಅವಳಿಗೆ ಹೆದರಿಕೆ ಮೊದಲಾಗಿರಬೇಕು. ಮತ್ತೆ, ಎಲ್ಲಿಯಾದರೂ ಓಡಿ ಹೋಗುವಾ – ಎಂದು ಹೇಳಿರಬೇಕು. ಈತ ಒಂಟಿ ಹೆಂಗುಸನ್ನು ಕಟ್ಟಿಕೊಂಡು ಹೋಗುವುದಾದರೂ ಎಲ್ಲಿಗೆ? ಕೊನೆಗೆ ಅವಳು ಜುಟ್ಟು ಹಿಡಿದು

ಬಲವಂತಪಡಿಸಿದ ಮೇಲೆ – ಹೋಗಿ ನಮ್ಮ ಮನೆಯಲ್ಲಿ ಸೇರಿಕೋ; ಅಮ್ಮ ನಿಗೆ ನಾನು ಹೇಳುತ್ತೇನೆ – ಎಂದು ಕರೆದು ತಂದಿರಬೇಕು. ಈಗ ಈ ಕತ್ತೆಯನ್ನು ಇಲ್ಲೇ ಬಿಟ್ಟು ಅವನು ಎಲ್ಲಿಗೋ ಪರಾರಿಯಾಗಿರಬೇಕು. ಅಕೊ, ನಾನು ಹೇಳಿ ಬಿಟ್ಟಿದ್ದೇನೆ – ಅವಳು ಮಾಡಿದ್ದನ್ನು ಅವಳೇ ತಿನ್ನಬೇಕು. ಅಂತು ಆ ಬೋಸುಡಿ ನನ್ನ ಮಗನನ್ನು ಹಾಳು ಮಾಡಿಯೇ ಬಿಟ್ಟಳು. ಈಗ ಕೂತುಕೊಂಡು ನಮ್ಮ ಮನೆ ಬಾಗಿಲಲ್ಲಿ ಅಳುತ್ತಿದ್ದಾಳೆ. ಏಳುವುದೇ ಇಲ್ಲ. ತನ್ನ ಮನೆಗೆ ಯಾವ ಮುಖ ತೆಗೆದುಕೊಂಡು ಹೋಗಲಿ – ಎನ್ನುತ್ತಿದ್ದಾಳೆ. ದೇವರು ಇಂತಹ ಮಕ್ಕಳನ್ನು ಕೊಡುವುದಕ್ಕಿಂತ ನಾನು ಬಂಜೆಯೇ ಆಗಿದ್ದರೆ ವಾಸಿ ಇತ್ತು. ಬೆಳಗಾದೊಡನೆ ಊರಲ್ಲೆಲ್ಲ ಸುದ್ದಿಯಾದೀತು. ವಿಷ ತಿಂದು ಪ್ರಾಣ ಬಿಡುವ ಮನಸ್ಸಾಗುತ್ತದೆ. ನಾನು ನಿಮ್ಮ ಹತ್ತಿರ ಈಗಲೇ ಹೇಳಿ ಬಿಟ್ಟಿದ್ದೇನೆ – ನಾನು ಅವಳನ್ನು ಮನೆ ಮೆಟ್ಟಲು ಏರಲಿಕ್ಕೂ ಬಿಡಲಿಕ್ಕಿಲ್ಲ. ಗೋಬರನನ್ನು ಬೇಕಾದರೆ ಅವಳು ತನ್ನ ಕುತ್ತಿಗೆಗೆ ಕಟ್ಟಿಕೊಳ್ಳಲಿ. ನನ್ನ ಮನೆಯಲ್ಲಿ ಅಂತಹ ಮರ್ಯಾದೆ ಕೆಟ್ಟವರಿಗೆ ಒಂದಿಷ್ಟು ಸ್ಥಳವೂ ದೊರೆಯು ಲಾರದು. ಈ ವಿಚಾರದಲ್ಲಿ ನೀವೆಲ್ಲಿಯಾದರೂ ಬಾಯಿ ಹಾಕಿದರೆ – ಮನೆಯಲ್ಲಿ ಒಂದೇ ನೀವಿರಬೇಕು, ಇಲ್ಲವೇ ನಾನು, ಎಂದಾದೀತು.'

ಹೋರಿರಾಮು ಹೇಳಿದ – 'ನೀನು ಮಾಡಿದ್ದು ತಪ್ಪಾಯಿತು. ಅವಳನ್ನು ಮನೆ ಬಾಗಿಲಿಗೆ ಬರಲಿಕ್ಕೇ ಬಿಡಬಾರದಿತ್ತು.'

'ಎಲ್ಲವನ್ನೂ ಮಾಡಿ ಸೋತು ಹೋದೆ. ಕೂತಲ್ಲಿಂದ ಏಳುವುದೇ ಇಲ್ಲ. ಹಟ ಹಿಡಿದು ಕೂತಿದ್ದಾಳೆ.'

'ಆಗಲಿ ಹೋಗುವಾ. ಯಾಕೆ ಏಳುವುದಿಲ್ಲವೆಂದು ನಾನು ನೋಡು ತ್ತೇನೆ. ತೋಳು ಹಿಡಿದು ಎಳೆದು ಹೊರಗೆ ಹಾಕಿ ಬಿಟ್ಟೇನು.'

'ಆ ಮರ್ಯಾದೆ ಕೆಟ್ಟ ಬೋಲಣ್ಣ, ಎಲ್ಲ ನೋಡಿ ಕೊಂಡುಸಹ, ಸುಮ್ಮ ನಿದ್ದನಲ್ಲ! ಅವನು ಕೂಡ ಅದೇ ಕಸುಬಿನವನು. ಮತ್ತೇನು?'

'ಇವರಿಬ್ಬರೊಳಗೆ ಏನೆಲ್ಲ ನಡೆಯುತ್ತಿತ್ತೆಂದು ಅವನಿಗೇನು ಗೊತ್ತು?'

'ಗೊತ್ತಾಗದೆ ಹೇಗೆ ಇದ್ದೀತು? ಗೋಬರ ರಾತ್ರಿ ಹಗಲು ಅಲ್ಲೇ ಸುತ್ತಾಡುತ್ತಾ ಇರುವಾಗ-- ಅವನ ಕಣ್ಣು ಒಡೆದು ಹೋಗಿತ್ತೇ? ಇವನು ಅಲ್ಲಿ ಏತಕ್ಕಾಗಿ ಓಡಾಡುತ್ತಿದ್ದಾನೆಂದು ಯೋಚಿಸುವುದು ಬೇಡವೆ ಅವನು?'

'ಹೋಗಿ ಜುನಿಯಳನ್ನೇ ಕೇಳುವಾ.'

ಇಬ್ಬರೂ ಗದ್ದೆಯ ಗುಡಿಸಲಿನಿಂದ ಹೊರಟು ಮನೆಯತ್ತ ಸಾಗಿದರು. ಆಗ ಹೋರಿರಾಮ ಹೇಳಿದ– 'ಐದಾರು ಗಳಿಗೆ ರಾತ್ರಿ ದಾಟಿರಬೇಕು.'

'ಹೌದು; ಇಡೀ ಊರೇ ನಿಶ್ಯಬ್ದವಾಗಿದೆ. ಯಾರಾದರೂ ಕಳ್ಳ ಬಂದರೆ ಊರಿನ ಧಾನ್ಯವನ್ನೆಲ್ಲ ಕದ್ದುಕೊಂಡು ಹೋಗಬಹುದು.'

'ಕಳ್ಳರು ಇಂತಹ ಊರಿಗೆ ಬಂದು ತೆಗೆದುಕೊಂಡು ಹೋಗುವುದೇನನ್ನು? ಅವರಿಗೆ ಬೇಕು ಧನಿಕರಿರುವ ಊರು.'

ಸ್ವಲ್ಪ ದಾರಿ ಸಾಗಿದ ಮೇಲೆ ದನಿಯಳು ಹತ್ತಿರ ಹೋಗಿ ಹೋರಿರಾಮನ ಕೈಹಿಡಿದು ಹೇಳಿದಳು– 'ನೋಡಿ, ಗದ್ದಲ ಮಾಡಬೇಡಿ. ನೆರೆಹೊರೆಯವರೆಲ್ಲ ಎಚ್ಚತ್ತು ಸುದ್ದಿ ಒಮ್ಮೆಗೇ ಹಬ್ಬಿ ಹೋದೀತು.'

ಹೋರಿರಾಮ ಕಠೋರ ಸ್ವರದಿಂದ ಹೇಳಿದ– 'ಅದೆಲ್ಲ ನನಗೆ ಗೊತ್ತಿಲ್ಲ. ಅವಳ ತೋಳು ಹಿಡಿದು, ಎಳೆದು ತಂದು ಊರ ಹೊರಗೆ ದೂಡಿ ಬಿಡುತ್ತೇನೆ. ಒಂದಲ್ಲ ಒಂದು ದಿನ ವಿಷಯ ತಿಳಿದೇ ಹೋಗುತ್ತದೆ. ಹಾಗಿರುವಾಗ ಇಂದೇ ಮುಗಿದು ಹೋಗಲಿ. ಅವಳು ಅವನೊಡನೆ ಸೇರಿ ಹಾಳು ಕೆಲಸ ಮಾಡಿದ್ದರೆ– ಅದೇನು, ನಮಗೆ ಕೇಳಿ ಮಾಡಿದ್ದೇ?'

ಪುನಃ ದನಿಯಳು ಅವನ ಕೈಹಿಡಿದು– 'ನೀವು ತೋಳು ಹಿಡಿದರೆ ಅವಳು ಬೊಬ್ಬೆ ಹೊಡೆದಾಳು'– ಎಂದಳು ಮೆಲ್ಲಗೆ

'ಬೊಬ್ಬೆ ಹೊಡೆದರೆ ಹೊಡೆಯಲಿ, ನನಗೇನು?'

ಈಗಂತು ಕಾಳರಾತ್ರಿಯಾಗಿದೆ. ಈ ಕಗ್ಗತ್ತಲೆಯಲ್ಲಿ ಅವಳು ಎಲ್ಲಿಗೆ ಹೋಗುವುದು? ಸ್ವಲ್ಪ ಯೋಚಿಸಿ ನೋಡಿ.'

'ಅವಳ ಮಿಂಡನೆಲ್ಲಿದ್ದಾನೋ– ಅಲ್ಲಿಗೆ ಹೋಗಲಿ. ನಮ್ಮ ಮನೆಯಲ್ಲಿ ಅವಳದೇನಿದೆ?'

'ಹೌದು; ಆದರೂ ಈ ಅಪರಾತ್ರಿಯಲ್ಲಿ ಮನೆಯಿಂದ ಹೊರಡಿಸುವುದು ಸರಿಯಲ್ಲ. ಎಲ್ಲಿಯಾದರೂ ಹೆದರಿ ಹೋಗಿ, ಏನಾದರೂ ಮಾಡಿಕೊಂಡರೆ?'

'ನಮಗೇನು ಅದರಿಂದ? ಸಾಯಲಿ, ಬದುಕಲಿ. ಎಲ್ಲಿಗೆ ಬೇಕೋ– ಅಲ್ಲಿಗೆ ಹೋಗಲಿ. ನಾವ್ಯಾಗಿ ಏಕೆ ಮುಖಕ್ಕೆ ಮಸಿ ಹಚ್ಚಿಕೊಳ್ಳಬೇಕು? ಆ ಗೋಬರನನ್ನೂ ಮನೆಯಿಂದ ಹೊರಮಾಡಿ ಬಿಡಬೇಕು.'

ದನಿಯಳು ಗಂಭೀರವಾದ ಚಿಂತೆಯಿಂದ ಹೇಳಿದಳು– 'ಮುಖಕ್ಕೆ ಮಸಿ ಆಗುವಂತಹದು ಆಗಿಯಾಯಿತು. ಅದಿನ್ನು ಸಾಯುವ ತನಕವೂ ಅಳಿಸಿ

ಹೋಗುವಂತಹದಲ್ಲ. ಅಂತು ಗೋಬರನೇ ನಮ್ಮ ದೋಣಿ ಮುಳುಗಿಸಿ ಹಾಕಿದ.'

'ಗೋಬರ ಮುಳುಗಿಸಿದ್ದಲ್ಲ. ಮುಳುಗಿಸಿದ್ದು ಈ ರಂಡೆ. ಆ ಪಾಪದ ಹುಡುಗನನ್ನು ಬಲೆಯಲ್ಲಿ ಹಾಕಿಕೊಂಡು ಇವಳು ಎಲ್ಲವನ್ನೂ ಹಾಳು ಮಾಡಿ ಬಿಟ್ಟಳು.'

'ಅಂತು ಇಂತು ಎಲ್ಲವೂ ಕೆಟ್ಟು ಹೋಯಿತು.'

ಇಬ್ಬರೂ ಮನೆ ಬಾಗಿಲಿಗೆ ಬಂದರು. ದನಿಯಳು ಫಕ್ಕನೆ ಹೋರಿರಾಮನ ಹೆಗಲ ಮೇಲೆ ಕೈ ಹಾಕಿ ಹೇಳಿದಳು – 'ನೋಡಿ; ನನ್ನ ಕುತ್ತಿಗೆಯಾಣೆ ಇದೆ. ಅವಳ ಮೇಲೆ ಕೈ ಮಾಡಬೇಡಿ. ಅವಳು ತನ್ನಷ್ಟಕ್ಕೇ ಅಳುತ್ತಿದ್ದಾಳೆ. ಅವಳ ಅದೃಷ್ಟವೇ ಹಾಳು. ಇಲ್ಲವಾದರೆ ಹೀಗಾಗುತ್ತಿತ್ತೇ?'

ಹೋರಿರಾಮನ ಹೃದಯವೂ ಕರಗಿತು. ದನಿಯಳ ಈ ಮಾತೃಸ್ನೇಹವು, ಕತ್ತಲೆಯಲ್ಲಿ ತೋರಿಬಂದ ಹೊಸ ಬೆಳಕಿನಂತೆ–ಅವನ ಚಿಂತಾಜರ್ಜರ ಶರೀರದಲ್ಲಿ ಒಂದು ಹೊಸ ಶೋಭೆಯನ್ನು ಮೂಡಿಸಿದಂತಾಯಿತು. ಇಬ್ಬರ ಹೃದಯದಲ್ಲಿಯೂ ಹಿಂದಿನ ನವಯೌವನದ ಸ್ಮೃತಿಯು ಉದಯವಾದಂತಾಯಿತು. ಆಗಿನ ಆ ಆಲಿಂಗನವು ಸರ್ವಸ್ವವನ್ನೂ ಮರೆಮಾಡಿದ್ದ ವಿಚಾರ ತಲೆಯಲ್ಲಿ ಹೊಳೆದು ಬಂತು.

ಇಬ್ಬರೂ ಬಂದು ಇಣಿಕಿ ನೋಡಿದರು. ಗೋಡೆಯ ಕಂಡಿಯಲ್ಲಿ ಮಿಣಿ ಮಿಣಿ ದೀಪ ಉರಿಯುತ್ತಿತ್ತು. ಕೆಳಗಿಂದ ಜುನಿಯಳು ಮುಸುಕಿನೊಳಗೆ ತಲೆಯನ್ನು ಹುದುಗಿಸಿಕೊಂಡು ಹೊರ ಬಾಗಿಲತ್ತ ನೋಡುತ್ತ, ಅಳುತ್ತ ಕೂತಿದ್ದಳು. ಅವಳು ಹಲವು ವಿಧದ ಆಪತ್ತುಗಳ ಪೆಟ್ಟು ತಿಂದು, ಯಾವುದಾದರೊಂದು ಮರದ ನೆರಳನ್ನು ಬಯಸುವಂತಿದ್ದಳು. ಒಂದು ಮನೆಯ ಆಶ್ರಯ ಪಡೆದು ತಾನಿನ್ನು ಸುರಕ್ಷಿತಳೆಂದು ಭಾವಿಸಿದ್ದಳು. ಆದರೆ ಇಂದು ಆ ಆಶ್ರಯವು ಮಾಯಾ ಮೃಗದಂತೆ ಕೈಯಿಂದ ತಪ್ಪಿಹೋಗುವುದನ್ನು ಕಂಡು ಕಂಗಾಲಾಗಿ ಹೋಗಿದ್ದಳು. ತನ್ನ ಭವಿಷ್ಯವು ವಿಕರಾಳವಾಗಿ ಅವಳ ಕಣ್ಣ ಮುಂದೆ ಕಟ್ಟಿ ಬಂದಿತು.

ಅಕಸ್ಮಾತ್ ಬಾಗಿಲು ತೆರೆದು ಹೋರಿರಾಮು ಬಂದುದನ್ನು ಕಂಡು ಜುನಿಯಳು ಭಯದಿಂದ ನಡುಗುತ್ತಾ ಎದ್ದಳು. ಒಡನೆಯೇ ಅವನ ಕಾಲುಗಳ ಮೇಲೆ ಬಿದ್ದು ಬೇಡಿಕೊಳ್ಳತೊಡಗಿದಳು – 'ದೇವರೇ, ನನಗಿನ್ನು ನೀವಲ್ಲದೆ

ಬೇರೆ ಗತಿಯೇ ಇಲ್ಲ. ಕೊಲ್ಲಿರಿ, ಕೊಚ್ಚಿರಿ, ಏನು ಬೇಕಾದರೂ ಮಾಡಿ. ಮನೆಯಿಂದ ಹೊರಗೆ ಮಾತ್ರ ದೂಡಬೇಡಿ.'

ಹೋರಿರಾಮನ ಮನಸ್ಸು ಕರಗಿ ಹೋಯಿತು. ಅವನು ಜುನಿಯಳ ಬೆನ್ನ ಮೇಲೆ ಕೈಯಾಡಿಸುತ್ತ ಪ್ರೀತಿಯುಕ್ತ ಸ್ವರದಿಂದ– 'ಹೆದರ ಬೇಡ ಮಗಳೇ, ಹೆದರ ಬೇಡ. ಇದು ನಿನ್ನದೇ ಮನೆ ಬಾಗಿಲೆಂದು ತಿಳಿದುಕೊ. ನಾವೂ ನಿನ್ನವರೇ. ಸುಖವಾಗಿರು. ನೀನು ಬೋಲಣ್ಣನ ಮಗಳಾಗಿದ್ದಂತೆಯೇ ನಮ್ಮ ಮಗಳೂ ಆಗಿರುವೆ. ನಾವು ಬದುಕಿರುವ ವರೆಗೆ ಯಾವ ಯೋಚನೆ ಯನ್ನೂ ಮಾಡಬೇಡ. ಇನ್ನು ನಿನ್ನನ್ನು ಯಾರೂ ಓರೆಗಣ್ಣಿಂದ ನೋಡ ಲಾರರು. ಅದರಿಂದ ಏನು ಬಂದರೂ ಬರಲಿ. ನೀನು ಸುಖವಾಗಿರಬೇಕೆಂಬುದೇ ನಮ್ಮ ಬಯಕೆ' ಎಂದ.

ಈ ಸಮಾಧಾನದ ಮಾತು ಕೇಳಿ ಜುನಿಯಳು ಮತ್ತೂ ಮತ್ತೂ ಹೋರಿ ರಾಮನ ಕಾಲು ಹಿಡಿದು ಬೇಡಿಕೊಳ್ಳತೊಡಗಿದಳು – 'ನೀವೇ ನನ್ನ ತಂದೆ ತಾಯಿಯರು. ಅನಾಥಳಾದ ನನಗೆ ಗತಿ ತೋರಿಸಿ ನನ್ನನ್ನು ಕಾಪಾಡಿ. ಇಲ್ಲವಾದರೆ– ನನ್ನ ತಂದೆ, ಅಣ್ಣ ತಮ್ಮಂದಿರು, ಎಲ್ಲ ಸೇರಿ ನನ್ನನ್ನು ಹಸಿ ಹಸಿಯೇ ತಿಂದು ಬಿಟ್ಟಾರು.'

ದನಿಯಳೀಗ ತನ್ನ ಅಂತಃಕರಣದ ಆವೇಶವನ್ನು ತಡೆಯಲಾರದೆ ಹೇಳಿ ದಳು–'ಹೋಗು, ನೀನು ಮನೆಯೊಳಗಿರು. ನಿನ್ನ ಅಪ್ಪ, ಅಜ್ಜ, ಅಣ್ಣ – ಎಲ್ಲರನ್ನೂ ನೋಡಿ ಬಿಡುತ್ತೇನೆ. ಇಡೀ ಪ್ರಪಂಚದಲ್ಲಿ ಅವರದೇ ಅಧಿಕಾರ ನಡೆಯುವುದಲ್ಲ. ಹೆಚ್ಚೆಂದರೆ ತಾವು ಹಾಕಿದ್ದ ಆಭರಣ ಕೇಳಿಯಾರು ಅವರು. ಆಗ ಅದನ್ನು ಎಸೆದು ಬಿಟ್ಟರೆ ಸರಿ.'

ದನಿಯಾ ಈಗ ಸ್ವಲ್ಪವೇ ಸಮಯ ಮೊದಲು ಜುನಿಯಳನ್ನು – ಮರ್ಯಾದೆ ಕೆಟ್ಟವಳು, ಸುಟ್ಟ ಮುಖದವಳು, ರಂಡೆ, ಮುಂಡೆ, ಹಾಗೆ ಹೀಗೆ– ಎಂಬುದಾಗಿ ಬಾಯಿಗೆ ಬಂದಂತೆ ಬೈದಿದ್ದಳು. ಹಿಡಿಸೂಡಿಯಿಂದ ಹೊಡೆದು ಮನೆಯಿಂದ ಹೊರಮಾಡ ಹೊರಟಿದ್ದಳು. ಆದರೆ ಈಗ ಈ ಸ್ನೇಹ, ಕ್ಷಮೆ, ಆಶ್ವಾಸನೆಗಳಿಂದ ಕೂಡಿದ ಮಾತನ್ನು ಕೇಳಿದೊಡನೆ ಜುನಿಯಳು ಹೋರಿರಾಮನ ಚರಣಗಳನ್ನು ಬಿಟ್ಟು ದನಿಯಳ ಕಾಲು ಹಿಡಿದು ಅಳತೊಡಗಿ ದಳು. ಒಡನೆಯೇ ದನಿಯಾ ಅವಳನ್ನೆತ್ತಿ ಕಣ್ಣೀರೊರಸಿ ಸಮಾಧಾನ ಹೇಳುತ್ತಿರುವಾಗ ಹಕ್ಕಿಯು ತನ್ನ ಎಳೆ ಮರಿಯನ್ನು ಪ್ರೀತಿಸುತ್ತಿದೆಯೋ–

ಎಂಬಂತೆ ತೋರುತಿತ್ತು.

ಹೋರಿರಾಮು ಅವಳಿಗೇನಾದರೂ ಹೊಟ್ಟೆಗೆ ತಿನ್ನಲು ಕೊಡುವುದಕ್ಕೆ ದನಿಯಳಿಗೆ ಸೂಚಿಸಿ, ಆ ಮೇಲೆ ಕೇಳಿದ – 'ಏನು ಮಗಳೆ; ಗೋಬರನೆಲ್ಲಿಗೆ ಹೋಗಿದ್ದಾನೆಂದು ನಿನಗೆ ಗೊತ್ತೇ?'

ಜುನಿಯಳು ಸಂಕೋಚ ಪಡುತ್ತ ಹೇಳಿದಳು – 'ನನ್ನೊಡನೆ ಏನೂ ಹೇಳಿಲ್ಲ. ನನ್ನಿಂದಾಗಿ ನಿಮಗೆಲ್ಲ ತುಂಬಾ....' ಹೀಗೆ ಹೇಳುತ್ತ ಹೇಳುತ್ತ ಅವಳ ಕುತ್ತಿಗೆಯೇ ಕಟ್ಟಿಬಂತು.

ಹೋರಿರಾಮುನೂ ತನ್ನ ವ್ಯಾಕುಲತೆಯನ್ನು ತಡೆಯಲಾರದೆ ಕೇಳಿದನು – 'ಇಂದು ನೀನು ನೋಡುವಾಗ ಅವನು ಬೇಸರಗೊಂಡವನಂತೆ ಇದ್ದನೇನು?'

'ಮಾತೇನೋ ನಗುತ್ತಲೇ ಆಡುತ್ತಿದ್ದರು. ಮನಸ್ಸಿನ ಪರಿಸ್ಥಿತಿ ದೇವರಿಗೇ ಗೊತ್ತು.'

'ನಿನ್ನ ಮನಸ್ಸಿಗೆ ಹೇಗೆ ತೋರುತ್ತದೆ? – ಊರಲ್ಲೇ ಇರಬಹುದೇ ಆತ? ಅಥವಾ ದೂರ ಹೋಗಿರಬಹುದೇ?'

'ನನಗೇನೋ ಹೊರಗೆ ದೂರ ಹೋಗಿರಬೇಕೆಂದು ಸಂಶಯವಾಗುತ್ತದೆ.'

'ನನ್ನ ಮನಸ್ಸೂ ಅದನ್ನೇ ಹೇಳುತ್ತಿದೆ. ಅಂತು – ಎಂತಹ ಹೆಡ್ಡು ಕೆಲಸ ಮಾಡಿದ! ನಾವೇನು – ಅವನ ಶತ್ರುಗಳೇ? ಒಳ್ಳೆಯದಾಗಲಿ, ಕೆಟ್ಟದಾಗಲಿ– ಒಂದು ಕೆಲಸ ನಡೆದ ಮೇಲೆ ಅದನ್ನು ಸರಿಪಡಿಸಬೇಕಲ್ಲವೇ? ಈ ರೀತಿ ಹೇಳದೆ ಕೇಳದೆ ಓಡಿಬಿಟ್ಟು ನಮ್ಮ ಜೀವಕ್ಕೆ ಕಷ್ಟಕೊಟ್ಟನಲ್ಲ!'

ದನಿಯಳು ಜುನಿಯಳ ಕೈ ಹಿಡಿದುಕೊಂಡು ಒಳಗೆ ಕರೆದುಕೊಂಡು ಹೋಗುತ್ತ ಹೇಳಿದಳು – 'ಎಂತಹ ಹೇಡಿ. ಕೈಹಿಡಿದ ಮೇಲೆ ಅವಳ ಯೋಗ ಕ್ಷೇಮ ನೋಡಬೇಡವೇ? ಮುಖಕ್ಕೆ ಕಳಂಕ ತಾಗಿಸಿಕೊಂಡು ಓಡುವುದೇ? ಆಗಲಿ; ಇನ್ನು ಬರುವುದೆಲ್ಲ ಬರಲಿ; ನೋಡುವಾ.'

ಹೋರಿರಾಮು ಹೋಗಿ ಆ ಹುಲ್ಲು ಗುಡಿಸಲಿನಲ್ಲೇ ಮಲಗಿಕೊಂಡ. ಗೋಬರ ಎಲ್ಲಿಗೆ ಹೋದ? – ಎಂಬೀ ಪ್ರಶ್ನೆ ಅವನ ಹೃದಯಾಕಾಶದಲ್ಲಿ ಪಕ್ಷಿಯಂತೆ ಹಾರಾಡುತ್ತಲೇ ಇತ್ತು.

ಇಂತಹ ಒಂದು ಅಸಾಧಾರಣ ಕಾಂಡ ನಡೆದಾಗ ಹಳ್ಳಿಯಲ್ಲಿ ಎಷ್ಟೆಲ್ಲ ಗಡಿಬಿಡಿ ನಡೆಯಬೇಕಿತ್ತೋ ಅಷ್ಟೆಲ್ಲ ನಡೆದೇ ಹೋಯಿತು. ಆ ಸುದ್ದಿಯನ್ನು ಊರೆಲ್ಲಾ ತಿಂಗಳುಗಟ್ಟಲೆ ಮೆಲುಕು ಹಾಕುತ್ತಲೇ ಇತ್ತು. ಜುನಿಯಳ ಇಬ್ಬರೂ ಅಣ್ಣಂದಿರು ದೊಣ್ಣೆ ಹಿಡಿದುಕೊಂಡು ಗೋಬರನನ್ನು ಹುಡುಕುತ್ತ ತಿರುಗಾಡುತ್ತಿದ್ದರು. ಬೋಲನು — ಜುನಿಯಳ ಮುಖವನ್ನೇ ನೋಡಲಿಕ್ಕಿಲ್ಲ; ಮಾತ್ರವಲ್ಲದೆ, ಅವಳಿದ್ದ ಊರಿಗೇ ಕಾಲಿಡಲಿಕ್ಕಿಲ್ಲ — ಎಂಬುದಾಗಿ ಪ್ರತಿಜ್ಞೆ ಮಾಡಿದ್ದ. ಹೋರಿರಾಮನ ಮೂಲಕ ಆತ ನೆಂಟಸ್ತಿಕೆಯ ಮಾತುಕತೆ ನಡೆಸುತ್ತಿದ್ದುದು — ಈಗ ಮುರಿದು ಬಿತ್ತು. ಮಾತ್ರವಲ್ಲದೆ ಹೋರಿರಾಮನ ಕೈಯಿಂದ ದನದ ಸಂಪೂರ್ಣ ಬೆಲೆ, ಅದು ಕೂಡಾ ನಗದಾಗಿ, ಸಿಗಲೇಬೇಕು; ಇಲ್ಲವಾಗರೆ ಅವನ ಮನೆಮಾರನ್ನು ಏಲಮ್ ಮಾಡಿಸಿ ಬಿಡುತ್ತೇನೆ — ಎಂಬುದಾಗಿ ಹೇಳಿಕಳುಹಿಸಿಯೂ ಇದ್ದನು.

ಊರಿನವರೆಲ್ಲ ಹೋರಿರಾಮನನ್ನು ಜಾತಿಯ ಕೂಡುಕಟ್ಟಿನಿಂದ ತೆಗೆದಿಟ್ಟು ಬಿಟ್ಟರು. ಅವನ ಕೈಯ ನೀರನ್ನು ಸಹ ಯಾರೂ ಮುಟ್ಟುತ್ತಿದ್ದಿಲ್ಲ. ಅದೂ ಅಲ್ಲದೆ ಊರ ಬಾವಿಯಿಂದ ಅವನಿಗೆ ನೀರು ಕೈದು ಮಾಡಿಬಿಡುವ ಮಾತುಕತೆಯೂ ನಡೆಯುತ್ತಿತ್ತು. ಆದರೆ ದನಿಯಳ ಚಂಡೀ ಸ್ವರೂಪದ ಪರಿಚಯ ಎಲ್ಲರಿಗೂ ಇದ್ದುದರಿಂದ ಯಾರಿಗೂ ಮುಂದೆ ಬರುವ ಧೈರ್ಯವಾಗಲಿಲ್ಲ. ದನಿಯಳು ಎಲ್ಲರೂ ಕೇಳುವಂತೆ — ಯಾರಾದರೂ ನೀರು ತೆಗೆಯುವಾಗ ತಡೆಯ ಬಂದರೆ ಅವನ ರಕ್ತವನ್ನು ಕಾರಿಸಿ ಬಿಟ್ಟೇನು—ಎಂಬುದಾಗಿ ಹೇಳಿಯೇ ಬಿಟ್ಟಿದ್ದಳು. ಈ ಕೂಗಾಟವು ಎಲ್ಲರ ಪಿತ್ತವನ್ನೂ ಕರಗಿಸಿಬಿಟ್ಟಿತ್ತು.

ಎಲ್ಲರಿಗಿಂತಲೂ ಹೆಚ್ಚಿನ ದುಃಖ ಜುನಿಯಳಿಗಾಗಿತ್ತು. ಅವಳಿಂದಾಗಿಯೇ ಈ ದಾರುಣ ದುಃಖ ಒದಗಿ ಬಂದುದು — ತಾನೆ! ಮಾತ್ರವಲ್ಲದೆ ಎಷ್ಟು ಹುಡುಕಾಡಿಸಿದರೂ ಗೋಬರನು ಸಿಗದ ಕಾರಣ ಅವಳ ದುಃಖ ಇನ್ನಷ್ಟು ಹೆಚ್ಚಾಗುವಂತಾಯಿತು. ದಿನವಿಡೀ ಮುಖ ಮುಚ್ಚಿಕೊಂಡು ಮನೆಯೊಳಗೇ ಇದ್ದು ಬಿಡುತ್ತಿದ್ದಳು. ಹೊರಗೆ ಹೊರಟು ಬಿಟ್ಟರೆ ನಾಲ್ಕೂ ಕಡೆಗಳಿಂದ ಬಂದು ಬೀಳುವ ಮಾತಿನ ಬಾಣಗಳಿಂದಾಗಿ ಬದುಕುವುದೇ ಕಷ್ಟವಾಗುವಂತಿತ್ತು. ಇಡೀ ದಿನ ಮನೆಗೆಲಸದಲ್ಲೇ ತೊಡಗಿರುತ್ತಿದ್ದಳು.

ಸಮಯ ಸಿಕ್ಕಿದಾಗ ಚನ್ನಾಗಿ ಆಳುತ್ತಿದ್ದಳು. ಪ್ರತಿ ಹೆಜ್ಜೆಗೂ ದನಿಯಳೇನಾದರೂ ಹೇಳಿ ಬಿಡುವಳೇ–ಎಂದು ಥರ ಥರ ನಡುಗುತ್ತಲೇ ಇದ್ದಳು. ಒಬ್ಬಳೇ ಅಡಿಗೆಯ ಕೆಲಸ ಸಹ ಮಾಡುತ್ತಿದ್ದಿಲ್ಲ. ಯಾಕೆಂದರೆ– ಒಂದು ವೇಳೆ ಆದನ್ನಾರೂ ಉಣ್ಣದಿದ್ದರೆ ?– ಎಂಬ ಭಯ ! ಊರಲ್ಲಂತು ನಾಲ್ಕು ಜನ ಸೇರಿದರೆ ಈ ವಿಚಾರದ್ದೇ ಮಾತುಕತೆ ನಡೆಯುತ್ತಿತ್ತು.

ಒಂದು ದಿನ ದನಿಯಳು ಅಂಗಡಿಯಿಂದ ಮನೆ ಕಡೆ ಬರುತ್ತಿದ್ದಳು. ಅರ್ಧ ದಾರಿಯಲ್ಲಿ ದಾತಾದೀನ್ ಪಂಡಿತರು ಸಿಕ್ಕಿದರು. ದನಿಯಳು ತಲೆತಗ್ಗಿಸಿ ತಪ್ಪಿಸಿಕೊಂಡು ಹೋಗಬೇಕೆಂದಿದ್ದಳು. ಆದರೆ ಕೆಣಕುವುದಕ್ಕೆ ಸಂದರ್ಭ ಸಿಕ್ಕಿದಾಗ ಪಂಡಿತರು ಏಕೆ ಬಿಟ್ಟಾರು? ಕೆಣಕಿಯೇ ಬಿಟ್ಟರು– 'ಗೋಬರನ ಸುದ್ದಿ ಏನಾದರೂ ಇದೆಯೇ ದನಿಯಾ? ಎಂತಹ ಹಾಳು ಬುದ್ಧಿಯ ಹುಡುಗ ! ಇಡೀ ವಂಶದ ಮರ್ಯಾದೆಯನ್ನೇ ತೆಗೆದುಬಿಟ್ಟ.'

ದನಿಯಳ ಮನಸ್ಸಿನಲ್ಲಿಯೂ ಅದೇ ತೋರಿ ಬರುತ್ತಿತ್ತು. ಅವಳು ಉದಾಸೀನ ಭಾವದಿಂದ ಹೇಳಿದಳು– 'ಕೆಟ್ಟ ಕಾಲ ಬರುವಾಗ ಮನುಷ್ಯನ ಬುದ್ಧಿಯೇ ಕೆಟ್ಟು ಹೋಗುತ್ತದೆ ಸ್ವಾಮಿ. ಏನು ಮಾಡುವುದು ?'

ಪಂಡಿತರೆಂದರು– 'ನೀವು ಆ ಕುಲಟೆಯನ್ನು ಮನೆಯೊಳಗೆ ಇಟ್ಟುಕೊಳ್ಳಲೇ ಬಾರದಿತ್ತು. ಹಾಲಿನಲ್ಲಿ ನೊಣ ಬಿದ್ದರೆ ಆ ನೊಣವನ್ನು ತೆಗೆದು ಬಿಸಾಡಿ ಮನುಷ್ಯ ಹಾಲು ಕುಡಿಯುತ್ತಾನೆ. ಯೋಚನೆ ಮಾಡಿ ನೋಡು– ಎಂತಹ ಕೆಟ್ಟ ಹೆಸರು, ಅವಮರ್ಯಾದೆ, ಆಗಿ ಹೋಯಿತು ! ಆ ಕುಲಕಲಂಕಿನಿ ಮನೆಯಲಿಲ್ಲದಿರುತ್ತಿದ್ದರೆ ಏನೂ ಆಗುತ್ತಿದ್ದಿಲ್ಲ. ಗಂಡು ಮಕ್ಕಳು ಇಂತಹ ಅಪ್ಪ ತಪ್ಪು ಕೆಲಸಗಳನ್ನು ಮಾಡಿಯೇ ಮಾಡುತ್ತಾರೆ. ಇನ್ನು ನಿಮ್ಮ ಜಾತಿಯವರಿಗೆ ಊಟ, ಬ್ರಾಹ್ಮಣರಿಗೆ ಮೃಷ್ಟಾನ್ನ ಭೋಜನದ ಪ್ರಾಯಶ್ಚಿತ್ತ, ನಡೆಸದೆ ನೀವು ಹೇಗೆ ಉದ್ಧಾರವಾದೀರಿ ? ಅವಳನ್ನು ಮನೆಯಲ್ಲಿಟ್ಟುಕೊಳ್ಳದಿರುತ್ತಿದ್ದರೆ ಒಂದೂ ಹೊರಬರುತ್ತಿದ್ದಿಲ್ಲ. ಹೋರಿರಾಮನಂತೂ ಈಗ ಹುಚ್ಚನೇ ಆಗಿದ್ದಾನೆ. ನೀನು ಸಹ ಹೇಗೆ ಮೋಸದಲ್ಲಿ ಬಿದ್ದೆ – ಎಂಬುದೇ ಗೊತ್ತಾಗುವುದಿಲ್ಲ.'

ದಾತಾದೀನ್ ಪಂಡಿತರ ಮಗ ಮಾತಾದೀನನು ಒಬ್ಬ ಸಮಗಾರ್ತಿಯ ಬಲೆಯಲ್ಲಿ ಸಿಕ್ಕಿ ಹೋಗಿದ್ದನು. ಇದು ಇಡೀ ಊರ ಜನರಿಗೇ ಗೊತ್ತಿತ್ತು. ಆದರೆ ಆತ ಹಣೆಯ ಮೇಲೆ ನಾಮ ಹಾಕಿಕೊಂಡು ಪೂಜೆ ಪಾರಾಯಣ

ಮಾಡುತ್ತಿದ್ದ. ಪುರಾಣ ಓದಿ ಧರ್ಮಸಂಸ್ಕಾರ ನಡೆಸುತ್ತಿದ್ದ. ಅಂತು ಅವನ ಪ್ರತಿಷ್ಠೆಗೆ ಸ್ವಲ್ಪವೂ ಕುಂದು ಬಂದಿರಲಿಲ್ಲ. ನಿತ್ಯ, ಸ್ನಾನ ಪೂಜೆ ನಡೆಸಿ ತನ್ನ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದ.

ಇತ್ತ, ಈ ಎಲ್ಲ ವಿಪತ್ತೂ ಜುನಿಯಳಿಗೆ ಆಶ್ರಯ ಕೊಟ್ಟುದರಿಂದಲೇ ಬಂದುದೆಂಬುದಾಗಿ ದನಿಯಳಿಗೆ ಗೊತ್ತಿತ್ತು. ಅಕಸ್ಮಾತ್ – ಅಂದಿನ ಆ ಸಂದರ್ಭದಲ್ಲಿ ಹೇಗೆ ದಯ ಹುಟ್ಟಿಹೋಯಿತೆಂದು ಅವಳಿಗೇ ಗೊತ್ತಿಲ್ಲ. ಆ ರಾತ್ರಿಯೇ ಜುನಿಯಳನ್ನು ಹೊರಗೆ ಹಾಕಿ ಬಿಡುತ್ತಿದ್ದರೆ ಈ ಅಪಹಾಸಕ್ಕೆಲ್ಲ ಎಡೆಯೇ ಇರುತ್ತಿದ್ದಿಲ್ಲ. ಆದರೆ ಅಂದು ದಯೆ ತೋರಿಸದಿರುತ್ತಿದ್ದರೆ, ಜುನಿಯಳಿಗೆ ಕೆರೆ ಬಾವಿಯಲ್ಲದೆ ಬೇರೆ ದಾರಿ ಯಾವುದಿತ್ತು ? ಒಂದು ಪ್ರಾಣ ವನ್ನು ಬಲಿ ಕೊಟ್ಟು–ಒಂದಲ್ಲ, ಎರಡು ಪ್ರಾಣಗಳನ್ನೇ ಬಲಿದಾನ ಮಾಡಿ– ಅವಳು ತನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳಲು ಸಿದ್ಧಳಾಗಿರಲಿಲ್ಲ. ಆದೂ ಅಲ್ಲದೆ ಜುನಿಯಳ ಗರ್ಭದಲ್ಲಿದ್ದ ಮಗು ಸಹ, ಯೋಚಿಸಿದರೆ ದನಿಯಳ ಹೃದಯಖಂಡವೇ ತಾನೆ ? ಜನರು ನಕ್ಕಾರೆಂದು ಅವಳು ಹೇಗೆ ಅದರ ಪ್ರಾಣ ತೆಗೆದಾಳು ! ಜುನಿಯಳ ನಮ್ರತೆ ಮತ್ತು ದೀನತೆಗಳು ಸಹ ಅವಳ ಮನಸ್ಸನ್ನು ಕರಗಿಸಿ ಬಿಟ್ಟಿದ್ದುವು. ಅವಳು ಕೆಲಸ ಮುಗಿಸಿ ಕೋಪ ಬೇಸರ ಗಳಿಂದ ಕೂಡಿ ಮನೆಗೆ ಬರುವಾಗ, ಜುನಿಯಳು ಒಂದು ನಿರ್ಮಲ ಲೋಟಿ ಯಲ್ಲಿ ಬಾಯಾರಿಕೆ ತಂದುಕೊಟ್ಟು ಅವಳ ಕಾಲು ಒತ್ತಲು ಮೊದಲಿಸಿದಾಗ ಅವಳ ಕೋಪ ಬೇಸರಗಳೆಲ್ಲ ಕರಗಿ ಹೋಗುತ್ತಿತ್ತು. ಪಾಪ ! ಜುನಿಯಳು ಲಜ್ಜೆ ದುಃಖಗಳಿಂದ ಸ್ವತಃ ಪೀಡಿತಳಾಗಿರುವಾಗ–ಅದರ ಮೇಲೆ ಏಕೆ ಪುನಃ ಬೈದು, ಹೀನೈಸಿ, ಹೊಸ ದುಃಖದ ಹೊರೆಯನ್ನು ಹೊರಿಸಬೇಕು ? – ಎಂದು ದನಿಯೂ ಯೋಚಿಸುತ್ತಿದ್ದಳು.

ಹಾಗಾಗಿ ಪಂಡಿತರ ಮಾತು ಕೇಳಿದೊಡನೆ ಆವಳಲ್ಲಿ ತಾಳ್ಮೆ ಉಳಿಯ ಲಿಲ್ಲ– 'ನಮ್ಮ ಮಟ್ಟಿಗೆ ಕುಲಗೌರವವೆಂಬುದು ಅಷ್ಟು ದೊಡ್ಡದಲ್ಲ– ಸ್ವಾಮೀ. ಅದಕ್ಕಾಗಿ ಒಂದು ಪ್ರಾಣದ ಹತ್ಯಕ್ಕೆ ನಾವು ತಯಾರಿಲ್ಲ. ಮದುವೆ ಯಾಗದಿದ್ದರೂ ನನ್ನ ಮಗ ಅವಳ ಕೈ ಹಿಡಿದಿದ್ದಾನೆ. ಆದ್ದರಿಂದ ಯಾವ ಮುಖದಿಂದ ಅವಳನ್ನು ಹೊರಗೆ ಮಾಡಲಿ ! ನನ್ನ ಮಗನು ಮಾಡಿದಂತಹ ಕೆಲಸವನ್ನೇ ದೊಡ್ಡ ದೊಡ್ಡವರೂ ಮಾಡುತ್ತಾರೆ. ಆದರೆ ಅವರನ್ನು ಯಾರೂ ದೂರುವವರಿಲ್ಲ. ಅವರಿಗೆ ಕಳಂಕವೂ ತಗಲುವುದಿಲ್ಲ. ಬಡವರು ಮಾಡಿದರೆ

ಮಾತ್ರ ಅವರ ಮರ್ಯಾದೆಯೆಲ್ಲ ಕೆಟ್ಟ ಹೋಗುತ್ತದೆ. ದೊಡ್ಡ ಮನುಷ್ಯರಿಗೆ ತಮ್ಮ ಮರ್ಯಾದೆ ಇತರರ ಜೀವಕ್ಕಿಂತಲೂ ದೊಡ್ಡದಾಗಿದೆ. ನಮ್ಮ ಮಟ್ಟಿಗೆ ಆ ಮರ್ಯಾದೆ ಅಷ್ಟು ದೊಡ್ಡದಲ್ಲ' ಎಂದಳು ಅವಳು.

ಆದರೆ ಪಂಡಿತರು ಸುಲಭದಲ್ಲಿ ಸೋಲೂ ಒಪ್ಪಿಕೊಳ್ಳುವವರಲ್ಲ. ಅವರು ಆ ಗ್ರಾಮದ ನಾರದರೇ ಆಗಿದ್ದರು. ಇಲ್ಲಿಯದನ್ನು ಅಲ್ಲಿಗೆ, ಅಲ್ಲಿಯದನ್ನು ಇಲ್ಲಿಗೆ, ತಾಗಿಸಿ ಹಾಕುವುದೇ ಅವರ ಉದ್ಯೋಗ. ಅವರು ಕಳ್ಳತನ ಮಾಡುವವರಲ್ಲ. ಅದರಲ್ಲಿ ಎಷ್ಟಾದರೂ ಅಪಾಯವಿದೆ. ಹಾಗಿದ್ದರೂ, ಕಳ್ಳತನ ಮುಗಿದು ಪಾಲು ಹಂಚಿಕೊಳ್ಳುವಾಗ ಅದರಲ್ಲಿ ಅವರು ಬಂದು ಸೇರಿಕೊಳ್ಳದೆ ಇರುತ್ತಿರಲಿಲ್ಲ. ಯಾರಾದರೂ ಹೆಂಗುಸರು ಆಭರಣ ಮಾಡಿಸ ಹೊರಟರೆ, ಅಲ್ಲಿ ಇವರು – ಅವರ ಸೇವೆಗೆ ಸಿದ್ಧರಾಗುತ್ತಿದ್ದರು. ಮದುವೆ ಮುಂಜಿ ಮಾಡಿಸುವುದೆಂದರೆ ಅವರಿಗೆ ಬಹಳ ಉತ್ಸಾಹ. ಅಲ್ಲಿ ಕೀರ್ತಿ, ದಕ್ಷಿಣೆ, ಎರಡೂ ಅವರಿಗೆ ಸಿದ್ಧ. ರೋಗ ಬಂದಾಗ ಲೇಪ ಕಷಾಯಗಳನ್ನೂ ಮಾಡಿ ಕೊಡುತ್ತಿದ್ದರು; ಮಂತ್ರ ತಂತ್ರಗಳನ್ನೂ ನಡೆಸುತ್ತಿದ್ದರು. ಅಂತು, ಯಾರಿಗೆ ಏನು ಬೇಕೋ ಅದು ಸಿಗುತ್ತಿತ್ತು ಅವರಲ್ಲಿ. ಅವರು ಸಭೆಯಲ್ಲಿ ಬಹಳ ಚತುರರಾಗಿದ್ದು – ಯುವಕರೊಡನೆ ಯುವಕರಂತೆಯೂ, ಬಾಲಕರೊಡನೆ ಬಾಲಕರಂತೆಯೂ ವರ್ತಿಸುತ್ತಿದ್ದರು. ಅವರು ಕಳ್ಳರ ಮಿತ್ರರೂ ಹೌದು, ಸಾಹುಕಾರರ ಸ್ನೇಹಿತರೂ ಹೌದು. ಊರಲ್ಲಿ ಯಾರಿಗೂ ಅವರ ಮೇಲೆ ಪೂರ್ಣ ವಿಶ್ವಾಸವಿಲ್ಲದಿದ್ದರೂ ಅವರ ಮಾತಿನಲ್ಲಿ ಒಳ್ಳೆಯ ಆಕರ್ಷಣೆ ಇತ್ತು. ಅದರಿಂದಾಗಿ ಜನರು ಎಷ್ಟು ಸಲ ಪೆಟ್ಟು ತಿಂದರೂ ಅವರಿಗೇ ಶರಣು ಬರುತ್ತಿದ್ದರು.

ಪಂಡಿತರು ಯೋಚಿಸಿ ತಲೆ ಆಡಿಸಿ – 'ನೀನು ಹೇಳಿದ ಮಾತೆಲ್ಲ ಸಹಜ; ಆದರೂ ಲೋಕರೂಢಿಯನ್ನು ಕಾಪಾಡುವುದು ಕೂಡ ನಮ್ಮ ಕರ್ತವ್ಯವಲ್ಲವೇ?' – ಎಂದು ಹೇಳುತ್ತ ಮೆಲ್ಲಗೆ ಸಾಗಿದರು. ದನಿಯುಳೂ ಅಲ್ಲಿಂದ ಹೊರಟು ಬಿಟ್ಟಳು.

ಇದೇ ರೀತಿ ಪಟೇಶ್ವರೀಲಾಲರೂ ಹೋರಿರಾಮನನ್ನು ಕೆಣಕಿದರು. ಲಾಲರು ಆ ಊರಿನ ಪ್ರಸಿದ್ಧ ಪುಣ್ಯ ಪುರುಷರು; ಪ್ರತಿ ಹುಣ್ಣಿಮೆಗೂ ಸತ್ಯನಾರಾಯಣನ ಕತೆ ಮಾಡಿಸುತ್ತಿದ್ದರು. ಆದರೆ ಊರಿನ ಶಾನುಭಾಗರಾದ್ದರಿಂದ ತಮ್ಮ ಗದ್ದೆಯನ್ನು ಬಿಟ್ಟಿಯಾಗಿ ಇತರರಿಂದ ಹೊಡಿಸುತ್ತಿದ್ದರು.

ಗದ್ದೆಯ ನೀರಿನ ಕೆಲಸವನ್ನೂ ಧರ್ಮಾರ್ಥ ಮಾಡಿಸುತ್ತಿದ್ದರು. ರೈತರೊಳಗೆ ಪರಸ್ಪರ ಜಗಳ ತಂದು ಹಾಕಿ ನಾಲ್ಕು, ಹತ್ತು, ಒಳಗೆ ಕೂಡ ಹಾಕುತ್ತಿದ್ದರು. ಅವರೆಂದರೆ ಇಡೀ ಊರೇ ನಡುಗುತ್ತಿತ್ತು. ಬಡವರಿಗೆ ಐದು–ಹತ್ತು ಸಾಲಕೊಟ್ಟು, ಸಾವಿರಾರು ರೂಪಾಯಿಗಳ ಭಂಡವಾಳ ಸಹ ಮಾಡಿಕೊಂಡಿದ್ದರು. ಒಕ್ಕಲಿಗರಿಂದ ದವಸ ಧಾನ್ಯ, ಹಣ್ಣು ಹಂಪಲುಗಳನ್ನು ತೆಗೆದುಕೊಂಡು ಪೋಲಿಸ್ ಖಾತೆಯವರಿಗೂ, ಕಚೇರಿಯವರಿಗೂ ಕಾಣಿಕೆ ಕೊಡಿಸುತ್ತಿದ್ದರು. ಇದರಿಂದ ಆ ವಠಾರದಲ್ಲಿ ಇವರ ಪ್ರಭಾವ ಬಹಳವಾಗಿತ್ತು. ಇನ್ನು, ಯಾರಾದರೂ ಇವರ ಹಿಡಿತಕ್ಕೆ ಮೀರಿದ್ದರೆ–ಇನ್ಸ್‌ಪೆಕ್ಟರ್ ಗಂಡ ಸಿಂಹದು ಸಹಾಯಕ್ಕೆ ಸದಾ ಸಿದ್ಧರಿದ್ದರು. ಹಾಗೆಂದು, ಪರೋಪಕಾರ ಸ್ವಭಾವವೂ ಇದ್ದಿಲ್ಲವೆಂದಲ್ಲ. ಊರಲ್ಲಿ ಜ್ವರ ಹಬ್ಬಿದಾಗ ಸರಕಾರದ ಕ್ವಿನೀನನ್ನು ಧರ್ಮಾರ್ಥ ಹಂಚಿ ಕೀರ್ತಿ ಗಳಿಸುತ್ತಿದ್ದರು. ಜ್ವರ ಗುಣವಾಗುವಾಗ ರೋಗಿಗಳನ್ನು ನೋಡಹೋಗುತ್ತಿದ್ದರು. ಚಿಕ್ಕ ಪುಟ್ಟ ಜಗಳಗಳನ್ನು ಊರೊಳಗೇ ತೀರ್ಮಾನಿಸುತ್ತಿದ್ದರು. ಮದುವೆ ಮುಂಜಿಗಳಲ್ಲಿ ಪಾಲಕಿ ಆಭರಣಗಳನ್ನು ಕೊಟ್ಟು, ಜನರನ್ನುದ್ಧಾರ ಮಾಡುತ್ತಿದ್ದರು. ಸಂದರ್ಭ ಬಂದಾಗ ಯಾರನ್ನೂ ಬಿಡುತ್ತಲೂ ಇದ್ದಿಲ್ಲ. ಆದರೆ ಯಾರಿಂದಾದರೂ ತಿಂದರೆ ಅವರ ಕೆಲಸವನ್ನೂ ಮಾಡುತ್ತಿದ್ದರು.

ಒಂದು ದಿನ ಹೋರಿರಾಮುನನ್ನು ನೋಡಿ ಲಾಲರು– 'ಇದೆಂತಹ ಅನಿಷ್ಟವನ್ನು ತಲೆಯ ಮೇಲೆ ಹಾಕಿಕೊಂಡೆ ರಾಮು?' ಎಂದು ಕೇಳಿದರು.

'ನೀವು ಕೇಳಿದ್ದೇನು ರಾಯರೇ? ನನಗೆ ಕೇಳಿಸಲಿಲ್ಲವಲ್ಲ?'– ಹೋರಿರಾಮು ಹಿಂದಕ್ಕೆ ತಿರುಗಿ ಕೇಳಿದ.

ಲಾಲರು ಮುಂದೆ ಬಂದು ಹೇಳಿದರು –'ಅದನ್ನೇ ಕೇಳಿದ್ದು – ದನಿಯಳ ಹಾಗೆಯೇ ನಿನ್ನ ಬುದ್ಧಿಯೂ ಏಕೆ ಕೆಟ್ಟುಹೋಯಿತು – ಎಂಬುದಾಗಿ. ಆ ಜುನಿಯಳನ್ನು ಅವಳ ಅಪ್ಪನ ಮನೆಗೆ ಕಳಿಸಬಾರದೇ? ಹತ್ತು ಸಮಸ್ತರು ನಿನ್ನ ವಿಚಾರ ನಗಾಡದೆ ಇರುವರೇ? ಯಾರಿಂದ ಮಾಡಿಸಿಕೊಂಡು ಬಂದಿದ್ದಾಳೋ – ಏನೋ! ನೀನು ಆಕೆಯನ್ನು ಮನೆಯಲ್ಲಿಟ್ಟುಕೊಂಡೆ! ನಿನಗೆ ಇಬ್ಬರು ಹುಡುಗಿಯರು ಬೇರೆ ಮದುವೆಗೆ ಅಣಿಯಾಗಿದ್ದಾರೆ. ಇದರಿಂದ ಹೇಗೆ ಮೇಲೆ ಬೀಳುವೆಯೋ – ದೇವರೇ ಬಲ್ಲ!'

ಹೋರಿರಾಮು ಊರವರ ಈ ತರದ ಸಹಾನುಭೂತಿ, ಶುಭ ಕಾಮನೆಗಳ

ವಿಚಾರ ಕೇಳಿ ಕೇಳಿ ಸೋತು ಹೋಗಿದ್ದ. ಅವನು ಖಿನ್ನನಾಗಿ ಹೇಳಿದ –
‘ಅದೆಲ್ಲ ನನಗೂ ಗೊತ್ತಾಗುತ್ತದೆ ರಾಯರೇ. ಆದರೆ ನೀವೇ ಹೇಳಿ –
ಏನು ಮಾಡಲು ಸಾಧ್ಯವಿದೆ? ನಾನೀಗ ಜುನಿಯಳನ್ನು ಹೊರಗೆ ಮಾಡಿದರೆ
ಬೋಲನು ಮನೆಯೊಳಗೆ ಆಕೆಯನ್ನು ತೆಗೆದುಕೊಂಡಾನೇ? ಅವನನ್ನು
ನೀವು ಒಪ್ಪಿಸಿರಿ. ನಾನು ಇಂದೇ ಅವಳನ್ನು ಅಲ್ಲಿ ಬಿಟ್ಟು ಬಂದೇನು. ನೀವು
ಅಷ್ಟೊಂದು ಮಾಡಿಸಿದರೆ ನಾನು ಜನ್ಮವಿಡೀ ನಿಮಗೆ ಋಣಿಯಾಗಿರುತ್ತೇನೆ.
ಅಲ್ಲಿ ಅವನ ಮಕ್ಕಳು ಅವಳನ್ನು ಕೊಂದು ಹಾಕಲಿಕ್ಕೇ ತಯಾರಾಗಿ ನಿಂತಿ
ದ್ದಾರೆ. ಹಾಗಿರುತ್ತ ನಾನು ಅವಳನ್ನು ಹೇಗೆ ಹೊರದೂಡಲಿ? ಆಕೆ ಪ್ರಯೋ
ಜನಕ್ಕೆ ಬಾರದ ಯುವಕನ ಕೈಹಿಡಿದಾಗಿದೆ. ಆತ ಈ ಕಷ್ಟಕಾಲದಲ್ಲಿ ಕೈ
ಬಿಟ್ಟು ಬಿಟ್ಟ. ಈಗಿನ ಸ್ಥಿತಿಯಲ್ಲಿ ಅವಳನ್ನು ಹೊರ ಮಾಡಿದರೆ ಆಕೆ ಕೂಲಿ
ಸಹ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವಂತಿಲ್ಲ. ಎಲ್ಲಿಯಾದರೂ ಬಾವಿಗೆ
ಬಿದ್ದು ಪ್ರಾಣ ಕಳೆದುಕೊಂಡರೆ ಆ ಪಾಪ ಯಾರ ಮೇಲೆ? ಇನ್ನು,
ಹುಡುಗಿಯರ ಮದುವೆಯ ವಿಚಾರ – ನೋಡುವಾ; ದೇವರಿದ್ದಾನೆ! ಸಮಯ
ಬರುವಾಗ ಒಂದಲ್ಲ ಒಂದು ದಾರಿ ತೋರಿಯೇ ಬಂದೀತು. ನಮ್ಮ ವಂಶದಲ್ಲಿ
ಈ ವರೆಗೆ ಯಾವ ಹುಡುಗಿಯೂ ಮದುವೆಯಾಗದೆ ಉಳಿಯಲಿಲ್ಲ. ವಂಶದ
ಹೆಸರಲ್ಲಿ ಕೊಲೆಪಾತಕ ಮಾಡುವುದೇ?’

ಹೋರಿರಾಮ ನಮ್ರ ಸ್ವಭಾವದ ಮನುಷ್ಯ. ತಲೆ ತಗ್ಗಿಸಿಕೊಂಡೇ
ನಡೆಯುವಂಥವನು. ಹೀರನನ್ನು ಬಿಟ್ಟರೆ ಮತ್ತಾರೂ ಅವನ ವಿಚಾರ ಅಹಿತ
ಎಣಿಸುತ್ತಿರಲಿಲ್ಲ. ಆದರೆ ಸಮಾಜವು ಇಷ್ಟು ದೊಡ್ಡ ಅನರ್ಥವನ್ನು ಹೇಗೆ
ಸಹಿಸಿಕೊಂಡು ಸುಮ್ಮನಿದ್ದೀತು? ಹೇಳಿ ತಿಳಿಸಿದರೂ ಸಹ, ಗಂಡ ಹೆಂಡತಿ –
ಇಬ್ಬರಿಗೂ ಅರ್ಥವಾಗುವುದಿಲ್ಲ. ಮಾತ್ರವಲ್ಲದೆ – ಯಾರೇನು ಮಾಡುತ್ತಾರೆ?
ನೋಡಿ ಬಿಡುವಾ – ಎಂಬುದಾಗಿ ಸಮಾಜವನ್ನೇ ಅಲಕ್ಷ್ಯಮಾಡುತ್ತಿದ್ದಾರೆ.
ಹಾಗಿರುವಾಗ ಸಮಾಜವು ಕೂಡ ತನ್ನ ಸಾಮರ್ಥ್ಯವನ್ನು ಅವರ ಮೇಲೆ
ತೋರಿಸಬೇಡವೆ?

ಅದೇ ದಿನ ರಾತ್ರಿ ಈ ಸಮಸ್ಯೆಯ ಇತ್ಯರ್ಥ ನಡೆಸಲಿಕ್ಕಾಗಿ ಊರ
ಮುಂದಾಳುಗಳ ಸಭೆ ಸೇರಿತು.

ದಾತಾದೀನ್ ಪಂಡಿತರೆಂದರು – ‘ಯಾರನ್ನೂ ಯಾವ ಸಂದರ್ಭದಲ್ಲೂ
ನಾನು ನಿಂದಿಸುವವನಲ್ಲ. ಊರಲ್ಲಿ ಏನೆಲ್ಲ ಕೆಟ್ಟ ಕೆಲಸ ನಡೆಯುತ್ತಿಲ್ಲ?

ನಮಗೇನು ಅದರಿಂದ ? ಆದರೆ ಆ ದನಿಯಳದು ಎಂತಹ ಗರ್ವದ ಮಾತು
ತಮ್ಮಂದಿರಿಗೆಲ್ಲ ಮೋಸ ಮಾಡಿ ನಾಲ್ಕು ಕಾಸು ಕೈಯಲ್ಲಾಗಿದೆ. ಆದ
ಪ್ರತಾಪ ಇದು ! ಅದೀಗ ಕೆಟ್ಟ ದಾರಿಯಲ್ಲಿ ಖರ್ಚಾಗದೆ ಹೇಗಿದ್ದೀತು !
ಜಾತಿಯೇ ನೀಚ ಜಾತಿ. ಹಾಗಿರುತ್ತ ಶಾಸ್ತ್ರದಲ್ಲಿ ಹೇಳಿದಂತೆ ನೀಚಬುದ್ಧಿ
ಬಾರದೆ ಹೇಗಿದ್ದೀತು ? '

ಪಟೇಶ್ವರೀಲಾಲರು ಒಂದು ಚಿಟಿಕೆ ನಸ್ಯ ಏರಿಸಿ ಹೇಳಿದರು – ' ಇದೆ
ಇವರ ಕೆಟ್ಟ ಬುದ್ಧಿ. ನಾಲ್ಕು ಕಾಸು ಕೈಯಲ್ಲಾದೊಡನೆ ತಲೆ ತಿರುಗಿ
ಹೋಗುತ್ತದೆ. ಇಂದು, ಹೋರಿರಾಮ ಈ ರೀತಿ ಬೇಡದ ಕೆಲಸ ಮಾಡಿದ
ನಾಳೆ ಇನ್ನೊಬ್ಬ. ಈಗ ಸುಮ್ಮನಿದ್ದರೆ ಇದರ ಪರಿಣಾಮ ಸಮಾಜದ ಮೇಲೆ
ಹೇಗಾದೀತೆಂದು ಹೇಳಬರುವುದಿಲ್ಲ. ಜುನಿಯಳನ್ನು ನೋಡಿ ಸಮಾಜದ ಇತರ
ವಿಧವೆಯರ ಮನಸ್ಸೂ ಕೆಡಲಿಕ್ಕಿಲ್ಲವೇ ? ಇಂದು ಈ ಕತೆ ಹೋರಿರಾಮನ
ಮನೆಯಲ್ಲಿ ನಡೆಯಿತು. ನಾಳೆ ನಿಮ್ಮ ನಮ್ಮ ಮನೆಯಲ್ಲೂ ನಡೆದೀತು.
ಸಮಾಜವು ನಡೆಯುವುದು ಭಯದ ಬಲದಿಂದಲೇ. ಈ ಭಯದ ಅಂಕುಶ
ಹೋಗಿ ಬಿಟ್ಟರೆ ಪ್ರಪಂಚದಲ್ಲಿ ಏನೆಲ್ಲ ಅನರ್ಥ ನಡೆದೀತೆಂದು ಯಾರು ಹೇಳ
ಬಲ್ಲರು ? '

ಜಿಂಗುರೀಸಿಂಹರಿಗೆ ಇಬ್ಬರು ಹೆಂಡಿರು. ಮೊದಲ ಹೆಂಡತಿ ಐದು ಗಂಡು-
ಹೆಣ್ಣು ಮಕ್ಕಳನ್ನು ಬಿಟ್ಟು ದಿವಂಗತಳಾಗಿದ್ದಳು. ಆಗ ಇವರ ಪ್ರಾಯ
ಹೆಚ್ಚು ಕಡಿಮೆ ೪೫ ಆಗಿತ್ತು. ಬಳಿಕ ಎರಡನೆಯ ಮದುವೆಯಾದರು. ಆದರೆ
ಅವಳಲ್ಲಿ ಸಂತಾನೋತ್ಪತ್ತಿಯಾಗದ್ದರಿಂದ ಮೂರನೆಯ ಮದುವೆಯಾದರು.
ಈಗ ಅವರ ಪ್ರಾಯ ೫೦ ವರ್ಷ. ಯೌವನದ ಹೆಂಡಿರಿಬ್ಬರೂ ಅವರ ಮನೆ
ಯಲ್ಲಿದ್ದಾರೆ. ಆ ಯುವತಿಯರಿಬ್ಬರ ವಿಚಾರದಲ್ಲಿಯೂ ತರ ತರದ ಹಾಳು
ಕತೆಗಳು ಹಬ್ಬಿಹೋಗಿವೆ. ಆದರೆ ಯಾರಿಗೂ ನಾಲ್ಕು ಜನರ ಇದಿರು
ಹೇಳುವ ಧೈರ್ಯವಿದ್ದಿಲ್ಲ. ಮಾತ್ರವಲ್ಲದೆ ಇದೆಲ್ಲ ಗಂಡನಿರುವಾಗಲೇ ನಡೆ
ಯುವ ಕತೆಯಾದ್ದರಿಂದ ಹೇಳುವ ಸಂದರ್ಭವೂ ಇದ್ದಿಲ್ಲ. ಜಿಂಗುರೀಸಿಂಹರು
ಮಾತ್ರ – ತಾನು ಬಹಳ ಗಟ್ಟಿಗ – ತನ್ನ ಹೆಂಡಂದಿರ ಸೀರೆಯ ನೆರಿಗೆ ಸಹ
ಯಾರಿಗೂ ಕಾಣ ಸಿಗದು – ಎಂಬ ಜಂಭದಲ್ಲಿದ್ದರು. ಆದರೆ ಒಳಗಿನ ಕತೆ
ಅವರಿಗೇನು ಗೊತ್ತು ?

ಅವರೆಂದರು – ' ಅಂತಹ ಹೆಂಗುಸಿನ ತಲೆಯನ್ನೇ ಕಡಿದುಹಾಕಬೇಕು.

ೋರಿರಾಮ ಅಂತಹ ಕುಲಟೆಯನ್ನು ಮನೆಯಲ್ಲಿಟ್ಟುಕೊಂಡು ಸಮಾಜದಲ್ಲಿ ಷಬೀಜವನ್ನೇ ಬಿತ್ತಿದ್ದಾನೆ. ಅಂತಹ ಮನುಷ್ಯನನ್ನಿಟ್ಟುಕೊಂಡರೆ ಇಡೀ ಊರೇ ಭ್ರಷ್ಟವಾದೀತು. ಧನಿಗಳಾದ ರಾಯ್ ಸಾಹೇಬರಿಗೂ ಈ ವಿಷಯ ಳಿಸಿ ಬಿಡಬೇಕು. ಸಮಾಜದಲ್ಲಿ ಇಂತಹ ಅನ್ಯಾಯಗಳನ್ನೆಲ್ಲ ನಡೆಯ ಟ್ಟರೆ – ಯಾರ ಮರ್ಯಾದೆಯೂ ಸುರಕ್ಷಿತವಾಗಿರಲಾರದು – ಎಂದು ರಿಯಾಗಿ ಹೇಳಿಯೇ ಬಿಡಬೇಕು.'

ಪಂಡಿತ ನೋಖೇರಾಮರು ರಾಯ್‌ಸಾಹೇಬರ, ಆ ಊರಿನ ಏಜಂಟರು. ಲೀನ ಬ್ರಾಹ್ಮಣ. ಅವರ ಅಜ್ಜ ಯಾರೋ ಒಬ್ಬ ರಾಜನ ದಿವಾನರಾಗಿದ್ದರು. ಆದರೆ ಕೊನೆಗೆ, ಸಂಪಾದಿಸಿದ್ದನ್ನೆಲ್ಲ ದೇವರ ಚರಣಗಳಲ್ಲರ್ಪಿಸಿ ಸಾಧುಗಳಾಗಿ ಹೋಗಿದ್ದರು. ಇವರ ತಂದೆ ಸಹ ರಾಮನಾಮ ಸ್ಮರಣೆಯಲ್ಲೇ ತನ್ನ ಜೀವನ ಸಾಗಿಸಿದ್ದರು. ನೋಖೇರಾಮರೂ ಆ ದೈವಭಕ್ತಿಯನ್ನು ಕಾಪಾಡಿ ಕೊಂಡು ಬಂದಿದ್ದರು. ಬೆಳಗ್ಗೆ ಬಹು ಬೇಗನೆ ಎದ್ದು ಪೂಜೆ ಪಾಠಗಳಲ್ಲಿ ತೊಡಗಿರುತ್ತಿದ್ದರು. ಆ ಬಳಿಕ ಹತ್ತು ಘಂಟೆಯ ತನಕ ರಾಮನಾಮವನ್ನು ಬರೆಯುತ್ತಿದ್ದರು. ಆದರೆ ದೇವರ ಮುಂದಿನಿಂದ ಎದ್ದೊಡನೆ ಅವರ ಕಾಯ ವಾಕ್ ಮನಸ್ಸುಗಳೆಲ್ಲ ಈ ಪ್ರಾಪಂಚಿಕ ವಿಷಮ ಪರಿಸ್ಥಿತಿಯಲ್ಲಿ ಮಗ್ನವಾಗಿ ಹೋಗುತ್ತಿತ್ತು. ಪ್ರಕೃತ ಅವರು, ಜಿಂಗುರೀ ಸಿಂಹರ ಕೊನೆಯ ಮಾತಿ ನಿಂದಾಗಿ ತನ್ನ ಅಧಿಕಾರದ ವಿಚಾರದಲ್ಲಿ ಅಪಮಾನವಾಯಿತೆಂದು ತಿಳಿದು ಕೊಂಡರು. ಹಾಗಾಗಿ ಕಣ್ಣರಳಿಸಿ ದೊಡ್ಡ ಸ್ವರದಲ್ಲಿ ಹೇಳಿದರು – 'ಈ ವಿಚಾರದಲ್ಲಿ ರಾಯ್ ಸಾಹೇಬರ ಹತ್ತಿರ ಹೇಳಲಿಕ್ಕೇನಿದೆ? ನನಗಿಷ್ಟ ಬಂದಂತೆ ಮಾಡುವ ಅಧಿಕಾರ ನನಗಿದೆ. ಅವನ ಮೇಲೆ ನೂರು ರೂಪಾಯಿ ಗಳ ದಂಡ ಹೊರಿಸಿಬಿಡಬೇಕು. ಆಗ ಬುದ್ಧಿ ಬರುತ್ತದೆ. ಅಂಥವರನ್ನು ಊರಿಂದಲೇ ಓಡಿಸಿ ಬಿಟ್ಟರೂ ಪಾಪ ಬರಲಾರದು.'

ಪಟೇಶ್ವರೀಲಾಲರು ಕೇಳಿದರು – 'ಆತ ಗೇಣಿಯ ಹಣವನ್ನೆಲ್ಲ ಪಾವತಿ ಮಾಡಿದ್ದಾನೆಯೇ ?'

ಜಿಂಗುರೀಸಿಂಹರೆಂದರು – 'ಹೌದು; ಗೇಣಿ ಬಾಕಿಗಾಗಿಯೇ ನನ್ನಿಂದ ಮೂವತ್ತು ರೂಪಾಯಿಗಳ ಸಾಲ ತೆಗೆದುಕೊಂಡಿದ್ದ.'

ಆಗ ನೋಖೇರಾಮರು ಗರ್ವದಿಂದ ಹೇಳಿದರು – 'ಆದರೇನು ? ರಶೀದಿ ಚೀಟಿ-ಒಂದೂ ಕೊಟ್ಟಿಲ್ಲ. ಗೇಣಿ ಕೊಟ್ಟಿದ್ದಾನೆಂಬುದಕ್ಕೆ ಆಧಾರ ಎಲ್ಲಿದೆ?'

ಅಂತು ಹೋರಿರಾಮನ ತಲೆಯ ಮೇಲೆ ನೂರು ರೂಪಾಯಿಗಳ ದಂ
ಹೊರಿಸಬೇಕೆಂದು ಸರ್ವಾನುಮತದಿಂದ ನಿರ್ಣಯವಾಯಿತು. ಈ ನಿರ್ಣಯ
ಮೇಲ್ಮಟ್ಟದ ಪಂಚಾಯತಿಯುಲ್ಲಾದ ಮೇಲೆ, ಊರಿನ ಹತ್ತು ಸಮಸ್ತ
ಮಹಾಸಭೆಯನ್ನು ಕರೆದು ಅವರ ಮಂಜೂರಿಯನ್ನು ಪಡೆಯುವುದಗತ್ಯ
ವಿತ್ತು. ಆ ಸಭೆ ನಾಲ್ಕೈದು ದಿನ ದಾಟಿದ ಮೇಲೆ ನಡೆಯುವುದರಲ್ಲಿತ್ತು
ಆದರೆ ಆ ರಾತ್ರಿಯೇ ಜುನಿಯಳು ಗಂಡು ಮಗುವನ್ನು ಹೆತ್ತಳು. ಆದ್ದರಿಂ
ಮರು ದಿನವೇ ಮಹಾಸಭೆ ಸೇರಿತು.

ಹೋರಿರಾಮ ಮತ್ತು ದನಿಯಾ ತಮ್ಮ ಅದೃಷ್ಟದ ತೀರ್ಮಾನವನ್ನು
ಕೇಳುವುದಕ್ಕಾಗಿ ಕರೆಸಲ್ಪಟ್ಟರು. ಗ್ರಾಮಚಾವಡಿಯಲ್ಲಿ ಎಳ್ಳು ಹಾಕಲಿಕೂ
ಎಡೆಯಿಲ್ಲದಷ್ಟು ಜನರ ಗುಂಪು ಸೇರಿತು. ಮಾತು ಕತೆಗಳೆಲ್ಲ ಮುಗಿದ
ಮೇಲೆ, ಹೋರಿರಾಮ ನೂರು ರೂಪಾಯಿಗಳನ್ನೂ ಮೂವತ್ತು ಮಣ ಗೋಧಿ
ಯನ್ನೂ ದಂಡವಾಗಿ ಕೊಡಬೇಕೆಂದು ತೀರ್ಮಾನವಾಯಿತು.

ದನಿಯಳು ತುಂಬಿದ ಸಭೆಯಲ್ಲಿ ಕಟ್ಟಿ ಬಂದ ಕಂಠದಿಂದ ಹೇಳಿದಳು —
'ಹತ್ತು ಸಮಸ್ತರೇ! ಬಡವರನ್ನು ಕಾಡಿಸಿದರೆ ನಿಮಗೆಷ್ಟಕ್ಕೂ ಸುಖ ಸಿಗ
ಲಾರದು. ನಾವು ಹಾಳಾಗಿ ಹೋದೆವು. ನಾವಿನ್ನು ಈ ಊರಲ್ಲಿ ಇರಲಿ, ಇಲ್ಲ
ದಿರಲಿ. ನಮ್ಮ ಶಾಪ ಮಾತ್ರ ನಿಮಗೆ ತಟ್ಟದೆ ಇರಲಾರದು. ಸ್ವಂತ ಸೊಸೆ
ಯನ್ನು ನಾನು ಮನೆಯಲ್ಲಿಟ್ಟುಕೊಂಡ ಅಪರಾಧಕ್ಕೆ ಇಷ್ಟು ದೊಡ್ಡ ದಂಡ
ವನ್ನು ನನ್ನ ಮೇಲೆ ಹೊರಿಸುವಿರಲ್ಲ! ನಾನೇಕೆ ಅವಳನ್ನು ಹೊರದೂಡಿ
ಬೀದಿಯ ಭಿಕ್ಷುಕಳನ್ನಾಗಿ ಮಾಡಲಿಲ್ಲವೆಂಬುದೇ ನನ್ನ ತಪ್ಪು ತಾನೆ! ಇದೇ
ಅಲ್ಲವೆ ನಿಮ್ಮ ನ್ಯಾಯ!'

ಹೋರಿರಾಮ ದನಿಯಳಿಗೆ ಗದರಿಸಿದ — 'ನೀನೇಕೆ ಮಾತಾಡುವೆ
ದನಿಯಾ? ಪಂಚರು ಸೇರಿದಲ್ಲಿ ಪರಮೇಶ್ವರನಿದ್ದಾನೆ. ಅವರ ತೀರ್ಮಾನ
ವನ್ನು ಶಿರಸಾವಹಿಸಬೇಕು. ನಾವು ಊರು ಬಿಟ್ಟು ಹೋಗಲೇಬೇಕೆಂದು
ದೇವರು ಬಯಸಿದ್ದರೆ ನಾವೇನು ಮಾಡಿಯೇವು! . . . ಹತ್ತು ಸಮಸ್ತರೇ!
ನಮ್ಮ ಅಧೀನವಿದ್ದುದೆಲ್ಲ ಧಾನ್ಯದ ಕಣಜದಲ್ಲಿದೆ. ಅದು ವಿನಾ ಬೇರೆ ಒಂದು
ಕಾಳು ಸಹ ನನ್ನಲ್ಲಿಲ್ಲ. ಎಷ್ಟು ಬೇಕೋ — ಅಷ್ಟು ತೆಗೆದುಕೊಳ್ಳಿ. ಎಲ್ಲ
ಬೇಕಿದ್ದರೆ ಎಲ್ಲವನ್ನೂ ಸಾಗಿಸಿ. ನಮಗೆ ದೇವರಿದ್ದಾನೆ. ಆ ಧಾನ್ಯ ಬಂದ
ಮೇಲೂ ಕಡಿಮೆಯಾದರೆ ಹಟ್ಟಿಯಲ್ಲಿ ಎರಡೆತ್ತುಗಳಿವೆ. ಅವನ್ನೂ ಸಾಗಿಸಿ.'

ದನಿಯಳು ಹಲ್ಲು ಕಚ್ಚಿಕೊಂಡು ಹೇಳಿದಳು—'ಒಂದು ಕಾಸು ಕೂಡ ದಂಡವಾಗಿ ಕೊಡಲಿಕ್ಕೆ ನಾನು ಬಿಡಲಾರೆ. ಒಂದು ಕಾಳು ಧಾನ್ಯವೂ ನಮ್ಮಿಂದ ಸಿಗಲಾರದು. ಧೈರ್ಯವಿದ್ದರೆ ಬಂದು ತೆಗೆದುಕೊಳ್ಳಲಿ—ನೋಡುವಾ. ನೀವೆಲ್ಲ ಸೇರಿ ದಂಡದ ಹೆಸರಲ್ಲಿ ಇದ್ದುದನ್ನೆಲ್ಲ ಸೆಳೆದುಕೊಂಡು ನಮ್ಮನ್ನು ನಿರ್ಗತಿಕರನ್ನಾಗಿಸಲಿಕ್ಕೆ ಯೋಚಿಸಿರುವಿರೆ? ಆದರೆ ಈ ದನಿಯಳು ಜೀವದಲ್ಲಿರುವ ತನಕ ಇದು ಖಂಡಿತವಾಗಿ ನಡೆಯಲಾರದು. ನಿಮ್ಮ ಯೋಚನೆಗಳೆಲ್ಲ ಹೊಟ್ಟೆಯೊಳಗೇ ಇರಬೇಕಾದೀತು. ನಮಗೆ ನಿಮ್ಮ ಜಾತಿಯೂ ಬೇಡ, ನೀತಿಯೂ ಬೇಡ. ಬರೇ ನಿಮ್ಮ ಕೂಡುಕಟ್ಟಿನಲ್ಲಿದ್ದ ಮಾತ್ರಕ್ಕೆ ಹೊಟ್ಟೆ ತುಂಬುವುದಿಲ್ಲ. ಈಗಲೂ ನಾವು ಬೆವರು ಸುರಿಸಿಯೇ ಹೊಟ್ಟೆ ತುಂಬಿಸುತ್ತಿದ್ದೇವೆ. ಆ ಮೇಲೆಯೂ ಅಷ್ಟೆ.'

ಆಗ ಹೋರಿರಾಮ ಮುಂದೆ ಬಂದು ಅವಳಿಗೆ ಕೈಮುಗಿದು ಹೇಳತೊಡಗಿದ—'ದನಿಯಾ! ನಿನ್ನ ಕಾಲಿಗೆ ಬೀಳುತ್ತೇನೆ. ಸ್ವಲ್ಪ ಬಾಯಿ ಮುಚ್ಚಿಕೊ. ನಾವೆಲ್ಲ ಜಾತಿ ನೀತಿಯ ದಾಸರು. ಆದರಿಂದ ಹೊರಗೆ ಹೋದರೆ ನಾವು ಉಳಿಯಲಾರೆವು. ಜಾತಿಯ ಮುಂದಾಳುಗಳು ಯಾವ ದಂಡವನ್ನು ವಿಧಿಸುತ್ತಾರೋ—ಅದನ್ನು ತಲೆತಗ್ಗಿಸಿಕೊಂಡು ಸ್ವೀಕರಿಸಲೇ ಬೇಕು. ಜಾತಿಕೆಟ್ಟು ಜೀವಿಸುವುದಕ್ಕಿಂತ ಸಾಯುವುದು ಲೇಸು. ಜೀವದಲ್ಲಿದ್ದರೂ, ಸತ್ತರೂ, ಜಾತಿ ಜೇಕೇ ಬೇಕು. ಹತ್ತು ಸಮಸ್ತರೇ! ಪ್ರಾಯ ಬಂದ ನನ್ನ ಮಗನ ಆಣೆ ಹಾಕಿ ಹೇಳುತ್ತಿದ್ದೇನೆ—ನನ್ನ ಕಣಜದಲ್ಲಿರುವ ಧಾನ್ಯ ಬಿಟ್ಟು ಬೇರೇನೂ ನನ್ನಲ್ಲಿಲ್ಲ. ನಾನು ಹತ್ತು ಸಮಸ್ತರಿಗೆ ಮೋಸ ಮಾಡುವವನಲ್ಲ. ನಿಮಗೆ ನನ್ನ ಮಕ್ಕಳು ಮರಿಗಳ ಮೇಲೆ ಏನಾದರೂ ದಯೆ ತೋರಿದರೆ—ಏನಾದರೂ ಸ್ವಲ್ಪ ರಿಯಾಯಿತಿ ತೋರಿಸಿ. ಅಂತು ನಿಮ್ಮ ಆಜ್ಞೆಯನ್ನು ನಾನು ಶಿರಸಾವಹಿಸುತ್ತೇನೆ.'

ದನಿಯಳು ಬೊಬ್ಬೆ ಹೊಡೆಯುತ್ತಾ ಅಲ್ಲಿಂದ ಎದ್ದು ಹೋದಳು. ಹೋರಿರಾಮ ಅರ್ಧ ರಾತ್ರಿಯ ತನಕವೂ ತನ್ನ ಬತ್ತವನ್ನು ಗೋರಿ ಹೊತ್ತುಕೊಂಡು ಹೋಗಿ, ಜಿಂಗುರೀ ಸಿಂಹರ ಮನೆಯಂಗಳದಲ್ಲಿ ಹಾಕುತ್ತಲೇ ಇದ್ದ. ಕಣಜದಲ್ಲಿ ೨೦ ಮಣ ಗೋದಿ ಇತ್ತು. ಐದು ಮಣ ಜೋಳ, ಅಷ್ಟೇ ಕಡಲೆಕಾಯಿ ಮತ್ತು ಸ್ವಲ್ಪ ಎಳ್ಳು—ಎಲ್ಲ ಇತ್ತು. ಅಂತು ಏನೆಲ್ಲ ಆಗಿತ್ತೋ—ಅದು ದನಿಯಳ ಪ್ರಯತ್ನದಿಂದಲೇ ಆದುದು. ಜುನಿಯಳು ಮನೆಯೊಳಗಿನ ಕೆಲಸ

ವನ್ನೆಲ್ಲ ಮಾಡುತ್ತಿದ್ದಳು. ದನಿಯಳು ತನ್ನ ಇಬ್ಬರೂ ಹುಡುಗಿಯರೊಡನೆ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಳು. ಗೋದಿ ಮತ್ತು ಎಳ್ಳಿನಿಂದ ಗೇಣಿಯು ಬಾಬ್ತು ಕೊಟ್ಟರೆ– ಮತ್ತೆ ಉಳಿದುದು ಊಟಕ್ಕೂ, ಸಾಲದ ಬಡ್ಡಿಗೂ, ಆದೀ ತೆಂದು ಅವರೆಲ್ಲ ಯೋಚಿಸಿದ್ದರು. ಈಗ ಆ ಯೋಚನೆಗಳೆಲ್ಲ ಮಣ್ಣು ಪಾಲಾ ದುವು. ಧಾನ್ಯವೆಲ್ಲ ಹೋಯಿತು. ಇದರ ಮೇಲೆ ನೂರು ರೂಪಾಯಿಯ ಹೊರೆ ಬೇರೆ! ಇನ್ನೀಗ ಹೊಟ್ಟೆಗೇನು ಗತಿ? ಅತ್ತ ಗೋಬರನ ಪಾಡು ಏನಾಯಿತೆಂದು ದೇವರೇ ಬಲ್ಲ. ಅವನ ಸುದ್ದಿಯೇ ಇಲ್ಲ. ಅಷ್ಟು ಧೈರ್ಯವಿಲ್ಲ ವಾದರೆ ಯಾಕೆ ಬೇಕಿತ್ತು ಈ ಕೆಲಸ? ಈಗ ಹೋದ ಮರ್ಯಾದೆ ಇನ್ನು ಬರಲಿದೆಯೇ?

ಬಂದ ಅಪಮಾನವನ್ನೆಲ್ಲ ತನ್ನ ತಲೆಯ ಮೇಲೆ ಹೇರಿಸಿಕೊಂಡು ಹೋರಿ ರಾಮ ಇದ್ದ ಧಾನ್ಯವನ್ನೆಲ್ಲ ಹೊತ್ತುಕೊಂಡು ಹೋಗಿ ಹಾಕುತ್ತಿದ್ದ. ಅವನ ಕೆಲಸ ಸ್ವತಃ ತನ್ನ ಕೈಯಿಂದಲೇ ತನ್ನ ಸಮಾಧಿಯನ್ನು ಕಟ್ಟಿಕೊಳ್ಳುವವ ನಂತಾಗಿತ್ತು. ಇನ್ನು– ಜಮೀನ್ದಾರರಿಗೆ, ಸಾಹುಕಾರರಿಗೆ, ಸರಕಾರಕ್ಕೆ– ಏನು ಕೊಡುವುದೋ ದೇವರು ಬಲ್ಲ! ನಾಳೆ ಬೆಳಗ್ಗೆ ಹೆಂಡತಿ ಮಕ್ಕಳು ಉಣ್ಣುವುದೇನನ್ನು?– ಅದೂ ಗೊತ್ತಿಲ್ಲ. ಆದರೆ ಈ ಜಾತಿಕಟ್ಟಿನ ಭಯವು ಮಾತ್ರ ಪಿಶಾಚಿಯ ಹಾಗೆ ಅವನ ತಲೆಯನ್ನು ಕೆಡಿಸುತ್ತಿತ್ತು. ಜಾತಿಯಿಂದ ಹೊರಗಿದ್ದು ಪ್ರತ್ಯೇಕ ಜೀವನ ನಡೆಸುವ ಯೋಚನೆಯನ್ನು ಸಹ ಅವನು ಮಾಡಲಾರ. ಮದುವೆ, ಮುಂಜಿ, ಜನನ, ಮರಣ– ಎಲ್ಲವೂ ಜಾತಿ ಮುಖಂಡ ರನ್ನು ಹೊಂದಿಕೊಂಡೇ ಇದೆ. ಜಾತಿಕಟ್ಟು ಅವನ ಜೀವನದಲ್ಲಿ ದೊಡ್ಡ ಮರದಂತೆ ಬೇರು ಬಿಟ್ಟು ನರನಾಡಿಗಳಲ್ಲೂ ತನ್ನ ಪ್ರಭಾವವನ್ನು ಬೀರಿತ್ತು. ಜಾತಿಕಟ್ಟಿನಿಂದ ಹೊರ ಹೊರಟರೆ– ತನ್ನ ಜೀವನವೇ ಚಲ್ಲಾಪಿಲ್ಲಿಯಾದೀ ತೆಂದು ಅವನು ಭಾವಿಸಿದ್ದ.

ಕೊನೆಗೆ ಕಣಜದಲ್ಲಿ ಬರೇ ಒಂದೆರಡು ಮಣದಷ್ಟು ಮಾತ್ರ ಗೋದಿ ಉಳಿ ದಾಗ ದನಿಯಳು ಓಡಿ ಬಂದು ಅವನ ಕೈಹಿಡಿದು–' ಆಗಲಿ, ಇನ್ನಾದರೂ ಬಿಡಿ. ಜಾತಿಕಟ್ಟಿಗಾಗಿ ಇಷ್ಟೆಲ್ಲ ಹೊತ್ತಾಯಿತಲ್ಲ! ಇನ್ನಾದರೂ ಸ್ವಲ್ಪ ಮಕ್ಕಳು ಮರಿಗಳಿಗಾಗಿ ಬಿಟ್ಟು ಬಿಡಿ. ಅಂತು ನಿಮ್ಮಂತಹ ಮತಿಗೇಡಿಗಳ ಕೈಯಲ್ಲಿ ಸಿಕ್ಕಿ ನಾನು ಸಂಪೂರ್ಣ ಹಾಳಾಗಿ ಹೋದೆ' ಎಂದಳು.

ಹೋರಿರಾಮ ತನ್ನ ಕೈಬಿಡಿಸಿಕೊಂಡು ಉಳಿದ ಧಾನ್ಯವನ್ನು ಬುಟ್ಟಿ

ಯಲ್ಲಿ ತುಂಬಿಸುತ್ತ ಹೇಳಿದ – 'ಅದಾಗಲಿಕ್ಕಿಲ್ಲ ದನಿಯಾ. ಹತ್ತು ಜನರ ಕಣ್ಣು ತಪ್ಪಿಸಿ ಒಂದು ಕಾಳು ಸಹ ಇಟ್ಟುಕೊಳ್ಳುವುದು ಪಾಪಕರ. ನಾನು ಹೋಗಿ ಎಲ್ಲವನ್ನೂ ಅಲ್ಲಿ ರಾಶಿ ಹಾಕಿ ಬರುತ್ತೇನೆ. ಒಂದು ವೇಳೆ ಆಗ ಪಂಚರಿಗೆ ನಮ್ಮ ಮಕ್ಕಳು ಮರಿಗಳ ಮೇಲೆ ದಯೆ ತೋರಿದರೆ ಅವರೇ ಏನಾದರೂ ಬಿಟ್ಟುಕೊಟ್ಟಾರು. ಇಲ್ಲವಾದರೆ – ನೋಡುವಾ – ದೇವರಿದ್ದಾನೆ.'

ದನಿಯಳು ಬಹು ಸಿಡುಕಿನಿಂದ ಹೇಳಿದಳು–'ಅವರೆಲ್ಲ ಊರ ಮುಂದಾಳುಗಳಲ್ಲ – ಮಹಾ ರಾಕ್ಷಸರು! ಎಲ್ಲರೂ ಸೇರಿ ನಮ್ಮ ಮನೆಮಾರನ್ನೆಲ್ಲ ಸೆಳೆದುಕೊಂಡು ನಮ್ಮನ್ನು ಗಡಿಪಾರು ಮಾಡ ಬಯಸುತ್ತಿದ್ದಾರೆ. ದಂಡ – ಗಿಂಡ, ಎಲ್ಲವೂ ಬರೇ ನೆಪಕ್ಕೆ ಮಾತ್ರ. ನಿಮಗೀಗ ಗೊತ್ತಾಗುವುದಿಲ್ಲ. ಮತ್ತೆ ತಿಳಿದೀತು! ಆ ಪಿಶಾಚಿಗಳಿಂದ ದಯೆ ದೊರಕೀತೆಂದು ಎಣಿಸಿರುವಿರಾ ನೀವು? ಅದೆಲ್ಲ ಕೇವಲ ಹುಚ್ಚು ಭಾವನೆ; ನೋಡಿಕೊಳ್ಳಿ.'

ಹೋರಿರಾಮು ಅದಕ್ಕೆ ಕಿವಿ ಕೊಡಲೇ ಇಲ್ಲ. ಮೆಲ್ಲಗೆ ಬುಟ್ಟಿಯನ್ನೆತ್ತಿ ತಲೆಯ ಮೇಲಿಟ್ಟುಕೊಂಡ. ಒಡನೆಯೇ ದನಿಯಳು ಓಡಿ ಬಂದು ತನ್ನ ಎರಡೂ ಕೈಗಳಿಂದ ಬಲವಾಗಿ ಬುಟ್ಟಿಯನ್ನು ಎಳೆದುಹಾಕಿ ಹೇಳಿದಳು – 'ಇದನ್ನು ಕೊಂಡುಹೋಗಲಿಕ್ಕೆ ನಾನೆಷ್ಟಕ್ಕೂ ಬಿಡಲಾರೆ. ನನ್ನ ಪ್ರಾಣವನ್ನೇ ಬೇಕಾದರೆ ತೆಗೆಯಿರಿ. ನಾವು ಜೀವಬಿಟ್ಟು ದುಡಿದಿದ್ದೆವು. ರಾತ್ರಿ ಹಗಲು ಬೆವರು ಹರಿಸಿದ್ದೆವು. ಇದೆಲ್ಲ ನಿಮ್ಮ ಹತ್ತು ಸಮಸ್ತರ ಹೊಟ್ಟೆ ಹೊರಿಸಲಿಕ್ಕಲ್ಲ. ಆ ಮೇಲೆ ನಮ್ಮ ಮಕ್ಕಳು ಅನ್ನಕ್ಕಾಗಿ ಭಿಕ್ಷೆ ಬೇಡುವುದೇ? ಇದನ್ನೆಲ್ಲ ನೀವೊಬ್ಬರೇ ಮಾಡಿದ್ದಲ್ಲ. ಮಕ್ಕಳನ್ನು ಕಟ್ಟಿಕೊಂಡು ಈ ಬೇಸಾಯಕ್ಕಾಗಿ ಪ್ರಾಣಕೊಟ್ಟವಳು – ನಾನು! ಒಳ್ಳೆಯ ಮಾತಿನಿಂದ ಈ ಬುಟ್ಟಿಯನ್ನು ಬಿಡಿ. ಇಲ್ಲವಾದರೆ ನಿಮ್ಮ ನನ್ನ ಸಂಬಂಧ ಇನ್ನು ಮುಗಿದೇ ಹೋಯಿತೆಂದು ತಿಳಿದುಕೊಳ್ಳಿ ಹೇಳಿ ಬಿಟ್ಟಿದ್ದೇನೆ.'

ಹೋರಿರಾಮು ಯೋಚನೆಗೊಳಗಾದ. ದನಿಯಳ ಮಾತಿನಲ್ಲಿ ಸತ್ಯಾಂಶವಿದೆ. ಹೆಂಡತಿ ಮಕ್ಕಳ ಕಷ್ಟದ ದುಡಿತವನ್ನು ದಂಡವಾಗಿ ಕೊಡಲಿಕ್ಕೆ ಅವನಿಗೆಲ್ಲಿಯ ಅಧಿಕಾರ? ಅವನು ಮನೆಯ ಯಜಮಾನನಾಗಿರುವುದು–ಎಲ್ಲರನ್ನೂ ಸರಿಯಾಗಿ ಕಾಪಾಡುವುದಕ್ಕಾಗಿ. ಅವರ ದುಡಿಮೆಯನ್ನೆಲ್ಲ ಸೆಳೆದುಕೊಂಡು ಊರ ಮುಂದಾಳುಗಳ ಎದೆಯ ಮೇಲೆ ಹಾಕಲಿಕ್ಕಲ್ಲ. ಅವನ ಕೈಯ ಬುಟ್ಟಿ ಜಾರಿ ಬಿತ್ತು. ಅವನು ಮೆಲ್ಲನೆ ಹೇಳಿದ – 'ನೀನು ಹೇಳುವುದೆಲ್ಲ ನಿಜ –

ದನಿಯಾ. ಇನ್ನೊಬ್ಬರ ದುಡಿಮೆಯ ಫಲದಲ್ಲಿ ನನಗೆ ಅಧಿಕಾರವಿಲ್ಲ. ಉಳಿದಿರುವುದನ್ನು ಒಳಗೆ ಕೊಂಡುಹೋಗು. ನಾನು ಹೋಗಿ ಮುಂದಾಳುಗಳ ಹತ್ತಿರ ಹೇಳಿ ಬರುತ್ತೇನೆ.'

ದನಿಯಳು ಬುಟ್ಟಿಯಲ್ಲಿದ್ದ ಧಾನ್ಯವನ್ನು ಮನೆಯೊಳಗೆ ಕೊಂಡು ಹೋದಳು. ತನ್ನ ಇಬ್ಬರೂ ಹುಡುಗಿಯರೊಡಗೂಡಿ ಮೊಮ್ಮಗ ಹುಟ್ಟಿದ ಸಂತಸದ ಹಾಡುಗಳನ್ನು ಗಟ್ಟಿಯಾಗಿ ಊರವರಿಗೆಲ್ಲ ಕೇಳುವಂತೆ ಹಾಡ ತೊಡಗಿದಳು. ಇಂದಿನ ಈ ಶುಭ ಮುಹೂರ್ತದಲ್ಲಿ ಊರ ಯಾವ ಹೆಂಗುಸೂ ಬಂದಿದ್ದಿಲ್ಲ. ಈ ತರದ ಮೊತ್ತ ಮೊದಲಿನ ಸಂದರ್ಭ ಇದೇ ಆಗಿತ್ತು. ಈ ಹಾಡುಗಳನ್ನು ಹಾಡುವುದು – ಯಾವ ಸಂತೋಷಕ್ಕಾಗಿ – ಎಂದು ಜುನಿಯಾ ಪ್ರಶ್ನಿಸಿದಳು. ಆದರೆ ದನಿಯಾ ಅದನ್ನು ಕೇಳಲೇ ಇಲ್ಲ. ಜಾತಿಯ ಹೆಂಗುಸರಿಗೆ ಅವಳ ಹಂಗು ಇಲ್ಲವಾದರೆ ಅವಳಿಗೂ ಅವರ ಹಂಗೇನು ?

ಆ ಸಂದರ್ಭದಲ್ಲೇ ಹೋರಿರಾಮು ತನ್ನ ಮನೆಯನ್ನು ೮೦ ರೂಪಾಯಿಗಳಿಗೆ ಜಿಂಗುರೀ ಸಿಂಹರಿಗೆ ಅಡವು ಹಾಕಿದ. ದಂಡ ತೆರಬೇಕಾದ ರೂಪಾಯಿಗಾಗಿ ಇದಲ್ಲದೆ ಅವನಲ್ಲಿ ಬೇರಾವ ದಾರಿಯೂ ಇದ್ದಿಲ್ಲ. ಎಳ್ಳು ಕಡಲೆಕಾಯಿಗಳ ಮಾರಾಟದಿಂದ ೨೦ ರೂಪಾಯಿ ಬಂತು. ಉಳಿದ ಹಣಕ್ಕಾಗಿ ಮನೆಯನ್ನೇ ಬರೆಸಬೇಕಾಯಿತು. ನೋಖೇರಾಮರು ಅವನ ಎತ್ತುಗಳನ್ನು ಮಾರಾಟ ಮಾಡಿಸುವ ಸೂಚನೆ ಇತ್ತರು. ಆದರೆ ಪಟೇಶ್ವರೀಲಾಲರೂ, ದಾತಾದೀನ್ ಪಂಡಿತರೂ ಅದಕ್ಕಡ್ಡ ಬಂದರು. ಎತ್ತು ಮಾರಾಟವಾಗಿ ಹೋದರೆ ಪಾಪ ! ಹೋರಿರಾಮು ಸಾಗುವಳಿ ಹೇಗೆ ನಡೆಸಿಯಾನು ! ಮುಖಂಡರು ವಸ್ತು ಒಡವೆಗಳಿಂದ ದಂಡ ವಸೂಲು ಮಾಡಿದರೂ, ಅವನ ಎತ್ತುಗಳನ್ನು ಸೆಳೆದುಕೊಂಡು ಅವನನ್ನು ಊರಿಂದ ಓಡಿಸುವಷ್ಟು ನಿಷ್ಕರುಣಿಗಳೇ? ಹಾಗಾಗಿ ಎತ್ತುಗಳು ಉಳಿದುವು.

ಹೋರಿರಾಮು ನೋಟು ಚೀಟು – ಎಲ್ಲ ಬರೆಸಿಕೊಟ್ಟು ರಾತ್ರಿ ಸಾಧಾರಣ ೧೧ ಘಂಟೆಗೆ ಮನೆ ಕಡೆ ಬಂದ. 'ಇಷ್ಟು ರಾತ್ರಿಯ ತನಕ ಎಲ್ಲಿ ಹೋಗಿದ್ದಿರಿ ?' – ದನಿಯಾ ಕೇಳಿದಳು.

ಹೋರಿರಾಮು ಜೇಡನ ಮೇಲಿನ ಕೋಪವನ್ನು ದಾಡಿಯ ಮೇಲೆ ತೋರಿಸುತ್ತ ಹೇಳಿದ – 'ಹೋಗುವುದೆಲ್ಲಿಗೆ ? ಈ ಮುಂಡೆಯ ಕರ್ಮ ತೀರಿಸಲಿಕ್ಕೆ ಹೋಗಿದ್ದೆ. ಆ ಬುದ್ಧಿಗೇಡಿ ಒಂದು ಬೆಂಕಿಕಡ್ಡಿ ಗೀರಿ ಹೋದ. ಆ ಬೆಂಕಿ

...ಂದಿಸಲಿಕ್ಕೆ ಈತ ಹೋಗಬೇಕಾಯಿತು. ಕೊನೆಗೆ ಈಗ ಈ ಮನೆ ...ನೂರನ್ನೂ ಎಂಬತ್ತು ರೂಪಾಯಿಗೆ ಅಡವು ಹಾಕಬೇಕಾಯಿತು. ಮತ್ತೇನು ...ಮಾಡುವುದು? ಇಷ್ಟೆಲ್ಲ ಆದ ಬಳಿಕ, ಮಾಡಿದ ತಪ್ಪನ್ನು ಮನ್ನಿಸಲು ...ಜಾತಿಯವರು ಹೇಗಾದರೂ ಒಪ್ಪಿದರು.'

ದನಿಯಳು ಹಲ್ಲು ಕಚ್ಚಿಕೊಂಡು ಹೇಳಿದಳು–'ತಪ್ಪು ಮನ್ನಿಸದಿದ್ದರೆ ...ಕೆಟ್ಟು ಹೋಗುವುದಾದರೂ ಏನು? ಕಳೆದ ನಾಲ್ಕಾರು ತಿಂಗಳುಗಳಲ್ಲಿ ಜನ ...ನಮ್ಮ ಕೈಯ ನೀರು ಮುಟ್ಟಲಿಲ್ಲ. ಅದರಿಂದಾಗಿ ಏನು ಉಳಿದುಹೋಯಿತು? ...ನೀವೇಕೆ ಇಷ್ಟು ಮೂರ್ಖರಾಗಿ ಹೋದಿರೋ–ನನಗೆ ತಿಳಿಯುವುದಿಲ್ಲ. ನನ್ನ ...ಎದಿರು ಮಾತ್ರ ಬಹಳ ಬುದ್ಧಿವಂತರಂತೆ ಮಾತಾಡುತ್ತೀರಿ. ಹೊರಗೆ ...ಹೋದಾಗ ಏಕೆ ನಿಮ್ಮ ಬಾಯಿ ಕಟ್ಟಿಹೋಗುವುದೋ ದೇವರು ಬಲ್ಲ. ಏನೆಲ್ಲ ...ನಡೆದು ಹೋದರೂ, ತಾತ ಮುತ್ತಾತಂದಿರ ಕಾಲದಿಂದ ಈ ಮನೆಯೊಂದು ...ಉಳಿದು ಬಂದಿತ್ತು. ಇಂದು ನೀವು ಅದನ್ನೂ ಅಡವು ಹಾಕಿ ಬಂದಿರಿ. ಇದೇ ...ರೀತಿ ಈ ಗೇಣಿಯ ಭೂಮಿಯನ್ನೂ ಯಾರಿಗಾದರೂ ಮೂರು ಕಾಸಿಗೆ ...ಒಪ್ಪಿಸಿ ಬಂದು ಬಿಡಿ. ಮತ್ತೆ ಬೀದಿ ಬೀದಿ ಬಿಕ್ಕೆ ಬೇಡಿದರೆ–ಸರಿ. ಆ ನಿಮ್ಮ ...ಮುಂದಾಳುಗಳಿದ್ದಾರಲ್ಲ–ಬಡಬಗ್ಗರ ಮೇಲೆ ದಂಡ ಹೊರಿಸುವವರು! ಅವರ ...ಹತ್ತಿರ ಕೇಳಲಿಕ್ಕೆ ನಿಮ್ಮ ನಾಲಿಗೆ ಮುದುಡಿ ಹೋಗಿತ್ತೇ? ಅವರೆಲ್ಲ ಬಹು ...ದೊಡ್ಡ ಧರ್ಮಾತ್ಮರಲ್ಲವೇ! ಬೆಳಗ್ಗೆದ್ದು ಅವರ ಮುಖ ನೋಡಿದರೆ ಇಡೀ ದಿನ ...ಅನ್ನ ಸಿಗಲಾರದು! ಅಂತಹ ಮಹಾ ಪಾತಕಿಗಳು ಅವರು!'

ಹೋರಿರಾಮು ಗದರಿಸಿದ–'ಸುಮ್ಮನಾದರೂ ದೊಡ್ಡ ದೊಡ್ಡ ಮಾತು ...ಆಡಬೇಡ. ಸಮಾಜದ ಕೋಪಕ್ಕೆ ಗುರಿಯಾಗಿ ನಿನಗೆ ಗೊತ್ತಿಲ್ಲ.'

ದನಿಯಳು ಮತ್ತಷ್ಟು ಉತ್ತೇಜಿತಳಾದಳು–'ಯಾವ ಪಾಪಕ್ಕಾಗಿ ...ನಾವು ಸಮಾಜದ ಕೋಪಕ್ಕೆ ಗುರಿಯಾಗಬೇಕು? ಯಾರ ಮನೆಗಾದರೂ ...ನಾವು ಕನ್ನ ಕೊರೆದೆವೇ? ಯಾರದಾದರೂ ತಲೆ ಒಡೆದೆವೇ? ಹುಡುಗಿಯ ...ಕೈಹಿಡಿಯುವುದು ಪಾಪವಲ್ಲ. ಕೈಹಿಡಿದ ಹುಡುಗಿಯನ್ನು ಬಿಟ್ಟು ಬಿಡುವುದು ...ಪಾಪ! ಈಗಿನ ಕಾಲದಲ್ಲಿ ಮನುಷ್ಯನು ಸರಳಬುದ್ಧಿಯವನಾಗಿರುವುದೂ ...ಪಾಪವೇ! ಆ ಸರಳತನದ ಫಲವಾಗಿ ಈಗ ನಿಮಗೆ ನಾಯಿ ಸಹ ದಾರಿ ...ತೋರಿಸದಂತಾಗಿದೆ. ಅತ್ತ, ನಿಮ್ಮ ಜಾತಿ ಮುಖಂಡರೆಲ್ಲ ಸೇರಿಕೊಂಡು ಈಗ ...ನಿಮಗೆ ಶಾಭಾಸ್ ಎನ್ನುತ್ತಿರಬಹುದಲ್ಲವೆ! ಅಂತು ನಿಮ್ಮ ಕೈ ಹಿಡಿದು

ನಾನು ಒಂದು ದಿನದ ಸುಖವನ್ನೂ ಅನುಭವಿಸಲಿಲ್ಲ.'

'ನಾನೇನು ನಿನ್ನ ತಂದೆಯ ಕಾಲಿಗೆ ಬೀಳಲಿಕ್ಕೆ ಬರಲಿಲ್ಲ ಅವನೇ ಬಂದು ಒತ್ತಾಯ ಪಡಿಸಿ ಮದುವೆ ಮಾಡಿದ.'

'ಆ ದಿನ, ಅವರ ಬುದ್ಧಿ ಕೆಟ್ಟುಹೋಗಿದ್ದಿರಬೇಕು. ಮತ್ತೇನು ಹೇಳಲಿ? ಯಾವುದನ್ನು ನೋಡಿ ಮರುಳಾದರೋ – ದೇವರೇ ಬಲ್ಲ!'

ವಿವಾದವು ವಿನೋದದಲ್ಲಿ ಪರ್ಯವಸಾನಗೊಂಡಿತು. ೮೦ ರೂಪಾಯಿ ಹೋದರೆ ಹೋಗಲಿ. ಒಂದು ಲಕ್ಷ ರೂಪಾಯಿ ಬೆಲೆಯ ಮಗ ದೊರೆತನಲ್ಲಾ! ಅವನನ್ನು ಯಾರೂ ಎಳೆದುಕೊಂಡು ಹೋಗಲಾರರು. ಗೋಬರನು ಹಿಂದೆ ಬಂದ ಮೇಲೆ ದನಿಯಾ ಬರೇ ಗುಡಿಸಲಲ್ಲಿಯೂ ಸುಖವಾಗಿದ್ದಾಳು.

ಹೋರಿರಾಮು ಕೇಳಿದ–'ಮೊಮ್ಮಗ ಯಾರ ಹಾಗಿದ್ದಾನೆ?' ಎಂದು.

ದನಿಯಳೂ ಪ್ರಸನ್ನಮುಖದಿಂದ ಉತ್ತರವಿತ್ತಳು–'ಎಲ್ಲ ವಿಧದಲ್ಲಿಯೂ ಗೋಬರನೇ!'

'ರಿಷ್ಟ ಪುಷ್ಟನಾಗಿದ್ದಾನೆಯೇ?'

'ಹೂಂ. ಚನ್ನಾಗಿಯೇ ಇದ್ದಾನೆ.'

೧೦

ಅಂದು, ಆ ರಾತ್ರಿ, ಗೋಬರನು ಜುನಿಯಳೊಡನೆ ಹೊರಟಾಗ ಭಯದಿಂದ ನಡುಗುತ್ತಲೇ ಇದ್ದ – ಜುನಿಯಳನ್ನು ನೋಡಿದೊಡನೆ ಇಡೀ ಊರಲ್ಲಿ ಗಲಭೆ ಏಳಬಹುದು! ನಾಲ್ಕೂ ಕಡೆಗಳಿಂದ ಜನ ಸೇರಿಯಾರು! ತಾಯಿ ಎಷ್ಟು ಬೈಯಬಹುದೋ ಏನೋ! – ಇದನ್ನೆಲ್ಲ ಎಣಿಸುತ್ತ ಅವನ ಕಾಲೇ ಮುಂದೆ ಬರಲಿಲ್ಲ. ಹೋರಿರಾಮನ ವಿಚಾರದಲ್ಲಿ ಅವನಿಗೆ ಅಷ್ಟೊಂದು ಭಯವಿದ್ದಿಲ್ಲ. ಒಮ್ಮೆ ಗದರಿಸಿದರೂ ಮತ್ತೆ ಅವನು ಶಾಂತನಾದಾನು. ಆದರೆ ದನಿಯಾ ಮಾತ್ರ ಭಯಂಕರ ವ್ಯಕ್ತಿ. ಆಕೆ ಬೇಸರದಿಂದ ವಿಷ ತೆಗೆದುಕೊಳ್ಳಲಿಕ್ಕೂ ಸಾಕು. ಮನೆಗೆ ಬೆಂಕಿ ಇಡಲೂ ಬಹುದು. ಅಯ್ಯೋ! ಹೀಗಿರುವಾಗ ಹೇಗೆ ತಾನೆ – ಜುನಿಯಳೊಡನೆ ಮನೆಗೆ ಹೋಗುವುದು!

ಅದೂ ಅಲ್ಲದೆ, ದನಿಯಾ ಜುನಿಯಳನ್ನು ಮನೆಗೆ ಹೊಕ್ಕಲಿಕ್ಕೂ ಬಿಡ

ದಿದ್ದರೆ? ಹಿಡಿಸೂಡಿಯಿಂದ ಹೊಡೆದು ಹೊರಗೆ ಓಡಿಸಿದರೆ? ಪಾಪ! ಜುನಿಯಳೆಲ್ಲಿ ಹೋದಾಳು? ತನ್ನ ಮನೆಗಂತು ಎಷ್ಟಕ್ಕೂ ಹೋಗಲಾರಳು. ಎಲ್ಲಿಯಾದರೂ ಬಾವಿಗೆ ಹಾರಿದರೆ, ಅಥವಾ ಕುತ್ತಿಗೆಗೆ ನೇಣು ಹಾಕಿಕೊಂಡರೆ – ಅಯ್ಯೋ ದೇವರೇ!

ಆದರೆ ಹೊಡೆದೋಡಿಸುವಷ್ಟು ನಿರ್ದಯಳು ಅವನ ಅಮ್ಮ ಆಗಲಾರಳು. ಕೋಪದ ಭರದಲ್ಲಿ ನಾಲ್ಕು ಕೆಟ್ಟ ಮಾತುಗಳನ್ನಾಡಬಹುದು. ಆದರೆ ಜುನಿಯಾ ಅವಳ ಕಾಲು ಹಿಡಿದು ಅಳತೊಡಗಿದರೆ ಖಂಡಿತ ಅವಳಿಗೆ ದಯೆ ತೋರೀತು. ಅಷ್ಟಾಗುವ ವರೆಗೆ ಅವನು ತಲೆ ತಪ್ಪಿಸಿಕೊಂಡಿರಬೇಕು. ಇದೆಲ್ಲ ತಣ್ಣಗಾದ ಮೇಲೆ ಬಂದು ಅಮ್ಮನನ್ನು ಸಮಾಧಾನ ಪಡಿಸಬಹುದು. ಈ ಮಧ್ಯದಲ್ಲಿ ಎಲ್ಲಿಯಾದರೂ ಒಂದು ಕೆಲಸ ಸಿಕ್ಕಿ ನಾಲ್ಕು ಕಾಸು ಕೈಯಲ್ಲಾದರೆ, ದನಿಯಾ ಬಾಯಿ ತೆರೆಯಲಿಕ್ಕೇ ಇಲ್ಲ.

ಹೀಗೆ ಯೋಚಿಸುತ್ತ ನಡೆಯುತ್ತಿರುವಾಗ ಜುನಿಯಾ ಹೇಳಿದಳು — 'ನನ್ನ ಎದೆ ಧಡ ಧಡ ನಡುಗುತ್ತಿದೆ. ಇಂತಹ ಗಂಡಾಂತರ ನಿನ್ನಿಂದಾಗಿ ಬಂದೀತೆಂದು ನನಗೇನು ಗೊತ್ತು? ಯಾವ ವಿಷ ಗಳಿಗೆಯಲ್ಲಿ ನಿನ್ನನ್ನು ನಾನು ನೋಡಿದೆನೋ – ದೇವರೇ ಬಲ್ಲ! ನೀನು ದನವನ್ನು ಕೊಂಡುಹೋಗಲಿಕ್ಕೆ ಬಾರದಿರುತ್ತಿದ್ದರೆ ಈ ಕತೆಯೇ ನಡೆಯುತ್ತಿದ್ದಿಲ್ಲ. ಈಗ, ನೀನು ಮೊದಲು ಹೋಗಿ ಹೇಳುವುದನ್ನೆಲ್ಲ ಹೇಳಿ ನಿಮ್ಮವರನ್ನು ಸಮಾಧಾನ ಪಡಿಸು. ನಾನು ಹಿಂದಿನಿಂದ ಬರುತ್ತೇನೆ.'

ಗೋಬರನೆಂದ – 'ಬೇಡ, ಬೇಡ. ಮೊದಲು ನೀನೇ ಹೋಗಿ ಒಳಗೆ ಸೇರಿಕೋ – ಪೇಟೆಗೆ ಹಾಲು ಮಾರಲಿಕ್ಕೆ ಹೋಗಿದ್ದೆ; ಹಿಂದೆ ಬರುವಾಗ ಕತ್ತಲಾಯಿತು; ಈಗ ದಾರಿಯೇ ಕಾಣುವುದಿಲ್ಲ – ಎಂಬುದಾಗಿ ಹೇಳು. ಅಷ್ಟರಲ್ಲಿ ನಾನೂ ಬರುತ್ತೇನೆ.'

ಜುನಿಯಾ ಚಿಂತಾಯುಕ್ತ ಸ್ವರದಿಂದ ಹೇಳಿದಳು – 'ನಿನ್ನ ಅಮ್ಮನಿಗೆ ಕೋಪ ಬಹಳ ಜಾಸ್ತಿ. ನನ್ನ ಜೀವ ನಡುಗುತ್ತಿದೆ. ಎಲ್ಲಿಯಾದರೂ ನನ್ನನ್ನು ಹೊಡೆಯ ತೊಡಗಿದರೆ ನಾನೇನು ಮಾಡಲಿ?'

ಗೋಬರನು ಧೈರ್ಯಕೊಡುತ್ತ ಹೇಳಿದ – 'ನನ್ನ ಅಮ್ಮ ಅಷ್ಟು ಹಾಳಲ್ಲ. ನಮಗೇ ಅವಳು ಈ ವರೆಗೆ ಹೊಡೆದಿಲ್ಲ. ಹಾಗಿರುವಾಗ ನಿನಗೆ ಹೊಡೆದಾಳೇ? ಏನಾದರೂ ಹೇಳುವುದು – ಗದರಿಸುವುದು – ಇದ್ದರೆ, ನನಗೆ ಗದರಿಸಿಯಾಳು.

ನಿನಗೇನೂ ಹೇಳಲಾರಳು.'

ಮನೆ ಹತ್ತಿರವಾಗುತ್ತಾ ಬಂತು. ಗೋಬರ ಅಲ್ಲೇ ನಿಂತು–'ನೀನಿನ್ನು ಮುಂದೆ ಹೋಗು' ಎಂದ.

'ನೀನು ಕೂಡಾ ತಡಮಾಡಬೇಡ'– ಜುನಿಯಾ ಒತ್ತಾಯ ಮಾಡಿದಳು.

'ಇಲ್ಲ, ಇಲ್ಲ. ಈ ಕ್ಷಣದಲ್ಲಿ ಬಂದು ಬಿಟ್ಟೆ. ನೀನು ಹೋಗು.'

'ನನ್ನ ದೇಹದಲ್ಲಿ ಏನಾಗುತ್ತಿದೆಯೆಂದು– ನನಗೇ ಗೊತ್ತಿಲ್ಲ. ನಿನ್ನ ಮೇಲೆಯೇ ಕೋಪ ಬರುತ್ತಿದೆ.'

ಇಷ್ಟೇಕೆ ಹೆದರುತ್ತೀ ನೀನು ? ನಾನೂ ಬರುತ್ತಲೇ ಇದ್ದೇನಲ್ಲವೇ? '

'ನಾವು ಇಲ್ಲಿಗೆ ಬರುವುದಕ್ಕಿಂತ ಇನ್ನೆಲ್ಲಿಗಾದರೂ ಹೋಗಬಹುದಿತ್ತು.'

'ನಮ್ಮ ಮನೆ ಇಲ್ಲೇ ಇರುವಾಗ ಇನ್ನೆಲ್ಲಿಗಾದರೂ ಏಕೆ ಓಡಿಹೋಗಬೇಕು ? ಸುಮ್ಮನಾದರೂ ಏಕೆ ನೀನು ಹೆದರುವೆ ? '

'ಬೇಗನೆ ಬರುವೆಯಲ್ಲವೇ ? '

'ಹೌದು, ಹೌದು. ಈಗಲೇ ಬಂದೆ.'

'ನನಗೆ ಮೋಸ ಮಾಡುವುದಿಲ್ಲವಲ್ಲ? ನನ್ನನ್ನು ಮನೆಗೆ ಕಳಿಸಿಬಿಟ್ಟು ನೀನು ಎಲ್ಲಿಗಾದರೂ ಓಡಿಬಿಡಬೇಡ.'

'ನಾನಷ್ಟು ನೀಚನಲ್ಲ ಜುನಿಯಾ. ನಿನ್ನ ಕೈಹಿಡಿದ ಮೇಲೆ ಜೀವವಿರುವ ತನಕ ನಿನ್ನನ್ನು ನೋಡಿಕೊಂಡಿದ್ದೇನು.'

ಜುನಿಯಾಳು ಗೋಬರನ ಮನೆ ಕಡೆ ಹೊರಟಳು.

ಗೋಬರ ಒಂದು ಕ್ಷಣದ ಮಟ್ಟಿಗೆ ಉಭಯ ಸಂಕಟದಲ್ಲಿದ್ದ. ಊರ ಮುಂದಾಳುಗಳ ಜಾತಿ ಬಹಿಷ್ಕಾರದ ಯೋಚನೆ ಭಯಂಕರಾಕಾರದಲ್ಲಿ ಕಣ್ಣ ಮುಂದೆ ತೋರಿಬಂತು. ಎಲ್ಲಿಯಾದರೂ ಅಮ್ಮ ನಿಜವಾಗಿಯೂ ಹೊಡೆದೋಡಿಸಹೊರಟರೆ, ಏನು ಮಾಡುವುದು ?– ಈ ಭಯದಿಂದ ಅವನ ಕಾಲು ನಡುಗತೊಡಗಿದುವು.

ಅವನಿಗೂ ಮನೆಗೂ ಮಧ್ಯ ಒಂದು ಸಣ್ಣ ಮಾವಿನ ತೋಪು ಮಾತ್ರ ಇತ್ತು. ಜುನಿಯಾಳ ಕರಿದಾದ ನೆರಳು ಮೆಲ್ಲಮೆಲ್ಲನೆ ಮುಂದೆ ಹೋಗುತ್ತಲೇ ಇತ್ತು. ಅವನ ಜ್ಞಾನೇಂದ್ರಿಯಗಳೆಲ್ಲವೂ ಅವಳಿಗೇನಾಗುವುದೆಂದು ನಿರೀಕ್ಷಿಸುತ್ತಿದ್ದುವು. ಥಕ್ಕನೆ, ಧನಿಯಾ ಬೈಯುವ ಶಬ್ದ ಕೇಳಿಬಂತು. ಒಡನೆಯೇ ಆತ ಬೆಚ್ಚಿ ಬಿದ್ದ. ದೇಹದ ರಕ್ತವೆಲ್ಲ ಒಣಗಿದಂತೆ ತೋರಿ ಬಂತು. ಒಂದು

ಕ್ಷಣದ ಮೇಲೆ ದನಿಯೂ ಮನೆಯಿಂದ ಹೊರಟು ಎಲ್ಲಿಗೋ ಹೋಗುವುದು ತೋರಿ ಬಂತು. ಹೌದು; ಅಪ್ಪನ ಹತ್ತಿರ ಹೋಗುತ್ತಿದ್ದಾಳೆ. ಅಪ್ಪ ಊಟ ವಾದ ಬಳಿಕ ಹೊಲ ಕಾಯಲಿಕ್ಕೆ ಗುಡಿಸಲಿಗೆ ಹೋಗಿ ಮಲಗಿದ್ದಾನೆ.

ಗೋಬರನೂ ಮೆಲ್ಲನೆ ಅಲ್ಲಿಗೆ ಹೋದ. ಗುಡಿಸಲ ಹಿಂಬದಿ ಸದ್ದಿಲ್ಲದೆ ಅಡಗಿ ಕೂತ. ಅವನ ಅನುಮಾನ ನಿಜವಾಯಿತು. ದನಿಯಳ ಕೋಪದ ಮಾತು ಕೇಳಿ ಬಂತು. ಅಬ್ಬಾ! ಅನ್ಯಾಯವಾಯಿತು! ಅಮ್ಮ ಇಷ್ಟು ಕಠೋರಳೇ? ಒರ್ವ ಅನಾಥೆಯ ಮೇಲೆ ಇವಳಿಗೆ ಸ್ವಲ್ಪವೂ ಕರುಣೆ ಬರುವುದಿಲ್ಲವೇ? ಅಲ್ಲ; ನಾನೇ ಮುಂದೆ ಹೋಗಿ, ಜುನಿಯಳ ವಿಚಾರ ಮಾತಾಡಲು ನೀವು ಯಾರು ಎಂದು ಕೇಳಿ ಬಿಡಲೆ? ಛೀ! ಹಾಗೆ ಕೇಳಿದರೆ ಆ ಮೇಲೆ ಏನೆಲ್ಲ ಅನರ್ಥ ಬರ ಲಿದೆಯೋ ಏನೋ! ಅಯ್ಯೊ! ಅಪ್ಪ ಕೂಡ ಕೋಪಗೊಳ್ಳುತ್ತಿದ್ದಾನೆ! ಇಬ್ಬರೂ ಅತ್ತ ಕಡೆಯೇ ಹೋಗುತ್ತಿದ್ದಾರೆ! ಇನ್ನು ಇವರಿಬ್ಬರೂ ಸೇರಿ ಜುನಿ ಯಳಿಗೆ ಹೊಡೆಯ ತೊಡಗಿದರೆ ನನ್ನಿಂದ ತಾಳಿಕೊಂಡಿರಲಾಗಲಿಕ್ಕಿಲ್ಲ. ದೇವರೇ! ಇನ್ನು ಸರ್ವ ಭಾರವೂ ನಿನ್ನ ಮೇಲೆಯೇ ಇರಲಿ. ಇಷ್ಟೆಲ್ಲ ಸಂಕಷ್ಟ ಬಂದು ಒದಗೀತೆಂದು ನಾನೆಣಿಸಿದ್ದಿಲ್ಲ. ಜುನಿಯಳು ನನ್ನನ್ನು–ಎಷ್ಟು ಧೂರ್ತ, ಹೇಡಿ, ಹಾಗೂ ನೀಚನನ್ನಾಗಿ ತಿಳಿದುಕೊಳ್ಳುತ್ತಾಳೋ ಏನೋ – ಮನಸ್ಸಿ ನಲ್ಲಿ. ಆದರೆ ಇವರಿಗೆ ಅವಳನ್ನು ಹೊಡೆದು ಹೊರಗೆ ದೂಡಲಿಕ್ಕೆ ಯಾವ ಅಧಿ ಕಾರವಿದೆ? ಆ ಮನೆಯಲ್ಲಿ ನನಗೂ ಅಧಿಕಾರವಿಲ್ಲವೇ? ಜುನಿಯಳ ಮೇಲೆ ಯಾರಾದರೂ ಕೈ ಎತ್ತಿದರೆ, ಒಡನೆಯೇ ಕುರುಕ್ಷೇತ್ರ ನಡೆದು ಹೋದೀತು. ತಾಯಿ ತಂದೆಯರು ಮಕ್ಕಳ ಸಂರಕ್ಷಣೆ ಮಾಡಿಕೊಂಡಿರುವ ವರೆಗೆ – ಅವರು ಅಪ್ಪ ಅಮ್ಮಂದಿರು. ಆ ಪ್ರೇಮ ಅವರಲ್ಲಿಲ್ಲವಾದರೆ ಅವರೆಂತಹ ತಂದೆ ತಾಯಿ ಯರು?

ಹೋರಿರಾಮ ಗುಡಿಸಲಿನಿಂದ ಹೊರಟುಹೋದ ಮೇಲೆ ಗೋಬರನೂ ಮೆಲ್ಲ ಮೆಲ್ಲಗೆ ಅವರನ್ನು ಹಿಂಬಾಲಿಸಿದ. ಆದರೆ ಮನೆ ಬಾಗಿಲಲ್ಲಿ ಬೆಳಕು ನೋಡಿ ಅವನ ಕಾಲು ನಿಂತುಹೋಯಿತು. ಕತ್ತಲೆಯಲ್ಲಿ, ಮನೆಯ ಹಿಂದು ಗಡೆಯೇ ನಿಂತು ಕಿವಿಕೊಡ ತೊಡಗಿದ. ಅವನ ಧೈರ್ಯ ಕುಗ್ಗತೊಡಗಿತು. ಪಾಪ! ಇವರೆಲ್ಲ ಜುನಿಯಳ ಮೇಲೆ ಸುಮ್ಮನೇ ರೇಗಾಡುತ್ತಿದ್ದಾರೆ! ಅವ ಳೇನೂ ಮಾಡಲಾರಳು. ವಿನೋದಕ್ಕಾಗಿ ಎಸೆದಿದ್ದ ಬೆಂಕಿಕಡ್ಡಿ ಇಡೀ ಕಣಜ ವನ್ನೇ ಈ ರೀತಿ ಸುಟ್ಟು ಹಾಕೀತೆಂದು ಅವನೆಣಿಸಿದ್ದಿಲ್ಲ. ಅದೂ ಅಲ್ಲದೆ – ಬೆಂಕಿ

ಹಿಡಿಸಿದವನು ತಾನೆಂದು ಇದಿರು ಬಂದು ಹೇಳುವ ಧೈರ್ಯವೂ ಅವನಲ್ಲಿದ್ದಿಲ್ಲ. ಏನೆಲ್ಲ ಯೋಚನೆ ಮಾಡಿಕೊಂಡು ಆವನು ತನ್ನ ಮನಸ್ಸಿಗೆ ಧೈರ್ಯ ತಂದು ಕೊಂಡಿದ್ದನೋ – ಆ ಯೋಚನೆಗಳೆಲ್ಲ ಕರಗಿ ಹೋದುವು. ಹಾಗಾದ್ದರಿಂದ ಮೆಲ್ಲಗೆ ಬಂದ ದಾರಿಗೇ ಹಿಂತಿರುಗಿದ. ಈಗವನು ಯಾವ ಮುಖದಿಂದ ಜುನಿಯಳನ್ನು ನೋಡಿಯಾನು ?

ನೂರಿನ್ನೂರು ಹೆಜ್ಜೆ ಹೋಗಿರಬಹುದು ಆವನು. ಅಷ್ಟರಲ್ಲಿ ಅವನಿಗೆ ಯುದ್ಧದಿಂದ ಪರಾಙ್ಮುಖನಾಗಿ ಓಡುವ ಸೈನಿಕನ ಸ್ಮರಣೆ ಬಂತು. ತಾನು ಜುನಿಯಳೊಡನೆ ಪ್ರೀತಿ ವಿಶ್ವಾಸಗಳ ವಿಚಾರವಾಗಿ ಹೇಳಿದ್ದ ಉದ್ಬುದ್ಧ ಮಾತುಗಳ ನೆನಪೂ ಬಂತು. ತನ್ನ ಪ್ರಾಣಗಳನ್ನೇ ಬೇಕಾದರೆ ಅವಳ ಚರಣಗಳಲ್ಲಿ ಅರ್ಪಿಸಲು ಆತ ಸಿದ್ಧನಾಗಿದ್ದ. ಜುನಿಯಳೇನೋ ಒಂದು ವಿಯೋಗಿ ಪಕ್ಷಿಯಂತೆ ತನ್ನ ಗೂಡಿನಲ್ಲಿ ಏಕಾಂತ ಜೀವನ ನಡೆಸುತ್ತಿದ್ದಳು. ಗೋಬರನು ಅಲ್ಲಿ ಹೋಗಿ ಅವಳಿಗೆ ಸ್ವಲ್ಪ ಮಟ್ಟಿಗೆ ಆನಂಬಗೊಳಿಸಿದ್ದನೋ – ಇಲ್ಲವೋ – ಗೊತ್ತಿಲ್ಲ; ಆದರೆ ಅವಳನ್ನು ದೊಡ್ಡ ವಿಪತ್ತಿನಲ್ಲಿ ದೂಡಿದ್ದು ಮಾತ್ರ ನಿಜ

ಸ್ವಲ್ಪ ಸಮಯ ದಾಟಿ ಆತ ಮನೆಯ ಸಮೀಪ ಹಿಂತಿರುಗಿ ಬಂದ. ಬಾಗಿಲು ಮುಚ್ಚಿತ್ತು. ಬಾಗಿಲೆಡೆಯಿಂದ ಮಿಣಿ ಮಿಣಿ ದೀಪದ ಪ್ರಕಾಶ ಹೊರ ಬರುತ್ತಿತ್ತು. ಹೋಗಿ ಇಣಿಕಿ ನೋಡಿದ. ದನಿಯಾ ಮತ್ತು ಜುನಿಯಾ ಹತ್ತಿರ ಹತ್ತಿರ ಕೂತುಕೊಂಡಿದ್ದರು. ಹೋರಿರಾಮು ನಿಂತಿದ್ದ. ಜುನಿಯಾ ಕಣ್ಣೊರಸಿಕೊಂಡು ಅಳುತ್ತಿದ್ದಳು. ಆಗ ದನಿಯಾ – ' ಅಳಬೇಡ ಮಗಳೇ; ನಾವಿದ್ದೇವೆ. ನಿನ್ನ ಅಪ್ಪ, ಅಣ್ಣ, ಬಂದರೆ ನಾವು ಸಮಾಧಾನ ಪಡಿಸುತ್ತೇವೆ. ನಾವು ಜೀವದಲ್ಲಿರುವ ವರೆಗೆ ಯಾವ ಚಿಂತೆಯನ್ನೂ ಮಾಡಬೇಡ ' – ಎಂಬುದಾಗಿ ಸಮಾಧಾನ ಪಡಿಸುತ್ತಿದ್ದಳು. ಇದನ್ನು ಕೇಳಿ ಗೋಬರನ ಕುತ್ತಿಗೆ ಕಟ್ಟಿ-ಬಂತು. ಅವನಿಗೆ ಸಂಪತ್ತು, ಸಾಮರ್ಥ್ಯ ಇದ್ದರೆ ಅಪ್ಪ ಅಮ್ಮನಿಗೆ ಚಿನ್ನದ ಕವಚ ತೊಡಿಸಿ ಬಿಡುತ್ತಿದ್ದ. ಇನ್ನು ಅವನಿಗೆ ಜುನಿಯಳ ವಿಚಾರ ಯಾವ ಚಿಂತೆಯೂ ಉಳಿಯಲಿಲ್ಲ. ಅವಳಿಗೊಂದು ಆಶ್ರಯ ಕೊಡಬೇಕೆಂದು ಆತ ಬಯಸಿದ್ದ. ಅದೀಗ ಸಿಕ್ಕಿತು. ಇನ್ನು ಜುನಿಯಳು ಆವನನ್ನು ಮೋಸಗಾರನೆಂದು ತಿಳಿದರೂ ಚಿಂತೆ ಇಲ್ಲ. ಅಂತು, ಇನ್ನು ಆತ ಮನೆಗೆ ಬರುವುದೆಂದರೆ – ಕೈಯಲ್ಲಿ ನಾಲ್ಕು ಕಾಸು ಮಾಡಿಕೊಂಡು, ಊರವರ ಬಾಯಿ ಮುಚ್ಚಿಸಿ ಬಿಡಲಿಕ್ಕೆ ಸಮರ್ಥನಾದ ಮೇಲೆಯೇ ಸರಿ. ಈತ ಕುಲಕ್ಕೆ ಕಲಂಕಪ್ರಾಯ

ಲ್ಲ; ತಿಲಕಪ್ರಾಯ, ಎಂದು ತಂದೆ ತಾಯಿಯರಿಂದ ಹೇಳಿಸಿಕೊಳ್ಳಲೇ ಬೇಕು – ಎಂದು ದೃಢ ಪ್ರತಿಜ್ಞೆ ಮಾಡಿ ಹೊರಟ. ಈ ವರೆಗೆ ಅವನು, ದಷ್ಟು ಕಡಮೆ ಕೆಲಸ ಮಾಡಿ, ಆದಷ್ಟು ಹೆಚ್ಚು ತಿಂದು ತೇಗುವುದು ತನ್ನ ಹಕ್ಕು – ಎಂಬುದಾಗಿ ತಿಳಿದಿದ್ದ. ಆದರೆ ತಂದೆ ತಾಯಿಯರ ಇಂದಿನ ಅಸಾಧಾರಣ ವಿನಯದಿಂದಾಗಿ ಅವನ ಮನಸ್ಸೇ ಬದಲಾಗಿ ಹೋಯಿತು. ಮನೆಯವರ ವಿಚಾರದಲ್ಲಿ ತನ್ನ ಹಕ್ಕು ಮಾತ್ರವೇ ಅಲ್ಲ, ದೊಡ್ಡ ಕರ್ತವ್ಯವೂ ಇದೆ – ಎಂಬುದಾಗಿ ತೋರಿ ಬಂತು ಅವನಿಗೆ.

ದೊಡ್ಡ ಪಟ್ಟಣಕ್ಕೆ ಹೋದರೆ ಅಲ್ಲಿ ಕೂಲಿಕಾರರಿಗೆ ದಿನಕ್ಕೆ ಐದಾರು ಆಣೆ ಕೂಲಿ ಸಿಗುವುದೆಂದವನು ಕೇಳಿದ್ದ. ಆರಾಣೆ ದಿನಕ್ಕೆ ಸಿಕ್ಕಿದರೆ, ಒಂದಾಣೆಯಲ್ಲಿ ಜೀವನ ನಡೆಸಿ, ಐದಾಣೆಯನ್ನು ಉಳಿಸಬಹುದು. ತಿಂಗಳಲ್ಲದು ಹತ್ತು ರೂಪಾಯಿ ಆಗಬಹುದು. ಒಂದು ವರ್ಷದಲ್ಲಿ ಹೆಚ್ಚು ಕಡಮೆ ನೂರ ಐವತ್ತು! ಆ ನೂರೈವತ್ತರ ಚೀಲ ಹಿಡಿದುಕೊಂಡು ಮನೆಗೆ ಮರಳಿದರೆ, ಅವನ ಮುಂದೆ ಬಂದು ಬಾಯಿ ತೆರೆಯುವ ಧೈರ್ಯ ಯಾರಿಗೆ ಬಂದೀತು? ಆ ದಾತಾದೀನ್, ಪಟೇಶ್ವರಿ, ಎಲ್ಲರೂ ಇವನ ಮಾತಿಗೇ ಸೈಗುಟ್ಟಿಯಾರು. ಜುನಿಯಳಂತು ಗರ್ವದಿಂದ ಉಬ್ಬಿ ಹೋದಾಳು. ಮೂರು ನಾಲ್ಕು ವರ್ಷ ಅದೇ ರೀತಿ ಕೆಲಸ ಮಾಡಿಬಿಟ್ಟರೆ ಮನೆಯ ದಾರಿದ್ರ್ಯವೆಲ್ಲ ದೂರವಾದೀತು. ಮುಚ್ಚುಮರೆಯಲ್ಲಿ ಕೆಲವರು ಹೇಳಿಯಾರು – ಕೂಲಿ ಕೆಲಸದಿಂದ ಹಣ ಸಂಪಾದಿಸಿದ–ಎಂಬುದಾಗಿ. ಹೇಳಲಿ! ನನಗೇನು? ಕೂಲಿ ಕೆಲಸವೇನೂ ಪಾಪಕರ್ಮ ಅಲ್ಲವಲ್ಲ! ಇಡೀ ಮನೆಯ ಉತ್ಪತ್ತಿಯೇ ವರ್ಷಕ್ಕೆ ೧೫೦ ಆಗುವುದಿಲ್ಲ. ಅವನೊಬ್ಬನೇ ಅಷ್ಟು ಮಾಡಬಲ್ಲನೆಂದರೆ–ಸಾಮಾನ್ಯವೇ? ಮಾತ್ರವಲ್ಲದೆ ಕೆಲಸದಲ್ಲಿ ಅನುಭವವಾಗಿ ಚಾಣಾಕ್ಷನಾದ ಮೇಲೆ ಸಂಬಳ ಏರುತ್ತಲೂ ಹೋಗಬಹುದು. ಮತ್ತೆ ತಂದೆ ತಾಯಿಯರು ಗದ್ದೆಯ ಕೆಲಸವನ್ನೆಲ್ಲ ಬಿಟ್ಟು ರಾಮನಾಮ ಸ್ಮರಣೆಯಲ್ಲಿರುವಂತೆ ಮಾಡಬಹುದು. ಆ ಮೇಲೆ ಒಂದು ಇಂಗ್ಲಿಶ್ ದನವನ್ನು ತೆಗೆದುಕೊಂಡು ಬಿಟ್ಟರೆ ದಿನಕ್ಕೆ ನಾಲ್ಕೈದು ಸೇರು ಹಾಲು ಹೇಗೂ ಬಂದೀತು. ತಂದೆ ತಾಯಿಯರು ಆ ಗೋ ಸೇವೆ ಮಾಡುತ್ತಾ ಇದ್ದರೆ ಅದರಿಂದ ಈ ಲೋಕಕ್ಕೂ ಪರಲೋಕಕ್ಕೂ ಶುಭ ದೊರೆಯದಿದ್ದೀತೆ?

ಮತ್ತೇನು? ಒಂದಾಣೆಯಲ್ಲಿ ಅವನ ದಿನ ಹೋಗದೇ? ಮನೆ ಮಾರುಗಳೆಲ್ಲ ಯಾಕೆ ಬೇಕು? ಯಾರದಾದರೂ ಮನೆ ಬಾಗಿಲಲ್ಲಿ ಬಿದ್ದುಕೊಂಡಿದ್ದ

ರಾಯಿತು. ಎಷ್ಟೋ ದೇವ ಮಂದಿರಗಳು, ಧರ್ಮಶಾಲೆಗಳು – ಪಟ್ಟಣದ ಲ್ಲಿವೆ. ಅಥವಾ ಅವನು ಯಾರ ಕೂಲಿ ಮಾಡುವನೋ, ಆತ ಇರಲಿಕ್ಕೊಂದು ಜಾಗ ಕೊಡದಿದ್ದಾನೆ? ಅಲ್ಲೇ ಒಂದಾಣೆಯ ಹಿಟ್ಟು ತೆಗೆದುಕೊಂಡು ರೊಟ್ಟಿ ಕಾಯಿಸಿ ತಿಂದರಾಯಿತು. ಅಥವಾ ಒಂದು ಮುಷ್ಟಿ ಕಡಲೆಕಾಯಿ ತೆಗೆದು ತಿಂದು ನೀರು ಕುಡಿದರೂ ಸಾಕು. ಅಷ್ಟರಿಂದಲೇ ಆತ ಚನ್ನಾಗಿ ಕೆಲಸ ಮಾಡಬಲ್ಲ. ಮನೆಯಲ್ಲಾದರೂ ಏನು? ದಿನ ನಿತ್ಯ ಹೋಳಿಗೆ ತುಪ್ಪ ತಿಂದು ಕೊಂಡೇ ಅವನು ದೊಡ್ಡದಾದುದೇ?

ಆಗ ಪುನಃ ಸಂದೇಹವಾಯಿತು – ಎಲ್ಲಿಯಾದರೂ ಕೆಲಸ ಸಿಗದಿದ್ದರೆ? ಅಲ್ಲ; ಯಾಕೆ ಸಿಗಲಾರದು? ಜೀವ ಕೊಟ್ಟು ಕೆಲಸ ಮಾಡಿದರೆ ಯಾರೂ ಕರೆದಾರು. ರಾತ್ರಿ ಹೊತ್ತು ಸಹ ಕೆಲಸ ಸಿಕ್ಕಿದರೆ ಬಿಡಬಾರದು. ಸಿಕ್ಕಿದ್ದು ಬಂತು. ಹಾಗೆ ಕೈತುಂಬ ಸಂಪಾದಿಸಿ ಮನೆಗೆ ಬರುವಾಗ ಮನೆಯವರಿಗೆಲ್ಲ ಸೀರೆ ತರಲೇ ಬೇಕು. ಜುನಿಯಳ ಕೈಗೆ ಬಳೆ ಸಹ ಮಾಡಿಸಿ ತರಬೇಕು. ಅಪ್ಪನಿಗೆ ಒಂದು ಮುಂಡಾಸು!

ಮನಸ್ಸಿನೊಳಗಿನ ಈ ಮಂಡಿಗೆಗಳನ್ನು ಸವಿಯುತ್ತ ಸವಿಯುತ್ತ–ಗೋಬರ ಲಖ್ನೌವಿಗೆ ಹೋಗುವ ದಾರಿ ಹಿಡಿದ. ಇಪ್ಪತ್ತು ಮೈಲು ತಾನೆ! ಸಾಯಂಕಾಲ ವಾಗುವಾಗ ಹೇಗೂ ಹೋಗಿ ಸೇರಬಹುದು. ಅಲ್ಲಿಗೆ ಈ ಊರವರು ಯಾರು ಬರುತ್ತಾರೆ? ಊರಿಗೆ ಕಾಗದ ಸಹ ಬರೆಯಬಾರದು. ಗೊತ್ತಾದರೆ ಮರು ದಿನವೇ ಅಪ್ಪ ಬಂದು ಒತ್ತಾಯ ಪಡಿಸಿ ಕರೆದುಕೊಂಡು ಬಂದಾನು. ತಾನು ಕೈತುಂಬ ಹಣ ಮಾಡಿಕೊಂಡು ಕೆಲವೇ ದಿನಗಳಲ್ಲಿ ಬಂದುಬಿಡುವೆನೆಂದು ಜುನಿಯಳಿಗೆ ಹೇಳಿಬಿಡಬೇಕಿತ್ತು. ಆದರೆ ಒಂದು ದೃಷ್ಟಿಯಿಂದ ಹೇಳದ್ದೇ ಒಳ್ಳೆಯದಾಯಿತು. ತಾನೂ ಬರುತ್ತೇನೆಂದು ಆಕೆ ಹಟ ಹಿಡಿದಿದ್ದರೆ, ಅವಳನ್ನೆಲ್ಲಿ ಕಟ್ಟಿಕೊಂಡು ಹೋಗುವುದು?

ಹಾಗೆ ನಡೆಯುತ್ತ ನಡೆಯುತ್ತ ಇರುವಾಗ ಸೂರ್ಯನು ಮೇಲೇರಿ ಬಂದ. ರಾತ್ರಿ ಕೂಡ ಆತ ಊಟ ಮಾಡಿದ್ದಿಲ್ಲ. ನಡೆಯುತ್ತಿದ್ದಂತೆ ಹಸಿವಾಗ ತೊಡಗಿತು ಅವನಿಗೆ. ಕಾಲು ಸೋತು ಹೋಯಿತು. ಎಲ್ಲಿಯಾದರೂ ಕೂತು ಕೊಂಡು ವಿಶ್ರಾಂತಿ ತೆಗೆದುಕೊಳ್ಳುವ ಮನಸ್ಸಾಯಿತು. ಹೊಟ್ಟೆಗೇನಾದರೂ ಬೀಳದೆ ಕಾಲೇ ಮುಂದೆ ಹೋಗುವಂತಿದ್ದಿಲ್ಲ. ಆದರೆ ಕೈಯಲ್ಲಿ ಒಂದೇ ಒಂದು ಕಾಸಾದರೂ ಇದ್ದರೆ ತಾನೆ? ದಾರಿಯ ಬದಿಯಲ್ಲಿ ಕೆಲವೆಲ್ಲ ಗೆಡ್ಡೆ

ಣಸುಗಳು ತೋರಿ ಬಂದುವು. ಒಂದೆರಡನ್ನು ತೆಗೆದು ಬಾಯಿಗೆ ಹಾಕಿ ೊಂಡ. ಮತ್ತೂ ಸ್ವಲ್ಪ ಮುಂದೆ ಹೋಗುವಾಗ ಕಬ್ಬಿನ ಬೆಲ್ಲ ಕಾಯಿಸುವ ರಿಮಳ ಬರತೊಡಗಿತು. ಈಗ ಮನಸ್ಸು ಕೇಳಲೇ ಇಲ್ಲ. ಮುಂದೆ ಹೋಗಿ ಗಾಣದ ಕೊಟ್ಟಿಗೆಯ ಹತ್ತಿರ, ಒಂದು ತಂಬಿಗೆ ತೆಗೆದುಕೊಂಡು ನೀರು ಕುಡಿಯಲಾರಂಭಿಸಿದ. ಆಗ ಒಬ್ಬ ಒಕ್ಕಲಿಗ ಹೇಳಿದ – 'ಏನಪ್ಪ, ಬರೀ ೀರು ಕುಡಿಯುತ್ತಿರುವೆ. ಇಕೋ, ಸ್ವಲ್ಪ ಬೆಲ್ಲ ಬಾಯಿಗೆ ಹಾಕಿಕೋ. ಈಗ ಿಂದುದು ಬಂತು. ಬರುವ ವರ್ಷ ಈ ಸಮಯ ಇಲ್ಲಿ ಒಂದು 'ಮಿಲ್' ಆಗಲಿದೆ. ಬೆಲ್ಲದ ಬದಲಿಗೆ ಸಕ್ಕರೆ ಸಿಕ್ಕೀತು. ಮತ್ತೆ ನಮ್ಮ ಬೆಲ್ಲವನ್ನಾರು ೇಳುತ್ತಾರೆ?' ಹೀಗೆ ಹೇಳುತ್ತಾ ಒಂದು ಎಲೆಯಲ್ಲಿ ಐದಾರು ತುಂಡು ಬೆಲ್ಲ ತಂದುಕೊಟ್ಟ. ಗೋಬರ ಬೆಲ್ಲ ತಿಂದು ಸರಿಯಾಗಿ ನೀರು ಕುಡಿದ. ಹೊಗೆ-ೊಪ್ಪು ತಿನ್ನುವೆಯೋ – ಎಂದು ಕೇಳಿದುದಕ್ಕೆ ಅವನು ಬೇಡವೆಂದ. ಅದರಿಂದ ಮುದುಕನಿಗೆ ಬಹಳ ಸಂತೋಷವಾಗಿ ಹೇಳಿದ – 'ನೀನು ಬಹು ಒಳ್ಳೆಯ ುಡುಗ. ಒಮ್ಮೆ ಹಿಡಿದರೆ ಈ ಅಭ್ಯಾಸ ಮತ್ತೆ ಇಡೀ ಜೀವಮಾನ ಬಿಡ ಲಾರದು.'

ಯಂತ್ರಕ್ಕೆ ಎಣ್ಣೆ ನೀರು ಸಿಕ್ಕಿದರೆ ವೇಗವು ಬಲವಾಗುತ್ತದೆ. ಗೋಬರನು ಾಗೆಯೇ ಹೋಗುತ್ತಲೇ ಇದ್ದ. ಹೊತ್ತು ಹೋದುದು ಗೊತ್ತೇ ಆಗಲಿಲ್ಲ. ದಾರಿಯಲ್ಲಿ ಒಂದೆಡೆ ನೋಡಿದ – ಒಂದು ಮರದ ಕೆಳಗೆ ಯುವತಿಯೊಬ್ಬಳು ಸತ್ಯಾಗ್ರಹಿಯಂತೆ ಹಟ ಹಿಡಿದು ಕುಳಿತುಕೊಂಡಿದ್ದಳು. ಗಂಡನು ಮುಂದು-ಗಡೆ ನಿಂತುಕೊಂಡು ಸಮಾಧಾನ ಹೇಳುತ್ತಿದ್ದ. ಎರಡು ಮೂರು ಜನ ದಾರಿಹೋಕರು ಈ ತಮಾಷೆ ನೋಡಲು ನಿಂತಿದ್ದರು; ಗೋಬರನೂ ನಿಂತ. ಪ್ರಣಯಕೋಪದ ಆಟಕ್ಕಿಂತ ರುಚಿಕರವಾದ ಜೀವನನಾಟಕ ಬೇರಾವುದಿದೆ?

ಯುವತಿ ಗಂಡನತ್ತ ಅಡಿಗಣ್ಣಿಂದ ನೋಡಿ ಹೇಳಿದಳು – 'ನಾನು ಹೋಗಲಿಕ್ಕಿಲ್ಲ, ಹೋಗಲಿಕ್ಕಿಲ್ಲ, ಹೋಗಲಿಕ್ಕಿಲ್ಲ.'

ಗಂಡನೂ 'ಅಲ್ಟಿಮೇಟಂ' ಕೊಟ್ಟ – 'ಎಷ್ಟಕ್ಕೂ ಹೋಗುವು ದಿಲ್ಲವೇ?'

'ಇಲ್ಲ, ಹೋಗುವುದಿಲ್ಲ.'

'ಹೋಗುವುದಿಲ್ಲವೇ?'

'ಇಲ್ಲ; ಹೋಗುವುದೇ ಇಲ್ಲ.'

ಗಂಡನು ಅವಳ ಜುಟ್ಟು ಹಿಡಿದು ಎಳೆಯುತೊಡಗಿದ. ಯುವತಿ ನೆಲದ ಮೇಲೆ ಬಿದ್ದುಕೊಂಡಳು.

ಗಂಡನು ಸೋತುಹೋಗಿ ಪುನಃ ಹೇಳಿದ– 'ಸಾರಿ ಹೇಳಿದ್ದೇನೆ, ನೋಡು – ಎದ್ದು ಹೊರಡುತ್ತೀಯೋ? ಇಲ್ಲವೇ?'

ಹುಡುಗಿ ಪುನಃ ದೃಢಸ್ವರದಿಂದ ಹೇಳಿದಳು – 'ನಾನು ನಿನ್ನ ಮನೆಗೆ ಏಳೇಳು ಜನ್ಮಕ್ಕೂ ಬರಲಾರೆ. ಬೇಕಾದರೆ ನನ್ನನ್ನು ಕತ್ತಿಯಿಂದ ಕೊಚ್ಚಿ ಕೊಚ್ಚಿ ಹಾಕು.'

'ನಿನ್ನ ಕುತ್ತಿಗೆ ಕಡಿದು ಹಾಕಿಯೇನು.'

'ಕುತ್ತಿಗೆ ಕಡಿದರೆ ಗಲ್ಲಾದೀತು.'

ಗಂಡನು ಅವಳ ಜುಟ್ಟು ಬಿಟ್ಟು ತನ್ನ ತಲೆಯ ಮೇಲೆ ಕೈಯಿಟ್ಟು ಕೊಂಡು ಕುಳಿತುಕೊಂಡ. ಅವನ ಪೌರುಷವೆಲ್ಲ ಉಡುಗಿಹೋಯಿತು. ಇದಕ್ಕೂ ಮಿಕ್ಕಿ ಅವನ ಕೈಯಲ್ಲೇನಿದೆ?

ಒಂದು ಕ್ಷಣದ ಬಳಿಕ ಪುನಃ ಅವನು ಎದ್ದು ನಿಂತು ಸೋತ ಸ್ವರದಿಂದ ಕೇಳಿದ – 'ಕೊನೆಗಾದರೂ ನಿನಗೇನಾಗಬೇಕು? – ಹೇಳು ನೋಡುವಾ.'

ಯುವತಿಯೂ ಎದ್ದು ಕುಳಿತು, ನಿಶ್ಚಲ ಸ್ವರದಿಂದ ಹೇಳಿದಳು–'ನನಗೆ ಬೇಕಾದ್ದು ಒಂದೇ – ನೀನು ನನ್ನನ್ನು ಬಿಟ್ಟುಬಿಡಬೇಕು.'

'ಹೀಗೇಕೆ ಹೇಳುವೆ? ಏನಾಯಿತು, ಹೇಳಬಾರದೇ?'

'ನನ್ನ ತಂದೆ ತಾಯಂದಿರಿಗೆ ಯಾರಾದರೂ ಏಕೆ ಬೈಯಬೇಕು?'

'ಯಾರು ಬೈದರು - ನಿನ್ನ ತಂದೆ ತಾಯಿಯರನ್ನು?'

'ಹೋಗಿ ನಿನ್ನ ಮನೆಯಲ್ಲಿ ಕೇಳು.'

'ಹೋಗುವಾ; ಹೋಗಿ ಕೇಳುವಾ ಬಾ.'

'ಕೇಳುವವನು ಯಾರು – ನೀನೇ? ಅಷ್ಟು ಧೈರ್ಯವಿದೆಯೇ ನಿನ್ನಲ್ಲಿ? ಹೋಗಿ, ಅಮ್ಮನ ಸೆರಗಿನೆಡೆಯಲ್ಲಿ ಅವಿತುಕೊಳ್ಳುವ ಹೇಡಿ! ಅವಳು ನಿನಗೆ ತಾಯಾಗಿರಬಹುದು, ನನಗೇನೂ ಆಗಬೇಕಾಗಿಲ್ಲ. ನೀನು ಬೇಕಾದರೆ ಅವಳು ಬೈದುದನ್ನು ಕೇಳಿಕೋ. ನಾನೇಕೆ ಕೇಳಬೇಕು? ಒಂದು ರೊಟ್ಟಿ ನಿನ್ನ ಮನೆಯಲ್ಲಿ ತಿಂದರೆ ನಾಲ್ಕು ರೊಟ್ಟಿಯ ಕೆಲಸ ಮಾಡುತ್ತೇನೆ. ಹಾಗಿರುವಾಗ ಯಾರ್ಯಾರ ಬಾಯಿಂದ ಏಕೆ ಕೇಳಬೇಕು? ತಾವು ಕೊಟ್ಟ ಒಂದು ಕಾಸು ಸಹ ನನಗೆ ಬೇಡ.'

ದಾರಿಹೋಕರಿಗೆ ಈ ಅಭಿನಯ ನೋಡಿ ಬಹಳ ಸಂತೋಷವಾಯಿತು. ಅದು ಬೇಗನೆ ಮುಗಿಯುವ ಸಂದರ್ಭವೂ ಇದ್ದಿಲ್ಲ. ಆದರೆ ಆಕಾಶ ಕೆಂಪಾಗುತ್ತ ಬಂತು. ಅವರು ಒಬ್ಬೊಬ್ಬರಾಗಿಯೇ ಹೊರಟುಹೋಗ ತೊಡಗಿದರು. ಗೋಬರನಿಗೆ ಆ ಗಂಡುಸಿನ ನಿರ್ದಯತೆಯು ಬಹಳ ವಿಶೇಷವೆಂದು ತೋರಿಬಂತು. ನಾಲ್ಕು ಜನರಿರುವಾಗ ಅವನೇನೂ ಹೇಳಲಾರದಾದ. ಇದ್ದ ಜನವೆಲ್ಲ ಹೋಗಿ ಆ ಬೈಲು ಬರಿದಾದೊಡನೆ ಹೇಳಿದ—'ಅಣ್ಣ ! ಗಂಡ ಹೆಂಡಿರ ವಿವಾದದಲ್ಲಿ ಮೂರನೆಯವನು ಕೈಹಾಕುವುದು ಸರಿಯಲ್ಲ. ಆದರೂ ನೀನು ಇಷ್ಟು ನಿರ್ದಯನಾಗುವುದು ಶುದ್ಧ ತಪ್ಪು.'

ಗಂಡುಸು ಕಣ್ಣು ಕೆರಳಿಸಿ—'ನೀನಾರೋ ಇಲ್ಲಿ ?' ಎಂದು ಕೇಳಿದ.

ಗೋಬರನೂ ಭಯಪಡದೆ—'ನಾನು ಯಾರಾದರೇನು ? ಅಯೋಗ್ಯ ಕೆಲಸ ನೋಡಿದಾಗ ಯಾರಿಗೂ ಮಾತಾಡುವ ಅಧಿಕಾರವಿದೆ' ಎಂದ.

ಗಂಡುಸು ತಲೆಯಾಡಿಸಿ ಹೇಳಿದ—'ಈ ವರೆಗೆ ನೀನು ಹುಡುಗಿಯ ಕೈ ಹಿಡಿದಿಲ್ಲವೆಂದು ತೋರುತ್ತದೆ. ಅದೇ ಇಷ್ಟೆಲ್ಲ ದಯೆ !'

'ಹುಡುಗಿಯ ಕೈಹಿಡಿದಿದ್ದೇನೆ; ಆದರೆ ಅವಳ ಜುಟ್ಟು ಹಿಡಿದು ಎಳೆಯಲಿಲ್ಲ.'

'ಹಾಗಾದರೆ ನೀನು ನಿನ್ನ ದಾರಿ ಹಿಡಿ. ಇವಳು ನನ್ನ ಹೆಂಡತಿ. ನಾನವಳಿಗೆ ಹೊಡೆಯುತ್ತೇನೆ, ಅಥವಾ ಕಡಿಯುತ್ತೇನೆ. ನೀನಾವನೋ—ಕೇಳುವವನು ? ನಡೆ ಬೇಗನೆ ಇಲ್ಲಿಂದ.'

ಗೋಬರನ ಬಿಸಿ ರಕ್ತ ಮತ್ತಷ್ಟು ಬಿಸಿಯಾಯಿತು—'ನಾನೇಕೆ ಹೊರಟು ಹೋಗಬೇಕು ? ರಸ್ತೆ ಸರಕಾರದ್ದು. ಯಾರ ಅಪ್ಪನದೂ ಅಲ್ಲ ಅದು. ಎಷ್ಟರವರೆಗೆ ಬೇಕೋ ಅಷ್ಟರ ತನಕ ನಿಲ್ಲುವ ಅಧಿಕಾರ ನನಗಿದೆ. ಇಲ್ಲಿಂದ ನನ್ನನ್ನು ಹೊರಡಿಸುವ ಅಧಿಕಾರ ಯಾರಿಗೂ ಇಲ್ಲ.'

ಆಗ ಆ ಗಂಡುಸು ಹಲ್ಲುಕಚ್ಚಿಕೊಂಡು ಹೇಳಿದ—'ಹಾಗಾದರೆ ನೀನು ಹೋಗುವುದಿಲ್ಲವೇ ? ನಾನು ಬರಬೇಕೇ ?'

ಗೋಬರನೂ ಹೆಗಲ ಮೇಲಿನ ಬಟ್ಟೆಯನ್ನು ಸೊಂಟಕ್ಕೆ ಕಟ್ಟಿಕೊಂಡು ಸಮರಸನ್ನದ್ಧನಾದ—'ನೀನು ಬಾ, ಬಾರದಿರು. ನಾನೀ ರಸ್ತೆಯಿಂದ ನನಗಿಷ್ಟ ಬಂದಾಗ ಹೋದೇನು.'

'ಆದರೆ ಸೊಂಟ ಮುರಿಸಿಕೊಂಡು ಹೋಗಬೇಕಾದೀತು.'

'ಯಾರ ಸೊಂಟ ಮುರಿದೀತೆಂದು ಯಾರಿಗೆ ಗೊತ್ತು?'

'ಹಾಗಾದರೆ ಹೋಗುವುದಿಲ್ಲವೇ ನೀನು?'

'ಇಲ್ಲ.'

ಗಂಡುಸು ಮುಷ್ಟಿಯನ್ನು ಬಲವಾಗಿ ಹಿಡಿದುಕೊಂಡು ಗೋಬರನತ್ತ ಹಾರಿದ. ಒಡನೆಯೇ ಆ ಯುವತಿ ಗಂಡನ ಬಟ್ಟೆ ಹಿಡಿದೆಳೆದಳು. ಬಳಿಕ ಗೋಬರನತ್ತ ನೋಡಿ ಹೇಳಿದಳು – 'ನೀನೇಕೆ ಈ ಕಾದಾಟ ಮೈಮೇಲ ಹಾಕಿಕೊಳ್ಳುವೆಯಪ್ಪಾ? ನೀನು ನಿನ್ನ ದಾರಿ ಹಿಡಿ. ಇಲ್ಲೇನು ತಮಾಷೆ ನಡೆ ಯುತ್ತಿಲ್ಲ. ಇದು ನಮ್ಮ ನಮ್ಮೊಳಗಿನ ಜಗಳ. ಒಮ್ಮೆ ನನಗೆ ಅವನು ಹೊಡೆ ಯುತ್ತಾನೆ; ಮತ್ತೊಮ್ಮೆ ನಾನು ಅವನಿಗೆ ಗದರಿಸುತ್ತೇನೆ. ಅದರಿಂದ ನಿನಗೇ ನಪ್ಪಾ ನಷ್ಟ?'

ಗೋಬರನು ಈ ಧಿಕ್ಕಾರವನ್ನು ಕೇಳಿ ಕಾಲ್ತೆಗೆಯಬೇಕಾಯಿತು – 'ಈ ಹೆಂಗುಸು ಪೆಟ್ಟು ತಿನ್ನಲಿಕ್ಕಾಗಿಯೇ ಹೀಗೆ ಮಾಡಿದ್ದಿರಬೇಕು' ಎನ್ನುತ್ತಾ ಹೋದ ಅವನು.

ಗೋಬರನು ಮುಂದೆ ಹೋದೊಡನೆಯೇ ಆ ಹುಡುಗಿ ಗಂಡನಿಗೆ ಗದರಿಸ ಲಾರಂಭಿಸಿದಳು – 'ಸಿಕ್ಕಿದವರ ಕೂಡ ನೀನು ಜಗಳಾಡುತ್ತೀಯಲ್ಲ! ನಿನಗೆ ಬೇಸರವಾಗುವ ಯಾವ ಮಾತನ್ನು ತಾನೇ ಆತ ಹೇಳಿದ? ಕೆಟ್ಟ ಕೆಲಸ ಮಾಡಿದರೆ ಇಡೀ ಜಗತ್ತೇ ನಿನ್ನನ್ನು ಕೆಟ್ಟವನೆಂದು ಹೇಳೀತು. ನೋಡು ವಾಗ ಅವನು ಒಳ್ಳೆಯ ಮನೆತನಸ್ಥನ ಹಾಗೆ, ಅದು ಕೂಡ ನಮ್ಮ ಜಾತಿಯವ ನಂತೆಯೇ, ಕಾಣುತ್ತಾನೆ. ಯಾಕೆ ಅವನನ್ನು ಕಂಡು ಮಾತಾಡಿ ನಿಮ್ಮ ತಂಗಿಗೆ ನೋಡಬಾರದು?'

'ಈ ತನಕ ಅವನಿಗೆ ಮದುವೆಯಾಗದೆ ಇರಬಹುದೇ?' – ಸಂದೇಹ ಯುಕ್ತ ಸ್ವರದಿಂದ ಗಂಡ ಕೇಳಿದ.

'ಕೇಳಿ ನೋಡಬಾರದೇಕೆ?'

ಗಂಡನು ೧೦—೨೦ ಮಾರು ಓಡಿಕೊಂಡು ಹೋಗಿ ಗೋಬರನನ್ನು ಚಪ್ಪಾಳೆ ತಟ್ಟಿ ಬರಹೇಳಿದ. ಗೋಬರನಿಗೆ ತೋರಿತು – 'ಪುನಃ ಇವನಿಗೇ ನಾದರೂ ಭೂತ ಹಿಡಿಯಿತೋ ಏನೋ! ಎಷ್ಟಾದರೂ ಅವನ ಊರಲ್ಲವೇ? ತನ್ನ ಊರಲ್ಲಿ ನಾಯಿ ಕೂಡಾ ಸಿಂಹದಂತಾಗುತ್ತದೆ ಆಗಲಿ, ನೋಡಿ ಬಿಡುವಾ' – ಎಂದು ಹಿಂದಿರುಗಿದ.

ಆದರೆ ಹಿಂದೆ ಬಂದು ನೋಡುವಾಗ ಆ ಗಂಡುಸಿನ ಮುಖದ ಮೇಲೆ ಸಮರ ಲಾಲಸೆ ತೋರಿ ಬರಲಿಲ್ಲ. ಸ್ನೇಹ ಪೂರ್ವಕವಾದ ಆಮಂತ್ರಣವಿತ್ತು. ಗೋಬರನ ಹೆಸರು, ಊರು, ಜಾತಿ, ಎಲ್ಲವನ್ನೂ ಕೇಳಿಕೊಂಡ ಅವನು. ಗೋಬರನೂ ನಿಜ ಸ್ಥಿತಿಯನ್ನು ಹೇಳಿದ. ಆ ಗಂಡುಸಿನ ಹೆಸರು ಕೋದಂಡನೆಂಬುದಾಗಿ.

ಕೋದಂಡ ನಗುತ್ತ ಹೇಳಿದ – 'ನಮ್ಮ ನಮ್ಮೊಳಗೆ ಜಗಳವಾಗುತ್ತಲೇ ಇದೆ. ನೀನೇನೋ ನಾಲ್ಕು ಬುದ್ಧಿಯ ಮಾತು ಹೇಳಿದೆ. ಸುಮ್ಮನಾದರೂ ನಾನು ನಿನ್ನ ಮೇಲೆ ಕೋಪಿಸಿಕೊಂಡೆ. ಬೇಸರ ಪಡಬೇಡ. ಮನೆಯಲ್ಲಿ ಗದ್ದೆ ಗಿದ್ದೆಗಳ ಬೇಸಾಯ ಇದೆ ತಾನೆ ?'

ಗೋಬರನೆಂದ – 'ಹಿರಿಯರಿಂದ ಬಂದ ಐದು ಎಕ್ರೆ ಭೂಮಿ ಇದೆ. ಒಂದು ಜೋಡೆತ್ತಿನ ಸಾಗುವಳಿ ನಡೆಯುತ್ತಿದೆ.'

'ಕೋಪ ಬಂದಾಗ ಮನುಷ್ಯ ಕುರುಡನಾಗಿ ಹೋಗುತ್ತಾನೆ. ನಾನು ಹೇಳಿದ್ದಕ್ಕೆ ಕ್ಷಮಿಸಿ ಬಿಡು. ಈ ನನ್ನ ಹುಡುಗಿ ಗುಣ ನಡತೆಗಳಲ್ಲಿ ಲಕ್ಷ್ಮಿಯೇ ಆಗಿದ್ದಾಳೆ. ಆದರೆ ಒಂದೊಂದು ಸಲ ಅವಳ ತಲೆಯಲ್ಲಿ ಏನು ಭೂತಸಂಚಾರ ವಾಗುತ್ತದೋ – ನನಗೆ ಗೊತ್ತಿಲ್ಲ. ಈಗ ನೀನೇ ಹೇಳು – ತಾಯಿಯ ವಿಚಾರದಲ್ಲಿ ನನಗೇನು ಅಧಿಕಾರವಿದೆ ? ನನ್ನನ್ನು ಹೊತ್ತುದು, ಹೆತ್ತುದು, ಸಾಕಿದ್ದು, ಸಲಹಿದ್ದು – ಎಲ್ಲ ಅವಳೇ ಅಲ್ಲವೇ ? ನನಗೇನಾದರೂ ಆಗಬೇಕಿದ್ದರೆ ನಾನು ಇವಳ ಹತ್ತಿರವೇ ಹೇಳುವುದು. ಆ ವಿಚಾರ ನನ್ನಧೀನದಲ್ಲಿದೆ. ನೀನೇ ಯೋಚಿಸು. ನಾನು ಸುಳ್ಳು ಹೇಳುವವನಲ್ಲ. ನಾನು ಇವಳ ಜುಟ್ಟು ಹಿಡಿದೆಳೆಯಬಾರದಿತ್ತು. ಆದರೆ ಹೆಂಗುಸರ ಜಾತಿ, ಸ್ವಲ್ಪ ಬಿಸಿ ಮಾಡದಿದ್ದರೆ ಹಿಡಿತಕ್ಕೆ ಬರಲಾರದು. ನಾನು ಇನ್ನು ಮುಂದೆ ತಾಯಿಂದ ಬೇರೆಯಾಗಿರಬೇಕೆಂದು – ಇವಳ ಇಚ್ಛೆ. ನೀನೇ ಯೋಚಿಸು – ಹೇಗದು ಸಾಧ್ಯ ? ಅಥವಾ ಬೇರೆ ಆಗುವುದು ಯಾರಿಂದ ? – ಹೆತ್ತ ತಾಯಿಂದಲೇ ? ಹೆಂಡತಿ ಇರಲಿ, ಹೋಗಲಿ; ಅದು ಮಾತ್ರ ನನ್ನಿಂದಾಗದು.'

ಗೋಬರನು ಕೂಡ ತನ್ನ ದಾರಿಯನ್ನು ಬದಲಾಯಿಸಬೇಕಾಯಿತು. ಅವನು ಹೇಳಿದ – 'ಹೆತ್ತ ತಾಯಿಯ ಮೇಲೆ ಭಕ್ತಿ ತೋರಿಸುವುದು ಎಲ್ಲರ ಕರ್ತವ್ಯವೂ ಆಗಿದೆ. ತಾಯಿಯ ಋಣವನ್ನು ನಾವು ಎಂದಾದರೂ ಸಲ್ಲಿಸುವುದಿದೆಯೆ ?'

ಕೋದಂಡನು ಗೋಬರನನ್ನು ತನ್ನ ಮನೆಗೆ ಬರಲು ಆಮಂತ್ರಿಸಿದ.

ಹೇಗಿದ್ದರೂ ಆತ ಆ ದಿನವೇ ಲಖ್ನೌವಿಗೆ ಹೋಗಿ ಸೇರಲಾರ. ಒಂದೆರಡು ಮೈಲು ಹೋಗುವಾಗಲೇ ಕತ್ತಲಾಗಬಹುದು. ರಾತ್ರಿ ಹೊತ್ತು ಎಲ್ಲಿಯಾದರೂ ತಂಗಲೇ ಬೇಕು.

ಗೋಬರ ನಗುತ್ತ ಕೇಳಿದ – 'ಏನು ? – ಹೆಂಡತಿಯ ಹತ್ತಿರ ರಾಜಿ ಆಯಿತೇ ? '

' ರಾಜಿ ಮಾಡದೆ ಎಲ್ಲಿ ಹೋಗುತ್ತಾಳೆ ? '

'ನನ್ನನ್ನಂತು ಒಂದೇ ಮಾತಿನಿಂದ ಹೊಡೆದು ನಾಚುವಂತೆ ಮಾಡಿದಳು.'

' ಅವಳಿಗೂ ಈಗ ಬೇಸರವಾಗುತ್ತಿದೆ. ಹೋಗುವಾ – ನನ್ನ ತಾಯಿಗೂ ಎರಡು ಮಾತು ಹೇಳಿಬಿಡು. ನನ್ನಿಂದ ಅದೆಲ್ಲ ಹೇಳಲಿಕ್ಕಾಗದು. ಅವರು ಕೂಡ ಯೋಚಿಸಬೇಕು – ಸೊಸೆಯ ತಂದೆ ತಾಯಿಯರಿಗೆ ಏತಕ್ಕಾಗಿ ಬೈಯಬೇಕು ? ನಮಗೂ ಒಬ್ಬಳು ತಂಗಿ ಇದ್ದಾಳೆ. ನಾಳೆ ಅವಳಿಗೆ ಮದುವೆ ಆದ ಮೇಲೆ, ಅವಳ ಅತ್ತೆ ನಮಗೆಲ್ಲ ಬೈಯತೊಡಗಿದರೆ ನಾವು ಕೇಳಿಯೇವೇ ? ಎಲ್ಲ ತಪ್ಪೂ ಸೊಸೆಯದೇ ಅಲ್ಲ – ಅತ್ತೆಯದೂ ಧಾರಾಳ ಇದೆ. ಪ್ರತಿಯೊಂದು ವಿಚಾರದಲ್ಲಿಯೂ ಅವಳು ಮಗಳ ಪಕ್ಷವನ್ನೇ ಹಿಡಿದರೆ ಹೇಗಾದೀತು ? '

ಗೋಬರನಿಗೆ ರಾತ್ರಿ ಹೊತ್ತಿಗೆ ಏನಾದರೊಂದು ಗತಿಯಾಗಬೇಕಿತ್ತು. ಅದೀಗ ಅಲ್ಲೇ ಆಯಿತು. ಇಬ್ಬರೂ ಸೇರಿ ಆ ಹುಡುಗಿ ಇದ್ದಲ್ಲಿಗೆ ಬಂದರು. ಈಗ ಅವಳು ಉತ್ತಮ ಗೃಹಿಣಿಯಂತಿದ್ದಳು. ಮುಖ ತಗ್ಗಿಸಿ ಲಜ್ಜೆ ತೋರಿಸುತ್ತಿದ್ದಳು.

ಕೋದಂಡನು ಮುಗುಳ್ನಗುತ್ತ ಹೇಳಿದ – ' ಇವರು ಬರಲಿಕ್ಕೇ ಕೇಳಲಿಲ್ಲ – ಇಷ್ಟೆಲ್ಲ ನಡೆದ ಮೇಲೂ ನಮ್ಮ ಮನೆಗೆ ಬರುವುದೇ ? – ಎಂದರು. '

ಯುವತಿಯು ಗೋಬರನತ್ತ ಅಡಿಗಣ್ಣಿಂದ ನೋಡಿ ಹೇಳಿದಳು – ' ಈ ಗದರಿಕೆಗೇ ಹೆದರಿಬಿಟ್ಟರೆ ಹೆಂಡತಿ ಬಂದ ಮೇಲೆ ಮತ್ತೆಲ್ಲಿ ಓಡಿ ಬಿಡುವರೋ!'

ಅವರ ಮನೆ ಹತ್ತಿರವೇ ಇತ್ತು. ಸುತ್ತು ಮುತ್ತು ೧೦ – ೧೨ ಮನೆಗಳಿದ್ದುವು. ಕೆಲವಕ್ಕೆ ಹೆಂಚಿನ ಮಾಡು ; ಇನ್ನು ಕೆಲವಕ್ಕೆ ಹುಲ್ಲುಮಾಡು. ಕೋದಂಡನು ಇವನನ್ನು ಮಂಚದ ಮೇಲೆ ಕೂರಿಸಿದ. ಕುಡಿಯಲಿಕ್ಕೆ ಪಾನಕ ಮಾಡಿ ತರಲಿಕ್ಕೆ ಹೆಂಡತಿಗೆ ಹೇಳಿದ. ಕಾಲು ತೊಳೆಯಲಿಕ್ಕೆ ಅವಳು ನೀರು ತಂದಾಗ ಸ್ವಲ್ಪ ನೀರನ್ನು ತೆಗೆದು ಕೈಯಿಂದ ಗಂಡನತ್ತ ಹಾರಿಸಿದಳು. ಆ

ರೀತಿ, ಆಕೆ ಗಂಡನೊಡನೆ ಕ್ಷಮೆ ಬೇಡಿದಂತೆ ಗೋಬರನಿಗೆ ತೋರಿತು. ಅಲ್ಲಿ ಅವನಿಗೆ ರಾತ್ರಿ ಒಳ್ಳೆಯ ಊಟ ಉಪಚಾರಗಳೂ ನಡೆದುವು.

೧೧

ಗೋಬರನು ಸ್ವಲ್ಪ ರಾತ್ರಿ ಇರುವಾಗಲೇ ಎದ್ದು ಕೋದಂಡನಿಗೆ ಹೇಳಿ ಹೊರಟ. ಅವನಿಗೆ ವಿವಾಹವಾಗಿ ಹೋಗಿತ್ತೆಂದು ಎಲ್ಲರಿಗೂ ತಿಳಿಯಿತು. ಹಾಗಾಗಿ ಯಾರೂ ಅವನೊಡನೆ ಮದುವೆಯ ಮಾತೇ ಎತ್ತಲಿಲ್ಲ. ಅವನ ಗುಣ ಶೀಲ ನೋಡಿ ಆ ಮನೆಯವರಿಗೆಲ್ಲ ಸಂತೋಷವಾಗಿತ್ತು. ಕೋದಂಡನ ತಾಯಿಗೆ ಆತ ಮಧುರ ಶಬ್ದಗಳಿಂದ ನಾಲ್ಕು ಮಾತು ಹೇಳಿದ– 'ಅಮ್ಮ, ನೀವು ಬಹು ಪುಣ್ಯಾತ್ಮರು! ನಿಮ್ಮಂತಹ ತಾಯಿಯ ಋಣವನ್ನು ನೂರು ಜನ್ಮಗಳಲ್ಲಿಯೂ ತೀರಿಸಲು ಸಾಧ್ಯವಿಲ್ಲ'....ಹಾಗೆ....ಹೀಗೆ....

ಮುದುಕಿಯೂ ಆತನ ಯಥೇಷ್ಟ ಶ್ರದ್ಧೆಯಿಂದ ಬಹಳ ಸಂತೋಷಗೊಂಡಳು. ಅವಳಿಗೆ ಕಣ್ಣೀರು ಬಂತು. ಗೋಬರ ಹೇಳಿದ ಮಾತು ಸರಿಯೆಂದೂ ತೋರಿ ಬಂತು. ಒಮ್ಮೆ ವೈದ್ಯನು ರೋಗಿಯ ವಿಶ್ವಾಸವನ್ನು ಸಂಪಾದಿಸಿಕೊಂಡರೆ ಮತ್ತೆ ಅವನು ವಿಷ ಕೊಟ್ಟರೂ ರೋಗಿ ಸಂತೋಷದಿಂದ ಕುಡಿದು ಬಿಡುತ್ತಾನೆ – 'ಇನ್ನು ಈಗ ಸೊಸೆ ಕೋಪದಿಂದ ಮನೆ ಬಿಟ್ಟು ಹೋದರೆ ಯಾರಿಗೆ ಕೆಟ್ಟ ಹೆಸರು? ಅವಳ ತಂದೆ ಎಂಥವನೇ ಆಗಲಿ. ಈಗಂತು ಅವಳು ನಮ್ಮವಳೇ ಅಲ್ಲವೇ?' – ಎಂದು ಮುಂತಾಗಿ ಆ ಮುದುಕಿಗೆ ತೋರಿ ಬಂತು.

ಕೊನೆಗೆ ಗೋಬರ ಹೊರಡುವಾಗ ಆ ಅಜ್ಜಿ ದಾರಿಖರ್ಚಿಗಾಗಿ ಅವಲಕ್ಕಿ ಬೆಲ್ಲ ಕೊಟ್ಟು ಆಶೀರ್ವದಿಸಿದಳು. ಮುಂದೆ ಹೋಗುವಾಗ ಹಳ್ಳಿಯಿಂದ ಪೇಟೆಗೆ ಕೂಲಿಗಾಗಿ ಸಾಗುವ ಅನೇಕ ಜನರು ಗೋಬರನಿಗೆ ಸಿಗತೊಡಗಿದರು. ಅವರೊಡನೆ ಮಾತುಕತೆಯಾಡುತ್ತಾ ಹೋಗುವಾಗ ದಾರಿ ಸಾಗಿದ್ದು ಗೊತ್ತೇ ಆಗಲಿಲ್ಲ. ಎಂಟು ಗಂಟೆ ಆಗುವಾಗ ಎಲ್ಲರೂ ಅಮೀನಾಬಾದಿನ ಮಾರ್ಕೆಟಿಗೆ ಹೋಗಿ ಮುಟ್ಟಿದರು. ಇಷ್ಟೆಲ್ಲ ಜನರು ನಗರದಲ್ಲಿ

ಹೇಗೆ ಬಂದು ಸೇರಿದರೆಂದು ಗೋಬರನಿಗೆ ವಿಸ್ಮಯವಾಯಿತು. ಜನರ ಮೇಲೆ ಜನರು ಒಟ್ಟುಗೂಡುತ್ತಾ ಇದ್ದರು.

ನೋಡುವಾಗ ಪೇಟೆಯಲ್ಲಿ ೪೦೦-೫೦೦ ಕೂಲಿಗಾರರಿಗೆ ಕಡಮೆ ಇದ್ದಿಲ್ಲ. ಮೇಸ್ತ್ರಿಗಳು, ಬಡಗಿಗಳು, ಕಮ್ಮಾರರು, ಚಿತ್ರದ ಕೆಲಸದವರು, ಬುಟ್ಟಿಯ ಕೆಲಸದವರು – ಎಲ್ಲ ತರದ ಜನರೂ ಇದ್ದರು. ಈ ನುಗ್ಗಾಟ ನೋಡಿ ಗೋಬರ ಗಾಬರಿಯಾದ. ಇಷ್ಟೆಲ್ಲ ಜನರಿಗೆ ಕೆಲಸ ಹೇಗಪ್ಪಾ ಸಿಗುವುದು? ಅದೂ ಅಲ್ಲದೆ ಅವನ ಕೈಯಲ್ಲಿ ಯಾವ ಉಪಕರಣವೂ ಇಲ್ಲ. ಈತ ಯಾವ ಕೆಲಸದವನೆಂದು ಇತರರಿಗೆ ಗೊತ್ತಾಗುವುದು ಹೇಗೆ? ಕೈಯಲ್ಲೇನೂ ಉಪಕರಣವಿಲ್ಲದ ಮೇಲೆ ಇವನನ್ನು ಕೇಳುವವರು ಯಾರು?

ಮೆಲ್ಲ ಮೆಲ್ಲನೆ ಒಬ್ಬೊಬ್ಬರಿಗೇ ಕೆಲಸ ಸಿಗತೊಡಗಿತು. ಕೆಲವರೆಲ್ಲ ಕೆಲಸವಿಲ್ಲದೆ ನಿರಾಶರಾಗಿ ಹಿಂದಕ್ಕೆ ಹೋಗುತ್ತಿದ್ದರು. ಹೆಚ್ಚಿನ ಮುದುಕರನ್ನು, ಶಕ್ತಿಹೀನರನ್ನು, ಕೇಳುವವರೇ ಇಲ್ಲವಾಗಿತ್ತು. ಗೋಬರನೂ ಅವರೊಳಗಿನ ಒಬ್ಬ. ಆದರೆ ಇಂದಿನ ಮಟ್ಟಿಗೆ ಅವನ ಕೈಯಲ್ಲಿ ಹೊಟ್ಟೆಗೆ ತಕ್ಕ ಇತ್ತು. ಅದರಿಂದ ಸ್ವಲ್ಪ ಧೈರ್ಯ ಅವನಲ್ಲಿತ್ತು.

ಒಡನೆಯೇ ಒಬ್ಬ ದೊಡ್ಡ ಮನುಷ್ಯನು, ಅಲ್ಲಿಯೇ ಎಲ್ಲರ ಮಧ್ಯ ಬಂದು ಗಟ್ಟಿಯಾಗಿ ಹೇಳಿದ – 'ಯಾರಿಗೆ ದಿನಕ್ಕೆ ಆರಾಣೆಯ ಲೆಕ್ಕದಲ್ಲಿ ಕೆಲಸ ಮಾಡಲು ಇಷ್ಟವಿದೆಯೋ – ಅವರೆಲ್ಲ ನನ್ನೊಡನೆ ಬನ್ನಿ. ದಿನಕ್ಕೆ ಆರಾಣೆ! ಐದು ಗಂಟೆಗೆ ಕೆಲಸ ಮುಗಿಯುತ್ತದೆ.'

ಇವರೇ ಮಿರ್ಜಾ ಸಾಹೇಬರು. ಇವರು ರಾಯ್ ಸಾಹೇಬರ ಆಪ್ತ ಮಿತ್ರರು, ದೊಡ್ಡ ಮನುಷ್ಯರು.

೮ – ೧೦ ಮಂದಿ ಗಟ್ಟಿಮುಟ್ಟಿನ ಮನುಷ್ಯರ ಹೊರತು ಉಳಿದವರೆಲ್ಲರೂ ಅವರೊಡನೆ ಹೊರಡಲು ಸಿದ್ಧರಾದರು. ३೦೦ – ೪೦೦ ಜನರ ತಲೆಬುಡವಿಲ್ಲದ ಸೇನೆಯೊಂದು ಅಣಿಯಾಯಿತು. ಮುಂದುಗಡೆ ಮಿರ್ಜಾ ಸಾಹೇಬರಿದ್ದರು. ಹಿಂದಿನಿಂದ ಈ ಹೊಟ್ಟೆಗಿಲ್ಲದ ಮುದುಕರ ತಂಡವು ಕುರಿಗಳ ಮಂದೆಯಂತೆ ಅವರನ್ನು ಹಿಂಬಾಲಿಸಿತು.

ಅಷ್ಟರಲ್ಲಿ ಮುದುಕನೊಬ್ಬನು ಮಿರ್ಜಾರನ್ನು ಕೇಳಿದ – 'ನಾವು ಮಾಡಬೇಕಾದ ಕೆಲಸ ಯಾವುದು ಒಡೆಯರೇ?'

ಮಿರ್ಜಾ ಸಾಹೇಬರು ಆಗ ಹೇಳಿದ ಕೆಲಸವನ್ನು ಕೇಳಿ ಎಲ್ಲರಿಗೂ

ಆಶ್ಚರ್ಯ. ಆದೀಗ ಬರೀ 'ಹಿಡಿಯುವಾಟ' ಆಡುವುದಾಗಿತ್ತು. ಎಲಾ! ಇವನೆಂತಹ ಮಹಾ ಪುರುಷನಪ್ಪ! ಹಿಡಿವಾಟ ಆಡುವುದಕ್ಕೆ ಆರಾಣೆ ಕೂಲಿ ಕೊಡುತ್ತಿದ್ದಾನಲ್ಲ! ಹೆಚ್ಚು ಹಣ ಬಂದರೆ ಮನುಷ್ಯ ಮರುಳನಾಗುತ್ತಾನೆ! ತುಂಬಾ ಓದುವುದರಿಂದಲೂ ಕೆಲವರು ಹುಚ್ಚರಾಗುತ್ತಾರೆ! ಅಥವಾ ಇದರಲ್ಲೇನಾದರೂ ಮೋಸವಿದೆಯೇ? ಈತ ಎಲ್ಲರನ್ನೂ ಕರೆದುಕೊಂಡು ಹೋಗಿ ಕೊನೆಗೆ ನಿಮಗೇನೂ ಕೆಲಸವಿಲ್ಲ; ನಡೆಯಿರಿ – ಎಂದು ಹೇಳಿಬಿಟ್ಟರೆ! ಯಾರೇನು ಮಾಡಲು ಸಾಧ್ಯವಿದೆ? ಕರೆದುಕೊಂಡು ಹೋಗಿ ಹಿಡಿಯುವಾಟ ಆಡಿಸಲಿ, ಅಥವಾ ಕುಟ್ಟಿ-ದೊಣ್ಣೆ ಆಡಿಸಲಿ. ಕೂಲಿ ಮಾತ್ರ ಮೊತ್ತ ಮೊದಲೇ ಕೊಟ್ಟು ಬಿಡುತ್ತಿದ್ದರೆ ಒಳ್ಳೆಯದಿತ್ತು. ಇಂತಹ ದೊಡ್ಡ ಮನುಷ್ಯರ ನಂಬಿಕೆ ಏನು? – ಎಂದು ಮೊದಲಾಗಿ ಕೆಲವರೆಲ್ಲ ಗುಣುಗುಟ್ಟತೊಡಗಿದರು.

ಆಗ ಗೋಬರ ಮುಂದೆ ಹೋಗಿ ಮೆಲ್ಲನೆ – 'ನಮಗೆ ಹೊಟ್ಟೆಗೇನೂ ಗತಿ ಇಲ್ಲ. ಹಣ ಈಗಲೇ ಸಿಕ್ಕಿದರೆ ಏನಾದರೂ ತೆಗೆದು ತಿನ್ನಬಹುದಿತ್ತು' ಎಂದ.

ಮಿರ್ಜಾ ಸಾಹೇಬರು ಒಡನೆಯೇ ಆರಾಣೆ ತೆಗೆದು ಅವನ ಕೈಯಲ್ಲಿಟ್ಟು ಗಟ್ಟಿಯಾಗಿ ಹೇಳಿದರು – 'ಎಲ್ಲರಿಗೂ ಮಜೂರಿ ಮುಂದಾಗಿ ಸಿಗುವುದು. ಯಾರೂ ಆ ವಿಚಾರ ಯೋಚಿಸುವುದು ಬೇಡ.'

ಮಿರ್ಜಾ ಸಾಹೇಬರು ನಗರದ ಹೊರ ಭಾಗದಲ್ಲಿ ಒಂದು ಬೈಲು ಭೂಮಿಯನ್ನು ಪಡೆದುಕೊಂಡಿದ್ದರು. ಕೂಲಿಗಾರರನ್ನೆಲ್ಲ ಅಲ್ಲಿಗೇ ಕರೆದುಕೊಂಡು ಹೋದರು. ನೋಡುವಾಗ ಆ ಸ್ಥಳದ ಸುತ್ತಲೂ ದೊಡ್ಡ ಬೇಲಿಯ ಆವರಣವಿತ್ತು. ಅದರೊಳಗೆ ಹುಲ್ಲಿನ ಗುಡಿಸಲೊಂದಿತ್ತು. ಅದರೊಳಗೆ ಮೂರು ನಾಲ್ಕು ಕುರ್ಚಿ, ಒಂದು ಮೇಜು. ಕೆಲವೆಲ್ಲ ಪುಸ್ತಕಗಳು ಮೇಜಿನ ಮೇಲಿದ್ದುವು. ಗುಡಿಸಲ ಸುತ್ತಲೂ ಸುಂದರ ಗಿಡಬಳ್ಳಿಗಳು ಇದ್ದುದರಿಂದ ನೋಡಲು ಬಹು ರಮಣೀಯವಾಗಿ ತೋರುತ್ತಿತ್ತು. ಸುತ್ತಲಿದ್ದ ಬೇಲಿಯ ಹತ್ತಿರ ಮಾವು ಬೇವು ಮರಗಳ, ತರ ತರದ ಹೂ ಗಿಡಗಳ, ಸಾಲುಗಳು ರಮ್ಯವಾಗಿದ್ದುವು. ಮಧ್ಯದ ಭಾಗ ಬರಿದಾಗಿತ್ತು. ಮಿರ್ಜಾ ಸಾಹೇಬರು ಎಲ್ಲ ಕೂಲಿಗಾರರನ್ನೂ ಸಾಲಾಗಿ ನಿಲ್ಲಿಸಿ ಕೂಲಿಯನ್ನು ಮುಂದಾಗಿ ಕೊಡಿಸಿದರು. ಈಗ ಯಾರಿಗೂ ಅವರ ಹುಚ್ಚಿನ ವಿಚಾರದಲ್ಲಿ ಸಂದೇಹ ಉಳಿಯಲಿಲ್ಲ.

ಗೋಬರನಿಗೆ ಹಣ ಮೊದಲೇ ಸಿಕ್ಕಿ ಹೋಗಿತ್ತು. ಮಿರ್ಜಾ ಸಾಹೇಬರು

ಅವನನ್ನು ಕರೆದು ಗಿಡಗಳಿಗೆ ನೀರು ಹಾಕುವ ಕೆಲಸವನ್ನು ವಹಿಸಿ ಕೊಟ್ಟರು
ನನಗೆ 'ಹಿಡಿಯುವಾಟ' ಸಿಗುವುದಿಲ್ಲವಲ್ಲ – ಎಂದು ಆತನಿಗೊಮ್ಮೆ ಬೇಸ
ತೋರಿತು. ಈ ಮುದುಕರನ್ನೆಲ್ಲ ಸೋಲಿಸಿ ಹಣ್ಣುಹಣ್ಣು ಮಾಡಬಹ
ದಿತ್ತು! ಅಥವಾ ಹೋಗಲಿ; ಎಳೆತನದಲ್ಲಿ ಬೇಕಾದಷ್ಟು ಆಡಿಯಾಗಿದೆ
ಈಗ ಹೇಗೂ ಹಣ ಕೈಗೆ ಬಂತಲ್ಲ – ಎಂದು ಸಮಾಧಾನ ಮಾಡಿಕೊಂಡ.

ಹಲವು ವರ್ಷಗಳ ಬಳಿಕ ಈ ಮುದುಕರಿಗೆಲ್ಲ ಹಿಡಿಯುವಾಟ ಆಡು
ಸುಸಂದರ್ಭ ಒದಗಿ ಬಂತು. ಕೆಲವರಿಗೆ ಆಟದ ನಿಯಮಗಳು ಕೂಡ ಮರೆತ
ಹೋಗಿದ್ದುವು. ದಿನವಿಡೀ ಪಟ್ಟಣದಲ್ಲೆಲ್ಲ ತಿರುಗಾಡಿ ಕತ್ತಲಾಗುವಾಗ ಮ
ಸೇರುತ್ತಿದ್ದರು. ಕೈಯಲ್ಲಿ ಏನಾದರೂ ನಾಲ್ಕು ಕಾಸು ಬಂದಿದ್ದರೆ ಅದರಿಂದ
ನಾದರೂ ಹೊಟ್ಟೆಗೆ ಹಾಕಿಕೊಳ್ಳುತ್ತಿದ್ದರು. ಬೆಳಗಾದೊಡನೆ ಪುನಃ ಅದೆ
ರೀತಿ ಚಕ್ರ ತಿರುಗುತ್ತಿತ್ತು. ಹಾಗಾಗಿ ಜೀವನವು ನಿರಾನಂದ, ನಿರುತ್ಸಾಹಮಯ
ವಾಗಿಹೋಗಿತ್ತು. ಈಗ ಈ ಆಟದ ಒಂದು ಸಂದರ್ಭ ಸಿಕ್ಕಿದೊಡನೆ ಮುದುಕರ
ಕೂಡ ಯುವಕರಾಗಿ ಹೋದರು. ಹಲ್ಲು ಹೋದ, ತಲೆ ಬೋಳಾದ ಮುದು
ರೆಲ್ಲ ಬಟ್ಟೆ ಮೇಲೆಕಟ್ಟಿಕೊಂಡು ಹಾರುವಾಗ ಅವರ ಮುದಿ ಎಲುಬುಗಳ
ಯಲ್ಲೂ ಯೌವನದ ರೇಖೆ ಹೊಳೆಯುತ್ತಿರುವಂತೆ ತೋರುತ್ತಿತ್ತು. ಬಂದ ಜ
ರೊಳಗೆ ಇಬ್ಬರು ಮುಂದಾಳುಗಳು ಚುನಾಯಿಸಲ್ಪಟ್ಟು ಎರಡು ಪಕ್ಷಗಳ
ದುವು. ಎರಡು ಗಂಟೆಗೆ ಸರಿಯಾಗಿ ಆಟದ ಆರಂಭವಾಯಿತು. ಚಳಿಗಾಲ
ಮಧ್ಯಾಹ್ನದ ಬಿಸಿಲು ಆಟಕ್ಕೆ ಒಪ್ಪುವ ವಾತಾವರಣವನ್ನು ಕಲ್ಪಿಸಿತ್ತು.

ಅತ್ತ ಆವರಣದ ಗೇಟಿನ ಹತ್ತಿರ ಮಿರ್ಜಾ ಸಾಹೇಬರು ಟಿಕೇಟ
ಮಾರುತ್ತಾ ಇದ್ದರು. ಅವರು ಈ ರೀತಿ ಒಂದಲ್ಲ ಒಂದು ತರದ ತಮಾ
ಯನ್ನು ಆಗಾಗ್ಗೆ ತೋರಿಸುತ್ತಿದ್ದರು. ಹಣವಂತರಿಂದ ರೂಪಾಯಿ ವಸೂಲ
ಮಾಡಿ ಬಡವರಿಗೆ ಹಂಚಿಬಿಡುತ್ತಿದ್ದರು. ಈ ಮುದುಕರಾಟದ ಜಾಹೀರಾತ
– ಪ್ರಕಟಣೆಗಳು, ಹಲವು ದಿನದಿಂದ ನಗರದಲ್ಲಿ ನಡೆಯುತ್ತಿತ್ತು. ದೊಡ್ಡ
ದೊಡ್ಡ 'ವಾಲ್ ಪೋಸ್ಟರ್'ಗಳು ಎಲ್ಲೆಲ್ಲೂ ಹಚ್ಚಲ್ಪಟ್ಟಿದ್ದುವು. ಬಣ್ಣ
ಬಣ್ಣದ ನೋಟೀಸುಗಳೂ ಹಂಚಲ್ಪಟ್ಟಿದ್ದುವು – 'ಅಭೂತಪೂರ್ವ ವಿನೋದ
ಕರ ಆಟ! ಭಾರತದ ಮುದುಕರು ಈಗಲೂ ಎಂತಹ ಶಕ್ತಿಶಾಲಿಗಳು
ನೋಡಿ ಆನಂದ ಪಡಿ! ಕಣ್ಣುಗಳಿಗೆ ಹಬ್ಬ ಮಾಡಿಕೊಳ್ಳಿ. ಬಾರದವರು
ಮತ್ತೆ ಪಶ್ಚಾತ್ತಾಪ ಪಡಬೇಕಾದೀತು! ಇಂತಹ ಸುಸಂದರ್ಭ ಮತ್ತೆ ಎಂದಿಗೂ

ಸಿಗಲಾರದು! ಟಿಕೀಟು ದರ– ೧೦ ರೂಪಾಯಿಯಿಂದ ೨ ಆಣೆಯ ತನಕ!' ಇತ್ಯಾದಿ, ಇತ್ಯಾದಿ.

ಎರಡು ಗಂಟೆಗೆ ಆವರಣದೊಳಗಿನ ಸ್ಥಳವೆಲ್ಲ ಜನರಿಂದ ಕಿಕ್ಕಿರಿದು ಹೋಯಿತು. ಮೋಟರುಗಳ, ಜಟ್ಕಾಗಳ, ತಂಡವೇ ನೆರೆದುಹೋಗಿತ್ತು. ಎರಡು ಸಾವಿರಕ್ಕೆ ಕಡಮೆಯಾಗದು – ಜನ ಸಂದಣಿ! ದೊಡ್ಡ ದೊಡ್ಡ ಮನುಷ್ಯರಿಗಾಗಿ ಕುರ್ಚಿ ಬೆಂಚುಗಳ ವ್ಯವಸ್ಥೆಯೂ ಇತ್ತು. ಸಾಮಾನ್ಯ ಜನರಿಗಾಗಿ ನೆಲ ಚಾಪೆಗಳ ವ್ಯವಸ್ಥೆ ಮಾಡಲಾಗಿತ್ತು.

ಆಟ ಮೊದಲಾಯಿತು!

ಮುದುಕರ ಓಡಾಟ ನೋಡಿ ನೆರೆದವರೆಲ್ಲ ಬಹಳವಾಗಿ ನಗುತ್ತಿದ್ದರು; ಕೈಚಪ್ಪಾಳೆ ಹೊಡೆಯುತ್ತಿದ್ದರು; ಬೊಬ್ಬಿಡುತ್ತಿದ್ದರು – 'ನೋಡಿ, ನೋಡಿ ಆ ಅಜ್ಜನನ್ನು! ಯಾವ ಧೈರ್ಯದಿಂದ ಹೋಗುತ್ತಾನೆ! ಎಲ್ಲರನ್ನೂ ಸೋಲಿಸಿಯೇ ಬಿಡುವವನಂತೆ ಮುಂದೆ ಹಾರುತ್ತಾನೆ! ಹೋ ಹೋ – ಹಾರಿ ಹಾರಿ ಬಿದ್ದೇ ಬಿಟ್ಟ! ಆಹಾ! ಎದ್ದು ಕೊಂಡು ಪುನಃ ಹೇಗೆ ಓಡುತ್ತಾನೆ!' ಹೀಗೆ ನೋಡುತ್ತಿದ್ದ ಜನರೆಲ್ಲ ತಮ್ಮ ಮನಸ್ಸಿನ ವಿನೋದವನ್ನು ಪ್ರಕಟ ಪಡಿಸುತ್ತಿದ್ದರು. ಅವರ ಲಕ್ಷ್ಯವೆಲ್ಲ ಆಟದ ಬೈಲಿನಲ್ಲೇ ಕೇಂದ್ರೀಕೃತವಾಗಿತ್ತು. ಸೇರಿದವರು ಆಟಗಾರರ ಓಟ, ಹೊಡೆದಾಟ, ಹಾರಾಟ – ಇತ್ಯಾದಿಗಳಲ್ಲೇ ತನ್ಮಯರಾಗಿದ್ದರು. ಆದರೆ ಎತ್ತರವಾದ ಕುರ್ಚಿಗಳಲ್ಲಿ ಕೂತಿದ್ದ ದೊಡ್ಡ ಮನುಷ್ಯರು ಮಾತ್ರ, ಉದಾಸೀನರಾಗಿದ್ದು ತಮ್ಮ ತಮ್ಮೊಳಗಿನ ಮಾತು ಕತೆಯಲ್ಲೇ ಮಗ್ನರಾಗಿದ್ದರು.

ಆಟ ಕೊನೆಗಂಡಿತು. ಕೂಲಿಗಾರರು ಕೊನೆಗೆ ಒಂದೊಂದು ಲಿಂಬೆಯ ಹಣ್ಣು ಪಡೆದು ಹೊರಟರು. ಜನಸಂದಣಿಯೂ ಕಡಮೆಯಾಯಿತು.

ಕತ್ತಲಾಗುತ್ತ ಬಂತು. ಮಿರ್ಜಾ ಸಾಹೇಬರು ಹೋಗಿ ನೋಡುವಾಗ ಗೋಬರ ಆಗಲೂ ಗಿಡಗಳಿಗೆ ನೀರು ಹೊಯ್ಯುತ್ತಲೇ ಇದ್ದ.

ಮಿರ್ಜಾ ಸಾಹೇಬರು ಸಂತೋಷಗೊಂಡು ಹೇಳಿದರು – 'ಹೋಗಪ್ಪ ನೀನು; ನಿನ್ನ ಕೆಲಸ ಇಂದಿಗೆ ಮುಗಿಯಿತು. ನಾಳೆಯೂ ಬರುವೆಯೋ?'

ಆಗ ಗೋಬರ ದೈನ್ಯಭಾವದಿಂದ ಹೇಳಿದ – 'ನನಗೇನಾದರೂ ದಿನ ನಿತ್ಯದ ಕೆಲಸ ಕೊಡಿಸುತ್ತಿದ್ದರೆ ತುಂಬಾ ಉಪಕಾರವಾಗುತ್ತಿತ್ತು.'

'ಹಾಗೆ ನಿನಗೆ ಮನಸ್ಸಿದ್ದರೆ, ನಿನ್ನನ್ನು 'ಕಾಯಂ' ಆಗಿಯೇ ಇಟ್ಟು

ಕೊಳ್ಳುವೆನು.'

'ಸಂಬಳ ಎಷ್ಟು ಸಿಕ್ಕೀತು ಸ್ವಾಮೀ?'

'ನಿನಗೆಷ್ಟು ಸಿಗಬೇಕು?'

'ನಾನೇನು ಹೇಳಲಿ? ನಿಮಗಿಷ್ಟ ಬಂದುದನ್ನು ಕೊಟ್ಟರೆ ಸಾಕು.'

'ಹಾಗಾದರೆ ತಿಂಗಳಿಗೆ ಹದಿನೈದು ರೂಪಾಯಿ ಕೊಡುತ್ತೇನೆ. ಆದರೆ ಕೆಲಸ ಮಾತ್ರ ಚನ್ನಾಗಿ ಮಾಡಬೇಕು.'

ಗೋಬರನು ಕೆಲಸಕ್ಕೆ ಹೆದರುವವನಲ್ಲ. ಅವನಿಗೆ ರೂಪಾಯಿ ಸಿಕ್ಕಿದರೆ ರಾತ್ರಿ ಹಗಲು ಕೆಲಸ ಮಾಡಲಿಕ್ಕೂ ತಯಾರು. ೧೫ ರೂಪಾಯಿ ಸಿಗುವುದೆಂದ ಮೇಲೆ ಕೇಳುವುದೇನು! ಪ್ರಾಣ ಕೊಡಲಿಕ್ಕೂ ಸಿದ್ಧ. ಆದ್ದರಿಂದ ಪುನಃ ಹೇಳಿದ – 'ಎಲ್ಲಿಯಾದರೂ ಬಿದ್ದುಕೊಳ್ಳಲಿಕ್ಕೂ ಸ್ವಲ್ಪ ಸ್ಥಳ ಸಿಕ್ಕಿದ್ದರೆ ಒಳ್ಳೇದಿತ್ತು.'

'ಹೌದು; ಈ ಗುಡಿಸಲಿನ ಒಂದು ಬದಿಯಲ್ಲಿ ನೀನು ಇದ್ದುಬಿಡಬಹುದು.'

ಗೋಬರನಿಗೆ ಒಮ್ಮೆಗೆ ಸ್ವರ್ಗವೇ ದೊರಕಿದಂತಾಯಿತು.

೧೨

ಹೋರಿರಾಮನ ಕೈಗೆ ಬಂದ ಬೆಳೆಯೆಲ್ಲ ದಂಡ ಕೊಟ್ಟು ಮುಗಿದು ಹೋಗಿತ್ತು. ವೈಶಾಖ ಮಾಸವಂತು ಹೇಗೋ ದಾಟಿತು. ಜ್ಯೇಷ್ಠ ಮಾಸ ಬರುವಾಗ ಧಾನ್ಯದ ಒಂದು ಕಾಳೂ ಇಲ್ಲ. ಮನೆಯಲ್ಲಿ ಐದು ಹೊಟ್ಟೆ ತುಂಬಬೇಕು. ಆದರೆ ಕಣಜವೆಲ್ಲಾ ಬರಿದೋ ಬರಿದು. ಎರಡು ಹೊತ್ತು ಸಿಗದಿದ್ದರೂ ಒಂದು ಹೊತ್ತಾದರೂ ಬೇಡವೇ? ಹೊಟ್ಟೆ ತುಂಬ ಸಿಗದಿದ್ದರೂ, ಅರೆ ಹೊಟ್ಟೆಯಾದರೂ ಬೇಡವೇ? ಹೊಟ್ಟೆಗಿಲ್ಲದೆ ಮನುಷ್ಯ ಎಷ್ಟು ದಿನ ದೂಡಬಲ್ಲ? ಕಡ ಕೇಳಬಹುದೆಂದರೆ ಯಾರೊಡನೆ ಕೇಳುವುದು? ಊರಿನ ಹಣವಂತರಿಂದ ತೆಗೆದುಕೊಂಡ ಹಳೆಯ ಸಾಲವೇ ಸಾಕಷ್ಟಿತ್ತು. ಒಂದು ವೇಳೆ ಕೂಲಿ ಕೆಲಸ ಮಾಡುವುದೆಂದರೂ ಯಾರ ಕೆಲಸ ಮಾಡುವುದು? ತನ್ನ ಕೆಲಸವೇ ಒಂದೆಡೆ ಬಾಕಿ ಬಿದ್ದಿದೆ. ಕಬ್ಬಿಗೆ ನಿತ್ಯ ನೀರು ಹರಿಸಬೇಕಾಗಿದೆ. ಆದರೆ ಹೊಟ್ಟೆಗಿಲ್ಲದೆ ಹೇಗೆ ತಾನೆ ಕೆಲಸ ಮಾಡಲು ಸಾಧ್ಯ?

ಕತ್ತಲೆಯಾಗಿತ್ತು. ಚಿಕ್ಕ ಮಗು ಅಳುತ್ತಲಿತ್ತು. ತಾಯಿಯ ಹೊಟ್ಟೆಗೇ ಇಲ್ಲವಾದರೆ ಮಗುವಿಗೆ ಮೊಲೆಹಾಲು ಎಲ್ಲಿಂದ ಸಿಕ್ಕೀತು? ಸೋನೆಗೆ ಮನೆಯ ಕತೆ ಅರ್ಥವಾಗುತ್ತಿತ್ತು. ಆದರೆ ತೀರ ಚಿಕ್ಕವಳಾದ ರೂಪಳಿಗೇನು ಗೊತ್ತು? ಆವಳು ಸಲ ಸಲಕ್ಕೂ ರೊಟ್ಟಿ, ರೊಟ್ಟಿ, ಎಂಬುದಾಗಿ ಕೂಗಾಡುತ್ತಿದ್ದಳು. ಹಗಲಂತು ಉದುರಿ ಬಿದ್ದ ಮಾವಿನ ಕಾಯಿಯಲ್ಲಿ ಕಳೆಯುತ್ತಿತ್ತು. ರಾತ್ರಿಗಾದರೂ ಹೊಟ್ಟೆಗೆ ಸ್ವಲ್ಪ ಗಟ್ಟಿಯಾದ ವಸ್ತು ಬೇಡವೇ? ಹೋರಿರಾಮನು ಸಾಹುಕಾರ್ತಿಯ ಹತ್ತಿರ ಧಾನ್ಯ ಕಡ ಕೇಳಲಿಕ್ಕೆ ಹೋದ. ಆದರೆ ಅವಳು ಅಂಗಡಿಗೆ ಬಾಗಿಲು ಹಾಕಿ ಹೋಗಿಯಾಗಿತ್ತು. ಮಂಗಾರಾಮ ಸಾಹುಕಾರರ ಹತ್ತಿರ ಹೋದಾಗ, ಅವರು ಸಾಲ ಕೊಡಲಿಲ್ಲ – ಮಾತ್ರವೇ ಅಲ್ಲ – ನಾಲ್ಕು ಬಿಸಿ ಬಿಸಿ ಮಾತುಗಳನ್ನೂ ಹೇಳಿಬಿಟ್ಟರು.

ಮುಖ ಮುದುಡಿಸಿಕೊಂಡು ಬಂದು ಹೋರಿರಾಮ ಉದಾಸೀನನಾಗಿ ಕೂತಿದ್ದ. ಆಗ ಪುನ್ನಿಯು ಬಂದು ಅಡಿಗೆಮನೆಯತ್ತ ಇಣಿಕಿ – 'ಏನಿದು? ಇನ್ನೂ ಬೆಂಕಿ ಹಚ್ಚಲಿಲ್ಲ? ಅಡಿಗೆ ಹೊತ್ತಾಯಿತಲ್ಲ!' ಎಂದು ಕೇಳಿದಳು.

ಗೋಬರ ಮನೆ ಬಿಟ್ಟು ಹೋದ ಮೇಲೆ ದನಿಯಾ ಮತ್ತು ಪುನ್ನಿಯರೊಳಗೆ ಮಾತುಕತೆ ಆರಂಭವಾಗಿತ್ತು. ಹೋರಿರಾಮನ ಬಗೆಗೂ ಈಗ ಪುನ್ನಿ ಗೌರವ ತೋರಿಸುತ್ತಿದ್ದಳು. ಹೀರನನ್ನು ಆವಳೂ ಬೈಯುತ್ತಿದ್ದಳು – 'ಕೊಲೆಗಡಕ! ಗೋ ಹತ್ಯೆ ಮಾಡಿ ಓಡಿಬಿಟ್ಟನಲ್ಲ? ಮುಖಕ್ಕೆ ಮಸಿಯಾಗಿದೆ. ಆತ ಇನ್ನು ಹೇಗೆ ಹಿಂದೆ ಬಂದಾನು? ಹಾಗೆ ಒಂದು ವೇಳೆ ಬಂದರೂ ಮನೆಯೊಳಗೆ ಕಾಲಿಡ ಬಿಡಲಿಕ್ಕಿಲ್ಲ. ಗೋಹತ್ಯೆ ಮಾಡಿದಾಗ ಲಜ್ಜೆ ಕೂಡಾ ಆಗಲಿಲ್ಲವೇ? ಪೋಲಿಸಿನವರು ಬಂದು ಎಳೆದುಕೊಂಡು ಹೋಗಿ ರಾಗಿ ಬೀಸುವಂತೆ ಮಾಡಿದ್ದರೆ ಬಹಳ ಒಳ್ಳೆಯದಿತ್ತು.'

ಈಗ ದನಿಯಳು ಯಾವ ನೆಪವನ್ನೂ ಹೇಳಲಾರದವಳಾದಳು. ಹೀಗಾಗಿ ಇದ್ದುದನ್ನೇ ಹೇಳಿದಳು – 'ಅಡಿಗೆ ಯಾವುದರಿಂದ ಮಾಡುವುದು? ಮನೆಯಲ್ಲಿ ಧಾನ್ಯದ ಕಾಳೂ ಉಳಿದಿಲ್ಲ. ಮನೆಯ ಯಜಮಾನರಂತು ಜಾತಿ ಮುಂದಾಳುಗಳ ಹೊಟ್ಟೆ ಚೆನ್ನಾಗಿ ತುಂಬಿಸಿ ಬಿಟ್ಟರು. ಮಕ್ಕಳು ಮರಿ ಸಾಯಲಿ, ಬದುಕಲಿ – ಅವರಿಗೇನು? ಈಗ ಜಾತಿಯವರು ಕಣ್ಣೆತ್ತಿ ಸಹ ನೋಡುವುದಿಲ್ಲ.'

ಪುನ್ನಿಯ ಬೆಳೆ ಈ ಸಲ ಬಹಳ ಒಳ್ಳೆಯದಾಗಿತ್ತು. ಅದು ಹೋರಿರಾಮನ

ಪರಿಶ್ರಮದಿಂದಲೇ ಆದುದೆಂದು ಆವಳೇ ಒಪ್ಪಿಕೊಳ್ಳುತ್ತಿದ್ದಳು. ಹೀರನ ಕೈಯಲ್ಲಿ ಎಂದೂ ಇಷ್ಟು ಒಳ್ಳೆಯ ಬೆಳೆಯಾಗಿದ್ದಿಲ್ಲ. ಹಾಗಾಗಿ ಹೇಳಿದಳು – 'ನನ್ನ ಮನೆಯಿಂದೇಕೆ ಧಾನ್ಯ ತರಿಸಲಿಲ್ಲ? ಅದು ಕೂಡ ನಿಮ್ಮ ಯಜಮಾನರ ಪರಿಶ್ರಮದಿಂದಲೇ ಆದುದಲ್ಲವೇ? ಸುಖದ ದಿನಗಳಲ್ಲಿ ಕಾದಾಡಿದರೂ ದುಃಖ ಬಂದಾಗ ಒಟ್ಟಾಗಿಯೇ ಅಳಬೇಕಲ್ಲವೇ? ಮನುಷ್ಯನ ಮನಸ್ಸನ್ನು ತಿಳಿಯದೆ ಇರುವಷ್ಟು ಮೂಢಳೇ ನಾನು? ಆವರು ನನ್ನ ಯೋಗಕ್ಷೇಮ ನೋಡದೆ ಇರುತ್ತಿದ್ದರೆ ನನ್ನ ಗತಿ ಏನಾಗುತ್ತಿತ್ತೋ – ಏನೋ?'

ಹೀಗೆ ಹೇಳುತ್ತ ಪುನ್ನಿಯು ಸೋನೆಯನ್ನು ಕರೆದುಕೊಂಡು ಹೋದಳು. ಮರು ಕ್ಷಣ ಎರಡು ಹೊರೆ ಗೋದಿ ಬಂದು ಅಂಗಳದಲ್ಲಿ ಬಿತ್ತು. ಎರಡು ಮಣಕ್ಕೆ ಕಡಮೆ ಹೇಗೂ ಆಗಲಾರದು. ದನಿಯಾ ಏನೋ ಹೇಳಲಿಕ್ಕೆ ಬಾಯಿ ತೆರೆಯುವ ಮೊದಲೇ, ಪುನ್ನಿ ಪುನಃ ಮನೆ ಕಡೆಗೆ ಹೋಗಿದ್ದಳು. ಆ ಬಳಿಕ ಬರುವಾಗ ಒಂದು ಬುಟ್ಟಿ ತುಂಬ ತೊಗರಿಯ ಬೇಳೆಯನ್ನು ತಂದು ಅಕ್ಕನ ಮುಂದೆ ಇಟ್ಟುಬಿಟ್ಟಳು. ನಂತರ – 'ಒಳ ಹೋಗುವಾ, ನಾನೇ ಬೆಂಕಿ ಮಾಡುತ್ತೇನೆ' ಎಂದು ಕೆಲಸಕ್ಕೆ ತೊಡಗಿದಳು.

ದನಿಯಳು ನೋಡುವಾಗ ಬೇಳೆಯ ಮಧ್ಯ ಒಂದು ಪಾತ್ರೆಯಲ್ಲಿ ಐದಾರು ಸೇರು ಗೋದಿಯ ಹಿಟ್ಟು ಸಹ ಇತ್ತು. ಇಂದು ಅವಳು ಜೀವನದಲ್ಲಿ ಮೊದಲ ಸಲ ಸೋಲನ್ನೊಪ್ಪಿಕೊಳ್ಳಬೇಕಾಯಿತು. ಕಣ್ಣಲ್ಲಿ ನೀರು ಬಂದು ಅವಳು ಕೇಳಿದಳು – 'ಏನು? ಮನೆಯಲ್ಲಿದ್ದುದನ್ನೆಲ್ಲ ತಂದೆಯಾ? ಅಥವಾ ನಿನಗಾಗಿ ಏನಾದರೂ ಇಟ್ಟುಕೊಂಡಿರುವೆಯಾ?'

ಜಗುಲಿಯ ಮೇಲೆ ಮಗು ಹೊರಳಾಡುತ್ತ ಅಳುತ್ತ ಇದ್ದ. ಪುನ್ನಿ ಅವನನ್ನೆತ್ತಿಕೊಂಡು ಮುದ್ದಾಡುತ್ತ ಹೇಳಿದಳು – 'ನಿಮ್ಮ ದಯೆಯಿಂದ ಇನ್ನೂ ಧಾರಾಳ ಇದೆ. ಹದಿನೈದು ಮಣ ಗೋದಿ ಈ ವರ್ಷ ಆಗಿದೆ. ಹತ್ತು ಮಣ ಜೋಳ. ಐದು ಮಣ ಕಡಲೆಕಾಯಿ. ಇದರಲ್ಲಿ ನಿಮ್ಮೊಡನೆ ಗುಟ್ಟೇನು? ಎರಡು ಮನೆಗಳಿಗೂ ಧಾರಾಳ ಸಾಕು. ಇನ್ನು ಎರಡು ಮೂರು ತಿಂಗಳಲ್ಲಿ ಹೊಸ ಬೆಳೆ ಬರುವುದಿಲ್ಲವೇ? ಆ ಮೇಲೆ ದೇವರಿದ್ದಾನೆ.'

ಜುನಿಯಳು ಬಂದು ಚಿಕ್ಕತ್ತೆಯ ಕಾಲು ಮುಟ್ಟಿ ವಂದಿಸಿದಳು. ಪುನ್ನಿಯೂ ಆಶೀರ್ವದಿಸಿದಳು. ಸೋನೆಯು ಬೆಂಕಿ ಮಾಡಿದಳು. ರೂಪಾ ನೀರು ತಂದಳು ಅಂತು ನಿಂತುಹೋಗಿದ್ದ ಗಾಡಿ ಚಲಿಸಲಾರಂಭಿಸಿತು. ಹೀಗೆ ಉಳಿದವರು

ಕೆಲಸವನ್ನಾರಂಭಿಸಿದಾಗ ಪುನ್ನಿ ಮತ್ತು ದನಿಯಾ ಮಾತುಕತೆಗೆ ತೊಡಗಿದರು.

ಪುನ್ನಿ ಹೇಳಿದಳು – 'ನೀನು ಕೋಪಿಸುವುದಿಲ್ಲವಾದರೆ ನಾನೊಂದು ಮಾತು ಕೇಳಲೇ ?'

'ಅದಕ್ಕೇನು ? ಕೇಳು. ಕೋಪ ಏಕೆ ಮಾಡುವುದು ?'

'ನೀವು ಎಷ್ಟಾದರೂ ಜುನಿಯಳನ್ನು ಮನೆಯಲ್ಲಿಟ್ಟುಕೊಳ್ಳಬಾರದಿತ್ತು.'

'ಆಗ ಮತ್ತೇನು ಮಾಡುವುದಿತ್ತು ? ಅವಳೆಲ್ಲಿಯಾದರೂ ಬಾವಿಯಲ್ಲಿ ಬಿದ್ದು ಸಾಯುತ್ತಿದ್ದಳು.'

'ಹಾಗಲ್ಲ ; ಅವಳನ್ನು ನಮ್ಮ ಮನೆಯಲ್ಲಿ ಬಿಟ್ಟು ಬಿಡುತ್ತಿದ್ದರೆ ಯಾವ ಬೊಬ್ಬಾಟವೂ ಏಳುತ್ತಿರಲಿಲ್ಲ.'

'ಈಗಲೇನೋ ನೀನು ಹೀಗೆ ಹೇಳುತ್ತಿ. ಅಂದು ನಾನು ಕಳುಹಿಸಿದ್ದರೆ ನೀನು ಸಹ ಹಿಡಿಸೂಡಿಯಿಂದ ಹೊಡೆದೋಡಿಸುತ್ತಿದ್ದೆ.'

'ಇಷ್ಟು ಖರ್ಚಿನಲ್ಲಿ ಗೋಬರನ ಮದುವೆ ಕೂಡ ಆಗಿ ಹೋಗುತ್ತಿತ್ತು.,

'ನಮ್ಮ ಅದೃಷ್ಟವನ್ನು ಯಾರಿಂದ ಬದಲಾಯಿಸಲಾದೀತು ? ಈಗ ಇಷ್ಟರಿಂದಲೇ ನಮ್ಮ ಕಷ್ಟ ಪರಿಹಾರವಾಗಿಲ್ಲ. ಈಗ ಬೋಲಣ್ಣ ತನ್ನ ದನದ ಬೆಲೆ ಬೇರೆ ಕೇಳುತ್ತಿದ್ದಾನೆ. ಆ ಸಲ – ಎಲ್ಲಿಯಾದರೂ ತನಗೊಂದು ಹೆಣ್ಣು ನೋಡು – ಎಂದು ದನ ಕೊಟ್ಟಿದ್ದ. ಈಗ – ತನಗೆ ಹೆಣ್ಣು ಬೇಡ ; ದನದ ಹಣವೇ ಬರಬೇಕೆಂದು ಹೇಳುತ್ತಿದ್ದಾನೆ. ಅವನ ಇಬ್ಬರು ಹುಡುಗರೂ ದೊಣ್ಣೆ ಹಿಡಿದುಕೊಂಡು ತಿರುಗಾಡುತ್ತಿದ್ದಾರೆ. ಅವರ ಹತ್ತಿರ ಜಗಳಾಡಲಿಕ್ಕೆ ನಮಗೆ ಸಾಧ್ಯವಿದೆಯೇ ? ಈ ದನವೊಂದು ಬಂದು ನಮ್ಮ ಸರ್ವನಾಶವಾಗಿ ಹೋಯಿತು.'

ಮತ್ತೂ ಏನೇನೋ ಮಾತಾಡಿ ಪುನ್ನಿ ಹೊರಟುಹೋದಳು. ಹೋರಿರಾಮು ಇದನ್ನೆಲ್ಲ ನೋಡುತ್ತಲೇ ಇದ್ದ. ಅವನು ಒಳಗೆ ಬಂದು – 'ಪುನ್ನಿಯ ಮನಸ್ಸೇನೂ ಹಾಳಲ್ಲ' ಎಂದ.

'ಹೀರನ ಮನಸ್ಸು ಕೂಡಾ ಒಳ್ಳೆಯದೇ ಆಗಿತ್ತಲ್ಲವೇ ?'

ದನಿಯಾ ಧಾನ್ಯವನ್ನೆಲ್ಲ ಒಳಗಿಟ್ಟಳು. ಆದರೆ ಮನಸ್ಸಿನಲ್ಲಿ ಲಜ್ಜೆ ಅವಮಾನ ತೋರಿಬರುತ್ತಿತ್ತು. ಇಂದು, ತಾನೇ ಮುಖ ಕೆಳ ಮಾಡಬೇಕಾಯಿತಲ್ಲ – ಎಂದೆನಿಸಿತು ಅವಳಿಗೆ.

‘ ನಿನಗೆ ಇತರರ ಒಳ್ಳೆಯ ಗುಣ ತೋರುವುದೇ ಇಲ್ಲ. ಅದೇ ನಿನ್ನಲ್ಲಿರುವ ಕೆಟ್ಟ ಗುಣ. ’

‘ ಅಂತಹ ದೊಡ್ಡ ಒಳ್ಳೆಯ ಗುಣ ಏನು? ಅವಳ ಗಂಡ ಜೈಲಿಗೆ ಹೋಗದ ಹಾಗೆ ನನ್ನ ಗಂಡನೂ ಏನೆಲ್ಲ ಮಾಡಿಲ್ಲ? ಅವಳ ಧಾನ್ಯ ತೆಗೆದು ಕೊಂಡರೇನು? ಒಂದು ಕಾಳೂ ಬಾಕಿ ಇಡದೆ ಹಿಂದೆ ಕೊಡುವುದಿಲ್ಲವೇ? ಅದಕ್ಕೆ ಸಂದೇಹವೇ ಬೇಡ. ’

ಹೀಗೆ, ಪುನ್ನಿಯು ಅಕ್ಕನ ಮನೋಭಾವ ಗೊತ್ತಿದ್ದರೂ ಹೋರಿರಾಮನತ್ತ ನೋಡಿ ಆದಷ್ಟು ಸಹಾಯ ಮಾಡುತ್ತಲೇ ಇದ್ದಳು. ಅವನಲ್ಲಿ ಧಾನ್ಯ ಮುಗಿದಾಗ ಒಂದೆರಡು ಮಣ ತಂದು ಹಾಕುತ್ತಿದ್ದಳು. ಅಂತು ದಿನ ಸಾಗುತ್ತಲೇ ಇತ್ತು.

ಆಷಾಢ ಮಾಸ ಬಂದರೂ ಮಳೆ ಬರಲೇ ಇಲ್ಲ. ಅದರಿಂದ ಇವರ ಸಂಕಷ್ಟ ಇನ್ನೂ ಹೆಚ್ಚತೊಡಗಿತು. ಬಾವಿಯ ನೀರು ಇಂಗುತ್ತ ಬಂತು. ಕುಡಿಯಲಿಕ್ಕೂ ದೂರದ ನದಿಯಿಂದ ನೀರು ತರಬೇಕಾಗಿತ್ತು. ಹೀಗೆ, ಬರಗಾಲದ ಮೋಡ ಕವಿದಾಗ ಅಲ್ಲಲ್ಲಿ ಕಳವು ಸುಲಿಗೆಗಳಿಗೂ ಮೊದಲಾಯಿತು. ಇಡೀ ಪ್ರಾಂತದಲ್ಲೇ ಹಾಹಾಕಾರವೆದ್ದಿತು.

ಕಟ್ಟಕಡೆಗೆ ಭಾದ್ರಪದ ಮಾಸದಲ್ಲಿ ಮಳೆಗೆ ಮೊದಲಾಯಿತು. ಒಕ್ಕಲಿಗರೆಲ್ಲ ಸಂತೋಷದಿಂದ ಗದ್ದೆಯ ಕೆಲಸಕ್ಕಾರಂಭಿಸಿದರು. ಮೇಲಿಂದ ಬೀಳುವುದು ನೀರಿನ ಮಳೆಯಲ್ಲ – ಚಿನ್ನದ್ದೇ ಮಳೆ, ಎನ್ನುವಷ್ಟು ಸಂತೋಷ ಎಲ್ಲರಿಗೂ. ಮಕ್ಕಳು ಮರಿಗಳೆಲ್ಲ ಮಳೆಯಲ್ಲಿ ನೆನೆಯುತ್ತಾ ಕುಣಿದಾಡತೊಡಗಿದರು.

ಆದರೆ ಮಳೆ ಬರುವಾಗ ತಡವಾದ್ದರಿಂದ ಕಬ್ಬೆಲ್ಲ ಸುಟ್ಟುಹೋಯಿತು. ಧನಿಗಳಿಗೂ ಸಾಲಗಾರರಿಗೂ ಹಣ ಸಲ್ಲಿಸುವುದು ಹೇಗೆಂದು ಒಕ್ಕಲಿಗರೆಲ್ಲಾ ಕಂಗಾಲಾದರು. ಅಂತು ಈಗಲಾದರೂ ಸುವರ್ಣವೃಷ್ಟಿಯಾಯಿತಲ್ಲ !

ಈ ಸಂದರ್ಭದಲ್ಲೇ ಬೋಲನಿಗೂ ಎಚ್ಚರವಾಯಿತು. ಅವನ ಹಣ ಈ ವರೆಗೂ ಬಂದಿದ್ದಿಲ್ಲ. ಆದ್ದರಿಂದ ಅವನೇ ಸ್ವತಃ ಬಂದು ಕೋಪಗೊಂಡವನಾಗಿ ಗದರಿಸಿದ – ‘ ನಿನ್ನ ಮಾತು ಏನಾಯಿತು – ಹೋರಿಯಣ್ಣಾ ? ಕಬ್ಬು ಮಾರಿ ನನ್ನ ಹಣ ಸಲಾಯಿಸುವೆನೆಂದು ಹೇಳಿದ್ದೆ. ಈಗ ಕಬ್ಬೆಲ್ಲ ಹಾಳಾಗಿ ಹೋಯಿತು. ಒಳ್ಳೆಯ ಮಾತಿನಿಂದ ನನ್ನ ರೂಪಾಯಿ ಕೊಟ್ಟುಬಿಡು. ’

ಹೋರಿರಾಮ ತನ್ನ ಸಂಕಷ್ಟ ಕಥೆಯನ್ನೆಲ್ಲ ಹೇಳಿ ಬೇಡಿಕೊಂಡರೂ

ಬೋಲ ಮನೆ ಬಾಗಿಲಿಂದ ಏಳಲೇ ಇಲ್ಲ. ಕೊನೆಗೆ ಹೋರಿರಾಮ ವಿನಯದಿಂದ ಹೇಳಿದ – ‘ ಮಹಾರಾಯಾ ! ಈ ಸಲ ನನ್ನ ಕೈ ಬರಿದಾಗಿ ಹೋಗಿದೆ. ಸಾಲ ಕೊಡುವವರು ಸಹ ಯಾರೂ ಇಲ್ಲ. ನಾನೆಲ್ಲಿಂದ ತರಲಿ ? ಮನೆಯೊಳಗೆ ಒಂದು ಕಾಳು ಕೂಡ ಇಲ್ಲ. ನಿನಗೆ ನಂಬಿಕೆ ಇಲ್ಲವಾದರೆ ನೀನೇ ಒಳಗೆ ಬಂದು ಬೇಕಾದರೆ ನೋಡು. ’

ನಿರ್ಮಮಭಾವದಿಂದ ಬೋಲ ಹೇಳಿದ – ‘ ನಾನೇಕೆ ನಿನ್ನ ಮನೆ ನುಗ್ಗಿ ಜಪ್ತಿ ಮಾಡಬೇಕು ? ನಿನ್ನ ಮನೆಯಲ್ಲಿ ಹಣ ಇರಲಿ, ಇಲ್ಲದಿರಲಿ – ನೀನಂತು ಮಳೆಗಾಲ ಬರುವುದರೊಳಗೆ ಕೊಡುವೆನೆಂದು ಮಾತು ಕೊಟ್ಟಿದ್ದೆ. ಈಗ ಮಳೆಗಾಲ ಬಂತು. ಒಳ್ಳೆಯ ಮಾತಿನಿಂದ ಕೊಟ್ಟು ಬಿಡು – ಅಷ್ಟೆ.’

‘ ಹಾಗಾದರೆ ನೀನೇ ಹೇಳಪ್ಪ ; ನಾನೇನು ಮಾಡಲಿ ? ’

‘ ನಾನೇನು ಹೇಳುವುದು ? ’

‘ ನಾನು ನಿನ್ನ ಮೇಲೆಯೇ ಬಿಟ್ಟಿದ್ದೇನೆ. ’

‘ ಹಾಗಾದರೆ ನಾನು ನಿನ್ನ ಎರಡು ಎತ್ತುಗಳನ್ನೂ ಹೊಡೆದುಕೊಂಡು ಹೋಗುತ್ತೇನೆ. ’

ಹೋರಿರಾಮ ಅವನತ್ತ ವಿಸ್ಮಯಪೂರ್ಣ ನೇತ್ರಗಳಿಂದ ನೋಡಿದ. ಅವನ ಕಿವಿಗಳ ಮೇಲೆ ಅವನಿಗೇ ವಿಶ್ವಾಸ ಬರಲಿಲ್ಲ. ಬೋಲಣ್ಣ ಅವನನ್ನು ಸರ್ವಥಾ ಭಿಕಾರಿಯನ್ನಾಗಿ ಮಾಡಬಯಸುವನೇ ? ಎತ್ತುಗಳು ಹೋದರೆ ಅವನ ಎರಡು ಕೈಗಳೂ ತುಂಡಾಗಿ ಹೋದಂತಲ್ಲವೇ ?

ಹೋರಿರಾಮ ದೀನ ಸ್ವರದಿಂದ ಹೇಳಿದ – ‘ ಆ ಜೋಡೆತ್ತುಗಳನ್ನು ನೀನು ಕೊಂಡುಹೋದರೆ ನನ್ನ ಸರ್ವನಾಶವೇ ಆದಂತಾಯಿತು. ನಿನ್ನ ಧರ್ಮಬುದ್ಧಿಗೆ ಅದು ಸರಿ ಎಂದು ತೋರಿದರೆ ಸರಿ, ಹಾಗೇ ಮಾಡು. ’

‘ ನಿನ್ನ ಸರಿ, ತಪ್ಪು – ಅದೆಲ್ಲ ನನಗೆ ಗೊತ್ತಿಲ್ಲ. ನನಗೆ ನನ್ನ ರೂಪಾಯಿ ಬಂದರೆ ಸರಿ. ’

ಹೋರಿರಾಮ ಉಭಯ ಸಂಕಟದಲ್ಲಿ ಬಿದ್ದವನಾಗಿ ಹೇಳಿದ – ‘ ನೀನೇಕೆ ಇಷ್ಟೊಂದು ಹಗೆ ನನ್ನ ಮೇಲೆ ಸಾಧಿಸುತ್ತಿರುವೆ ಬೋಲಣ್ಣ ? ಜುನಿಯಾ ನನ್ನ ಮನೆಗೆ ಬಂದಿದ್ದಾಳೆ – ನಿಜ. ಆದರೆ ಅದರಿಂದ ನನಗೇನು ಸುಖ ಬಂತು ? ಮಗನೊಬ್ಬ ಕೈಯಿಂದ ತಪ್ಪಿಯೇ ಹೋದ. ೨೦೦ ರೂಪಾಯಿ ದಂಡ ಬೇರೆ ತೆರಬೇಕಾಯಿತು. ಈಗ ನೀನು ತಾಯಿಬೇರಿಗೇ ಕಣ್ಣಿಟ್ಟಿರುವೆ. ದೇವರೇ

ಬಲ್ಲ! ಆ ಘಟಿಂಗ ಏನು ಮಾಡಿದನೋ – ಏನೋ! ನಾನೆಣಿಸಿದ್ದೆ – ಆತ ಸಂಗೀತ ಕೇಳಲಿಕ್ಕೆ ಹೋಗುತ್ತಿರಬೇಕೆಂಬುದಾಗಿ. ನನಗಂತು, ಅರ್ಧ ರಾತ್ರಿಗೆ ಮನೆ ಬಾಗಿಲಿಗೆ ಜುನಿಯಾ ಬಂದಾಗಲೇ ಗೊತ್ತಾದುದು. ನಾನೀಗ ಅವಳನ್ನು ಮನೆಯಲ್ಲಿಟ್ಟುಕೊಳ್ಳದಿದ್ದರೆ– ನೀನೇ ಯೋಚಿಸು – ಅವಳೆಲ್ಲಿಗೆ ಹೋಗಬೇಕು ? '

ಜುನಿಯಾ ಬಾಗಿಲೆಡೆಯಲ್ಲಿ ನಿಂತುಕೊಂಡು ಈ ಮಾತುಗಳನ್ನು ಕೇಳುತ್ತಿದ್ದಳು. ಅವಳೀಗ ಬೋಲನನ್ನು ತನ್ನ ತಂದೆಯೆಂದು ಭಾವಿಸುತ್ತಿರಲಿಲ್ಲ. ಅವನು ಈಗ ಅವಳಿಗೆ ಶತ್ರು ಸಮಾನ. ಮಾವ ಎಲ್ಲಿಯಾದರೂ ಎತ್ತುಗಳನ್ನು ಕೊಟ್ಟುಬಿಡುವರೋ – ಎಂದು ಭಯಪಡುತ್ತಿದ್ದಳು ಅವಳು. ಆದ್ದರಿಂದ ಒಡನೆಯೇ ರೂಪಳನ್ನು ಕರೆದು – ' ಗದ್ದೆಯತ್ತ ಹೋಗಿ ಅಮ್ಮನನ್ನು ಬೇಗ ಬರಹೇಳು. ಆಗತ್ಯ ಕೆಲಸವಿದೆ – ಈಗಲೇ ಬರಬೇಕೆಂದು ಹೇಳು ' ಎಂದಳು.

ದನಿಯಳು ಗದ್ದೆಗೆ ಗೊಬ್ಬರ ಹಾಕಲು ಹೋಗಿದ್ದಳು. ಸೊಸೆಯ ಸಂದೇಶ ಕೇಳಿದೊಡನೆ ಬಂದು ಗಾಬರಿಯಿಂದ ಸಮಾಚಾರವೇನೆಂದು ಸೊಸೆಯೊಡನೆ ಕೇಳಿದಳು.

' ಅಪ್ಪ ಬಂದುದನ್ನು ನೀವು ನೋಡಿದಿರೇ ? '

' ಹೌದು, ನೋಡಿದೆ. ಕಟುಕನ ಹಾಗೆ ಕಣ್ಣು ಕೆಂಪು ಮಾಡಿಕೊಂಡು ಮನೆ ಬಾಗಿಲಲ್ಲಿ ಕೂತಿದ್ದಾನೆ! ನಾನು ಅವನ ಹತ್ತಿರ ಮಾತಾಡಲೇ ಇಲ್ಲ. '

' ನಮ್ಮ ಎರಡೂ ಎತ್ತುಗಳನ್ನು ಮಾವನ ಹತ್ತಿರ ಕೇಳುತ್ತಿದ್ದಾರೆ. '

ದನಿಯಳ ಎದೆ ' ಜುಂ ' ಎಂದಿತು.

' ಜೋಡೆತ್ತುಗಳನ್ನು ಕೇಳುತ್ತಿರುವರೇ ? '

' ಹೌದು. ಒಂದೇ ಪೂರ್ತಿ ರೂಪಾಯಿ ಕೊಡು ; ಇಲ್ಲವಾದರೆ ಎತ್ತು ಬಿಡಿಸಿಕೊಂಡು ಹೋಗುತ್ತೇನೆ, ಎಂದು ಗದರಿಸುತ್ತಿರುವರು. '

' ನಿನ್ನ ಮಾವ ಆದಕ್ಕೇನೆಂದರು ? '

' ಎತ್ತು ಬಿಡಿಸಿಕೊಂಡು ಹೋಗುವುದು ಸರಿ, ಧರ್ಮ, ಎಂದು ತೋರಿದರೆ ಬಿಡಿಸಿಕೊಂಡು ಹೋಗು – ಎಂದರು. '

' ಹಾಗಾದರೆ ಬಿಡಿಸಿಕೊಂಡು ಹೋಗಲಿ–ನೋಡುವಾ. ಒಂದಲ್ಲ ಒಂದು ದಿನ, ಈ ನಿನ್ನಪ್ಪ, ಬಿಕ್ಕೆ ಬೇಡುವಂತೆ ಆಗದೆ ಹೋಗಲಿಕ್ಕಿಲ್ಲ. '

ಅದೇ ಹುರುಪಿನಿಂದ ಅವಳು ಹೊರಗೆ ಬಂದು ಹೇಳಿದಳು – ' ಮಹಾರಾಯರೇ ! ಅವರು ಎತ್ತುಗಳನ್ನು ಕೇಳುತ್ತಿದ್ದಾರಾದರೆ ಏಕೆ ಕೊಟ್ಟುಬಿಡುವುದಿಲ್ಲ ? ಅವರ ಹೊಟ್ಟೆ ತುಂಬಲಿ ! ನಮಗೆ ದೇವರಿದ್ದಾನೆ ! ನಮ್ಮ ಕೈಯನ್ನೇನೂ ಕಡಿದುಹಾಕಲಿಕ್ಕಿಲ್ಲವಲ್ಲ ? ಈ ವರೆಗೆ ನಾವು ನಮ್ಮದೇ ಕೆಲಸ ಮಾಡುತ್ತಿದ್ದೆವು. ಇನ್ನು ಇನ್ನೊಬ್ಬರ ಕೂಲಿ ಮಾಡಿದರಾಯಿತು. ದೇವರ ದಯೆ ಇದ್ದರೆ ಎತ್ತು ಕೋಣ – ಎಲ್ಲ ಪುನಃ ಬಂದೀತು. ಅಥವಾ ಬಾರದಿದ್ದು, ಕೂಲಿ ಮಾಡಿಕೊಂಡೇ ಇದ್ದರೂ ಕೆಟ್ಟುಹೋಗುವುದಾದರೂ ಏನು ? ಹಾಗೆ ಕೂಲಿಗಾರರಾದರೆ ಗೇಣಿ ಕಾಣಿಕೆಗಳ ತೊಂದರೆಯಾದರೂ ತಪ್ಪೀತು. ಇವರು ನಮಗೆ ಒಳಿತು ಕೋರುವವರಲ್ಲವೆಂದು ನನಗೆ ಗೊತ್ತಿದ್ದಿಲ್ಲ. ಇಲ್ಲವಾದರೆ, ಒಂದು ದನ ನಮಗೆ ಕಳಿಸಿಕೊಟ್ಟುಬಿಟ್ಟು ಎಷ್ಟೆಲ್ಲ ಅನರ್ಥ ನಮ್ಮ ತಲೆಯ ಮೇಲೆ ಹೊರಿಸಿದರು ! ಆ ದನ ಬಂದ ಮೇಲೆ ನಮ್ಮ ಮನೆಯೇ ಬೋರಲು ಬಿದ್ದುಹೋಯಿತು. '

ಅಡಗಿಸಿಟ್ಟುಕೊಂಡಿದ್ದ ಅಸ್ತ್ರವನ್ನು ಹೊರಗೆ ತೆಗೆಯಲಿಕ್ಕೆ ಬೋಲನಿಗೆ ಸಂದರ್ಭ ಸಿಕ್ಕಿತು. ಇವರ ಕೈಯಲ್ಲಿ ಜೋಡೆತ್ತು ವಿನಾ ಬೇರೇನೂ ಉಳಿದಿಲ್ಲವೆಂದೂ ಅವನಿಗೆ ಖಚಿತವಾಯಿತು. ಎತ್ತುಗಳನ್ನು ಉಳಿಸಲಿಕ್ಕಾಗಿ ಇವರು ಯಾವ ಕೆಲಸಕ್ಕೂ ಹಿಂದೆ ಸರಿಯುವುದಿಲ್ಲವೆಂಬುದೂ ಗೊತ್ತಾಯಿತು. ಆದ್ದರಿಂದ ಈಗಲೇ ಒಂದು ಕೈ ನೋಡಬೇಕೆಂದೆಣಿಸಿ ಅವನು ಹೇಳಿದ – ' ಹಾಗಾದರೆ ನಾವೆಲ್ಲ ಮರ್ಯಾದೆ ಕಳೆದುಕೊಂಡಿರಬೇಕು, ನೀವು ಮಾತ್ರ ಸುಖವಾಗಿರಬೇಕು ಎಂದು ಬಯಸುವಿರೇ ? ಅದಾಗಲಿಕ್ಕಿಲ್ಲ. ನೀವು ನಿಮ್ಮ ಇನ್ನೂರರ ದಂಡಕ್ಕಾಗಿ ಅಳುತ್ತಾ ಇದ್ದೀರಿ. ಅತ್ತ ನಮ್ಮ ಒಂದು ಲಕ್ಷ ರೂಪಾಯಿಯ ಮಾನ ಮರ್ಯಾದೆ ನೀರು ಪಾಲಾಯಿತು. ಆದ್ದರಿಂದ ನೀವು ಹೇಗೆ ಜುನಿಯಳನ್ನು ಮನೆಯೊಳಗೆ ತೆಗೆದುಕೊಂಡಿದ್ದೀರೋ – ಅದೇ ರೀತಿ ಅವಳನ್ನೀಗ ಹೊರ ಮಾಡಬೇಕು. ಅದರಲ್ಲೇ ನಿಮಗೆ ಕ್ಷೇಮವಿದೆ. ಹಾಗಾದರೆ ನಾನು ನಿಮ್ಮ ಎತ್ತುಗಳನ್ನು ಕೇಳುವುದೂ ಇಲ್ಲ, ದನದ ಕ್ರಯಕ್ಕಾಗಿ ಬರುವುದೂ ಇಲ್ಲ. ಅವಳೀಗ ನಮ್ಮ ಮೂಗು ಕೊಯಿಸಿದ್ದಾಳೆ. ಅವಳು ಕೂಡ, ಅದಕ್ಕಾಗಿ ಬೀದಿ ಬೀದಿ ಅಲೆದಾಡಿ ಕಷ್ಟಪಡುವುದನ್ನು ನಾನು ನೋಡಬೇಕು. ಅವಳು ಇಲ್ಲಿ ದೊಡ್ಡ ರಾಣಿಯಾಗಿ ಕೂತುಕೊಂಡಿರುವುದು! ನಾವು ಅಲ್ಲಿ ಮುಖಕ್ಕೆ ಮಸಿ ಹಚ್ಚಿಕೊಂಡು ಅವಳಿಗಾಗಿ ಅಳುತ್ತಿರುವುದು ! ಇದು ಹೇಗಾ

ದೀತು ? ಅವಳು ನನ್ನ ಮಗಳು ಹೌದು. ನಾನು ಅವಳನ್ನು ತೊಡೆಯ ಮೇ
ಕೂರಿಸಿ ಆಡಿಸಿದ್ದೇನೆ, ನಿಜ. ಅದು ದೇವರಿಗೆ ಗೊತ್ತಿದೆ. ನಾನು ಅವಳನ
ಯಾವ ರೀತಿಯಲ್ಲೂ ಗಂಡು ಮಕ್ಕಳಿಂದ ಕಡಮೆಯಾಗಿ ತಿಳಿದಿದ್ದಿಲ್ಲ. ಆದ
ಇಂದು ಮಾತ್ರ ಅವಳು ಭಿಕ್ಷೆ ಬೇಡುವುದನ್ನು, ಬೀದಿ ಬೀದಿ ಅಲೆಯುವುದನ್ನು
ನೋಡಿಯೇ ನನ್ನ ಹೃದಯಕ್ಕೆ ಶಾಂತಿ ದೊರಕೀತು. ತಂದೆಯಾದ ನನಗ
ಹೀಗೆ ತೋರಬೇಕಾದರೆ – ನನ್ನ ಮನಸ್ಸಿನಲ್ಲಿ ಎಷ್ಟು ಸಂಕಟವಾಗುತ್ತಿದೆ
ಎಂದು ನೀವೇ ಯೋಚಿಸಿ. ಅವಳಿಂದಾಗಿ ನಮ್ಮ ಏಳು ವಂಶಗಳ ಹೆಸರ
ಕೆಟ್ಟು ಹೋಯಿತು. ಅಂಥವಳನ್ನು ನೀವು ಮನೆಯಲ್ಲಿಟ್ಟುಕೊಳ್ಳುವುದ
ಸರಿಯೇ ? ಇದೀಗ ನೀವು ನನಗೆ ಮಾಡಿದ ಅತಿ ನೀಚತರದ ಅನ್ಯಾಯ, ಅ
ಮಾನ – ಅಲ್ಲವೇ ? '

ಒಡನೆಯೇ ಧನಿಯಳು ಕಲ್ಲುತುಂಡುಗಳನ್ನು ತೆಗೆದು ರಭಸದಿಂ
ಬೀಸಾಡುವವಳಂತೆ ಹೇಳತೊಡಗಿದಳು – ' ಮಹಾರಾಯಾ ! ನನ್ನ ಮಾತ
ಕೂಡಾ ಸ್ವಲ್ಪ ಕೇಳಿಕೋ. ನೀನು ಬಯಸಿದ್ದು ಎಷ್ಟಕ್ಕೂ ಆಗಲಾರದು
ಜುನಿಯಳು ನಮ್ಮ ಜೀವದೊಡನೆ ಒಂದಾಗಿದ್ದಾಳೆ. ಅವಳನ್ನು ಬಿಟ್ಟುಕೊಡ
ವುದು – ಈ ಜನ್ಮದಲ್ಲಿ ಬಿಟ್ಟು ಏಳೇಳು ಜನ್ಮದಲ್ಲಿಯೂ ಆಗಲಾರದು. ನಿ
ಗಷ್ಟು ಹಟ ಇದ್ದರೆ ಎತ್ತುಗಳನ್ನು ಬಿಡಿಸಿಕೊಂಡು ಹೋಗು. ಅದರಿಂದ ನಿನ
ತುಂಡಾದ ಮೂಗು ಪೂರ್ತಿಯಾಗುವುದಿದ್ದರೆ ಮಾಡಿಕೋ. ಹೋ
ಮರ್ಯಾದೆ ಬರುವುದಿದ್ದರೆ ಬರಿಸಿಕೋ. ಜುನಿಯೂ ಮಾಡಿದ್ದು ತಪ್ಪಿ
ಬಹುದು. ಅವಳು ನನ್ನ ಮನೆಯೊಳಗೆ ಕಾಲಿಟ್ಟಾಗ, ಹಿಡಗುಲು ತೆಗೆದ
ಹೊಡೆಯಲಿಕ್ಕೆ ನಾನೂ ಹೊರಟಿದ್ದೆ. ಆದರೆ ಅವಳ ಕಣ್ಣುಗಳಿಂದ ಸರಸರನ
ಕಣ್ಣೀರು ಸುರಿಯುವುದನ್ನು ನೋಡಿದಾಗ ನನಗೆ ದಯೆ ತೋರಿತು. ನೀನೀಗ
ಮುದುಕನಾಗಿ ಹೋದೆ. ಹಾಗಿದ್ದರೂ ಮದುವೆ ಮಾಡಿಕೊಳ್ಳುವ ಹುಚ್ಚು
ಇನ್ನೂ ನಿನಗೆ ಬಿಟ್ಟಿಲ್ಲ ! ಆದರೆ ಅವಳಿನ್ನೂ ಎಳೆಯ ಹುಡುಗಿ. ಅದನ್ನಾದರೂ
ನೀನು ಯೋಚಿಸಬೇಡವೇ ? '

ಬೋಲನು ಕಿಡಿ ಕಾರುವ ಕಣ್ಣುಗಳಿಂದ ಹೋರಿರಾಮನತ್ತ ನೋಡಿ
ಹೇಳಿದ – ' ಹೋರಿರಾಮ, ಇವಳ ಮಾತು ಕೇಳಿದೆಯಲ್ಲ ! ಇನ್ನು ನನ್ನ
ತಪ್ಪಿಲ್ಲ. ನಾನಿನ್ನು ಎಷ್ಟಕ್ಕೂ ಎತ್ತುಗಳನ್ನು ಹೊಡೆದುಕೊಂಡು ಹೋಗದೇ
ಬಿಡಲಿಕ್ಕಿಲ್ಲ. '

ಹೋರಿರಾಮನೂ ದೃಢತೆಯ ಸ್ವರದಿಂದ ಹೇಳಿದ — 'ನಿನಗಿಷ್ಟ ಬಂದಂತೆ ನೀನು ಮಾಡಬಹುದು.'

'ನನ್ನ ಎತ್ತುಗಳನ್ನು ಎಳೆದುಕೊಂಡು ಹೋದನೆಂಬುದಾಗಿ ಮತ್ತೆ ಅಳ ಬಾರದು.'

'ಇಲ್ಲ, ಅಳುವುದಿಲ್ಲ.'

ಬೋಲನು ಎತ್ತುಗಳ ಹಗ್ಗವನ್ನು ಬಿಚ್ಚ ಹೊರಟಿದ್ದನು ಮಾತ್ರ–ಜುನಿಯಳು ತನ್ನ ಹರಿದ ಬಟ್ಟೆಯನ್ನು ಸರಿಮಾಡಿಕೊಳ್ಳುತ್ತ, ಮಗುವನ್ನು ಹೆಗಲ ಮೇಲೆ ಹಾಕಿಕೊಂಡು ಹೊರ ಬಂದು ನಡುಗುತ್ತಿರುವ ಸ್ವರದಿಂದ ಹೇಳಿದಳು– 'ಅಪ್ಪಾ, ಇಕೋ ಈಗಲೇ ಈ ಮನೆಯಿಂದ ಹೊರಟೆ. ನಿನ್ನ ಆಪೇಕ್ಷೆಯಂತೆಯೇ ಬೀದಿ ಬೀದಿ ಬಿಕ್ಕೆಬೇಡಿ, ನನ್ನ ಮಗುವಿನ ಹೊಟ್ಟೆ ತುಂಬಿಸುತ್ತೇನೆ. ಬಿಕ್ಕೆ ಕೂಡಾ ಸಿಗದೆ ಹೋದಾಗ ಎಲ್ಲಿಯಾದರೂ ಬಾವಿಗೆ ಬಿದ್ದು ಪ್ರಾಣಕೊಡುತ್ತೇನೆ.'

ಬೋಲ ಸಿಡುಕಿನಿಂದ ನಡುಗುತ್ತ ಹೇಳಿದ– 'ನನ್ನ ಕಣ್ಣೆದುರಿಂದ ನಡೆ ಹೋಗು. ನಿನ್ನ ಸುಟ್ಟ ಮುಖ ನೋಡುವ ದುರದೃಷ್ಟ ನನಗೆ ಬಾರದೇ ಹೋಗಲಿ. ಜಾತಿಗೆಟ್ಟ ಕುಲಕಲಂಕಿನಿ! ನೀನಿನ್ನು ಬಾವಿಯಲ್ಲಿ ಬಿದ್ದು ಸಾಯುವುದೇ ಲೇಸು.'

ಜುನಿಯಳು ಅವನತ್ತ ಒಮ್ಮೆ ಕಣ್ಣೆತ್ತಿ ನೋಡಿದಳು. ಅವಳ ದೃಷ್ಟಿಯಲ್ಲಿ ಕ್ರೋಧ, ಪಶ್ಚಾತ್ತಾಪ, ದುಃಖ – ಎಲ್ಲವೂ ಸೇರಿತ್ತು. ಭೂಮಿಯೇ ಒಡೆದು ತಾನು ಅದರಲ್ಲಿ ಸೇರಿಹೋದರಾದೀತೆಂದು ಅವಳಿಗೆ ತೋರಿತು. ಅವಳು ಹಾಗೆಯೇ ಮುಂದೆ ಹೋದಳು.

ಆದರೆ ಅವಳು ಎರಡು ಹೆಜ್ಜೆ ಸಹ ಮುಂದೆ ಇಟ್ಟದ್ದಿಲ್ಲ. ಅಷ್ಟರಲ್ಲಿ ದನಿಯೂ ಓಡಿಹೋಗಿ ಅವಳ ಕೈ ಹಿಡಿದು ಕೋಪದಿಂದಲೂ ಸ್ನೇಹಯುಕ್ತ ಸ್ವರದಿಂದಲೂ ಹೇಳಿದಳು – 'ಎಲ್ಲಿ ಹೋಗುವೆ ಮಗಳೇ? ನಡೆ, ಒಳಗೆ ಹೋಗು. ಇದು ಈಗ ನಿನ್ನ ಮನೆ. ನಾವು ಜೀವದಲ್ಲಿರುವಾಗಲೂ, ಸತ್ತ ಮೇಲೂ– ಇದು ನಿನ್ನ ಮನೆ. ಬಾವಿಯಲ್ಲಿ ಬಿದ್ದು ಸಾಯುವುದು ನೀನಲ್ಲ. ತಮ್ಮ ಸಂತಾನದ ಮೇಲೆ ಯಾರಿಗೆ ಸ್ನೇಹವಿಲ್ಲವೋ - ಅವರು ಬಾವಿಗೆ ಬಿದ್ದು ಪ್ರಾಣ ತೆಗೆದುಕೊಳ್ಳಲಿ. ಬೋಲಣ್ಣಾ! ಇಂತಹ ಮಾತು ಹೇಳುವಾಗ ನಿನಗೆ ನಾಚಿಕೆ ಕೂಡಾ ಆಗುವುದಿಲ್ಲವೇ? ಅದರ ಮೇಲೆ ನನ್ನನ್ನು ಹೀಯಾಳಿಸು

ವುದು ಬೇರೆ! ನೀಚ! ನಡೆ, ಎತ್ತುಗಳನ್ನು ಹೊಡೆದುಕೊಂಡು. ಬೇಕಾದರೆ ಅದರ ರಕ್ತವನ್ನು ಸಹ ಕುಡಿ.'

ಜುನಿಯಳು ಅಳುತ್ತಳುತ್ತ ಹೇಳಿದಳು – 'ಅಮ್ಮಾ, ಹೆತ್ತ ತಂದೆಯೇ ನನ್ನನ್ನು ಧಿಕ್ಕರಿಸಿದ ಮೇಲೆ ನಾನು ಬಾವಿಗೆ ಬಿದ್ದು ಸಾಯುವುದೇ ಲೇಸು. ಭಾಗ್ಯಹೀನಳಾದ ನನ್ನಿಂದಾಗಿಯೇ ನಿಮಗೂ ದುಃಖದ ಮೇಲೆ ದುಃಖ ಬರುತ್ತಲಿದೆ. ನಿಮ್ಮ ಮನೆಯೇ ಮಣ್ಣುಪಾಲಾಯಿತು. ಆದರೂ ನೀವು ನೋಡಿದಷ್ಟು ಪ್ರೀತಿಯಿಂದ ನನ್ನ ಹೆತ್ತ ತಾಯಿಯೂ ನೋಡಿದ್ದಿಲ್ಲ. ದೇವರು ಬರುವ ಜನ್ಮದಲ್ಲಾದರೂ ನಿಮ್ಮ ಹೊಟ್ಟೆಯಲ್ಲಿ ನನ್ನನ್ನು ಹುಟ್ಟುವಂತೆ ಮಾಡಲಿ. ಇದೇ ನನ್ನ ಕೊನೆಯ ಅಭಿಲಾಷೆ.'

ದನಿಯಳು ಅವಳನ್ನು ಅಪ್ಪಿಕೊಂಡು ಹೇಳಿದಳು – 'ಅತ ನಿನ್ನ ತಂದೆಯಲ್ಲ, ಹಗೆ. ನಿನ್ನ ತಾಯಿ ಜೀವಿಸಿರುತ್ತಿದ್ದರೆ ಅವನಿಗೆ ಬುದ್ಧಿ ಹೇಳುತ್ತಿದ್ದಳು. ಇನ್ನು ಈಗ ಪುನಃ ಮದುವೆ ಮಾಡಿಕೊಳ್ಳುತ್ತಾನಂತೆ. ಬಂದ ಆ ಹೆಂಗುಸು ಇವನಿಗೆ ಮೆಟ್ಟನಿಂದ ಹೊಡೆಯುವಾಗಲಾದರೂ ಬುದ್ಧಿ ಬರಲಿ!'

ಜುನಿಯಳು ಅತ್ತೆಯೊಡನೆ ಮನೆಯೊಳಗೆ ಸೇರಿದಳು. ಅತ್ತ ಬೋಲನೂ ಹೋಗಿ ಎತ್ತುಗಳನ್ನುಗೂಟದಿಂದ ಬಿಡಿಸಿ ಹೊಡೆದುಕೊಂಡು ಹೊರಟ. ಅವನು ಮನಸ್ಸಿನಲ್ಲೇ ಎಣಿಸತೊಡಗಿದ — 'ಈಗ ಬೇಸಾಯ ಮಾಡಲಿ, ನೋಡುವಾ. ಇವರೆಲ್ಲ ನನ್ನ ಮರ್ಯಾದೆ ಕಳೆಯಲು ಹೊರಟಿರುವರಲ್ಲ! ಇಲ್ಲವಾದರೆ ಯಾವ ಮಾನವಂತ ಈ ಕುಲಗೆಟ್ಟವಳನ್ನು ಮನೆಯೊಳಗಿಟ್ಟುಕೊಂಡಾನು? ಇವರಿಗೆ ನಾಚಿಕೆ ಸಹ ಇಲ್ಲವಲ್ಲ! ಆದರ ಮೇಲೆ ಆ ಗೈಯಾಳಿಯ ಧೈರ್ಯ ನೋಡಬಾರದೇ? ನನ್ನ ಕಣ್ಣಮುಂದೆ ಬಂದು ನಿಂತಳಲ್ಲವೇ? ಬೇರೆ ಹುಡುಗಿಯಾಗಿದ್ದರೆ ಮುಖ ಸಹ ತೋರಿಸುತ್ತಿರಲಿಲ್ಲ. ಎಲ್ಲರೂ ಕಡು ಮೂರ್ಖರು. ಅವಳಿಗೆ ಅಪ್ಪನ ಮನೆಯೇ ಆಗದ ಮೇಲೆ ಯಾರ ಮನೆಯೂ ಆಗದೆಂದು – ಇವರು ಯೋಚಿಸುವುದಿಲ್ಲವಲ್ಲ! ಕಾಲವೇ ಕೆಟ್ಟು ಹೋಗಿದೆ! ಇಲ್ಲವಾದರೆ ಆ ಬಜಾರಿ ದನಿಯಳನ್ನು ನಡು ಬೀದಿಯಲ್ಲಿ ಜುಟ್ಟು ಹಿಡಿದೆಳೆಯದೆ ಬಿಡುತ್ತಿದ್ದೇನು ನಾನು? ಅವಳು ಏನೆಲ್ಲ ಬೈದುಬಿಟ್ಟಳು ನನಗೆ!'

ಬೋಲ ಆ ಜೋಡೆತ್ತುಗಳನ್ನು ನೋಡಿದ. ಆಹಾ! ಎಷ್ಟು ಚನ್ನಾಗಿವೆ! ಜೋಡಿ ಕೂಡ ಸರಿಯಾದುದೇ. ನೂರು ರೂಪಾಯಿ ಕಣ್ಣುಮುಚ್ಚಿ ಯಾರೂ ಕೊಟ್ಟಾನು. ನನ್ನ ಹಣ ಬಡ್ಡಿ ಸಮೇತ ಬಂದುಹೋದಂತೆಯೇ.

ಅವನು ಆ ಗ್ರಾಮದಿಂದ ಪೂರ್ತಿ ಹೊರಗೆ ಹೋಗಿರಲಿಲ್ಲ. ಹಿಂದಿನಿಂದ ೨೦–೩೦ ಜನ ಓಡಿಕೊಂಡು ಬರುವುದು ತೋರಿಬಂತು. ಆ ಗುಂಪಿನಲ್ಲಿ– ದಾತಾದೀನ್ ಪಂಡಿತರು, ಪಟೇಶ್ವರೀಲಾಲರು, ಸೋಬ – ಎಲ್ಲರೂ ಇದ್ದರು. ಬೋಲನ ರಕ್ತ ಹೆಪ್ಪುಗಟ್ಟಿ ಹೋಯಿತು. ಈ ಸೇನೆಯಿಂದಾಗಿ ಜೋಡೆತ್ತು ತಪ್ಪಿ ಹೋಗಬಹುದು. ಅದರ ಮೇಲೆ ತನ್ನ ಎಲುಬು ಕೂಡ ಪುಡಿಯಾಗ ಬಹುದು. ಹೀಗೆ ಸ್ವಲ್ಪ ಯೋಚಿಸಿ ಅವನು ಗಟ್ಟಿಯಾಗಿ ನಿಂತುಬಿಟ್ಟ. ಸಾಯು ವುದು ನಿಜವೆಂದಾದ ಮೇಲೆ ಕಾದಾಡಿ ಸಾಯುವುದೇ ಒಳ್ಳೆಯದಲ್ಲವೇ?

ದಾತಾದೀನ್ ಪಂಡಿತರು ಹತ್ತಿರ ಬಂದು ಹೇಳಿದರು – 'ಇದೆಂತಹ ಪೋಕರಿತನ ಬೋಲಾ ? ಈ ಸಮಯದಲ್ಲಿ ಅವನ ಎತ್ತುಗಳನ್ನು ಬಿಡಿಸಿ ಕೊಂಡು ಹೊರಡುವುದೇ ? ಅವನು ಬಾಯಿ ಬಿಡದ ಮಾತ್ರಕ್ಕೆ ನೀನು ದೊಡ್ಡ ವೀರನಾಗಿ ಹೋದೆಯಲ್ಲ ! ನಾವೆಲ್ಲ ನಮ್ಮ ನಮ್ಮ ಕೆಲಸದಲ್ಲಿ ತೊಡಗಿದ್ದೆವು. ಹಾಗಾಗಿ ಯಾರಿಗೂ ಸುದ್ದಿ ಕೂಡಾ ಆಗಲಿಲ್ಲ. ಹೋರಿರಾಮ ಸ್ವಲ್ಪ ಕೈ ಸನ್ನೆ ಮಾಡಿದ್ದರೆ ಸಾಕಿತ್ತು. ನಿನ್ನ ರೋಮ ರೋಮ ಪುಡಿಯಾಗಿ ಹೋಗು ತ್ತಿತ್ತು. ಒಳ್ಳೆಯದಾಗಬೇಕೆಂದಿದ್ದರೆ ಎತ್ತುಗಳನ್ನು ಹಿಂದಕ್ಕೆ ತಿರುಗಿಸು. ಸ್ವಲ್ಪವಾದರೂ ದಯೆ ದಾಕ್ಷಿಣ್ಯ ಬೇಡವೇ ?'

ಪಟೇಶ್ವರೀಲಾಲರೆಂದರು – 'ನಿನ್ನ ಈ ಕೆಲಸ ನ್ಯಾಯ ಸಂಮತವೇ – ಬೋಲಾ ? ನಿನಗೆ ಅವನಿಂದ ಹಣ ಬರಲಿಕ್ಕಿದ್ದರೆ ಕೋರ್ಟಿಗೆ ಹೋಗಿ ಡಿಕ್ರಿ ಮಾಡಿಸು. ಅವನ ಎತ್ತುಗಳನ್ನು ಬಿಡಿಸಿಕೊಂಡು ಹೋಗುವ ಅಧಿಕಾರ ನಿನ ಗೆಲ್ಲಿಂದ ? '

ಬೋಲನೂ ಸ್ವಲ್ಪ ಮೆತ್ತಗಾಗಿ ಹೇಳಿದ – 'ಆದರೆ ನಾನೇನೂ ಬಲಾ ತ್ಕಾರ ಮಾಡಲಿಲ್ಲ ಒಡೆಯಾ ! ಹೋರಿರಾಮನೇ ಸ್ವತಃ ಕೊಟ್ಟಿದ್ದಾನೆ. '

ಆಗ ಪಟೇಶ್ವರೀಲಾಲರು ಸೋಬನಿಗೆ ಹೇಳಿದರು – 'ಸೋಬಾ, ನೀನು ಈ ಎತ್ತುಗಳನ್ನು ಹಿಂದಕ್ಕೆ ಹೊಡೆದುಕೊಂಡು ಹೋಗು. ಯಾವ ಬೇಸಾಯ ಗಾರನಾದರೂ ಈ ಸಮಯದಲ್ಲಿ ತನ್ನ ಎತ್ತುಗಳನ್ನು ಸ್ವತಃ ಕೊಟ್ಟಾನೇ ?'

ಬೋಲನು ಎತ್ತುಗಳ ಮುಂದುಗಡೆ ಅಡ್ಡ ನಿಂತು – 'ನನ್ನ ರೂಪಾಯಿ ನನಗೆ ಕೊಡಿಸಿ. ಮತ್ತೆ ಎತ್ತಿನ ವಿಚಾರ ಮಾತಾಡಿ ' ಎಂದ.

'ನಿನಗೆ ರೂಪಾಯಿ ಬರಬೇಕಿದ್ದರೆ ಕೋರ್ಟಿಗೆ ಹೋಗಿ ಕಟ್ಟಳೆ ಹಾಕು. ನಾವೀಗ ಎತ್ತುಗಳನ್ನು ಎಷ್ಟಕ್ಕೂ ಬಿಟ್ಟುಕೊಡಲಾರೆವು. ಅಡ್ಡ ಬಂದರೆ

ಬೆನ್ನುಮೂಳೆ ಮುರಿದೇವು. ಹಾಗೇನು ? ರೂಪಾಯಿ ನಗದಾಗಿ ಕೊಟ್ಟೆರು ವೆಯಾ ? ಒಂದು ಗತಿಗೆಟ್ಟ ದನವನ್ನು ಕುತ್ತಿಗೆಗೆ ಕಟ್ಟಿಬಿಟ್ಟು, ಈಗ ಅವನ ಎತ್ತಿನ ಜೊತೆಯನ್ನು ಹೊಡೆದುಕೊಂಡು ಹೋಗುವನಂತೆ !'

ಬೋಲನು ಎತ್ತುಗಳಿಗೆ ಅಡ್ಡವಾಗಿ ನಿಂತವನು ಕದಲಲಿಲ್ಲ. ಸತ್ತರೂ ಬಿಡಲಾರೆ – ಎಂಬಂತೆ ಬಲವಾಗಿ ನಿಂತುಬಿಟ್ಟ.

ಆಗ ದಾತಾದೀನ್ ಪಂಡಿತರು ಒಂದು ಹೆಜ್ಜೆ ಮುಂದಕ್ಕಿಟ್ಟು ತಮ್ಮ ಬಗ್ಗಿ ಹೋದ ಬೆನ್ನನ್ನು ನೆಟ್ಟಗೆ ಮಾಡುತ್ತ ಗದರಿಸಿ ಹೇಳಿದರು – 'ನೀವೆಲ್ಲ ನಿಂತು ಕೊಂಡು ಏನದು ನೋಡುತ್ತಿದ್ದೀರಿ? ಹೊಡೆದೋಡಿಸಿ ನೋಡುವಾ ಇವನನ್ನು? ನಮ್ಮ ಗ್ರಾಮದಿಂದ ಎತ್ತು ಹೊಡೆದುಕೊಂಡು ಹೋಗಲಿ ನೋಡುವಾ – ಧೈರ್ಯವಿದ್ದರೆ !'

ಆ ಗುಂಪಿನಲ್ಲಿ ವಂಶಿಯು ಬಲಿಷ್ಠ ಯುವಕ. ಆತ ಬೋಲನಿಗೆ ಬಲವಾಗಿ ಒಂದೇಟು ಏರಿಸಿಯೇ ಬಿಟ್ಟ. ಬೋಲ ಏಳುತ್ತಿರುವಷ್ಟರಲ್ಲೇ ಮತ್ತೊಂದು ಏಟೂ ಬಿತ್ತು.

ಅಷ್ಟರಲ್ಲಿ ಓಡಿಕೊಂಡು ಹೋರಿರಾಮ ಬರುವುದು ತೋರಿ ಬಂತು. ಬೋಲನು ನಾಲ್ಕು ಹೆಜ್ಜೆ ಮೆಲ್ಲನೆ ಅವನತ್ತ ಹೋಗಿ ಕೇಳಿದ – ' ಹೋರಿ ಯಣ್ಣಾ, ಸತ್ಯಸ್ಥಿತಿ ಹೇಳಿ. ನಾನು ನಿಮ್ಮಲ್ಲಿಂದ ಬಲಾತ್ಕಾರದಿಂದ ಈ ಎತ್ತು ಬಿಡಿಸಿ ತಂದುದೇ ?'

ದಾತಾದೀನ ಪಂಡಿತರಿಗೆ ಪರಿಸ್ಥಿತಿಯ ಅರಿವಾಯಿತು – ಈಗ, ಹೋರಿ ರಾಮ ತಾನು ಮನಃಪೂರ್ವಕ ಎತ್ತು ಕೊಟ್ಟುದೆಂದು ಹೇಳುತ್ತಾನೆ. ಈಗ ನಾವೇ ಬೇಡವಾದವರು ! – ಎಂಬುದು ಅವರಿಗೆ ಖಚಿತವಾಯಿತು.

ಸಂಕೋಚಯುಕ್ತ ಸ್ವರದಿಂದ ಹೋರಿರಾಮ ಹೇಳಿದ – " ಈತ ನಮ್ಮಲ್ಲಿ ಬಂದು – ಒಂದೇ, ಜುನಿಯಳನ್ನು ಮನೆಯಿಂದ ಹೊರಡಿಸು ; ಇಲ್ಲವೇ, ತನ್ನ ರೂಪಾಯಿ ಕೊಡು. ಎರಡೂ ಇಲ್ಲವಾದರೆ, ನಿನ್ನ ಎತ್ತುಗಳನ್ನು ಬಿಡಿಸಿ ಕೊಂಡು ಹೋಗುತ್ತೇನೆ – ಎಂಬುದಾಗಿ ಹೇಳಿದ. ಆಗ ನಾನು ' ಸೊಸೆ ಯನ್ನು ಎಷ್ಟಕ್ಕೂ ಮನೆಯಿಂದ ಹೊರಡಿಸಲಾರೆ. ರೂಪಾಯಿ ಕೊಡಲಿಕ್ಕೆ – ನನ್ನಲ್ಲಿಲ್ಲ. ನಿನಗೆ – ಸರಿ,ಧರ್ಮ – ಎಂದು ತೋರಿದರೆ, ಎತ್ತುಗಳನ್ನು ಬಿಡಿಸಿ ಕೊಂಡು ಹೋಗು' – ಎಂಬುದಾಗಿ ಹೇಳಿದೆ. ನಾನು ಸರ್ವಭಾರವನ್ನೂ ಅವನ ಧರ್ಮಬುದ್ಧಿಯ ಮೇಲೆ ಹಾಕಿದೆ. ಆತ ಎತ್ತು ಬಿಡಿಸಿಕೊಂಡೇ ಬಂದ.

ಇದೀಗ ನಡೆದ ಕತೆ."

ಪಟೇಶ್ವರೀಲಾಲರು ಮುಖ ತಿರುಗಿಸಿ ಹೇಳಿದರು—'ನೀನು ಧರ್ಮದ ಮೇಲೆ ಭಾರ ಹಾಕಿದ ಬಳಿಕ ಮತ್ತೆಂತಹ ಬಲಾತ್ಕಾರ? ಧರ್ಮವೆಂದು ಅವನಿಗೆ ತೋರಿತು. ಎತ್ತುಗಳನ್ನು ಬಿಡಿಸಿಕೊಂಡು ಬಂದ. ಬೋಲಾ! ಆಯಿತು, ಹೊಡೆದುಕೊಂಡು ಹೋಗು. ಎತ್ತುಗಳು ನಿನ್ನವೇ ಸರಿ!'

'ಧರ್ಮದ ಹೆಸರು ಬಂದ ಮೇಲೆ ಮತ್ತೇನು ಹೇಳುವುದು?'—ಎಂದು ಪಂಡಿತರೂ ಅದನ್ನೇ ಸಮರ್ಥಿಸಿದರು.

ನೆರೆದವರೆಲ್ಲ ತಿರಸ್ಕಾರಯುಕ್ತ ದೃಷ್ಟಿಯಿಂದ ಹೋರಿರಾಮನತ್ತ ನೋಡುತ್ತ ಪರಾಜಿತರಾಗಿ ಹಿಂದಿರುಗಿದರು. ವಿಜಯಿಯಾದ ಬೋಲನು ಎತ್ತುಗಳನ್ನು ಹೊಡೆದುಕೊಂಡು ಹೊರಟೇ ಬಿಟ್ಟ.

೧೩

ತನ್ನ ಇಲಾಖೆಯಲ್ಲಿ ಏನೋ ಒಂದು ಅನಾಹುತ ನಡೆದದ್ದಕ್ಕಾಗಿ ಹೋರಿರಾಮನಿಂದ ಊರಿನ ಮುಂದಾಳುಗಳೆಲ್ಲ ಸೇರಿ ದಂಡ ವಸೂಲು ಮಾಡಿದರು—ಎಂಬೀ ಸಮಾಚಾರ ರಾಯ್ ಸಾಹೇಬರ ಕಿವಿಗೆ ಹೋಗಿ ಮುಟ್ಟಿತು. ಒಡನೆಯೇ ನೋಖೇರಾಮನನ್ನು ಕರೆಸಿ—'ಈ ವಿಚಾರವನ್ನು ನನ್ನ ಗೋಚರಕ್ಕೆ ತರಲಿಲ್ಲವೇಕೆ? ಇಂತಹ ಮೋಸಗಾರರಿಗೆ ನನ್ನಲ್ಲಿ ಎಡೆಯೇ ಸಿಗಲಾರದು! ಜಾಗ್ರತೆ!' ಎಂದು ಗದರಿಸಿದರು.

ಈ ಬೆದರಿಕೆಯ ಮಾತು ಕೇಳಿ ನೋಖೇರಾಮನೂ ಮೆಲ್ಲನೆ ಉತ್ತರವಿತ್ತ—'ಅದು ನನ್ನೊಬ್ಬನಿಂದಲೇ ಆದುದಲ್ಲ ಒಡೆಯಾ. ಗ್ರಾಮದ ಉಳಿದ ಹಿರಿಯರೂ ಇದ್ದರು.'

ರಾಯ್ ಸಾಹೇಬರು ಕಣ್ಣು ಕೆರಳಿಸಿ ಅವನ ಮುಖದತ್ತ ನೋಡಿ ಹೇಳಿದರು—'ಹೆಚ್ಚು ಬೊಗಳಬೇಡಯ್ಯಾ!—ಈ ವಿಚಾರ ಧನಿಗಳಿಗೆ ತಿಳಿಸಿ, ಅವರಿಂದ ಒಪ್ಪಿಗೆ ಪಡೆಯುವ ಮೊದಲು ಯಾರಿಗೂ ದಂಡ ಹಾಕುವ ಅಧಿಕಾರವಿಲ್ಲವೆಂಬುದಾಗಿ ನೀನು ಹೇಳಬೇಕಿತ್ತು. ನನ್ನ ಮತ್ತು ನನ್ನ ರೈತರ ವಿಚಾರದಲ್ಲಿ ಕೈಹಾಕಲಿಕ್ಕೆ ನಿಮ್ಮ ಹತ್ತು ಸಮಸ್ತರಿಗೆ ಏನಧಿಕಾರವಿದೆ?

ನಮಗೂ ಈ ದಂಡ, ಕಾಣಿಕೆಗಳಿಲ್ಲವಾದರೆ ಬೇರೆ ದೊಡ್ಡ ಉತ್ಪತ್ತಿ ಯಾವುದಿದೆ? ನಗದಿ ವಸೂಲಾದುದು ಸರಕಾರದ ಕಂದಾಯಕ್ಕಾಯಿತು. ಬೆಳೆದ ಧಾನ್ಯ ರೈತರಿಗೆ ಅಡಗಿಸಿಡಲಿಕ್ಕಾಯಿತು. ಇಷ್ಟಾದ ಮೇಲೆ ನಾವೆಲ್ಲಿ ಹೋಗುವುದು? ಉಣ್ಣುವುದೇನನ್ನು?–ನಿಮ್ಮ ತಲೆಯೇ? ಈ ಲಕ್ಷಾವಧಿ ರೂಪಾಯಿಗಳ ಪ್ರತಿ ವರ್ಷದ ವೆಚ್ಚ ಬರುವುದೆಲ್ಲಿಂದ? ಎರಡು ತಲೆಮಾರಿಂದ ನನ್ನ ಈ ಏಜಂಟತನ ಮಾಡಿಯೂ ಈ ವಿಚಾರವೆಲ್ಲ ನಿನಗೆ ಗೊತ್ತಾಗುವುದಿಲ್ಲವಲ್ಲ! ಸತ್ಯಸ್ಥಿತಿ ಹೇಳು – ಎಷ್ಟು ರೂಪಾಯಿ ವಸೂಲಾಗಿತ್ತು, ಹೋರಿರಾಮನಿಂದ?'

ನೋಖೇರಾಮ ನೊಂದ ಮುಖದಿಂದ ಹೇಳಿದ – '೮೦ ರೂಪಾಯಿ.'

'ನಗದೀ?'

'ನಗದಾಗಿ ಅವನ ಹತ್ತಿರ ಎಲ್ಲಿದೆ ಸ್ವಾಮಿ? ಸ್ವಲ್ಪ ಧಾನ್ಯ ಕೊಟ್ಟ. ಮತ್ತೆ ಉಳಿದುದಕ್ಕೆ ಮನೆಯನ್ನು ಬರೆಸಿದ.'

ರಾಯ್ ಸಾಹೇಬರು ಸ್ವಾರ್ಥ ವಿಚಾರ ಬಿಟ್ಟು ಹೋರಿರಾಮನ ಪಕ್ಷ ಹಿಡಿದು ಮಾತಾಡತೊಡಗಿದರು – 'ಈಗ ನೀನೂ, ನಿಮ್ಮ ಮಹಾ ಸಂಭಾವಿತರಾದ ಹತ್ತು ಸಮಸ್ತರೂ ಸೇರಿ ಒಬ್ಬ ಪಾಪದ ಒಕ್ಕಲಿಗನಿಗೆ ದಂಡ ವಿಧಿಸಿದಿರಿ! ನಾನೀಗ ಕೇಳುವುದು ಇಷ್ಟೆ – ನನ್ನ ಭೂಮಿಯಲ್ಲಿರುವ, ನನ್ನ ಒಕ್ಕಲಿನ ಕೈಯಿಂದ, ನನ್ನ ಒಪ್ಪಿಗೆ ವಿನಾ, ದಂಡ ವಸೂಲು ಮಾಡುವುದಕ್ಕೆ ನಿಮಗಾವ ಅಧಿಕಾರವಿದೆ? ಈ ವಿಚಾರದಲ್ಲಿ ಬೇಕಾದರೆ ನಿನ್ನನ್ನೂ, ಆ ಶಾನುಭಾಗನನ್ನೂ, ಆ ಪಂಡಿತನನ್ನು ಸಹ, ಏಳೇಳು ವರ್ಷದ ಜೈಲಿಗೆ ಕಳಿಸಿಬಿಟ್ಟೇನು. ಈ ಇಲಾಖೆಗೆಲ್ಲ ನೀನೇ ಒಬ್ಬ ರಾಜಾಧಿರಾಜನೆಂದು ತಿಳಿದುಕೊಂಡಿರುವೆಯಾ? ನಾನು ಹೇಳಿಬಿಟ್ಟಿದ್ದೇನೆ – ಇಂದು ಸಾಯಂಕಾಲದೊಳಗೆ ದಂಡದ ಆ ಹಣವನ್ನೆಲ್ಲ ನನಗೆ ತಂದು ಮುಟ್ಟಿಸಬೇಕು. ಇಲ್ಲವಾದರೆ ಕೆಲಸ ಕೆಟ್ಟುಹೋದೀತು. ಒಬ್ಬೊಬ್ಬರನ್ನೇ ಸೆರೆಮನೆಗೆ ಕಳಿಸದೆ ಬಿಡಲಾರೆ. ಹೋಗು ಈಗ. ಅಲ್ಲದೆ ನನ್ನೊಡನೆ ಮಾತಾಡಿ ಹೋಗಬೇಕೆಂದು ಆ ಹೋರಿರಾಮನಿಗೂ ಅವನ ಮಗನಿಗೂ ಹೇಳಿಬಿಡು.'

ನೋಖೇರಾಮನು ತಗ್ಗಿದ ಸ್ವರದಿಂದ ಉತ್ತರವಿತ್ತ – 'ಅವನ ಮಗ, ಊರು ಬಿಟ್ಟು ಹೋಗಿದ್ದಾನೆ ಸ್ವಾಮಿ. ಆ ಅನಾಹುತ ನಡೆದ ದಿನವೇ ಆತ ಓಡಿ ಬಿಟ್ಟಿದ್ದಾನೆ.'

ರಾಯ್ ಸಾಹೇಬರು ಮತ್ತಷ್ಟು ಕೋಪದಿಂದ ಹೇಳಿದರು – 'ಸುಳ್ಳು

ಹೇಳಬೇಡ! ಸುಳ್ಳು ಹೇಳಿದರೆ ನನಗೆ ವಿಪರೀತ ಕೋಪ ಬರುವುದೆಂದು ನಿನಗೆ ಗೊತ್ತಿಲ್ಲವೇ? ಎಲ್ಲಿಯಾದರೂ, ಒಬ್ಬ ಯುವಕ ತನ್ನ ಪ್ರಿಯೆಯನ್ನು ಅವಳ ಮನೆಯಿಂದ ಕರೆದು ತಂದ ಮೇಲೆ, ಬಿಟ್ಟು ಓಡಿಹೋದನೆಂದರೆ ನಂಬುವ ಮಾತೆ? ಹಾಗೆ ಅವನು ಓಡಿಹೋಗುವವನಾದರೆ ಅವಳನ್ನೇಕೆ ಕರೆತಂದಾನು? ಆ ವಿಚಾರದಲ್ಲಿಯೂ ನಿಮ್ಮದೇ ಏನೋ ಕೈವಾಡವಿರಬೇಕು. ನೀವೆಲ್ಲ ಗಂಗಾ ನದಿಯಲ್ಲಿ ಮುಳುಗಿ ಪ್ರಮಾಣ ಮಾಡಿದರೂ ನನಗೆ ನಂಬಿಗೆಯಾಗಲಿಕ್ಕಿಲ್ಲ. ಸಮಾಜದ ಮಾನ ಮರ್ಯಾದೆಯ ಹೆಸರಲ್ಲಿ ಅವನನ್ನು ಬೆದರಿಸಿ ನೀವೇ ಓಡಿಸಿರಬೇಕು. ಪಾಪ! ನಿಮ್ಮೆಲ್ಲರ ಎದುರು ಆತ ಓಡದೆ ಮತ್ತೇನು ಮಾಡಿಯಾನು?'

ನೋಖೇರಾಮನು ಇದಕ್ಕೆ ಇದಿರು ಮಾತಾಡದಾದ. ಸ್ವತಃ ತಾವೇ ಹೋಗಿ ಸತ್ಯಾಸತ್ಯ ವಿಚಾರಿಸಿಕೊಂಡು ಬನ್ನಿ–ಎಂಬುದಾಗಿ ಹೇಳಲಿಕ್ಕೂ ಆತನಿಗೆ ಧೈರ್ಯ ಬರಲಿಲ್ಲ. ಧನಿಗಳ ಕೋಪದ ಕಾವು ಅಷ್ಟು ಜೋರಾಗಿತ್ತು!

ಊರ ಮುಂದಾಳುಗಳು ರಾಯ್ ಸಾಹೇಬರ ಈ ತೀರ್ಮಾನ ಕೇಳಿ ತಣ್ಣಗಾಗಿ ಹೋದರು. ಹೋರಿರಾಮು ಕೊಟ್ಟಿದ್ದ ಧಾನ್ಯವೇನೋ ಹೆಚ್ಚುಕಡಿಮೆ ಉಳಿದಿತ್ತು. ಆದರೆ ರೂಪಾಯಿ ಮಾತ್ರ ಎಲ್ಲ ಖರ್ಚಾಗಿ ಹೋಗಿತ್ತು. ಹೋರಿರಾಮುನ ಮನೆಯನ್ನು ಅಡವು ಬರೆಸಿಯಾಗಿತ್ತು. ಆದರೆ ಹಳ್ಳಿಯಲ್ಲಿ ಈ ಕಟ್ಟಡವನ್ನು ಯಾರು ಕೇಳುತ್ತಾರೆ? ಹಿಂದೂ ಸ್ತ್ರೀ ಗಂಡನೊಡನಿರುವಾಗ ಮನೆಯ ಯಜಮಾನಿಯಾಗಿ ಗೌರವಾರ್ಹಳಾಗುತ್ತಾಳೆ. ಆದರೆ ಗಂಡನು ಬಿಟ್ಟುಬಿಟ್ಟರೆ, ಅವಳನ್ನುಕೇಳುವವರೇ ಇಲ್ಲ. ಹಾಗೆಯೇ, ಹೋರಿರಾಮುನಮಟ್ಟಿಗೆ ಆ ಮನೆ ಲಕ್ಷಾವಧಿ ರೂಪಾಯಿ ಬೆಲೆಯದಾದರೂ, ಅವನು ಬಿಟ್ಟುಬಿಟ್ಟರೆ ಅದಕ್ಕೆ ಬೆಲೆಯೇ ಇಲ್ಲ– ಎಂಬಂತಾಗಿತ್ತು.

ಇತ್ತ ರಾಯ್ ಸಾಹೇಬರಂತು ರೂಪಾಯಿ ಬಾರದೆ ಕೇಳುವವರೇ ಅಲ್ಲ. ಈ ಕತೆಯನ್ನೆಲ್ಲ ಹೋರಿರಾಮುನೇ ಹೋಗಿ ಅತ್ತು ಹೇಳಿರಬೇಕು. ಪಟೇಶ್ವರೀ ಲಾಲರಿಗೆ ಎಲ್ಲರಿಗಿಂತಲೂ ಹೆಚ್ಚಿನ ಭಯವಾಗಿತ್ತು. ಅವರ ಸರಕಾರೀ ಕೆಲಸ, ರಾಯ್ ಸಾಹೇಬರಿಗೆ ಕೋಪ ಬಂದರೆ ಹೊರಟುಹೋದೀತು! ಆ ನಾಲ್ಕು ಜನ ಮಹಾ ಪುರುಷರೂ ಸೇರಿ ಈ ಗಹನ ಸಮಸ್ಯೆಯ ವಿಚಾರ ಯೋಚಿಸಲಾರಂಭಿಸಿದರು. ಆದರೆ ಯಾರ ಮೆದುಳೂ ಮುಂದುವರಿಯಲಿಲ್ಲ. ಒಬ್ಬ ಮತ್ತೊಬ್ಬನ ಮೇಲೆ ತಪ್ಪುಹೊರಿಸುತ್ತಿದ್ದ. ಅಂತು ಸಾಕಷ್ಟು ವಿರಸವೂ ಆಯಿತು.

ಪಟೇಶ್ವರೀಲಾಲರು ಶಂಕಾಶೀಲ ದೃಷ್ಟಿಯಿಂದ ನೋಡಿ ತನ್ನ ಉದ್ದ ಕುತ್ತಿಗೆಯನ್ನು ಅಲ್ಲಾಡಿಸುತ್ತ ಹೇಳಿದರು – ' ಹೋರಿರಾಮನ ವಿಚಾರದಲ್ಲಿ ನಾವು ಸ್ವಲ್ಪ ದಯೆ ತೋರಿಸಬೇಕೆಂದು ನಾನು ಮೊದಲಿಂದಲೇ ಹೇಳುತ್ತಿದ್ದೆ. ಪಾಪ ! ದನದ ಗಲಾಟೆಯಲ್ಲೇ ಆತ, ಎಲ್ಲರಿಗೂ ಒಮ್ಮೆ ದಂಡ ತೆರಬೇಕಾಗಿ ಬಂದಿತ್ತು. ಪುನಃ ಈ ಅನಾಹುತಕ್ಕಾಗಿ ದಂಡ ತೆಗೆಯುವುದು ಸರಿಯಲ್ಲ – ಎಂದು ನಾನು ಹೇಳಿದ ಮಾತು ಯಾರಿಗೂ ಒಪ್ಪಿಗೆ ಆಗಲಿಲ್ಲ. ಎಲ್ಲರೂ ಹಟ ಹಿಡಿದಿರಿ. ಈಗ ಎಲ್ಲರೂ ಇಪ್ಪತ್ತು ಇಪ್ಪತ್ತು ರೂಪಾಯಿ ತೆಗೆಯಿರಿ ನೋಡುವಾ? ಹಾಗೆ ಮಾಡಿದರೆ ಅಲ್ಲಿಂದಲ್ಲಿಗೆ ಕತೆ ಮುಗಿದುಹೋದೀತು. ಇಲ್ಲವಾದರೆ, ರಾಯ್ ಸಾಹೇಬರು ರಿಪೋರ್ಟ್ ಮಾಡಿದರೆ ನಮ್ಮೆಲ್ಲರ ಕೈಗಳಿಗೂ ಕೋಳ ಬಿದ್ದೀತು.'

ದಾತಾದೀನ್ ಪಂಡಿತರು ತಮ್ಮ ಬ್ರಹ್ಮತೇಜಸ್ಸನ್ನು ತೋರಿಸುತ್ತ ಹೇಳಿದರು – ' ನನ್ನ ಹತ್ತಿರ ಇಪ್ಪತ್ತು ರೂಪಾಯಿ ಬಿಟ್ಟು – ಇಪ್ಪತ್ತು ಕಾಸು ಸಹ ಇಲ್ಲ. ಬ್ರಹ್ಮ ಭೋಜನ, ಹೋಮ ನೇಮ – ಈ ಎಲ್ಲ ಪರಿಹಾರಕ್ಕಾಗಿ ಹಣ ಖರ್ಚಾಗಿಲ್ಲವೇ ? ನನ್ನನ್ನೂ ಜೈಲಿಗೆ ಕಳುಹಿಸುವ ಧೈರ್ಯ ರಾಯ್ ಸಾಹೇಬರಿಗಿದೆಯೇ ? ನನ್ನ ಸಾಮರ್ಥ್ಯವನ್ನೆಲ್ಲ ತೋರಿಸಿಬಿಟ್ಟೇನು ! ಅವರಿಗೆ ಈ ತನಕ ಬ್ರಾಹ್ಮಣರ ಹತ್ತಿರ ಜಗಳಾಡಿ ಗೊತ್ತಿಲ್ಲ. ಮತ್ತೆ ತಿಳಿದೀತು.'

ಜಿಂಗುರೀ ಸಿಂಹರೂ ಇದೇ ಅಭಿಪ್ರಾಯದ ಮಾತು ಹೇಳಿದರು. ಅವರೇನೂ ರಾಯ್ ಸಾಹೇಬರ ನೌಕರರಲ್ಲ. ಅವರು ಹೋರಿರಾಮನಿಗೆ ಹೊಡೆಯಲೂ ಇಲ್ಲ, ಬಡೆಯಲೂ ಇಲ್ಲ. ಅಥವಾ ಬಲಾತ್ಕರಿಸಲೂ ಇಲ್ಲ. ಹೋರಿರಾಮ ಪ್ರಾಯಶ್ಚಿತ್ತವನ್ನು ಮಾಡಿಸಬಯಸಿದ. ಆ ವಿಚಾರದಲ್ಲಿ ತಕ್ಕ ಅನವನ್ನು ಇವರು ಮಾಡಿಸಿಕೊಟ್ಟರು. ಇದರಲ್ಲೇನು ತಪ್ಪಿದೆ? ಆದರೆ ನೋಖೇರಾಮರಿಗೆ ಮಾತ್ರ ಜುಟ್ಟನ್ನು ಅಷ್ಟು ಸುಲಭದಿಂದ ಬಿಡಿಸಲು ಸಾಧ್ಯವಿದ್ದಿಲ್ಲ. ಅವರು ಆ ಊರಲ್ಲಿ ಸುಮ್ಮನಿದ್ದು ರಾಜ ದರ್ಬಾರ್ ನಡೆಸುವವರು! ಸಂಬಳ ಹತ್ತು ರೂಪಾಯಿಗೆ ಮಿಕ್ಕಿ ಇದ್ದಿಲ್ಲವಾದರೂ ವರ್ಷಕ್ಕೆ ಸಾವಿರಾರು ರೂಪಾಯಿಗಳ ಕಮಾಯಿಯು ಇತ್ತು. ನೂರಾರು ಜನರ ಮೇಲೆ ತನ್ನ ಅಧಿಕಾರ ಬೇರೆ! ನಾಲ್ವರು ಪೇದೆಗಳು ಸದಾ ಸಿದ್ಧರು ! ಮನೆಯ ಕೆಲಸವೆಲ್ಲವೂ ಬಿಟ್ಟಿ ಬೇಗಾರಿಗಳಲ್ಲೇ ನಡೆದು ಹೋಗುತ್ತಿತ್ತು. ಹೋದಲ್ಲಿ ಗೌರವ ! ಕೋರ್ಟಿನಲ್ಲಿ ಸಹ ಕುರ್ಚಿ ಸಿಗುತ್ತಿತ್ತು. ಈ ಎಲ್ಲ ವೈಭವ ಬೇರೆಲ್ಲಿ ಸಿಕ್ಕೀತು? ಇನ್ನು, ಪಟೇಶ್ವರೀ

ಲಾಲರು ಸಹ ಸರಕಾರದ ಶಾನುಭಾಗ ಕೆಲಸದ ದೆಸೆಯಿಂದಲೇ ಹಣಗಾರರಾದುದು.

ಹಾಗಾಗಿ ಕಟ್ಟಕಡೆಗೆ ಪಟೇಶ್ವರೀಲಾಲರೂ, ನೋಖೇರಾಮರೂ ಸೇರಿ, ದಂಡದ ರೂಪಾಯಿ ಒಟ್ಟುಮಾಡಿ ರಾಯ್ ಸಾಹೇಬರ ಚರಣಗಳಿಗೆ ಅರ್ಪಿಸಿ ಬಂದರು.

೧೪

ಊರಲ್ಲೆಲ್ಲ ಸುದ್ದಿ ಹಬ್ಬಿಹೋಯಿತು – ರಾಯ್ ಸಾಹೇಬರು ಊರ ಹಿರಿಯರನ್ನೆಲ್ಲ ಕರೆಸಿ ಚನ್ನಾಗಿ ಗದರಿಸಿದರು. ವಸೂಲು ಮಾಡಿದ ದಂಡವನ್ನು ಇವರ ಹೊಟ್ಟೆಯಿಂದ ಕಾರಿಸಿದರು. ಇವರನ್ನೆಲ್ಲ ಜೈಲಿಗೆ ಕಳಿಸಿಬಿಡುವುದಾಗಿಯೂ ಹೇಳಿದರು. ಕೊನೆಗೆ ಕಾಲಿಗೆ ಬಿದ್ದ ಮೇಲೆ ಇವರ ಮುಖಕ್ಕೆ ಉಗುಳಿ ಕಳಿಸಿಕೊಟ್ಟರು – ಎಂದು ಮೊದಲಾಗಿ ಎಲ್ಲರಿಗೂ ತಿಳಿದು ಹೋಯಿತು. ದನಿಯಳ ಮನಸ್ಸಿಗೆ ಇದರಿಂದ ತುಂಬಾ ಸಮಾಧಾನವಾಯಿತು. ಹೋದಲ್ಲೆಲ್ಲ ಆವಳು ಈ ಮುಂದಾಳುಗಳ ಅಪಮಾನ ವಿಚಾರ ವರ್ಣಿಸುತ್ತಾ ಅವರಿಗೆ ನಾಚಿಕೆಯಾಗುವಂತೆ ಮಾಡುತ್ತಿದ್ದಳು – 'ಬಡವರ ಗೋಳನ್ನು ಮನುಷ್ಯ ಕೇಳದಿದ್ದರೂ ದೇವರು ಕೇಳದೆ ಬಿಡುವನೇ? ಈ ಬಡ ಹೋರಿರಾಮನಿಂದ ದಂಡ ವಸೂಲು ಮಾಡಿ ಸುಖವಾಗಿ ಪೂರಿ ಕಾಯಿಸಿ ತಿನ್ನಬಹುದೆಂದು ಇವರು ಎಣಿಸಿರಬೇಕು. ದೇವರಿಗೆ ಇದನ್ನು ಸಹಿಸಲಿಕ್ಕಾಗಲಿಲ್ಲ. ತಿಂದ ಪೂರಿಯೆಲ್ಲ ಈಗ ಕಾರಿ ಹೋಯಿತು. ಒಂದು ರೂಪಾಯಿಗೆ ಎರಡು ರೂಪಾಯಿಯಂತೆ ರಾಯ್ ಸಾಹೇಬರಿಗೆ ಕೊಡಬೇಕಾಯಿತು! ಇನ್ನು ನಮ್ಮ ಮನೆಯನ್ನು ತೆಗೆದು ಇವರು ಬಾಯಲ್ಲಿ ಹಾಕಿಕೊಳ್ಳಲಿ!'

ಆದರೆ ಎತ್ತುಗಳಿಲ್ಲದೆ ಬೇಸಾಯ ಮಾಡುವುದು ಹೇಗೆ? ಊರಲ್ಲೆಲ್ಲರೂ ಬೀಜ ಬಿತ್ತಲಾರಂಭಿಸಿದರು. ಬೇಸಾಯದ ಕಾಲದಲ್ಲಿ ರೈತನ ಎತ್ತುಗಳು ಹೋದರೆ ಅವನ ಕೈಗಳೇ ಕಡಿದು ಹೋದಂತೆ. ಎಲ್ಲರೂ ಉಳುತ್ತಿದ್ದಾರೆ, ಬಿತ್ತುತ್ತಿದ್ದಾರೆ. ಬೇಸಾಯ ಕೆಲಸದ ಹಾಡುಗಳು ಎಲ್ಲೆಲ್ಲಿಂದಲೂ ಕೇಳಿ ಬರುತ್ತಿವೆ. ಆದರೆ ಹೋರಿರಾಮನ ಗದ್ದೆ ಮಾತ್ರ ಅನಾಥ ವಿಧವೆಯ

ಮನೆಯ ಹಾಗೆ ಶೂನ್ಯವಾಗಿತ್ತು. ಪುನ್ನಿಯ ಹತ್ತಿರ ಎತ್ತುಗಳಿವೆ; ಸೋಬನ ಹತ್ತಿರವೂ ಇವೆ. ಆದರೆ ಅವರಿಗೆ ಅವರವರ ಗದ್ದೆಗಳ ಬೇಸಾಯ ಆಗುವುದು ಬೇಡವೇ? ಹೋರಿರಾಮ ದಿನವಿಡೀ ಅತ್ತ ಇತ್ತ ಓಡಾಡುತ್ತಿದ್ದ. ಇತರ ಒಕ್ಕಲುಗಳ ಕೆಲಸದಲ್ಲಿ ನೆರವಾಗುತ್ತಿದ್ದ. ಆದರಿಂದಾಗಿ ಏನಾದರೂ ಸ್ವಲ್ಪ ಇವನ ಕೈಗೆ ಬರುತ್ತಿತ್ತು. ದನಿಯಾ, ರೂಪಾ, ಸೋನೆ–ಇವರು ಸಹ ಬೇರೆ ಒಕ್ಕಲುಗಳ ಕೆಲಸಕ್ಕೆ ಹೋಗುತ್ತಿದ್ದರು. ಹೀಗೆ, ಬೇಸಾಯ ಕೆಲಸ ನಡೆಯುತ್ತಿದ್ದಷ್ಟು ಕಾಲ ಹೊಟ್ಟೆಗೆ ಹಿಟ್ಟು ದೊರೆಯುತ್ತಿತ್ತು. ಆಗ ವಿಶೇಷ ಕಷ್ಟವೂ ಆಗಲಿಲ್ಲ. ಮನಸ್ಸಿಗೆ ಮಾತ್ರ ಬಹಳ ದುಃಖವಾಗುತ್ತಿತ್ತು. ರಾತ್ರಿ ಹೊತ್ತಿನಲ್ಲಿ ಗಂಡ ಹೆಂಡಿರೊಳಗೆ ಜಗಳ ಸಹ ನಡೆಯುತ್ತಿತ್ತು.

ಕಾರ್ತಿಕ ಮಾಸ ಮುಗಿಯುತ್ತ ಬಂತು. ಕೂಲಿ ಸಿಗುವುದೂ ಕಷ್ಟವಾಗುತ್ತ ಬಂತು. ಇನ್ನು ಈಗ ಉಳಿದಿರುವ ಎಲ್ಲ ಆಸೆ ಗದ್ದೆಯಲ್ಲಿರುವ ಕಬ್ಬಿನ ಮೇಲೆ.

ರಾತ್ರಿಯ ಸಮಯ. ಚಳಿ ವಿಶೇಷವಾಗಿತ್ತು. ಹೋರಿರಾಮನ ಮನೆಯಲ್ಲಿ ಇಂದು ತಿನ್ನಲಿಕ್ಕೇನೂ ಇದ್ದಿಲ್ಲ. ಹಗಲು ಹೊತ್ತಿನಲ್ಲಿ ಏನೋ ಸ್ವಲ್ಪ ಹುರಿದ ಕಡಲೆ ಸಿಕ್ಕಿತ್ತು. ಆದರೆ ಈಗ ಮಾತ್ರ ಬೆಂಕಿ ಉರಿಸಲಿಕ್ಕೂ ಗತಿ ಇದ್ದಿಲ್ಲ. ರೂಪಳಂತು ಅಡಿಗೆ ಮನೆಯ ಹೊಸ್ತಿಲಲ್ಲಿ ಕೂತು ಅಳುತ್ತಿದ್ದಳು. ಮನೆಯಲ್ಲಿ ಧಾನ್ಯದ ಕಾಳು ಸಹ ಇಲ್ಲದ ಮೇಲೆ ಏನು ಮಾಡಲು ಸಾಧ್ಯ ?

ಹಸಿವು ತಡೆಯಲಾಗದಾಗ ರೂಪಳು ಬೆಂಕಿ ಕೇಳುವ ನೆಪದಿಂದ ಪುನ್ನಿಯ ಮನೆಗೆ ಹೋದಳು. ಪುನ್ನಿಯು ಜೋಳದ ರೊಟ್ಟಿ, ಅವಡೆಯ ಪಲ್ಯ, ಮಾಡುತ್ತಲಿದ್ದಳು. ಆದರ ಪರಿಮಳದಿಂದ ರೂಪಳ ಬಾಯಲ್ಲಿ ನೀರು ಬಂತು.

'ಈ ತನಕವೂ ನಿಮ್ಮಲ್ಲಿ ಬೆಂಕಿ ಹಚ್ಚಲಿಲ್ಲವೇ ?' – ಪುನ್ನಿ ಕೇಳಿದಳು.

ರೂಪಳು ದೀನ ಸ್ವರದಿಂದ ಹೇಳಿದಳು – 'ಬೇಯಿಸಲಿಕ್ಕೇನಾದರೂ ಇದ್ದರೆ ತಾನೆ ಬೆಂಕಿ ಮಾಡುವುದು ?'

'ಹಾಗಾದರೆ ಮತ್ತೇಕೆ ಬೆಂಕಿ ಕೊಂಡುಹೋಗ ಬಂದಿರುವೆ ?'

'ಅಪ್ಪನಿಗೆ ಹೊಗೆಬತ್ತಿ ಸೇದಲಿಕ್ಕೆ.'

ಪುನ್ನಿಯು ಬೆಂಕಿಕೊಳ್ಳಿಯ ತುಂಡನ್ನು ಅವಳ ಕೈಯಲ್ಲಿ ಕೊಟ್ಟಳು. ಆದರೆ ರೂಪಳು ಬೆಂಕಿ ತೆಗೆದುಕೊಳ್ಳದೆ ಚಿಕ್ಕಮ್ಮನ ಬಳಿ ಹೋಗಿ – 'ನಿಮ್ಮ ರೊಟ್ಟಿ ಬಹಳ ಪರಿಮಳ ಬರುತ್ತದೆ. ನನಗೆ ಜೋಳದ ರೊಟ್ಟಿಯೆಂದರೆ ಬಹಳ ಇಷ್ಟ' ಎಂದಳು.

ಪುನ್ನಿ ನಗುತ್ತ ಕೇಳಿದಳು – ' ಹಾಗಾದರೆ ತಿನ್ನುವೆಯಾ ? '

' ಇಲ್ಲ, ಅಮ್ಮ ಗದರಿಸಿಯಾಳು. '

' ಅಮ್ಮನ ಹತ್ತಿರ ಯಾರು ಹೇಳುತ್ತಾರೆ ? '

ರೂಪಳು ಹೊಟ್ಟೆತುಂಬ ತಿಂದು ಮೆಲ್ಲನೆ ಮನೆಯತ್ತ ಬಂದಳು.

ಹೋರಿರಾಮ ಸುಮ್ಮನೆ ಕೈಕಟ್ಟಿ ಕೂತುಕೊಂಡಿದ್ದ. ಆಗ ದಾತಾದೀನ್ ಪಂಡಿತರು ಬಂದು ಕರೆದರು. ಇನ್ನೇನು ಹೊಸ ವಿಪತ್ತು ಕಾದಿದೆಯೋ – ಎಂದು ಹೋರಿರಾಮನ ಎದೆ ಬಡೆದುಕೊಳ್ಳತೊಡಗಿತು. ಬಂದು ಅವರ ಕಾಲು ಹಿಡಿದು ವಂದಿಸಿದ; ಕೂತುಕೊಳ್ಳಲಿಕ್ಕೆ ಮಣೆಯಿತ್ತ.

ದಾತಾದೀನ ಪಂಡಿತರು ಕೂತು, ಅನುಗ್ರಹದೃಷ್ಟಿಯಿಂದ ನೋಡುತ್ತ ಹೇಳಿದರು – ' ಈ ಸಲ ನಿನ್ನ ಗದ್ದೆಗಳೆಲ್ಲ ಪಡ ಬಿದ್ದುವಲ್ಲ ! ಊರವರ ಹತ್ತಿರ ನೀನೇಕೆ ಸಹಾಯ ಕೇಳಲಿಲ್ಲ ? ಇಲ್ಲವಾದರೆ, ಆ ಬೋಲನಿಗೆ ಎತ್ತು ಹೊಡೆದುಕೊಂಡು ಹೋಗುವ ಧೈರ್ಯ ಬರುತ್ತಿತ್ತೇ ? ನೋಡು ಹೋರಿರಾಮ, ನಾನು ಜನಿವಾರ ಕೈಯಲ್ಲಿ ಹಿಡಿದು ಹೇಳುತ್ತೇನೆ–ನಾನೇನು ನಿನ್ನ ಮೇಲೆ ದಂಡ ಹೊರಿಸಲಿಲ್ಲ. ನಿನ್ನ ಹೆಂಡತಿ ನನ್ನ ವಿಚಾರ ಏನೆಲ್ಲ ಹೇಳುತ್ತ ತಿರುಗುತ್ತಿದ್ದಳು. ಆದರೂ ನಾನು ಸುಮ್ಮನೇ ಇದ್ದೆ. ಅದೆಲ್ಲ ಆ ಪಟೇಶ್ವರೀ ಲಾಲ್ ಮತ್ತು ಜಿಂಗುರೀ ಸಿಂಹನ ಒಳಸಂಚು. ಎಲ್ಲರೂ ಹೇಳಿದರೆಂದು ನಾನು ಪಂಚಾತಿಕೆಯಲ್ಲಿ ಕೂತಿದ್ದೆ ಮಾತ್ರ. ಅವರೆಲ್ಲ ಇನ್ನೂ ಹೆಚ್ಚಿನ ದಂಡ ವಿಧಿಸಬೇಕೆಂದಿದ್ದರು. ನಾನು ಚರ್ಚೆ ಮಾಡಿ ಕಡಮೆ ಮಾಡಿಸಿದೆ. ಈಗ ಮಾತ್ರ ಎಲ್ಲರೂ ತಲೆಯ ಮೇಲೆ ಕೈಯಿಟ್ಟುಕೊಂಡಿದ್ದಾರೆ. ಇದೆಲ್ಲ ಅವರದೇ ರಾಜ್ಯವೆಂದು ಅವರು ತಿಳಿದಿರಬೇಕು. ಅದು ಹೋಗಲಿ. ಈಗ, ನಿನ್ನ ಗದ್ದೆ ಬೇಸಾಯದ ವಿಚಾರ ಏನು ಆಲೋಚನೆ ಮಾಡಿದೆ ? '

' ಮಾಡುವುದೇನನ್ನು ? ಪಡವೇ ಬಿದ್ದಿರುತ್ತದೆ '–ಹೋರಿರಾಮ ಕರುಣ ಕಂಠದಿಂದ ಹೇಳಿದ.

' ಪಡ ಬೀಳುವುದೆ ? ಎಂತಹ ಅನರ್ಥ ! '

' ದೇವರ ಇಚ್ಛೆಯೇ ಹಾಗಿದ್ದರೆ ನಾನೇನು ಮಾಡಿಯೇನು ? '

'ನಾನು ಇಲ್ಲಿರುವಾಗ ಹೇಗೆ ನಿನ್ನ ಗದ್ದೆ ಪಡ ಬಿದ್ದೀತು ? ನಾಳೆಯೇ ನಿನ್ನ ಗದ್ದೆ ಬೇಸಾಯದ ವ್ಯವಸ್ಥೆ ಮಾಡಿಸುತ್ತೇನೆ. ಹತ್ತು ದಿನ ತಡವಾಗಿ ಹೋಯಿತು. ಆದರೂ ಚಿಂತೆ ಇಲ್ಲ. ಬಂದುದರಲ್ಲಿ ನಿನಗರ್ಧ, ನನಗರ್ಧ.

ಇದರಲ್ಲಿ ನಿನಗೂ ನಷ್ಟವಿಲ್ಲ, ನನಗೂ ನಷ್ಟವಿಲ್ಲ. ಇಂದು ಹೀಗೆಯೇ ಯೋಚನೆ ಮಾಡುವಾಗ ಈ ಗದ್ದೆ ಪಡ ಬಿದ್ದುದನ್ನು ನೋಡಿ ಬಹಳ ವ್ಯಸನ ವಾಯಿತು. ಹಾಗಾಗಿ ಹೊರಟು ಬಂದೆ. ಏನು ಹೇಳು!'

ಹೋರಿರಾಮು ಯೋಚನೆಯಲ್ಲಿ ಬಿದ್ದ. ಇಷ್ಟು ದಿವಸ ಗದ್ದೆಯ ಕೆಲಸ ಆತ ಮಾಡಿದ್ದ; ಬೆಳೆ ತೆಗೆದಿದ್ದ. ಆದರೆ ಈಗ ಬರೇ ಉತ್ತುದ್ದಕ್ಕೇ ಅರ್ಧ ಬೆಳೆ ಕೊಡಬೇಕು! ಬೇರೆ ದಾರಿ ಅಷ್ಟಕ್ಕೂ ಇಲ್ಲ. ಹಾಗಾಗಿ, ಕೊನೆಗೆ ಒಪ್ಪಿ ಕೊಳ್ಳಲೇ ಬೇಕಾಯಿತು. ಗದ್ದೆ ಪಡ ಬಿದ್ದರೂ ಗೇಣಿ ಕೊಡದೆ ಆಗುವುದೇ?

ಪಂಡಿತರು ಪ್ರಸನ್ನರಾಗಿ ಹೇಳಿದರು –' ಹಾಗಾದರೆ ಹೊರಡು. ಈಗಲೇ ಬೀಜವನ್ನು ಅಳೆದು ನಿನ್ನ ಕೈಯಲ್ಲಿ ಕೊಟ್ಟುಬಿಡುತ್ತೇನೆ. ನಾಳೆ ಬೆಳಗ್ಗೆ ಪುನಃ ಉಪದ್ರವ ಬೇಡ. ಊಟಗೀಟ ಆಯಿತಲ್ಲ ನಿಮ್ಮದು?'

ಹೋರಿರಾಮು ಸ್ವಲ್ಪ ನಾಚಿದವನಾಗಿ, ಅಂದು ಮನೆಯಲ್ಲಿ ಬೆಂಕಿಯೇ ಉರಿಸದ ಕತೆಯನ್ನು ಹೇಳಿ ಮುಗಿಸಿದ.

ಪಂಡಿತರು ಅಂತಃಕರಣದ ಸ್ವರದಿಂದ ಹೇಳಿದರು –' ಅಯ್ಯಯ್ಯೋ! ಮನೆಯಲ್ಲಿ ಒಲೆ ಹಚ್ಚಲಿಕ್ಕೂ ಗತಿ ಇಲ್ಲದ ಮೇಲೆ ನನ್ನ ಹತ್ತಿರ ಹೇಳ ಬೇಡವೇ? ನಾವೇನು ನಿನ್ನ ವೈರಿಗಳೇ? ನಿನ್ನ ಈ ಮರ್ಜಿಯೇ ನನಗೆ ಸರಿದೋರುವುದಿಲ್ಲ. ಇದರಲ್ಲೆಲ್ಲ ನಾಚಿಕೆ, ಸಂಕೋಚ, ಏತರದು? ನಾವೆಲ್ಲ ಒಂದೇ ಅಲ್ಲವೇ? ನಾನು ಬ್ರಾಹ್ಮಣ, ನೀನು ಶೂದ್ರ–ಆದ ಮಾತ್ರದಿಂದಲೇ ಏನು? ನಾವೆಲ್ಲ ಒಂದೇ ಮನೆಯವರಂತಲ್ಲವೇ? ನಾಳೆ ಬೆಳಗ್ಗೆ ನಮ್ಮ ಕತೆ ಏನಾಗಬಹುದೆಂದು ಯಾರಿಗೆ ಗೊತ್ತು? ನನಗೆ ಕಷ್ಟ ಬಂದರೆ ನಾನು ನಿನ್ನೊ-ಡನೆ ಹೇಳದಿರುವೆನೇ? ಆಗಲಿ, ಆದುದಾಯಿತು. ಒಂದು ಗೋಣಿಚೀಲ ಹಿಡಿದುಕೊಂಡು ಹೊರಡು. ಒಂದೆರಡು ಮಣ ಗೋದಿ ಈಗಲೇ ಕೊಟ್ಟು ಬಿಡುತ್ತೇನೆ.'

ಅರ್ಧ ಗಂಟೆಯ ಮೇಲೆ ಹೋರಿರಾಮು ಗೋದಿಯ ಮೂಟೆಯನ್ನು ಹೊತ್ತುಕೊಂಡು ಬಂದ. ಅಂತು ಮನೆಯ ಚಕ್ರ ಪುನಃ ತಿರುಗತೊಡಗಿತು. ಅಳುತ್ತ ಅಳುತ್ತ ದನಿಯಾ ಸೊಸೆಯೊಡಗೂಡಿ ಗೋದಿ ಬೀಸಿದಳು. ದೇವರು ಅವಳ ಯಾವ ಪಾಪಕ್ಕಾಗಿ ಈ ಕಷ್ಟ ಕೊಡುತ್ತಿದ್ದಾನೋ–ಆ ದೇವರೇ ಬಲ್ಲ!

ಮರುದಿನದಿಂದ ಬೇಸಾಯದ ಕೆಲಸ ಮೊದಲಾಯಿತು. ಹೋರಿರಾಮುನ ಪರಿವಾರವೆಲ್ಲ ಚನ್ನಾಗಿ ಕೆಲಸಮಾಡ ತೊಡಗಿತು. ಆಗಾಗ್ಗೆ ಪಂಡಿತರ ಮಗ

ಮಾತಾದೀನನೂ ಇವರ ಮನೆಯತ್ತ ಬರತೊಡಗಿದ. ಅವನು ನವ ಯುವಕ; ಒಳ್ಳೆಯ ದೇಹ, ಮಧುರವಾದ ಮಾತು ! ಪಂಡಿತರು ಕಷ್ಟಪಟ್ಟು ಉಳಿಸಿದ್ದನ್ನು ಈತ ದರ್ಬಾರಿನಿಂದ ವೆಚ್ಚ ಮಾಡುತ್ತಿದ್ದ. ಓರ್ವ ಸಮಗಾರ ಹುಡುಗಿಯೊಂದಿಗೆ ಅವನ ಪ್ರೇಮಸಂಬಂಧ ನಡೆದುಹೋಗಿತ್ತು. ಅದರಿಂದಾಗಿಯೇ ಈ ವರೆಗೆ ಅವನ ಮದುವೆಯಾಗಿದ್ದಿಲ್ಲ. ಅವಳು ಒಟ್ಟಿಗೆಯೇ ಇರುತ್ತಿದ್ದಳು. ಆದರೆ ಅಡಿಗೆ ಮಾತ್ರ ಬೇರೆ. ಇಡೀ ಊರಿಗೇ ಈ ಕತೆ ಗೊತ್ತಿತ್ತು. ಆದರೆ ಯಾರೂ ಬಾಯಿ ಬಿಡುತ್ತಿರಲಿಲ್ಲ.

ಈ ಪಾಲಿನ ಬೇಸಾಯದಿಂದಾಗಿ ಮಾತಾದೀನನಿಗೆ ಜುನಿಯಳೊಡನೆ ಮಾತುಕತೆ ನಡೆಸುವ ಸಂದರ್ಭ ಒದಗಿ ಬರುತ್ತಿತ್ತು. ಆಗಾಗ್ಗೆ, ಒಂದಲ್ಲ ಒಂದು ನೆಪ ಹಿಡಿದುಕೊಂಡು ಆತ ಹೋರಿರಾಮನ ಮನೆಯ ಸಮೀಪ ಅಲೆದಾಡುತ್ತಿದ್ದ. ಆದರೆ ಹೆಚ್ಚಾಗಿ ಜುನಿಯಳೊಬ್ಬಳೇ ಮನೆಯಲ್ಲಿರುವ ಸಂದರ್ಭ ಸಾಧಿಸಿಕೊಂಡು ಬರುತ್ತಿದ್ದ. ಜುನಿಯಳು ದೊಡ್ಡ ರೂಪವತಿಯಲ್ಲದಿದ್ದರೂ ಗಟ್ಟಿಮುಟ್ಟಿನ ಯುವತಿ. ಮಾತ್ರವಲ್ಲದೆ, ಅವನ ಆ ಸಮಗಾರ ಹುಡುಗಿಯಿಂದ ಚನ್ನಾಗಿದ್ದಳು. ಕೆಲ ದಿನ ಪಟ್ಟಣದ ನೀರು ಕುಡಿದವಳಾದ್ದರಿಂದ ವೇಷ ಭೂಷಣಗಳಲ್ಲಿ, ಚತುರ ಮಾತುಕತೆಗಳಲ್ಲಿ, ಚನ್ನಾಗಿ ಪಳಗಿದವಳು. ಅದೂ ಅಲ್ಲದೆ ಸ್ತ್ರೀಯರ ಪ್ರಮುಖ ಆಕರ್ಷಣೆಯಾದ ಲಜ್ಜೆಯಿಂದ ಕೂಡಿದವಳು. ಮಾತಾದೀನ ಒನ್ಮೊಮ್ಮೆ ಬಂದು ಅವಳ ಮಗುವನ್ನೆತ್ತಿಕೊಂಡು ಆಡಿಸುತ್ತಿದ್ದ. ಅದರಿಂದ ಅವಳೂ ಸ್ವಲ್ಪ ಉಬ್ಬಿ ಹೋಗುತ್ತಿದ್ದಳು.

ಒಂದು ದಿನ ಆತ ಜುನಿಯಳನ್ನು ಕೇಳಿಯೇ ಬಿಟ್ಟ–'ನೀನು ಗೋಬರನ ಯಾವ ವಿಚಾರ ನೋಡಿ ಮರುಳಾಗಿ ಬಂದೆ ಜುನಿಯಾ ? '

ಜುನಿಯಳೂ ನಾಚಿದವಳಾಗಿ ಹೇಳಿದಳು–'ನನ್ನ ಅದೃಷ್ಟವೇ ಎಳೆದು ತಂದಿತು ಮಹಾರಾಯರೇ. ಮತ್ತೇನು ಹೇಳಲಿ !'

ಮಾತಾದೀನ ದುಃಖಗೊಂಡ ಮನಸ್ಸಿನಿಂದ ಹೇಳಿದ–'ಎಂತಹ ಮೋಸಗಾರ ಮನುಷ್ಯ ! ನಿನ್ನಂತಹ ಲಕ್ಷ್ಮಿಯನ್ನು ಬಿಟ್ಟು ಹುಚ್ಚನಂತೆ ಎಲ್ಲೆಲ್ಲಿಯೋ ತಿರುಗುತ್ತಿದ್ದಾನಲ್ಲ ! ಎಷ್ಟಾದರೂ ಆತನ ಸ್ವಭಾವ ಬಹಳ ಚಂಚಲ. ಆದ್ದರಿಂದಲೇ ಬೇರೆಲ್ಲಿಯಾದರೂ ಸಿಕ್ಕಿ ಬಿದ್ದಿರಬಹುದೆಂದೂ ಸಂದೇಹವಾಗುತ್ತಿದೆ ! ಇಂತಹ ಮನುಷ್ಯರನ್ನು ಗುಂಡಿಟ್ಟು ಹೊಡೆಯಬೇಕು ! ಏನಿದ್ದರೂ, ಕೈಹಿಡಿದಾಕೆಯನ್ನು ನೋಡಿಕೊಂಡಿರುವುದು ಮನುಷ್ಯನ ಮೊದಲ ಕರ್ತವ್ಯ !

ಇತ್ತ, ಒಬ್ಬಳ ಜೀವನವನ್ನು ಕೆಡಿಸಿಬಿಟ್ಟು, ಇನ್ನೆಲ್ಲಿಗಾದರೂ ಹೋಗಿ ಮತ್ತೊಬ್ಬರ ಮೇಲೆ ಕಣ್ಣು ಹಾಕಿಕೊಂಡಿರುವುದು ಸರಿಯೇ? ಇದೆಂತಹ ಧರ್ಮ!'

ಜುನಿಯಾ ಅಳತೊಡಗಿದಳು. ಮಾತಾದೀನನು ಅತ್ತ ಇತ್ತ ನೋಡಿ, ಅವಳ ಕೈಹಿಡಿದು ಸಂತೈಸತೊಡಗಿದ — 'ನೀನೇಕೆ ಅಳುತ್ತಿರುವೆ ಜುನಾ? ಆತ ಹಾಳಾಗಿ ಹೋಗಲಿ. ನಿನಗೆ ಯಾವ ವಿಚಾರದಲ್ಲಿಯೂ ಕಡಿಮೆ ಬರಲಾರದು. ರೂಪಾಯಿ, ತಿಂಡಿ, ಬಟ್ಟೆ, ಆಭರಣ — ಏನು ಬೇಕಿದ್ದರೂ ನನ್ನ ಹತ್ತಿರ ಕೇಳು. ನಾನು ಕೊಡುತ್ತೇನೆ.'

ಜುನಿಯಳು ಮೆಲ್ಲನೆ ಕೈಬಿಡಿಸಿಕೊಂಡು ಹಿಂದೆ ಸರಿದು ಹೇಳಿದಳು — "ಎಲ್ಲವೂ ನಿಮ್ಮ ದಯೆ! ನನಗೀಗ ಅಪ್ಪನ ಮನೆಯೂ ಇಲ್ಲ; ಗಂಡನ ಮನೆಯೂ ಇಲ್ಲ — ಎಂದಾಗಿದೆ. 'ರಾಮನು ಹೋದ; ಮಾಯಾ ಮೃಗ ಬರಲಿಲ್ಲ' — ಎಂಬಂತಾಯಿತು. ಜನರ ಒಳ್ಳೇದು ಕೆಟ್ಟುದು — ಒಂದೂ ನನಗೆ ಗೊತ್ತಿದ್ದಿಲ್ಲ. ಅವನ ಸಿಹಿ ಸಿಹಿ ಮಾತುಗಳನ್ನು ಕೇಳಿ ಆ ಬಲೆಯಲ್ಲಿ ಸಿಕ್ಕಿಹೋದೆ."

ಮಾತಾದೀನನು ಗೋಬರನನ್ನು ಬೈಯತೊಡಗಿದ — 'ಎಷ್ಟಾದರೂ ಅವನು ತೀರಾ ಫಟಿಂಗ! ಮನೆಗೂ ಇಲ್ಲ, ಕೆರೆಗೂ ಇಲ್ಲ. ಯಾವಾಗ ನೋಡಿದರೂ ತಂದೆ ತಾಯಿಯರೊಡನೆ ಜಗಳ! ನಾಲ್ಕು ಕಾಸು ಕೈಗೆ ಬಂದೊಡನೆ ಹೋಗಿ ಜೂಜಾಡಿ ಬರುವ ಸ್ವಭಾವ! ಇದ್ದ ಪೋಲಿಗಳೊಡನೆ ತಿರುಗಾಡಿಕೊಂಡು ಸಿಕ್ಕಿ ಸಿಕ್ಕಿದ ಹೆಣ್ಣುಗಳ ಮೇಲೆ ಕಣ್ಣು ಹಾಕುವ ಬುದ್ಧಿ! ಒಂದು ಸಲ ಅವನನ್ನು ಜೈಲಿಗೂ ಕಳುಹಿಸುವುದರಲ್ಲಿದ್ದರು ಇನ್ಸ್‌ಪೆಕ್ಟರರು. ನಾವೆಲ್ಲ ಸೇರಿ ದಮ್ಮಯ್ಯ ಹಾಕಿ ಬಿಡಿಸಬೇಕಾಯಿತು. ಬೇರೆಯವರ ಗದ್ದೆಗಳಿಂದ ಧಾನ್ಯ ಕದಿಯುವುದರಲ್ಲಿಯೂ ಆತ ಹೆಸರುಹೋದವನು. ಎಷ್ಟೋ ಸಲ ನಾವೇ ಹಿಡಿದಿದ್ದೆವು. ಕೊನೆಗೆ — ಎಷ್ಟಾದರೂ ಊರಿನವನೇ ತಾನೆ — ಎಂದು ಬಿಟ್ಟಿದ್ದೆವು.'

ಅಷ್ಟರಲ್ಲಿ ಸೋನೆಯು ಹೊರಗಿನಿಂದ ಬಂದು ಹೇಳಿದಳು — 'ಅತ್ತಿಗೇ, ಆ ಧಾನ್ಯವನ್ನು ಹೊರಗಡೆ ಬಿಸಿಲಿಗೆ ಹಾಕಬೇಕೆಂದು ಅಮ್ಮ ಹೇಳಿದರು.'

ಒಡನೆಯೇ ಮಾತಾದೀನನ ಮೇಲೆ ತಣ್ಣೀರೆರಚಿದಂತಾಯಿತು — 'ಏನು, ನಿಮ್ಮ ಮನೆಯಲ್ಲಿ ಸೌದೆ ದಾಸ್ತಾನು ಮಾಡಲೇ ಇಲ್ಲವೇ?' ಎನ್ನುತ್ತ ಹೊರಗೆ ಬಂದ.

ಮಧ್ಯೆ ಸೋನೆಯು ಬಂದು ಅವನ ಆಟ ಕೆಟ್ಟುಹೋಯಿತು. ಸೋನೆಯು ಜುನಿಯಳನ್ನು ಕೇಳಿದಳು—'ಮಾತಾದೀನ ಪಂಡಿತರು ಏತಕ್ಕಾಗಿ ಇಲ್ಲಿ ಬಂದಿದ್ದರು—ಅತ್ತಿಗೆ ?'

ಜುನಿಯಳು ಮುಖ ತಿರುಗಿಸಿ—'ಏನೋ—ಹಗ್ಗವಿದೆಯೋ—ಎಂದು ಕೇಳಬಂದರು. ನಮ್ಮ ಹಗ್ಗ ತುಂಡಾಗಿದೆ ಎಂದು ನಾನು ಹೇಳಿದೆ' ಎಂದಳು.

'ಅದೆಲ್ಲ ನೆಪಕ್ಕೆ ಮಾತ್ರ. ಬಹು ಕೆಟ್ಟ ಮನುಷ್ಯ ಆತ.'

'ನನಗೇನೋ ಬಹಳ ಒಳ್ಳೆಯ ಮನುಷ್ಯನಂತೆ ಕಾಣುತ್ತಾನೆ. ಅವನಲ್ಲಿ ಯಾವ ಕೆಟ್ಟ ಗುಣವಿದೆ ತಾಯಿ ?'

'ನಿನಗೆ ಗೊತ್ತಿಲ್ಲವೇ? ಆ ಸಮುಗಾರ್ತಿ ಸಿಲಿಯಳನ್ನು ಇಡಿಸಿಕೊಂಡಿದ್ದಾನೆ.'

'ಅದರಿಂದಾಗಿಯೇ ಆತ ಕೆಟ್ಟವನಾದುದೇ ?'

'ಮತ್ತ್ಯಾವುದರಿಂದ ಮನುಷ್ಯ ಕೆಟ್ಟವನಾಗುತ್ತಾನೆ ?'

'ನಿಮ್ಮ ಅಣ್ಣನೂ ನನ್ನನ್ನು ತಂದಿದ್ದಾರೆ. ಅದರಿಂದ ಅವರು ಕೆಟ್ಟವರೇ?'

ಸೋನೆ ಇದಕ್ಕುತ್ತರ ಕೊಡದೆಯೇ—'ಆತ ಇನ್ನು ನಮ್ಮ ಮನೆಗೆ ಬಂದರೆ ಹೊಡೆದೋಡಿಸಿ ಬಿಟ್ಟೇನು'—ಎಂದಳು.

'ಅವನೊಡನೆ ನಿನ್ನ ಮದುವೆಯಾದರೆ ?'

ಸೋನೆಯು ನಾಚಿದಳು. ಸ್ವಲ್ಪ ತಡೆದು ಕೋಪದಿಂದ ಹೇಳಿದಳು—'ನೋಡು, ನಿನಗೆ ಬೇಡ.'

'ಹಾಗಾದರೆ ನಿನ್ನ ಮದುವೆ ಯಾರಾದರೂ ದೇವತೆಯೊಡನೆ ಆಗುವುದೇ ? ಊರಲ್ಲಿ ಇಂತಹ ಸುಂದರ, ಸಮರ್ಥ, ಯುವಕ ಇನ್ನಾರಿದ್ದಾನೆ ?'

'ಹಾಗಿದ್ದರೆ, ನೀನೇ ಹೋಗು ಅವನ ಜೊತೆ. ಸಿಲಿಯಳಿಂದ ಎಷ್ಟೋ ಪಾಲು ನೀನೇ ಚನ್ನಾಗಿರುವೆ.'

'ನಾನೇಕೆ ಹೋಗಬೇಕು ? ನಾನೀಗ—ಒಳ್ಳೇದಾಗಲಿ ಕೆಟ್ಟದಾಗಲಿ—ಒಬ್ಬನೊಡನೆ ಬಂದಿದ್ದೇನೆ.'

'ನಾನು ಸಹ ಯಾರೊಡನೆ ನನ್ನ ಮದುವೆಯಾದೀತೋ—ಅವನೊಡನೆ ಹೊರಟು ಹೋಗುತ್ತೇನೆ. ಒಳ್ಳೇದಾಗಲಿ, ಕೆಟ್ಟದಾಗಲಿ—ಅದೆಲ್ಲ ಆ ಮೇಲೆ.'

'ಒಂದು ವೇಳೆ ಒಬ್ಬ ಮುದುಕನೊಡನೆ ಮದುವೆಯಾದರೆ ?'

ಸೋನೆ ನಕ್ಕುಬಿಟ್ಟಳು—'ನಾನು ಅವನಿಗೆ ಮೆತ್ತಗೆ ರೊಟ್ಟಿಮಾಡಿ ಕೊಡುತ್ತೇನೆ. ಅವನಿಗೆ ಔಷಧಿ ಕಷಾಯ ತಯಾರಿಸಿ ಕೊಡುತ್ತೇನೆ. ಕೈಹಿಡಿದು

ಎಬ್ಬಿಸುತ್ತೇನೆ. ಎಲ್ಲ ಕೆಲಸ ಸರಿಯಾಗಿ ಮಾಡುತ್ತೇನೆ.'

'ಒಬ್ಬ ಯುವಕನೊಡನೆ ಮದುವೆಯಾದರೆ ?'

'ಆಗ ನಿನ್ನ ತಲೆ ! ಇಲ್ಲ . . .'

'ಹಾಗಾದರೆ ಹೇಳು–ನಿನಗೆ ಮುದುಕ ಇಷ್ಟವೇ, ಅಲ್ಲ ಯುವಕನೇ ?'

'ಯಾರ ಮೇಲೆ ನಮಗೆ ವಿಶ್ವಾಸವಿದೆಯೋ– ಅವನೇ ಯುವಕ. ವಿಶ್ವಾಸವಿಲ್ಲವಾದರೆ ಯುವಕನೂ ಮುದುಕನಾಗುತ್ತಾನೆ.'

'ಹೌದೌದು ನೋಡುವಾ. ಮುದುಕಗಂಡನಾದರೆ– ಯಾವಾಗ ಈತ ಒಮ್ಮೆ ಗಾಡಿ ಕಟ್ಟಿಯಾನು ? ಯಾವಾಗ ಒಬ್ಬ ಯುವಕನೊಡನೆ ಹೋದೇನು? —ಎಂಬುದಾಗಿ ಎಣಿಸುತ್ತಿರಬಹುದು ನೀನು !'

'ಹೌದು, ಅದು ನಿನ್ನ ಯೋಚನೆ !'

ಆ ವರ್ಷ ಅಲ್ಲೇ ಒಂದು ಸಕ್ಕರೆ ಕಾರ್ಖಾನೆ ಆರಂಭವಾಯಿತು. ಅದರ ಗುಮಾಸ್ತರೂ, ದಲಾಲಿಗಳೂ ಊರೂರು ತಿರುಗಾಡಿ, ರೈತರ ಗದ್ದೆಯಲ್ಲಿರುವ ಕಬ್ಬನ್ನೇ ಕ್ರಯಕೊಟ್ಟು ತೆಗೆಯುತ್ತಿದ್ದರು. ಹತ್ತಿರವೇ ಮಿಲ್ ಇತ್ತು. ಅದರ ಒಡೆಯರು 'ಮಿಸ್ಟರ್ ಖನ್ನಾ' ಎಂಬವರು. ಒಂದು ದಿನ ಅವರ ಏಜಂಟನು ಈ ಊರಿಗೂ ಬಂದ. ಅವನೊಡನೆ ರೈತರೆಲ್ಲ ಸೇರಿ ಮಾತುಕತೆ ನಡೆಸಿದಾಗ ತಿಳಿದು ಬಂತು– ಕಬ್ಬಿನಿಂದ ಬೆಲ್ಲ ಮಾಡಿ ಮಾರುವುದಕ್ಕಿಂತ ಇದೇ ಸುಲಭ, ಎಂಬುದಾಗಿ. ಯಾವ ತಾಪತ್ರಯವೂ ಇಲ್ಲ. ಸ್ವಲ್ಪ ಹೆಚ್ಚು ಕಡಿಮೆಯಾದರೂ ಒಂದೇ ಸಲ ಎಲ್ಲ ಹಣವೂ ಸಿಗುವುದು ತಾನೆ ? ಒಬ್ಬನಿಗೆ ಎತ್ತುಗಳನ್ನು ಕೊಂಡುಕೊಳ್ಳಲಿಕ್ಕಾಗಬೇಕು. ಮತ್ತೊಬ್ಬನಿಗೆ ಸಾಲ ತೀರಿಸಲಿಕ್ಕಾಗಬೇಕು. ಎಲ್ಲವನ್ನೂ ಸುಲಭದಿಂದ ತೀರಿಸಬಹುದಾದ್ದರಿಂದ ಎಲ್ಲ ರೈತರೂ ಮಿಲ್ಲಿಗೇ ಕಬ್ಬು ಕೊಡಲೊಪ್ಪಿದರು. ಹೋರಿರಾಮನಿಗೆ ಈ ಸಲ ಎತ್ತು ಆಗಲೇ ಬೇಕಿತ್ತು. ಅವನ ಕಬ್ಬಿನ ಬೆಳೆ ಅಷ್ಟು ಒಳ್ಳೆಯದಾಗಿದ್ದಿಲ್ಲ. ಆದರೂ ನೂರು ರೂಪಾಯಿ ಸಿಗದೆ ಹೋಗಲಾರದು. ಅದರಿಂದ ತಕ್ಕ ಮಟ್ಟಿನ ಒಂದು ಜೋಡು ಎತ್ತು ತರಬಹುದು. ಆದರೆ ಈ ಸಾಲಗಾರರಿಗೇನು ಮಾಡುವುದು ? ದಾತಾದೀನರು, ಮಂಗಾರಾಮರು, ಜಿಂಗುರೀಸಿಂಹರು, ಇನ್ನು ಆ ಸಾಹುಕಾರ್ತಿ– ಎಲ್ಲರೂ ಪ್ರಾಣ ಹೀರುವವರೇ. ಈ ಸಾಲದವರಿಗೆ ಕೊಡಲಿಕ್ಕೆ ಹೋದರೆ ನೂರು ರೂಪಾಯಿ ಬಡ್ಡಿಗೆ ಸಹ ಸಾಕಾಗಲಾರದು. ಆದರೆ ಕಬ್ಬು ಮಾರಿ ರೂಪಾಯಿ ಬರುವ ಸುದ್ದಿ ಯಾರಿಗೂ

ತಿಳಿಯದಂತೆ ಮಾಡಲಿಕ್ಕೂ ಸಾಧ್ಯವಿಲ್ಲ. ಗಾಡಿಯಲ್ಲಿ ಕಬ್ಬು ಹೇರಿಸಿದೊಡನೆ ಎಲ್ಲರಿಗೂ ಗೊತ್ತೇ ಆಗುವುದು. ಹಾಗಾಗಿ ಎಲ್ಲರೂ ಸೇರಿ ಕುತ್ತಿಗೆ ಹಿಡಿದೇ ಬಿಟ್ಟಾರು.

ಮರು ದಿನ ಸೋಬ ಬಂದು ಹೇಳಿದ – 'ಅಣ್ಣಾ, ಆ ಜಿಂಗುರೀ ಸಿಂಹರಿಗೆ ದೊಡ್ಡ 'ಕಾಲರಾ' ರೋಗ ಬಂದಿದ್ದರೆ ತುಂಬಾ ಉಪಕಾರವಿತ್ತು. ಎಲ್ಲರೂ ಅವನಿಗೆ ಸಾಲ ಕೊಡುವುದಿದೆ. ಬಂದ ರೋಗದಿಂದ ಆವನು ಏಳಲಿಕ್ಕೇ ಕೂಡದು.'

'ಏನು, ಅವನಿಗೆ ಮಕ್ಕಳು ಮರಿಗಳಿಲ್ಲವೇ ?' – ಹೋರಿರಾಮ ನಗುತ್ತ ಹೇಳಿದ.

'ಹೌದು – ಅವನ ಮಕ್ಕಳು ಮರಿಗಳನ್ನು ನಾವು ನೋಡುವುದೇ ? ಅಲ್ಲ– ನಮ್ಮ ಮಕ್ಕಳು ಮರಿಗಳನ್ನೇ ? ಅವನಿಗೇನು ? ಎರಡೆರಡು ಹೆಂಡಂದಿರನ್ನು ಕಟ್ಟಿಕೊಂಡು ಮಜಾ ಮಾಡುತ್ತಿದ್ದಾನೆ ! ನಮಗಿಲ್ಲಿ ಒಬ್ಬಳಿಗೇ ಒಣ ರೊಟ್ಟಿ ಕೊಡಲಿಕ್ಕೂ ಸಾಕಾಗುವುದಿಲ್ಲ.'

'ನನ್ನ ಕತೆಯಂತು ಬಹಳ ವಿಚಿತ್ರವಾಗಿದೆ. ರೂಪಾಯಿ ಕೈಗೆ ಬಾರದಿದ್ದರೆ ಎತ್ತುಗಳಿಗೇ ಗತಿ ಇಲ್ಲ.'

'ಅದಕ್ಕೊಂದುಪಾಯ ಮಾಡುವಾ – ಸ್ವಲ್ಪ ಸ್ವಲ್ಪವೇ ಕಬ್ಬು ಕೊಡುವಾ. ಆ ಗುಮಾಸ್ತನ ಹತ್ತಿರ – ಹಣ ಕೊನೆಗೇ ಕೊಟ್ಟು ಬಿಡು ; ನೀನು ಬೇಕಾದರೆ ನಾಲ್ಕು ಕಾಸು ಇಟ್ಟುಕೊಂಡರೂ ಚಿಂತೆ ಇಲ್ಲ – ಎಂದು ಗುಟ್ಟಾಗಿ ಹೇಳಿಬಿಡುವಾ. ಇತ್ತ ಜಿಂಗುರೀ ಸಿಂಹರಿಗೆ, ರೂಪಾಯಿ ಬರಲೇ ಇಲ್ಲ – ಎಂದು ಹೇಳುವಾ.'

ಹೋರಿರಾಮ ಯೋಚಿಸಿ ಹೇಳಿದ – 'ನಿನಗಿಂತ ನನಗಿಂತ ಜಿಂಗುರೀ ಸಿಂಹ ಎಷ್ಟೋ ಪಾಲು ಬುದ್ಧಿವಂತ. ಸೀದಾ ಹೋಗಿ ದೊಡ್ಡ ಆಫೀಸರರನ್ನೇ ಕಂಡು ಅವರಿಂದ ನಮ್ಮ ಲೆಕ್ಕದ ಹಣವನ್ನೆಲ್ಲ ತೆಗೆದುಕೊಂಡು ಹೋದಾನು ! ನೀನು ನಾನು ನೋಡುತ್ತಲೇ ಇರಬೇಕಾದೀತು. ಈ ಹಣವಂತರೆಲ್ಲ ಒಂದೇ ಜಾತಿ !'

ಸೋಬನು ನಿರಾಶನಾಗಿ ಹೇಳಿದ – 'ಈ ಸಾಲಗಾರರ ಬಲೆಯಿಂದ ಯಾವಾಗ ನಮಗೆ ಬಿಡುಗಡೆಯಾದೀತೋ – ದೇವರು ಬಲ್ಲ !'

ಈ ಜನ್ಮದಲ್ಲಂತು ಆ ಆಸೆಯಿಲ್ಲ. ನಮಗೇನು ರಾಜರಾಗಬೇಕೆಂಬ

ಆಸೆ ಇಲ್ಲ. ಸುಖ ಭೋಗಗಳ ಆಸೆಯೂ ಇಲ್ಲ. ಎರಡು ಹೊತ್ತು ಊಟ, ಮೈಗೊಂದು ಬಟ್ಟೆ – ಇಷ್ಟಾದರೂ ನಮ್ಮ ಕೆಲಸಕ್ಕೆ ಸಿಗಬೇಡವೇ ?

'ಇದಕ್ಕೆ ನಾವೆಲ್ಲ ಒಟ್ಟಾಗಿ ನಮ್ಮ ಶಕ್ತಿ ತೋರಿಸಬೇಕು. ಒಂದು ಚಿಕ್ಕಾಸೂ ಕೊಡಬಾರದು. ಮನೆ ಮಾರು ಏಲಂ ಮಾಡಿಸಿದರೆ ಮಾಡಿಸಲಿ, ಜೈಲಿಗೆ ಕಳಿಸಿದರೆ ಕಳಿಸಲಿ, ಎಂದು ಸುಮ್ಮನಿದ್ದು ಬಿಡಬೇಕು. ಆದರೆ ಈ ಊರಲ್ಲಿ ಒಬ್ಬ ವ್ಯಾಜ್ಯ ಮಾಡಿದರೆ ಮತ್ತೊಬ್ಬ ಮುಂದೆಬರುತ್ತಾನೆ. ಸ್ವಲ್ಪ ಕಡಿಮೆ ಬಡ್ಡಿಯಲ್ಲಿ ಸಾಲಕೊಟ್ಟು ನಮ್ಮನ್ನು ತನ್ನ ಬಲೆಯಲ್ಲಿ ಸೇರಿಸಿಕೊಳ್ಳುತ್ತಾನೆ ! ಅಂತು ಬಡವರು ಮರ್ಯಾದೆಯಿಂದ ಬದುಕುವುದೇ ಕಷ್ಟ.'

ಮರುದಿನ ಬೆಳಗ್ಗೆ ಊರಿನ ಬಹು ಮಂದಿ ಕಬ್ಬು ಕಡಿಯಲಿಕ್ಕೆ ತೊಡಗಿದರು. ಹೋರಿರಾಮನೂ ತನ್ನ ಗದ್ದೆಯತ್ತ ಕತ್ತಿ ಪಿಕ್ಕಾಸು ಹಿಡಿದುಕೊಂಡು ಹೋದ. ಅತ್ತಣಿಂದ ಸೋಬನೂ ಬಂದು ಅವನ ಸಹಾಯಕ್ಕೆ ಸೇರಿದ. ಪುನ್ನಿ, ಜುನಿಯಾ, ದನಿಯಾ, ಸೋನಾ – ಎಲ್ಲರೂ ಹೋಗಿ ಕ್ರಮೇಣ ಗದ್ದೆಯಲ್ಲಿ ಸೇರಿದರು. ಒಬ್ಬ ಕಬ್ಬು ಕಡಿದುಹಾಕುತ್ತಿದ್ದಾಗ ಮತ್ತೊಬ್ಬ ಅದರ ಎಲೆಗಳನ್ನು ತೆಗೆಯುತ್ತಿದ್ದ. ಇನ್ನೊಬ್ಬ ಕಟ್ಟು ಕಟ್ಟುತ್ತಿದ್ದ. ಸಾಲಕೊಟ್ಟಿದ್ದ ಹಣಗಾರರಿಗೆ ಈಗ ಹೊಟ್ಟೆ ಬಡ ಬಡ ಹೇಳಲಾರಂಭಿಸಿತು. ಒಂದೆಡೆಯಿಂದ ಸಾಹುಕಾರ್ತಿ ದುಲಾರಿ ಓಡಿಕೊಂಡು ಬಂದಳು. ಮತ್ತೊಂದೆಡೆಯಿಂದ ಸಾಹುಕಾರ್ ಮಂಗಾರಾಮರು ! ಮೂರನೆಯ ಕಡೆಯಿಂದ ದಾತಾದೀನರು, ಪಟೇಶ್ವರೀಲಾಲರು. ಬೇರೊಂದೆಡೆಯಿಂದ ಜಿಂಗುರೀ ಸಿಂಹರ ಜನ !

ದುಲಾರಿ ಚಿನ್ನದ ಓಲೆಗಳನ್ನಾಡಿಸಿಕೊಂಡು, ಕಣ್ಣಿಗೆ ಕಾಡಿಗೆ ತೊಡೆದುಕೊಂಡು, ಮುದಿತನದಲ್ಲಿಯೂ ಯೌವನದ ಪ್ರಭೆ ಬೀರುತ್ತಾ ಬಂದು ಹೋರಿರಾಮನಿಗೆ ಹೇಳಿದಳು – 'ಮೊತ್ತ ಮೊದಲು ನನ್ನ ರೂಪಾಯಿ ಕೊಟ್ಟರೇನೇ ಕಬ್ಬು ಕಡಿಯಲಿಕ್ಕೆ ಬಿಟ್ಟೇನು. ನಾನೆಷ್ಟು ಸಮಾಧಾನ ಮಾಡಿಕೊಳ್ಳುವೆನೋ – ಅಷ್ಟೇ ಜೋರು ನೀನಾಗುತ್ತಿ. ಎರಡು ವರ್ಷಗಳಿಂದ ಒಂದು ಕಾಸು ಬಡ್ಡಿ ಸಹ ಕೊಟ್ಟಿಲ್ಲ. ಬಡ್ಡಿಯದೇ ೫೦ ರೂಪಾಯಿಗೆ ಮಿಕ್ಕಿ ಆಗುತ್ತದೆ.'

ಹೋರಿರಾಮ ಬಿಕ್ಕಿ ಬಿಕ್ಕಿ ಹೇಳಿದ – 'ಆಯಿತಪ್ಪಾ; ಕಬ್ಬು ಕಡಿಯಲಿಕ್ಕೆ ಬಿಡು ಮೊದಲು. ರೂಪಾಯಿ ಬಂದೊಡನೆ ಎಷ್ಟು ಕೊಡಲಿಕ್ಕೆ ಸಾಧ್ಯ

ಏದೆಯೋ – ಅಷ್ಟು ನಿನಗೂ ಕೊಡುತ್ತೇನೆ. ಊರು ಬಿಟ್ಟು ನಾನು ಓಡಿ ಹೋಗುವುದಿಲ್ಲ. ಅಥವಾ ಇಷ್ಟು ಬೇಗನೆ ಸತ್ತುಹೋಗಲಿಕ್ಕೂ ಇಲ್ಲ. ಸುಮ್ಮನೆ ನೀನು ತಡೆದ ಮಾತ್ರಕ್ಕೆ ಕಬ್ಬಿನಿಂದಲೇ ರೂಪಾಯಿ ಸುರಿಯುವುದೇ?'

ದುಲಾರಿ ಮತ್ತಷ್ಟು ಸಿಡುಕಿನಿಂದ ಹೇಳಿದಳು – 'ಈಗಿನ ಕಾಲವೇ ಕೆಟ್ಟುಹೋಗಿದೆ. ನಿಮ್ಮನ್ನೆಲ್ಲ ನಂಬಲಿಕ್ಕೇ ಆಗುವುದಿಲ್ಲ.'

ದುಲಾರಿಯಿಂದ ಹೋರಿರಾಮ ಮೂವತ್ತು ರೂಪಾಯಿ ಸಾಲ ತೆಗೆದು ಕೊಂಡು ಐದು ವರ್ಷ ದಾಟಿತು. ಮೂರು ವರ್ಷದಲ್ಲಿ ಅದು ನೂರು ರೂಪಾಯಿ ಆಯಿತು. ಆಗ ಸ್ಟಾಂಪಿನ ಮೇಲೆ ಬರೆಸಿಕೊಂಡಳು. ಎರಡು ವರ್ಷದಲ್ಲಿ ಪುನಃ ಐವತ್ತು ರೂಪಾಯಿ ಬಡ್ಡಿಯಾಯಿತು.

ಹೋರಿರಾಮ ಪುನಃ ಹೇಳಿದ – 'ಕಾಲವೇನೂ ಹಾಳಾಗಲಿಲ್ಲ. ದೇವರು ನಡೆಸಿದರೆ ಒಂದು ಪೈ ಕೂಡ ಬಾಕಿ ಇಡದೆ ನಿನ್ನ ಹಣ ಸಲಾಯಿಸುತ್ತೇನೆ. ಈಗೇನೋ ಸ್ವಲ್ಪ ಸೋತುಹೋಗಿದ್ದೇನೆ. ಹಾಗಾಗಿ ಏನು ಬೇಕೋ ಅದನ್ನು ಹೇಳಿಕೋ.'

ಅಂತು ಸಾಹುಕಾರ್ತಿಯು ಹೋಗಿ ಹೆಚ್ಚು ಸಮಯ ದಾಟಲಿಲ್ಲ. ಸಾಹುಕಾರ ಮಂಗಾರಾಮರು ಬಂದೇ ಬಿಟ್ಟರು. ಬಣ್ಣ ಕಪ್ಪು, ದೊಡ್ಡ ಹೊಟ್ಟೆ. ಇದಿರು ಬಂದ ಎರಡು ಹಲ್ಲುಗಳು. ತಲೆಯ ಮೇಲೆ ಟೋಪಿ. ಪ್ರಾಯ ಹೆಚ್ಚುಕಡಮೆ ಐವತ್ತಾಗಿರಬಹುದು. ದೊಣ್ಣೆ ಹಿಡಿದುಕೊಂಡು ನಡೆಯುತ್ತಿದ್ದರು. ಕೆಮ್ಮುತ್ತ ಹತ್ತಿರ ಬಂದು ಹೋರಿರಾಮನನ್ನು ಗದರಿಸ ತೊಡಗಿದರು – 'ಮೊತ್ತ ಮೊದಲು ನಮ್ಮ ರೂಪಾಯಿ ಕೊಟ್ಟು ಬಿಡು ರಾಮ. ಆ ಮೇಲೆ ಕಬ್ಬು ಕಡಿ. ನಾವು ರೂಪಾಯಿ ಕೊಟ್ಟದ್ದು ಸಾಲವಾಗಿ; ಧರ್ಮಾರ್ಥವಾಗಿ ಅಲ್ಲ. ಮೂರು ವರ್ಷ ಮಿಕ್ಕಿ ಹೋಯಿತು. ಬಡ್ಡಿಯೂ ಇಲ್ಲ, ಅಸಲೂ ಇಲ್ಲ. ಆದರೆ ನನ್ನ ಸಾಲ ಮುಳುಗಿಸಿದರೆ, ನಿನ್ನ ಹೆಣದಿಂದ ಲಾದರೂ ವಸೂಲು ಮಾಡದೆ ಬಿಡಲಿಕ್ಕಿಲ್ಲ ನಾನು; ನೋಡಿಕೋ.'

ಸೋಬನಿಗೆ ತಡೆಯಲಿಕ್ಕಾಗಲಿಲ್ಲ. ಅವನು ಹೇಳಿದ – 'ಹಾಗಾದರೆ ಗಾಬರಿ ಏಕಾಗುತ್ತೀರಿ? ಸತ್ತ ಮೇಲೆ ಹೆಣದಿಂದಲೇ ವಸೂಲು ಮಾಡಿ. ಅದೂ ಆಗದಿದ್ದರೆ, ಒಂದೆರಡು ವರ್ಷ ಹಿಂದೆ ಮುಂದೆ, ಇಬ್ಬರೂ ಸ್ವರ್ಗದಲ್ಲಿ ಹೋಗಿ ಸೇರುತ್ತೀರಿ. ಅಲ್ಲಿ ದೇವರ ಇದಿರಲ್ಲೇ ನಿಮ್ಮ ಲೆಕ್ಕಾಚಾರವೆಲ್ಲ ಚುಕ್ತಾ ಮಾಡಿದರಾಯಿತು.'

ಮಂಗಾರಾಮರಿಗೆ ಕೋಪ ತಡೆಯಲಿಕ್ಕಾಗಲಿಲ್ಲ– 'ನೀವೆಲ್ಲ ಶುದ್ಧ ಮೋಸಗಾರರು! ದಗಾ ಬಾಜಿಗಳು! ಸಾಲ ಕೇಳಲು ಬರುವಾಗ ಬಾಲ ಆಡಿಸಿ ಕೊಂಡು ಬರುತ್ತೀರಿ. ಕೊಡಲಿಕ್ಕಾಗುವಾಗ ನಾಯಿಯ ಹಾಗೆ ಗುರ್ರನೆ ಬೊಗಳತೊಡಗುತ್ತೀರಿ. ಮನೆ ಮಾರು, ಎತ್ತು ಕೋಣ–ಎಲ್ಲ ಏಲಂ ಮಾಡಿಸಿಯೇನು'–ಅವರು ಆರ್ಭಟಿಸಿದರು.

ಸೋಬ ಪುನಃ ಕೆಣಕಿದ– 'ಬಹಳ ಒಳ್ಳೆಯದು. ಸತ್ಯಸ್ಥಿತಿ ಹೇಳಿ ನೋಡುವಾ. ಸಾಹುಕಾರರೇ!–ನೀವೆಷ್ಟು ರೂಪಾಯಿ ಕೊಟ್ಟಿದ್ದಿರಿ–ಈಗ ಅದು ಮುನ್ನೂರು ರೂಪಾಯಿ ಆಗಲಿಕ್ಕೆ?'

'ನೀವು ವರ್ಷ ವರ್ಷ ಬಡ್ಡಿ ಕೊಡದಿದ್ದರೆ ಅದು ತನ್ನಷ್ಟಕ್ಕೇ ದೊಡ್ಡ ದಾಗದಿರುತ್ತದೆಯೆ?'

'ಮೊತ್ತಮೊದಲು ನೀವು ಕೊಟ್ಟದ್ದು ಎಷ್ಟು? ಬರೇ ಐವತ್ತು ತಾನೆ?'

'ಅದನ್ನು ಯೋಚಿಸಿ ನೋಡು–ಎಷ್ಟು ದಿನವಾಯಿತು?'

'ಐದಾರು ವರ್ಷವಾಗಿರಬಹುದು.'

'ಸರಿಯಾಗಿ ಹತ್ತು ವರ್ಷ ದಾಟಿತು. ಈಗ ಹನ್ನೊಂದನೆಯ ವರ್ಷ ನಡೆಯುತ್ತಿದೆ.'

'ಐವತ್ತು ರೂಪಾಯಿಗೆ ಮುನ್ನೂರು ರೂಪಾಯಿ ತೆಗೆದುಕೊಳ್ಳುವಾಗ ನಾಚಿಕೆ ಕೂಡಾ ಆಗುವುದಿಲ್ಲವೇ?'

'ನಾಚಿಕೆ ಏಕೆ? ನಾವು ರೂಪಾಯಿ ಕೊಟ್ಟಿಲ್ಲವೇ? ಧರ್ಮಕ್ಕೆ ಕೇಳುವುದೇ?'

ಹೋರಿರಾಮ ಇವರಿಗೂ ಅಡ್ಡಬಿದ್ದು ಸಮಾಧಾನ ಹೇಳಿ ಹಿಂದಕ್ಕೆ ಕಳುಹಿಸಿದ.

ಇತ್ತ ಜಿಂಗುರೀ ಸಿಂಹರು ಮಿಲ್ ಮೆನೇಜರರ ಹತ್ತಿರ ಮಾತಾಡಿ ಮೊದಲೇ ಎಲ್ಲ ವ್ಯವಸ್ಥೆ ಮಾಡಿಕೊಂಡಿದ್ದರು. ಜಿಂಗುರೀ ಸಿಂಹರ ಜನರೇ ಗಾಡಿಗಳಲ್ಲಿ ಕಬ್ಬು ತುಂಬಿಸಿ ದೋಣಿ ಇದ್ದಲ್ಲಿಗೆ ಸಾಗಿಸುತ್ತಿದ್ದರು. ನದಿಯು ಊರಿಂದ ಅರ್ಧ ಮೈಲು ದೂರದಲ್ಲಿತ್ತು. ಒಂದು ಗಾಡಿಯು ದಿನಕ್ಕೆ ೮–೧೦ ಸಲ ಸವಾರಿ ಹೊಡೆಯುತ್ತಿತ್ತು. ದೋಣಿ ಒಂದು ಸವಾರಿಗೆ ಸಾಧಾರಣ ೫೦ ಗಾಡಿಗಳ ಹೊರೆಯನ್ನು ಒಯ್ಯುತ್ತಿತ್ತು. ಈ ರೀತಿಯಲ್ಲಿ ಬಹಳ ಲಾಭ ವಾಗುತ್ತಿತ್ತು. ಈ ಎಲ್ಲ ವ್ಯವಸ್ಥೆ ಮಾಡಿಸಿ ಜಿಂಗುರೀ ಸಿಂಹರು ಊರವರ ಹಾಗೂ ಮಿಲ್ ಒಡೆಯರ ಕೃತಜ್ಞತೆಗೆ ಪಾತ್ರರಾಗಿದ್ದರು.

ಮಿಲ್ಲಿನಲ್ಲಿ ಕಬ್ಬು ತೂಕ ಮಾಡತೊಡಗಿದೊಡನೆಯೇ ಜಿಂಗುರೀ ಸಿಂಹರು ಒಂದು ಕುರ್ಶಿಯ ಮೇಲೆ ಗಟ್ಟಿಯಾಗಿ ಕೂತುಕೊಂಡುಬಿಟ್ಟರು. ಪ್ರತಿಯೊಬ್ಬ ರೈತನ ಕಬ್ಬೂ ತೂಕವಾದೊಡನೆ ರೂಪಾಯಿಯ ಲೆಕ್ಕವಾಗುತ್ತಿತ್ತು. ಖಜಾನೆಯವನಿಂದ ಜಿಂಗುರೀ ಸಿಂಹರು ರೂಪಾಯಿ ತೆಗೆದುಕೊಂಡು, ತನ್ನ ಲೆಕ್ಕದ ಪುಸ್ತಕ ನೋಡಿ, ತನ್ನ ಪಾಲಿನ ಹಣವನ್ನು ಕಳೆದು ಉಳಿದುದನ್ನು ಆ ಆ ಕುಳಗಳಿಗೆ ಕೊಡುತ್ತಿದ್ದರು. ಆ ಕುಳಗಳು ಎಷ್ಟು ಕೂಗಿದರೂ, ಬೊಬ್ಬಿಟ್ಟರೂ ಕೇಳುವವರೇ ಇಲ್ಲ. ಮಿಲ್ ಒಡೆಯರ ಹುಕುಮೇ ಹಾಗಾಗಿತ್ತೆಂದ ಮೇಲೆ ಆಫೀಸಿನವರು ಏನು ತಾನೆ ಮಾಡಿಯಾರು ?

ಹೋರಿರಾಮನಿಗೆ ಒಂದು ನೂರ ಇಪ್ಪತ್ತು ರೂಪಾಯಿ ಬಂತು. ಅದರಲ್ಲಿ ತನ್ನ ಎಲ್ಲ ರೂಪಾಯಿಯನ್ನೂ ಬಡ್ಡಿ ಸಮೇತ ಕಳೆದು ಜಿಂಗುರೀ ಸಿಂಹರು ಹೆಚ್ಚುಕಡಿಮೆ ೨೫ ರೂಪಾಯಿ ಹೋರಿರಾಮನ ಕೈಯಲ್ಲಿ ಹಾಕಿದರು.

ಹೋರಿರಾಮ ರೂಪಾಯಿಯತ್ತ ಉದಾಸೀನಭಾವದಿಂದ ನೋಡಿ ಹೇಳಿದ – 'ಇದನ್ನು ತೆಗೆದುಕೊಂಡು ನಾನೇನು ಮಾಡಲಿ ಸ್ವಾಮಿ? ಇದನ್ನು ಸಹ ನೀವೇ ಇಟ್ಟುಕೊಳ್ಳಿ.'

ಜಿಂಗುರೀ ಸಿಂಹರು ಆ ಇಪ್ಪತ್ತೈದು ರೂಪಾಯಿಗಳನ್ನು ನೆಲದ ಮೇಲೆ ಎಸೆದುಬಿಟ್ಟು ಹೇಳಿದರು – 'ಬೇಕಾದರೆ ತೆಗೆದುಕೋ; ಇಲ್ಲವಾದರೆ ಬೀಸಾಡು. ಅದು ನಿನ್ನ ಇಷ್ಟ. ನಿನ್ನ ಹಾಳು ಕಬ್ಬಿನಿಂದಾಗಿ ಮಿಲ್ಲಿನ ಒಡೆಯರ ಬಾಯಿಂದ ನಾನು ಕೇಳಬೇಕಾಯಿತು. ಅತ್ತ, ರಾಯ್ ಸಾಹೇಬರು ದಂಡದ ಹಣ ಕೊಟ್ಟುಬಿಡಬೇಕೆಂದು ಗದರಿಸುತ್ತಿದ್ದಾರೆ. ನಿನ್ನ ಬಡತನ ನೋಡಿ ದಯೆಯಿಂದ ಇಷ್ಟು ರೂಪಾಯಿಯಾದರೂ ಕೊಟ್ಟೆ. ಇಲ್ಲವಾದರೆ ಒಂದು ಕಾಸು ಕೂಡಾ ಕೊಡುತ್ತಿರಲಿಲ್ಲ. ಇನ್ನು ಪುನಃ ರಾಯ್ ಸಾಹೇಬರು ಗದರಿಕೆ ಹಾಕಿದರೆ ರೂಪಾಯಿ ಕೈಯಿಂದ ಕೊಡಬೇಕಾದೀತು.'

ಹೋರಿರಾಮ ರೂಪಾಯಿಗಳನ್ನು ಮೆಲ್ಲನೆ ನೆಲದಿಂದ ಹೆಕ್ಕಿಕೊಂಡು ಹೊರಬಂದ. ಆಗ ನೋಖೇರಾಮರು ಮುಂದೆ ಬಂದು ಕಣ್ಣು ಕೆಂಪು ಮಾಡಿದರು. ಹೋರಿರಾಮ ಹೋಗಿ ಆ ಇಪ್ಪತ್ತೈದು ರೂಪಾಯಿಗಳನ್ನೂ ಅವರ ಕೈಯಲ್ಲಿಟ್ಟು, ಏನೂ ಮಾತಾಡದೆ ಬೇಗನೇ ಹೊರಟೇ ಬಿಟ್ಟ. ಅವನ ತಲೆ ತಿರುಗಲಾರಂಭಿಸಿತ್ತು. ಸೋಬನಿಗೂ ಅಷ್ಟೇ ರೂಪಾಯಿ ಸಿಕ್ಕಿತ್ತು. ಅವನು ಹೊರಬಂದೊಡನೆಯೇ ಪಟೇಶ್ವರೀಲಾಲರು ಅಡ್ಡ ಕಟ್ಟಿದರು.

ಆದರೆ ಸೋಬನೂ ಅಡ್ಡ ಮಾತಾಡಿದ – ' ನನ್ನ ಕೈಯಲ್ಲೀಗ ರೂಪಾಯಿ ಸಿಗಲಿಕ್ಕೇ ಇಲ್ಲ. ಏನು ಬೇಕಾದರೂ ಮಾಡಿ.'

ಪಟೇಶ್ವರೀಲಾಲರು ಗದರಿಸಿ ಕೇಳಿದರು – 'ನಿನ್ನ ಕಬ್ಬು ಮಾರಾಟ ವಾಯಿತೇ – ಇಲ್ಲವೇ ?'

' ಹೌದು; ಮಾರಾಟವಾಯಿತು.'

' ಕಬ್ಬು ಮಾರಿ ಹಣ ಕೊಡುತ್ತೇನೆಂದು ನೀನು ಹೇಳಿಲ್ಲವೇ ? '

' ಹೌದು ; ಹೇಳಿದ್ದೆ. '

' ಹಾಗಾದರೆ ಈಗೇಕೆ ಕೊಡುವುದಿಲ್ಲ ? ಉಳಿದವರಿಗೆಲ್ಲ ಕೊಟ್ಟಿರುವೆ ಯಲ್ಲ ! '

' ಹೌದು, ಕೊಟ್ಟಿದ್ದೇನೆ. '

' ಹಾಗಾದರೆ ನನಗೇಕೆ ಕೊಡುವುದಿಲ್ಲ ? '

' ಇನ್ನು ನನ್ನ ಕೈಯಲ್ಲಿದ್ದುದು ಮಕ್ಕಳು ಮರಿಗಳ ಹೊಟ್ಟೆಗೆ ಬೇಡವೆ?'

ಪಟೇಶ್ವರೀಲಾಲರು ಧೈರ್ಯಯುಕ್ತ ಸ್ವರದಿಂದ ಹೇಳಿದರು— ' ಒಳ್ಳೆಯ ಮಾತಿನಿಂದ ನನ್ನ ಹಣ ಕೊಟ್ಟುಬಿಡು ಸೋಬಾ. ಇಲ್ಲವಾದರೆ ನೋಡು. ಒಂದೇ ರಿಪೋರ್ಟಿನಲ್ಲಿ ನಿನ್ನನ್ನು ಆರು ತಿಂಗಳು ಕಳುಹಿಸಿಯೇನು. ಒಂದು ದಿನವೂ ಕಡಮೆಯಾಗಲಿಕ್ಕಿಲ್ಲ. ನಿನ್ನ ಜೂಜಾಟದ ಕತೆಯೆಲ್ಲ ರಿಪೋರ್ಟಿನಲ್ಲಿ ಹೊರ ಬಂದೀತು. ನಾನು ಜಮೀನ್ದಾರರ ನೌಕರನೂ ಅಲ್ಲ ; ನಿನ್ನ ಹಣ ಗಾರರ ಕೆಲಸದವನೂ ಅಲ್ಲ. ದೊಡ್ಡ ಸರಕಾರದ ನೌಕರ ನಾನು ! ನಿನ್ನ ಜಮೀನ್ದಾರರು, ಮಿಲ್ಲಿನವರು – ಎಲ್ಲರೂ ನಮ್ಮ ಸರಕಾರದ ಕೈಕೆಳಗೇ ಇರುವವರು ! '

ಸೋಬನೂ ಹೋರಿರಾಮನೂ ಸ್ವಲ್ಪ ದೂರ ಹೋಗಿ ಯೋಚಿಸತೊಡಗಿ ದರು. ಈ ಬೆದರಿಕೆಯಿಂದಾಗಿ ಅವರ ಸ್ಮೃತಿಯೇ ತಪ್ಪುವಂತಾಯಿತು. ಹೋರಿರಾಮ ಹೇಳಿದ – ' ಸೋಬಾ – ಅವರ ರೂಪಾಯಿ ಕೊಟ್ಟುಬಿಡು. ಕಬ್ಬಿನ ಗದ್ದೆಗೆ ಬೆಂಕಿ ಬಿದ್ದು ಹೋಯಿತೆಂದು ತಿಳಿದುಕೋ. ನಾನು ಕೂಡ ಹಾಗೇ ಹೇಳಿಕೊಂಡು ಮನಸ್ಸಮಾಧಾನ ಮಾಡಿಕೊಂಡೆ. '

ಸೋಬನೂ ತಗ್ಗಿದ ಸ್ವರದಿಂದ ಹೇಳಿದ – ' ಹೌದಪ್ಪ – ಕೊಟ್ಟು ಬಿಡು ವುದೇ ಲೇಸು. ಕೊಡದೆ ಹೋಗುವುದಾದರೂ ಎಲ್ಲಿಗೆ ? '

ಮುಂದಿನಿಂದ ಗಿರಿಧರ ಹೆಂಡ ಕುಡಿದು ಮಾಲುತ್ತ ಬರುತ್ತಿದ್ದ. ಅವನು

ಇವರಿಬ್ಬರನ್ನೂ ನೋಡಿ ಹೇಳಿದ– ‘ ಆ ಜಿಂಗುರಿ ಎಲ್ಲವನ್ನೂ ಕಸಿದುಕೊಂಡು ಬಿಟ್ಟ ಚಿಕ್ಕಪ್ಪಾ ; ಎಲ್ಲ ಕಸಿದುಕೊಂಡ. ಕಡಲೆ ತಿನ್ನಲಿಕ್ಕೂ ಒಂದು ಕಾಸು ಬಿಡಲಿಲ್ಲ. ಕೊಲೆ ಪಾತಕಿ ! ಬೇಡಿದೆ, ಕೂಗಿದೆ. ಆದರೆ ಆ ಪಾಪಿಗೆ ಸ್ವಲ್ಪವೂ ದಯೆ ಬರಲಿಲ್ಲ.

ಸೋಬನೆಂದ– ‘ ಕಳ್ಳು ಕುಡಿದಿರುವೆ ಬೇಕಾದಷ್ಟು ! ಅದರ ಮೇಲೆ ಒಂದು ಪೈಯೂ ಸಿಕ್ಕಿಲ್ಲವೆಂದು ಹೇಳುವೆಯಲ್ಲ ! ’

ಗಿರಿಧರ ಹೊಟ್ಟೆ ತೋರಿಸಿ ಹೇಳಿದ– ‘ ಹಾಗಲ್ಲ ; ಒಂದಾಣೆಯನ್ನು ಮೆಲ್ಲನೆ ಅಡಗಿಸಿಟ್ಟುಕೊಂಡಿದ್ದೆ. ಆದರಿಂದಲೇ ಕಳ್ಳು ಕುಡಿದೆ. ಒಂದು ವರ್ಷವಿಡೀ ಬೆವರು ಸುರಿಸಿದ್ದಕ್ಕೆ ಒಂದಾಣೆಯ ಕಳ್ಳಾದರೂ ಬೇಡವೆ ? ಈ ಒಂದಾಣೆಯ ಹೆಂಡದಲ್ಲಿ ಏನು ಅಮಲಾದೀತು ! ಆದರೂ, ಚನ್ನಾಗಿ ಕುಡಿದಿದ್ದಾನೆಂದು ಜನರು ತಿಳಿಯಲಿ–ಎಂಬುದಾಗಿ ತಲೆಯಾಡಿಸುತ್ತಿದ್ದೇನೆ; ಅಷ್ಟೆ. ಎಂದೋ ೨೦ ರೂಪಾಯಿ ತೆಗೆದುಕೊಂಡಿದ್ದೆ. ಅದಕ್ಕೀಗ ಸರಿಯಾಗಿ ೧೬೦ ತೆಗೆದುಕೊಂಡು ಬಿಟ್ಟ ಆ ಜಿಂಗುರೀ ಪ್ರೇತ. ಅಬ್ಬ! ಒಂದು ಮಿತಿ ಬೇಡವೇ?’

ಹೋರಿರಾಮ ಮನೆಗೆ ಹೋಗಿ ಸೇರಿದ. ಆಗ ರೂಪಳು ನೀರು ತೆಗೆದುಕೊಂಡು ಬಂದಳು. ಸೋನೆಯು ಚಿಲುಮೆ ಸರಿಮಾಡಿ ತಂದಳು. ದನಿಯಳು ಉಪ್ಪುಕಡಲೆ ಹಿಡಿದುಕೊಂಡು ಬಂದಳು. ಅಂತು ಎಲ್ಲರೂ ಆಶಾಭರಿತ ನೇತ್ರಗಳಿಂದ ಅವನತ್ತ ನೋಡತೊಡಗಿದರು. ಜುನಿಯಳೂ ಬಾಗಿಲ ಹತ್ತಿರ ನಿಂತಿದ್ದಳು. ಹೋರಿರಾಮ ಉದಾಸೀನ ಮುಖದಿಂದ ಬಂದು ಕೂತುಕೊಂಡ. ಹೇಗೋ ಹೇಗೋ – ಕೈಕಾಲು ಮುಖ ತೊಳೆದ. ಕೊಲೆ ಮಾಡಿ ಬಂದವನಷ್ಟು ಬೇಸರ, ದುಃಖ, ಅವನ ಮುಖದ ಮೇಲೆ ತೋರಿಬರುತ್ತಿತ್ತು.

‘ ಎಷ್ಟು ಮಣವಾಯಿತು ? ’ – ದನಿಯಾ ಕೇಳಿದಳು.

‘ ಸರಿಯಾಗಿ ನೂರ ಇಪ್ಪತ್ತು ಸಿಕ್ಕಿತು. ಆದರೆ ಎಲ್ಲವನ್ನೂ ಸೆಳೆದುಕೊಂಡು ಬಿಟ್ಟರು. ಒಂದು ಕಾಸು ಕೂಡಾ ಉಳಿಯಲಿಲ್ಲ. ’

ದನಿಯಾ ತಲೆಯಿಂದ ಕಾಲಿನ ವರೆಗೂ ಉರಿದು ಭಸ್ಮವಾಗಿ ಹೋದಂತಾದಳು. ಮನಸ್ಸಿನ ಉದ್ವೇಗದ ಭರ ತಡೆಯಲಾರದಂತಿತ್ತು. ಅವಳು ಹೇಳಿದಳು – ‘ ನಿಮ್ಮಂತಹ ಮೂಢರನ್ನು ಆ ದೇವರು ಏಕೆ ಸೃಷ್ಟಿಸಿದನೋ – ಅವನೇ ಬಲ್ಲ ! ಸಿಕ್ಕುತ್ತಿದ್ದರೆ ಖಂಡಿತ ಅವನೊಡನೆ ಕೇಳುತ್ತಿದ್ದೆ. ನಿಮ್ಮೊಡನೆ ಸೇರಿ ಇಡೀ ಜೀವನವೇ ಮಣ್ಣುಪಾಲಾಯಿತು. ಸಾವಾದರೂ ಬಂದಿದ್ದರೆ

ಒಮ್ಮೆಗೆ ಈ ಲಥಾಡಿಯಿಂದ ಬಿಡುಗಡೆಯಾಗುತ್ತಿತ್ತು. ಎಲ್ಲ ರೂಪಾಯಿಗಳನ್ನೂ ತೆಗೆದು ನಿಮ್ಮ ಭಾವಂದಿರಿಗೆ ಕೊಟ್ಟು ಬಿಟ್ಟಿರಲ್ಲ? ಇನ್ನೀಗ ಬೇರಾವ ಉತ್ಪತ್ತಿ ಇದೆ ಎತ್ತು ತೆಗೆಯಲಿಕ್ಕೆ ? ಇನ್ನು, ಉಳುವಾಗ ನೊಗಕ್ಕೆ ನನ್ನನ್ನು ಕಟ್ಟುವಿರೇ ಅಥವಾ ನೀವೇ ಹೆಗಲು ಕೊಡುವಿರೇ ? ಇಷ್ಟು ಪ್ರಾಯ ನಿಮಗೆ ಸಂದುಹೋಯಿತು ! ಎತ್ತುಗಳಿಗೆ ಬೇಕಾದಷ್ಟನ್ನಾದರೂ ಉಳಿಸಿಕೊಳ್ಳಲಿಕ್ಕೆ ನಿಮಗೆ ಯೋಚನೆ ಬರಲಿಲ್ಲವೇ ? ಯಾರಾದರೂ ನಿಮ್ಮ ಕೈಯಿಂದ ಬಲಾತ್ಕಾರದಿಂದ ಎಳೆದುಕೊಂಡಿರಲಿಕ್ಕಿಲ್ಲ. ಇನ್ನು ನಮ್ಮನ್ನೆಲ್ಲ ಕರೆದುಕೊಂಡು ಹೋಗಿ ಆ ನದಿಯ ನೀರಲ್ಲಿ ಮುಳುಗಿಸಿ ಬಿಡಿ! ನರಳಿ ನರಳಿ ಸಾಯುವುದಕ್ಕಿಂತ ಒಂದೇ ಸಲ ಮುಗಿದು ಹೋಗುವುದು ಎಷ್ಟೋ ಲೇಸು. ನಿಮಗೆ ಬೇಕಾಗಿದ್ದರೆ ಹುಲ್ಲು ಮೇಯಿರಿ. ಆದರೆ ನಮ್ಮಿಂದ ಮಾತ್ರ ಸಾಧ್ಯವಿಲ್ಲ.

ಹೋರಿರಾಮು ತಲೆ ತಗ್ಗಿಸಿಕೊಂಡು ತನ್ನ ಅದೃಷ್ಟದ ವಿಚಾರದಲ್ಲಿ ಆಳುತ್ತಲಿದ್ದ. ಬೈದು ಮುಗಿದ ಮೇಲೆ, ದನಿಯಳಿಗೆ ಒಮ್ಮೆ ಅವನ ಮುಖ ನೋಡಿ ನಗೆಯೂ ಬಂತು. ಆದರೆ ಅವನಿಗೆ ಮಾತ್ರ ಅದು ಗೊತ್ತಾಗಲಿಲ್ಲ. ಅವನು ಹೇಳಿದ – ' ಎಲ್ಲಿಯಾದರೂ ಕೂಲಿ ಕೆಲಸ ಮಾಡುವಾ. ಅದರಿಂದ ಕೂಲಿಯಾದರೂ ಸಿಕ್ಕೀತಲ್ಲ ? '

ಆಗ ದನಿಯಾ ಕೇಳಿದಳು – ' ಈ ಹಳ್ಳಿಯಲ್ಲಿ ಕೂಲಿಯಾದರೂ ಎಲ್ಲಿ ಸಿಗುತ್ತದೆ? ಅಥವಾ ಯಾವ ಮುಖದಿಂದ ಕೂಲಿ ಮಾಡುವುದು ? ನೀವು ಭೂಮಿ ಇದ್ದವರಲ್ಲವೇ ? '

ಹೋರಿರಾಮು ಚಿಲುಮೆಯನ್ನು ಪುನಃ ಪುನಃ ಸೇದಿ ಹೇಳಿದ– ' ನೋಡು, ಕೂಲಿ ಕೆಲಸ ಮಾಡುವುದು ಪಾಪದ ಕೆಲಸವಲ್ಲ. ಇಂದು ಕೂಲಿಯಾಗಿದ್ದವನು ನಾಳೆ ಬೇಸಾಯಗಾರನಾಗುತ್ತಾನೆ. ಬೇಸಾಯ ಕೆಟ್ಟು ಹೋದರೆ ಪುನಃ ಕೂಲಿಯಾಗುತ್ತಾನೆ. ನಮ್ಮ ತಲೆಯಲ್ಲಿ ಅದೇ ಬರೆದಿದೆ–ಎಂದು ಕಾಣುತ್ತದೆ. ಇಲ್ಲವಾದರೆ ಈ ಎಲ್ಲ ಗಂಡಾಂತರ ಏಕೆ ಬರುತ್ತಿತ್ತು ? ದನ ಏಕೆ ಸತ್ತು ಹೋಯಿತು ? ಸುಮ್ಮನಾದರೂ ಹುಡುಗ ಏಕೆ ಓಡಿ ಹೋದ ? '

ದನಿಯಳು ಸೊಸೆ ಮತ್ತು ಮಗಳಂದಿರತ್ತ ನೋಡಿ ಹೇಳಿದಳು– ' ನೀವೆಲ್ಲ ಸುತ್ತುಗಟ್ಟಿ ಏನನ್ನು ನೋಡುತ್ತಿದ್ದೀರಿ? ಹೋಗಿ ನಿಮ್ಮ ನಿಮ್ಮ ಕೆಲಸ ಮಾಡಿ, ನೋಡುವಾ. ಪೇಟೆಗೆ ಹೋದವರು ಬರುವಾಗ ಮಕ್ಕಳಿಗಾಗಿ ಏನಾದರೂ ಮಿಠಾಯಿ, ತಿಂಡಿ, ತರುವವರು ಇವರಲ್ಲ. ಸಿಕ್ಕಿದ ಹಣವನ್ನು ಹೇಗೆ

ಯಾರ್‍ಯಾರ ಕೈಯಲ್ಲಿ ಕೊಟ್ಟು ಬರಬಹುದೆಂಬುದೇ ಇವರ ಯೋಚನೆ. ಅದರಿಂದಾಗಿಯೇ ಇವರ ಸಂಪಾದನೆ ಪ್ರಯೋಜನಕ್ಕೆ ಬರುವುದಿಲ್ಲ. ಖರ್ಚು ಮಾಡುವವರಿಗೇ ಹಣ ಬರುವುದು. ಬಂದ ಹಣದಿಂದ ಯಾರು ಉಣ್ಣುವುದಿಲ್ಲವೋ, ಉಡುವುದಿಲ್ಲವೋ – ಅವರಿಗೇಕೆ ಹಣ ? ತೆಗೆದು ಅದನ್ನು ಹೂತಿಡಲಿಕ್ಕೆಯೇ ? '

ಹೋರಿರಾಮ ಗಹಗಹನೆ ನಕ್ಕು ಕೇಳಿದ – ' ಆ ಹೂತಿಟ್ಟ ಹಣದ ಕೊಪ್ಪರಿಗೆ ಎಲ್ಲಿದೆ ನೋಡುವಾ ! '

" ಎಲ್ಲಿಟ್ಟಿದ್ದೀರೋ ಅಲ್ಲೇ ಇರಬಹುದು. ಇದೆಲ್ಲ ಗೊತ್ತಿದ್ದೂ ಏಕೆ ಹೀಗೆ ಮಾಡುವಿರೋ – ತಿಳಿಯುವುದಿಲ್ಲ. ಬರೇ ನಾಲ್ಕು ಕಾಸಿನ ತಿಂಡಿ ತಂದು ಮಕ್ಕಳ ಕೈಯಲ್ಲಿಡುತ್ತಿದ್ದರೆ ನೀವೇನಾದರೂ ಮುಳುಗಿ ಹೋಗುತ್ತಿದ್ದಿರೇ ? ಜಿಂಗುರೀ ಸಿಂಹರಿಗೆ – ' ಆದರಲ್ಲಿ ಒಂದು ರೂಪಾಯಿ ಕೊಟ್ಟು ಬಿಡಿ ; ಇಲ್ಲವಾದರೆ ಒಂದು ಪೈಯೂ ಕೊಡಲಿಕ್ಕಿಲ್ಲ ; ಕೋರ್ಟಿಗೆ ಹೋಗಿ ನೋಡಿಕೊಳ್ಳಿ ' – ಎಂದು ಹೇಳಬಾರದಿತ್ತೇ ? "

ಹೋರಿರಾಮನಿಗೆ ನಾಚಿಕೆಯಾಯಿತು. ಅವನಿಗೆ – ' ಆ ೨೫ ರೂಪಾಯಿಗಳನ್ನು ನೋಖೇರಾಮರ ಕೈಗೆ ಕೊಡದಿರುತ್ತಿದ್ದರೆ ಅವರೇನು ಮಾಡುತ್ತಿದ್ದರು ? ಹೆಚ್ಚೆಂದರೆ ನಾಲ್ಕಾರಾಣೆಯ ಬಡ್ಡಿ ಏರಿಸುತ್ತಿದ್ದರು. ಮತ್ತೇನು ?' ಎಂದು ತೋರಿತು.

ಜುನಿಯಳು ಒಳಗೆ ಹೋಗಿ ಸೋನೆಯೊಡನೆ ಹೇಳಿದಳು – ' ಪಾಪ ! ನನಗೆ ಮಾವನನ್ನು ನೋಡಿ ಪಾಪ ಕಾಣುತ್ತದೆ. ದಿನವಿಡೀ ದುಡಿದು ಬೇಸರದಿಂದ ಮನೆಕಡೆ ಬರುವಾಗ, ಅತ್ತೆ ಬೈಯತೊಡಗುತ್ತಾರೆ. ಸಾಲಗಾರರು ಕುತ್ತಿಗೆ ಹಿಡಿದರೆ, ಅವರೇನು ಮಾಡಿಯಾರು ? '

' ಹಾಗಾದರೆ ಎತ್ತುಗಳೆಲ್ಲಿಂದ ಬರುವುದು ? '

' ಸಾಲಗಾರರು ಅವರ ರೂಪಾಯಿ ಕಸಿದುಕೊಳ್ಳುತ್ತಾರೆ. ಅವರಿಗೆ ನಿಮ್ಮ ಮನೆಯ ಸಂಕಷ್ಟಗಳ ಪರವೆ ಏನು ? '

' ಅಮ್ಮ ಅಲ್ಲಿರುತ್ತಿದ್ದರೆ ಸಾಲಗಾರರಿಗೆಲ್ಲ ಬುದ್ಧಿ ಕಲಿಸುತ್ತಿದ್ದಳು. ಪಾಪ ! ಸುಮ್ಮನೆ ಈಗ ಅಳುತ್ತಿದ್ದಾಳೆ. '

ಜುನಿಯಾ ಪರಿಹಾಸ ಮಾಡಿದಳು – ' ರೂಪಾಯಿಗೆ ಅಷ್ಟೇನೂ ಕಷ್ಟವಿಲ್ಲ. ಅಮ್ಮನ ಬದಲಾಗಿ ನೀನು ಹೋಗಿ ಸಾಲಗಾರರ ಹತ್ತಿರ ಸ್ವಲ್ಪ

ನಗಾಡಿ ಮಾತಾಡಿಬಿಟ್ಟರೆ-- ಎಲ್ಲ ರೂಪಾಯಿಯನ್ನೂ ಬಿಟ್ಟು ಬಿಡುತ್ತಿದ್ದರು. ನಿಜವಾಗಿಯೂ ನಿನ್ನಪ್ಪನ ಎಲ್ಲ ದುಃಖವೂ ದೂರವಾದೀತು.'

ಸೋನೆ ತನ್ನ ಎರಡೂ ಕೈಗಳಿಂದ ಅವಳ ಬಾಯಿಯನ್ನು ಮುಚ್ಚಿ ಕೋಪದಿಂದ-'ಬಾಯಿ ಮುಚ್ಚಿಕೊಂಡಿರು. ಇಲ್ಲವಾದರೆ ಅಮ್ಮನ ಹತ್ತಿರ ಮಾತಾದೀನನ ಎಲ್ಲ ಸಮಾಚಾರವನ್ನೂ ಹೇಳಿ ಬಿಟ್ಟೇನು' ಎಂದಳು.

ಆಗ ಜುನಿಯಳೆಂದಳು-'ಅಮ್ಮನ ಹತ್ತಿರ ಹೇಳುವುದೇನನ್ನು? ಅಥವಾ ಹೇಳಲಿಕ್ಕಾದರೂ ಏನಿದೆ? ಯಾರಾದರೂ ಕೆಲಸದ ಮೇಲೆ ಮನೆಗೆ ಬಂದರೆ ಅವರನ್ನು ಹೊಡೆದು ಹೊರಮಾಡಬೇಕೇ? ನನ್ನ ಕೈಯಿಂದ ಅವರೇನನ್ನೂ ಹಿಡಿದುಕೊಂಡು ಹೋಗುವುದಿಲ್ಲ. ಅವರೇ ಏನಾದರೂ ಕೊಟ್ಟು ಹೋಗುತ್ತಾರೆ. ಅವರು ಬೆಲ್ಲದಂತಹ ನಾಲ್ಕು ಮಾತುಗಳನ್ನಾಡಿದ ಮಾತ್ರಕ್ಕೆ ಈ ಜುನಿಯಳಿಂದ ಅವರಿಗೇನೂ ಸಿಗಲಿಕ್ಕಿಲ್ಲ. ಮಾತ್ರವಲ್ಲದೆ, ನನ್ನ ಸಕ್ಕರೆಯಂತಹ ಮಾತುಗಳನ್ನು ಒಳ್ಳೆಯ ಬೆಲೆಗೆ ಮಾರಲಿಕ್ಕೂ ನನಗೆ ಗೊತ್ತಿದೆ. ಯಾರ್‍ಯಾರ ಬಲೆಯಲ್ಲಿ ಬೀಳುವಷ್ಟು ಹೆಡ್ಡಳೂ ನಾನಲ್ಲ. ನಿನ್ನ ಅಣ್ಣ ಅಲ್ಲಿ ಯಾರನ್ನಾದರೂ ಕೈಯೊಳಗೆ ಮಾಡಿಕೊಂಡಿದ್ದಾರೆಂದು ತಿಳಿದರೆ ಮಾತ್ರ, ಮತ್ತೆ ನನ್ನನ್ನು ಯಾರಿಗೂ ಕೇಳುವ ಅಧಿಕಾರವಿಲ್ಲ. ಈಗಿನ ಮಟ್ಟಿಗೆ ನನಗೆ ವಿಶ್ವಾಸವಿದೆ- ಅವರು ನನ್ನವರಾಗಿದ್ದಾರೆ; ನನಗಾಗಿಯೇ ಅವರು ಬೀದಿ ಬೀದಿ ಅಲೆದಾಡುತ್ತಿದ್ದಾರೆ-ಎಂಬುದಾಗಿ. ಮಾತಾಡುವುದು, ನಗುವುದು- ಆ ವಿಚಾರ ಬೇರೆ. ಆದರೆ ನಾನವರಿಗೆ ವಿಶ್ವಾಸಘಾತ ಮಾತ್ರ ಮಾಡಲಾರೆ.'

ಅಷ್ಟರಲ್ಲಿ ಹೊರಗಿಂದ ಸೋಬ ಬಂದ. ಅಣ್ಣತಮ್ಮಂದಿರು ಸೇರಿ, ರೂಪಾಯಿ ಕಳೆದುಕೊಂಡ ದುಃಖದ ವಿಚಾರ ಮಾತಾಡಿಕೊಳ್ಳತೊಡಗಿದರು. ಅಷ್ಟು ಹೊತ್ತಿಗೆ ದೂರದಿಂದ ಶಂಖದ ಧ್ವನಿ ಕೇಳಿ ಬಂತು. ಊರ ಒಂದು ಬದಿಯಲ್ಲಿ ಧ್ಯಾನಸಿಂಹರೆಂಬ ಒಬ್ಬ ಜಮೀನ್ದಾರರು ವಾಸಿಸುತ್ತಿದ್ದರು. ಅವರು ಮಿಲಿಟರಿಯ ಕೆಲಸದಲ್ಲಿ ಬಹು ಸಮಯ ಇದ್ದವರು. ಹತ್ತು ವರ್ಷಗಳ ನಂತರ ಈಗ ರಜೆ ಪಡೆದು ಬಂದಿದ್ದರು. ಬಗದಾದ್, ಏಡನ್, ಬರ್ಮಾ, ಸಿಂಗಪುರ-ಮುಂತಾದ ಎಲ್ಲ ದೇಶಗಳನ್ನು ಸುತ್ತಾಡಿ ಬಂದಿದ್ದರು. ಈಗ ಮದುವೆ ಮಾಡಿಕೊಳ್ಳುವ ಯೋಚನೆಯಲ್ಲಿದ್ದು ಇಂದು ಸತ್ಯನಾರಾಯಣ ವ್ರತ ಮಾಡಿಸುತ್ತಿದ್ದರು.

ಹೋರಿರಾಮ ಹೇಳಿದ –'ಏಳೂ ಅಧ್ಯಾಯಗಳು ಮುಗಿದುವೆಂದು

ತೋರುತ್ತದೆ.   ಇನ್ನೀಗ ಆರತಿಯಾಗುತ್ತದೆ.'

ಸೋಬ ಹೇಳಿದ–'ಹೌದು, ಆರತಿಯಾಗುತ್ತಿದೆ. ಹೋಗಿ ಪೂಜೆ ನೋಡಿಕೊಂಡು ಬಂದು ಬಿಡುವಾ.'

ಹೋರಿರಾಮು ಬೇಸರದಿಂದ–'ನೀನು ಹೋಗು; ನಾನು ಸ್ವಲ್ಪ ತಡೆದು ಬರುತ್ತೇನೆ'–ಎಂದ.

ಧ್ಯಾನಸಿಂಹರು ಬಂದ ದಿನವೇ ಎಲ್ಲರ ಮನೆಗೂ ಒಂದೊಂದು ಸೇರು ಮಿಠಾಯಿ, ಹಣ್ಣು ಕಳುಹಿಸಿದ್ದರು. ಹೋರಿರಾಮುನನ್ನು ದಾರಿಯಲ್ಲಿ ಕಂಡಾಗಲೆಲ್ಲ ಯೋಗಕ್ಷೇಮ ವಿಚಾರಿಸುತ್ತಿದ್ದರು. ಅವರಲ್ಲಿ ಪೂಜೆಗೆ ಹೋಗಿ, ಆರತಿಯಲ್ಲಿ ಏನಾದರೊಂದು ಕಾಣಿಕೆ ಹಾಕದೆ ಬರುವುದು ಅಪಮಾನವಲ್ಲವೇ ? ಆರತಿಯ ತಟ್ಟೆಯನ್ನು ಅವರೇ ಹಿಡಿದುಕೊಂಡು ಬಂದಾರು ! ಹಾಗಿರುತ್ತ ಹೇಗೆ ಬರಿಗೈಯಿಂದ ಆರತಿ ತೆಗೆದುಕೊಳ್ಳುವುದು ? ಇದಕ್ಕಿಂತ ಆ ಪೂಜೆಗೆ ಹೋಗದಿರುವುದೇ ಒಳಿತು. ಅಷ್ಟು ದೊಡ್ಡ ಗುಂಪಿನಲ್ಲಿ ಹೋರಿರಾಮು ಬರಲಿಲ್ಲನೆಂದು ಅವರಿಗೆ ಹೇಗೆ ಗೊತ್ತಾದೀತು ? ಯಾರ್ಯಾರು ಬಂದಿದ್ದಾರೆಂದು ನೋಡಲು 'ರೆಜಿಸ್ಟರ್' ಹಿಡಿದುಕೊಂಡು ಯಾರಾದರೂ ಕೂತಿರುವರೇ ?   ಹೀಗೆಣಿಸಿ, ತನ್ನ ಬಿದಿರ ಮಂಚದ ಮೇಲೆ ಬಿದ್ದುಕೊಂಡ.

ಆದರೆ ಅವನ ಮನಸ್ಸಿನೊಳಗೆ ಏನೇನೋ ಸಂಕಟವಾಗಲಾರಂಭಿಸಿತು. ಹತ್ತಿರ ಒಂದು ಕಾಸೂ ಇದ್ದಿಲ್ಲ. ತಾಮ್ರದ ಒಂದು ತಗಡೂ ಉಳಿದಿರಲಿಲ್ಲ. ಅಥವಾ ಕೇವಲ ಭಕ್ತಿಯ ಕಾಣಿಕೆಯನ್ನಿತ್ತು ಆರತಿ ತೆಗೆದುಕೊಳ್ಳಲಾಗದೇ ? ಆದರೂ ನಾಲ್ಕು ಜನರಿದಿರು ಮರ್ಯಾದೆಯನ್ನು ಹೇಗೆ ಕಳೆದುಕೊಳ್ಳುವುದು ?

ಫಕ್ಕನೆ ಅವನು ಎದ್ದು ಕೂತುಕೊಂಡ. ಯಾಕೆ ತಾನು ಮರ್ಯಾದೆಯ ಗುಲಾಮನಾಗಬೇಕು ? ಮರ್ಯಾದೆಯ ಹೆಸರಲ್ಲಿ ಆರತಿಯ ಪುಣ್ಯವನ್ನೇಕೆ ಬಿಡಬೇಕು ? ಜನರು ನಕ್ಕರೆ ನಗಲಿ. ಅವನಿಗೆ ಅದರ ಲಕ್ಷ್ಯವಿಲ್ಲ. ದೇವರು ಅವನನ್ನು ಕೆಟ್ಟ ಕೆಲಸದಿಂದ ಕಾಪಾಡಿದರೆ ಸಾಕು. ಬೇರೆ ಏನೂ ಅವನಿಗೀಗ ಬೇಡವಾಗಿದೆ.

ಕೊನೆಗೆ ಅವನು ಹರಿದ ಶಾಲೊಂದನ್ನು ಹೆಗಲ ಮೇಲೆ ಹಾಕಿಕೊಂಡು ಧ್ಯಾನಸಿಂಹರ ಮನೆಯತ್ತ ಹೊರಟ.

ಮಿರ್ಜಾಸಾಹೇಬರ ಅಧೀನದಲ್ಲಿ ಕ್ಲಬ್, ಕಚೇರಿ, ರಂಗಭೂಮಿ – ಎಲ್ಲವೂ ಇದ್ದುವು. ಅವರು ಸದಾ, ಒಂದಲ್ಲ ಒಂದು ಜಂಜಾಟದಲ್ಲಿ ಇರುತ್ತಿದ್ದರು. ನಗರದಲ್ಲಿ ರಂಗಭೂಮಿಗಾಗಿ ಸರಿಯಾದ ಕಟ್ಟಡ ಸಿಗಲಿಲ್ಲವೆಂದಾಗ, ಒಡನೆಯೇ ಅವರೊಂದು ಚಪ್ಪರ ಹಾಕಿಸಿ ರಂಗಮಂಟಪ ಅಣಿ ಮಾಡಿಯೇ ಬಿಟ್ಟರು. ಅವರು ಕೂತಲ್ಲೇ ದಿನಕ್ಕೆ ೫೦–೬೦ ಜಗಳಗಳನ್ನು ತೀರ್ಮಾನ ಮಾಡುತ್ತಿದ್ದರು. ಕೆಲವರನ್ನು ಗದರಿಸುತ್ತಿದ್ದರು; ಕೆಲವರಿಗೆ ಸಮಾಧಾನ ಹೇಳುತ್ತಿದ್ದರು. ಅತ್ತೆ – ಸೊಸೆ, ಅಣ್ಣ – ತಮ್ಮ, ತಂದೆ – ಮಗ, ಎಲ್ಲರ ಜಗಳವನ್ನೂ ಸರಿಯಾಗಿ ಬಿಡಿಸುತ್ತಿದ್ದರು. ಅವರು ಸಾಮಾಜಿಕ ಕೆಲಸವನ್ನು ನಡೆಸುವುದರೊಡನೆ ರಾಜನೈತಿಕ ಆಂದೋಲನಗಳಲ್ಲೂ ಪ್ರಮುಖ ಪಾತ್ರ ವಹಿಸುತ್ತಿದ್ದರು. ಇತ್ತೀಚೆ ಹಲವು ಸಭೆಗಳನ್ನೂ ನಡೆಸಿದ್ದರು. ಅವರ ನೇತೃತ್ವದಲ್ಲೇ ಸ್ವಯಂಸೇವಕರ ದಳವೂ ಅಣಿಯಾಗುತ್ತಿತ್ತು. ಅಂತು ಮಿರ್ಜಾರಿಲ್ಲದೆ ಅಲ್ಲಿಯ ಯಾವ ಕಾರ್ಯಕಲಾಪವೂ ಸಂಪೂರ್ಣವಾಗುತ್ತಿದ್ದಿಲ್ಲ.

ಗೋಬರನು ಲಖ್ನೌವಿಗೆ ಬಂದು ಒಂದು ವರ್ಷ ದಾಟಿತು. ಈಗ ಅವನು ಹಳ್ಳಿಯ ಹೆಡ್ಡ ಹುಡುಗನಲ್ಲ. ಅವನು ಈಗ, ಪ್ರಪಂಚ ಪರಿಚಯವಾಗಿ ಲೋಕದ ರೀತಿ ನೀತಿಗಳನ್ನರಿತವನು. ಆದರೆ ಹುಟ್ಟುಗುಣ ಮಾತ್ರ ಅವನನ್ನು ಬಿಟ್ಟದ್ದಿಲ್ಲ. ಹಳ್ಳಿಯವನಂತೆ ಒಂದೊಂದು ಕಾಸಿಗೂ ಗಂಟು ಹಾಕಿ ಉಳಿಸುತ್ತಿದ್ದ. ಚನ್ನಾಗಿ ಕೆಲಸ ಮಾಡಿ ಧೈರ್ಯದಿಂದ ಇರುತ್ತಿದ್ದ. ಅವನು ಮೊದಲ ತಿಂಗಳಿಗೇ ಅರ್ಧ ಹೊಟ್ಟೆ ಉಂಡು ಸ್ವಲ್ಪ ಹಣ ಉಳಿಸಿದ. ಹಾಗೆಯೇ ಮೆಲ್ಲನೆ ಕಡಲೆಕಾಯಿ, ಮಜ್ಜಿಗೆ ಮೊಸರುಗಳ ಮಾರಾಟದಲ್ಲಿ ತೊಡಗಿದ. ಲಾಭ ಹೆಚ್ಚೆಚ್ಚು ಬರತೊಡಗಿದಂತೆ ಕೆಲಸ ಬಿಟ್ಟು ವ್ಯಾಪಾರದಲ್ಲೇ ಮಗ್ನನಾದ. ಬೇಸಿಗೆಯಲ್ಲಿ ಶರ್ಬತ್ ಮತ್ತು ಐಸಿನ ವ್ಯಾಪಾರವಾಯಿತು. ಚಳಿಗಾಲ ಬಂದೊಡನೆ ಶರ್ಬತ್ ಬಿಟ್ಟು ಬಿಸಿ ಚಾಯದ ಚಿಕ್ಕ ಅಂಗಡಿ ತೆರೆದ. ಕ್ರಮೇಣ ದಿನ ಒಂದರ ೨–೩ ರೂಪಾಯಿಗಳ ಲಾಭ ಕಾಣ ತೊಡಗಿದ.

ಅಷ್ಟಾಗುವಾಗ, ಇಂಗ್ಲಿಶ್ ರೀತಿಯಲ್ಲಿ ಕೂದಲು ಕತ್ತರಿಸಿ ಕ್ರಾಪ್ ಮಾಡಿಸಿದ. ಒಳ್ಳೆಯ ಪಂಚೆಯನ್ನುಟ್ಟು ಪಂಪ್ ಶೂ ಹಾಕಿಕೊಳ್ಳಲು ಕಲಿತ.

ವೀಳ್ಯದೆಲೆ, ಸಿಗ್ರೇಟೂ ಅವನನ್ನು ಬಿಡಲಿಲ್ಲ. ಸಭೆ ಸಮಾಜಗಳಿಗೆ ಹೋಗಿ ಕೆಲ ಮಟ್ಟನ ರಾಜನೈತಿಕ ಜ್ಞಾನವನ್ನು ಮಾಡಿಕೊಂಡ. ಇಲ್ಲಿ, ಯಾವ ವಿಚಾರದಲ್ಲಿಯೂ ಸಂಕೋಚಪಡುವ ಅಗತ್ಯವಿಲ್ಲವೆಂದು ಈಗ ಅವನಿಗೆ ತಿಳಿದು ಬಂತು. ಯಾವ ಅಪಮಾನಕ್ಕಾಗಿ ಅವನು ಹೆದರಿ ಮನೆ ಬಿಟ್ಟು ಓಡಿ ಬಂದಿದ್ದನೋ, ಅದಕ್ಕೂ ಮಿಕ್ಕಿದ ಎಷ್ಟೋ ಕೀಳು ಕೃತ್ಯಗಳು ಇಲ್ಲಿ ನಿತ್ಯವೂ ನಡೆಯುತ್ತಿವೆ. ಆದರೆ ಯಾರೂ ಊರು ಬಿಟ್ಟು ಓಡುವುದಿಲ್ಲ. ಹಾಗಿರುವಾಗ ತಾನೊಬ್ಬನು ಮಾತ್ರ ಏಕೆ ಮುಖ ಮುಚ್ಚಿಕೊಂಡು ಹೆದರುತ್ತಿರಬೇಕು?'

ಇಷ್ಟರ ತನಕ ಅವನೊಂದು ಕಾಸನ್ನೂ ಮನೆಗೆ ಕಳಿಸಿದ್ದಿಲ್ಲ. ಅವನ ತಂದೆ ತಾಯಂದಿರು ಹಣಕಾಸಿನ ವಿಚಾರದಲ್ಲಿ ಅಷ್ಟು ಚತುರರಲ್ಲ. ಹಣ ಕಂಡೊಡನೆ ಆಕಾಶದಲ್ಲಿ ಹಾರಲಿಕ್ಕೇ ತೊಡಗುವರು! ಅಪ್ಪ ಕಾಶೀಯಾತ್ರೆಗೆ ಹೊರಡುವ ಯೋಚನೆ ಮಾಡಿದರೆ, ಅಮ್ಮ ಆಭರಣ ಮಾಡಿಸಲಿಕ್ಕೆ ಹೊರಟಾಳು. ಅಂತಹ ಬೇಡದ ಕೆಲಸಗಳಿಗಾಗಿ ಆತ ಹಣ ಕೊಡಲಾರ. ಈಗ ಆತನು ಸಣ್ಣ ಮಟ್ಟನ ಹಣದ ವಹಿವಾಟು ನಡೆಸುವ ಸದ್ಗೃಹಸ್ಥನೂ ಆಗಿದ್ದ. ಹತ್ತಿರದ ಜಟ್ಕಾದವರು, ಗಾಡಿಯವರು, ಅಗಸರು – ಎಲ್ಲ, ಅವನಿಂದ ಬಡ್ಡಿಯ ಮೇಲೆ ಸಾಲ ತೆಗೆದುಕೊಳ್ಳುತ್ತಿದ್ದರು. ಈ ಹತ್ತು ಹನ್ನೆರಡು ತಿಂಗಳುಗಳ ಪರಿಶ್ರಮ ಸಾಧನೆಗಳಿಂದಾಗಿ ಅವನೊಂದು ಸ್ಥಾನವನ್ನು ಮಾಡಿಕೊಂಡಿದ್ದ. ಕ್ರಮೇಣ ಜುನಿಯಳನ್ನು ಕರೆತರುವ ಯೋಚನೆಯೂ ಅವನ ತಲೆಯಲ್ಲಿ ಆಗಾಗ ಸುಳಿಯುತ್ತಿತ್ತು.

ಒಂದು ದಿನ ಸಾಯಂಕಾಲದ ಸಮಯ. ಅವನು ಮಾರ್ಗದ ಬದಿಯ ನಳ್ಳಿಯಲ್ಲಿ ಸ್ನಾನ ಮಾಡಿ ಬಂದ. ರಾತ್ರಿಯ ಫಲಾಹಾರಕ್ಕಾಗಿ ಆಲೂಗೆಡ್ಡೆ ಬೇಯಿಸಿ ಅದರ ಸಿಪ್ಪೆ ಸುಲಿಯುತ್ತಲಿದ್ದ. ಅಷ್ಟರಲ್ಲಿ ಜಟ್ಕಾದವನೊಬ್ಬ ರೂಪಾಯಿ ಸಾಲ ಕೇಳಲಿಕ್ಕೆ ಬಂದ. ಅಲಾದೀನನೆಂದು ಅವನ ಹೆಸರು. ಕೆದರಿದ ತಲೆ, ಸಣ್ಣ ಗಡ್ಡ. ಅವನ ಹೆಂಡತಿ ತಾಯ ಮನೆಗೆ ಹೊರಟಿದ್ದಳು. ಅದಕ್ಕಾಗಿ ಅವನಿಗೆ ಐದು ರೂಪಾಯಿ ಅಗತ್ಯ ಬೇಕಿತ್ತು. ಮಾತುಕತೆ ನಡೆದು ಒಂದಾಣೆ ಬಡ್ಡಿಯ ಮೇಲೆ ಗೋಬರನಿಂದ ರೂಪಾಯಿ ಪಡೆದ.

ಅಲಾದೀನ ಕೃತಜ್ಞತೆಯನ್ನರ್ಪಿಸುತ್ತ ಹೇಳಿದ – 'ಇನ್ನು ನೀವು ಹೆಂಡತಿ ಮಕ್ಕಳನ್ನು ಕರೆತರಬಹುದಲ್ಲ? ಎಷ್ಟು ಸಮಯದ ತನಕ ಹೀಗೆ ನೀವೇ ಕೈ ಸುಟ್ಟುಕೊಳ್ಳುವಿರಿ?'

ಗೋಬರನು ಪೇಟೆಯ ಇಮ್ಮಡಿ ಖರ್ಚು ವೆಚ್ಚದ ವಿಚಾರ ಹೇಳಿದ – 'ಇಷ್ಟು ಸ್ವಲ್ಪ ಉತ್ಪತ್ತಿಯಲ್ಲಿ ಏನು ಮನೆಮಾಡಬಂದೀತು?'

ಅಲಾದೀನನು ಬೀಡಿ ಹಚ್ಚುತ್ತ ಹೇಳಿದ – 'ಖರ್ಚಿಗೆ ದೇವರು ಕೊಡುತ್ತಾನಣ್ಣ ! ಯೋಚನೆ ಮಾಡಿನೋಡು – ಮನಸ್ಸಿಗೆ ಎಷ್ಟು ನೆಮ್ಮದಿ ಸಿಗುತ್ತದೆ! ನಾನು ಹೇಳುತ್ತೇನೆ ಕೇಳು – ನೀನೊಬ್ಬನೇ ಎಷ್ಟು ಖರ್ಚು ಮಾಡುವೆಯೋ – ಆ ಹಣದಲ್ಲೇ ಮನೆಯ ವೆಚ್ಚ ನಡೆದೀತು. ಹೆಂಗುಸರ ಕೈಯೆಂದರೆ ಬಹಳ ಸೂಕ್ಷ್ಮ. ನನ್ನದೇ ಅನುಭವ ಹೇಳುತ್ತೇನೆ – ಮೊದಲು ನಾನೊಬ್ಬನೇ ಇರುವಾಗ ಎಷ್ಟು ಸಂಪಾದಿಸಿದರೂ ತಿಂದು ಕುಡಿದು ಬರಿದಾಗಿ ಹೋಗುತ್ತಿತ್ತು. ಕೆಲ ವೇಳೆ ಬೀಡಿಗೆ ಸಹ ಉಳಿಯುತ್ತಿರಲಿಲ್ಲ. ಸೋತು ಸಾಯಂಕಾಲ ಬಂದ ಮೇಲೆ ಪುನಃ ಕುದುರೆ ಕೆಲಸ ಮಾಡಬೇಕಾಗುತ್ತಿತ್ತು. ಅಂತು ಸಾಕೋ ಸಾಕಾಗಿ ಹೋಗುತ್ತಿತ್ತು. ಈಗ ನನ್ನ ಮನೆಯಾಕೆ ಬಂದ ಮೇಲೆ ಅದೇ ಸಂಪಾದನೆಯಲ್ಲಿ ಅವಳ ಹೊಟ್ಟೆಯೂ ತುಂಬುತ್ತದೆ, ನೆಮ್ಮದಿಯೂ ಸಿಗುತ್ತದೆ. ಮನುಷ್ಯ ಕಷ್ಟಪಡುವುದು – ಸುಖಕ್ಕಾಗಿಯೇ ತಾನೆ? ಪ್ರಾಣ ಕೊಟ್ಟು ಕೆಲಸ ಮಾಡಿದರೂ ಸುಖ ಸಿಗುವುದಿಲ್ಲವಾದರೆ ಇಡೀ ಜೀವನವೇ ವ್ಯರ್ಥ. ನಾನು ಹೇಳುವುದಿಷ್ಟೇ – ನಿನ್ನ ಸಂಪಾದನೆ ಸಹ ಹೆಚ್ಚಾಗಬಹುದು. ನೀನೀಗ ಅಡಿಗೆ ಮಾಡುವ ಸಮಯದಲ್ಲಿ ನಾಲ್ಕು ಗ್ಲಾಸು ಚಾಯ ಮಾರಿಬಿಡಬಹುದು. ಈಗಿನ ಕಾಲದಲ್ಲಿ ಚಾಯಕ್ಕೆ ೩೬೫ ದಿನಗಳಲ್ಲೂ ಗಿರಾಕಿ ಇದೆ. ಎಲ್ಲ ಆಗಿ, ಮಲಗಿದ ಮೇಲೆ ಆಕೆ ಕಾಲೊತ್ತುತ್ತಿದ್ದರೆ ಆಯಾಸವೆಲ್ಲವೂ ದೂರವಾಗುವುದಿಲ್ಲವೇ?'

ಈ ಮಾತು ಗೋಬರನ ಮನಸ್ಸಿಗೆ ನಾಟಿಹೋಯಿತು. ಮನಸ್ಸಿಗೆ ಉತ್ಸಾಹವೇರಿತು. ಈ ಸಲ ಜುನಿಯಳನ್ನು ಕರೆತರಲೇ ಬೇಕು. ಆಲುಗೆಡ್ಡೆ ಒಲೆಯ ಮೇಲಿರುವಾಗಲೇ ಅವನು ಮನೆಗೆ ಹೊರಡುವ ಸಿದ್ಧತೆ ಮಾಡತೊಡಗಿದ. ಮಾತ್ರವಲ್ಲದೆ ಹೋಳಿಹಬ್ಬ ಬರಲಿಕ್ಕಾಯಿತೆಂದೂ ನೆನಪಾಯಿತು. ಆದ್ದರಿಂದ ಆ ಹಬ್ಬಕ್ಕೆ ಬೇಕಾದ ಸಾಮಾನುಗಳನ್ನು ಹಿಡಿದುಕೊಂಡು ಹೋದರಾಯಿತು. ಲೋಭಿಯಾದ ಮನುಷ್ಯನಿಗೆ ಸಹ ಉತ್ಸವದ ಸಂದರ್ಭದಲ್ಲಿ ಕೈಬಿಟ್ಟು ವೆಚ್ಚಮಾಡುವ ಬುದ್ಧಿ ಬರುತ್ತದೆ. ಗೋಬರನೂ ಅದೇ ಮಾದರಿಯವನು. ತಾನು ಕೂಡಿಟ್ಟುದಾದರೂ ಇಂತಹ ಕೆಲಸಕ್ಕಾಗಿಯೇ ತಾನೆ? ಅಮ್ಮ, ತಂಗಿಯಂದಿರು, ಜುನಿಯಾ – ಎಲ್ಲರಿಗಾಗಿಯೂ ಒಂದೊಂದು ಜೋಡು ಸೀರೆ

ತೆಗೆದುಕೊಳ್ಳಬೇಕು. ಅಪ್ಪನಿಗೆ ಒಂದು ಪಂಚೆ ಮತ್ತು ಹೆಗಲಶಾಲು. ಸೋನೆಗೆ ಒಂದು ಬಾಟ್ಲಿ ಪರಿಮಳದೆಣ್ಣೆ, ಕಾಲುಗಳಿಗೆ ಚಪ್ಪಲ್. ರೂಪಳಿಗೆ ಒಂದು ಜಪಾನೀ ಬೊಂಬೆ. ಜುನಿಯಳಿಗೆ ಒಂದು ಚಿಕ್ಕ ಪೆಟ್ಟಿಗೆ ; ಅದರೊಳಗೆ – ಪರಿಮಳದೆಣ್ಣೆ, ಕನ್ನಡಿ, ಬಾಚಣಿಗೆ – ಎಲ್ಲ ಇರಬೇಕು. ಮಗುವಿಗೊಂದು ಟೋಪಿ ಮತ್ತು ಫ್ರಾಕ್ – ಇವನ್ನೆಲ್ಲ ಈಗಲೇ ತಂದುಬಿಡಬೇಕು.

ಹೀಗೆ ಯೋಚಿಸಿ ರೂಪಾಯಿ ತೆಗೆದುಕೊಂಡು ಪೇಟೆಗೆ ಹೊರಟೇ ಬಿಟ್ಟ. ಮರು ದಿನ ಮಧ್ಯಾಹ್ನದೊಳಗೆ ಎಲ್ಲ ಸಾಮಾನೂ ಬಂದಾಯಿತು. ಹಾಸಿಗೆ ಕೂಡಾ ಕಟ್ಟಿಯಾಯಿತು. ಗೋಬರನು ಮನೆಗೆ ಹೋಗುತ್ತಾನೆಂದು ಅಲ್ಲಿಯವರಿಗೆಲ್ಲ ಸುದ್ದಿಯಾಯಿತು. ಅನೇಕ ಗಂಡುಸರು ಹೆಂಗುಸರು – ಎಲ್ಲ ಅವನನ್ನು ಬೀಳ್ಕೊಳ್ಳಲಿಕ್ಕೆ ಬಂದರು. ಅವರನ್ನು ನೋಡಿ ಗೋಬರ ಹೇಳಿದ – 'ನನ್ನ ಈ ಮನೆಯತ್ತ ಸ್ವಲ್ಪ ನೋಡಿಕೊಂಡಿರಿ. ನಿಮ್ಮ ಧೈರ್ಯದಲ್ಲೇ ಬಿಟ್ಟು ಹೋಗುತ್ತೇನೆ. ಎಲ್ಲ ಸರಿಯಾದರೆ ಹೋಳಿಯ ಮರು ದಿನವೇ ಬಂದು ಬಿಡುತ್ತೇನೆ.'

ಆಗ ಒಬ್ಬ ಹೆಂಗುಸು ಮುಗುಳ್ನಗುತ್ತ ಹೇಳಿದಳು – 'ಹೆಂಡತಿಯನ್ನು ಬಿಟ್ಟು ಬರಬೇಡಿ. ಹಾಗೇ ಬಂದರೆ ಈ ಕೇರಿಗೆ ಹೊಕ್ಕಲಿಕ್ಕೇ ಬಿಡಲಾರೆವು.'

ಮತ್ತೊಬ್ಬಳೆಂದಳು – 'ಇಷ್ಟು ದಿನ ತನ್ನ ಕೈ ಸುಟ್ಟುಕೊಂಡಾಯಿತು. ಇನ್ನಾದರೂ ಸ್ವಲ್ಪ ಸುಖವಾಗಿ ಉಂಡು ಮಲಗಲಿ.'

ಗೋಬರ ಎಲ್ಲರಿಗೂ ನಮಸ್ಕರಿಸಿ ಹೊರಟ. ಹಿಂದುಗಳು, ಮುಸಲ್ಮಾನರು, ಎಲ್ಲರೂ ಅವನ ಮಿತ್ರರಾಗಿದ್ದರು. ಎಲ್ಲರೊಳಗೂ ಪರಸ್ಪರ ವಿಶ್ವಾಸವಿತ್ತು. ಹಾಗಾಗಿ ಅವನು ಮನೆಗೆ ಹೊರಟಾಗ ಎಲ್ಲರೂ ಬಂದು ಸೇರಿದ್ದರು.

ಅಷ್ಟರಲ್ಲಿ ಮೂರನಿಗೆ ಸುದ್ದಿ ಸಿಕ್ಕಿತು. ಒಡನೆಯೇ ತನ್ನ ಗಾಡಿ ತೆಗೆದುಕೊಂಡು ಬಂದ ಅವನು. ಗೋಬರನು ತನ್ನ ಸಾಮಾನುಗಳನ್ನು ಗಾಡಿಯಲ್ಲಿಟ್ಟು ಕೂತುಕೊಂಡ. ಕುದುರೆಗೆ ಎರಡೇಟು ಚಾಟಿಯಿಂದ ಬಾರಿಸಿ, ಮೂರನು ಗಾಡಿ ಓಡಿಸಲಾರಂಭಿಸಿದ. ಗೋಬರ ಮನೆಯತ್ತ ಹೋಗುವ ಹುರುಪಿನಿಂದ ತುಂಬಿಹೋಗಿದ್ದ.

ಸ್ಟೇಶನ್ ಬಂತು. ಗೋಬರ ಸಂತೋಷದಿಂದ ಒಂದು ರೂಪಾಯಿ ಜೇಬಿನಿಂದ ತೆಗೆದು ಮೂರನಿಗೆ ಕೊಡುತ್ತ – 'ಹೋಗುವಾಗ ಮಕ್ಕಳಿಗೇನಾದರೂ ತಿಂಡಿ ತೆಗೆದುಕೊಂಡು ಹೋಗಪ್ಪಾ' – ಎಂದ.

ಮೂರನು ಕೃತಜ್ಞತಾಯುಕ್ತ ತಿರಸ್ಕಾರದಿಂದ ಹೇಳಿದ – ‘ ಒಂದು ಸ ಗಾಡಿಯಲ್ಲಿ ಕೂತೊಡನೆಯೇ ನಾನು ನಿನ್ನಿಂದ ಇನಾಮು ತೆಗೆದುಕೊಳ ವುದೇ ? ಅಂತಹ ಸಣ್ಣ ಮನಸ್ಸು ನಮ್ಮದಲ್ಲ. ನಾನೇನಾದರೂ ತಿಂಡಿ ನಿಮ ಕೈಯಿಂದ ಹಿಡಿದುಕೊಂಡು ಹೋದರೂ, ಮನೆಯಾಕೆ ನನ್ನನ್ನಿಡಲಿಕ್ಕಿಲ್ಲ.

ಗೋಬರ ಮತ್ತೇನೂ ಹೇಳಲಿಲ್ಲ. ನಾಚಿಕೆಯಿಂದ ತನ್ನ ಸಾಮಾನುಗ ನ್ನಿಳಿಸಿ ಟಿಕೇಟು ತೆಗೆದುಕೊಳ್ಳುವುದಕ್ಕೆ ಹೊರಟ.

೧೬

ಫಾಲ್ಗುಣ ಮಾಸದಾರಂಭವಾಗಿತ್ತು. ಮಾವಿನ ಮರಗಳಲ್ಲಿ ಸುಗಂಧ ಮಯ ಪುಷ್ಪಗಳರಳಿದ್ದುವು. ಕೋಗಿಲೆ ಮರದ ಕೊಂಬೆಯಲ್ಲಡಗಿ ಮಧು ಸಂಗೀತ ಹಾಡುತ್ತಿತ್ತು.

ಊರಲ್ಲಿ ಕಬ್ಬು ನೆಡುವ ಕೆಲಸ ಮೊದಲಾಗಿತ್ತು. ಬಿಸಿಲು ಇನ್ನೂ ಏ ಬಂದಿದ್ದಿಲ್ಲ. ಆದರೂ ಹೋರಿರಾಮ ಹೋಗಿ ಗದ್ದೆಯ ಕೆಲಸದಲ್ಲಿ ತೊಡಗಿದ್ದ. ದನಿಯಾ, ಸೋನಾ, ರೂಪಾ – ಈ ಮೂವರೂ ತಲೆಯ ಮೇಲೆ ಒದ್ದೆಯಾದ ಗೊಬ್ಬರದ ಹೊರೆಗಳನ್ನು ಹೊತ್ತು ತರುತ್ತಿದ್ದರು. ಹೋರಿರಾಮ ಗದ್ದೆಯಿಂದ ಅಗೆದು ಮಣ್ಣು ಸರಿಪಡಿಸುತ್ತಿದ್ದ. ಈಗ ಅವನ ಸ್ವಂತ ಬೇಸಾಯ ಹಾಳಾಗಿ ಹೋಗಿತ್ತು. ಅವನ ಮನೆಯವರೆಲ್ಲ ದಾತಾದೀನ್ ಪಂಡಿತರ ಕೂಲಿ ಕೆಲಸ ಮಾಡುತ್ತಿದ್ದರು. ಪಂಡಿತರು ಈಗ ಪುರೋಹಿತರು ಮಾತ್ರವಲ್ಲದೆ ಧನಿಗಳು ಕೂಡಾ ಆಗಿದ್ದರು.

ಹೋರಿರಾಮ ಕೆಲಸ ಮಾಡುವಲ್ಲಿಗೆ ಪಂಡಿತರು ಬಂದು ಗದರಿಸಿದರು – ‘ ಇನ್ನೂ ಬೇಗ ಬೇಗ ಕೈ ಚಲಾಯಿಸು ರಾಮ. ಹೀಗೆಯೇ ಆದರೆ ದಿನವಿಡೀ ಕೆಲಸ ಮುಗಿಯದು.’

ಹೋರಿರಾಮ ತನ್ನ ಅಭಿಮಾನವನ್ನು ಒತ್ತಿ ಹಿಡಿದುಕೊಂಡು ಹೇಳಿದ – ‘ನನ್ನ ಕೈ ಕೆಲಸ ಮಾಡುತ್ತಲೇ ಇವೆ; ಸುಮ್ಮನೆ ಕೂತುಕೊಂಡೇನೂ ಇಲ್ಲ.’

ಪಂಡಿತರು ಕೂಲಿಗಳ ಹತ್ತಿರ ಜಗಳಾಡಿ ಬಹು ಹೆಚ್ಚಿನ ಕೆಲಸ ಮಾಡಿಸು ತ್ತಿದ್ದರು. ಆದ್ದರಿಂದಲೇ ಅವರ ಕೆಲಸಕ್ಕೆ ಹೆಚ್ಚಾಗಿ ಯಾರೂ ಹೋಗುತ್ತಿದ್ದಿಲ್ಲ.

ಹೋರಿರಾಮನಿಗೂ ಅವರ ಸ್ವಭಾವ ಗೊತ್ತಿತ್ತು. ಆದರೆ ಬೇರೆ ಗತಿ ಇಲ್ಲ.

ಪಂಡಿತರು ಅವನ ಹತ್ತಿರ ಬಂದು ಹೇಳಿದರು – 'ಕೆಲಸ ಮಾಡುವುದರಲ್ಲಿ ಎರಡು ತರ ಇವೆ: ಒಂದು, ಕೈ ಮಾತ್ರ ಚಲಿಸುವುದು; ಕೆಲಸವೇನೂ ಸಾಗಲಿಕ್ಕೇ ಇಲ್ಲ. ಇನ್ನೊಂದು, ಕೈಯೂ ಕೆಲಸವೂ ಒಂದಾಗಿ ಹೋಗುವುದು. ಆದರೆ ನಿನ್ನ ಈ ರೀತಿಯಲ್ಲಿ, ಇಡೀ ದಿನ ಸಂಬಳ ಮಾತ್ರ ಸಾಗೀತು.'

ಹೋರಿರಾಮ ವಿಷದ ಗುಟುಕನ್ನು ಕುಡಿದುಬಿಟ್ಟು ಬಹಳ ವೇಗವಾಗಿ ಕೆಲಸ ಮುಂದುವರಿಸುತ್ತಲೇ ಇದ್ದ. ಆದರೆ ಹೊಟ್ಟೆ ತುಂಬ ಅನ್ನ ಸಿಕ್ಕಿ ಹಲವು ತಿಂಗಳಾಗಿತ್ತು. ಈಗೀಗ ಒಂದು ಹೊತ್ತಿಗೆ ಬರೀ ಹುರಿಗಡಲೆಯೇ ಗತಿಯಾಗಿತ್ತು. ಮತ್ತೊಂದು ಹೊತ್ತಿಗೆ ಅರ್ಧಹೊಟ್ಟೆ. ಹಾಗಾಗಿ ಜೋರಾಗಿ ಕೈತಿರುಗಿಸಬೇಕೆಂದು ಎಷ್ಟು ಯತ್ನಿಸಿದರೂ ಕೈ ಕೇಳುತ್ತಿರಲಿಲ್ಲ. ಅದರ ಮೇಲೆ ಪಂಡಿತರು ತಲೆಯ ಮೇಲೆಯೇ ನಿಂತಿದ್ದರು. ಒಂದು ಕ್ಷಣದ ಮಟ್ಟಿಗೆ ಉಸಿರು ಬಿಡಲಾಗುತ್ತಿದ್ದರೆ ಸ್ವಲ್ಪ ಹುರುಪು ಬರುತ್ತಿತ್ತು. ಆದರೆ ಅಲ್ಲಿ ಉಸಿರು ಬಿಡಲಿಕ್ಕೂ ಎಡೆ ಇದ್ದಿಲ್ಲ.

ದನಿಯಾ ಮತ್ತು ಹುಡುಗಿಯರು ಹರಿದ ಸೀರೆಯುಟ್ಟುಕೊಂಡು, ಹೊರೆ ಹೊತ್ತು ತಂದು ಹಾಕಿ ಶ್ವಾಸ ಬಿಡುತ್ತಿದ್ದರು ಮಾತ್ರ; ಅಷ್ಟರಲ್ಲಿ ಪಂಡಿತರು ಅವರಿಗೂ ಗದರಿಸತೊಡಗಿದರು – 'ಅದೇನು ತಮಾಷೆ ನೋಡುತ್ತಿರುವೆ ದನಿಯಾ? ಹೋಗಿ, ನಿಮ್ಮ ಕೆಲಸ ನೀವು ಮಾಡಿ. ಹಣ ಧರ್ಮಕ್ಕೆ ಬರಲಾರದು. ಒಂದೊಂದು ಹೊರೆ ತರಲಿಕ್ಕೆ ನಿಮಗೆ ಒಂದೊಂದು ಗಂಟೆ ಬೇಕು!'

ದನಿಯಳೂ ಮುಖ ತಿರುಗಿಸಿ ಹೇಳಿದಳು–'ಸ್ವಲ್ಪ ಉಸಿರು ಬಿಡುವುದಕ್ಕೂ ಎಡೆ ಕೊಡುವುದಿಲ್ಲವೆ – ಸ್ವಾಮಿ? ನಾವು ಕೂಡ ಮನುಷ್ಯರಲ್ಲವೇ? ನಿಮ್ಮ ಕೂಲಿ ಮಾಡಿದ ಮಾತ್ರಕ್ಕೆ ಮೃಗಗಳಾಗಿ ಹೋದೆವೇ? ನೋಡುವಾ–ಒಂದು ಹೊರೆ ನೀವು ಹೊತ್ತು ತನ್ನಿ! ಆಗ ಗೊತ್ತಾಗಬಹುದು.'

ಪಂಡಿತರಿಗೆ ಕೋಪ ಬಂತು – 'ನಾವು ಸಂಬಳ ಕೊಡುವುದು ಹೊರೆ ಹೊತ್ತುದಕ್ಕೆ – ಉಸಿರು ಬಿಟ್ಟುದಕ್ಕಲ್ಲ. ನೀವು ಮನೆಗೆ ಹೋಗಿ ಕೂತುಕೊಂಡರೆ ಸುಖವಾಗಿ ಉಸಿರು ಬಿಡುತ್ತ ಇರಬಹುದು.'

ದನಿಯಳು ಮತ್ತೂ ಏನೋ ಹೇಳಬೇಕೆಂದಿದ್ದಳು. ಅಷ್ಟರಲ್ಲಿ ಹೋರಿರಾಮ ಗದರಿಸಿದ – 'ದನಿಯಾ, ನೀನು ಹೋಗುವಿಯೋ – ಇಲ್ಲವೇ? ಏಕೆ ಸುಮ್ಮನೆ ಜಗಳಾಡುತ್ತಿ?'

ದನಿಯಳು ಬುಟ್ಟಿಯನ್ನೆತ್ತಿಕೊಂಡು ಹೋಗುತ್ತ – ' ಹೋಗುತ್ತಲೇ ಇದ್ದೇನೆ. ಆದರೆ, ಸರಿಯಾಗಿ ನಡೆಯುತ್ತಿರುವ ಎತ್ತಿಗೆ ಏಟು ಕೊಡಬಾರದು, ಅಷ್ಟೆ ' – ಎಂದಳು.

ಪಂಡಿತರ ಕಣ್ಣು ಕೆಂಪಾಯಿತು–'ಇನ್ನೂ ಗರ್ವ ಇಳಿಯಲಿಲ್ಲ, ಅಲ್ಲವೇ?'

ಆದರೆ ದನಿಯಳೇಕೆ ಬಾಯಿ ಮುಚ್ಚಿಕೊಳ್ಳುತ್ತಾಳೆ ? – ' ಹಾಗೇನು ? ನಾವು ನಿಮ್ಮ ಮನೆ ಬಾಗಿಲಿಗೆ ಭಿಕ್ಷೆ ಬೇಡಲಿಕ್ಕೆ ಬರಲಿಲ್ಲ ! ' ಎಂದಳವಳು.

ಪಂಡಿತರು ಅದೇ ಸ್ವರದಿಂದ ಹೇಳಿದರು – ' ಹೀಗೆಯೇ ಆದರೆ ಭಿಕ್ಷೆಯೇ ಗತಿ ನಿನಗೆ. '

ದನಿಯಳ ಬಾಯಿಯಲ್ಲಿ ಉತ್ತರ ಅಣಿಯಾಗಿತ್ತು. ಆದರೆ ಸೋನೆಯು ಅವಳನ್ನೆಳೆದುಕೊಂಡು ಮುಂದೆ ಹೋದಳು. ಸ್ವಲ್ಪ ದೂರ ಹೋದ ಮೇಲೆ ಹೊಟ್ಟೆಯೊಳಗಿನ ಕೋಪವನ್ನೆಲ್ಲ ಹೊರ ಹಾಕಿದಳು – ' ನೀನೇ ಭಿಕ್ಷೆ ಬೇಡು. ನಿನ್ನ ಜಾತಿಯೇ ಬೇಡುವವರದು. ನಾವು ಕೆಲಸ ಮಾಡುತ್ತೇವೆ – ಹೊಟ್ಟೆ ತುಂಬಿಸಿಕೊಳ್ಳುತ್ತೇವೆ. '

ಅವಳು ತಿರಸ್ಕಾರದ ಸ್ವರದಿಂದ ಮತ್ತೆ ಹೇಳಿದಳು – ' ಅಮ್ಮಾ, ಅದು ಹೋಗಲಿ. ಏಕೆ ಸುಮ್ಮನೆ ಮಾತು ಮಾತಿಗೆ ಜಗಳಾಡುತ್ತಲೇ ಇರುತ್ತಿ?'

ಹೋರಿರಾಮ ಹುಚ್ಚು ಹಿಡಿದವನಂತೆ ತಲೆಯಿಂದಲೂ ಎತ್ತರವಾಗಿ ಗುದ್ದಲಿ ಹಾರಿಸುತ್ತ ಮಣ್ಣು ಅಗೆಯುತ್ತಲೇ ಇದ್ದ. ಅವನ ಹೃದಯದೊಳಗೆ ಬೆಂಕಿ ತಾಗಿ ಅದರ ಅದ್ಭುತ ಶಕ್ತಿ ಹೊರಸೂಸುವಂತಿತ್ತು. ಅವನ ಎಲುಬಿನೊಳಗಿನ ಹಳೆಯ ಶಕ್ತಿಯೆಲ್ಲ ಈಗ ಹೊರಗೆ ಬಂದಂತಾಗಿತ್ತು. ಆಗ ಮೆಲ್ಲನೆ ಕಣ್ಣು ಕತ್ತಲು ಬರಲಾರಂಭಿಸಿತು. ತಲೆ ತಿರುಗಲೂ ತೊಡಗಿತು. ಆದರೆ ಅವನ ಕೈಯು ಮಾತ್ರ ಯಂತ್ರದಂತೆ ಅಡೆತಡೆಗಳಿಲ್ಲದೆ ಚಲಿಸುತ್ತಲೇ ಇತ್ತು. ದೇಹದಿಂದ ಬೆವರಿನ ಧಾರೆ ಹರಿಯುತ್ತಿತ್ತು. ಕ್ರಮೇಣ ಬಾಯಿಯಲ್ಲಿ ನೀರು ಆರುತ್ತ ಬಂದು ತಲೆಯೊಳಗೆ ಧಮ ಧಮ ಶಬ್ದವಾಗಲಾರಂಭಿಸಿತು.

ಫಕ್ಕನೆ ಕಣ್ಣುಗಳಲ್ಲಿ ಕಗ್ಗತ್ತಲೆ ಮೂಡಿ ಬಂದು ನೆಲದ ಮೇಲೆ ಬಿದ್ದೇ ಬಿಟ್ಟ ಹೋರಿರಾಮ ! ಆಧರಿಸಲಿಕ್ಕೆ ಕೈಗಳನ್ನು ಚಾಚಿದ. ಅಷ್ಟರೊಳಗೆ ಬಿದ್ದುಬಿಟ್ಟು ನಿಶ್ಚೇತನನಾಗಿಹೋದ. ಕೈಯಿಂದ ಗುದ್ದಲಿ ಜಾರಿ ಬಿತ್ತು.

ಅಷ್ಟರಲ್ಲಿ ದನಿಯಾ ಪುನಃ ಗೊಬ್ಬರದ ಹೊರೆ ಹೊತ್ತುಕೊಂಡು ಬರುತ್ತಿದ್ದಳು. ಅವಳು ನೋಡುವಾಗ ಹಲವು ಜನರು ಹೋರಿರಾಮನನ್ನು ಸುತ್ತು

ಗಟ್ಟಿ ನೋಡುತ್ತಿದ್ದರು. ಅವರಲ್ಲೊಬ್ಬನು ಪಂಡಿತರಿಗೆ ಹೇಳುತ್ತಿದ್ದ – 'ಮನುಷ್ಯನ ಮನಸ್ಸಿಗೆ ತಾಗುವಂತಹ ಮಾತುಗಳನ್ನು ನೀವು ಹೇಳಬಾರದಿತ್ತು. ನೀರಿನ ಋಣ ಮುಗಿಯುವಾಗ ಎಲ್ಲರೂ ಹೋಗುವವರೇ. ಆದರೂ . . . . .'

ದನಿಯಳು ಹೊರೆಯನ್ನು ಅಲ್ಲೇ ಹೊತ್ತುಹಾಕಿ ಹುಚ್ಚು ಹಿಡಿದವಳಂತೆ ಹೋರಿರಾಮನತ್ತ ಓಡಿದಳು. ಅವನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಬೊಬ್ಬೆ ಹಾಕತೊಡಗಿದಳು – 'ಅಯ್ಯೊ, ನನ್ನನ್ನು ಬಿಟ್ಟು ನೀವೆಲ್ಲಿ ಹೋಗುವಿರಿ? . . . ಅಯ್ಯೋ . . . ಓ ಸೋನಾ . . . ಹೋಗಿ ಸ್ವಲ್ಪ ನೀರು ತಾ. ರೂಪಾ, ಓಡಿಹೋಗಿ ಅಪ್ಪ ಸ್ಮೃತಿ ತಪ್ಪಿ ಬಿದ್ದಿದ್ದಾರೆಂದು ಸೋಬನನ್ನು ಕರೆದುಕೊಂಡು ಬಾ. . . . ಅಯ್ಯೋ ದೇವರೇ . . . ನಾನಿನ್ನು ಎಲ್ಲಿ ಹೋಗಲಿ! . . . ಇನ್ನಾರು ನನಗೆ ಗತಿ! . . . ನನ್ನನ್ನು ಯಾರಿನ್ನು ದನಿಯಾ, ದನಿಯಾ ಎಂದು ಕರೆದಾರು . . . !'

ಪಟೇಶ್ವರೀಲಾಲರೂ ಓಡಿಕೊಂಡು ಬಂದು ಸ್ನೇಹಯುಕ್ತ ಕಠೋರ ಸ್ವರದಿಂದ ಹೇಳಿದರು – 'ಏನು ಮಾಡುತ್ತಿರುವೆ ದನಿಯಾ? ಧೈರ್ಯ ಮಾಡಿಕೋ. ಹೋರಿರಾಮನಿಗೇನೂ ಆಗಿಲ್ಲ. ಬಿಸಿಲ ಬೇಗೆಯಿಂದಾಗಿ ಸ್ಮೃತಿ ತಪ್ಪಿದೆ – ಅಷ್ಟೆ. ಈಗ ಸ್ಮೃತಿ ಬರುತ್ತದೆ! ಇದಕ್ಕೆಲ್ಲ ಹೆದರಿದರೆ?'

ದನಿಯಳು ಪಟೇಶ್ವರೀಲಾಲರ ಕಾಲು ಹಿಡಿದು ಅಳುತ್ತ ಹೇಳಿದಳು – 'ನಾನೇನು ಹೇಳಲಿ – ಸ್ವಾಮಿ. ಮನಸ್ಸು ಕೇಳುವುದಿಲ್ಲ. ದೇವರು ಎಲ್ಲವನ್ನೂ ಸೆಳೆದುಕೊಂಡ. ಸಹಿಸಿಕೊಂಡೆ. ಇನ್ನು ಮಾತ್ರ ಸಹಿಸಿರಲು ಸಾಧ್ಯವೇ ಇಲ್ಲ! ಅಯ್ಯೋ . . . ಹೀರಾ . . .'

ಸೋನೆಯು ನೀರು ತಂದಳು. ಪಟೇಶ್ವರೀಲಾಲರು ಹೋರಿರಾಮನ ಮುಖದ ಮೇಲೆ, ತಲೆಯ ಮೇಲೆ, ತಣ್ಣೀರು ಚಿಮುಕಿಸಿದರು. ಹತ್ತಿರ ಇದ್ದ ಜನರೆಲ್ಲ ತಮ್ಮ ತಮ್ಮ ಬಟ್ಟೆಗಳಿಂದ ಗಾಳಿ ಹಾಕತೊಡಗಿದರು. ಹೋರಿರಾಮನ ದೇಹವೇ ತಣ್ಣಗಾಗಿತ್ತು. ಲಾಲರಿಗೂ ಚಿಂತೆ ಹಿಡಿಯಿತು. ಆದರೂ ದನಿಯಳಿಗೆ ಧೈರ್ಯ ಕೊಡುತ್ತಲೇ ಇದ್ದರು.

ಆದರೂ ದನಿಯಳು ಅಧೀರಳಾಗಿ ಬೊಬ್ಬಿಟ್ಟಳು – 'ಹೀಗೆಂದೂ ಇವರಿಗಾಗಿದ್ದಿಲ್ಲ! ಎಂದೂ ಇಲ್ಲ. ಅಯ್ಯೋ....'

ಆಗ ಪಟೇಶ್ವರೀಲಾಲರು ಕೇಳಿದರು – 'ನಿನ್ನೆ ರಾತ್ರಿ ಏನು ತಿಂದಿದ್ದ?'

‘ ಹೌದು, ರೊಟ್ಟಿ ತಿಂದಿದ್ದರು. ಆದರೆ ಹೊಟ್ಟೆತುಂಬ ತಿಂದು ತಿಂಗಳು ಗಟ್ಲೆ ದಾಟಿತು. ಸಮಾಧಾನದಿಂದ ಕೆಲಸ ಮಾಡಿ – ಎಂದು ಹೇಳುತ್ತಲೇ ಇದ್ದೆ. ಆದರೆ ವಿಶ್ರಾಂತಿ ಪಡೆಯುವ ಭಾಗ್ಯ ನಮ್ಮ ಹಣೆಯಲ್ಲಿ ಬರೆದೇ ಇಲ್ಲ.’

ಮೆಲ್ಲನೆ ಹೋರಿರಾಮು ಕಣ್ಣು ತೆರೆದ. ಅತ್ತ ಇತ್ತ ಕಣ್ಣು ತಿರುಗಿಸುತ್ತ ಸುತ್ತಲೂ ನೋಡಿದ.

ದನಿಯಳಿಗೆ ಹೊಸ ಜೀವವೇ ಬಂತು. ವಿಹ್ವಲಳಾಗಿ ಅವನನ್ನಪ್ಪಿ ಕೊಂಡು – ‘ ಈಗ ಹೇಗಿದೆ ನಿಮಗೆ? ನನ್ನ ಪ್ರಾಣವೇ ಮೇಲಕ್ಕೆ ಉಕ್ಕಿ ಬಂದಿತ್ತು’ – ಎಂದಳು.

ಹೋರಿರಾಮುನೂ ನಡುಗುವ ಸ್ವರದಿಂದ ಹೇಳಿದ – ‘ಈಗ ಸ್ವಲ್ಪ ಗುಣ ವಾಗಿದೆ. ಏನಾಗಿ ಹೋಯಿತೋ – ಗೊತ್ತೇ ಆಗುವುದಿಲ್ಲ.’

ದನಿಯಳು ಸ್ನೇಹಭರ ಸ್ವರದಿಂದ ಗದರಿಸಿ – ‘ ಅಯ್ಯೋ, ಕೆಲಸ ಮಾಡು ವಾಗ ಜೀವದಾಸೆಯೂ ಬೇಡವೇ? ಏನೋ ಮಕ್ಕಳ ಪುಣ್ಯ! ಇಲ್ಲವಾದರೆ ಮುಗಿದೇ ಹೋಗುತ್ತಿತ್ತು ’ – ಎಂದಳು.

ಪಟೇಶ್ವರೀಲಾಲರು ನಗುತ್ತ – ‘ ದನಿಯಾ ಅತ್ತು, ಬೊಬ್ಬೆ ಹಾಕಿ ಸಹ ಆಗಿತ್ತು’ – ಎಂದರು.

ಹೋರಿರಾಮು ಆತುರ ನೇತ್ರಗಳಿಂದ ನೋಡಿ – ‘ ನಿಜವಾಗಿಯೂ ನೀನು ಅಳುತ್ತ ಇದ್ದಿಯೇ ದನಿಯಾ? ’–ಎಂದು ಕೇಳಿದ.

ದನಿಯಳು ಪಟೇಶ್ವರೀಲಾಲರನ್ನು ಅಡಿಗಣ್ಣಿಂದ ನೋಡಿ ಹೇಳಿದಳು – ‘ ಸುಮ್ಮನೆ ಏನೇನೋ ಹೇಳುತ್ತಿರುವಿರಲ್ಲ? ನೀವು ಕಾಗದ ಪೆನ್ನು ಬಿಟ್ಟು ಇಲ್ಲಿಗೇಕೆ ಬಂದುದು? ’

‘ ನೀನು, ಹೀರಾ ಸೋಬಾ ಎನ್ನುತ್ತಾ ಎದೆ ಬಡೆದುಕೊಂಡು ಅಳುತ್ತಿದ್ದೆ! ಈಗ ಮಾತ್ರ ನಗುತ್ತಿ – ಅಲ್ಲವೇ? ’

ಹೋರಿರಾಮು ದನಿಯಳತ್ತ ಸಜಲ ನೇತ್ರಗಳಿಂದ ನೋಡಿ ಹೇಳಿದ – ‘ ನಿನಗೇನಾದರೂ ಹುಚ್ಚು ಹಿಡಿದಿದೆಯೇ ದನಿಯಾ? ಯಾವ ಸುಖದಾಸೆ ಯಿಂದ ನಾನು ಬದುಕಬೇಕೆಂದು ಬಯಸುವೆಯೋ – ದೇವರೇ ಬಲ್ಲ! ’

ಇಬ್ಬರು ಗಂಡುಸರು ಸೇರಿ ಹೋರಿರಾಮುನನ್ನು ಹೊತ್ತು ಮನೆಗೆ ತಂದು ಚಾಪೆಯ ಮೇಲೆ ಮಲಗಿಸಿದರು. ಕಬ್ಬು ನೆಡಲಿಕ್ಕೆ ತಡವಾಯಿತೆಂದು ದಾತಾ ದೀನರು ಪಿರಿ ಪಿರಿ ಹೇಳುತ್ತಲೇ ಇದ್ದರು. ಆದರೆ ಮಾತಾದೀನ ಅಷ್ಟು ನಿಷ್ಠ

ರುಣಿಯಲ್ಲ. ಅವನು ಓಡಿ ಹೋಗಿ ಮನೆಯಿಂದ ಬಿಸಿ ಹಾಲು ತಂದ. ಮತ್ತೊಂದು ಬಾಟ್ಲಿಯಲ್ಲಿ ಕಣ್ಣಿಗೆ ಹಾಕಲಿಕ್ಕೆ ಪನ್ನೀರು ಹಿಡಿದುಕೊಂಡು ಬಂದ. ಹಾಲು ಕುಡಿದಮೇಲೆ ಹೋರಿರಾಮನಿಗೆ ಸ್ವಲ್ಪಸಮಾಧಾನವಾಯಿತು.

ಅಷ್ಟರಲ್ಲಿ ಆ ಕೇರಿಯ ನಾಯಿಗಳೆಲ್ಲ ಬೊಗಳುವ ಶಬ್ದ ಕೇಳಿಬಂತು. ಕ್ರಮೇಣ ಶಬ್ದ ನಿಂತು ಹೋಗಿ ನಾಯಿಗಳು ಬಾಲ ಆಡಿಸಲಾರಂಭಿಸಿದುವು. ಆಗ ರೂಪಳು—'ಅಣ್ಣ ಬಂದ! ಅಣ್ಣ ಬಂದ' ಎಂದು ಕೈ ಚಪ್ಪಾಳೆ ಹೊಡೆಯುತ್ತ ಓಡಿ ಬಂದಳು. ಸೋನೆಯೂ ನಾಲ್ಕಾರು ಹೆಜ್ಜೆ ಮುಂದೆ ಹೋದಳು. ಆದರೆ ಅಷ್ಟರಲ್ಲಿ ತನ್ನ ಉತ್ಸಾಹವನ್ನು ತಡೆದುಕೊಂಡಳು. ಯೌವನವು ಅವಳನ್ನು ಒಂದೇ ವರ್ಷದಲ್ಲಿ ಸಂಕೋಚಶೀಲಳನ್ನಾಗಿ ಮಾಡಿಬಿಟ್ಟಿತ್ತು. ಜುನಿಯಳೂ ಬಟ್ಟೆ ಸರಿಮಾಡಿಕೊಂಡು ಬಾಗಿಲ ಬಳಿಯಲ್ಲಿ ನಿಂತುಕೊಂಡಳು.

ಗೋಬರ ಬಂದು ತಂದೆ ತಾಯಿಯರ ಕಾಲು ಹಿಡಿದು ವಂದಿಸಿದ. ಬಳಿಕ ರೂಪಳನ್ನೆತ್ತಿಕೊಂಡು ಮುದ್ದಾಡಿದ. ದನಿಯಳು ತಲೆ ಮುಟ್ಟಿ ಆಶೀರ್ವದಿಸಿ, ಅವನನ್ನಪ್ಪಿಕೊಂಡು ತನ್ನ ಮಾತೃಸ್ನೇಹದ ಪುರಸ್ಕಾರ ಪಡೆದಂತಾದಳು. ಅವಳ ಹೃದಯದಲ್ಲಿ ಒಂದು ತರದ ಗರ್ವ ಮೂಡಿ ಬಂತು. ಇಂದಿನ ಈ ದರಿದ್ರಾವಸ್ಥೆಯಲ್ಲಿಯೂ ಆಕೆ ಒಮ್ಮೆ ರಾಣಿಯ ಅಭಿಮಾನ ತಳೆದಳು. ಗೋಬರ ಎಷ್ಟು ದೊಡ್ಡವನಾಗಿದ್ದಾನೆ! ಅದು ಕೂಡಾ, ಹೊಸ ಹೊಸ ಬಟ್ಟೆ ಹಾಕಿಕೊಂಡು ಎಷ್ಟು ಚನ್ನಾಗಿ ಕಾಣುತ್ತಾನೆ! ದನಿಯಳ ಮನಸ್ಸಿನಲ್ಲಿ ಎಂದೂ ಅಶುಭ ಶಂಕೆ ಮೂಡಿ ಬಂದಿದ್ದಿಲ್ಲ. ಗೋಬರ ಎಲ್ಲಿಯಾದರೂ ಸುಖವಾಗಿದ್ದಾನೆಂದು—ಅವಳ ಮನಸ್ಸು ಹೇಳುತ್ತಿತ್ತು. ಇಂದು ಈಗ ಅವನನ್ನು ಪುನಃ ನೋಡಿ ಅವಳಿಗಾದ ಸಂತೋಷಕ್ಕೆ ಪಾರವೇ ಇದ್ದಿಲ್ಲ. ಹೋರಿರಾಮನೂ ಮುಖ ಅರಳಿಸಿಕೊಂಡ.

'ಅಪ್ಪನಿಗೆ ಏನಾಗಿದೆ ಅಮ್ಮಾ?'—ಗೋಬರ ಕೇಳಿದ.

ದನಿಯಳು ಮನೆಯ ಸ್ಥಿತಿಯನ್ನೆಲ್ಲ ಒಮ್ಮೆಯೇ ತೋಡಿ ಅವನ ಮನಸ್ಸಿಗೆ ಬೇಸರಪಡಿಸಬಾರದೆಂದು ಯೋಚಿಸಿ ಹೇಳಿದಳು—'ಮತ್ತೇನೂ ಇಲ್ಲ ಮಗು. ಸ್ವಲ್ಪ ತಲೆ ನೋವಿದೆ, ಅಷ್ಟೆ. ಆಗಲಿ—ಈಗ ಬಟ್ಟೆ ಬದಲಾಯಿಸಿಕೋ. ಕೈಕಾಲು ತೊಳೆದುಕೊ. ಇಷ್ಟು ದಿನ ಎಲ್ಲಿದ್ದೆ ಮಗು? ಹೀಗೂ ಮನೆಯಿಂದ ಓಡಿ ಹೋಗುವುದೇ? ಒಂದು ಕಾಗದ ಕೂಡಾ ಬರೆಯುವುದು ಬೇಡವೆ? ಅಬ್ಬ! ಒಂದು ವರ್ಷ ದಾಟಿದ ಮೇಲೆ ಇಂದಾದರೂ ನೆನಪಾಯಿತಲ್ಲ! ನಿನ್ನ

ದಾರಿ ನೋಡಿ ನೋಡಿ ಕಣ್ಣೇ ಕೆಟ್ಟುಹೋಯಿತು. ಆಗಲಿ – ಎಲ್ಲಿದ್ದೆ ಇಷ್ಟರ ತನಕ ?'

ಗೋಬರ ನಾಚುತ್ತ ಹೇಳಿದ – ' ದೂರ ಎಲ್ಲಿಯೂ ಹೋಗಿದ್ದಿಲ್ಲ ಅಮ್ಮಾ. ಇಲ್ಲೇ ಲಖ್ನೌವಿನಲ್ಲಿದ್ದೆ.'

' ಇಷ್ಟು ಹತ್ತಿರ ಇದ್ದು ಸಹ ಒಂದು ಕಾಗದ ಬರೆಯಲಿಲ್ಲವಲ್ಲ !'

ಅತ್ತ ಸೋನಾ ಮತ್ತು ರೂಪಾ ಒಳಗಿಂದ ಅವನ ಸಾಮಾನುಗಳನ್ನೆಲ್ಲ ಬಿಡಿಸಿ ತಮ್ಮ ತಮ್ಮೊಳಗೆ ಪಾಲು ಮಾಡಿಕೊಳ್ಳತೊಡಗಿದ್ದರು. ಆದರೆ ಜುನಿಯಳು ಮಾತ್ರ ದೂರ ನಿಂತುಕೊಂಡಿದ್ದಳು. ಅವಳ ಮುಖದಲ್ಲಿ ಒಂದು ತರದ ಹೆಮ್ಮೆಯು ಪ್ರಕಾಶ ಮೂಡಿ ಬಂದಿತ್ತು. ಗೋಬರ ಅವಳಿಗೆ ನಡೆಸಿದ ಅನ್ಯಾಯಕ್ಕೆ ಇಂದು ಮಯ್ಯಿ ತೀರಿಸಲಿಕ್ಕೆ ಅವಳು ಬಯಸಿದ್ದಳು. ಮಗು ಚುನ್ನು–ಆ ವಸ್ತುಗಳತ್ತ ಹಾರುತ್ತಿದ್ದು ಅವನ್ನೆಲ್ಲ ಮುದ್ದೆ ಮಾಡಿ ಬಾಯಲ್ಲಿ ಹಾಕಿಕೊಳ್ಳಲಿಕ್ಕೆ ಬಯಸುತ್ತಿದ್ದ

' ಅತ್ತಿಗೆ! ನಿನಗಾಗಿ ಅಣ್ಣ ಕನ್ನಡಿ ಬಾಚಣಿಗೆ ತಂದಿದ್ದಾನೆ!' – ಸೋನೆ ಹೇಳಿದಳು.

ಜುನಿಯಳು ಉಪೇಕ್ಷಾಭಾವದಿಂದ – ' ಕನ್ನಡಿ ಬಾಚಣಿಗೆ ನನಗೆ ಬೇಡ; ನಿನಗೇ ಇರಲಿ ' – ಎಂದಳು.

ರೂಪಳು ಮಗುವಿಗಾಗಿ ತಂದ ಹೊಳಪಿನ ಟೋಪಿ ತೆಗೆದಳು – 'ಓಹೋ, ಇದೀಗ ಚುನ್ನುವಿಗೆ ಟೋಪಿ !' – ಎನ್ನುತ್ತ ಅವನ ತಲೆಯ ಮೇಲಿಟ್ಟಳು.

ಜುನಿಯಳು ಟೋಪಿ ತೆಗೆದು ಬೀಸಾಡಿದಳು. ಅಷ್ಟರಲ್ಲಿ ಗೋಬರ ಒಳ ಬರುವುದನ್ನು ಕಂಡು ಮಗುವನ್ನೆತ್ತಿಕೊಂಡು ತನ್ನ ಕೋಣೆಗೆ ಹೋಗಿ ಬಿಟ್ಟಳು. ಗೋಬರ ನೋಡುವಾಗ ಎಲ್ಲ ಸಾಮಾನನ್ನು ಬಿಡಿಸಿಯಾಗಿದೆ. ಅವನಿಗೆ ಮೊತ್ತ ಮೊದಲು ಜುನಿಯಳನ್ನು ಕಂಡು ತನ್ನ ತಪ್ಪಿಗಾಗಿ ಕ್ಷಮೆ ಕೇಳಿಕೊಳ್ಳುವ ಮನಸ್ಸಾಗಿತ್ತು. ಆದರೂ ಒಳ ಹೋಗುವ ಧೈರ್ಯ ಬರಲಿಲ್ಲ. ಅಲ್ಲೇ ಕೂತುಕೊಂಡು ಒಂದೊಂದೇ ಸಾಮಾನು ತೆಗೆದು ಪ್ರತಿಯೊಬ್ಬರಿಗೂ ಕೊಡಲಾರಂಭಿಸಿದ. ರೂಪಳು ತನಗೆ ಚಪ್ಪಲ್ ಇಲ್ಲದ್ದರಿಂದ ಅಳಲಾರಂಭಿಸಿದಳು. ಆಗ ಸೋನೆ – ' ನಾನು ನಿನ್ನ ಗೊಂಬೆ ನೋಡಿ ಅಳುತ್ತೇನೆಯೇ ? ನೀನು ನಿನ್ನ ಗೊಂಬೆಯ ಜೊತೆಗೆ ಆಡುತ್ತಿರು ' – ಎಂದು ಸಮಾಧಾನ ಪಡಿಸಿದಳು. ಮಿಠಾಯಿ ಹಂಚುವ ಹೊಣೆಯನ್ನು ದನಿಯಳೇ ಸ್ವತಃ ವಹಿಸಿ

ಕೊಂಡಳು. ಇಷ್ಟು ದಿನ ದಾಟಿದ ಮೇಲೆ ಮಗ ಕ್ಷೇಮದಿಂದ ಬಂದಿದ್ದಾನೆ! ಹಾಗಾಗಿ ಸುತ್ತುಮುತ್ತಿನ ಮನೆಗಳಿಗೂ ದನಿಯಳು ತಿಂಡಿ ಕಳಿಸಿದಳು. ಆದರೆ ರೂಪಳ ಬಾಯಿಗೆ ಬಂದ ಒಂದು ಗುಲಾಬ್ ಜಾಮೂನ್ – ಒಂಟೆಯ ಬಾಯಿಗೆ ಒಂದು ಜೀರಿಗೆ ಕಾಳು ಕೊಟ್ಟಂತಾಯಿತು. ದೊಡ್ಡ ಗುಡಾಣ ಒಂದರಲ್ಲಿ ಸಿಹಿ ತಿಂಡಿ ಮಾಡಿ ತುಂಬಿಸಿ ಅದಕ್ಕೆ ಹಾರಿ ಹಾರಿ ತಿನ್ನುತ್ತಿದ್ದರೆ– ಅವಳಿಗೆ ತೃಪ್ತಿಯಾಗುತ್ತಿತ್ತು!

ಗೋಬರ ಪೆಟ್ಟಿಗೆ ತೆರೆದ. ಅದರಿಂದ ಒಂದೊಂದೇ ಸೀರೆ ಹೊರಡತೊಡಗಿದುವು. ಎಲ್ಲವೂ ಒಳ್ಳೆಯ ಪಟ್ಟೆಯುವು. ಆದರೆ ಬಹಳ ತೆಳ್ಳಗೆ! ಪಟೇಶ್ವರೀ ಲಾಲರಲ್ಲಿಗೆ ಮಾತ್ರ ಆ ತರದ ಸೀರೆ ತರುತ್ತಿದ್ದರು. ಈ ತೆಳು ಸೀರೆಗಳೆಲ್ಲ ಎಷ್ಟು ದಿನ ಬಂದಾವು? ದೊಡ್ಡವರ ಮನೆಯ ಹೆಂಗುಸರು ಎಷ್ಟು ತೆಳು ಸೀರೆ ಉಟ್ಟರೂ ಚಿಂತೆ ಇಲ್ಲ. ಅವರಿಗೆ ಸೀರೆಯ ಸಿಂಗಾರ ಮಾಡಿಕೊಂಡು–ಕೂತು ಮಲಗುವುದು ವಿನಾ ಬೇರೇನು ಕೆಲಸವಿದೆ? ಇಲ್ಲಿ ಮನೆಗೆಲಸ, ಗದ್ದೆ ಕೆಲಸ– ಎಲ್ಲವೂ ಆಗಬೇಕು! ಸರಿ; ಹೋರಿರಾಮನಿಗೆ ಒಂದು ಪಂಚೆಯಲ್ಲದೆ ಒಂದು ಶಾಲು ಸಹ ಬಂದಿದೆ.

ದನಿಯಳು ಸಂತೋಷದಿಂದ ಹೇಳಿದಳು – 'ಇದನ್ನು ತಂದುದು ಬಹಳ ಒಳ್ಳೆಯುದಾಯಿತು. ಅವರ ಶಾಲು ಹರಿದು ಚೂರು ಚೂರಾಗಿದೆ.'

ಗೋಬರನಿಗೆ ಇಷ್ಟರಲ್ಲೇ ಮನೆಯ ಸ್ಥಿತಿ ಗತಿಯ ಅಂದಾಜಾಗಿತ್ತು. ದನಿಯಳ ಬಟ್ಟೆಯಲ್ಲಿ ಅನೇಕ ಕಡೆ ಹೊಲಿಗೆ ಬಿದ್ದಿತ್ತು. ಸೋನೆಯ ಬಟ್ಟೆಯೂ ಹಿಂಬದಿಯಲ್ಲಿ ಹರಿದು ಹೋಗಿತ್ತು. ಎಲ್ಲರ ಮುಖವೂ ಬಾಡಿತ್ತು, ಒಣಗಿತ್ತು. ಯಾರ ದೇಹದಲ್ಲಿಯೂ ಜೀವಕಳೆ ಇದ್ದಿಲ್ಲ. ಎಲ್ಲಿ ನೋಡಿದರೂ ಚಿಂತೆಯ ಸಾಮ್ರಾಜ್ಯ ಹರಡಿದ್ದಂತೆ ತೋರುತ್ತಿತ್ತು.

ಹುಡುಗಿಯರು ಸೀರೆಯ ಬಣ್ಣನೆಯಲ್ಲೇ ತೊಡಗಿದರು· ಆದರೆ ದನಿಯಳಿಗೆ ಮಗನ ಊಟದ ಚಿಂತೆ ತಗುಲಿತು. ಮನೆಯಲ್ಲಿ ಅವಳು ರಾತ್ರಿಗೆ ತಕ್ಕ ಸ್ವಲ್ಪ ಜೋಳದ ಹಿಟ್ಟು ಉಳಿಸಿದ್ದಳು. ಆದರೆ ಈ ಗೋಬರ ಹಿಂದಿನ ಗೋಬರನಲ್ಲ. ಅವನಿಗೆ ಜೋಳದ ರೊಟ್ಟಿ ಆಗುವುದೋ ಇಲ್ಲವೋ? ಅಲ್ಲಿ ಏನೆಲ್ಲ ತಿನ್ನುತ್ತಿದ್ದನೋ – ಏನೋ! ಆದ್ದರಿಂದ ಕೂಡಲೇ ಹೋಗಿ ದುಲಾರಿಯ ಅಂಗಡಿಯಿಂದ ಗೋದಿಹಿಟ್ಟು, ಅಕ್ಕಿ, ತುಪ್ಪ ಮುಂತಾದುವನ್ನು ಕಡ ತಂದಳು. ಇತ್ತ ದುಲಾರಿ ಹಲವು ತಿಂಗಳುಗಳಿಂದ ಒಂದು ಪೈಯ ಸಾಮಾನು ಸಹ ಕಡ

ಕೊಡುತ್ತಿರಲಿಲ್ಲ. ಆದರೆ ಇಂದು ಮಾತ್ರ–ಹಣ ಕೊಡುವುದು ಯಾವಾಗ–ಎಂದು ಸಹ ಕೇಳಲಿಲ್ಲ.

ಅವಳು ಕೇಳಿದಳು – 'ಗೋಬರನು ತುಂಬ ಸಂಪಾದಿಸಿಕೊಂಡು ಬಂದಿರ ಬಹುದಲ್ಲವೇ ?'

'ಈ ವರೆಗೆ ಒಂದೂ ಗೊತ್ತಿಲ್ಲ. ನಾನು ಕೂಡ ಬಂದೊಡನೆಯೇ ಕೇಳುವುದು ಸರಿಯಲ್ಲವೆಂದು ಸುಮ್ಮನಿದ್ದೇನೆ. ಆದರೆ ಎಲ್ಲರಿಗೂ ಪಟ್ಟೆಸೀರೆ ತಂದಿದ್ದಾನೆ. ನಿಮ್ಮ ಆಶೀರ್ವಾದದಿಂದ ಸುಖವಾಗಿ ಬಂದನಲ್ಲ! ಅದೇ ನನ್ನ ಮಟ್ಟಿಗೆ ದೊಡ್ಡದು' – ದನಿಯುಳೆಂದಳು.

ದುಲಾರಿ ಪುನಃ ಆಶೀರ್ವದಿಸಿದಳು – 'ದೇವರು ಅವನಿಗೆ ಒಳ್ಳೇದು ಮಾಡಲಿ. ತಂದೆತಾಯಿಯರಿಗೆ ಮತ್ತೇನು ಬೇಕು? ಹುಡುಗನಂತು ಒಳ್ಳೆಯ ತಿಳಿವಳಿಕೆಯುವನು. ಇತರ ಪೋಲಿಗಳಂತೆ ಹಣ ಹಾಳು ಮಾಡುವವನಲ್ಲ. ಇನ್ನು, ನಮ್ಮ ಅಸಲು ಇಲ್ಲವಾದರೂ ಬಡ್ಡಿಯನ್ನಾದರೂ ಕೊಟ್ಟುಬಿಡಿ. ದಿನ ದಿನ ಏರುತ್ತಲೇ ಹೋಗುತ್ತದೆ.'

ಇತ್ತ ಸೋನೆಯು ಚುನ್ನುವಿಗೆ ಅವನ ಫ್ರಾಕ್, ಟೋಪಿ, ಬೂಟ್ಸ್–ಎಲ್ಲ ತೊಡಿಸಿಬಿಟ್ಟು ಅವನನ್ನು ಯುವರಾಜನನ್ನಾಗಿ ಮಾಡುತ್ತಿದ್ದಳು. ಆದರೆ ಚುನ್ನುವಿಗೆ ಇವನ್ನೆಲ್ಲ ತೊಡಿಸುವುದಕ್ಕಿಂತ ಕೈಯಲ್ಲೇ ಕೊಟ್ಟುಬಿಟ್ಟರಾಗುತ್ತಿತ್ತು – ಎಂದೆನಿಸುತ್ತಿತ್ತು. ಒಳಗಿಂದ ಗೋಬರ ಮತ್ತು ಜುನಿಯರೊಳಗೆ, ಕೋಪ ಸಮಾಧಾನಗಳ ಅಭಿನಯ ನಡೆಯುತ್ತಿತ್ತು.

ಜುನಿಯುಳು ತಿರಸ್ಕಾರಯುಕ್ತ ದೃಷ್ಟಿಯಿಂದ ನೋಡಿ ಹೇಳಿದಳು – 'ನನ್ನನ್ನು ಇಲ್ಲಿ ತಂದು ಬಿಟ್ಟುಬಿಟ್ಟಿರಿ! ನೀವೆಲ್ಲಿಯೋ ಪರವೂರಿನ ರಸ್ತೆ ಹಿಡಿದಿರಿ! ಆ ಮೇಲೆ ನಾನು ಜೀವದಿಂದಿದ್ದೇನೆಯೋ; ಅಲ್ಲ, ಸತ್ತಿದ್ದೇನೆಯೋ ಎಂಬ ಸುದ್ದಿ ಕೂಡ ನಿಮಗೆ ಬೇಡ! ಒಂದು ವರ್ಷ ದಾಟಿದ ಮೇಲೆ ಹೇಗೋ ನಿಮಗೀಗ ಎಚ್ಚರವಾಗಿದೆ. ಎಷ್ಟು ದೊಡ್ಡ ಕಪಟಿಯಪ್ಪ – ನೀವು! ಆ ದಿನ ನಾನೆಣಿಸಿದ್ದು – ನನ್ನ ಹಿಂದೆಯೇ ನೀವೂ ಬರುತ್ತಿದ್ದೀರೆಂದು. ಆದರೆ ಅಂದು ಹಾರಿಹೋದವರು ಈಗ ಬರುತ್ತಿದ್ದೀರಿ. ಈ ಗಂಡುಸರನ್ನು ನಂಬುವುದಾದರೂ ಹೇಗೆ? ಅಲ್ಲಿ ಬೇರಾರಾದರೂ ತಾಗಿದ್ದಾಳೋ – ಏನೋ? ಆಗಲಿ; ಊರಲ್ಲೊಬ್ಬಳು, ಹೋದಲ್ಲೊಬ್ಬಳು!'

ಗೋಬರನೂ ತನ್ನ ಯಥಾರ್ಥತೆಯನ್ನು ವಿವರಿಸಲಾರಂಭಿಸಿದ–

'ಜುನಿಯಾ, ನಾನು ಎಂದಾದರೂ, ಯಾರ ಮೇಲಾದರೂ ಕಣ್ಣು ಕೂಡಾ ಹಾಕಿಲ್ಲ-ಎಂಬುದಕ್ಕೆ ಆ ದೇವರೇ ಸಾಕ್ಷಿ. ಲಜ್ಜೆಯ, ಭಯದ, ದೆಸೆಯಿಂದಾಗಿ ಮನೆಬಿಟ್ಟು ಓಡಿದ್ದೇನೋ ನಿಜ. ಆದರೆ ಪ್ರತಿ ಕ್ಷಣದಲ್ಲಿಯೂ ನಿನ್ನ ನೆನಪು ಬಂದೇ ಬರುತ್ತಿತ್ತು. ಆದಕ್ಕಾಗಿ ಈ ಸಲ ನಿನ್ನನ್ನು ಕೂಡ ಕರೆದುಕೊಂಡು ಹೋಗಬೇಕೆಂದು ನಿಶ್ಚೈಸಿದ್ದೇನೆ. ಅದಕ್ಕೇ ಈಗ ಬಂದುದು. ನಿನ್ನ ಮನೆಯವರಿಗೆಲ್ಲ ಬಹಳ ಕೋಪ ಬಂದಿರಬೇಕು – ಅಲ್ಲವೇ ?'

'ಅಪ್ಪನಂತು ನನ್ನನ್ನು ಕೊಂದೇಬಿಡಬೇಕೆಂದು ಹಟಹಿಡಿದಿದ್ದರು.'

'ನಿಜವಾಗಿಯೂ ?'

'ಹೂಂ. ಅಪ್ಪ ಮತ್ತು ಅಣ್ಣಂದಿರು ಒಟ್ಟಾಗಿ ಇಲ್ಲಿಗೆ ಬಂದು ಮುತ್ತಿಗೆಯನ್ನೇ ಹಾಕಿದರು. ಆದರೆ ನಿಮ್ಮ ಅಮ್ಮ ಬಲವಾಗಿ ಗದರಿಸಿದ್ದರಿಂದ ಹೊರಟು ಹೋದರು. ಆದರೆ ನಮ್ಮ ಎರಡೆತ್ತುಗಳನ್ನು ಮಾತ್ರ ಬಿಡಿಸಿಕೊಂಡೇ ಹೋದರು.'

'ಅಷ್ಟು ಬಲಾತ್ಕಾರವೇ? ಅಪ್ಪ ಆ ವಿಚಾರ ಅಡ್ಡ ಮಾತಾಡಲಿಲ್ಲವೇ?'

'ಅವರೊಬ್ಬರೇ ಯಾರ್ಯಾರೊಡನೆ ಜಗಳಾಡುವುದು ? ಊರವರೆಲ್ಲ ತಡೆಯಲು ತಯಾರಾದರೂ, ನಿಮ್ಮಪ್ಪನೇ ಒಪ್ಪಿಗೆ ಕೊಟ್ಟಿದ್ದ ಮೇಲೆ – ಊರ ಜನರೇನು ಮಾಡಿಯಾರು ?'

'ಹಾಗಾದರೆ ಈಗ ಗದ್ದೆ ಬೇಸಾಯವಾಗುವುದು ಹೇಗೆ ?'

'ಬೇಸಾಯ ಗೀಸಾಯ ಎಲ್ಲವೂ ಹಾಳಾಗಿ ಹೋಯಿತು. ಏನೋ ಸ್ವಲ್ಪ, ಪಂಡಿತರೊಡನೆ ಪಾಲಲ್ಲಿ ನಡೆಯಿತು. ಕಬ್ಬಂತು ನೆಡಲೇ ಇಲ್ಲ.'

ಗೋಬರನ ಸೊಂಟದಲ್ಲಿ ಆಗ ಇನ್ನೂರು ರೂಪಾಯಿಗಳಿದ್ದುವು. ಅವನಿಗೆ ಅದರ ಸೆಕೆ ತಡೆಯಲಾಗಲಿಲ್ಲ. ಈ ಕತೆಯನ್ನೆಲ್ಲ ಕೇಳಿ ಬೆಂಕಿ ಇಟ್ಟಂತಾಯಿತು ಅವನಿಗೆ. ಅವನು ಹೇಳಿದ – 'ಹಾಗಾದರೆ ಮೊದಲಿಗೆ ನಿನ್ನಪ್ಪನ ಹತ್ತಿರವೇ ಹೋಗಿ ಕೇಳುತ್ತೇನೆ. ನನ್ನ ಮನೆ ಬಾಗಿಲಿಂದ ಎತ್ತುಗಳನ್ನು ಬಿಡಿಸಿಕೊಂಡು ಹೋಗಲಿಕ್ಕೆ ಅವನಿಗಾವ ಹಕ್ಕಿದೆ ? ಅವರೆಲ್ಲ ಶುದ್ಧ ಕಳ್ಳರು ! ದರೋಡೆಗಾರರು ! ಆ ಮೂವರನ್ನೂ ಮೂರು ಮೂರು ವರ್ಷ ಕಳಿಸದೆ ಬಿಡಲಿಕ್ಕಿಲ್ಲ. ಅವರ ಗರ್ವ ಎಷ್ಟಿದೆಯೆಂದು ಒಂದು ಕೈ ನೋಡಿಯೇ ಬಿಡಬೇಕು.'

ಅವನು ಅದೇ ಆವೇಶದಿಂದ ಹೊರ ಹೊರಟಾಗ ಜುನಿಯಳು ಹಿಡಿದು ನಿಲ್ಲಿಸಿ ಹೇಳಿದಳು – 'ಹಾಗೆ ಹೋಗುವುದಿದ್ದರೂ ಅಷ್ಟು ಅವಸರ ಏನು ?

ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ. ಏನಾದರೂ ಹೊಟ್ಟೆಗೆ ಹಾಕಿಕೊಳ್ಳಿ. ಇನ್ನೂ ಸಮಯವಿದೆ. ಇಲ್ಲಿ ದೊಡ್ಡ ದೊಡ್ಡ ಪಂಚಾಯಿತಿಕೆಗಳು ನಡೆದುವು. ಊರ ಹತ್ತು ಸಮಸ್ತರು ೮೦ ರೂಪಾಯಿ ದಂಡ ನಮ್ಮ ಮೇಲೆ ವಿಧಿಸಿದರು! ಮೂವತ್ತು ಮಣ ಧಾನ್ಯ ಬೇರೆ ತೆಗೆದುಕೊಂಡರು! ಅದರಿಂದಾಗಿಯೇ ಇಷ್ಟೆಲ್ಲ ತಗಾದೆ ನಮಗೆ ಬಂದುದು.'

ಸೋನೆಯು ಚುನ್ನುವಿಗೆ ವೇಷ ಭೂಷಣ ಹಾಕಿ ಎತ್ತಿಕೊಂಡು ಬಂದಳು. ಹೊಸ ಬಟ್ಟೆಬರೆಗಳಿಂದಾಗಿ–ಅವನು ನಿಜವಾದ ರಾಜಕುಮಾರನಂತೆಯೇ ಆದ. ಗೋಬರ ಅವನನ್ನೆತ್ತಿಕೊಂಡ. ಆದರೆ ಅವನಿಗೆ ಮಗುವಿನ ಮೇಲೆ ಹೆಚ್ಚಿನ ಪ್ರೇಮ ಸಂತೋಷ ತೋರಲಿಲ್ಲ. ಅವನ ರಕ್ತ ಕುದಿಯುತ್ತಿತ್ತು. ಜೇಬಿನಲ್ಲಿರುವ ರೂಪಾಯಿ, ಬೆಂಕಿಯ ಮತ್ತು ಗಾಳಿಯ ಕೆಲಸ ಮಾಡುತ್ತಿತ್ತು. ಅವನಿಗೆ ತೋರಿತು – ಒಬ್ಬೊಬ್ಬರನ್ನೇ ಹೋಗಿ ಕೇಳಬೇಕು – ದಂಡ ಹೊರಿಸಲಿಕ್ಕೆ ಊರ ಹಿರಿಯರಿಗೆ ಏನು ಅಧಿಕಾರವಿದೆ? ಮನೆಯೊಳಗಿನ ಈ ವಿಚಾರದಲ್ಲಿ ಯಾರವನು ಮಾತಾಡುವವನು? ತಾನೊಂದು ಹುಡುಗಿಯನ್ನಿಡಿಸಿಕೊಂಡರೆ ಮುಖಂಡರ ಅಪ್ಪನ ಮನೆಯಿಂದೇನು ಹೋಯಿತು? ಪೋಲಿಸ್ ಸ್ಟೇಶನಿನಲ್ಲಿ ಈ ವಿಚಾರ ಪಿರ್ಯಾದಿ ಕೊಟ್ಟರೆ ಅವರೆಲ್ಲರ ಕೈಗೂ ಕೋಳ ಬಿದ್ದೀತು. ಅವರ ಮನೆ ಮಾರೆಲ್ಲ ಜಪ್ತಿಯಾಗಿ ಹೋದೀತು! ಏನೆಂದು ತಿಳಿದಿದ್ದಾರೆ – ಇವರೆಲ್ಲ?

ಚುನ್ನುವು ಅವನ ಮುಖ ನೋಡಿ ನಗಾಡಿದ. ಮತ್ತೆ ಏನೋ ಎಣಿಸಿಕೊಂಡು ಹೆದರಿ ಅಳತೊಡಗಿದ.

ಜುನಿಯಳು ಅವನ ಕೈಯಿಂದ ಮಗನನ್ನು ತೆಗೆದುಕೊಂಡು ಹೇಳಿದಳು– ಈಗ ಹೋಗಿ ಸ್ನಾನ ಮಾಡಿ. ಏನು ಯೋಚನೆ ಮಾಡುತ್ತಿದ್ದೀರಿ? ಇಲ್ಲಿಯವರೊಡನೆ ಜಗಳಕ್ಕೆ ಒಂದು ದಿನ ಸಾಕಾಗದು. ಯಾರ ಕೈಯಲ್ಲಿ ಹಣವಿದೆಯೋ – ಅವನೇ ದೊಡ್ಡ ಮನುಷ್ಯ, ಅವನೇ ಒಳ್ಳೆಯ ಮನುಷ್ಯ. ಕಾಸಿಲ್ಲವಾದರೆ – ಎಲ್ಲರೂ ಒಂದೊಂದು ಕಲ್ಲು ಹೇರುವವರೇ.'

'ನಾನು ಮನೆ ಬಿಟ್ಟು ಹೋದುದೇ ಹೆಡ್ಡುತನ. ಇಲ್ಲವಾದರೆ ಯಾರವನು ದಂಡ ಕೇಳಲಿಕ್ಕೆ ಬರುತ್ತಾನೆಂದು – ಒಂದು ಕೈ ನೋಡಿಯೇ ಬಿಡುತ್ತಿದ್ದೆ.'

'ಪೇಟೆಯ ಗಾಳಿ ತಾಗಿದೆ! ಆದ್ದರಿಂದ ಈ ವಿಚಾರವೆಲ್ಲ ಈಗ ಗೊತ್ತಾಗುತ್ತದೆ.'

'ಒಂದು ದೊಣ್ಣೆ ತೆಗೆದುಕೊಂಡು ಆ ಪಟೇಶ್ವರಿ, ದಾತಾದೀನ್, ಜಿಂಗುರಿ – ಎಲ್ಲರನ್ನೂ ಹೊಡೆದುರುಳಿಸಿ, ಅವರ ಹೊಟ್ಟೆಯಿಂದ ದಂಡದ ರೂಪಾಯಿ ಕಾರಿಸಬೇಕೆಂದು ಮನಸ್ಸಾಗುತ್ತದೆ.'

'ರೂಪಾಯಿಯ ಸೆಕೆ ಏರಿಹೋಗಿದೆಯೆಂದು ತೋರುತ್ತದೆ. ನೋಡುವಾ ತೆಗೆಯಿರಿ – ಇಷ್ಟು ದಿನಗಳಲ್ಲಿ ಎಷ್ಟು ಸಂಪಾದಿಸಿ ತಂದಿರುವಿರೆಂಬುದಾಗಿ ?'

ಅವಳು ಗೋಬರನ ಜೇಬಿಗೆ ಕೈ ಹಾಕಿದಳು. ಆಗ ಗೋಬರ ಹೇಳಿದ– 'ಈ ವರೆಗೆ ಆದದ್ದು ಎಂತಹ ಮಹಾ ಸಂಪಾದನೆ ? ಇನ್ನು ನೀನು ಸಹ ಬಂದರೆ ಚನ್ನಾಗಿ ಸಂಪಾದಿಸಿಯೇನು. ಒಂದು ವರ್ಷ – ಪೇಟೆಯ ರೀತಿ ನೀತಿ ತಿಳಿದುಕೊಳ್ಳುವುದರಲ್ಲೇ ಮುಗಿದು ಹೋಯಿತು.'

'ನಿಮ್ಮ ಅಮ್ಮ ನನ್ನನ್ನು ಹೋಗಲಿಕ್ಕೆ ಬಿಟ್ಟರೆ ತಾನೆ ?'

'ಅಮ್ಮನೇಕೆ ಹೋಗ ಬಿಡಲಿಕ್ಕಿಲ್ಲ ?'

'ಆಹಾ ! ಅವರ ಒಪ್ಪಿಗೆ ಇಲ್ಲದೆ ನಾನೆಲ್ಲಿಗೂ ಹೊರಡಲಾರೆ. ಅಂದು ನೀವು–ಬಿಟ್ಟರಿ, ಹೋದಿರಿ ! ನನಗಾಗ ಅವರಲ್ಲದೆ ಬೇರಾರು ಗತಿ ಇದ್ದರು ? ನನ್ನನ್ನವರು ಮನೆ ಹೊಕ್ಕಲಿಕ್ಕೆ ಬಿಡದಿರುತ್ತಿದ್ದರೆ ನಾನೆಲ್ಲಿ ಹೋಗಬೇಕಿತ್ತೋ ಏನೋ ? ಹಾಗಾಗಿ ಸಾಯುವ ತನಕ ಅವರ ಹೆಸರು ಮರೆಯಲಾರೆ. ಹಾಗೆ ನೀವೇನು ಪರ ದೇಶದಲ್ಲೇ ಇದ್ದುಬಿಡುವಿರೇ ?'

'ಹೌದು; ಮತ್ತೆ ಇಲ್ಲಿದ್ದು ಮಾಡುವುದಾದರೂ ಏನು ? ಇಲ್ಲಿ ಕೆಲಸ ಮಾಡಬೇಕು, ಸಾಯಬೇಕು, ಅಷ್ಟೆ. ಪೇಟೆಯಲ್ಲಾದರೆ ಸ್ವಲ್ಪ ಬುದ್ಧಿ ಇದ್ದು, ಕೆಲಸಗಳ್ಳನಾಗದಿದ್ದರೆ ಸಾಕು – ಹೊಟ್ಟೆಗಿಲ್ಲದೆ ಎಂದೂ ಸಾಯಬೇಕಾಗಿ ಬರಲಾರದು. ಇಲ್ಲಿ ಬುದ್ಧಿ ಇದ್ದರೂ ಪ್ರಯೋಜನವಿಲ್ಲ. ಅದಿರಲಿ ; ಅಪ್ಪನೇಕೆ ಬಹಳ ಬಾಡಿ ಹೋಗಿದ್ದಾರೆ ?'

'ಪಾಪ ! ಅವರ ಕಷ್ಟವನ್ನೇನು ಹೇಳುವುದು ? ನಿಮ್ಮ ಉಪದ್ರವದಿಂದಾಗಿ ಅವರೆಷ್ಟು ಪಾಡು ಪಡಬೇಕಾಯಿತು !'

'ಹಾಗಾದರೆ ನಿನಗೆ ಚನ್ನಾಗಿ ಬೈಯುತ್ತಿದ್ದಿರಬೇಕು.'

'ಎಂದೂ ಇಲ್ಲ. ಮರೆತು ಕೂಡಾ ಬೈಯುತ್ತಿರಲಿಲ್ಲ. ನಿಮ್ಮಮ್ಮ ಮೊದಲಿಗೊಮ್ಮೆ ಕೋಪಗೊಂಡರು. ಮತ್ತೆ ನಿಮ್ಮಪ್ಪ ಏನೂ ಮಾತಾಡದ ಮೇಲೆ ಸುಮ್ಮನಾದರು. ಈಗ ನನ್ನನ್ನು ಕರೆಯುವಾಗ ಸಹ ಬಹಳ ಪ್ರೀತಿಯಿಂದ ಕರೆಯುತ್ತಾರೆ ಸ್ವಲ್ಪ ನನಗೆ ತಲೆ ನೋವಾದರೆ ಅವರೆಲ್ಲ ಬೇಸರ

ಪಡುತ್ತಾರೆ. ನನ್ನ ತಂದೆಯ ವರ್ತನೆ ಯೋಚಿಸುವಾಗ – 'ಇವರೆಲ್ಲ ಪ್ರತ್ಯಕ್ಷ ದೇವರೇ – ಎಂದು ಎನಿಸುತ್ತದೆ ನನಗೆ. ಅದೂ ಅಲ್ಲದೆ, ನನಗೆ ಬೈಯು ವುದು ಬೇಡವೆಂದು ಅಮ್ಮನಿಗೆ ಹೇಳಿ ತಿಳಿಸುತ್ತಾರೆ. ಇವಳನ್ನಿಲ್ಲಿ ಬಿಟ್ಟು ಅವನೆಲ್ಲಿ ಹೋದನೋ ಏನೋ ?–ಎಂದು ಆಗಾಗ್ಗೆ ಬೇಸರಪಟ್ಟುಕೊಳ್ಳುತ್ತಾರೆ. ಆದರೆ ಈಗ ಹಣದ ತಾಪತ್ರಯ ಮಾತ್ರ ಬಹಳವಾಗಿದೆ. ಕಬ್ಬಿನ ಹಣ ವೆಲ್ಲ ಹೊರಗಿಂದ ಹೊರಗೇ ಹೋಗಿಬಿಟ್ಟಿದೆ. ಈಗ ಕೂಲಿ ಕೆಲಸ ಮಾಡ ಬೇಕಾಗಿದೆ. ಇಂದು ಪಾಪ! ಗದ್ದೆಯಲ್ಲಿ ಸ್ಮೃತಿ ತಪ್ಪಿ ಬಿದ್ದುಬಿಟ್ಟರು ! ಅಳುವುದು, ಕೂಗುವುದು, ಸಹ ಮುಗಿದುಹೋಯಿತು. ಈಗ ಸುಮ್ಮನೆ ಮಲಗಿಕೊಂಡಿದ್ದಾರೆ.'

ಕೈಕಾಲು ಮುಖ ತೊಳೆದುಕೊಂಡು ಗೋಬರ ಫಲಾಹಾರ ಮಾಡಿದ. ಬಳಿಕ ತಲೆಗೂದಲು ಸರಿಯಾಗಿ ಬಾಚಿಕೊಂಡು ಊರಿನ ದಿಗ್ವಿಜಯಕ್ಕಾಗಿ ಹೊರಟ. ಇಬ್ಬರು ಚಿಕ್ಕಪ್ಪಂದಿರ ಮನೆಗೂ ಹೋಗಿ ಅವರನ್ನು ವಂದಿಸಿ ಬಂದ. ಉಳಿದ ಮಿತ್ರರನ್ನು ಕಂಡ. ಊರಲ್ಲಿ ಹೆಚ್ಚಿನ ಬದಲಾವಣೆ ಏನೂ ಆಗಿದ್ದಿಲ್ಲ. ಹೌದು; ಪಟೇಶ್ವರೀಲಾಲರು ಹೊಸ ಬೈಠಕ್‌ಖಾನೆ ಕಟ್ಟಿಸಿ ದ್ದರು. ಜಿಂಗುರೀ ಸಿಂಹರು ಮನೆ ಬಾಗಿಲಲ್ಲಿ ಹೊಸ ಬಾವಿ ತೋಡಿಸಿದ್ದರು. ಗೋಬರನ ಮನಸ್ಸಿನಲ್ಲಿ ದ್ವೇಷ ಉಕ್ಕುತ್ತ ಬರುತ್ತಿತ್ತು. ಕಂಡವರೆಲ್ಲ ಇವ ನಿಗೆ ಬಹಳ ಆದರ ತೋರಿಸತೊಡಗಿದರು. ಊರಿನ ಯುವಕರೆಲ್ಲ ಇವನನ್ನು ತಮ್ಮ ' ಹೀರೋ 'ವನ್ನಾಗಿ ಮಾಡಿಕೊಂಡರು. ಮಾತ್ರವಲ್ಲದೆ ಇವನೊಡನೆ ಲಖ್ನೌವಿಗೆ ಹೊರಡಲೂ ಅಣಿಯಾದರು. ಒಂದೇ ವರ್ಷದಲ್ಲಿ ಏನೆಲ್ಲ ಆಗಿ ಹೋಯಿತು !

ತಮ್ಮ ಬಾವಿ ಕಟ್ಟೆಯ ಮೇಲೆ ಸ್ನಾನ ಮಾಡುತ್ತಿದ್ದ ಜಿಂಗುರೀ ಸಿಂಹರು ಇವನನ್ನು ನೋಡಿದರು. ಗೋಬರನೂ ಇವರನ್ನು ಕಂಡ. ಆದರೆ ನಮಸ್ಕಾರ ಮಾಡಲೂ ಇಲ್ಲ, ಮಾತಾಡಲೂ ಇಲ್ಲ. ಗುರುತೇ ಇಲ್ಲದವನಂತೆ ಅಲಕ್ಷ್ಯ ದಿಂದ ಮುಂದೆ ಹೋದ.

ಆಗ ಜಿಂಗುರೀ ಸಿಂಹರೇ ಸ್ವತಃ ಕೇಳಿದರು – ' ಯಾವಾಗ ಬಂದೆ ಗೋಬರಾ ! ಬಹಳ ದರ್ಬಾರಿನಲ್ಲಿದ್ದೀಯಲ್ಲ ? ಲಖ್ನೌವಿನಲ್ಲಿ ಏನು, ನೌಕರಿ ಮಾಡುತ್ತಿದ್ದೀಯೋ ? '

ಗೋಬರ ಅನಾದರಪೂರ್ವಕವಾಗಿಯೇ ಹೇಳಿದ – ' ಲಖ್ನೌವಿಗೆ ಹೋಗಿ

ನಾನಲ್ಲಿ ಸೇವಕತನ ಮಾಡುತ್ತಿಲ್ಲ; ವ್ಯಾಪಾರ ನಡೆಸುತ್ತಿದ್ದೇನೆ.'

ಜಿಂಗುರೀಸಿಂಹರು ಕುತೂಹಲಯುಕ್ತ ದೃಷ್ಟಿಗಳಿಂದ, ತಲೆಯಿಂದ ಕಾಲ ವರೆಗೆ ಅವನನ್ನು ನೋಡಿ ಹೇಳಿದರು–'ದಿನಕ್ಕೆಷ್ಟು ಕಮಾಯಿ ಬರುತ್ತಿದೆ?'

ಗೋಬರ ಮಾತಿನ ಬಾಣವನ್ನು ಹರಿತಗೊಳಿಸಿ ಎಸೆದ – 'ಹೆಚ್ಚು ಕಡಿಮೆ ದಿನಕ್ಕೆ ಎರಡುವರೆ – ಮೂರು ರೂಪಾಯಿಗಳ ಲಾಭ ಬರುತ್ತದೆ. ಕೆಲ ಸಲ ನಾಲ್ಕೈದು ಸಹ ಬರುವುದುಂಟು. ಅದೆಲ್ಲ ಆದ ಹಾಗೆ.'

ಜಿಂಗುರೀ ಸಿಂಹರಿಗೆ ಇಷ್ಟೆಲ್ಲ ವೇಷ ಕಟ್ಟಿಕೊಂಡರೂ ತಿಂಗಳಿಗೆ ೨೫–೩೦ ಗಿಟ್ಟಿಸಿಕೊಳ್ಳಲಿಕ್ಕೇ ಬಹಳ ಕಷ್ಟವಾಗುತ್ತಿತ್ತು. ಆದರೆ ಈ ಹಳ್ಳಿಯ ಪೋರ ನೂರು ರೂಪಾಯಿ ಸಂಪಾದಿಸುತ್ತಾನೆಂದರೆ! ಅವರ ಮುಖ ಕೆಳಗಾಗಿ ಹೋಯಿತು. ಇನ್ನು ಈಗ ಯಾವ ಜರ್ಬಿನಿಂದ ತನ್ನ ದೊಡ್ಡಸ್ತಿಕೆ ತೋರಿಸುವುದು? ಜಾತಿಯಲ್ಲೇನೋ ಅವರು ಮೇಲ್ಮಟ್ಟದವರಾಗಿದ್ದರು ನಿಜ. ಆದರೆ ಈ ಕಾಲದಲ್ಲಿ ಜಾತಿ ಯಾರು ಕೇಳುತ್ತಾರೆ? ಆದ್ದರಿಂದ ಗೋಬರನೊಡನೆ ಸ್ಪರ್ಧೆಗಿಳಿದು ಪ್ರಯೋಜನವಿಲ್ಲ. ಅವನೊಡನೆ ಸ್ನೇಹ ಬೆಳೆಸಿಯೇ ಏನಾದರೂ ಲಾಭ ಮಾಡಿಕೊಳ್ಳಬೇಕು. ಹೀಗೆ ಯೋಚಿಸಿ ಅವರು ಹೇಳಿದರು – 'ಹಾಂ. ಹಾಗಾದರೆ ಅದು ಬಹಳ ಒಳ್ಳೆಯ ಸಂಪಾದನೆಯೇ ಸರಿ! ಹಳ್ಳಿಯಲ್ಲಿ ತಲೆ ಕೆಳಗೆ ಮಾಡಿದರೂ ದಿನಕ್ಕೆ ಮೂರಾಣೆ ಸಿಗುವುದಿಲ್ಲ. ನನ್ನ ದೊಡ್ಡ ಮಗ ಭವಾನಿಗೆ ಸಹ ಅಲ್ಲೇ ಏನಾದರೂ ಕೆಲಸ ಕೊಡಿಸಬಹುದೇ? ಇಲ್ಲಿ ಆತ ಓದುವುದೂ ಇಲ್ಲ, ಬರೆಯುವುದೂ ಇಲ್ಲ. ಒಂದಲ್ಲ ಒಂದು ತಂಟೆ ಎಬ್ಬಿಸುತ್ತಲೇ ಇರುತ್ತಾನೆ. ಎಲ್ಲಿಯಾದರೂ ಕೆಲಸ ಖಾಲಿಯಾದರೆ ತಿಳಿಸು. ಅಥವಾ ನಿನ್ನೊಡನೆಯೇ ಕರೆದುಕೊಂಡು ಹೋಗು. ಎಷ್ಟಾದರೂ ನಿನ್ನ ಮಿತ್ರನೇ ಅಲ್ಲವೇ? ಸಂಬಳ ಈಗ ಕಡಿಮೆಯಾದರೂ ಚಿಂತೆ ಇಲ್ಲ. ಬೇರೇನಾದರೂ ಹೊರಗಿನ ಕಮಾಯಿಯೂ ಇದ್ದರೆ ಒಳ್ಳೇದು.'

ಗೋಬರ ಅಭಿಮಾನಯುಕ್ತ ನಗುವಿನೊಡನೆ ಹೇಳಿದ – 'ಈ ಹೊರಗಿನ ಕಮಾಯಿಯ ಯೋಚನೆಯೇ ಮನುಷ್ಯನನ್ನು ಹಾಳುಮಾಡಿಬಿಡುವುದು. ನಾನೀಗ ಅವನಿಗೆ ಕೆಲಸ ತೆಗೆಸಿಕೊಟ್ಟು – ಅವನು ಅಪ್ಪನ ಹಾಗೆಯೇ – ಮೋಸ ನಡೆಸತೊಡಗಿದರೆ, ಮತ್ತೆ ನನ್ನ ಕುತ್ತಿಗೆ ಹಿಡಿದಾರು! ಪ್ರಪಂಚದಲ್ಲಿ ಬರೇ ವಿದ್ಯೆಯನ್ನು ಕೇಳುವವರಿಲ್ಲ; ವಿಶ್ವಾಸದಿಂದ ಕೆಲಸ ಮಾಡುವವರು ಬೇಕಾಗಿದ್ದಾರೆ!'

ಈ ಹುಡುಗಾಟ ನಡೆಸಿ ಗೋಬರ ಮುಂದೆ ಹೋದ. ಜಿಂಗುರೀ ಸಿಂಹರು ಮನಸ್ಸಿನಲ್ಲಿಯೇ ಯೋಚಿಸಿಕೊಂಡರು – ಈ ಪೋರ ಎಂತಹ ಗರ್ವದ ಮಾತಾಡುತ್ತಾನೆ! ಧರ್ಮದೇವತೆಯ ಅಪರಾವತಾರವೇ ತಾನೆಂದು ತಿಳಿದುಕೊಂಡಿದ್ದಾನೆ.

ಇದೇ ರೀತಿ ದಾತಾದೀನರನ್ನೂ ಕೆಣಕಿ ನೋಡಿದ. ಊಟಕ್ಕೆ ಹೊರಟಿದ್ದ ಅವರು ಇವನನ್ನು ನೋಡಿ ಬಹಳ ಸಂತೋಷಗೊಂಡು ಹೇಳಿದರು – 'ಸುಖವಾಗಿದ್ದೀಯಲ್ಲ ಗೋಬರ? ದೇವರ ದಯದಿಂದ ನಿನಗೆ ಒಳ್ಳೆಯ ಜಾಗ ಸಿಕ್ಕಿದೆಯೆಂದು ಕೇಳಿದೆ. ನಮ್ಮ ಮಾತಾದೀನನನ್ನೂ ಅಲ್ಲೇ ಏನಾದರೂ ಒಳ್ಳೆಯ ಜಾಗದಲ್ಲಿ ತಾಗಿಸಿ ಬಿಡು ನೋಡುವಾ. ಇಲ್ಲಿ ಅವನು ಭಂಗಿ ಸೇದಿಕೊಂಡು ಸುಮ್ಮನೆ ಬಿದ್ದುಕೊಳ್ಳುತ್ತಾನಲ್ಲದೆ ಬೇರಾವ ಕೆಲಸಕ್ಕೂ ಪ್ರಯೋಜನವಿಲ್ಲ.'

ಗೋಬರನೂ ಸರಿಯಾಗಿ ಬಾರಿಸಿಬಿಟ್ಟ – 'ನಿಮ್ಮ ಮನೆಯಲ್ಲಿ ಯಾವ ವಿಚಾರಕ್ಕೆ ಕಡಿಮೆ ಸ್ವಾಮಿ? ಯಾರ ಮನೆಯ ಬಾಗಿಲಲ್ಲಿ ಹೋಗಿ ನಿಂತರೂ ದೇವರ ಹೆಸರಿನಲ್ಲಿ ನಿಮ್ಮ ಬಗಲೊಳಗೆ ಒಂದಲ್ಲ ಒಂದು ಬಗೆ ಬಿದ್ದೇ ಬೀಳುತ್ತದೆ! ಹುಟ್ಟಿದರೂ ಉಂಟು ನಿಮಗೆ, ಸತ್ತರೂ ಉಂಟು! ಅವರ ಮೇಲೆ ಗದ್ದೆ ಬೇಸಾಯ ಮಾಡಿಸುತ್ತೀರಿ; ಹಣದ ಲೇವಾದೇವಿ ನಡೆಸುತ್ತೀರಿ! ಸಾಲದುದಕ್ಕೆ ಯಾರಾದರೂ ತಪ್ಪುಗಿಪ್ಪು ಮಾಡಿದರೆ ಅವನ ತಲೆಯ ಮೇಲೆ ದಂಡ ಹೊರಿಸಿ ಅವನ ಮನೆ ಸೆಲಸಮ ಮಾಡುತ್ತೀರಿ! ಇಷ್ಟು ಸಂಪಾದಿಸಿಯೂ ನಿಮ್ಮ ಹೊಟ್ಟೆ ತುಂಬುವುದಿಲ್ಲವೇ? ಇದಕ್ಕಿಂತಲೂ ಹೆಚ್ಚಿಗೆ ಸಂಪಾದಿಸಿ ಏನು ಮಾಡಲಿದ್ದೀರಿ? ಏನು? – ಹೋಗುವಾಗ ಹಿಡಿದುಕೊಂಡು ಹೋಗುವ ಯೋಚನೆ ಇದೆಯೇ?'

ಗೋಬರ ಬಹಳ ಬಿಸಿ ಬಿಸಿಯಾಗಿ ಮಾತಾಡುತ್ತಿದ್ದಾನೆಂದು ಪಂಡಿತರಿಗೆ ತಿಳಿಯಿತು. ತನ್ನ ಸ್ಥಿತಿಗತಿಯನ್ನೆಲ್ಲ ಈತ ಮರೆತು ಬಿಟ್ಟಿದ್ದಾನೆ! ಇವನ ಮನೆಯವರೆಲ್ಲ ಅವರ ಗುಲಾಮರಾಗಿದ್ದಾರೆಂಬುದು ಇವನಿಗೆ ಪ್ರಾಯಶಃ ಗೊತ್ತಿಲ್ಲ. ತುಂಬದ ಕೊಡ ಬಹಳವಾಗಿ ತುಳುಕಾಡುತ್ತದೆ! ಆದರೂ ಅವರು ಮುಖದ ಬಣ್ಣ ಬದಲಾಯಿಸದೆ ಹೇಳಿದರು – 'ಲಖ್ನೌವಿನ ಗಾಳಿ ತಾಗಿ ಬಹಳ ಬುದ್ಧಿವಂತನಾಗಿರುವೆಯಲ್ಲಾ! ಏನೆಲ್ಲ ಸಂಪಾದಿಸಿ ತಂದಿರುವೆ? – ನೋಡುವಾ. ನಿಜಸ್ಥಿತಿ ಹೇಳುತ್ತಿದ್ದೇನೆ – ನಾನು ಆಗಾಗ್ಗೆ ನಿನ್ನ ವಿಚಾರ ಇಲ್ಲಿ ಮಾತಾಡುತ್ತಲೇ ಇದ್ದೆ. ಇನ್ನು ಕೆಲ ದಿನಗಳ ಮಟ್ಟಿಗೆ ಇರುವೆಯಲ್ಲ?'

'ಹೌದು, ಸ್ವಲ್ಪ ದಿನ ಇದ್ದೇನೆ. ದಂಡದ ನೆಪದಿಂದ ನಮ್ಮಲ್ಲಿಂದ ೧೫೦ ರೂಪಾಯಿ ಒಳಗೆ ಹಾಕಿದ್ದಾರಲ್ಲ! ಇವರ ಮೇಲೆ ದಾವೆ ಮಾಡಬೇಕಾಗಿದೆ. ಮಾತ್ರವಲ್ಲದೆ – ಯಾರ್ಯಾರು ನಮ್ಮ ಕೈಯ ನೀರು ಮುಟ್ಟುವುದಿಲ್ಲ, ಮತ್ತೆ ಯಾರ್ಯಾರು ನಮ್ಮನ್ನು ಜಾತಿಯಿಂದ ಹೊರಗೆ ಹಾಕಿದ್ದಾರೆ, ಎಂದೆಲ್ಲ ನೋಡಿಯೇ ಬಿಡಬೇಕಾಗಿದೆ.'

ಈ ಬೆದರಿಕೆ ಹಾಕಿ ಅಲ್ಲಿಂದ ಮುಂದೆ ಹೋದ. ಅವನ ಉದ್ದಂಡ ಸ್ವಭಾವಕ್ಕೆ ಮೆಚ್ಚಿ ಊರಿನ ಯುವಕರೆಲ್ಲ ಅಷ್ಟರಲ್ಲೇ ಅವನ ಬಗಲಿಗೆ ಬಿದ್ದಿದ್ದರು.

ಒಬ್ಬ ಹೇಳಿದ –'ದಾವೆ ಲಗಾಯಿಸಿಯೇ ಬಿಡು ಗೋಬಣ್ಣ. ಈ ಮುದುಕ ತಾಜಾ ಕಾಳಸರ್ಪ! ಅವನು ಕಚ್ಚಿದರೆ ಔಷಧಿಯೇ ಇಲ್ಲ. ನೀನು ಗದರಿಸಿದ್ದು ಬಹಳ ಒಳ್ಳೆಯದೇ ಆಯಿತು. ಆ ಶಾನುಭಾಗ ಪಟೇಶ್ವರಿಯ ಕಿವಿಯನ್ನೂ ಸ್ವಲ್ಪ ಕಾಯಿಸಿಬಿಡು. ಎಂತಹ ಶಕುನಿ ಆತ! ತಂದೆ–ಮಗ, ಅಣ್ಣ–ತಮ್ಮ, ಇವರೊಳಗೆಲ್ಲ ಹಿಡಿಸಿಹಾಕುತ್ತಾನೆ! ಮತ್ತೆ ಜಮೀನ್ದಾರರ ಆ ಏಜಂಟರೊಡನೆ ಸೇರಿಕೊಂಡು ಒಕ್ಕಲುಗಳ ಪ್ರಾಣವನ್ನೇ ಹೀರುತ್ತಾನೆ! ಅವನ ಬಿಟ್ಟಿಕೆಲಸ, ಗದ್ದೆಯ ಕೆಲಸ – ಎಲ್ಲವೂ ಆದ ಮೇಲೆಯೇ ನಮ್ಮ ನಮ್ಮ ಕೆಲಸ!'

ಗೋಬರ ಮೀಸೆಯ ಮೇಲೆ ಕೈ ಹಾಕಿ ಹೇಳಿದ –'ನನಗೆಲ್ಲ ಗೊತ್ತಿಲ್ಲವೇ? ಆದರೇನು ಮಾಡುವುದು? ನನಗಿಲ್ಲಿ ಇರಲಿಕ್ಕೆ ಸಮಯವಿಲ್ಲ. ಇಲ್ಲವಾದರೆ ಎಲ್ಲರನ್ನೂ ಚನ್ನಾಗಿ ಕುಣಿಸಿಬಿಡುತ್ತಿದ್ದೆ. ಆಗಲಿ; ಈ ಸಲ ಹೋಳಿ ಹಬ್ಬದಲ್ಲಿ ಇವರೆಲ್ಲರ ವೇಷ ಹಾಕಿ ಚಂದವಾಗಿ ಇವರ ಮುಖಕ್ಕೆ ಮಂಗಳಾರತಿ ಮಾಡಿ ಬಿಡುವಾ.'

ಊಟ ಮುಗಿಸಿ ಗೋಬರ ಭೋಲನನ್ನು ಕಾಣಲಿಕ್ಕೆ ಹೊರಟ. ಹೋದ ಎತ್ತಿನ ಜೋಡನ್ನು ಹಿಂದಕ್ಕೆ ತಂದು ಹಟ್ಟಿಯಲ್ಲಿ ಕಟ್ಟುವ ತನಕ ಅವನಿಗೆ ಸಮಾಧಾನವಿದ್ದಿಲ್ಲ. ಅವನು ಹೋರಾಡಿ ಸಾಯಲಿಕ್ಕೂ ಅಣಿಯಾಗಿದ್ದ.

ಆಗ ಹೋರಿರಾಮು ಹೆದರಿದ ಸ್ವರದಿಂದ ಹೇಳಿದ –'ಸುಮ್ಮನೆ ಜಗಳಕ್ಕೆ ತೊಡಗಬೇಡ ಮಗೂ. ಅವನ ರೂಪಾಯಿಗಾಗಿ ಅವನು ಎತ್ತು ಕೊಂಡು ಹೋದ! ಅವನಿಗೆ ದೇವರು ಒಳ್ಳೆಯದು ಮಾಡಲಿ!'

ಗೋಬರನು ಉತ್ತೇಜಿತ ಸ್ವರದಿಂದ ಹೇಳಿದ – 'ಅಪ್ಪಾ! ನೀನು ಮಧ್ಯೆ ಮಾತಾಡಬೇಡ. ಅವನ ದನ ಹೆಚ್ಚೆಂದರೆ ಐವತ್ತು ರೂಪಾಯಿಯ

ದಾಗಿತ್ತು. ನಮ್ಮ ಎತ್ತುಗಳಿಗೆ ೧೫೦ ರೂಪಾಯಿ ಕೊಟ್ಟಿದ್ದೆವು. ಮೂರು ವರ್ಷ ಉತ್ತ ಬಳಿಕವೂ ನೂರು ರೂಪಾಯಿ, ಯಾರೂ ಕಣ್ಣು ಮುಚ್ಚಿ ಕೊಡುತ್ತಿದ್ದರು! ಅವನಿಗೆ ರೂಪಾಯಿ ಬರಲಿಕ್ಕಿದ್ದರೆ ದಾವೆ ಮಾಡಿ ಡಿಕ್ರಿ ಮಾಡಿಸಬೇಕಿತ್ತು. ನಮ್ಮ ಹಟ್ಟಿಯಿಂದ ಎತ್ತುಗಳನ್ನು ಬಿಡಿಸಿಕೊಂಡು ಹೋಗಲಿಕ್ಕೆ ಅವನಿಗೆಲ್ಲಿಯ ಅಧಿಕಾರ? ಅಂತು ನಿಮ್ಮ ವಿಚಾರ ಏನು ಹೇಳಲಿ! ಇತ್ತ, ಎತ್ತುಗಳನ್ನು ಕಳೆದುಕೊಂಡಿರಿ; ಅತ್ತ, ೧೫೦ ರೂಪಾಯಿ ದಂಡ ತೆತ್ತಿರಿ! ಇದೆಲ್ಲ ನಿಮ್ಮ ಸಾಧುತನದ ಫಲ! ನನ್ನ ಇದಿರು ಎತ್ತು ಬಿಡಿಸ ಬರುತ್ತಿದ್ದರೆ – ಆಗ ನೋಡುತ್ತಿದ್ದೆ – ಆ ಮೂವರನ್ನೂ ಇಲ್ಲೇ ನೆಲಕ್ಕುರುಳಿಸುತ್ತಿದ್ದೆ! ಇನ್ನು ಆ ಪಂಚಾತಿಕೆ ನಡೆಸಿ, ಜಾತಿಯಿಂದ ನಮ್ಮನ್ನು ಹೊರ ಹಾಕಿದವರ ಮುಖಕ್ಕೇ ಉಗುಳುತ್ತಿದ್ದೆ. ನೀವಂತು ಸುಖವಾಗಿ ಕೂತುಕೊಂಡು ಸುಮ್ಮನೆ ನೋಡುತ್ತ ಇದ್ದಿರಿ!'

ಹೋರಿರಾಮ ತಪ್ಪಿತಸ್ಥನ ಹಾಗೆ ತಲೆ ತಗ್ಗಿಸಿಕೊಂಡ. ಆದರೆ ದನಿಯಳು ಈ ಅನೀತಿಯನ್ನು ಹೇಗೆ ನೋಡಿಯಾಳು? ಅವಳು ಹೇಳಿದಳು – 'ಮಗನೇ, ನೀನು ಸಹ ತಿಳಿಯದವನ ಹಾಗೆ ಮಾತಾಡುವೆಯಲ್ಲ! ನಮ್ಮನ್ನು ಜಾತಿಯಿಂದ ಹೊರಮಾಡಿದರೆ ಈ ಊರಲ್ಲಿ ಹೇಗೆ ತಾನೆ ದಿನ ಹೋದೀತು! ಪ್ರಾಯ ಬಂದ ಹುಡುಗಿ ಬೇರೆ ಮನೆಯಲ್ಲಿದ್ದಾಳೆ. ಅವಳಿಗೂ ಎಲ್ಲಿಯಾದರೊಂದು ಗತಿಯಾಗುವುದು ಬೇಡವೇ? ಹುಟ್ಟುವಾಗಲೂ ಸಾಯುವಾಗಲೂ– ಜಾತಿ....'

ಗೋಬರ ಅಷ್ಟಕ್ಕೇ ಅಡ್ಡ ಬಂದ – 'ನಮ್ಮ ಜಾತಿ ನೀತಿ ಎಲ್ಲ ಸರಿಯಾಗಿತ್ತು; ಜಾತಿಯಲ್ಲಿ ನಮಗೆ ಮರ್ಯಾದೆಯೂ ಇತ್ತು. ಆದರೆ ನನಗೇಕೆ ಮದುವೆಯಾಗಿದ್ದಿಲ್ಲ ಹೇಳಿ? ಮನೆಯಲ್ಲಿ ಉಣ್ಣಲಿಕ್ಕೇ ಗತಿ ಇಲ್ಲ – ಎಂಬುದರಿಂದಲ್ಲವೇ? ರೂಪಾಯಿ ಇದ್ದರೆ ಜಾತಿಯೂ ಇದೆ – ನೀತಿಯೂ ಇದೆ. ಲೋಕ ಕೇಳುವುದು ಹಣವನ್ನಲ್ಲದೆ ಬೇರಾವುದನ್ನೂ ಅಲ್ಲ.'

ಒಳಗಿಂದ ಮಗು ಅಳುವುದನ್ನು ಕೇಳಿ ಸಮಾಧಾನಪಡಿಸಲಿಕ್ಕಾಗಿ ದನಿಯಾ ಒಳಗೆ ಹೋದಳು. ಗೋಬರ ಹೊರಗೆ ಹೊರಟ. ಹೋರಿರಾಮ ಕೂತುಕೊಂಡು ಯೋಚಿಸತೊಡಗಿದ – ಹುಡುಗನ ಬುದ್ಧಿ ಹೇಗೆ ಅರಳಿ ಹೋಗಿದೆ! ಎಂತಹ ಮಾತುಗಳನ್ನಾಡುತ್ತಿದ್ದಾನೆ! ಅಂತು ಅವನ ವಾಕ್ಚಾತುರ್ಯವು ತಂದೆಯ ಧರ್ಮ ನೀತಿಗಳನ್ನು ಒಮ್ಮೆಗೆ ಹಾರಿಸಿಯೇ ಬಿಟ್ಟಿತ್ತು.

ಹೋರಿರಾಮ ಅವನೊಡನೆ ಕೇಳಿದ – 'ನಿನ್ನೊಡನೆ ಈಗ ನಾನೂ ಹೊರಡಲಿಯೋ ?'

'ನಾನೀಗ ಹೊರಡುವುದು ಲಡಾಯಿ ಮಾಡಲಿಕ್ಕಾಗಿ ಅಲ್ಲ. ನನ್ನ ಪಾಲಿಗೆ ನ್ಯಾಯವಿರುವಾಗ ನಾನೇಕೆ ಕಾದಾಟಕ್ಕೆ ಹೋಗಬೇಕು ?'

'ನಾನು ಬಂದುದರಿಂದ ಅಡ್ಡಿ ಏನು ?'

'ಅಡ್ಡಿ ಇದೆ. ಕೂಡಿ ಬಂದ ಮಾತನ್ನು ನೀವು ಕೆಡಿಸಿಬಿಡಲಿಕ್ಕೂ ಸಾಕು.'

ಹೋರಿರಾಮ ಸುಮ್ಮನಾದ. ಗೋಬರನು ಹೊರಟುಹೋದ.

ಅವನು ಹೋಗಿ ಸ್ವಲ್ಪವೇ ಸಮಯದಲ್ಲಿ ದನಿಯಾ ಮಗುವನ್ನೆತ್ತಿಕೊಂಡು ಹೊರಗೆ ಬಂದು ಕೇಳಿದಳು – 'ಏನು ? ಗೋಬರನೊಬ್ಬನೇ ಹೊರಟು ಹೋದನೇ ? ನಿಮಗಿನ್ನೂ ದೇವರು ಸರಿಯಾದ ಬುದ್ಧಿ ಕೊಟ್ಟಿಲ್ಲವೇ ? ಬೋಲನು ಒಳ್ಳೆಯ ಮಾತಿನಲ್ಲಿ ಎತ್ತುಗಳನ್ನು ಕೊಟ್ಟಾನೇ ? ಆ ಮೂವರೂ ಸೇರಿ ಇವನ ಮೇಲೆ ಬಿದ್ದರೆ – ದೇವರೇ ಗತಿ ! ನಾನೀಗ ಯಾರೊಡನೆ ಹೇಳಲಿ ! ಓಡಿ ಹೋಗಿ ಅವನನ್ನು ಸ್ವಲ್ಪ ತಡೆಯಿರಿ.'

ಹೋರಿರಾಮ ಎದ್ದು ಬಾಗಿಲ ಮೂಲೆಯಿಂದ ತನ್ನ ಊರುಗೋಲು ತೆಗೆದ. ಹೊರಗೆ ಬಂದು ತನ್ನ ದೃಷ್ಟಿಯನ್ನು ದೂರಕ್ಕೆ ಬೀರಿದ. ಅಷ್ಟರಲ್ಲೇ ಗೋಬರ ಬಹು ದೂರ ಹೋಗಿ ಆಗಿತ್ತು. ಈ ಅಲ್ಪ ಸಮಯದಲ್ಲೇ ಎಷ್ಟು ದೂರ ಹುಡುಗ ಹೋಗಿ ಬಿಟ್ಟನಪ್ಪ ! ಅಯ್ಯೋ ! ಅವನು ಹೊರಟಾಗ – ಹೋಗಲೇಬಾರದೆಂದು ಗದರಿಸಿ ತಡೆಯಬೇಕಿತ್ತು ! ಈಗ ಓಡಿ ಹೋಗಿ ತಡೆಯಲಿಕ್ಕೂ ದೇಹದಲ್ಲಿ ಸಾಮರ್ಥ್ಯವಿಲ್ಲವಾಗಿದೆ ! ಹೀಗೆ ಯೋಚಿಸುತ್ತ ಅಲ್ಲೇ ಕೂತುಕೊಂಡು ಮೇಲೆ ನೋಡಿ ಹೇಳಿದ – 'ಮಹಾವೀರ ಸ್ವಾಮಿಯೇ ! ಹುಡುಗನನ್ನು ಕಾಪಾಡಪ್ಪ !'

ಗೋಬರನು ಹೋಗಿ ಗೊಲ್ಲರ ಕೇರಿ ಸೇರಿದ. ಅಲ್ಲಿ ಒಂದು ಮರದಡಿಯಲ್ಲಿ ಹಲವರು ಕುಳಿತು ಜೂಜಾಡುತ್ತಿದ್ದರು. ಇವನನ್ನು ನೋಡಿದೊಡನೆ ಪೋಲಿಸರವನೆಂದು ತಿಳಿದು ಸಿಕ್ಕಿದ್ದನ್ನೆಲ್ಲಾ ಎತ್ತಿಕೊಂಡು ಓಡತೊಡಗಿದರು. ಆದರೆ ಜಂಗಿಗೆ ಮಾತ್ರ ಫಕ್ಕನೆ ಇವನ ಗುರುತು ಸಿಕ್ಕಿ – 'ಎಲಾ ! ಇವನು ನಮ್ಮ ಗೋಬರಧನ !' ಎಂದು ಹೇಳಿದರೂ ಸ್ವಲ್ಪ ಹೆದರಿ ಮರದ ಹಿಂದೆ ಅವಿತುಕೊಂಡ.

ಗೋಬರನು ಅವನನ್ನು ನೋಡಿ ಕರೆದ– ‘ಹೆದರಬೇಡ ಜಂಗಿಯಣ್ಣಾ. ನಾನಲ್ಲವೆ– ಇದು? ನಮಸ್ಕಾರ. ಇದೇ ಬಂದೆ. ನಿಮ್ಮನ್ನೆಲ್ಲ ನೋಡಿಕೊಂಡು ಬರುವಾ, ಇನ್ನಾವಾಗ ಊರಿಗೆ ಬರುವುದೋ ಏನೋ– ಎಂದೆಣಿಸಿ ಬಂದೇಬಿಟ್ಟೆ. ನಾನೇನೋ ನಿಮ್ಮೆಲ್ಲರ ಆಶೀರ್ವಾದದಿಂದ ಬಹಳ ಚನ್ನಾಗಿಯೇ ಇದ್ದೇನೆ. ನಾನೊಬ್ಬ ರಾಜರಲ್ಲಿ ಕೆಲಸಕ್ಕಿದ್ದೇನೆ. ಊರಿಂದ ಹಿಂದಿರುಗಿ ಬರುವಾಗ, ಯಾರನ್ನಾದರೂ ಸಮರ್ಥ ಯುವಕರನ್ನು ಸಿಕ್ಕಿದರೆ ಕರೆದುಕೊಂಡು ಬರಲಿಕ್ಕೂ ಹೇಳಿದ್ದಾರೆ. ಅವರಲ್ಲಿ ಕಾವಲುಗಾರನ ಕೆಲಸಕ್ಕೊಬ್ಬ ಬೇಕಾಗಿದ್ದಾನೆ. ಪ್ರಾಣ ಹೋದರೂ ನಿರ್ಭಯನಾಗಿ ಮುಂದೆ ಬರುವವನನ್ನು ಕರೆತರುತ್ತೇನೆಂದು ನಾನು ಹೇಳಿ ಬಂದಿದ್ದೇನೆ. ನಿನಗೆ ಮನಸ್ಸಿದ್ದರೆ ಬಾ ನನ್ನೊಡನೆ. ಒಳ್ಳೆಯ ಸ್ಥಳ!’

ಜಂಗಿಯು ಗೋಬರನ ವೇಷಬೂಟಾಟಿಕೆಗಳನ್ನೆಲ್ಲ ನೋಡಿ ಆಕರ್ಷಿತನಾದ. ತನಗೆ ಈ ತನಕ ಚರ್ಮದ ಮೆಟ್ಟು ಸಹ ಸಿಕ್ಕಿದ್ದಿಲ್ಲ. ಈ ಗೋಬರನಾದರೆ ಹೊಳಪಿನ ಬೂಟುಗಳನ್ನು ಹಾಕಿಕೊಂಡು ಬಂದಿದ್ದಾನೆ! ಶುಭ್ರವಾದ ಬಣ್ಣ ಬಣ್ಣದ ಬನಿಯನ್! ಚನ್ನಾಗಿ ಬಾಚಿದ ಸುಂದರ ಕ್ರಾಪ್! ಹಿಂದಿನ ಆ ಗೋಬರ; ಮತ್ತು ನಾಜೂಕಾಗಿರುವ ಇಂದಿನ ಈ ಗೋಬರ! ಬಹಳ ವ್ಯತ್ಯಾಸ ತೋರಿಬಂತು ಅವನಿಗೆ. ಹಿಂದೊಮ್ಮೆ ಜುನಿಯಳ ವಿಚಾರದಲ್ಲಿ ದ್ವೇಷಭಾವ ಮೂಡಿ ಬಂದಿದ್ದರೂ ಈಗದು ತಣ್ಣಗಾಗಿತ್ತು.

ಕೆಲಸವಿಲ್ಲದ್ದರಿಂದ ಜಂಗಿಗೆ ಜೂಜಾಡುವ, ಭಂಗಿ ಸೇದುವ ಅಭ್ಯಾಸ ಅಂಟಿಕೊಂಡಿತ್ತು. ಮನೆಯಲ್ಲಿ ಬಹು ಕಷ್ಟದಿಂದ ಕೈಗೆ ಕಾಸು ಬರುತ್ತಿತ್ತು. ಹಾಗಾಗಿ ಗೋಬರನ ಮಾತು ಕೇಳಿ ಜಂಗಿಯ ಬಾಯಲ್ಲಿ ನೀರೂರಿ ಬಂತು– ‘ಅಗತ್ಯ ಬರುತ್ತೇನೆ ಗೋಬರ ಭಾವಾ. ಇಲ್ಲಿ ಸುಮ್ಮನೆ ಕೂತು ನೊಣ ಓಡಿಸುವುದಲ್ಲವೇ? ಅದಿರಲಿ. ತಿಂಗಳಿಗೆಷ್ಟು ಸಿಗಬಹುದು?’–ಕೇಳಿದ ಅವನು.

ಗೋಬರ ದೊಡ್ಡ ಆತ್ಮವಿಶ್ವಾಸ ತೋರಿಸುತ್ತಾ ಹೇಳಿದ– ‘ಆ ವಿಷಯ ನೀನು ಯೋಚಿಸುವುದೇ ಬೇಡ. ಎಷ್ಟು ಬೇಕೋ ಅಷ್ಟು ಸಿಕ್ಕೀತು. ಅದೆಲ್ಲ ನನ್ನ ಕೈಯಲ್ಲೇ ಇದೆ. ಮನೆಯವನೇ ಆ ಒಳ್ಳೆಯ ಕೆಲಸಕ್ಕೆ ಸಿಗಬಹುದಾದರೆ, ಏಕೆ ಇತರರನ್ನು ಕೇಳಬೇಕೆಂದೆಣಿಸಿ ಕೇಳಿದೆ– ಅಷ್ಟೆ.’

‘ಕೆಲಸ ಏನು ಮಾಡಬೇಕಾದೀತು?’– ಬಹಳ ಉತ್ಸುಕತೆಯಿಂದ ಕೇಳಿದ ಜಂಗಿ.

‘ ಕಾವಲುಗಾರನ ಕೆಲಸ ಬೇಕಾದರೆ ಮಾಡು ; ಇಲ್ಲವೇ ವಸೂಲಿಯ ಕೆಲಸ ಬೇಕಾದರೂ ವಹಿಸಿಕೋ. ವಸೂಲಿಯ ಕೆಲಸವೇ ಒಂದು ದೃಷ್ಟಿಯಿಂದ ಒಳ್ಳೇದು. ಹೋಗಿ ಗೇಣಿದಾರರನ್ನೆಲ್ಲ ಗದರಿಸಿ ಬರಬಹುದು. ಮತ್ತೆ ಯಜಮಾನರ ಹತ್ತಿರ ಬಂದು – ನಾನು ಹೋಗುವಾಗ ಅವನು ಇರಲೇ ಇಲ್ಲ – ಎಂಬುದಾಗಿ ಹೇಳಿದರಾಯಿತು. ಹೀಗೆ ಒಂದೆರಡು ರೂಪಾಯಿಗಳ ಚಿಲ್ಲರೆ ಕಾಸು ಸಹ ಆಗಾಗ್ಗೆ ಮಾಡುತ್ತಿರಬಹುದು. ’

‘ ಇರಲಿಕ್ಕೆ ಜಾಗ ಕೂಡ ಸಿಕ್ಕೀತಲ್ಲ? ’

‘ ಜಾಗಕ್ಕೇನು ಕಡಿಮೆ – ದೊಡ್ಡ ಭವನನೇ ಬರಿದಾಗಿರುವಾಗ ? ನಳ್ಳಿಯಿಂದ ನೀರು ಬರುತ್ತದೆ! ಇಲೆಕ್ಟ್ರಿಕ್ ದೀಪ ! ಯಾವುದಕ್ಕೂ ಕಡಿಮೆ ಇಲ್ಲ. ಆದಿರಲಿ; ಕಾಮತನೀಗ ಇದ್ದಾನೋ, ಅಥವಾ ಎಲ್ಲಿಯಾದರೂ ಹೋಗಿದ್ದಾನೋ ? ’

‘ ಹಾಲು ತೆಗೆದುಕೊಂಡು ಹೋಗಿರಬೇಕು. ನನ್ನನ್ನೀಗ ಪೇಟೆಗೆ ಹೋಗಲಿಕ್ಕೇ ಬಿಡುವುದಿಲ್ಲ. ನಾನು ಹೋದರೆ ಗಾಂಜಾ ಕುಡಿದು ಬರುತ್ತೇನಂತೆ ! ನಾನೀಗ ಕುಡಿಯುವುದು ತೀರಾ ಕಡಿಮೆ. ಆದರೂ ದಿನಕ್ಕೆ ಒಂದೆರಡಾಣೆ ಬೇಕು – ಭಾವಾ – ಅಷ್ಟೆ. ಕಾಮತನ ಹತ್ತಿರ ಹೇಳಬೇಡ. ನಾನು ನಿನ್ನೊಟ್ಟಿಗೇ ಬಂದುಬಿಡುತ್ತೇನೆ. ’

‘ ಹೌದೌದು ; ಸುದ್ದಿಯಿಲ್ಲದೆ ಹೊರಟು ಬಿಡುವಾ – ಹೋಳಿ ಹಬ್ಬ ಮುಗಿದ ಒಡನೆಯೇ. ’

‘ ಹಾಗಾದರೆ ನಾನು ಹೊರಡುವ ಸಿದ್ಧತೆಯಲ್ಲಿರುತ್ತೇನೆ. ’

ಇಬ್ಬರೂ ಮಾತುಕತೆ ಆಡುತ್ತಾ ಆಡುತ್ತಾ ಬೋಲನ ಮನೆಯತ್ತ ಬಂದರು. ಬೋಲನು ಕೂತುಕೊಂಡು ಹಗ್ಗ ಒಂದನ್ನು ಸರಿಮಾಡುತ್ತಿದ್ದನು. ಗೋಬರನು ನೇರವಾಗಿ ಹೋಗಿ ಅವನ ಕಾಲು ಹಿಡಿದು ನಮಸ್ಕರಿಸಿದಾಗ ಅವನ ಕುತ್ತಿಗೆ ಕಟ್ಟಿಬಂತು. ಆಗ ಗೋಬರ ಹೇಳಿದ – ‘ ನನ್ನಿಂದ ಬಹು ದೊಡ್ಡ ತಪ್ಪು ನಡೆದು ಹೋಯಿತು ಮಾವ! ಅದನ್ನೆಲ್ಲ ಕ್ಷಮಿಸಿ ಬಿಡೋಣಾಗಲಿ. ’

ಬೋಲನು ಕೈಯಲ್ಲಿದ್ದ ಹಗ್ಗವನ್ನು ಕೆಳಗಿಟ್ಟು ಸ್ವಲ್ಪ ಪರುಷ ಸ್ವರದಿಂದ ಹೇಳಿದ – ‘ ನಿನ್ನ ತಲೆ ಕಡಿದರೂ ಪಾಪ ಬಾರದಂತಹ ಕೆಟ್ಟ ಕೆಲಸವನ್ನೇನೋ ನೀನು ಮಾಡಿದೆ ಗೋಬರಾ. ಆದರೂ ನೀನು ಈಗ ನನ್ನ ಮನೆ ಬಾಗಿಲಿಗೆ

ಬಂದಿರುವೆ. ಇನ್ನೇನು ಹೇಳಲಿ! ಮಾಡಿದ ತಪ್ಪಿಗೆ ದೇವರಿದ್ದಾನೆ. ಏಳು. ಯಾವಾಗ ಬಂದೆ ?'

ಗೋಬರ ತನ್ನ ಭಾಗ್ಯೋದಯದ ವೃತ್ತಾಂತವನ್ನು ಒಳ್ಳೆಯ ಉಪ್ಪು ಕಾರ ಸೇರಿಸಿ ವರ್ಣಿಸಿದ. ಕೊನೆಗೆ ಜಂಗಿಯನ್ನು ಸಹ ತನ್ನೊಡನೆ ಕರೆದು ಕೊಂಡು ಹೋಗುವುದಕ್ಕೆ ಅನುಮತಿ ಕೇಳಿದ. ಚೋಲನಿಗೆ ಅದರಿಂದ ಅನಿರೀಕ್ಷಿತ ವರದಾನ ಸಿಕ್ಕಿದಂತಾಯಿತು. ಜಂಗಿಯು ಮನೆಯಲ್ಲಿದ್ದುಕೊಂಡು ಒಂದಲ್ಲ ಒಂದು ಉಪದ್ರವ ಕೊಡುತ್ತಲೇ ಇದ್ದ. ಪರವೂರಿಗೆ ಹೋದರೆ ನಾಲ್ಕು ಕಾಸೂ ಸಂಪಾದಿಸಿ ತಂದಾನು. ಆತ ಇತರರಿಗೆ ಹಣ ಕೊಡದಿದ್ದರೂ ತೊಂದರೆ ಕೊಡದಿದ್ದರೆ ಸಾಕು, ಎಂಬಂತಾಗಿತ್ತು. ಹೀಗಾಗಿ ಯೋಚಿಸಿ ಕೇಳಿದ –
'ಆಗಲಿ ; ಎಷ್ಟರ ತನಕ ಊರಲ್ಲಿರುವ ಆಲೋಚನೆ ಇದೆ ?'

'ಹೋಳಿ ಹಬ್ಬ ಮುಗಿಸಿ ಹೋಗುವ ಯೋಚನೆ ಇದೆ. ಇಲ್ಲಿ ಬೇಸಾಯದ ಸಾಮಗ್ರಿಗಳನ್ನೆಲ್ಲ ಪುನಃ ಕೂಡಿಸಿ ಕೊಟ್ಟು ನಿಶ್ಚಿಂತೆಯಿಂದ ಹೋಗಬೇಕೆಂದಿದ್ದೇನೆ.'

"ಇನ್ನು ಹೋರಿರಾಮನು ಸುಮ್ಮನೆ ಕೂತು 'ರಾಮಾ–ರಾಮಾ' ಹೇಳುತ್ತಿರಲಿ !"

'ನಾನು ಹೇಳುತ್ತಲೇ ಇದ್ದೇನೆ. ಆದರೆ ಅವರಿಗೆಲ್ಲಿ ಸುಮ್ಮನಿರಲು ಮನಸ್ಸು ಬರುತ್ತದೆ ?'

'ನಿನಗೆ ಅಲ್ಲಿ ಯಾರಾದರೂ ದೊಡ್ಡ ವೈದ್ಯರ ಪರಿಚಯವಿರಬಹುದು. ನನಗೆ ಈ ಕೆಮ್ಮೊಂದು ಬಹಳ ತೊಂದರೆ ಕೊಡುತ್ತಿದೆ. ಅದಕ್ಕೇನಾದರೂ ಒಳ್ಳೆಯ ಮದ್ದು ಇದ್ದರೆ ಕಳಿಸಿಕೊಡುವೆಯಾ ?'

'ಒಬ್ಬ ಹೆಸರಾದ ವೈದ್ಯರು ನನ್ನ ನೆರೆಮನೆಯಲ್ಲೇ ಇದ್ದಾರೆ. ಅವರ ಹತ್ತಿರ ಎಲ್ಲಾ ಸ್ಥಿತಿಗತಿ ಹೇಳಿ ಔಷಧಿ ಮಾಡಿಸಿ ಕಳುಹಿಸಬಹುದು. ಈ ಕೆಮ್ಮು ರಾತ್ರಿ ಜೋರಾಗುವುದೋ, ಅಥವಾ ಹಗಲೋ?'

'ಈಗ ಅಷ್ಟಿಲ್ಲ. ರಾತ್ರಿ ಕಣ್ಣುಮುಚ್ಚಲಿಕ್ಕೇ ಆಗುವುದಿಲ್ಲ. ಒಂದು ಒಳ್ಳೆಯ ಜಾಗ ಸಿಕ್ಕಿದರೆ ನಾನೂ ಅಲ್ಲೇ ಬಂದು ಇದ್ದೇನು. ಇಲ್ಲಿ ದಿನ ದೂಡುವುದೇ ಕಷ್ಟವಾಗಿದೆ.'

'ದಿನ ದೂಡಲಿಕ್ಕೆ ಅಲ್ಲಿದ್ದಷ್ಟು ಅನುಕೂಲ ಇಲ್ಲಿ ಎಲ್ಲಿದೆ? ಇಲ್ಲಿ ರೂಪಾಯಿಗೆ ಹತ್ತು ಸೇರು ಹಾಲು ಕೂಡಾ ಕೇಳುವವರೇ ಇಲ್ಲ. ಹಲ್ವಾ ಮಾಡು

ವವರಿಗೆ ದಮ್ಮಯ್ಯ ಹಾಕಬೇಕಾಗುತ್ತದೆ. ಅಲ್ಲೇನು? ಐದಾರು ಸೇರಿನ ದರದಲ್ಲೂ ಒಂದೇ ಗಂಟೆಯಲ್ಲಿ ಮಣಗಟ್ಲೆ ಹಾಲು ಮಾರಿಬಿಡಬಹುದು.'

ಜಂಗಿಯು ಗೋಬರನಿಗಾಗಿ ಹಾಲು ಕುದಿಸಲಿಕ್ಕೆ ಒಳಹೋಗಿದ್ದ. ಬೇರೆ ಯಾರೂ ಇಲ್ಲದ್ದನ್ನು ನೋಡಿ ಬೋಲನು ಮೆಲ್ಲನೆ ಹೇಳತೊಡಗಿದ– 'ಅಯ್ಯೋ ಮಗನೇ, ಈ ಮನೆಯೊಳಗಿನ ಗಲಾಟೆಯಿಂದಾಗಿ ಜೀವಕ್ಕೆ ಬೇಸರ ಬಂದು ಹೋಗಿದೆ. ಜಂಗಿಯ ಕತೆ ನಿನಗೆ ಗೊತ್ತೇ ಇದೆ. ಕಾಮತನು ಹಾಲು ತೆಗೆದುಕೊಂಡು ಮಾರ ಹೋಗುತ್ತಾನೆ. ಈಗ ದನಗಳ ಕೆಲಸ, ಹಟ್ಟಿಯ ಕೆಲಸ, ಮನೆಕೆಲಸ– ಎಲ್ಲಾ ನಾನೊಬ್ಬನೇ ಮಾಡಬೇಕಾಗಿದೆ. ಎಲ್ಲಿಯಾದರೂ ದೂರ ಹೋಗಿ ಒಂದೆರಡು ರೊಟ್ಟಿ ತಿಂದು ಸುಖವಾಗಿ ಬಿದ್ದುಕೊಳ್ಳುವ ಆಸೆಯಾಗಿದೆ. ಎಷ್ಟರ ತನಕ ಜೀವ ತೆಗೆದುಕೊಳ್ಳಲಿ? ನಿತ್ಯವೂ ಲಡಾಯಿ, ಜಗಳ. ಎಷ್ಟು ಜನರ ಕಾಲು ಹಿಡಿಯಲಿ? ಅದರ ಮೇಲೆ ಈ ಕೆಮ್ಮುಲು ಬೇರೆ. ರಾತ್ರಿ ಏಳಲಿಕ್ಕೇ ಆಗುವುದಿಲ್ಲ. ಆದರೆ ಒಂದು ಲೋಟಿ ಬಿಸಿನೀರು ಸಹ ಕೊಡುವವರಿಲ್ಲ. ದನದ ಹಗ್ಗ ತುಂಡಾಗಿ ಹೋಗಿದೆ. ಯಾರಿಗೂ ಅದರ ಯೋಚನೆ ಇಲ್ಲ. ನಾನೇ ಸರಿಮಾಡಿದರೆ ಉಂಟು ; ಇಲ್ಲವಾದರೆ ಇಲ್ಲ.'

ಗೋಬರನೂ ಆತ್ಮೀಯ ಭಾವವನ್ನು ತೋರಿಸುತ್ತ ಹೇಳಿದ– 'ನೀವೂ ಲಖ್ನೌವಿಗೆ ಬಂದುಬಿಡಿ ಮಾವಯ್ಯಾ. ಐದಾರು ಸೇರು ಹಾಲು ನಗದಾಗಿ ಮಾರಿದರೆ ಸಾಕು. ನನಗಲ್ಲಿ ಎಷ್ಟೋ ದೊಡ್ಡ ದೊಡ್ಡ ಐಶ್ವರ್ಯವಂತರ ಪರಿಚಯವಿದೆ. ಮಣಗಟ್ಲೆ ಹಾಲಿಗೆ ಬೇಕಾದರೂ ಗಿರಾಕಿ ಮಾಡಿಕೊಡುವ ಹೊಣೆ ನನ್ನದು. ನನ್ನದೇ ಚಾಯದ ಅಂಗಡಿಯೂ ಇದೆ. ಹತ್ತು ಸೇರು ಹಾಲು ನಿತ್ಯವೂ ನಾನೇ ತೆಗೆದುಕೊಳ್ಳುತ್ತೇನೆ. ನಿಮಗೆ ಯಾವ ರೀತಿಯಲ್ಲೂ ಕಷ್ಟವಾಗಲಾರದು.'

ಜಂಗಿಯು ಅಷ್ಟರಲ್ಲಿ ಹಾಲು ಸರಿಮಾಡಿಕೊಂಡು ಬಂದ. ಗೋಬರನು ಅದನ್ನು ಕುಡಿದು ಹೇಳಿದ– 'ಬೇರೇನೂ ಬೇಡ. ಬೆಳಗ್ಗೆ ಸಾಯಂಕಾಲ ಒಂದೊಂದು ಗಂಟೆ ಅಂಗಡಿಯಲ್ಲಿ ಕೂತಿದ್ದರೆ ಸಾಕು. ಸುಲಭದಲ್ಲಿ ಒಂದೆರಡು ರೂಪಾಯಿ ಬಂದೇ ಬರುತ್ತದೆ.'

ಬೋಲನು ಒಂದು ಕ್ಷಣ ಕಳೆದು ಸ್ವಲ್ಪ ಸಂಕೋಚದ ಸ್ವರದಿಂದ ಹೇಳಿದ– 'ಕೋಪ ಬಂದಾಗ; ಮಗನೇ– ಮನುಷ್ಯ ಕುರುಡನಾಗಿ ಹೋಗುತ್ತಾನೆ. ನಾನು ನಿಮ್ಮ ಎತ್ತುಗಳ ಜೋಡನ್ನು ಬಿಡಿಸಿಕೊಂಡು ಬಂದಿದ್ದೇನೆ. ಹೋಗು

ವಾಗ ಅವನ್ನು ಹೊಡೆದುಕೊಂಡು ಹೋಗಿಬಿಡು. ನನುಗೇನು ಇಲ್ಲಿ ಬೇಸಾಯ ಇದೆಯೇ?'

'ನಾನೊಂದು ಹೊಸ ಎತ್ತುಗಳ ಜೋಡನ್ನು ನೋಡಿ ಬಂದಿದ್ದೇನೆ ಮಾವಾ.'

'ಬೇಡ, ಬೇಡ. ಹೊಸ ಜೋಡು ಏಕೆ? ಇದನ್ನೇ ಹೊಡೆದುಕೊಂಡು ಹೋಗಿ ಬಿಡು.'

'ಹಾಗಾದರೆ ನಿಮಗೆ ರೂಪಾಯಿ ಹಿಂದಿನಿಂದ ಕಳುಹಿಸಿ ಕೊಡುತ್ತೇನೆ.'

'ರೂಪಾಯಿ – ಹಾಗೇನು ಹೊರ ಹೋಗಿದೆಯೇ? ಏನೋ ಸ್ವಲ್ಪ ಜಾತಿಯಲ್ಲಿ ಹಳೆಯ ವ್ಯತ್ಯಾಸ ಮಾತ್ರ. ಇಲ್ಲವಾದರೆ ನಿಮ್ಮ ನಮ್ಮೊಳಗೆ ಏನು ಭೇದವಿದೆ? ನಿಜ ವಿಚಾರ ಹೇಳುವುದಿದ್ದರೆ – ಜುನಿಯಳಂತು ಒಳ್ಳೆಯ ಮನೆ ಸೇರಿದ್ದರಿಂದ ನಾನೇ ಸಂತೋಷಪಡಬೇಕು. ಈಗ ಅವಳು ಸುಖವಾಗಿಯೇ ಇದ್ದಾಳೆ.'

ಸಾಯಂಕಾಲವಾಗುವಾಗ ಗೋಬರ ಅಲ್ಲಿಂದ ಹೊರಟ. ಎತ್ತುಗಳೂ ಅವನೊಡನೆ ಬಂದುವು. ಅದರ ಮೇಲೆ ಜಂಗಿಯು ಎರಡು ಮಡಿಕೆಗಳಲ್ಲಿ ಮೊಸರು ತುಂಬಿಸಿ ತಲೆಯ ಮೇಲಿಟ್ಟುಕೊಂಡು ಹಿಂದಿನಿಂದ ಬರುತ್ತಿದ್ದ.

೧೭

ಹಳ್ಳಿಗಳಲ್ಲಿ ವರ್ಷದ ಆರು ತಿಂಗಳು ಒಂದಲ್ಲ ಒಂದು ಉತ್ಸವದ ಹೆಸರಲ್ಲಿ ಡೋಲು ವಾಲಗಗಳ ಸಂಭ್ರಮ ನಡೆಯುತ್ತಲೇ ಇರುತ್ತದೆ. ಹೋಳಿ ಹಬ್ಬಕ್ಕೆ ಒಂದು ತಿಂಗಳು ಮೊದಲು, ಒಂದು ತಿಂಗಳು ನಂತರ – ದೊಡ್ಡ ಸಮಾರಂಭ ನಡೆಯುವುದು ವಾಡಿಕೆ. ಸಾಲಗಾರರ ಕಾಟ, ಧನಿಗಳ ತಕರಾರು–ಯಾವುದೂ ಈ ಉತ್ಸವಗಳಿಗೆ ಆತಂಕವಾಗುವುದಿಲ್ಲ. ಜೀವನದ ಹಾಸ್ಯಪ್ರವೃತ್ತಿಯನ್ನು ಸುಲಭದಿಂದ ತಡೆಯಲಾಗುವುದೇ?

ಇಷ್ಟು ವರ್ಷ ನೋಖೇರಾಮರವರ ಮನೆಯ ಮುಂದಿನ ಮಂಟಪದಲ್ಲಿ ಹೋಳಿ ಹಬ್ಬದ ಗಾಯನ ನಾಟಕಗಳು ನಡೆಯುತ್ತಿದ್ದುವು. ಅಲ್ಲಿಯೇ ಹಾಸ್ಯ, ನರ್ತನಗಳೂ ಜರಗುತ್ತಿದ್ದುವು. ಈ ಉತ್ಸವದಲ್ಲಿ ಅವರ ಜೇಬಿನಿಂದ ಎಂಟು

ಹತ್ತು ರೂಪಾಯಿಗಳ ಖರ್ಚು ಸಹ ಆಗುತ್ತಿತ್ತು. ಆ ಊರಲ್ಲಿ ಮನೆಯ ಮುಂದೆ ಉತ್ಸವ ಸಮಾರಂಭ ನಡೆಸುವ ಸಾಮರ್ಥ್ಯ ಅವರಿಗಲ್ಲದೆ ಇನ್ನಾರಿಗಿದೆ?

ಆದರೆ ಈ ಸಲ ಗೋಬರನು ಊರಿನ ನವ ಯುವಕರನ್ನು ತನ್ನ ಮನೆಯ ಮುಂದೆ ಆಕರ್ಷಿಸಿದ್ದ. ಹಾಗಾಗಿ ನೋಖೇರಾಮರ ಚಪ್ಪರ ಬರಿದಾಗಿ ಕಾಣುತ್ತಿತ್ತು. ಗೋಬರನ ಮನೆಯಂಗಳದಲ್ಲಿ ಎತ್ತರವಾದ ಚಪ್ಪರ ಹಾಕಲಾಗಿತ್ತು. ಬಂದವರು ಕೂತುಕೊಳ್ಳಲಿಕ್ಕೆ ಚಾಪೆ, ತಿನ್ನಲಿಕ್ಕೆ ಬೀಡಾ, ಹೊಗೆಸೊಪ್ಪು, ಕುಡಿಯಲಿಕ್ಕೆ ಪನ್ನಿರು ಹಾಕಿದ ಪಾನಕ, ನೋಡಲಿಕ್ಕೆ ತರ ತರದ ವೇಷ, ಗಾಯನ, ನರ್ತನ! ಹಾಗಾಗಿ ಅಂಗಳದಲ್ಲಿ ದೊಡ್ಡ ಜನಸಂದಣಿ ಸೇರಿ ಹೋಗಿತ್ತು. ಸಂಭ್ರಮವೇ ಸಂಭ್ರಮ!

'ಅಂತು ಗೋಬರನಿಗೆ ಹಣ ಸಂಪಾದಿಸಲಿಕ್ಕೂ ಗೊತ್ತಿದೆ; ವೆಚ್ಚ ಮಾಡಲಿಕ್ಕೂ ಗೊತ್ತಿದೆ. ಸುಮ್ಮನೆ ಹೂತಿಟ್ಟರೆ ಯಾರಿಗೇನು ಪ್ರಯೋಜನ? ಸರಿಯಾಗಿ ವ್ಯಯಿಸಿದರೇನೇ ಹಣಕ್ಕೊಂದು ಶೋಭೆ'–ಎಂದು ಮೊದಲಾಗಿ ಸೇರಿದವರು ಹೇಳಿಕೊಳ್ಳುತ್ತಿದ್ದರು. ಬಹಳ ಮಂದಿಗೆ ಆಮಂತ್ರಣ ಹೋಗಿತ್ತು. ಹಾಗಾಗಿ ಎಷ್ಟು ಜನ ಹಾಡುವವರು! ಎಷ್ಟು ಜನ ಕುಣಿಯುವವರು! ಎಷ್ಟು ಜನ ಅಭಿನಯ ಮಾಡುವವರು! ಸೋಬನು ಜೋಟನ ವೇಷ ಹಾಕುವುದರಲ್ಲಿ ಹೆಸರಾದವನು. ಇನ್ನೊಬ್ಬರ ಮಾತನ್ನು ಅನುಕರಿಸುವುದರಲ್ಲಿ ಅವನಿಗೆ ಮೀರಿದವರು ಸಿಗಲಿಕ್ಕೇ ಇಲ್ಲ. ಯಾರ ಮಾತು ಬೇಕಾದರೂ ಅವನು ಇದ್ದ ಹಾಗೇ ಅನುಕರಿಸಬಲ್ಲನು. ಮನುಷ್ಯರದು, ಮೃಗಗಳದು, ಎಲ್ಲವೂ ಅವನಿಗೆ ಗೊತ್ತು. ಗಿರಿಧರ ಸಹ ನಕಲಿ ವೇಷ ಮಾಡುವುದರಲ್ಲಿ ಅಪ್ರತಿಮ ವೀರ. ಅವನು–ವಕೀಲರ, ಶಾನುಭಾಗರ, ಉಗ್ರಾಣಿಯ–ಯಾರ ಅನುಕರಣೆಯನ್ನೂ ಸರಿಯಾಗಿ ಮಾಡಬಲ್ಲ. ಈ ವರೆಗೆ ಅವರೆಲ್ಲ ಸರಿಯಾದ ಸಾಮಗ್ರಿಗಳಿಲ್ಲದೆ ಕಷ್ಟಪಡುತ್ತಿದ್ದರು. ಆದರೆ ಈ ಸಲ ಎಲ್ಲವನ್ನೂ ಗೋಬರ ತರಿಸಿಕೊಟ್ಟಿದ್ದ.

ಹಾಗೂ ಹೀಗೂ ಸಮಾಚಾರ ಎಲ್ಲೆಲ್ಲೂ ಹಬ್ಬಿತು. ಸಾಯಂಕಾಲವಾಗುವಾಗಲೇ ಜನಸಂದಣಿ ನೆರೆದು ಹೋಯಿತು. ಅಕ್ಕ ಪಕ್ಕದ ಗ್ರಾಮಗಳಿಂದ ಪ್ರೇಕ್ಷಕರ ಸಾಲು ಸಾಲೇ ಬಂದು ನೆರೆಯಿತು. ಸರಿ ರಾತ್ರಿಯಾಗುವಾಗ ಮೂರು ನಾಲ್ಕು ಸಾವಿರ ಜನ ಸೇರಿದರು. ಆದರಲ್ಲೂ ಗಿರಿಧರನು ಜಿಂಗುರೀ ಸಿಂಹರ ವೇಷ ಹಾಕಿ ತನ್ನ ಪರಿವಾರದೊಡನೆ ರಂಗ ಮಂಟಪಕ್ಕೆ ಬಂದು ಸೇರಿದಾಗ ನೆರೆದ ಜನರಿಗೆ ನಿಲ್ಲಲಿಕ್ಕೆ ಸಹ ಸ್ಥಳ ಸಿಗುವುದು ಕಷ್ಟವಾಯಿತು. ಅದೇ

ಬೋಳು ತಲೆ, ಅದೇ ಉದ್ದುದ್ದ ಮೀಸೆ, ಆ ಡೊಳ್ಳು ಹೊಟ್ಟೆ – ಕೂತು ಕೊಂಡು ಊಟ ಮಾಡುತ್ತಿದ್ದಾರೆ. ಆಗ ಹಿರಿಯ ಹೆಂಡತಿ ಹತ್ತಿರ ಕೂತು ಗಾಳಿ ಬೀಸುತ್ತಿದ್ದಾಳೆ.

'ಅವಳನ್ನು ತಂದುದು ನಿನ್ನ ಸೇವೆ ಮಾಡಲಿಕ್ಕಾಗಿ. ಅವಳೆಷ್ಟಾದರೂ ನಿನ್ನಷ್ಟು ಯೋಗ್ಯತೆಯುಳ್ಳವಳೇ?'–ಎನ್ನುತ್ತಾ ಜಿಂಗುರೀ ಸಿಂಹರು ಊಟ ಮುಗಿಸುತ್ತಾರೆ.

ಈ ಮಾತುಗಳನ್ನು ಕಿರಿಯ ಹೆಂಡತಿ ಹಿಂದಿನಿಂದ ಕೇಳಿ ಮುಖ ಮುದು ಡಿಸಿಕೊಂಡು ಹೋಗಿಬಿಟ್ಟಳು.

ಎರಡನೇ ದೃಶ್ಯದಲ್ಲಿ ರಾಯರು ಮಂಚದ ಮೇಲೆ ಮಲಗಿದ್ದಾರೆ. ಆಗ ಕಿರಿಯ ಹೆಂಡತಿ ಉರಿ ಮುಸುಡಿಂದ ಕೆಳಗೆ ಕೂತುಕೊಂಡಿದ್ದಾಳೆ. ರಾಯರು ಪುನಃ ಪುನಃ ಅವಳ ಮುಖವನ್ನು ತನ್ನತ್ತ ತಿರುಗಿಸಲಿಕ್ಕೆ ಪ್ರಯತ್ನ ಪಡುತ್ತಿ ದ್ದಾರೆ– 'ಕೋಪ ಏಕೆ ಚಿನ್ನಾ?'

'ನಿಮ್ಮ ಚಿನ್ನ ಎಲ್ಲಿದ್ದಾಳೋ – ಅಲ್ಲೇ ನೀವು ಹೋಗಿ. ನಾನೆಷ್ಟಾದರೂ ಕೆಲಸದವಳು. ಬೇರೆಯವರ ಸೇವೆ ಮಾಡಲಿಕ್ಕೇ ಬಂದವಳು.'

'ಅಲ್ಲಪ್ಪಾ; ನೀನು ನನ್ನ ರಾಣಿ! ನಿನ್ನ ಸೇವೆ ಶುಶ್ರೂಷೆ ಮಾಡಲಿ ಕ್ಕಾಗಿಯೇ ಆ ಮುದುಕಿಯನ್ನಿಟ್ಟುಕೊಂಡುದು.'

ಆಗ ಹಿರಿಯ ಹೆಂಡತಿ ಅದನ್ನು ಕೇಳಿ ಹಿಡಿಸೂಡಿ ತಂದು ಅವರಿಬ್ಬರಿಗೂ ಬಲವಾಗಿ ಬಾರಿಸುತ್ತಾಳೆ. ರಾಯರು ಹೇಗೋ ಹೇಗೋ ತಲೆ ತಪ್ಪಿಸಿ ಕೊಂಡು ಓಡಿ ಬಿಡುತ್ತಾರೆ.

ಆ ಮೇಲೆ ಮತ್ತೊಂದು ದೃಶ್ಯ ಮೊದಲಾಗುತ್ತದೆ. ಅದರಲ್ಲಿ ರೈತನೊಬ್ಬನು ಬಂದು ಜಿಂಗುರೀ ಸಿಂಹರ ಕಾಲಿಗೆ ಬಿದ್ದು ಅಳತೊಡಗುತ್ತಾನೆ. ಅಂತು ಅವರು ಬಹಳ ಕಷ್ಟದಿಂದ ಸಾಲ ಕೊಡುವುದಕ್ಕೆ ಒಪ್ಪುತ್ತಾರೆ. ಹತ್ತು ರೂಪಾಯಿಗೆ ನೋಟು ಚೀಟು ಬರೆಸಿಯಾದ ಮೇಲೆ ಅಸಾಮಿಯ ಕೈಯಲ್ಲಿ ಬರೀ ಐದು ರೂಪಾಯಿ ಇಟ್ಟಾಗ–'ಇದು ಬರೀ ಐದು ರೂಪಾಯಿ ಅಲ್ಲವೇ?' ಎಂದು ಅವನು ಕಂಗಾಲಾಗಿ ಕೇಳುತ್ತಾನೆ.

'ಐದಲ್ಲ; ಅದು ಹತ್ತು. ಮನೆಗೆ ಹೋಗಿ ಲೆಕ್ಕ ಮಾಡು.'

'ಅಲ್ಲ ಸ್ವಾಮೀ; ಇದು ಐದೇ.'

'ನೋಡು – ಒಂದು ರೂಪಾಯಿ ಕಾಣಿಕೆಗಾಗಿ ಆಯಿತು – ಅಲ್ಲವೇ?'

'ಹೌದು ಸ್ವಾಮಿ.'

'ಒಂದು ಫೀಸಿಗಾಗಿ.'

'ಸರಿ ಸ್ವಾಮಿ.'

'ಒಂದು ಕಾಗದಕ್ಕೆ.'

'ಆಯಿತು.'

'ಒಂದು ಚೀಟಿಗೆ.'

'ಹುಂ. ಆ ಮೇಲೆ?'

'ಒಂದು ಬಡ್ಡಿಗೆ.'

'ತಿಳಿಯಿತು, ತಿಳಿಯಿತು.'

'ಐದು ನಗದು. ಒಟ್ಟಿಗೆ ಹತ್ತು ಆಗಲಿಲ್ಲವೇ?'

'ಆಯಿತು. ಅಯ್ಯಾ, ಈ ಐದು ಸಹ ನನ್ನ ಲೆಕ್ಕದಲ್ಲಿ ನಿಮ್ಮೊಡನೆಯೇ ಇದ್ದರಾಗದೆ?'

'ಎಂತಹ ಹುಚ್ಚನೋ ನೀನು?'

'ಅಲ್ಲ ಸ್ವಾಮಿ! ಒಂದು ರೂಪಾಯಿ ಸಣ್ಣ ರಾಣಿಯವರಿಗೆ ಕಾಣಿಕೆ. ಮತ್ತೊಂದು ರೂಪಾಯಿ ದೊಡ್ಡ ರಾಣಿಯವರಿಗೆ. ಒಂದು ರೂಪಾಯಿ ವೀಳ್ಯದೆಲೆಗಾಗಿ ಸಣ್ಣ ಅಮ್ಮಾವ್ರಿಗೆ; ಮತ್ತೊಂದು ರೂಪಾಯಿ ದೊಡ್ಡ ಅಮ್ಮಾವ್ರಿಗೆ. ಮತ್ತೆ ಒಂದು ರೂಪಾಯಿ ಉಳಿಯುತ್ತದೆ. ಅದು ನಿಮ್ಮ ಉತ್ತರಕ್ರಿಯೆಗೆ.'

ಇದೇ ರೀತಿ ಸೋಖೇರಾಮರ, ಪಟೀಶ್ವರೀಲಾಲರ, ಹಾಗೂ ದಾತಾ ದೀನರ – ಸಮಾಚಾರಗಳೂ ಬಂದುವು. ನಿಜಸ್ಥಿತಿ ಇದ್ದ ಹಾಗೆಯೇ ಹಾಸ್ಯ ಪೂರ್ಣ ಅನುಕರಣೆ ಮಾಡಿಯಾಯಿತು. ಈ ಹಾಸ್ಯಗಳೆಲ್ಲ ಗಿರಿಧರನ ಅಭಿನಯ ಚಾತುರ್ಯದಿಂದ ಎಲ್ಲರನ್ನೂ ನಕ್ಕು ಕುಣಿಯುವಂತೆ ಮಾಡಿದ್ದುವು. ಈ ಎಲ್ಲ ವೇಷಗಳೂ ಮುಗಿದಾಗ ಬೆಳಗಿನ ಕೋಳಿ ಕೂಗಿತು.

ಬೆಳಗಾದೊಡನೆ ಯಾರೊಡನೆ ಮಾತಾಡಿದರೂ ಅವರ ಬಾಯಲ್ಲಿ ಹಿಂದಿನ ರಾತ್ರಿಯ ನಕಲಿ, ವಿನೋದ, ಗಾಯನಗಳ ವಿಚಾರವಲ್ಲದೆ ಬೇರೆ ಮಾತೇ ಇದ್ದಿಲ್ಲ. ಎಲ್ಲಿ ನೋಡಿದರೂ ಎರಡು ಮೂರು ಹುಡುಗರು ಸೇರಿ ಹಿಂದಿನ ದಿನದ ವೇಷಗಳನ್ನನುಕರಿಸಿ ಅವರ ವಿನೋದದಾಟಗಳ ಪ್ರಯೋಗವನ್ನೇ ನಡೆಸಿದ್ದರು.

ಜಿಂಗುರೀ ಸಿಂಹರು ವಿನೋದಪ್ರಿಯ ಮನುಷ್ಯರಾದ್ದರಿಂದ ಈ ವಿಚಾರ

ವನ್ನೆಲ್ಲ ಪರಿಹಾಸ ದೃಷ್ಟಿಯಿಂದಲೇ ತೆಗೆದುಕೊಂಡರು. ಆದರೆ ಪಟೇಶ್ವರೀ ಲಾಲರು ಇದರಿಂದೆಲ್ಲ ರೇಗಿ ಹೋಗುವ ಸ್ವಭಾವದವರು. ದಾತಾದೀನರಂತು ಕೋಪಗೊಂಡು ಜಗಳಕ್ಕೂ ಅಣಿಯಾಗಿದ್ದರು. ಇನ್ನು, ನೋಖೇರಾಮರೆಂದರೆ–ಅವರನ್ನು ನೋಡಿದಾಗ ರಾಯ್ ಸಾಹೇಬರು ಸಹ ಒಮ್ಮೆಗೆ ತಲೆ ತಗ್ಗಿಸಬೇಕು. ಅಂಥವರ ವೇಷ ಹಾಕಿ ಹಾಸ್ಯಮಾಡಿದುದು – ಅದು ಸಹ ಅವರ ಗ್ರಾಮದಲ್ಲೇ – ಎಂದರೆ ಅವರಿಗದು ತೀರಾ ಅಸಹ್ಯವಾಗಿತ್ತು. ಅವರಲ್ಲೀಗ ನಿಜವಾದ ಬ್ರಹ್ಮತೇಜವಿರುತ್ತಿದ್ದರೆ ಈ ಜನರನ್ನೆಲ್ಲ ಕೋಪಾಗ್ನಿಯಿಂದ ಭಸ್ಮಗೊಳಿಸಿಬಿಡುತ್ತಿದ್ದರು. ಆದರೆ ಈ ಕಲಿಕಾಲದಲ್ಲಿ ಶಾಪವು ತನ್ನ ಶಕ್ತಿಯನ್ನು ಬೀರುವುದೇ ಇಲ್ಲ! ಆದ್ದರಿಂದ ಈ ಕಲಿಯುಗಕ್ಕೆ ಒಪ್ಪುವಂತಹ ಒಂದು ಅಸ್ತ್ರವನ್ನು ಅವರು ಯೋಚಿಸುತ್ತಲೇ ಇದ್ದರು.

ಮರುದಿನ ಬೆಳಗ್ಗೆ ಹೋರಿರಾಮನ ಮನೆಬಾಗಿಲಿಗೆ ದಾತಾದೀನ್ ಪಂಡಿತರು ಬಂದು ಕಣ್ಣು ಕೆರಳಿಸಿ ಕೇಳಿದರು – 'ಏನು? ಇಂದು ಸಹ ನೀನು ನಮ್ಮಲ್ಲಿ ಕೆಲಸ ಮಾಡ ಬರುವುದಿಲ್ಲವೇ? ಈಗ ನೀನು ಹುಶಾರಾಗಿರುವೆಯಲ್ಲ? ನನಗಲ್ಲಿ ಎಷ್ಟು ತೊಂದರೆಯಾಗುತ್ತದೆಂದು ಯೋಚಿಸಬೇಡವೇ ನೀನು?'

ತಡವಾಗಿ ಮಲಗಿದ್ದ ಗೋಬರ ಆಗ ತಾನೆ ಎದ್ದು ಕಣ್ಣು ತಿಕ್ಕಿಕೊಂಡು ಹೊರ ಬರುತ್ತಿದ್ದ. ಆಗ ದಾತಾದೀನರ ಸ್ವರ ಕೇಳಿಬಂತು. ಗೋಬರ ಅವರನ್ನು ನೋಡಿ ವಂದಿಸುವುದರ ಬದಲು ಗದರಿಸುತ್ತಾ–'ಇನ್ನು ಮುಂದೆ ಅವರು ನಿಮ್ಮ ಕೂಲಿಕೆಲಸ ಮಾಡಬರುವುದಿಲ್ಲ. ನಮಗೆ ಸಹ ನಮ್ಮ ಕಬ್ಬು ನೆಡಬೇಕು' ಎಂದು ಹೇಳಿಯೆ ಬಿಟ್ಟ.

ದಾತಾದೀನರು ಕೆಮ್ಮುತ್ತಾ ಹೇಳಿದರು – 'ಕೆಲಸ – ಈಗ ಹೇಗೆ ಮಾಡದೆ ಬಿಡುವುದು? ವರ್ಷದ ಮಧ್ಯದಲ್ಲಿ ಕೆಲಸ ಬಿಡಲಿಕ್ಕಾಗುವುದೇ? ಜೇಷ್ಠ ಮಾಸ ಬಂದಾಗ ಬಿಡುವುದಾದರೆ ಬಿಡಲಿ, ಮಾಡುವುದಾದರೆ ಮಾಡಲಿ. ಅದರ ಮೊದಲು ಹೇಗೆ ಬಿಡಲು ಸಾಧ್ಯ?'

ಗೋಬರನೂ ಕಣ್ಣುಕೆರಳಿಸಿ ಹೇಳಿದ – 'ಅವರ ತಲೆಯಲ್ಲಿ ಜನ್ಮವಿಡೀ ನಿಮ್ಮ ಗುಲಾಮಗಿರಿಯೇ ಬರೆದಿದೆಯೇ? ಸಾಧ್ಯವಿರುವ ತನಕ ನಿಮ್ಮ ಕೆಲಸ ಮಾಡಿದರು. ಇನ್ನೀಗ ಸಾಧ್ಯವಿಲ್ಲ. ಅದರಲ್ಲೇತರ ಬಲಾತ್ಕಾರ ನಿಮ್ಮದು?'

'ಹಾಗಾದರೆ ಹೋರಿರಾಮನು ಇಂದು ಕೆಲಸಕ್ಕೆ ಬರುವುದಿಲ್ಲವೇ?'

'ಇಲ್ಲ.'

'ಹಾಗಾದರೆ ನಮ್ಮ ರೂಪಾಯಿ ಬಡ್ಡಿ ಸಮೇತ ಬರಲಿ. ಮೂರು ವರ್ಷದ ಬಡ್ಡಿಯೇ ನೂರು ರೂಪಾಯಿ ಆಗುವುದು. ಅಸಲು ಸೇರಿ ಇನ್ನೂರಾಗುತ್ತದೆ. ಆತ ಈ ಕೆಲಸ ಮಾಡುತ್ತಾ ಇದ್ದರೆ ತಿಂಗಳಿಗೆ ಮೂರು ರೂಪಾಯಿಯಂತೆ ಬಡ್ಡಿಯಲ್ಲಾದರೂ ಇಳಿದೀತೆಂದು ನಾನೆಣಿಸಿದ್ದೆ. ನಿನಗದರಲ್ಲಿ ಮನಸ್ಸಿಲ್ಲ ವಾದರೆ ಬೇಡ. ನನ್ನ ರೂಪಾಯಿ ಕೊಟ್ಟುಬಿಡು. ದೊಡ್ಡ ಸೇಟ್‌ಜೀಯ ಮರ್ಜಿ ತೋರಿಸುವುದಿದ್ದರೆ ಸೇಟ್‌ಜೀಯ ಹಾಗೆ ಕೆಲಸವನ್ನೂ ಮಾಡಬೇಕು.'

ಆಗ ಹೋರಿರಾಮನು ದಾತಾದೀನರೊಡನೆ ಹೇಳಿದ–'ಅಲ್ಲ ಸ್ವಾಮಿ; ನಿಮ್ಮ ಚಾಕರಿ ಮಾಡಲಿಕ್ಕಿಲ್ಲವೆಂದು ನಾನೆಂದೂ ಹೇಳುವವನಲ್ಲ. ಆದರೆ ನಮ್ಮ ಕಬ್ಬು ಸಹ ನೆಡುವುದು ಬೇಡವೇ?'

ಗೋಬರನು ತಂದೆಯನ್ನು ಗದರಿಸುತ್ತಾ ಹೇಳಿದ–'ಎಂತಹ ಚಾಕರಿ ಮತ್ತು ಯಾರ ಚಾಕರಿ? ಇಲ್ಲಾರೂ ಚಾಕರಿಯವರಿಲ್ಲ. ಎಲ್ಲರೂ ಸಮಾನರೇ. ಒಳ್ಳೆಯ ಕತೆ ಇವರದು! ಯಾರಿಗಾದರೂ ಒಂದು ನೂರು ರೂಪಾಯಿ ಸಾಲ ಕೊಡುವುದು; ಮತ್ತೆ ಜನ್ಮವಿಡೀ ಅವನಿಂದ ಬಡ್ಡಿಗಾಗಿ ಚಾಕರಿ ಮಾಡಿಸುತ್ತಲೇ ಇರುವುದು. ಅಸಲು ಹಣ ಎಂದಿಗೂ ಇಳಿಯಲಿಕ್ಕೇ ಇಲ್ಲ. ಇದು ಸಾಲವಲ್ಲ; ಜನರ ರಕ್ತ ಹೀರುವ ದಾರಿ!'

'ಹಾಗಾದರೆ ರೂಪಾಯಿ ಕೊಟ್ಟುಬಿಡು ಮಹಾರಾಯಾ. ಲಡಾಯಿ ಏಕೆ? ನಾನು ರೂಪಾಯಿಗೆ ತಿಂಗಳ ಒಂದಾಣೆಯಂತೆ ಬಡ್ಡಿ ತೆಗೆಯುತ್ತಿದ್ದೆ. ಆದರೆ ನೀನು ಊರಿನವನು, ಬೇಕಾದವನು, ಎಂದು ಅರ್ಧಾಣೆ ಬಡ್ಡಿಯಲ್ಲಿ ಕೊಟ್ಟುದು ತಪ್ಪಾಯಿತು.'

'ನಾವು ನೂರಕ್ಕೆ ತಿಂಗಳ ಒಂದು ರೂಪಾಯಿಯಂತೆ ಬಡ್ಡಿಕೊಟ್ಟೇವು. ಒಂದು ಕಾಸೂ ಹೆಚ್ಚಿಗೆ ಕೊಡಲಿಕ್ಕಿಲ್ಲ. ಆದಕ್ಕಿಂತ ಹೆಚ್ಚು ಬೇಕಾದರೆ ಕೋರ್ಟಿಗೆ ಹೋಗಿ ವ್ಯಾಜ್ಯಮಾಡಿ.'

'ರೂಪಾಯಿಯ ಸೆಕೆ ಬಹಳ ಏರಿ ಹೋಗಿದೆಯೆಂದು ತೋರುತ್ತದೆ.'

'ಸೆಕೆ ಏರುವುದು ನಮ್ಮಂತಹರಿಗಲ್ಲ–ಒಂದಕ್ಕೆ ಹತ್ತು ತೆಗೆದುಕೊಳ್ಳುವವರಿಗೆ. ನಾವೆಲ್ಲ ಕೂಲಿಗಾರರು. ನಮ್ಮ ಸೆಕೆ ಬೆವರಿನ ಮೂಲಕ ಹರಿದು ಹೋಗುತ್ತದೆ. ನನಗೆ ಚನ್ನಾಗಿ ನೆನಪಿದೆ– ನೀವು ಎತ್ತುಗಳಿಗಾಗಿ ಮೂವತ್ತು ರೂಪಾಯಿ ಕೊಟ್ಟದ್ದಿರಿ. ಅದು ನೂರಾಯಿತು. ಅದೇ ಈಗ ಇನ್ನೂರಾಗಿದೆ. ಇದೇ ರೀತಿ ನೀವೆಲ್ಲ ಸೇರಿ ಬಡ ರೈತರ ರಕ್ತ ಹೀರಿ, ಸುಲಿಗೆ ಮಾಡಿ ಮಾಡಿ,

ಅವರನ್ನೆಲ್ಲ ದಿಕ್ಕಾಪಾಲು ಮಾಡಿದಿರಿ. ಅವರ ಭೂಮಿಯನ್ನು ಸೆಳೆದುಕೊಂಡು ಜಮೀನ್ದಾರರಾಗಿದ್ದೀರಿ. ಅಲ್ಲವೇ? ಮೂವತ್ತಕ್ಕೆ–ಇನ್ನೂರು! ಒಂದು ಮಿತಿ ಬೇಡವೇ? ತೆಗೆದುಕೊಂಡು ಎಷ್ಟು ಸಮಯವಾಯಿತು ಪಂಡಿತರೇ?'

ಹೋರಿರಾಮನು ನಡುಗುವ ಕಂಠದಿಂದ ಹೇಳಿದ–'ಏನಾದರೂ ೮-೯ ವರ್ಷಗಳಾಗಿ ಹೋಗಿರಬಹುದು.'

ಗೋಬರ ಎದೆಯ ಮೇಲೆ ಕೈ ಇಟ್ಟು ಹೇಳಿದ–'ಒಂಬತ್ತು ವರ್ಷಗಳಲ್ಲಿ ಮೂವತ್ತು ರೂಪಾಯಿಗಳಿಗೆ ಇನ್ನೂರು! ಅಬ್ಬ! ಒಂದು ರೂಪಾಯಿಯ ಬಡ್ಡಿ ದರದಲ್ಲಿ ಎಷ್ಟಾಗಬಹುದು?' ಹೀಗೆ ಹೇಳುತ್ತಾ ಅವನು ನೆಲದ ಮೇಲೆ ಗೆರೆ ಎಳೆದು ಲೆಕ್ಕ ಮಾಡಿ ಹೇಳಿದ–'ಹತ್ತು ವರ್ಷಗಳಲ್ಲಿ ಸಾಧಾರಣ ಮೂವತ್ತಾರು ರೂಪಾಯಿ ಆಗುವುದು. ಅಸಲು ಹಣ ಸೇರಿ ಅರ್ವತ್ತಾರು. ಹೋಗಲಿ; ಎಪ್ಪತ್ತು ರೂಪಾಯಿ ತೆಗೆದುಕೊಳ್ಳಿ. ಅದಕ್ಕಿಂತ ಹೆಚ್ಚಿಗೆ ಒಂದು ಕಾಸೂ ಸಿಗಲಾರದು.'

ದಾತಾದೀನರು ಹೋರಿರಾಮನ ಮುಖ ನೋಡಿ ಹೇಳಿದರು–'ಕೇಳಿದೆಯಾ ಹೋರಿರಾಮಾ ಗೋಬರನ ಲೆಕ್ಕಾಚಾರ? ನಾನು ನನ್ನ ೨೦೦ ರೂಪಾಯಿ ಬಿಟ್ಟುಬಿಟ್ಟು ಅವನ ಎಪ್ಪತ್ತು ರೂಪಾಯಿ ತೆಗೆದುಕೊಳ್ಳಬೇಕಂತೆ! ಇಲ್ಲವಾದರೆ ಕೋರ್ಟಿಗೆ ಹೋಗಬೇಕಂತೆ! ಈ ರೀತಿ ಲೆಕ್ಕಾಚಾರ ನಡೆದರೆ ಪ್ರಪಂಚವೆಷ್ಟು ದಿನ ನಡೆದೀತು? ನೀನು ಇದನ್ನೆಲ್ಲ ಕೇಳಿ ಸಹ ಸುಮ್ಮನಿರುವೆಯಲ್ಲ! ಆದರೆ ಇಷ್ಟು ಮಾತ್ರ ಹೇಳಿಬಿಡುತ್ತೇನೆ–ನನ್ನ ರೂಪಾಯಿ ತಿಂದು ಹಾಕಿ ನಿಮಗೆ ಸುಖ ಸಿಗಲಾರದು. ನಾನು ನಿಮ್ಮ ೭೦ ರೂಪಾಯಿಯನ್ನೂ ಬಿಟ್ಟೆ. ಕೋರ್ಟಿಗೂ ಹೋಗುವುದಿಲ್ಲ. ನನ್ನ ೨೦೦ ರೂಪಾಯಿಗಳನ್ನು ಒಂದು ಕಾಸೂ ಕಡಮೆ ಇಲ್ಲದೆ, ವಸೂಲು ಮಾಡುತ್ತೇನೋ–ಇಲ್ಲವೋ ನೋಡು. ನೀನೇ ನನ್ನ ಮನೆ ಬಾಗಿಲಿಗೆ ಕೈಮುಗಿದುಕೊಂಡು ಬರುವಂತೆ ಮಾಡದಿದ್ದರೆ ಮತ್ತೆ ಹೇಳು.'

ದಾತಾದೀನರು ಬೊಬ್ಬೆಹೊಡೆಯುತ್ತಾ ಹೊರಟುಹೋದರು. ಗೋಬರ ತನ್ನ ಸ್ಥಾನದಲ್ಲೇ ಕೂತುಕೊಂಡಿದ್ದ. ಆದರೆ ಹೋರಿರಾಮನ ಹೊಟ್ಟೆಯೊಳಗೆ ಋಣಪಾತಕದ ಭಯವು ತಳಮಳಗೊಳಿಸತೊಡಗಿತು. ಈ ಬ್ರಾಹ್ಮಣನ ಕೋಪದಿಂದಾಗಿ ತನ್ನ ವಂಶವೇ ಹಾಳಾಗಿ ಹೋದರೆ–ಎಂಬ ಕಳವಳ ಮೂಡಿ ಬಂತು. ಒಡನೆಯೇ ಎದ್ದು ಓಡಿ ಹೋಗಿ ಪಂಡಿತರ ಕಾಲುಗಳ ಮೇಲೆ ಬಿದ್ದು

ಹೇಳಿಕೊಂಡ – 'ಸ್ವಾಮಿ ; ನಾನು ಜೀವದಲ್ಲಿದ್ದರೆ ನಿಮ್ಮ ಒಂದು ಚಿಕ್ಕಾಸು ಸಹ ಬಾಕಿ ಇಡದೆ ಪಾವತಿ ಮಾಡುತ್ತೇನೆ. ಮಕ್ಕಳ ಮಾತು ಕೇಳಿ ಕೋಪಿಸ ಬೇಡಿ. ವ್ಯವಹಾರ ನಿಮ್ಮ ನಮ್ಮೊಳಗೆ ನಡೆದುದು. ಅವನಾರು ಕೇಳುವವನು?'

ದಾತಾದೀನರು ಸ್ವಲ್ಪ ಮೆತ್ತಗಾದರು – 'ನೋಡವನ ಜಬರ್‌ದಸ್ತಿ ! ಇನ್ನೂರು ರೂಪಾಯಿ ಬರಬೇಕಾದಲ್ಲಿ ಎಪ್ಪತ್ತು ರೂಪಾಯಿ ತೆಗೆದುಕೊಳ್ಳ ಬೇಕಂತೆ ! ಇಲ್ಲವೇ ಕೋರ್ಟಿಗೆ ಹೋಗಬೇಕಂತೆ ! ಈ ವರೆಗೆ ಆತ ಕೋರ್ಟಿನ ಗಾಳಿ ಸೇವಿಸಿಲ್ಲ. ನಾಲ್ಕು ದಿನ ಪೇಟೆಯ ಬೀದಿ ತಿರುಗಿದೊಡನೆ ದೊಡ್ಡ ನ್ಯಾಯಾಧೀಶನಾಗಿ ಹೋಗಿದ್ದಾನೆ !'

'ನಾನು ಹೇಳುತ್ತೇನೆ ಸ್ವಾಮಿ – ನಿಮ್ಮ ಒಂದು ಚಿಕ್ಕಾಸೂ ನಾನು ಬಾಕಿ ಇಟ್ಟುಕೊಳ್ಳುವುದಿಲ್ಲ. ಇದು ಖಂಡಿತ.'

'ಹಾಗಾದರೆ ನಾಳೆಯಿಂದ ನಮ್ಮಲ್ಲಿ ಕೆಲಸಕ್ಕೆ ಬರುವೆಯಾ ?'

'ನಮ್ಮ ಕಬ್ಬು ನೆಡಬೇಕಲ್ಲ? ಇಲ್ಲವಾದರೆ ನಿಮ್ಮ ಕೆಲಸವೇ ಮಾಡು ತ್ತಿದ್ದೆ.'

ದಾತಾದೀನರು ಹೊರಟು ಹೋದ ಬಳಿಕ ಗೋಬರನು ತಿರಸ್ಕಾರಯುಕ್ತ ದೃಷ್ಟಿಯಿಂದ ನೋಡುತ್ತ ಹೇಳಿದ – 'ಹೋದರು – ದೇವರ ಹತ್ತಿರ ದೂರು ಕೊಡಲಿಕ್ಕೆ ! ನೀವೇ ಎಲ್ಲ ಸೇರಿ ಅವರ ದರ್ಬಾರನ್ನು ಏರಿಸಿಟ್ಟುದು. ಮೂವತ್ತು ರೂಪಾಯಿ ಕೊಟ್ಟದ್ದಕ್ಕೆ ಇನ್ನೂರು ರೂಪಾಯಿ ಹಿಂದೆ ಕೊಡಬೇಕಂತೆ! ಅದರ ಮೇಲೆ ಬಲಾತ್ಕಾರದಿಂದ ಊಳಿಗ ಮಾಡಿಸಿ ಮಾಡಿಸಿ ಪ್ರಾಣ ಹೀರುವುದು!'

ಹೋರಿರಾಮ ತನ್ನ ವಿಚಾರದಲ್ಲಿ ಸತ್ಯ ಧರ್ಮಗಳನ್ನು ಬೆರಸಿ ಹೇಳ ಲಾರಂಭಿಸಿದ–'ನಮ್ಮ ನೀತಿಯನ್ನು ನಾವು ಬಿಡಬಾರದು ಮಗನೇ. ನಮ್ಮ ನಮ್ಮ ಕರ್ಮದ ಫಲ ನಮಗೆ ಸಿಗುವುದು. ನಾವು ಯಾವ ಬಡ್ಡಿಯಲ್ಲಿ ಹಣ ತೆಗೆದುಕೊಂಡಿದ್ದೆವೋ ಆ ಬಡ್ಡಿ ಕೊಡಲೇ ಬೇಕು. ಅವರ ಹಣ ತಿಂದು ಹಾಕಿದರೆ ಅದು ಜೀರ್ಣವಾದೀತೇ ?'

ಗೋಬರನೂ ಉತ್ತರವಿತ್ತ – 'ನೀತಿ ಬಿಡಬೇಕೆಂದು ಯಾರು ಹೇಳಿದರು ? ಅಥವಾ ಅವರ ಹಣ ಕಬಳಿಸಬೇಕೆಂದೂ ನಾನೆನ್ನುವುದಿಲ್ಲ. ನಾನಿಷ್ಟೇ ಹೇಳು ವುದು – ಆ ಭಾರವಾದ ಬಡ್ಡಿ ಮಾತ್ರ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು. ಅಷ್ಟೆ.'

'ಮಗನೇ – ನಾನು ಜೀವದಲ್ಲಿರುವ ವರೆಗೆ ನನ್ನನ್ನು ನನ್ನ ದಾರಿಯಲ್ಲಿ ಹೋಗ ಬಿಡು. ನಾನು ಸತ್ತ ಬಳಿಕ ನಿನಗಿಷ್ಟ ಬಂದಂತೆ ನೀನು ಮಾಡು.'

'ಹಾಗಾದರೆ ನೀವೇ ಹಣ ಕೊಡಬೇಕು. ನಾನು ನನ್ನ ಕೈಯಿಂದಲೇ ನನ್ನ ಕಾಲು ಕಡಿದುಕೊಳ್ಳಲಾರೆ. ನಿಮ್ಮಿಬ್ಬರ ಮಧ್ಯದಲ್ಲಿ ಮಾತಾಡಿದ್ದೇ ನನ್ನ ತಪ್ಪು. ನೀವೇ ತಿಂದುದು; ನೀವೇ ತುಂಬಿಸಿರಿ. ನಾನೇಕೆ ಪ್ರಾಣ ಕೊಡಬೇಕು ?'

ಹೀಗೆ ಹೇಳುತ್ತಾ ಹೇಳುತ್ತಾ ಗೋಬರ ಒಳಗೆ ಹೋದ. ಆಗ ಜುನಿಯಾ ಕೇಳಿದಳು – 'ಇಂದು ಬೆಳಗಾದೊಡನೆಯೇ ನೀವೇಕೆ ಮಾವನೊಡನೆ ಜಗಳಾಡತೊಡಗಿದಿರಿ?'

ಗೋಬರ ಎಲ್ಲ ವೃತ್ತಾಂತವನ್ನೂ ವಿವರಿಸಿ ಹೇಳಿ ಕೊನೆಗೆ – 'ಇವರ ತಲೆಯ ಮೇಲೆ ಸಾಲದ ಹೊರೆ ಏರುತ್ತಾ ಹೋಗುವುದು ಹೀಗೆಯೇ. ನಾನು ಎಲ್ಲಿಯ ವರೆಗೆ ಹೆಗಲು ಕೊಟ್ಟೇನು? ದುಡಿದು ದುಡಿದು ಬೇರೆಯವರ ಮನೆ ತುಂಬಿಸುತ್ತಿದ್ದಾರೆ! ನಾನೇಕೆ ಅವರು ತೋಡಿರುವ ಕಂದಕದಲ್ಲಿ ಹೋಗಿ ಬೀಳಬೇಕು? ನನ್ನ ಹತ್ತಿರ ಕೇಳಿ ಅವರು ಸಾಲ ಮಾಡಲೂ ಇಲ್ಲ – ಅಥವಾ ನನಗಾಗಿ ಸಾಲ ಮಾಡಲೂ ಇಲ್ಲ. ನಾನದಕ್ಕೆ ಹೊಣೆಯೂ ಅಲ್ಲ.'

ಅತ್ತ ಊರ ಮುಂದಾಳುಗಳೊಳಗೆ ಗೋಬರನಿಗೆ ಬುದ್ಧಿ ಕಲಿಸಲು ಷಡ್ಯಂತ್ರ ತಯಾರಾಗುತ್ತಿತ್ತು. ಈ ಪೋರ ಭಾರೀ ಲಾಗ ಹೊಡೆಯುತ್ತಿದ್ದಾನಲ್ಲ! ಪೇದೆಯಿಂದ ರಟ್ಟೆ ಹಿಡಿಸಿದರೆ ಅಹಂಕಾರವೆಲ್ಲ ಇಳಿದೀತು. ಎಷ್ಟೆಲ್ಲ ಕಾನೂನು ಕಲಿತುಕೊಂಡು ಬಂದಿದ್ದಾನೆಂದು ನೋಡಿಬಿಡಬೇಕು. ರೂಪಾಯಿ ಬಡ್ಡಿಗಿಂತ ಹೆಚ್ಚಿಗೆ ಕೊಡಲಿಕ್ಕೆಯೇ ಇಲ್ಲವಂತೆ! ಹೆಚ್ಚಿಗೆ ಬೇಕಾದರೆ ಕೋರ್ಟಿಗೆ ಹೋಗಬೇಕಂತೆ! ಆ ಹೋಳಿ ಹಬ್ಬದ ರಾತ್ರಿ – ಇದ್ದ ಪೋಲಿಗಳನ್ನೆಲ್ಲ ಒಟ್ಟುಮಾಡಿ ಏನೆಲ್ಲ ಅನರ್ಥ ನಡೆಸಿದ!

ಆದರೂ ಮುಂದಾಳುಗಳೊಳಗೆ ಪರಸ್ಪರ ಮತ್ಸರಕ್ಕೇನೂ ಕಡಮೆ ಇದ್ದಿಲ್ಲ. ಪ್ರತಿಯೊಬ್ಬನೂ ಇನ್ನೊಬ್ಬನ ಪರಿಹಾಸ ನೋಡಿ ಸಂತೋಷ ಪಡುತ್ತಿದ್ದನು. ಪಟೇಶ್ವರೀಲಾಲರು ಮತ್ತು ನೋಖೇರಾಮರೊಳಗೆ ಒಂದು ದಿನ ಮಾತುಕತೆ ತೊಡಗಿತು. ಪಟೇಶ್ವರೀಲಾಲರೆಂದರು – 'ಆ ಪೋರಗಳಿಗೆ ಎಲ್ಲ ಮನೆಗಳ ಸಮಾಚಾರವೂ ಸರಿಯಾಗಿ ಗೊತ್ತಿದೆಯಲ್ಲ! ಜಿಂಗುರೀ ಸಿಂಹರ ಅನುಕರಣೆ ಬಹಳ ಚನ್ನಾಗಿತ್ತಂತೆ! ಇಬ್ಬರು ಹೆಂಡಂದಿರೊಡನೆ ನಡೆದ ಜಗಳ ನೋಡಿ ಜನ ಹಾರಿ ಹಾರಿ ನಗುತ್ತಿದ್ದರಂತೆ!'

ನೋಖೇರಾಮರೆಂದರು – 'ಅದು ನಿಜವೇ. ಅವರ ಕಿರಿಯ ಹೆಂಡತಿ

ಬಾಗಿಲಲ್ಲಿ ನಿಂತು ಯುವಕರೊಡನೆ ಸರಸವಾಡುತ್ತಿದ್ದುದನ್ನು ನಾನೆಷ್ಟೋ ಸಲ ನೋಡಿದ್ದೇನೆ.'

'ಅವರ ಹಿರಿಯ ಹೆಂಡತಿ ಸಹ ಮುಖಕ್ಕೆ ಬಣ್ಣ, ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು, ಯುವತಿಯರಂತೆ ಸಿಂಗಾರ ಮಾಡಿಕೊಳ್ಳುತ್ತಿದ್ದಾಳೆ!'

'ಅವರಿಬ್ಬರೊಳಗೆ ಹಗಲು ರಾತ್ರಿ ಕಾದಾಟ ಆಗುತ್ತಲೇ ಇರುತ್ತದೆ. ಜಿಂಗುರೀ ಸಿಂಹರು ಮಾತ್ರ ಬಹು ಗಟ್ಟಿ ಮನಸ್ಸಿನವರು. ಬೇರೆ ಯಾರಿಗಾದರೂ ಹೀಗಿರುತ್ತಿದ್ದರೆ ಹುಚ್ಚು ಹಿಡಿಯುತ್ತಿತ್ತು.'

ನಿಮ್ಮ ವಿಚಾರದಲ್ಲಿ ಸಹ ಬಹು ಕೆಟ್ಟ ಪರಿಹಾಸ ಮಾಡಿಸಿದರಂತಲ್ಲ! ಸಮಗಾರಳ ಕೈಯಿಂದ ಏಟು ತಿನ್ನಿಸಿದರಂತೆ!'

'ಅದಕ್ಕೀಗ ಗೇಣಿ ಬಾಕಿ ಇದೆಯೆಂದು ದಾವೆ ಮಾಡಿಸಿ ಸರಿಪಡಿಸಿಯೇನು. ಆಗ ತಿಳಿದೀತು ಅವನಿಗೆ, ತಾನು ಯಾರ ಹಂಗಿನಲ್ಲಿದ್ದೇನೆಂದು.'

'ಆದರೆ ಗೇಣಿಯನ್ನವನು ಕೊಟ್ಟಾಗಿದೆಯಲ್ಲ?'

'ಅದಕ್ಕೇನು ನಾನು ರಶೀದಿ ಕೊಟ್ಟಿದ್ದೇನೆಯೇ? ಗೇಣಿ ಚುಕ್ತಾ ಮಾಡಿದ್ದಾನೆಂಬುದಕ್ಕೆ ಏನು ರುಜುವಾತಿದೆ? ಇಲ್ಲಿ ಲೆಕ್ಕದ ಪುಸ್ತಕ ತೆರೆಯಲಿಕ್ಕಾದರೂ ಯಾರಿಗೆ ಗೊತ್ತಿದೆ? ಇಂದೇ ಪೇದೆಯನ್ನು ಕಳಿಸಿ ತರಿಸುತ್ತೇನೆ ಅವನನ್ನು.'

ಇತ್ತ, ಹೋರಿರಾಮ ಮತ್ತು ಗೋಬರ ಕಬ್ಬು ನೆಡುವುದಕ್ಕಾಗಿ ಗದ್ದೆಗೆ ನೀರು ಹರಿಸುತ್ತಿದ್ದರು. ಈ ಸಲ ಕಬ್ಬಿನ ಬೆಳೆಯ ಆಸೆಯೇ ಇದ್ದಿಲ್ಲ. ಗದ್ದೆ ಬಂಜರು ಬಿದ್ದಿತ್ತು. ಆದರೆ ಈಗ ಎತ್ತುಗಳು ಬಂದುದರಿಂದ ಕಬ್ಬು ನೆಡಲು ಹೊರಟಿದ್ದರು.

ಇವರಿಬ್ಬರೂ ಮುಖ ಮುದುಡಿಸಿಕೊಂಡೇ ಕೆಲಸ ನಡೆಸುತ್ತಿದ್ದರು. ಪರಸ್ಪರ ನೋಡುವುದೂ ಇಲ್ಲ, ಮಾತಾಡುವುದೂ ಇಲ್ಲ. ಹೋರಿರಾಮನು ಎತ್ತುಗಳನ್ನು ನಡೆಸುತ್ತಿದ್ದನು. ಗೋಬರ ಗುದ್ದಲಿಯ ಕೆಲಸ ಮಾಡುತ್ತಿದ್ದನು. ಸೋನೆ ಮತ್ತು ರೂಪಾ ಗದ್ದೆಯಲ್ಲಿ ನೀರು ಹರಿಸುತ್ತಿದ್ದರು. ಅಷ್ಟರಲ್ಲಿ ಅಕ್ಕ ತಂಗಿಯರೊಳಗೆ ಜಗಳ ಮೊದಲಿಸಿತು. ಜಗಳದ ವಿಚಾರ ಮತ್ತೇನಿಲ್ಲ– ಜಿಂಗುರೀ ಸಿಂಹರ ಕಿರಿಯ ಹೆಂಡತಿ, ತಾನುಂಡ ಮೇಲೆ ಗಂಡನಿಗೆ ಬಡಿಸುವಳೋ ಅಥವಾ ಗಂಡ ಉಂಡ ಮೇಲೆ ತಾನುಣ್ಣುವಳೋ – ಎಂಬುದಾಗಿತ್ತು. ಸೋನೆ ಹೇಳುತ್ತಿದ್ದಳು – ಮೊದಲು ತಾನುಂಡು ಮತ್ತೆ ಗಂಡನಿಗೆ ಬಡಿಸುವ

ಳೆಂಬುದಾಗಿ. ಆದರೆ ರೂಪಳು ಇದಕ್ಕೆ ಪ್ರತಿಕೂಲಳಾಗಿದ್ದಳು.

ರೂಪಾ ಪ್ರಶ್ನೆ ಹಾಕಿದಳು – 'ಹಾಗೆ ಅವಳೇ ಮೊದಲು ಚನ್ನಾಗಿ ಉಣ್ಣು ತ್ತಾಳಾದರೆ ಅವಳೇಕೆ ದಪ್ಪನಾಗಿ ಬೆಳೆಯುವುದಿಲ್ಲ? ಅವಳ ಗಂಡ ಮಾತ್ರ ಏಕೆ ದಪ್ಪ ಇದ್ದಾರೆ?'

ಆಗ ಸೋನೆ ಪ್ರತಿಮಾತಾಡಿದಳು – 'ಸರಿಯಾಗಿ ಉಣ್ಣುವುದರಿಂದ ಜನರು ದಪ್ಪ ಆಗುತ್ತಾರೆಂದು ನೀನು ತಿಳಿದಿರುವೆ. ಅದು ತಪ್ಪು. ಸರಿಯಾಗಿ ತಿಂದರೆ ಮನುಷ್ಯ ಗಟ್ಟಿ ಆಗುತ್ತಾನೆ, ದಪ್ಪನಾಗುವುದಿಲ್ಲ. ಬೇಡದ ಸಾಮಾನು ತುಂಬಾ ತಿಂದರೆ ಹೊಟ್ಟೆ ಮಾತ್ರ ಬೆಳೆಯುತ್ತದೆ.'

'ಹಾಗಾದರೆ ಜಿಂಗುರೀಸಿಂಹರ ಹೆಂಡತಿ ಗಂಡನಿಗಿಂತ ಹೆಚ್ಚು ಬಲಿಷ್ಠಳೇ?'

'ಮತ್ತೆ? ಮೊನ್ನೆ ಒಂದು ಸಲ ಅವರೊಳಗೆ ಜಗಳವಾದಾಗ ಹೆಂಡತಿ ದೂಡಿದ ಪೆಟ್ಟಿಗೆ ರಾಯರು ಉರುಳಿಯೇ ಹೋಗಿದ್ದರಂತೆ.'

'ಹಾಗಿದ್ದರೆ ನೀನು ಸಹ ಮೊದಲು ಸ್ವತಃ ಉಂಡು ಆ ಬಳಿಕ ಗಂಡನಿಗೆ ಉಣಿಸುವೆಯಾ?'

'ಹೌದು; ಮತ್ತೆ?'

'ಆದರೆ ನಮ್ಮಲ್ಲಿ ಅಮ್ಮ ಮೊದಲು ಅಪ್ಪನಿಗೆ ಉಣಿಸುವುದಲ್ಲವೇ?'

'ಅದ್ದರಿಂದಲೇ ಯಾವಾಗ ನೋಡಿದರೂ ಅಪ್ಪ ಅಮ್ಮನನ್ನು ಗದರಿಸು ತ್ತಲೇ ಇರುತ್ತಾರೆ. ನಾನು ಹಾಗಲ್ಲ; ನಾನೇ ಗಟ್ಟಿಮುಟ್ಟು ಆಗಿ ಗಂಡನನ್ನು ನನ್ನ ಮುಷ್ಟಿಯೊಳಗೆ ಇಟ್ಟುಕೊಳ್ಳುತ್ತೇನೆ. ನಿನ್ನ ಕತೆ ಮಾತ್ರ ಹಾಗಲ್ಲ. ನಿನ್ನ ಗಂಡ ನಿನಗೆ ಹೊಡೆಯುತ್ತಿರುತ್ತಾನೆ; ನಿನ್ನ ಬೆನ್ನ ಮೂಳೆ ಮುರಿಯುತ್ತಾನೆ!'

'ಏಕೆ ಹೊಡೆಯುತ್ತಾನೆ? ನಾನು ತಪ್ಪು ಕೆಲಸ ಮಾಡುವುದೇ ಇಲ್ಲ' – ರೂಪಳು ಅಳುಮೋರೆ ಮಾಡಿ ಹೇಳಿದಳು.

'ಅವನು ಕೇಳುವುದೇ ಇಲ್ಲ. ನೀನೇನಾದರೂ ಅಡ್ಡ ಮಾತಾಡಿದರೆ ಹೊಡೆದೇ ಬಿಡುತ್ತಾನೆ. ಹೊಡೆದು ಹೊಡೆದು ಮೂಳೆ ಮುರಿಯುತ್ತಾನೆ!'

ರೂಪಳಿಗೆ ಕೋಪ ಬಂತು. ಅವಳು ಸೋನೆಗೆ ಕಚ್ಚಲಿಕ್ಕೆ ಹೋದಳು. ಆದರೆ ಸೋನೆ ಬಿಡಲಿಲ್ಲ. ಉಗುರುಗಳಿಂದ ರೂಪಳನ್ನು ಚನ್ನಾಗಿ ಚಿವುಟಿ ಕೆಣಕಿ – 'ನಿನ್ನ ಮೂಗು ಸಹ ಅವನು ಕತ್ತರಿಸಿ ಹಾಕಿಯಾನು!' ಎಂದಳು.

ಇದರಿಂದ ರೂಪಳಿಗೆ ಕೋಪ ತಡೆಯಲಾಗಲಿಲ್ಲ. ಗರ್ವದಿಂದ ಅಕ್ಕನ ಕೈಗೆ ಕಚ್ಚಿಯೇ ಬಿಟ್ಟಳು. ರಕ್ತ ಬಂತು. ಆಗ ಸೋನೆ ತಂಗಿಯನ್ನು ಬಲ

ವಾಗಿ ದೂಡಿಬಿಟ್ಟಳು. ಅವಳು ಬಿದ್ದು ಅಳಲಾರಂಭಿಸಿದಳು. ಸೋನೆಯೂ ಹಲ್ಲಿನ ಗಾಯ ತೋರಿಸುತ್ತ ಕೂಗಾಡತೊಡಗಿದಳು.

ಇವರಿಬ್ಬರ ಕೂಗಾಟ ಕೇಳಿ ಗೋಬರ ಕೋಪದಿಂದ ಕಿಡಿಕಿಡಿಯಾಗಿ ಬಂದ. ಇಬ್ಬರಿಗೂ ಎರಡೆರಡು ಏಟು ಬಲವಾಗಿ ಬಿಗಿದ. ಅತ್ತುಕೊಂಡು ಇಬ್ಬರೂ ಗದ್ದೆಯಿಂದ ಹೊರಟು ಮನೆಯ ಕಡೆ ತೆರಳಿದರು. ನೀರು ಹರಿಸುವ ಕೆಲಸ ನಿಂತುಹೋಯಿತು. ಇದರಿಂದಾಗಿ ತಂದೆ – ಮಗನಿಗೂ ಜಗಳ ಮೊದಲಾಯಿತು.

ಹೋರಿರಾಮ ಕೇಳಿದ – 'ಈಗ ಯಾರು ನೀರು ಹರಿಸುವುದು ? ಸುಮ್ಮನಾದರೂ ಏಟು ಕೊಟ್ಟು ಓಡಿಸಿದೆಯಲ್ಲಾ ಮಕ್ಕಳನ್ನು! ಈಗ ನೀನೇ ಹೋಗಿ, ಸಮಾಧಾನಪಡಿಸಿ ಕರೆದುಕೊಂಡು ಬಾ.'

'ನೀವೇ ಇವರನ್ನೆಲ್ಲ ತಲೆಯ ಮೇಲೆ ಏರಿಸಿಟ್ಟುದು.'

'ನೀನು ಹೀಗೆ ಹೊಡೆದುದು ಸರಿಯೇ ?'

'ಎರಡು ಹೊತ್ತು ಉಪವಾಸ ಹಾಕಿದರೆ ಅವರ ಬುದ್ಧಿ ಸರಿಯಾದೀತು.'

'ನಾನು ಅವರ ಅಪ್ಪ ; ಕಟುಕನಲ್ಲ – ಗೊತ್ತೆ ?'

ಕಾಲ ಬೆರಳಿಗೆ ಒಮ್ಮೆ ಏನಾದರೂ ತಾಗಿ ಗಾಯವಾದರೆ ಪುನಃ ಪುನಃ ಅದೇ ಬೆರಳಿಗೆ ತಾಗುತ್ತಿರುತ್ತದೆ. ತಂದೆ ಮಗನಿಗೂ ಇಂದು ಒಂದೆರಡು ಸಲ ವಿವಾದವಾಗಿತ್ತು. ಇದೀಗ ಮೂರನೇ ಸಲ ಬಲವಾದ ವಾಗ್ಯುದ್ಧವಾಯಿತು.

ಗೋಬರನು ಮನೆಗೆ ಬಂದು ಜುನಿಯಾಳನ್ನು ನೀರು ಹರಿಸಲಿಕ್ಕೆ ಕರೆದುಕೊಂಡು ಹೋದ. ಜುನಿಯಾ ಮಗುವನ್ನೆತ್ತಿಕೊಂಡು ಗದ್ದೆಗೆ ಹೊರಟಳು. ದನಿಯಾ ಮತ್ತು ಅವಳ ಮಗಳಂದಿರಿಬ್ಬರೂ ನೋಡುತ್ತಲೇ ಇದ್ದರು. ತಾಯಿಗೆ ಸಹ ಮಗನ ಈ ಉದ್ಧಟ ಸ್ವಭಾವ ಸರಿದೋರಲಿಲ್ಲ. ರೂಪಳಿಗೆ ಹೊಡೆದಿದ್ದರೂ ಚಿಂತೆ ಇಲ್ಲ. ಆದರೆ ಪ್ರಾಯ ಬಂದ ಹುಡುಗಿ – ಸೋನೆಗೆ ಹೊಡೆದುದು ಅವಳಿಗೆ ಅಸಹ್ಯವಾಗಿತ್ತು.

ಆ ದಿನ ರಾತ್ರಿಯೇ ಗೋಬರ ಲಖ್ನೌಗೆ ಹೊರಡುವ ನಿಶ್ಚಯ ಮಾಡಿದ. ಆ ಮನೆಯಲ್ಲಿ ಅವನ ಮಾತಿಗೆ ಸ್ವಲ್ಪವೂ ಬೆಲೆಯಿಲ್ಲವಾದರೆ ಅವನೇಕೆ ಇರಬೇಕು ? ಕೊಡುವ ಕೊಳ್ಳುವ ವ್ಯವಹಾರದಲ್ಲಿ ಅವನು ಮಾತಾಡಕೂಡದು. ಹುಡುಗಿಯರಿಗೆ ಬುದ್ಧಿಗಾಗಿ ಒಂದೆರಡು ಹೊಡೆದರೆ ಅದು ಯಾರಿಗೂ ಸರಿದೋರುವುದಿಲ್ಲ. ಈಗ ಅವನೊಬ್ಬತೀರಾ ಹೊರಗಿನ ಮನುಷ್ಯನಾಗಿ ಹೋದನೆ?

ಇಂತಹ ವಾತಾವರಣದಲ್ಲೂ ಅವನಿರಬೇಕೇ?

ತಂದೆ ಮಕ್ಕಳು ರಾತ್ರಿಯ ಊಟ ಮುಗಿಸಿ ಹೊರಬಂದಿದ್ದರು ಮಾತ್ರ. ಆಗ ನೋಖೇರಾಮರ ಪೇದೆ ಬಂದು – 'ರಾಮಣ್ಣಾ ಹೊರಡಿ. ಧನಿಗಳ ಏಜಂಟರು ನಿಮ್ಮನ್ನು ಬರಹೇಳಿದ್ದಾರೆ' – ಎಂದ.

ಹೋರಿರಾಮನು ಗರ್ವದಿಂದ – 'ಈ ರಾತ್ರಿ ಹೊತ್ತಿಗೆ ಏಕೆ ಕರೆಯುತ್ತಿದ್ದಾರೆ? ಗೇಣಿ ಬಾಕಿಯನ್ನೆಲ್ಲ ನಾನು ಕೊಟ್ಟಾಗಿದೆ' – ಎಂದ.

ಪೇದೆ ಹೇಳಿದ – 'ಅದೇನೋ ನನಗೆ ಗೊತ್ತಿಲ್ಲ. ನಿಮ್ಮನ್ನು ಕರೆದುಕೊಂಡೇ ಬರಲಿಕ್ಕೆ ಅಪ್ಪಣೆ ಕೊಟ್ಟಿದ್ದಾರೆ. ಅಷ್ಟೆ. ಏನಾದರೂ ಹೇಳುವುದಿದ್ದರೆ ನೀವೇ ಹೋಗಿ ಹೇಳಿಕೊಳ್ಳಿ.'

ಹೋರಿರಾಮನಿಗೆ ಹೊರಡುವ ಮನಸ್ಸಿದ್ದಿಲ್ಲ. ಆದರೂ ಹೊರಡಲೇ ಬೇಕಾಯಿತು. ಗೋಬರ ವಿರಕ್ತನಾಗಿ ಸುಮ್ಮನೆ ಕೂತುಕೊಂಡಿದ್ದ. ಅರ್ಧ ಗಂಟೆ ಕಳೆದು ಹೋರಿರಾಮ ಹಿಂದಿರುಗಿ ಬಂದು ಗುಡುಗುಡಿ ತುಂಬಿಸಿ ಸೇದ ತೊಡಗಿದ. ಆಗ ಗೋಬರನಿಗೆ ಸುಮ್ಮನಿರಲಾಗಲಿಲ್ಲ. ಹಾಗಾಗಿ ಕೇಳಿದ – 'ಯಾಕಂತೆ ಕರೆದುದು?'

ಹೋರಿರಾಮ ತುಂಬಿ ಬಂದ ಸ್ವರದಿಂದ ಹೇಳಿದ – 'ಒಂದು ಚಿಕ್ಕಾಸೂ ಬಾಕಿ ಇಡದೆ ನಾನು ಗೇಣಿ ಸಲಾಯಿಸಿದ್ದೆ. ಈಗವರು ಹೇಳುತ್ತಾರೆ – ನನ್ನ ಮೇಲೆ ಎರಡು ವರ್ಷದ್ದು ಬಾಕಿ ಇದೆಯಂತೆ! ಆ ದಿನ ಕಬ್ಬು ಮಾರಿದಾಗ ಪುನಃ ೨೫ ರೂಪಾಯಿ ಕೊಟ್ಟಿದ್ದೆ. ಅದರ ಮೇಲೂ ಎರಡು ವರ್ಷದ ಬಾಕಿಯಂತೆ! ನಾನು ಹೇಳಿ ಬಂದೆ – ಇನ್ನು ಒಂದು ಚಿಕ್ಕಾಸೂ ಕೊಡಲಾರೆ – ಎಂಬುದಾಗಿ.'

'ನಿಮ್ಮ ಹತ್ತಿರ ರಶೀದಿ ಇಲ್ಲವೇ?' – ಗೋಬರ ಕೇಳಿದ.

'ಇಲ್ಲಿ ರಶೀದಿ ಯಾರಿಗೆ ಕೊಡುತ್ತಾರೆ?'

'ರಶೀದಿ ಕೊಡದೆ ನೀವು ಹಣ ಕೊಡುವುದಾದರೂ ಏಕೆ?'

'ಇವರೆಲ್ಲ ಮೋಸ ಮಾಡುವರೆಂದು ನನಗೇನು ಗೊತ್ತು? ಇದೆಲ್ಲ ನಿನ್ನ ಆ ನಾಟಕದ ಪ್ರತಿಫಲ! ಆ ರಾತ್ರಿ ನೀನು ಅವರ ಪರಿಹಾಸ ನಡೆಸಿದೆಯಲ್ಲಾ? ಅದಕ್ಕೆ ಇದೀಗ ದಂಡ! ನೀರಲ್ಲಿದ್ದುಕೊಂಡು ಮೊಸಳೆಯೊಡನೆ ವೈರಕಟ್ಟಿಕೊಂಡರಾದೀತೇ? ಬಡ್ಡಿಗಿಡ್ಡಿ ಸೇರಿಸಿ ೭೦ ರೂಪಾಯಿ ಬಾಕಿ ಬರೆದಿಟ್ಟಿದ್ದಾರೆ. ಅದಿನ್ನು ಯಾರ ಮನೆಯಿಂದ ಬರುವುದು?'

ಗೋಬರ ತನ್ನ ಸ್ಪಷ್ಟ ವಿಚಾರ ತಿಳಿಸಿದ – ' ನೀವು ರಶೀದಿ ತೆಗೆದುಕೊಂಡು ಇಡುತ್ತಿದ್ದರೆ – ನಾನು ಅವರ ಪರಿಹಾಸ, ಒಂದು ಸಲ ಅಲ್ಲ – ಸಾವಿರ ಸಲವೂ ಮಾಡಿಯೇನು. ನಿಮ್ಮ ಒಂದು ತಲೆಗೂದಲನ್ನೂ ಮುಟ್ಟುವ ಧೈರ್ಯ ಅವರಿಗೆ ಬಾರದು. ಈ ಕೊಡುಕೊಳ್ಳುವ ವ್ಯವಹಾರದಲ್ಲಿ ನೀವೇಕೆ ಸ್ವಲ್ಪ ಜಾಗ್ರತೆ ವಹಿಸುವುದಿಲ್ಲವೆಂಬುದೇ ನನಗೆ ಗೊತ್ತಾಗುವುದಿಲ್ಲ. ಅವರು ಹೀಗೆ ರಶೀದಿ ಕೊಡದಿದ್ದರೆ ಟಪ್ಪಾಲಲ್ಲಿ ಮನಿಯಾರ್ಡರ್ ಮಾಡಿ ಕಳುಹಿಸಬಹುದಿತ್ತು. ಹೆಚ್ಚೆಂದರೆ ಒಂದೆರಡು ರೂಪಾಯಿಗಳ ಫೀಸು ಹೋಗುತ್ತಿತ್ತು. ಆದರೆ ಈ ತರದ ಗಂಡಾಂತರ ಮಾತ್ರ ಬರುತ್ತಿದ್ದಿಲ್ಲ. '

' ನೀನು ಈ ಹೊಸ ಬೆಂಕಿ ಹಿಡಿಸದಿದ್ದರೆ ಒಂದೂ ಆಗುತ್ತಿದ್ದಿಲ್ಲ. ಈಗ ಎಲ್ಲ ಮುಂದಾಳುಗಳಿಗೂ ನಮ್ಮ ಮೇಲೆ ಕೋಪವಿದೆ. ಅವರೆಲ್ಲಾ ಆಗಾಗ್ಗೆ ಹಂಗಿಸುತ್ತಿದ್ದಾರೆ. ಹೇಗೆ ಈ ಗಂಡಾಂತರದಿಂದ ಮೇಲೆ ಬೀಳುವುದೋ ನನಗೆ ಗೊತ್ತಿಲ್ಲ. '

' ನಾನು ಹೋಗಿ ಅವರೊಡನೆ ಕೇಳಲೋ ? '

' ನೀನು ಹೋದರೆ ಇದ್ದ ಬೆಂಕಿಗೆ ಗಾಳಿ ಹಾಕಿ ಬರುತ್ತಿ. '

' ಹಾಗೆ ಮಾಡಬೇಕಾಗಿ ಬಂದರೆ ಮಾಡಿಯೇ ಬರುತ್ತೇನೆ. ಅವರು ಭೂಮಿಯಿಂದ ಎಬ್ಬಿಸುವುದಿದ್ದರೆ ಎಬ್ಬಿಸಲಿ. ನಾನವರ ಕೈಯಲ್ಲಿ ಗಂಗಾಜಲ ಕೊಟ್ಟು ಕೋರ್ಟಿನಲ್ಲಿ ಪ್ರಮಾಣ ಮಾಡಿಸಿಯೇನು ! ನೀವು ಬಾಯಿ ಮುಚ್ಚಿಕೊಂಡು ಸುಮ್ಮನಿರಿ. ನನಗೆ ಇನ್ನೊಬ್ಬರ ಒಂದು ಚಿಕ್ಕಾಸೂ ಬೇಡ ; ನನ್ನ ಒಂದು ಚಿಕ್ಕಾಸನ್ನು ಇನ್ನೊಬ್ಬರಿಗೆ ಬಿಡಲಿಕ್ಕೂ ಇಲ್ಲ. '

ಒಡನೆಯೇ ಅವನೆದ್ದು ನೋಖೇರಾಮರ ಆಫೀಸಿಗೆ ಹೋದ. ಹೋಗಿ ನೋಡುವಾಗ ಎಲ್ಲ ಮುಖಂಡರೂ ಸೇರಿ 'ಕೆಬಿನೆಟ್ ಮೀಟಿಂಗ್' ನಡೆಸುತ್ತಿದ್ದರು. ಒಳ್ಳೆಯ ಷಡ್ಯಂತ್ರದ ವಾತಾವರಣ ಕವಿದಿತ್ತು. ಗೋಬರನನ್ನು ನೋಡಿದೊಡನೆಯೇ ಎಲ್ಲರಿಗೂ ಎಚ್ಚರವಾಯಿತು.

ಗೋಬರ ಉತ್ತೇಜಿತ ಸ್ವರದಿಂದ ಕೇಳಿದ – ' ಇದೇನು ಮಹಾಸ್ವಾಮಿ? ಈ ವರೆಗಿನ ಎಲ್ಲ ಗೇಣಿಯನ್ನು ಪಾವತಿ ಮಾಡಿಯಾಗಿದೆ. ಅದರ ಮೇಲೂ ನೀವು ಎರಡು ವರ್ಷದ್ದು ಬಾಕಿ ಇದೆ – ಎಂಬುದಾಗಿ ತಂದೆಯವರನ್ನು ಜೋರು ಮಾಡುತ್ತಿದ್ದೀರಂತೆ ! ಇದೆಂತಹ ಲೆಕ್ಕಾಚಾರ ಸ್ವಾಮಿ? '

ನೋಖೇರಾಮರು ಬೆನ್ನ ಹಿಂದಿನ ಲೋಡಿಗೆ ಒರಗಿಕೊಂಡು ಠೀವಿಯಿಂದ

ಹೇಳಿದರು – 'ಹೋರಿರಾಮು ಇರುವಲ್ಲಿ ವರೆಗೆ ನಿನ್ನೊಡನೆ ನಾವು ಗೇಣಿ ವ್ಯವಹಾರದ ಯಾವ ಮಾತನ್ನೂ ಆಡ ಬಯಸುವುದಿಲ್ಲ. ತಿಳಿಯಿತೇ?'

ಗೋಬರ ಸ್ವಲ್ಪ ಸೋತ ಸ್ವರದಿಂದ ಹೇಳಿದ– 'ಹಾಗಾದರೆ ನಮ್ಮ ಮನೆಯ ವಿಚಾರದಲ್ಲಿ ನನಗೇನೂ ಅಧಿಕಾರವಿಲ್ಲವೇ?'

'ಮನೆಯೊಳಗೆ ನಿನಗೆ ಸರ್ವಾಧಿಕಾರವಿರಬಹುದು. ಅದರೆ ಗೇಣಿ ಲೆಕ್ಕಾಚಾರದ ವಿಚಾರದಲ್ಲಿ ಮಾತಾಡಲಿಕ್ಕೆ ಈಗಿನ ಮಟ್ಟಿಗೆ ನೀನ್ಯಾರು?'

'ಹಾಗಾದರೆ ಒಳ್ಳೇದು. ನೀವು ಮನೆಯಿಂದ ನಮ್ಮನ್ನು ಹೊರ ಹಾಕಿಸಲಿಕ್ಕೆ ಬನ್ನಿ. ನಾನು ಕೋರ್ಟಿನಲ್ಲಿ ನಿಮ್ಮ ಕೈಯಲ್ಲಿ ಗಂಗಾಜಲ ಕೊಟ್ಟು ಪ್ರಮಾಣ ಮಾಡಿಸಿ, ಆ ಮೇಲೆಯೇ ಹಣ ಕೊಟ್ಟೇನು. ಇದೇ ಗ್ರಾಮದಿಂದ ನೂರು ಮಂದಿಯನ್ನು ಕೋರ್ಟಿಗೆ ಕರೆದುಕೊಂಡು ಹೋಗಿ – ನೀವೆಂದೂ ರಶೀದಿ ಕೊಟ್ಟುದೇ ಇಲ್ಲ – ಎಂಬುದಾಗಿ ಸಾಕ್ಷಿ ಹೇಳಿಸುತ್ತೇನೆ. ಬಡ ರೈತರು ಏನೂ ಮಾತಾಡುವುದೇ ಇಲ್ಲ – ಎಂದ ಮಾತ್ರಕ್ಕೆ ಅವರೆಲ್ಲ ಮೂಕ ಪ್ರಾಣಿಗಳೆಂದು ತಿಳಿದಿರುವಿರೇ? ನಿಮ್ಮ ರಾಯ್ ಸಾಹೇಬರು ನಾನಿರುವಲ್ಲೇ ಹತ್ತಿರದಲ್ಲಿದ್ದಾರೆ. ಹಳ್ಳಿಯವರೆಲ್ಲ ಅವರನ್ನು ಹುಲಿಯೆಂದು ಹೇಳುತ್ತಾರೆ. ನಾನು ಮಾತ್ರ ಹಾಗೆನ್ನುವವನಲ್ಲ. ನನಗೆ ಅವರ ಪರಿಚಯ ಚನ್ನಾಗಿದೆ. ಒಂದೂ ಬಿಡದೆ ನಿಮ್ಮ ಮೋಸವನ್ನೆಲ್ಲ ಹೇಳಿ ವಿವರಿಸುತ್ತೇನೆ. ನೋಡುವಾ – ನೀವು ಹೇಗೆ ಎರಡೆರಡು ಸಲ ಗೇಣಿ ವಸೂಲಿ ಮಾಡುವಿರೆಂಬುದಾಗಿ!'

ಅವನ ಮಾತಿನಲ್ಲಿ ಸತ್ಯದ ಬಲವಿತ್ತು. ಮೋಸಗಾರರಲ್ಲಿ ಸತ್ಯ ಸಹ ಬಲಹೀನವಾಗುತ್ತದೆ. ಸಿಮೆಂಟು ಕಲ್ಲಿನ ಮೇಲೆ ಬಿದ್ದರೆ ಕಲ್ಲಾಗುತ್ತದೆ. ಅದೇ ಸಿಮೆಂಟು ಮಣ್ಣಿನ ಮೇಲೆ ಬಿದ್ದರೆ ಮಣ್ಣಾಗುತ್ತದೆ. ಗೋಬರನ ಈ ನಿರ್ಭೀತ ಸ್ಪಷ್ಟ ವಚನದಿಂದಾಗಿ ನೋಖೇರಾಮರು ಸ್ವಲ್ಪ ನಡುಗಿಹೋದರು.

ಆ ಬಳಿಕ ಏನೋ ಸ್ವಲ್ಪ ನೆನಪು ಮಾಡುವವರಂತೆ ನಟಿಸಿ ಹೇಳಿದರು – "ನೀನು ಇಷ್ಟೆಲ್ಲ 'ಗರಂ' ಆಗಿ ಏಕೆ ಮಾತಾಡುತ್ತಿ? ಇದರಲ್ಲಿ ಕೋಪಗೊಳ್ಳಬೇಕಾದ ಸಮಾಚಾರವೇನಿದೆ? ಒಂದು ವೇಳೆ ಹೋರಿರಾಮನು ಗೇಣಿ ಕೊಟ್ಟಿದ್ದರೆ, ಒಂದಲ್ಲ ಒಂದು ಕಡೆ ನಾನದರ ಗುರ್ತು ಹಾಕಿರಬೇಕು. ನಾಳೆ ನಾನು ಆ ಹಳೆಯ ಕಾಗದಗಳನ್ನೆಲ್ಲ ತೆಗೆದು ನೋಡುತ್ತೇನೆ. ಈಗ ಸ್ವಲ್ಪ ಸ್ವಲ್ಪ ನೆನಪಾಗುತ್ತಿದೆ – ಹೋರಿರಾಮು ಆ ದಿನ ಸ್ವಲ್ಪ ಹಣ ಕೊಟ್ಟಿರಬೇಕೆಂಬುದಾಗಿ. ಆ ವಿಚಾರ ನೀನು ಹೆದರಬೇಕಾಗಿಲ್ಲ. ನಮ್ಮ ಹತ್ತಿರ

ರೂಪಾಯಿ ಬಂದಿದ್ದರೆ ಅದೆಲ್ಲಿಯೂ ಹೋಗಲಾರದು. ಅಷ್ಟು ಸ್ವಲ್ಪ ರೂಪಾಯಿಗಾಗಿ ನೀನು ಸುಳ್ಳು ಹೇಳಲಾರೆ. ನಾನು ಸಹ ಆ ಚಿಲ್ಲರೆ ಹಣ ದಿಂದಾಗಿ ದೊಡ್ಡ ಕುಬೇರನಾಗಲಾರೆ."

ಗೋಬರ ಅಲ್ಲಿಂದ ಹೊರಟು ಮನೆಗೆ ಬಂದು ಹೋರಿರಾಮನೊಡನೆ ನಾಲ್ಕು ಬಿಸಿ ಬಿಸಿ ಮಾತು ಆಡಿದ – "ನೀನೀಗ ಮಕ್ಕಳಿಂದಲೂ ಕಳತೆಯಾಗಿ ವರ್ತಿಸುತ್ತಿ. ಬೆಕ್ಕು 'ಮಿಯಾಂ' ಎಂದರೂ ಹೆದರಿ ಬೊಬ್ಬಿಡುತ್ತಿ. ನಾನು ಎಲ್ಲಿಯ ವರೆಗೆ ನಿನ್ನ ಯೋಗಕ್ಷೇಮ ನೋಡಿಕೊಂಡು ಬಂದೇನು? ನಾನು ಈಗ ನಿನಗೆ ೭೦ ರೂಪಾಯಿ ಕೊಟ್ಟು ಹೋಗುತ್ತೇನೆ. ದಾತಾದೀನರು ತೆಗೆದು ಕೊಂಡರೆ ಕೊಟ್ಟು ಜಾಡಾ ರಶೀದಿ ತೆಗೆದುಕೋ. ಅದಕ್ಕಿಂತ ಹೆಚ್ಚಿಗೆ ಒಂದು ಕಾಸು ಸಹ ಕೊಟ್ಟರೆ – ನನ್ನಿಂದ ಮತ್ತೆ ಒಂದು ಚಿಕ್ಕಾಸೂ ಸಿಗಲಾರದು. ಪರವೂರಿನ ನನ್ನ ಕಷ್ಟದ ಸಂಪಾದನೆ ಅದು. ಸಿಕ್ಕಿದವರೆಲ್ಲ ನಿಮ್ಮ ಕೈಯಿಂದ ಸೆಳೆದುಕೊಂಡಾಗ ತುಂಬಿಸುತ್ತಾ ಬರಲಿಕ್ಕೆ ನನ್ನಿಂದಾಗದು. ನಾನು ನಾಳೆಯೇ ಹೋಗಿಬಿಡುತ್ತೇನೆ. ಆದರೆ ಇಷ್ಟು ಮಾತ್ರ ಹೇಳಿ ಹೋಗುತ್ತೇನೆ – ಯಾರ ಕೈಯಿಂದಲೂ ಸಾಲ ತೆಗೆಯಬೇಡಿ. ಇತರರಿಗೆ ಕೊಡಲೂ ಬೇಡಿ. ಮಂಗಾ ರಾಮರು, ದಾತಾದೀನರು, ದುಲಾರಿ ಸಾಹುಕಾರ್ತಿ – ಎಲ್ಲರ ಸಾಲವನ್ನೂ ಒಂದು ರೂಪಾಯಿಯ ಬಡ್ಡಿಗೆ ಇಳಿಸಲೇಬೇಕು !"

ದನಿಯಳೂ ಅಷ್ಟರಲ್ಲಿ ಊಟ ಮುಗಿಸಿ ಹೊರಗೆ ಬರುತ್ತಾ ಹೇಳಿದಳು– 'ಇಷ್ಟರಲ್ಲೇ ಏಕೆ ಹೊರಟು ಹೋಗುವೆ ಮಗನೇ. ನಾಲ್ಕಾರು ದಿನವಿದ್ದು ಆ ಕಬ್ಬು ನೆಡುವ ಕೆಲಸವನ್ನಾದರೂ ಪೂರ್ತಿಮಾಡಿ ಹೋಗಬಾರದೇ? ಲೇವಾದೇವಿಯ ಲೆಕ್ಕಾಚಾರ ಸಹ ಸ್ವಲ್ಪ ಸರಿಪಡಿಸಿ ಹೋದರೆ ಒಳ್ಳೇದಿತ್ತು.'

ಗೋಬರ ಸ್ವಲ್ಪ ಸ್ವರ ಏರಿಸಿ ಹೇಳಿದ – 'ನನಗಲ್ಲಿ ದಿನಕ್ಕೆ ೨–೩ ರೂಪಾ ಯಿಯ ಲಾಭ ಹಾಳಾಗಿ ಹೋಗುತ್ತಿದೆ. ಅದು ನಿನಗೆ ಗೊತ್ತಿದೆಯೇ? ಇಲ್ಲಿ ಎಷ್ಟು ಕಷ್ಟಪಟ್ಟರೂ ಹೆಚ್ಚೆಂದರೆ ನಾಲ್ಕಾರಾಣೆಯ ಕೆಲಸವೇ ಆಗುವುದು. ಮಾತ್ರವಲ್ಲದೆ ಈ ಸಲ ನಾನು ಜುನಿಯಳನ್ನೂ ಕರೆದುಕೊಂಡು ಹೋಗು ತ್ತೇನೆ. ಅಲ್ಲಿ ನನಗೆ ಅಡಿಗೆ, ಊಟಕ್ಕೆಲ್ಲ ಬಹಳ ತೊಂದರೆಯಾಗುತ್ತಿದೆ.'

ದನಿಯಳೂ ಸ್ವಲ್ಪ ಹೆದರಿಕೊಂಡು ಹೇಳಿದಳು – 'ನಿನ್ನಿಚ್ಛೆ ಹೇಗೋ ಹಾಗೆ. ಆದರೆ ಅವಳು ಅಲ್ಲಿ ಒಬ್ಬಳೇ ಹೇಗೆ ಮನೆ ನೋಡಿಕೊಂಡಾಳೋ – ಹೇಗೆ ಮಗುವಿನ ಯೋಗಕ್ಷೇಮ ನೋಡಿಯಾಳೋ – ಗೊತ್ತಾಗುವುದಿಲ್ಲ.'

'ಹಾಗೆ ಮಗುವಿನತ್ತ ನೋಡಿದರೆ ನನ್ನ ಯೋಗಕ್ಷೇಮ ನೋಡುವವರಾರು ? ನನಗಂತು ಇನ್ನು ಮುಂದೆ ಕೈ ಸುಟ್ಟುಕೊಳ್ಳಲಿಕ್ಕೆ ಸಾಧ್ಯವಿಲ್ಲ.'

'ಕರೆದುಕೊಂಡು ಹೋಗುವುದಕ್ಕೆ ನನ್ನಡ್ಡಿ ಇಲ್ಲ. ಆದರೆ, ಅಲ್ಲಿ ಮಕ್ಕಳು ಮರಿಗಳನ್ನು ಕಟ್ಟಿಕೊಂಡಿರಲಿಕ್ಕೆ-ಅದು ಸಹ ಹಿಂದೆಯೂ ಇಲ್ಲ; ಮುಂದೆಯೂ ಇಲ್ಲ – ಎಷ್ಟು ಕಷ್ಟವೆಂಬುದನ್ನು ಯೋಚಿಸಿ ನೋಡಿಕೊ.'

'ಪರದೇಶದಲ್ಲಿ ಸಹ ಸ್ನೇಹಿತರು, ಬೇಕಾದವರು – ಎಲ್ಲ ಇರುತ್ತಾರೆ ಅಮ್ಮ! ಇಲ್ಲಿಯ ಸಂಸಾರವೂ ಸ್ವಾರ್ಥದ ಸಂಸಾರ. ಯಾರ ಕೈಯಲ್ಲಿ ನಾಲ್ಕು ಕಾಸು ಇದೆಯೋ ಅವನು ತನ್ನವನು. ಬರಿಗೈಯಾದರೆ ತಂದೆ ತಾಯಿಯರೂ ಕೇಳುವುದಿಲ್ಲ.'

ದನಿಯಳಿಗೆ ಮಾತಿನರ್ಥವಾಯಿತು. ಅವಳಿಗೆ ತಲೆಯಿಂದ ಕಾಲ ವರೆಗೆ ಬೆಂಕಿ ಹಿಡಿದಂತಾಗಿ ಹೇಳಿದಳು – 'ತಂದೆ ತಾಯಿಯರ ಮನಸ್ಸು ಅಷ್ಟು ಕಠಿನವಲ್ಲ ಮಗನೇ. ಹೌದು, ಈಗಿನ ಮಕ್ಕಳು ನಾಲ್ಕು ಕಾಸು ಸ್ವತಂತ್ರವಾಗಿ ಸಂಪಾದಿಸತೊಡಗಿದರೆ ತಂದೆ ತಾಯಿಯರಿಗೇ ಕಣ್ಣು ಕೆಂಪುಮಾಡುತ್ತಾರೆ. ಈ ಊರಲ್ಲೇ ಹತ್ತಿಪ್ಪತ್ತು ಉದಾಹರಣೆ ಕೊಟ್ಟೇನು. ತಂದೆ ತಾಯಿಯರು ಸಾಲ ಮೂಲ ಮಾಡುವುದಿದ್ದರೂ ತಮ್ಮ ಮಕ್ಕಳಿಗಾಗಿ ಅಲ್ಲದೆ, ತಮ್ಮ ಸ್ವಂತ ಭೋಗ ವಿಲಾಸಕ್ಕಾಗಿ ಅಲ್ಲ.'

'ನನಗೇನು ಗೊತ್ತು – ನೀವು ಯಾವ ಯಾವುದಕ್ಕಾಗಿ ಸಾಲಮಾಡಿದ್ದೀರೆಂಬುದಾಗಿ ? ನಾನಂತು ಒಂದು ಕಾಸು ಕೂಡ ತೆಗೆದುಕೊಂಡು ಹೋಗಿಲ್ಲ.'

'ಹೌದು ; ಸಾಕಿ ಸಲಹದೆಯೇ ನೀನು ದೊಡ್ಡವನಾದುದು !'

'ಸಾಕಲಿಕ್ಕೆ ನಿಮಗೇನು ಖರ್ಚಾಗಿದೆ ? ಮಗುವಾಗಿರುವಾಗ ಹಾಲು ಕುಡಿಸಿದಿರಿ. ಮತ್ತೆ ನಿರ್ಗತಿಕರಂತೆ ಬಿಟ್ಟು ಬಿಟ್ಟಿರಿ. ಎಲ್ಲರು ತಿಂದುದನ್ನೇ ನಾನೂ ತಿಂದೆ. ನನಗಾಗಿ ಪ್ರತ್ಯೇಕ ಹಾಲು ತರಿಸುತ್ತಿದ್ದಿರೇ? ಬೆಣ್ಣೆ ತೆಗೆಯುತ್ತಿದ್ದಿರೇ ? ನಿನ್ನ ಮನಸ್ಸಿನಲ್ಲಿ ಮತ್ತು ಅಪ್ಪನ ಮನಸ್ಸಿನಲ್ಲಿ ನಾನೇ ಎಲ್ಲ ಸಾಲ ತೀರಿಸಿಬಿಡಬೇಕೆಂಬಾಸೆ ಇದೆ. ಹಾಗೆಯೇ, ಗೇಣಿಯನ್ನೂ ಕೊಟ್ಟು ಹುಡುಗಿಯರಿಗೆ ಮದುವೆಯನ್ನೂ ಮಾಡಿಸಿದರೆ ಸಂತೋಷವಾದೀತು. ಅಂತು ನನ್ನ ಜೀವನವಿಡೀ ನಿಮ್ಮ ತಾಪತ್ರಯ ತೀರಿಸಲಿಕ್ಕಾಗಿಯೇ ಸಂದುಹೋದೀತು. ನನಗೆ ಸಹ ಹೆಂಡತಿ ಮಕ್ಕಳು ಇಲ್ಲವೇ?'

ದನಿಯಳು ತಣ್ಣಗಾಗಿ ಹೋದಳು. ಒಂದೇ ಕ್ಷಣದಲ್ಲಿ ಅವಳ ಜೀವನವ

ಮಧುರ ಸ್ವಪ್ನಗಳೆಲ್ಲ ಕುಸಿದುಬಿದ್ದುವು. ಇನ್ನು ಮುಂದೆ ತನ್ನ ದುಃಖ ದಾರಿದ್ರ್ಯಗಳೆಲ್ಲ ದೂರವಾದಂತೆಯೇ – ಎಂದು ಈ ತನಕ ಅವಳು ಎಣಿಸಿದ್ದಳು. ಗೋಬರನು ಮನೆಗೆ ಬಂದಂದಿನಿಂದ ಅವಳ ಮುಖದಲ್ಲಿ ಸಂತೋಷದ ರೇಖೆಯೊಂದು ಮೂಡಿಬಂದಿತ್ತು. ಅವಳ ಮಾತಿನಲ್ಲಿ ಒಂದು ತರದ ಮೃದುತೆಯೂ, ವ್ಯವಹಾರದಲ್ಲಿ ಉದಾರತೆಯೂ ತೋರಿಬರುತ್ತಿತ್ತು. ಒಳಗಿನ ಶಾಂತಿಯು ಹೊರಗಿನ ಸೌಜನ್ಯತೆಯ ಗುರುತಾಗಿತ್ತು. ಆದರೆ ಈ ಮಾತುಗಳು ಮಾತ್ರ, ಕಾದು ಕೆಂಪಾದ ಕತ್ತಿಯ ಹಾಗೆ ಹೃದಯಕ್ಕೆ ನಾಟಿಹೋಯಿತು. ಅವಳ ಎಲ್ಲ ತರದ ಹೆಮ್ಮೆಯೂ ಕರಗಿ ನೀರಾಯಿತು. ಇಷ್ಟೆಲ್ಲ ಕೇಳಿದ ಮೇಲೆ ಜೀವನದಲ್ಲಿ ಇನ್ನಾವ ತರದ ಸ್ನೇಹವಿದೆ? ಯಾವ ದೋಣಿಯಲ್ಲಿ ಕೂತು ಈ ಜೀವನಸಾಗರವನ್ನು ದಾಟಬಯಸಿದ್ದಳೋ – ಅದೇ ಒಡೆದು ಪುಡಿ ಪುಡಿಯಾದ ಮೇಲೆ ಇನ್ನೆಂತು ಬದುಕುವುದು ?

ಆದರೆ ಅವಳ ಪ್ರೀತಿಯ ಗೋಬರ ಅಷ್ಟು ಸ್ವಾರ್ಥಿಯೇ ? ಅವನು ಈ ತನಕ ತಾಯಿಯ ಮಾತಿಗೆ ಪ್ರತಿ ಮಾತು ಆಡಿದ್ದಿಲ್ಲ. ಯಾವ ವಿಚಾರದಲ್ಲೂ ಕೋಪಗೊಂಡದ್ದಿಲ್ಲ. ಕೊಟ್ಟುದನ್ನು ತಿಂದು ಸುಮ್ಮನಿರುತ್ತಿದ್ದನು. ಅಂತಹ ಸಾಧು ಸ್ವಭಾವದ ಒಳ್ಳೆಯ ಹುಡುಗ ಇಂದು ಏಕೆ ಎದೆಯೊಡೆಯುವ ಮಾತು ಆಡುತ್ತಿದ್ದಾನೆ? ಅವನ ಇಚ್ಛೆಗೆ ವಿರುದ್ಧವಾಗಿ ಯಾರೂ ಏನೂ ಹೇಳಲಿಲ್ಲ. ಅವನೇ ಸ್ವತಃ ಸಾಲ ಮೂಲದ ಮಾತು ತೆಗೆದುದು. ಇಲ್ಲವಾದರೆ ಹಿರಿಯರ ಸಾಲ ತೀರಿಸಲು ಅವನೊಡನೆ ಯಾರು ತಾನೆ ಹೇಳುತ್ತಿದ್ದರು ? ಅವನು ಸ್ವಂತ ಸಂಪಾದನೆ ಮಾಡಿ ಮರ್ಯಾದೆಯಿಂದ ಜೀವನ ನಡೆಸುತ್ತಿದ್ದರೆ ತಂದೆ ತಾಯಿಯರಿಗೆ ಅದೇ ಒಂದು ಸಂತೋಷದ ವಿಚಾರವಲ್ಲವೇ? ಸಾಧ್ಯವಿದ್ದರೆ ಹೆತ್ತವರಿಗೆ ಏನಾದರೂ ಸಹಾಯ ಮಾಡಲಿ. ಸಾಧ್ಯವಿಲ್ಲವಾದರೆ ಯಾರಾದರೂ ಅವನ ಕುತ್ತಿಗೆ ಹಿಡಿಯಹೋಗುವರೇ ? ಜುನಿಯಳನ್ನು ಕರೆದುಕೊಂಡು ಹೋಗುವುದಿದ್ದರೂ ಸಂತೋಷದಿಂದ ಕರೆದೊಯ್ಯಲಿ. ಅವಳನ್ನು ಕರೆದೊಯ್ದರೆ, ಅನುಕೂಲಕ್ಕಿಂತ ಹೆಚ್ಚಿಗೆ ಅನಾನುಕೂಲವೇ ಒದಗಬಹುದೆಂದು ಹೇಳಿದ್ದು ಅವನ ಒಳ್ಳೆಯದಕ್ಕಾಗಿಯೇ ಅಲ್ಲವೇ ? ಇಷ್ಟೆಲ್ಲ ಕೋಪಗೊಳ್ಳಲಿಕ್ಕೆ ಕಾರಣವಾದ ಯಾವ ಮಾತನ್ನು ತಾನೇ ಹೇಳಿತು ? ಆಗಲಿ, ಆಗದಿರಲಿ ; ಈ ಬೆಂಕಿಯನ್ನು ಆ ಜುನಿಯಳೇ ಹಿಡಿಸಿ ಹಾಕಿರಬೇಕು ! ಕೂತಲ್ಲಿಯೇ ಅವಳು ಈ ಮಂತ್ರ ಅವನಿಗೆ ಉಪದೇಶಿಸಿರಬೇಕು ! ಅವಳಿಗಿಲ್ಲಿ

ಸಿಂಗಾರ, ಶೋಕ್, ಮಾಡಲಿಕ್ಕೆ ತಕ್ಕ ಅವಕಾಶ ಸಿಗುವುದಿಲ್ಲ. ಮನೆಯ ಕೆಲಸ ಏನಾದರೂ ಸ್ವಲ್ಪ ಮಾಡಬೇಕಾಗುತ್ತದೆ. ಬದಲಾಗಿ ಇವನ ಬೆನ್ನು ಹಿಡಿದು ಬಿಟ್ಟರೆ – ಹಣ ಕಾಸು ಕೈಗೆ ಬರುವಾಗ – ಚೆನ್ನಾಗಿ ತಿನ್ನಬಹುದು, ಚೆನ್ನಾಗಿ ಉಡಬಹುದು, ತಿರುಗಾಡಬಹುದು, ಕೊನೆಗೆ ಕಾಲು ಚಾಚಿ ಮಲಗಬಹುದು! ಇಬ್ಬರಿಗೊಂದು ಅಡಿಗೆ ಮಾಡಿ ಹಾಕಲಿಕ್ಕೆ ಎಷ್ಟು ಹೊತ್ತು ಬೇಕು? ಮಾತ್ರ ವಲ್ಲದೆ ಅಲ್ಲಿ ಬೇಯಿಸಿಟ್ಟ ಅನ್ನ ಪದಾರ್ಥ ಸಹ ಮಾರುವರಂತೆ! ಅಂತು ಈ ಎಲ್ಲ ಕುತಂತ್ರವನ್ನು ಅವಳೇ ಎಬ್ಬಿಸಿ ಹಾಕಿರಬೇಕು! ಪಟ್ಟಣದಲ್ಲಿ ಸ್ವಲ್ಪ ದಿನವಿದ್ದು ಅವಳಿಗೆ ಅನುಭವ ಕೂಡ ಆಗಿದೆ. ಅಲ್ಲಿಯ ತಿಂಡಿ ತೀರ್ಥದ ರುಚಿ ಅವಳಿಗೆ ಗೊತ್ತಿದೆ. ಇಲ್ಲಿ ಅವಳಿಗೆ ಯಾರೂ ಗತಿ ಇದ್ದಿಲ್ಲ. ಆಗ ಈ ಬುದ್ಧಿ ಗೇಡಿ ಒಬ್ಬ ಸಿಕ್ಕಿಹೋದ. ಅವಳು ಬಲೆಯಲ್ಲಿ ಸೇರಿಸಿಕೊಂಡೇ ಬಿಟ್ಟಳು! ಆ ಸಲ – ಐದು ತಿಂಗಳ ಹೊಟ್ಟೆ ಹೊತ್ತುಕೊಂಡು ಬರುವಾಗ ಯಾವ ರೀತಿ 'ಮ್ಯಾಂವ್ ಮ್ಯಾಂವ್' ಮಾಡಿಕೊಂಡು ಬಂದಿದ್ದಳು! ಆಗ – ಅವಳಿಗಿಲ್ಲಿ ನಾವು ಎಡೆ ಕೊಡದಿರುತ್ತಿದ್ದರೆ ಈಗ ಬೀದಿ ಬೀದಿ ಬಿಕ್ಕೆ ಬೇಡಬೇಕಾಗುತ್ತಿತ್ತು. ಈ ಮನೆಮುರುಕಳ ದೆಸೆಯಿಂದಾಗಿಯೇ ಆ ಸಲ ದಂಡ ತೆರಬೇಕಾಯಿತು! ಊರಲ್ಲಿ ಕೆಟ್ಟ ಹೆಸರು ಬಂತು. ಬೇಸಾಯವೂ ಕೆಟ್ಟುಹೋಯಿತು. ಎಲ್ಲ ದುರ್ಗತಿಯೂ ಈ ಮುಂಡೆಯಿಂದಾಗಿಯೇ ಬಂತು. ಈಗ – ಮಗ ನಾಲ್ಕು ಕಾಸು ಸಂಪಾದಿಸತೊಡಗಿದಾಗ ಇವಳ ಕಣ್ಣು ತೆರೆಯಿತು. ಈ ತನಕ ಬೇಕಾದರೆ ಅತ್ತೆಯ ಕಾಲು ತಿಕ್ಕಲಿಕ್ಕೆ ಎಣ್ಣೆ ಹಿಡಿದುಕೊಂಡು ಬರುತ್ತಿದ್ದಳು. ಈಗ– ತನ್ನ ಜೀವನನಿಧಿಯನ್ನೇ ಈ ರಾಕ್ಷಸಿ ಎಳೆದುಕೊಳ್ಳಬಯಸುವಳಲ್ಲ!

ಹೀಗೆಲ್ಲ ಯೋಚಿಸಿ ಅವಳು ಉಕ್ಕಿ ಬರುವ ದುಃಖದಿಂದ ಹೇಳಿದಳು – 'ಈ ಮಂತ್ರವನ್ನು ನಿನಗಾರು ಉಪದೇಶಿಸಿದ್ದು ಮಗನೇ? ಈ ತನಕ ನೀನು ಈ ರೀತಿ ಇದ್ದವನಲ್ಲ. ತಂದೆ ತಾಯಿಯರು ನಿನ್ನವರೇ ಅಲ್ಲವೇ? ತಂಗಿಯಂದಿರೂ ನಿನ್ನವರೇ! ಮನೆ ನಿನ್ನದೇ. ಇಲ್ಲಿ ಹೊರಗಿನವರು ಯಾರಿದ್ದಾರೆ? ನಾವಿನ್ನು ಹೆಚ್ಚು ದಿನ ಬದುಕಲಿದ್ದೇವೆಯೇ? ಮನೆತನದ ಮಾನವನ್ನುಳಿಸಿಕೊಂಡರೆ ನಿನಗೆಯೇ ಒಳ್ಳೇದು. ಮನುಷ್ಯ ಹಣ ಸಂಪಾದಿಸುವುದಿದ್ದರೂ ಮನೆಯವರಿಗಾಗಿಯೇ ಅಲ್ಲವೇ? ಬರೇ ತನ್ನ ಹೊಟ್ಟೆಯನ್ನು ಹಂದಿ ಸಹ ತುಂಬಿಸಿಕೊಳ್ಳುತ್ತದೆ. ಈ ಜುನಿಯಳು ಸರ್ಪಿಣಿಯಂತಾಗಿ ನಮಗೇ ಕಚ್ಚ ಬಂದಾಳೆಂದು ನಾವೆಷ್ಟಕ್ಕೂ ಎಣಿಸಿದ್ದಿಲ್ಲ.'

ಗೋಬರ ಕೆರಳಿದವನಾಗಿ ಹೇಳಿದ – 'ಜುನಿಯಳು ಹೇಳಿಕೊಟ್ಟು, ತಿಳಿದುಕೊಳ್ಳುವಷ್ಟರ ಮಟ್ಟಿನ ಮೂರ್ಖ ನಾನಲ್ಲ. ನನಗೂ ಸ್ವಲ್ಪ ಸ್ವಂತ ಬುದ್ಧಿ ಇದೆ. ಸುಮ್ಮನಾದರೂ ಅವಳನ್ನೇಕೆ ನೀನು ಹೀಯಾಳಿಸುತ್ತಿ? ನಿನ್ನ ಮನೆತನದ ಎಲ್ಲ ಹೊರೆಯನ್ನೂ ಹೊತ್ತುಕೊಳ್ಳಲಿಕ್ಕೆ ನನಗೆ ಸಾಮರ್ಥ್ಯ ಸಾಲದು. ನನ್ನಿಂದೆಷ್ಟು ಸಾಧ್ಯವಿದೆಯೋ ಅಷ್ಟು ಮಾತ್ರ ಮಾಡಿಯೇನು. ಆದರೆ ನನ್ನ ಕೈಕಾಲುಗಳಿಗೆ ಕೋಳ ಮಾತ್ರ ಹಾಕಿಸಿಕೊಳ್ಳಲಾರೆ.'

ಅಷ್ಟರಲ್ಲಿ ಜುನಿಯಳೂ ತನ್ನ ಕೋಣೆಯಿಂದ ಹೊರಗೆ ಬಂದು ಆರಂಭ ಮಾಡಿದಳು – 'ಅತ್ತೀ, ಜೇಡನ ಮೇಲಿನ ಕೋಪವನ್ನು ದಾಡಿಯ ಮೇಲೆ ಏಕೆ ತೆಗೆಯುತ್ತೀರಿ? ಹೇಳಿಕೊಡಲಿಕ್ಕೆ ಇಲ್ಲಾರೂ ಚಿಕ್ಕ ಮಕ್ಕಳಿಲ್ಲ. ತಮ್ಮ ತಮ್ಮ ಒಳ್ಳೇದು ಕೆಟ್ಟುದನ್ನು ತಿಳಿದುಕೊಳ್ಳುವ ಯೋಗ್ಯತೆ ಎಲ್ಲರಿಗೂ ಇದೆ. ಮನುಷ್ಯ ಹುಟ್ಟಿ ಸಾಯುವ ತನಕವೂ ತಪಸ್ಸು ಮಾಡುತ್ತಲೇ ಇದ್ದು, ಕೊನೆಗೊಂದು ದಿನ ಬರಿಗೈಯಲ್ಲಿ ಹೋಗುವುದಕ್ಕಾಗಿ ಜನ್ಮ ತಾಳುವುದಲ್ಲ. ತನ್ನ ಕೈಯಲ್ಲಿ ನಾಲ್ಕು ಕಾಸಾಗಲಿ; ನಾಲ್ಕು ದಿನದ ಸುಖ ಅನುಭವಿಸುವಂತಾಗಲಿ – ಎಂದೇ ಪ್ರತಿಯೊಬ್ಬನೂ ಬಯಸುವುದು.'

ದನಿಯಳು ಹಲ್ಲು ಕಚ್ಚಿಕೊಂಡು ಹೇಳಿದಳು – 'ಆಯಿತು ಜುನಿಯಾ, ಹೆಚ್ಚಿನ ಜ್ಞಾನೋಪದೇಶ ಇನ್ನು ಬೇಡ. ಈಗ ನಿನಗೆ ಸಹ ನಿನ್ನ ಒಳ್ಳೇದು ಕೆಟ್ಟುದು ತಿಳಿದುಕೊಳ್ಳುವ ಯೋಗ್ಯತೆ ಬಂದಿದೆ. ಆಗ – ಇಲ್ಲಿ ಬಂದು ನನ್ನ ಕಾಲ ಮೇಲೆ ಬಿದ್ದು ಅಳುತ್ತಿದ್ದಾಗ ನಿನ್ನ ಒಳ್ಳೇದು ಕೆಟ್ಟುದು – ಯಾವುದೂ ಇದ್ದಿಲ್ಲ. ಆಗಲೇ ನಾವು ಸಹ ನಮ್ಮ ಒಳ್ಳೇದು ಕೆಟ್ಟುದು ಯೋಚಿಸಿದ್ದರೆ – ಇಂದು ನಿನ್ನ ಪಾಡು ಏನಾಗುತ್ತಿತ್ತೋ ಏನೋ!'

ಆ ಮೇಲಂತು ಸಂಗ್ರಾಮ ಏರಿಯೇ ಹೋಯಿತು. ಬೈದಾಟ, ಕೈಕಾಟ, ಉಗುಳಾಟ – ಯಾವುದೂ ಬಾಕಿ ಉಳಿಯಲಿಲ್ಲ. ಗೋಬರನೂ ಮಧ್ಯೆ ಮಧ್ಯೆ ಸರಿಯಾಗಿ ಚುಚ್ಚಿಬಿಡುತ್ತಿದ್ದ. ಹೋರಿರಾಮ ಜಗುಲಿಯ ಮೇಲೆ ಮುದುಡಿಕೊಂಡು ಸುಮ್ಮನೆ ಇದನ್ನೆಲ್ಲ ನೋಡುತ್ತಲೇ ಇದ್ದ. ಸೋನೆ ಮತ್ತು ರೂಪಾ ಅಂಗಳದಲ್ಲಿ ತಲೆ ತಗ್ಗಿಸಿಕೊಂಡು ನಿಂತಿದ್ದರು. ದುಲಾರಿ, ಪುನ್ನಿ ಮೊದಲಾದ ಹೆಂಗುಸರೆಲ್ಲ ಮಧ್ಯಸ್ಥಿಕೆ ಮಾಡಲು ಬಂದು ಸೇರಿದರು. ಗುಡುಗಿನ ಮಧ್ಯೇ ಕೆಲ ವೇಳೆ ಮಳೆಯೂ ಬರುತ್ತಿತ್ತು. ಇಬ್ಬರೂ ತಮ್ಮ ತಮ್ಮ ಅದೃಷ್ಟದ ವಿಚಾರದಲ್ಲಿ ಅಳುತ್ತಿದ್ದರು. ಇಬ್ಬರೂ ದೇವರನ್ನು ಬೈಯುತ್ತಾ ತಮ್ಮ

ನಿರ್ದೋಷತೆಯನ್ನು ಸ್ಥಾಪಿಸಿಕೊಳ್ಳುತ್ತಿದ್ದರು. ಜುನಿಯಳು ಹಳೆಯ ಬೇರುಗಳನ್ನು ಸಹ ಅಗೆದು ತೆಗೆಯುತ್ತಿದ್ದಳು. ಇಂದು ಅವಳಿಗೆ ಹೀರ ಮತ್ತು ಸೋಬರ ಮೇಲೆ ಸಹ ಹೆಚ್ಚಿನ ಸಹಾನುಭೂತಿ ಮೂಡಿಬಂದಿತ್ತು. ಈ ತನಕ ಯಾರೊಡನೆಯೂ ಸರಿಬೀಳದಿದ್ದ ದನಿಯಳಿಗೆ ಇಂದು ಸೊಸೆಯ ಹತ್ತಿರ ಹೇಗೆ ಸರಿಹೋದೀತು ? ತನ್ನ ನಿರ್ದೋಷತೆಯನ್ನು ದನಿಯಳು ಪುನಃ ಪುನಃ ವಿವರಿಸಿ ಹೇಳುತ್ತಿದ್ದಳು. ಆದರೂ ಸಹ ಕಾರಣವೇನೋ ಗೊತ್ತಿಲ್ಲ–ಜನಮತವು ಜುನಿಯಳ ಪಕ್ಷಕ್ಕೇ ಬರುತ್ತಿತ್ತು. ಪ್ರಾಯಶಃ ಕಾರಣವಿಷ್ಟೆ: ಜುನಿಯಳು ಹಿಡಿತ ಮೀರಿ ಮಾತಾಡುತ್ತಿರಲಿಲ್ಲ. ಆದರೆ ದನಿಯಳು ತನ್ನನ್ನೇ ತಾನು ಮರೆತಿದ್ದಳು. ಅದೂ ಅಲ್ಲದೆ, ಜುನಿಯಳು ಒಳ್ಳೆಯ ಸಂಪಾದನೆಗಾರನ ಹೆಂಡತಿ! ಅವಳ ಬಾಲ ಹಿಡಿದರೇನೇ ಸ್ವಲ್ಪವಾದರೂ ಪ್ರಯೋಜನವಾದೀತು! ಆದ ಕಾರಣವೇ ಇರಬೇಕು – ಸೇರಿದ ಜನರಿಗೆ ಜುನಿಯಳ ಮಾತೇ ಸರಿಯೆಂದು ತೋರುತ್ತಿತ್ತು.

ಅಷ್ಟರಲ್ಲಿ ಹೋರಿರಾಮನು ಎದ್ದು ಹತ್ತಿರ ಬಂದು ಬೇಡಿಕೊಳ್ಳತೊಡಗಿದ–' ನಿನ್ನ ಕಾಲಿಗೆ ಬೀಳುತ್ತೇನೆ ದನಿಯಾ. ಸ್ವಲ್ಪ ಬಾಯಿ ಮುಚ್ಚಿಕೊ. ಸುಮ್ಮನಾದರೂ ನನ್ನ ಮುಖಕ್ಕೆ ಮಸಿ ಹಚ್ಚಬೇಡ. ಇನ್ನೂ ನಿನಗೆ ಸಾಕಾಗಲಿಲ್ಲವೇ ? '

ದನಿಯಳು ಹೊಂಗುಟ್ಟುತ್ತಾ ಅವನತ್ತ ಬಂದು – ' ನೀವು ಸಹ ನನಗೇ ಹೇಳುವಿರಲ್ಲ? ನಾನೇ ತಪ್ಪುಗಾರಳು. ಅವಳು ಹೇಳುವುದೆಲ್ಲ ಸರಿಯೇ ? ' – ಎಂದಳು.

ಸಂಗ್ರಾಮದ ಕ್ಷೇತ್ರ ಬದಲಾಯಿತು.

ಹೋರಿರಾಮ ಹೇಳಲಾರಂಭಿಸಿದ – ' ಅವರಿಗೆ ಇಲ್ಲಿ ಇರಲಿಕ್ಕೆ ಮನಸ್ಸಿಲ್ಲವಾದರೆ ಅವರನ್ನು ಕಟ್ಟಿಹಾಕುವೆಯಾ? ಮಕ್ಕಳನ್ನು ಸಾಕಿ, ಸಲಹಿ, ದೊಡ್ಡದು ಮಾಡುವುದು ತಾಯಿ ತಂದೆಯರ ಕರ್ತವ್ಯ. ಅದನ್ನು ನಾವು ಮಾಡಿಯಾಯಿತು. ಈಗ ಅವರ ಕೈಕಾಲು ಗಟ್ಟಿಯಾಗಿದೆ. ಅವರು ಈಗ ನಿನ್ನ ಬಾಯಿಗೆ ಅನ್ನ ಕೊಡಬೇಕೆಂದು ಬಯಸುವೆಯಾ ? ತಂದೆತಾಯಿಯರ ರೂಪಾಯಿಯಲ್ಲಿ ಹದಿನಾರಾಣೆಯ ಹಕ್ಕೂ ಮಕ್ಕಳಿಗಿದೆ. ಮಕ್ಕಳದ್ದರಲ್ಲಿ ತಂದೆತಾಯಿಯರಿಗೆ ಒಂದಾಣೆಯ ಹಕ್ಕೂ ಇಲ್ಲ. ಹೋಗುವವರಿಗೆ ಆಶೀರ್ವಾದ ಕೊಟ್ಟು ಕಳಿಸಬೇಕು. ನಮಗೆ ದೇವರಿದ್ದಾನೆ ! ಏನೆಲ್ಲ ಅನುಭವಿಸಲಿದೆಯೋ–ಅದನ್ನೆಲ್ಲ

ಅನುಭವಿಸಿಯೇ ತೀರಬೇಕು. ೪೦-೫೦ ವರ್ಷ ಇದೇ ರೀತಿಯಲ್ಲಿ ಅಳುತ್ತಾ ನಗುತ್ತಾ ಹೇಗೋ ಎಂತೋ ದಾಟಿಹೋಯಿತು. ಇನ್ನೇನಾದರೂ ೫-೧೦ ವರ್ಷ ಇರಬಹುದು. ಅದು ಕೂಡಾ ಹೀಗೇ ಸಾಗುತ್ತದೆ.'

ಅತ್ತ ಗೋಬರ ಹೊರಡುವ ಸಿದ್ಧತೆಯಲ್ಲಿದ್ದ. ಆ ಮನೆಯ ನೀರು ಅವನಿಗೆ ಸಾಕಾಗಿ ಹೋಗಿತ್ತು. ತಾಯಿಯಾಗಿದ್ದು ಅವಳು, ಅಂತಹ ಮಾತನ್ನೆಲ್ಲ ಹೇಳಿದ ಮೇಲೆ ಇನ್ನು ಅವನು ಅವಳ ಮುಖ ಸಹ ನೋಡಲಾರ.

ನೋಡುತ್ತಿದ್ದ ಹಾಗೆಯೇ ಅವನ ಹಾಸಿಗೆ ಕಟ್ಟಿಯಾಯಿತು. ಜುನಿಯಳೂ ಸೀರೆಯುಟ್ಟುಕೊಂಡಾಯಿತು. ಚುನ್ನುವೂ ಟೋಪಿ ಫ್ರಾಕ್ ಹಾಕಿಕೊಂಡು ರಾಜಕುಮಾರನಾದ.

ಹೋರಿರಾಮನು ಮುಂದೆ ಬಂದು–'ಮಗನೇ–ನಿನ್ನೊಡನೆ ಹೇಳುವುದಕ್ಕೆ ಮಾತೇ ಹೊರಡುವುದಿಲ್ಲ. ಆದರೂ ಮನಸ್ಸು ಕೇಳುವುದಿಲ್ಲ. ಸ್ವಲ್ಪ ಒಳಗೆ ಹೋಗಿ ನಿನ್ನ ಆ ಭಾಗ್ಯಹೀನ ತಾಯಿಯ ಕಾಲಿಗೆ ವಂದಿಸಿ ಬಂದುದರಿಂದ ಏನಾದರೂ ಕೆಡುಕಾದೀತೇ ? ಯಾವ ತಾಯಿಯ ಹೊಟ್ಟೆಯಲ್ಲಿ ಜನ್ಮ ತಾಳಿದೆಯೋ – ಮತ್ತು ಯಾರ ರಕ್ತ ಕುಡಿದು ದೊಡ್ಡವನಾದೆಯೋ – ಅವಳ ಮಟ್ಟಿಗೆ ಅಷ್ಟು ಸಹ ಮಾಡಲಾರೆಯಾ ?' ಎಂದ ಆರ್ದ್ರಕಂಠದಿಂದ.

'ಅವಳು ನನ್ನ ತಾಯಿಯೆಂದು ನಾನು ಎಂದೂ ತಿಳಿದುಕೊಳ್ಳಲಾರೆ'– ಗೋಬರ ಮುಖ ತಿರುಗಿಸಿ ಹೇಳಿದ.

ಹೋರಿರಾಮ ಕಣ್ಣೀರು ತುಂಬಿ ಹೇಳಿದ – 'ನಿನ್ನಿಚ್ಛೆ ಹೇಗೋ ಹಾಗೆ. ಅಂತು ಹೋದಲ್ಲಿ ಸುಖವಾಗಿರು ಮಗನೇ.'

ಜುನಿಯಳು ಹೋಗಿ ಅತ್ತೆಯ ಕಾಲು ಹಿಡಿದು ವಂದಿಸಿದಳು. ದನಿಯಳ ಬಾಯಿಂದ ಆಶೀರ್ವಾದದ ಒಂದು ಮಾತು ಸಹ ಹೊರಡಲಿಲ್ಲ. ಹೆಚ್ಚು ಬಿಟ್ಟು ಕಣ್ಣೆತ್ತಿ ನೋಡಲೂ ಇಲ್ಲ.

ಗೋಬರ ಮಗನನ್ನೆತ್ತಿಕೊಂಡು ಮುಂದೆ ಮುಂದೆ ಹೋಗುತ್ತಿದ್ದ. ಜುನಿಯಳು ಒಂದು ಸಣ್ಣ ಗಂಟನ್ನು ಸೊಂಟದಲ್ಲಿ ಹಿಡಿದುಕೊಂಡು ಹಿಂದಿನಿಂದ ಹೋಗುತ್ತಿದ್ದಳು. ಒಬ್ಬ ಕೂಲಿಯ ಹುಡುಗ ಪೆಟ್ಟಿಗೆ ಹಾಸಿಗೆಗಳನ್ನು ಹೊತ್ತುಕೊಂಡಿದ್ದ. ಊರಿನ ಹಲವು ಸ್ತ್ರೀಪುರುಷರು ಗೋಬರನನ್ನು ಕಳಿಸಲಿಕ್ಕಾಗಿ ಊರ ಹೊರಗಿನ ವರೆಗೆ ಹಿಂಬಾಲಿಸಿದರು.

ಇತ್ತ ದನಿಯಳು ಕೂತುಕೊಂಡು ಅಳುತ್ತಲೇ ಇದ್ದಳು. ಎದೆಯನ್ನು

ಗರಗಸದಿಂದ ಸಿಗಿಯುತ್ತಿರುವಂತೆ ಅವಳಿಗೆ ಭಾಸವಾಗುತ್ತಿತ್ತು. ಇಡೀ ಮನೆ ಬೆಂಕಿಬಿದ್ದು ಸುಟ್ಟು ಹೋದಾಗ ಅದರ ಯಜಮಾನನಿಗೆ ಆಗುವ ಕಸಿವಿಸಿ ಇವಳಿಗಾಗಿತ್ತು. ಕೂತುಕೊಂಡು ಅಳಲಿಕ್ಕೆ ಸಹ ಸ್ಥಳವಿದ್ದಿಲ್ಲ ಎಂಬಂತಾಗಿತ್ತು.

೧೮

ಗೋಬರ ಮತ್ತು ಜುನಿಯಾ ಹೊರಟುಹೋದ ಮೇಲೆ ಆ ಮನೆಯೇ ಶೂನ್ಯವಾಗಿ ತೋರತೊಡಗಿತು. ದನಿಯಳಿಗೆ ಸಲ ಸಲಕ್ಕೂ ಚುನ್ನುವಿನ ನೆನಪಾಗುತ್ತಿತ್ತು. ಅವನ ತಾಯಿಯೇನೋ ಜುನಿಯಳಾಗಿದ್ದಳು. ಆದರೆ ಅವನ ಪಾಲನೆ ಪೋಷಣೆಗಳನ್ನು ದನಿಯಳೇ ಮಾಡುತ್ತಿದ್ದಳು. ಅವಳೇ ಅವನನ್ನು ಮಿಂಯಿಸುತ್ತಿದ್ದಳು, ಕಣ್ಣಿಗೆ ಕಾಡಿಗೆ ಹಾಕುತ್ತಿದ್ದಳು, ಮಲಗಿಸುತ್ತಿದ್ದಳು; ಕೊನೆಗೆ ಕೆಲಸ ಮುಗಿದು ವಿರಾಮ ದೊರೆತಾಗ ಮುದ್ದಾಡಿಸುತ್ತಿದ್ದಳು. ಮಗುವಿನ ಮೇಲಿನ ಆ ವಾತ್ಸಲ್ಯವು ಅವಳ ಹಲವು ಚಿಂತೆಗಳನ್ನು ಮರೆಸುತ್ತಿತ್ತು. ಅವನ ಬೆಣ್ಣೆಯಂತಹ ಮೋಹಕ ಮುಖವನ್ನು ನೋಡಿ ಅವಳು ತನ್ನ ಎಲ್ಲ ಚಿಂತೆಗಳನ್ನೂ ಮರೆತುಬಿಡುತ್ತಿದ್ದಳು. ಆದರೆ ಈಗ ಅವಳಿಗೆ ಜೀವನದ ಈ ಆಧಾರವೇ ತಪ್ಪಿಹೋಯಿತು. ಬರಿದಾದ ತೊಟ್ಟಿಲನ್ನು ನೋಡಿದಾಗಲೆಲ್ಲ ಅವಳಿಗೆ ಅಳು ಬರುತ್ತಿತ್ತು.

ಕೂತಲ್ಲಿಯೇ ಅವಳು ಯೋಚಿಸಲಾರಂಭಿಸಿದಳು – ಜುನಿಯಳಿಗೆ ತಾನು ಮಾಡಿದ ಅನ್ಯಾಯವಾದರೂ ಏನು? ಯಾಕಾಗಿ ತನಗೀ ಶಿಕ್ಷೆ ದೊರಕಿತು? ಆ ರಕ್ಕಸಿ ಬಂದು ಚಿನ್ನದಂತಹ ಮನೆಯನ್ನು ಮಣ್ಣುಪಾಲಾಗಿಸಿದಳಲ್ಲಾ! ಗೋಬರ ಈ ತನಕ ಮಾತಿಗೆ ಪ್ರತಿಮಾತು ಆಡಿದವನಲ್ಲ. ಈ ಮುಂಡೆಯೇ ಅವನನ್ನು ಕೆಡಿಸಿರಬೇಕು. ಇನ್ನು ಅಲ್ಲಿ ಕರೆದುಕೊಂಡು ಹೋಗಿ ಎಷ್ಟೆಲ್ಲ ಕುಣಿದಾಡಿಸಲಿಕ್ಕಿದ್ದಾಳೋ -- ಏನೋ! ಇಲ್ಲಿರುವಾಗಲೂ ಅವಳು ಎಷ್ಟರಮಟ್ಟಿಗೆ ಮಗುವಿನ ಯೋಚನೆಯಲ್ಲಿದ್ದಳು? ತನ್ನ ಬೆಡಗು ಬಿನ್ನಾಣಗಳಿಂದಾಗಿ ಅವಳಿಗೆ ಸಮಯವೇ ಸಿಗುತ್ತಿರಲಿಲ್ಲ. ಇನ್ನು ಈಗ ಮಗುವಿನ ಯೋಗಕ್ಷೇಮವನ್ನು ಎಷ್ಟರ ಮಟ್ಟಿಗೆ ನೋಡಿಕೊಂಡಾಳು? ಪಾಪ! ನೆಲದ ಮೇಲೆ ಬಿದ್ದುಕೊಂಡು ಚುನ್ನು ಸುಮ್ಮನೆ ಅಳುತ್ತಾ ಇರಬಹುದು. ಇನ್ನು ಒಂದು ದಿನ ಸಹ ಸುಖ

ದಿಂದ ಆತ ಇರಲಾರ. ಜ್ವರ, ಕೆಮ್ಮು, ಶೀತ–ಒಂದಲ್ಲವಾದರೆ ಇನ್ನೊಂದು ಬರುತ್ತಲೇ ಇರಬಹುದು. ಈ ಮಾಯಾವಿನಿಯೇ ಏನೋ ಕುಡಿಸಿ, ತಿನ್ನಿಸಿ, ಗೋಬರನನ್ನು ತನ್ನ ವಶ ಮಾಡಿಕೊಂಡಿರಬೇಕು. ಅವಳು ಅಂತಹ ಮಾಯಾವಿನಿಯಾಗದಿರುತ್ತಿದ್ದರೆ ಈ ಎಲ್ಲ ಗಲಾಟೆಯೇ ಏಳುತ್ತಿರಲಿಲ್ಲ. ಈ ಹೆಡ್ಡನೊಬ್ಬ ಸಿಕ್ಕಿಹೋದ್ದರಿಂದ ಈಗ ಮಹಾರಾಣಿಯಂತಾಗಿ ಹೋಗಿದ್ದಾಳೆ!

ಹೋರಿರಾಮ ಸಿಡುಕಿನಿಂದ ಹೇಳಿದ – 'ಯಾವಾಗ ನೋಡಿದರೂ ನೀನು ಜುನಿಯಳ ತಪ್ಪನ್ನೇ ಎತ್ತಿತೋರಿಸುತ್ತಿ. ನಮ್ಮ ಚಿನ್ನ ಚಿಟ್ಟೆಯಾದರೆ ಚಿನಿವಾರ ಏನು ಮಾಡಿಯಾನು? ಗೋಬರ ಕರೆದುಕೊಂಡು ಹೋಗದಿರುತ್ತಿದ್ದರೆ ಅವಳಾಗಿಯೇ ಹೋಗುತ್ತಿದ್ದಳೇ? ಪಟ್ಟಣದ ಗಾಳಿ ತಾಗಿ ಪೋರನ ಕಣ್ಣು ತಿರುಗಿಹೋಗಿದೆ. ಅದನ್ನೇಕೆ ನೀನು ಯೋಚಿಸುವುದಿಲ್ಲ?'

'ಸಾಕು ಸುಮ್ಮನಿರಿ. ನೀವೇ ಆ ರಕ್ಕಸಿಯನ್ನು ತಲೆಯ ಮೇಲೆ ಏರಿಸಿಟ್ಟದು. ಇಲ್ಲವಾದರೆ ಅಂದೇ ನಾನು ಹಿಡಿಸೂಡಿಯಿಂದ ಹೊಡೆದು ಹೊರಗೆ ಮಾಡುತ್ತಿದ್ದೆ' – ದನಿಯಳು ಗರ್ಜಿಸಿದಳು.

ಎತ್ತುಗಳಿಗೆ ಮೇವು ಹಾಕಿ ಒಣಗ ಹಾಕಿದ್ದ ಧಾನ್ಯ ಸರಿಪಡಿಸಹೊರಟ ಹೋರಿರಾಮ ಮುಖ ಹಿಂತಿರುಗಿಸಿ ಹೇಳಿದ – 'ಈಗ ಒಂದು ವೇಳೆ ಮಗ ನನ್ನ ಸೊಸೆ ವಶಪಡಿಸಿಕೊಂಡು ಜಾರಿಯೇ ಬಿಟ್ಟಳು–ಎನ್ನುವಾ. ಅದಕ್ಕೇಕೆ ನೀನು ಹಾರಾಡಬೇಕು? ಹೆಚ್ಚಿನ ಜನರೆಲ್ಲ ಮಾಡುವುದನ್ನೇ ಗೋಬರನೂ ಮಾಡಿದ. ಈಗ ಅವನಿಗೆ ಸಹ ಮಕ್ಕಳಾದುವು. ನನ್ನ ಮಕ್ಕಳು ಮರಿಗಳಿಗಾಗಿ ಅವನೇಕೆ ಒದ್ದಾಡಬೇಕು? ನಮ್ಮ ತಲೆಯ ಮೇಲಿನ ಹೊರೆಗೆ ಅವನೇಕೆ ತಲೆಕೊಡಬೇಕು?'

'ನೀವೇ ಎಲ್ಲ ಉಪದ್ರವಗಳಿಗೂ ಮೂಲ.'

'ಹಾಗಾದರೆ ನನ್ನನ್ನು ಸಹ ಹೊರಮಾಡಿ ಬಿಡು. ನೀನೇ ಎತ್ತುಗಳನ್ನು ಗದ್ದೆಯಲ್ಲಿ ಕಟ್ಟಿ ಉತ್ತುಬಿಡು. ನಾನು ಸ್ವಲ್ಪ ಹುಕ್ಕಾ ಸೇದುತ್ತೇನೆ.'

'ನೀವು ಹೋಗಿ ಕಲ್ಲು ತಿರುಗಿಸಿ ಅಡುಗೆ ಮಾಡಿ. ನಾನು ಉಳ ಹೋಗುತ್ತೇನೆ.'

ವಿಷಾದವು ವಿನೋದದಲ್ಲಿ ಕೊನೆಗೊಂಡಿತು. ದುಃಖಕ್ಕೆ ಅದೇ ಔಷಧಿ. ದನಿಯಳು ಸ್ವಲ್ಪ ಪ್ರಸನ್ನಳಾಗಿ ರೂಪಳ ಕೆದರಿದ ತಲೆಗೂದಲು ಬಾಚತೊಡಗಿದಳು. ಹೋರಿರಾಮ ಧಾನ್ಯದಂಗಳದತ್ತ ಹೋದ.

ರಸಿಕನಾದ ವಸಂತನು ತನ್ನ ಸುಗಂಧಮಯ ಜೀವನದ ಸಾರವನ್ನು ಎಲ್ಲರಿಗೂ ಹಂಚುತ್ತಲಿದ್ದ. ಮರಗಳೆಲ್ಲ ಫಲಪುಷ್ಪಗಳಿಂದ ತುಂಬಲಾರಂಭಿಸಿದುವು. ಕೋಗಿಲೆಯು ಮಾಮರದೆಡೆಯಿಂದ ಹಾಡುತ್ತಲಿತ್ತು. ಸುಂದರ ಮೈನಾ ಹಕ್ಕಿಗಳು ಗುಂಪಾಗಿ ಮರದ ಕೊಂಬೆಗಳಲ್ಲಿ ಕೂತಿದ್ದುವು. ಇದನ್ನೆಲ್ಲ ನೋಡಿ ಹಳೆಯ ಹೋರಿರಾಮನಿಗೆ ಹೊಸ ಹುರುಪು ಮೂಡಿ ಬಂತು. ಅವನಿಗೆ ತಿಳಿಯದೆಯೇ ಬಾಯಿಂದ–'ಅಗೋ! ವಸಂತಮಾಸ ಬಂದಿದೆ!' ಎಂಬುದಾಗಿ ಗಾಯನವು ಹೊರಟಿತು.

ಮುಂದುಗಡೆಯಿಂದ ಸಾಹುಕಾರ್ತಿ ದುಲಾರಿ ಗುಲಾಬಿ ಬಣ್ಣದ ಸೀರೆ ಉಟ್ಟುಕೊಂಡು ಬರುತ್ತಿದ್ದಳು. ಕಾಲುಗಳಲ್ಲಿ ದಪ್ಪವಾದ ಬೆಳ್ಳಿಯ ಕಡಗಗಳಿದ್ದುವು. ಕುತ್ತಿಗೆಯಲ್ಲಿ ಚಿನ್ನದ ಸರ. ಮುಖ ಒಣಗಿದ್ದರೂ ಎದೆ ಅರಳಿಕೊಂಡೇ ಇತ್ತು. ಒಂದು ಕಾಲದಲ್ಲಿ– ಹೋರಿರಾಮ ಗದ್ದೆಯತ್ತ, ಧಾನ್ಯದಂಗಳದತ್ತ, ಹೋಗುವಾಗಲೆಲ್ಲ ಅವಳನ್ನು ಕೆಣಕುತ್ತಿದ್ದ – ಅವಳು ಅತ್ತಿಗೆಯಾಗಿದ್ದಳು; ಇವನು ಭಾವನಾಗಿದ್ದ. ಈ ಸಂಬಂಧದಿಂದಾಗಿ ಇಬ್ಬರೊಳಗೂ ವಿನೋದ ನಡೆಯುತ್ತಿತ್ತು. ಆದರೆ ಸಾಹುಕಾರರು ಸತ್ತಂದಿನಿಂದ ದುಲಾರಿ ಹೊರಬರುವುದನ್ನು ಬಿಟ್ಟುಬಿಟ್ಟಿದ್ದಳು. ದಿನವಿಡೀ ಅಂಗಡಿಯಲ್ಲೇ ಇದ್ದು, ಇಡೀ ಊರಿನ ಸುದ್ದಿಯನ್ನೆಲ್ಲ ಸಂಗ್ರಹಿಸುತ್ತಿದ್ದಳು. ಎಲ್ಲಿಯಾದರೂ ಪರಸ್ಪರ ಜಗಳವಾದರೆ ಮಧ್ಯಸ್ತಿಕೆ ಮಾಡಲು ಬಂದು ಸೇರುತ್ತಿದ್ದಳು. ಒಂದಾಣೆ ಬಡ್ಡಿಗಿಂತ ಕಡಮೆಯಲ್ಲಿ ಸಾಲ ಕೊಡುತ್ತಲೇ ಇದ್ದಿಲ್ಲ. ಕೆಲ ವೇಳೆ ಹೆಚ್ಚು ಬಡ್ಡಿಯ ಆಸೆಗೆ ಹೋಗಿ ಅಸಲು ಸಹ ಕಳೆದುಕೊಳ್ಳುತ್ತಿದ್ದಳು. ತೆಗೆದುಕೊಂಡ ರೂಪಾಯಿಗಳನ್ನು ತಿಂದು ಹಾಕಿ ಸುಮ್ಮನಿರುತ್ತಿದ್ದರು ಸಾಲ ತೆಗೆದುಕೊಂಡವರು. ಆದರೆ ಇಲ್ಲಿ ಬಡ್ಡಿ ಏರುತ್ತಲೇ ಹೋಗುತ್ತಿತ್ತು. ಪಾಪ! ಅವಳು ಹೇಗೆ ವಸೂಲು ಮಾಡಿಯಾಳು? ದಾವೆ ಮಾಡಿ ಕೋರ್ಟು ಕಚೇರಿಗಳಿಗೆ ಹೋಗಲಿಕ್ಕೆ ಅವಳಿಗೆ ಸಾಧ್ಯವೇ? ಅವಳಿಗೆ ಕೇವಲ ತನ್ನ ನಾಲಗೆಯದೇ ಬಲ. ಪ್ರಾಯ ಬೆಳೆದಂತೆ ನಾಲಗೆಯ ರಭಸವೂ ಏರುತ್ತ ಹೋಗುತ್ತಿತ್ತು. ಆ ನಾಲಗೆ ಚನ್ನಾಗಿ ಹರಿತವೂ ಇತ್ತು. ಆದರೆ ಈಗೀಗ ಅವಳು ಬೈದರೂ ಜನರು ನಗಾಡಿಕೊಂಡು ಹೇಳುತ್ತಿದ್ದರು – 'ಇಷ್ಟೆಲ್ಲ ರೂಪಾಯಿ ಒಟ್ಟುಮಾಡಿಕೊಂಡು ಏನು ಮಾಡುವೆಯಪ್ಪಾ? ಹೋಗುವಾಗ ಒಂದು ಚಿಕ್ಕಾಸೂ ಹಿಡಿದುಕೊಂಡು ಹೋಗಲಿಕ್ಕಾಗುವುದಿಲ್ಲ. ಈ ಬಡವರಿಗೆ ಕೊಟ್ಟುಬಿಟ್ಟು ಅವರಿಂದ

ಆಶೀರ್ವಾದ ಪಡೆದರೆ ಅದರಿಂದ ಪರಲೋಕದಲ್ಲಿ ಸುಖ ದೊರಕಬಹುದಲ್ಲವೆ? ' ಆದರೆ ದುಲಾರಿಗೆ ಪರಲೋಕದ ಹೆಸರೆತ್ತಿದೊಡನೆಯೇ ಕೋಪ ಬರುತ್ತಿತ್ತು.

ಹೋರಿರಾಮ ಮೆಲ್ಲನೆ ಪರಿಹಾಸ ಮಾಡಿದ – ' ಅತ್ತಿಗೇ, ಇಂದು ನೀನು ನಿಜವಾಗಿಯೂ ಯುವತಿಯೇ ಆಗಿರುವೆ.'

ಸಾಹುಕಾರ್ತಿ ಸ್ವಲ್ಪ ಉಬ್ಬಿಕೊಂಡು ಹೇಳಿದಳು – ' ಇಂದು ಮಂಗಳ ವಾರ. ಸುಮ್ಮನೆ ದೃಷ್ಟಿಹಾಕಬೇಡ. ಆದಕ್ಕೇ ನಾನು ಹೆಚ್ಚಿನ ಸಿಂಗಾರ ಮಾಡಿಕೊಳ್ಳುವುದಿಲ್ಲ. ಮನೆಯಿಂದ ಹೊರಟೊಡನೆಯೇ ಎಲ್ಲರೂ ಹೆಂಗುಸ ರನ್ನು ಕಾಣದೇ ಇದ್ದವರಂತೆ ಕಣ್ಣುಹಾಕುತ್ತಾರೆ. ಮೊನ್ನೆ ಪಟೇಶ್ವರೀ ಲಾಲರಿಗೆ ಹೇಳಿದ ಆ ಬಿಸಿ ಬಿಸಿ ಮಾತು ಎಂದಿಗೂ ಮರೆತುಹೋಗದು. '

ಹೋರಿರಾಮ ಅಲ್ಲೇ ನಿಂತ. ಎತ್ತುಗಳು ಮುಂದೆ ಸಾಗಿದ್ದುವು. ಆದರೂ ಅವನು ಇಂತಹ ಮನೋರಂಜಕ ಪ್ರಸಂಗವನ್ನು ಹೇಗೆ ಕೈಯಿಂದ ತಪ್ಪಿಹೋಗ ಬಿಟ್ಟಾನು ? ಹೀಗಾಗಿ ಹೇಳಿದ – ' ಅವರು ಈಗ ದೇವರ ದೊಡ್ಡ ಭಕ್ತರಾಗಿ ಹೋಗಿದ್ದಾರಲ್ಲ ! ಪ್ರತಿಹುಣ್ಣಿಮೆಗೂ ಮನೆಯಲ್ಲಿ ಸತ್ಯನಾರಾಯಣ ಪೂಜೆ ಮಾಡಿಸುತ್ತಾರೆ. ದಿನಕ್ಕೆರಡು ಸಲ ದೇವಾಲಯಕ್ಕೆ ಹೋಗುತ್ತಾರೆ. '

' ಅವರಂತಹರು ಮುದುಕರಾದ ಮೇಲೂ ಲಂಪಟರಾಗಿಯೇ ಇರುತ್ತಾರೆ. ಮಾಡಿದ ಕರ್ಮಕ್ಕೆ ಪ್ರಾಯಶ್ಚಿತ್ತ ನಡೆಸುವುದು ಬೇಡವೇ? ನಾನೀಗ ಮುದುಕಿ ಯಾಗುತ್ತಾ ಬಂದಿದ್ದೇನೆ. ನನ್ನೊಡನೆ ಎಂತಹ ಪರಿಹಾಸ ? '

' ಇಷ್ಟು ಬೇಗ ನೀನು ಹೇಗೆ ಮುದುಕಿಯಾಗಿ ಹೋದೆ ಅತ್ತಿಗೇ ? ನನ್ನ ಮಟ್ಟಿಗೆ ಈಗ ಸಹ . . .'

' ಬಾಯಿ ಮುಚ್ಚಿಕೋ. ಇಲ್ಲವಾದರೆ ಬೆಳಗ್ಗೆ ಎದ್ದು ಸಹಸ್ರನಾಮ ವಾದೀತು. ಮಗ ಪರದೇಶದಲ್ಲಿ ಸಂಪಾದನೆ ಮಾಡುತ್ತಿದ್ದಾನೆ. ಕರೆದು ಒಂದು ಊಟ ಸಹ ಹಾಕಲಿಲ್ಲ ನಮಗೆ. ಧರ್ಮಕ್ಕೆ ಮಾತ್ರ ನನ್ನನ್ನು ಅತ್ತಿಗೆ ಮಾಡಿಕೊಂಡಿದ್ದಾನೆ !'

' ನಿನ್ನಾಣೆ. ಅವನ ಒಂದು ಪೈ ಸಹ ಮುಟ್ಟಿಲ್ಲ. ಏನು ತಂದಿದ್ದಾನೋ– ಎಷ್ಟು ಖರ್ಚು ಮಾಡಿದ್ದಾನೋ – ಒಂದೂ ನನಗೆ ಗೊತ್ತಿಲ್ಲ. ನನ್ನ ಮಟ್ಟಿಗೆ ಒಂದು ಜೋಡು ಬಟ್ಟೆ, ಒಂದು ಮುಂಡಾಸು ಬಂದಿದೆ; ಅಷ್ಟೆ.'

' ಇರಲಿ; ಸಂಪಾದಿಸಲು ಕಲಿತಿದ್ದಾನಲ್ಲವೇ ? ಇಂದಲ್ಲದಿದ್ದರೆ ನಾಳೆ ತಂದಾನು. ದೇವರು ಅವನಿಗೆ ಒಳ್ಳೇದು ಮಾಡಲಿ. ನನ್ನ ಹಣ ಸಹ ಸ್ವಲ್ಪ

ಸ್ವಲ್ಪ ಕೊಡುತ್ತಾ ಇರು. ಸುಮ್ಮನಾದರೂ ಬಡ್ಡಿ ಏರುತ್ತ ಹೋಗುತ್ತಿದೆ.'

'ನಿನ್ನದು ಒಂದು ಕಾಸು ಸಹ ಬಾಕಿ ಇಡದೆ ಸಲಾಯಿಸಿ ಬಿಡುತ್ತೇನೆ–ಅತ್ತಿಗೇ. ಅಥವಾ ಒಂದು ವೇಳೆ ತಿಂದುಹಾಕಿದರೂ ಸಹ ಹೊರಗಿನವನಲ್ಲ ತಾನೇ–ಎಷ್ಟಾದರೂ!'

ಸಾಹುಕಾರ್ತಿಯು ಇಂತಹ ವಿನೋದಮಯ ಮಾತುಗಳಿಂದ ನಿಶ್ಯಸ್ತ್ರಳಾಗಿ ಹೋಗುತ್ತಿದ್ದಳು. ಅಂತು, ಮುಗುಳ್ನಗುತ್ತಾ ತನ್ನ ದಾರಿ ಹಿಡಿದಳು ಅವಳು. ಹೋರಿರಾಮ ಹಾರಿಕೊಂಡು ಎತ್ತುಗಳ ಬೆನ್ನು ಹಿಡಿದ.

ಇಡೀ ಊರಿನವರಿಗೆ ಧಾನ್ಯ ಸರಿಪಡಿಸುವುದಕ್ಕೆ ಒಂದೇ ಒಂದು ವಿಶಾಲ ಅಂಗಳವಿತ್ತು. ಅಲ್ಲಿ ಒಂದೆಡೆ ಹುಲ್ಲು ರಾಶಿಹಾಕುತ್ತಿದ್ದರು. ಮತ್ತೊಂದೆಡೆ ಧಾನ್ಯ ರಾಶಿಹಾಕುತ್ತಿದ್ದರು. ಬೇರೊಂದೆಡೆ ಧಾನ್ಯ ಅಳೆಯುತ್ತಿದ್ದರು. ಕ್ಷೌರಿಕ, ಬಡಗಿ, ಕಮ್ಮಾರ, ಪುರೋಹಿತ, ಬೇಡುವವನು–ಎಲ್ಲರೂ ತಮ್ಮತಮ್ಮ ಪಾಲು ಕೊಂಡುಹೋಗುವುದಕ್ಕಾಗಿ ಬಂದು ಸೇರಿದ್ದರು. ಒಂದು ಮರದಡಿಯಲ್ಲಿ ಜಿಂಗುರೀ ಸಿಂಹರು ಬೆಂಚಿನ ಮೇಲೆ ಕೂತುಕೊಂಡು ತಮ್ಮ ಸಾಲ ಮೂಲಗಳನ್ನು ವಸೂಲು ಮಾಡುತ್ತಿದ್ದರು. ಕೆಲವೆಲ್ಲ ವ್ಯಾಪಾರಿಗಳು ಸಹ ತಮ್ಮ ಹಳೆಯ ಬಾಕಿ ವಸೂಲಿಗಾಗಿ ಜಮೆಯಾಗಿದ್ದರು. ಅಂತು ಆ ವಿಶಾಲ ಧಾನ್ಯ-ದಂಗಳವು ಒಂದು ಸಂತೆಯೇ ಆಗಿತ್ತು. ಒಬ್ಬ ಮುದುಕಿಯು ವೀಳ್ಯದೆಲೆ ಮತ್ತು ಹುರಿಗಡಲೆ ಮಾರುತ್ತಿದ್ದಳು. ಮತ್ತೊಬ್ಬ ಮಿಠಾಯಿವಾಲ ಜಿಲೇಬಿ, ಹಲ್ವಾ ಮಾರುತ್ತಿದ್ದ. ಪಂಡಿತ ದಾತಾದೀನರು ಹೋರಿರಾಮನೊಡನೆ ಧಾನ್ಯ ಪಾಲು ಮಾಡಿಕೊಳ್ಳುವ ಕೆಲಸಕ್ಕಾಗಿ ಬಂದವರು ಜಿಂಗುರೀ ಸಿಂಹರೊಡನೆ ಬೆಂಚಿನ ಮೇಲೆ ಕೂತಿದ್ದರು.

ದಾತಾದೀನರು ಒಂದು ಚುಟುಕಿ ನಸ್ಯವನ್ನೇರಿಸಿ ಕೇಳಿದರು–'ಹಣದ ವಹಿವಾಟು ಮಾಡುವವರು ಬಡ್ಡಿಯ ದರ ಕಡಮೆ ಮಾಡಬೇಕೆಂದು ಸರಕಾರ ಹೇಳುತ್ತಿದೆಯಂತೆ! ಇಲ್ಲವಾದರೆ ಕೋರ್ಟಿನಲ್ಲಿ ಡಿಕ್ರಿ ಸಿಗಲಾರದಂತೆ! ಹೌದೇ?'

ಜಿಂಗುರೀ ಸಿಂಹರು ಬಾಯಿಯೊಳಗಿನ ವೀಳ್ಯದೆಲೆಯ ರಸ ಉಗುಳಿ ಹೇಳಿದರು–'ಆದರೆ ಒಂದು ಮಾತು ನಾನು ಹೇಳುತ್ತೇನೆ–ನಿಮಗೆ ಅಗತ್ಯ ಬಿದ್ದರೆ ನೂರು ಸಲ ನನ್ನ ಹತ್ತಿರ ಸಾಲ ಕೇಳಬರುವಿರಿ. ನಾನು ಹೇಳಿದ ಬಡ್ಡಿಯನ್ನು ಕೊಟ್ಟೇ ಕೊಡುವಿರಿ. ಬಡ ಜನರಿಗೆ ಸರಕಾರವೇ ಕಡಮೆ

ಬಡ್ಡಿಯಲ್ಲಿ ಸಾಲ ಕೊಡಿಸುವ ವ್ಯವಸ್ಥೆ ಮಾಡದಿದ್ದರೆ ಈ ಕಾನೂನಿನಿಂದ ನಮ ಗೇನೂ ತೊಂದರೆಯಿಲ್ಲ. ಲೆಕ್ಕದಲ್ಲಿ ಕಡಿಮೆ ಬರೆಸಿದರೂ ಸಾಲ ಕೊಡುವಾಗ ೨೫ ರೂಪಾಯಿ ಬಡ್ಡಿ ಬಾಬ್ತು ಕಳೆದೇ ಕೊಟ್ಟರೆ ಸರಿ. ಈ ವಿಚಾರದಲ್ಲಿ ಸರ ಕಾರವೇನು ಮಾಡೀತು ? '

'ಅದೇನೋ ಸರಿ. ಆದರೆ ಸರಕಾರಕ್ಕೂ ಈ ಉಪಾಯವೆಲ್ಲ ಗೊತ್ತಾಗದೆ ಹೋಗಲಿಕ್ಕಿಲ್ಲ. ಅದನ್ನು ನಿಲ್ಲಿಸಲಿಕ್ಕೆ ಏನಾದರೂ ಹಂಚಿಕೆ ನಡೆಸಲಿಕ್ಕೂ ಸಾಕು. ನೋಡಬೇಕು.'

'ಅದನ್ನು ನಿಲ್ಲಿಸಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ.'

'ಅಲ್ಲ. ಊರಿನ ಪಟೇಲರ ಅಥವಾ ಶಾನುಭಾಗರ ಸಾಕ್ಷಿ ಇಲ್ಲದೆ ಹಣ ಕೊಟ್ಟರೆ ಅದು ಸಿಂಧುವೇ ಅಲ್ಲ—ಎಂಬುದಾಗಿ ಸರಕಾರವು ಶರ್ತು ಹಾಕಿ ಬಿಟ್ಟರೆ! ಆಗೇನು ಮಾಡುವುದು ?'

'ಬಡ ಜನರಿಗೆ ತಾಪತ್ರಯ ಯಾವಾಗಲೂ ಇದ್ದೇ ಇದೆ. ಪಟೇಲ ಶಾನುಭಾಗರಿಗೆ ಕಾಲು ಹಿಡಿದು ಒಪ್ಪಿಸಿ ಅವನೇ ಬೇಕಾದರೆ ಕರೆದುಕೊಂಡು ಬರುತ್ತಾನೆ. ಅದೆಲ್ಲ ಅವನ ಜವಾಬ್ದಾರಿ. ನಾವು ಮಾತ್ರ ಕೊಡುವಾಗ ನಾಲ್ಕರಲ್ಲಿ ಒಂದಂಶ ಕಳೆದೇ ಕೊಟ್ಟರೆ ಸರಿ.'

'ಮತ್ತೆ ಎಲ್ಲಿಯಾದರೂ ಸಿಕ್ಕಿಬಿದ್ದರೆ—ಫೋರ್ಜರಿ ರಿಕಾರ್ಡು ಮಾಡಿ ದ್ದಕ್ಕೆ ಹದಿನಾಲ್ಕು ವರ್ಷ ಹೋಗಿ ಬರಬೇಕಾದೀತು.'

ಜಿಂಗುರೀ ಸಿಂಹರು ಜೋರಾಗಿ ನಗಾಡುತ್ತ ಹೇಳಿದರು—'ನೀವೇನು ಹೇಳುತ್ತಿದ್ದೀರಿ ಪಂಡಿತರೇ? ಹಾಗೆಲ್ಲ ಆದರೆ ಪ್ರಪಂಚ ನಡೆದೀತೇ ? ಕಾನೂನು, ನ್ಯಾಯ—ಎಲ್ಲ ಹಣದ ಮೇಲೆ ಹೊಂದಿಕೊಂಡಿದೆ. ಕಾನೂನು ಪ್ರಕಾರ—ಜಮೀನ್ದಾರರು ಒಕ್ಕಲುಗಳನ್ನು ಸತಾಯಿಸಬಾರದು, ಬಿಟ್ಟಿ ಕೆಲಸ ಮಾಡಿಸಬಾರದು—ಎಂದೆಲ್ಲ ಇದೆ. ಆದರೆ ನಡೆಯುತ್ತಿರುವುದೇನು ? ಹಾಗೆಯೇ, ಸಾಲ ಕೊಟ್ಟವರು ತಮ್ಮ ಅಸಾಮಿಗಳಿಗೆ ತೊಂದರೆ ಕೊಡಬಾರ ದೆಂದೂ ಇದೆ. ಆದರೆ ಇಲ್ಲಿ ಮೆಟ್ಟು—ಕತ್ತಿಗಳಿಂದಲೇ ವಹಿವಾಟು ನಡೆಯುವು ದಲ್ಲವೇ? ಇದೆಲ್ಲದಕ್ಕೂ ಕೋರ್ಟಿಗೆ ಹೋಗಿ ಸರಿಪಡಿಸಲಿಕ್ಕೆ ಯಾರಿಗಾದರೂ ಸಾಧ್ಯವಿದೆಯೇ ? ಅಥವಾ ಕೋರ್ಟು ಕಚೇರಿಯ ವ್ಯಾಪಾರವಾದರೂ ಧರ್ಮ ಕ್ಕಾಗುವುದೇ? ಅಲ್ಲಿಯ ಕಂಬ ಸಹ ಹಣ ಕೇಳುತ್ತಿರುತ್ತದೆ.'

ಇಷ್ಟು ಹೇಳಿ ಅಂಗಳಕ್ಕೆ ಒಂದು ಸುತ್ತು ಬಂದು ಜಿಂಗುರೀ ಸಿಂಹರು ಪುನಃ

ಬೆಂಚಿನ ಮೇಲೆ ಕೂತು ಹೇಳಿದರು – 'ಹೌದು ; ನಿಮ್ಮ ಮಾತಾದೀನನ ಮದುವೆ ವಿಚಾರವೇನಾಯಿತು ? ನಾನು ಹೇಳುವುದಿದ್ದರೆ ಅವನಿಗೆ ಮದುವೆ ಮಾಡಿಯೇ ಬಿಡಬೇಕು. ಹೀಗೇ ಇದ್ದರೆ ಬಹು ಕೆಟ್ಟ ಹೆಸರು ಬರುವುದಲ್ಲವೇ?'

ದಾತಾದೀನರಿಗೆ ಚೇಳು ಕಡಿದಂತಾಯಿತು. ಇವರ ಸೂಚನೆಯ ಗೂಢಾರ್ಥವೂ ತಿಳಿದುಹೋಯಿತು. ಹಾಗಾಗಿ ಸ್ವಲ್ಪ 'ಗರಂ' ಆಗಿ ಹೇಳಿದರು – 'ನಮ್ಮ ಹಿಂದುಗಡೆ ಯಾರು ಏನು ಬೇಕಾದರೂ ಬೊಗಳಲಿ. ನಮ್ಮ ಇದರಲ್ಲಿ ಏನಾದರೂ ಹೇಳಿದರೆ ಆತನ ಮುಖಕ್ಕೇ ಬೆಂಕಿ ಇಟ್ಟೇನು. ನಮ್ಮ ಹಾಗೆ ಯಾರಾದರೂ ನೇಮ ನಿಷ್ಠೆಯಲ್ಲಿರುವವರು ಇರಬಹುದೇ ? ಸರಿಯಾಗಿ ಸಂಧ್ಯಾವಂದನೆ ಮಾಡದವರು, ಸ್ವತಃ ಧರ್ಮ, ಕರ್ಮ – ಯಾವುದೂ ಇಲ್ಲದವರು, ಇತರರಿಗೆ ಬುದ್ಧಿ ಹೇಳುವುದೆಂದರೆ ಅರ್ಥವಿದೆಯೇ ? ತನ್ನ ಜೀವನದಲ್ಲಿ ಒಂದೇ ಒಂದು ಏಕಾದಶೀ ವ್ರತ ಮಾಡದವನು, ಸ್ನಾನ ಸಂಧ್ಯಾವಂದನೆ ಮಾಡದೇ ಊಟ ಮಾಡುವವನು, ನಮ್ಮನ್ನು ನೋಡಿ ನಗಾಡುವುದಂತೆ! ನಿಯಮಗಳನ್ನು ಕಾಪಾಡಿಕೊಳ್ಳಬೇಕಾದರೆ ತುಂಬಾ ಕಷ್ಟವಿದೆ. ನಾವು ಪೇಟೆಯಿಂದ ತಂದ ವಸ್ತುವನ್ನು ಬಾಯಿಗೆ ಹಾಕಿದ್ದಾಗಲಿ, ಅಥವಾ ಬೇರೆ ಜಾತಿಯವರ ಕೈಯ ನೀರು ಮುಟ್ಟಿದ್ದಾಗಲಿ, ಎಂದಾದರೂ ಇದೆಯೇ ? ಸಿಲಿಯಳನ್ನು ನಾವು ಮನೆಯ ಮೆಟ್ಟಲಿಗೆ ಕಾಲಿಡಬಿಡುವುದಿಲ್ಲ – ಗೊತ್ತೇ ? ಪಾತ್ರ ಪದಾರ್ಥ ಮುಟ್ಟುವುದಂತು ದೂರದ ಮಾತು. ನಾನೀಗ ಮಾತಾದೀನ ಮಾಡಿದ ಕೆಲಸ ಬಹಳ ಒಳ್ಳೆಯ ಕೆಲಸವೆಂದು ಹೇಳುವುದಲ್ಲ. ಆದರೂ ಒನ್ಮೆ ಒಂದು ಕೆಲಸ ವಾದ ಬಳಿಕ – ಆ ಹುಡುಗಿಯನ್ನು ಬಿಟ್ಟುಬಿಡುವುದು ಬಹಳ ನೀಚ ಕಾರ್ಯ. ನಾನೀ ವಿಚಾರದಲ್ಲಿ ಬೊಬ್ಬೆಹಾಕುತ್ತಲೇ ಇದ್ದೇನೆ. ಅದರಲ್ಲಿ ಮುಚ್ಚುಮರೆ ಏನು ? ಹಾಗೆ ವಿಚಾರಿಸಿ ನೋಡಿದರೆ ಸ್ತ್ರೀ ಜಾತಿಯೇ ಪವಿತ್ರ ಜಾತಿ.'

ದಾತಾದೀನರೂ ತಮ್ಮ ಪ್ರಾಯಕಾಲದಲ್ಲಿ ಒಳ್ಳೆಯ ರಸಿಕರಾಗಿಯೇ ಇದ್ದವರು. ಆದರೂ ತಮ್ಮ ವ್ರತ ನಿಯಮಗಳನ್ನು ಬಿಟ್ಟವರಲ್ಲ. ಮಾತಾದೀನನೂ ಸುಯೋಗ್ಯ ಪುತ್ರನಂತೆ ಅವರ ಪದಚಿಹ್ನೆಗಳಲ್ಲಿಯೇ ನಡೆಯುತ್ತಿದ್ದನು. ಧರ್ಮದ ಮೂಲವು ವ್ರತ, ನಿಯಮ, ಪುರಾಣ — ಇತ್ಯಾದಿಗಳಲ್ಲೇ ಅಲ್ಲವೇ ? ಹೀಗೆ ತಂದೆ ಮಗ ಇಬ್ಬರೂ ಧರ್ಮದ ಮೂಲವನ್ನು ಬಲವಾಗಿ ಹಿಡಿದುಕೊಂಡಿದ್ದ ಮೇಲೆ ಅವರು ಧರ್ಮಭ್ರಷ್ಟರೆಂದು ಹೇಳಲಿಕ್ಕೆ ಯಾರಿಗೆ ಧೈರ್ಯವಿದೆ ?

ಜಿಂಗುರೀ ಸಿಂಹರೂ ಸೋತವರಂತೆ – 'ನನಗೇನಪ್ಪ? ನಾನು ಕೇಳಿದ್ದನ್ನು ಹೇಳಿದೆ – ಅಷ್ಟೆ' ಎಂದರು.

ಬಳಿಕ ದಾತಾದೀನರು, ಬ್ರಹ್ಮವಂಶದಲ್ಲಿ ಹುಟ್ಟಿದವರು ಶೂದ್ರ ಸ್ತ್ರೀಯರ ಕೈಹಿಡಿದು ಉದ್ಧರಿಸಿದ ಅನೇಕ ವಿಚಾರಗಳನ್ನು ಮಹಾಭಾರತವೇ ಮೊದಲಾದ ಪುರಾಣಗಳ ಆಧಾರದಿಂದ ಸ್ಪಷ್ಟಪಡಿಸಿದರು. ಅವರಲ್ಲಿ ಹುಟ್ಟಿದ ಮಕ್ಕಳೂ ಬ್ರಾಹ್ಮಣರೇ ಆಗುತ್ತಾರೆ; ಇಂದಿನ ಬ್ರಾಹ್ಮಣರೆಲ್ಲ ಆ ಸಂತಾನ ಪರಂಪರೆಯಿಂದಲೇ ಬೆಳೆದು ಬಂದವರು; ಅಂತು ಈ ಪದ್ಧತಿಯು ಆದಿಕಾಲದಿಂದಲೇ ಬೆಳೆದು ಬಂದಿರುವ ಕಾರಣ ಇದೊಂದು ಲಜ್ಜಾವಹ ವಿಚಾರವೇ ಅಲ್ಲವೆಂದು ವಿವರಿಸಿ ಹೇಳಿದರು.

ಜಿಂಗುರೀ ಸಿಂಹರು ಅವರ ಅಪಾರ ಪಾಂಡಿತ್ಯ ವಿಚಾರದಲ್ಲಿ ಮುಗ್ಧರಾಗಿ ಹೇಳಿದರು – 'ಹಾಗಿದ್ದರೆ ಇಂದಿನ ಜನರೆಲ್ಲ ಸಮಾನ ಕುಲ, ಸಮಾನ ಜಾತಿ, ಎಂದು ಏಕೆ ಬೊಬ್ಬಿಡುತ್ತಾರೋ – ಗೊತ್ತಾಗುವುದಿಲ್ಲ.'

ಮತ್ತೊಂದು ಮರದಡಿಯಲ್ಲಿ ದಾತಾದೀನರ ಸ್ವಂತ ಧಾನ್ಯ ಸರಿಪಡಿಸುತ್ತಿದ್ದರು. ನಾಲ್ಕು ಎತ್ತುಗಳು ಧಾನ್ಯದ ಮೇಲೆ ತಿರುಗಾಡುತ್ತಿದ್ದುವು. ದನ್ನನು ಎತ್ತುಗಳನ್ನು ಅತ್ತ ಇತ್ತ ಓಡಿಸುತ್ತಿದ್ದನು. ಸಿಲಿಯಳು ಕಾಲುಗಳಿಂದ ಧಾನ್ಯವನ್ನು ರಾಶಿಮಾಡುತ್ತಿದ್ದಳು. ಮಾತಾದೀನನು ಅಲ್ಲೇ ಹತ್ತಿರ ಕೂತು ತನ್ನ ಲಾಠಿಗೆ ಎಣ್ಣೆ ಹಚ್ಚಿ ಪಾಲಿಶ್ ಮಾಡುತ್ತಿದ್ದ.

ಸಿಲಿಯಳು ಹೃಷ್ಟ ಪುಷ್ಟವಾಗಿ ಬೆಳೆದ, ಎಣ್ಣೆಗಪ್ಪು ಬಣ್ಣದ ಹುಡುಗಿ. ಅವಳು ವಿಶೇಷ ರೂಪವತಿಯಾಗಿರದಿದ್ದರೂ ಆಕರ್ಷಕಳಾಗಿದ್ದಳು. ಅವಳ ನಗುವಿನಲ್ಲಿ, ಅಂಗವಿಲಾಸಗಳಲ್ಲಿ, ಬೆಡಗು ಬಿನ್ನಾಣಗಳಲ್ಲಿ ಒಂದು ತರದ ಸಂತೋಷದ ಹುಚ್ಚು ನಲಿದಾಡುತ್ತಿತ್ತು. ಅವಳ ತಲೆಯಿಂದ ಕಾಲಿನ ತನಕ ಒಣ ಹುಲ್ಲಿನ ಧೂಳು ಹಿಡಿದಿತ್ತು. ಬೆವರಿದ ಮುಖ, ಕೆದರಿದ ತಲೆಗೂದಲು. ಆದರೂ ಓಡುತ್ತೋಡುತ್ತ ಧಾನ್ಯ ರಾಶಿಹಾಕುವಾಗ ಅವಳು ಆಟವಾಡುತ್ತಿದ್ದಾಳೋ ಎಂಬಂತೆ ತೋರುತ್ತಿತ್ತು.

ಆಗ ಮಾತಾದೀನ ಹೇಳಿದ – 'ಕತ್ತಲಾಗುವಾಗ ಸ್ವಲ್ಪವೂ ಕೆಲಸ ಬಾಕಿ ಉಳಿಯಬಾರದು ಸಿಲಿಯಾ. ನೀನು ಸೋತುಹೋದಾಗ ನಾನು ಬರುತ್ತೇನೆ. ಆಗದೇ?'

'ನೀವೇಕೆ ಬರುವುದು ಪಂಡಿತರೇ? ಕತ್ತಲಾಗುವುದರೊಳಗೆ ನಾನೇ

ಮುಗಿಸಿಬಿಡುವುದಿಲ್ಲವೇ ? ' – ಸಿಲಿಯುಳು ಪ್ರಸನ್ನಮುಖದಿಂದ ಹೇಳಿದಳು.

' ಒಳ್ಳೇದು. ಹಾಗಾದರೆ ನಾನು ಧಾನ್ಯವನ್ನು ಗೋರಿಕೊಂಡು ಹೋಗಿ ಮನೆಯಲ್ಲಿ ಹಾಕಿ ಬರಲೇ ? ನೀನೊಬ್ಬಳೇ ಏನೆಲ್ಲ ಮಾಡಬಲ್ಲೆ ? '

' ನೀವೇಕೆ ಗಾಬರಿಯಾಗುತ್ತೀರಿ ? ನೋಡಿ – ನಾನೊಬ್ಬಳೇ ಗೇರಿಯೂ ಹಾಕುತ್ತೇನೆ, ಮನೆಗೆ ಹೊತ್ತು ಹಾಕಿಯೂ ಬರುತ್ತೇನೆ. ಕತ್ತಲಾಗುವಾಗ ಇಲ್ಲಿ ಒಂದು ಕಾಳೂ ಉಳಿಯದಿದ್ದರೆ ಸಾಕಲ್ಲ ? '

ಒಂದೆಡೆಯಿಂದ ಸಾಹುಕಾರ್ತಿ ದುಲಾರಿ ತನ್ನ ಕಡ ಬಾಕಿಗಳನ್ನೆಲ್ಲ ವಸೂಲು ಮಾಡಿಕೊಂಡು ಬರುತ್ತಿದ್ದಳು. ಸಿಲಿಯುಳು ಆವಳ ಅಂಗಡಿಯಿಂದ ಹೋಳಿಯ ದಿನ ಎರಡು ಮುಕ್ಕಾಲಿನ ಕೆಂಪು ಬಣ್ಣ ತಂದಿದ್ದಳು. ಇಷ್ಟರ ತನಕ ಅವಳು ಆ ಹಣ ಕೊಟ್ಟಿದ್ದಿಲ್ಲ. ಹಾಗಾಗಿ ಸಿಲಿಯುಳ ಹತ್ತಿರ ಬಂದು ದುಲಾರಿ – ' ಏನೇ ಸಿಲಿಯಾ ? ಬಣ್ಣ ಕೊಂಡುಹೋಗಿ ತಿಂಗಳೊಂದಾಯಿತು. ಇನ್ನೂ ಅದರ ಹಣ ಕೊಟ್ಟಿಲ್ಲ. ಕೇಳಿದಾಗ ತಪ್ಪಿಸಿಕೊಂಡು ಹೋಗುತ್ತಿ. ಇಂದು ನನ್ನ ಹಣ ಕೊಡದೆ ಬಿಡಲಿಕ್ಕಿಲ್ಲ ' – ಎಂದಳು.

ಅಷ್ಟರಲ್ಲಿ ಮಾತಾದೀನನು ಮೆಲ್ಲನೆ ಅಲ್ಲಿಂದ ಜಾರಿದ. ಸಿಲಿಯುಳ ತನು ಮನಗಳೆರಡನ್ನೂ ಆತ ಸೆಳೆದುಕೊಂಡಿದ್ದರೂ ಪ್ರತಿಯಾಗಿ ಏನನ್ನೂ ಕೊಡಲು ಸಿದ್ಧನಿದ್ದಿಲ್ಲ. ಸಿಲಿಯುಳು ಅವನ ದೃಷ್ಟಿಯಲ್ಲಿ ಕೆಲಸ ಮಾಡಲಿಕ್ಕೆ ಬೇಕಾದ ಒಂದು ಯಂತ್ರವಾಗಿದ್ದಳು ಮಾತ್ರ. ಆಕೆಯು ಪ್ರೇಮ ಮಮತೆಗಳನ್ನು ಬಹಳ ಚಾತುರ್ಯದಿಂದ ಆತ ಕುಣಿದಾಡಿಸುತ್ತಿದ್ದ.

ಸಿಲಿಯುಳು ಕಣ್ಣೆತ್ತಿ ನೋಡುವಾಗ ಅಲ್ಲಿ ಮಾತಾದೀನನು ಇದ್ದಿಲ್ಲ. ಆದ್ದರಿಂದ ಹೇಳಿದಳು – ' ಸುಮ್ಮನೆ ಬೊಬ್ಬೆ ಹೊಡೆಯಬೇಡ. ಇಕೋ ತೆಗೆದುಕೋ – ಎರಡು ಮುಕ್ಕಾಲಿನ ಬದಲಾಗಿ, ನಾಲ್ಕು ಮುಕ್ಕಾಲಿನ ಧಾನ್ಯ. ನಾನೇನು– ಇಷ್ಟು ಬೇಗನೆ ಸತ್ತುಹೋಗಬಹುದೆಂದು ಎಣಿಸಿದೆಯಾ ನೀನು ? '

ಅವಳು ಅಂದಾಜಿನಿಂದ ಸಾಧಾರಣ ಒಂದು ಸೇರಿನಷ್ಟು ಧಾನ್ಯವನ್ನು ಸಾಹುಕಾರ್ತಿಯು ಸೆರಗಿನಲ್ಲಿ ಹಾಕಿದ್ದಳು ಮಾತ್ರ. ಅಷ್ಟರಲ್ಲೇ ಮಾತಾದೀನನು ಮರದ ಹಿಂಬದಿಯಲ್ಲಿ ಅಡಗಿದ್ದವನು ಎದ್ದು ಬಂದ. ಬೊಬ್ಬೆ ಹೊಡೆಯುತ್ತ ಸಾಹುಕಾರ್ತಿಯು ಸೆರಗು ಹಿಡಿದು – ' ಒಳ್ಳೆಯ ಮಾತಿನಿಂದ ಈ ಧಾನ್ಯವನ್ನು ಇಲ್ಲಿ ಹಾಕಿ ಹೋಗು. ಇದೇನು ದರೋಡೆ ನಡೆಸುವೆಯಾ ? ' ಎಂದ.

ಪುನಃ ಅವನು ತನ್ನ ಕೆಂಪಾದ ಕಣ್ಣುಗಳಿಂದ ಸಿಲಿಯುಳತ್ತ ನೋಡಿ –

'ನೀನು ಅವಳಿಗೇಕೆ ಧಾನ್ಯ ಕೊಟ್ಟೆ? ಯಾರ ಹತ್ತಿರ ಕೇಳಿ ಕೊಟ್ಟೆ? ನಮ್ಮ ಧಾನ್ಯವನ್ನು ಕೊಡಲು ನೀನು ಯಾರು?' – ಎಂದು ಗದರಿಸಿದ.

ಸಾಹುಕಾರ್ತಿ ಧಾನ್ಯವನ್ನು ಹಾಗೆಯೇ ರಾಶಿಗೆ ಹಿಂದೆ ಸುರಿದಳು. ಸಿಲಿಯಳೂ ಕಕ್ಕಾಬಿಕ್ಕಿಯಾಗಿ ಮಾತಾದೀನನ ಮುಖ ನೋಡತೊಡಗಿದಳು. ಯಾವ ಒಂದು ಕೊಂಬೆಯ ಮೇಲೆ ನಿಶ್ಚಿಂತಳಾಗಿ ಅವಳು ಕುಳಿತಿದ್ದಳೋ – ಅದು ಸಂಪೂರ್ಣ ಮುರಿದು ಹೋದ ಮೇಲೆ ಇನ್ನೇನು ಉಳಿಯಿತು? ಕಣ್ಣೀರು ತುಂಬಿ ದೀನಮುಖದಿಂದ ಸಾಹುಕಾರ್ತಿಗೆ ಅವಳು–'ನಿಮ್ಮ ಹಣ ಇನ್ನೊಮ್ಮೆ ಕೊಡುವೆನಮ್ಮಾ. ಈ ಸಲ ನನ್ನ ಮೇಲೆ ದಯೆ ತೋರಿಸಿಬಿಡು' – ಎಂದಳು.

ಸಾಹುಕಾರ್ತಿಯೂ ಅವಳನ್ನು ದಯಾರ್ದ್ರ ದೃಷ್ಟಿಯಿಂದ ನೋಡಿ, ಮಾತಾದೀನನತ್ತ ಧಿಕ್ಕಾರ ಸೂಚಕ ಮುಖವನ್ನು ಹೊರಳಿಸಿ ಹೋಗಿಬಿಟ್ಟಳು.

ಆದರೂ ಸಿಲಿಯಳು ತನ್ನ ಕೆಲಸವನ್ನು ಮುಂದುವರಿಸುತ್ತಲೇ ಇದ್ದಳು. ಅಂತು ಗರ್ವಭಂಗವಾದವಳಾಗಿ ಅವಳು – 'ನಿಮ್ಮ ವಸ್ತುವಿನಲ್ಲಿ ನನಗಾವ ಅಧಿಕಾರವೂ ಇಲ್ಲವೇ?' – ಎಂದು ಕೇಳಿದಳು.

ಮಾತಾದೀನನು ಕಣ್ಣು ಕೆರಳಿಸಿ ಹೇಳಿದ – 'ಇಲ್ಲ; ನಿನಗೆ ಯಾವ ಅಧಿಕಾರವೂ ಇಲ್ಲ. ಕೆಲಸ ಮಾಡಿದರೆ ತಿನ್ನುವುದಿಲ್ಲವೇ? ನಿನಗೆ ಬೇಕಾದ್ದನ್ನೆಲ್ಲ ತಿಂದು – ಕುಡಿದು, ಈಗ ಪುನಃ ಕೈಹಾಕಿ ತೆಗೆಯಲಿಕ್ಕೂ ಬಿಡಬೇಕೇ? ನಿನಗಿಲ್ಲಿ ಪೂರೈಸುವುದಿಲ್ಲವಾದರೆ ಎಲ್ಲಿ ಬೇಕಾದರೂ ಹೋಗಿ ಸೇರಿಕೋ. ಕೆಲಸಕ್ಕೆ ಜನ ಎಷ್ಟು ಬೇಕಾದರೂ ಸಿಗುತ್ತಾರೆ. ನೀನೇನೂ ಧರ್ಮಕ್ಕೆ ಕೆಲಸ ಮಾಡುವುದಲ್ಲ. ಅನ್ನ ಬಟ್ಟೆ ಕೊಡುವುದಿಲ್ಲವೇ?'

ತನ್ನ ಪಾಡು, ರೆಕ್ಕೆ ಕತ್ತರಿಸಿ ಗೂಡಿಂದ ಹೊರ ಬಿಟ್ಟ ಹಕ್ಕಿಯ ಪಾಡಿನಂತೆ ತೋರಿ ಬಂತು ಸಿಲಿಯಳಿಗೆ. ಅವಳು ಮಾತಾದೀನನನ್ನು ನೆಟ್ಟ ದೃಷ್ಟಿಯಿಂದ ನೋಡಿದಾಗ – ಅವಳ ದೃಷ್ಟಿಯಲ್ಲಿ ಹೆಚ್ಚಾಗಿದ್ದದ್ದು ವೇದನೆಯೋ ಗದರಿಕೆಯೋ – ಹೇಳಬರುವಂತಿದ್ದಿಲ್ಲ. ಆದರೆ ಅವಳ ಮನಸ್ಸು ಆ ಹಕ್ಕಿಯಂತೆಯೇ ಫಡ ಫಡ ಎನ್ನುತ್ತಿತ್ತು. ಪುನಃ ಆ ಎತ್ತರದ ಕೊಂಬೆಯ ಮೇಲೆ ಕೂತುಕೊಳ್ಳಲು, ವಿಶಾಲ ಆಕಾಶದಲ್ಲಿ ಹಾರಾಡಲು, ಮನಸ್ಸಿದ್ದರೂ ಈಗ ರೆಕ್ಕೆಯೇ ಇಲ್ಲವಾಗಿದೆ. ಎಂದ ಮೇಲೆ ಪುನಃ ಆ ಪಂಜರದಲ್ಲೇ ಹೋಗಿ ಸೇರದೆ ಬೇರೆ ಗತಿಯೇ ಇಲ್ಲ ಅವಳಿಗೆ. ಅಲ್ಲಿ – ಅನ್ನ ನೀರಿಲ್ಲದೆ ಪಂಜರದ ಸರಳಿಗೇ ತಲೆ ಬಡೆದು ಸಾಯಬೇಕಾಗುವುದೋ – ಏನೋ! ಸಿಲಿಯುಳು ಯೋಚಿಸಿ ನೋಡಿ

ದಳು–ಇನ್ನು ಈಗ ಬೇರೆ ಯಾವ ಗತಿ ಇದೆ? ಅವಳು ಅವನನ್ನು ಮದುವೆಯಾಗದಿದ್ದರೂ ಅವನ ಕೈ ಹಿಡಿದವಳಂತೆಯೇ ವ್ಯವಹರಿಸುತ್ತಿದ್ದಳು. ಇನ್ನು ಅವಳನ್ನು ಮಾತಾದೀನನು ಹೊಡೆದರೂ, ಕೊಚ್ಚಿದರೂ ಅವಳಿಗೆ ಬೇರೆ ಆಶ್ರಯವೇ ಇಲ್ಲ. ಆಗ ಅವಳಿಗೆ ಆ ದಿನದ ನೆನಪಾಯಿತು – ಆದಾಗಿ ಎರಡು ವರ್ಷವೂ ಪೂರ್ತಿಯಾಗಿದ್ದಿಲ್ಲ. ಮಾತಾದೀನನು ಆ ಸಂದರ್ಭದಲ್ಲಿ ಅವಳ ಕಾಲು ಹಿಡಿದು ಬೇಡಿಕೊಳ್ಳುತ್ತಿದ್ದ. ಪ್ರಾಣವಿರುವ ತನಕ ಮದುವೆ ಮಾಡಿಕೊಂಡವಳಂತೆಯೇ ನೋಡಿಕೊಳ್ಳುತ್ತೇನೆ – ಎಂಬುದಾಗಿ ಪ್ರತಿಜ್ಞೆ ಕೂಡ ಮಾಡಿ ಹೇಳಿದ್ದ. ಅದೇ ಮನುಷ್ಯನ ವ್ಯವಹಾರ -- ಇಂದಿಗೆ ಇಂತಹದು ! ಒಂದು ಮುಷ್ಟಿ ಧಾನ್ಯಕ್ಕಾಗಿ ಅವಳ ಮರ್ಯಾದೆಯನ್ನೇ ತೆಗೆದುಬಿಟ್ಟ ಅವನು !

ಅವಳು ಯಾವ ಉತ್ತರವನ್ನೂ ಕೊಡಲಿಲ್ಲ. ಕುತ್ತಿಗೆಯಲ್ಲಿ ಉಪ್ಪಿನಕಲ್ಲು ಸಿಕ್ಕಿಹೋದವಳಂತೆ ದುಃಖಿತಳಾಗಿ ಶಿಥಿಲವಾದ ಕೈಕಾಲುಗಳಿಂದ ಮತ್ತೂ ಕೆಲಸಮಾಡುತ್ತಲೇ ಇದ್ದಳು.

ಅದೇ ಸಮಯದಲ್ಲಿ ಸಿಲಿಯಳ ತಾಯಿ, ತಂದೆ, ಇಬ್ಬರು ಅಣ್ಣಂದಿರು, ಇನ್ನು ಬೇರೆ ಕೆಲವು ಸಮಗಾರರು – ಎಲ್ಲಿಂದ ಬಂದರೋ – ಏನೋ ! ಬಂದು ಮಾತಾದೀನನಿಗೆ ಮುತ್ತಿಗೆ ಹಾಕಿದರು. ತಾಯಿ ಬಂದವಳೇ ಸಿಲಿಯಳ ಕೈಯಲ್ಲಿದ್ದ ಬುಟ್ಟಿಯನ್ನು ಎಳೆದು ಬೀಸಾಡಿ ಬೈಯಲಿಕ್ಕೆ ತೊಡಗಿದಳು – 'ಬಜಾರಿ ರಂಡೇ, ನೀನು ಬರೇ ಕೂಲಿ ಕೆಲಸವನ್ನೇ ಮಾಡುವುದಿದ್ದರೆ ಮನೆಯ ಕೂಲಿ ಕೆಲಸ ಬಿಟ್ಟು ಇಲ್ಲೇಕೆ ಸಾಯಲು ಬಂದೆ ? ಇಡೀ ಜಾತಿಯ ಮರ್ಯಾದೆ ತೆಗೆದು ಇಲ್ಲಿ ಇರುವುದೇಕೆ ? ಬಾವಿಯಲ್ಲಿ ಬಿದ್ದಾದರೂ ಸಾಯಬಾರದೇ ?'

ಜಿಂಗುರೀ ಸಿಂಹರು ಮತ್ತು ದಾತಾದೀನರು ಗಲಭೆ ಕೇಳಿ ಓಡಿಕೊಂಡು ಬಂದರು. ಕೂಲಿಯಾಳುಗಳೆಲ್ಲ ಒಗ್ಗಟ್ಟಾಗಿ ಸುಮ್ಮನಿರುವುದನ್ನು ಕಂಡು ಸಿಲಿಯಳ ತಂದೆತಾಯಿಗಳನ್ನು ಶಾಂತಗೊಳಿಸತೊಡಗಿದರು. ಜಿಂಗುರೀ ಸಿಂಹರು ಸಿಲಿಯಳ ತಂದೆಯ ಹತ್ತಿರ ಹೋಗಿ – 'ಏನಿದು ವಿಚಾರ ? ಯಾಕಿದು ಜಗಳ ?' ಎಂದು ಕೇಳಿದರು.

ಸಿಲಿಯಳ ತಂದೆ ಹರಕನು ೭೦ ವರ್ಷದ ಮುದುಕ. ಕಪ್ಪಾದ ದೇಹ, ಒಣಗಿದ ಮುಖ. ಅವನು ತೀಕ್ಷ್ಣ ಸ್ವರದಿಂದ ಹೇಳಿದ – 'ಜಗಳವೇನಿಲ್ಲ ರಾಯರೇ. ಇಂದು ಮಾತಾದೀನನನ್ನು ನಾವು ಸಮಗಾರನನ್ನಾಗಿ ಮಾಡಿಯೇ ಬಿಡುತ್ತೇವೆ. ಇಲ್ಲವಾದರೆ ಅವನ ರಕ್ತ ಕಾರಿಸುತ್ತೇವೆ. ಸಿಲಿಯಾ – ಎಷ್ಟಾದರೂ

ಹುಡುಗಿ ಒಂದಲ್ಲ ಒಂದು ಮನೆಗೆ ಹೋಗುವವಳೇ. ಅವಳ ವಿಚಾರದಲ್ಲಿ ಹೇಳ ಲಿಕ್ಕೇನೂ ಇಲ್ಲ. ಆದರೆ ಅವಳ ಕೈಹಿಡಿದವನು ನಮ್ಮವನಾಗಿಯೇ ಇರಬೇಕು. ನಿಮಗೆ ನಮ್ಮನ್ನು ಬ್ರಾಹ್ಮಣರನ್ನಾಗಿಸಲಿಕ್ಕೆ ಸಾಧ್ಯವಿಲ್ಲವಾದರೂ, ನಾವು ನಿಮ್ಮನ್ನು ಸಮಗಾರರನ್ನಾಗಿ ಮಾಡಬಲ್ಲೆವು.'

ದಾತಾದೀನರು ತಮ್ಮ ದೊಣ್ಣೆಯನ್ನು ಬಲವಾಗಿ ನೆಲಕ್ಕೂರಿ ಹೇಳಿದರು– 'ಸ್ವಲ್ಪ ನಾಲಗೆಯನ್ನು ಹಿಡಿದುಕೊಂಡು ಮಾತಾಡು ಹರಕಾ. ಅಕೋ–ನಿನ್ನ ಮಗಳು ಅಲ್ಲಿ ನಿಂತಿದ್ದಾಳೆ. ಎಲ್ಲಿ ಬೇಕೋ ಅಲ್ಲಿಗೆ ಕರೆದುಕೊಂಡು ಹೋಗು. ನಾವು ಅವಳನ್ನು ಕಟ್ಟಿಹಾಕಿಲ್ಲ. ಕೆಲಸ ಮಾಡುತ್ತಿದ್ದಳು; ಮಜೂರಿ ತೆಗೆದು ಕೊಳ್ಳುತ್ತಿದ್ದಳು. ಇಲ್ಲಿ ಕೂಲಿಗೆ ಜನಕ್ಕೇನೂ ಕಡಮೆ ಇಲ್ಲ.'

ಸಿಲಿಯಳ ತಾಯಿ ಬೆರಳಿಂದ ಗದರಿಸುತ್ತಾ ಹೇಳಿದಳು–'ಭಲೆ, ಭಲೆ ಪಂಡಿತರೇ– ಇದು ಒಳ್ಳೆಯ ತೀರ್ಮಾನ ನಿಮ್ಮದು! ನಿಮ್ಮ ಮಗಳು ಒಬ್ಬ ಸಮಗಾರನೊಡನೆ ಹೋಗಿರುತ್ತಿದ್ದರೆ, ಆಗಲೂ ನೀವು ಇದೇ ರೀತಿಯ ಮಾತು ಆಡುತ್ತಿದ್ದಿರೇ? ನಾವು ಕೆಳ ಜಾತಿಯವರಾದ ಮಾತ್ರಕ್ಕೆ ನಮಗೆ ಮರ್ಯಾ ದೆಯೇ ಇಲ್ಲವೇ? ನಾವು ಸಿಲಿಯಳನ್ನು ಮಾತ್ರ ಕರೆದುಕೊಂಡು ಹೋಗುವು ದಲ್ಲ. ಅವಳ ಮಾನ ತೆಗೆದ ಮಾತಾದೀನನನ್ನೂ ಒಟ್ಟಿಗೇ ಕರೆದುಕೊಂಡು ಹೋಗುವೆವು. ನೀವು ದೊಡ್ಡ ಧರ್ಮಾತ್ಮರು! ಅವಳೊಡನೆ ಇರುತ್ತೀರಿ, ಮಲಗುತ್ತೀರಿ. ಆದರೆ ಅವಳ ಕೈಯ ನೀರು ಮಾತ್ರ ಕುಡಿಯುವುದಿಲ್ಲ– ಅಲ್ಲವೇ?'

ಹರಕನು ತನ್ನ ಜೊತೆಗಾರರಿಗೆ ಸನ್ನೆ ಮಾಡಿ ಹೇಳಿದ–'ಕೇಳಿದಿರಲ್ಲ ಇವರ ಮಾತನ್ನು? ಇನ್ನೂ ಏನನ್ನು ಸುಮ್ಮನೆ ನೋಡುತ್ತಿದ್ದೀರಿ?'

ಒಡನೆಯೇ ಆ ಪಂಗಡದಿಂದ ಇಬ್ಬರು ಯುವಕರು ಹಾರಿ ಮಾತಾದೀನನ ರಟ್ಟೆ ಹಿಡಿದು ಉರುಳಿಸಿದರು. ಮೂರನೆಯವನು ಹಾರಿ ಅವನ ಜನಿವಾರವನ್ನು ಎಳೆದು ಹರಿದುಹಾಕಿದ. ಅತ್ತಣಿಂದ ದಾತಾದೀನರೂ ಜಿಂಗುರೀ ಸಿಂಹರೂ ತಮ್ಮ ತಮ್ಮ ದೊಣ್ಣೆಗಳನ್ನು ಹಿಡಿದುಕೊಂಡು ಬರುವ ಮೊದಲೇ ಮತ್ತೊಬ್ಬ ಬಂದು ಮಾತಾದೀನನ ಬಾಯಿಯೊಳಗೆ ಮಾಂಸದ ತುಂಡೊಂದನ್ನು ಸೇರಿಸಿಯೇ ಬಿಟ್ಟ.

ಅಷ್ಟರಲ್ಲಿ ಆ ಅಂಗಳದಲ್ಲಿದ್ದ ಎಲ್ಲ ಜನರೂ ಬಂದು ಸೇರಿದರು. ಆದರೆ ಯಾರೂ ಈ ಧರ್ಮಕಂಟಕರ ಮೇಲೆ ಕೈಯೆತ್ತಲು ಸಿದ್ಧರಿದ್ದಿಲ್ಲ! ಮಾತಾ

ದೀನನ ಈ ವ್ಯವಹಾರವು ಯಾರಿಗೂ ಒಪ್ಪಿಗೆಯಾಗಿದ್ದಿಲ್ಲ. ಊರಿನ ಹುಡುಗಿಯರ ಮೇಲೆಲ್ಲ ಅವನು ಕಣ್ಣು ಹಾಕುತ್ತಲೇ ಇದ್ದ. ಆದ್ದರಿಂದ ಅವನ ಈ ದುರ್ಗತಿಯನ್ನು ನೋಡಿ ಎಲ್ಲರಿಗೂ ಸಂತೋಷವಾಯಿತು.

ಆಗ ಹೋರಿರಾಮನೊಬ್ಬನು ಮುಂದೆ ಬಂದು ಹೇಳಿದ–'ನೀನು ಮಾಡಿದ್ದು ಧಾರಾಳ ಆಯಿತು ಹರಕಾ. ಒಳ್ಳೇದಾಗಬೇಕೆಂದಿದ್ದರೆ, ನಡೆ ಬೇಗ ಇಲ್ಲಿಂದ.'

ಹರಕನು ಸ್ವಲ್ಪವೂ ಅಳುಕಿಲ್ಲದೆ ಉತ್ತರವಿತ್ತ–'ರಾಮಣ್ಣಾ. ನಿಮ್ಮ ಮನೆಯಲ್ಲಿ ಸಹ ಹುಡುಗಿಯರಿಲ್ಲವೇ? ಈ ರೀತಿಯಾದರೆ ನೀನೇನು ಮಾಡುತ್ತಿದ್ದೆ? ಹೀಗೆ ಊರ ಹುಡುಗಿಯರ ಮರ್ಯಾದೆ ತೆಗೆದರೆ ಇಲ್ಲಿ ಇರುವುದಾದರೂ ಹೇಗೆ?'

ಮರುಕ್ಷಣದಲ್ಲಿ ಸಂಪೂರ್ಣ ವಿಜಯವನ್ನು ಪಡೆದು ಆಕ್ರಮಣಕಾರರು ಹೊರಡಲನುವಾದರು. ಜನಮತ ಬದಲಾಗುವ ಮೊದಲೇ ಅಲ್ಲಿಂದ ಜಾರಿ ಬಿಡುವುದೊಳ್ಳೆಯದೆಂದು ಅವರು ನಿರ್ಧರಿಸಿದರು.

ಮಾತಾದೀನನು ನೆಲದ ಮೇಲೆ ಬಿದ್ದುಕೊಂಡು ಬೊಬ್ಬೆಹೊಡೆಯುತ್ತಿದ್ದ. ದಾತಾದೀನರು ಅವನಿಗೆ ಸಮಾಧಾನ ಹೇಳುತ್ತಾ ಗದರಿಸತೊಡಗಿದರು– 'ಒಬ್ಬೊಬ್ಬರನ್ನೇ ಐದೈದು ವರ್ಷದ ಪಟ್ಟಿಗೆ ಕಳುಹಿಸದಿದ್ದರೆ– ಮತ್ತೆ ಹೇಳು. ಐದೈದು ವರ್ಷ ಅವರಿಂದ ಕಲ್ಲು ಒಡೆಸದೆ ಬಿಟ್ಟೇನೇ?'

'ಅದಕ್ಕಾಗಿ ನಾವಾರೂ ಹೆದರುವವರಲ್ಲ. ಇಲ್ಲಿ ಸಹ ನಾವೇನು ನಿಮ್ಮ ಹಾಗೆ ಸುಮ್ಮನೆ ಕೂತು ತಿಂದು ತೇಗುತ್ತಿಲ್ಲ. ಇಲ್ಲಿಯೂ ಗೆಯ್ಯುತ್ತೇವೆ, ತಿನ್ನುತ್ತೇವೆ. ಅಲ್ಲಿಯೂ ಅಷ್ಟೇ'–ಹರಕನು ಅಲಕ್ಷ್ಯಭಾವದಿಂದ ಉತ್ತರಕೊಟ್ಟ.

ಮಾತಾದೀನನು ಬೊಬ್ಬೆ ಹೊಡೆದು ಹೊಡೆದು ಸೋತ ಮೇಲೆ ಸುಮ್ಮನೆ ಹೆಣದ ಹಾಗೆ ಬಿದ್ದುಕೊಂಡಿದ್ದ. ನೋಡುವಾಗ, ದುಃಖದಿಂದ ಬಾವಿಗೆ ಹಾರಲು ಸಿದ್ಧನಾಗಿದ್ದಾನೋ– ಎಂಬಂತೆ ತೋರುತ್ತಿದ್ದ. ಯಾವ ಮಾನ ಮರ್ಯಾದೆಯ ಆಧಾರದ ಮೇಲೆ ಅವನ ರಸಿಕತೆ, ಗರ್ವ, ಪುರುಷಾರ್ಥ– ಎಲ್ಲವೂ ನಡೆದುಕೊಂಡು ಬಂದಿತ್ತೋ ಅದೀಗ ಹಾಳಾಗಿ ಹೋಯಿತು. ಆ ಮಾಂಸದ ತುಂಡು ಅವನ ಬಾಯಿಯನ್ನು ಮಾತ್ರವೇ ಅಲ್ಲ, ಇಡೀ ದೇಹವನ್ನೇ ಅಪವಿತ್ರಗೊಳಿಸಿ ಬಿಟ್ಟಿತು. ಅವನ ಧರ್ಮದ ಸೂತ್ರವೇ ಕಡಿದು ಹೋದ ಬಳಿಕ ಹೇಳುವುದೇನನ್ನು? ಇನ್ನು ಎಷ್ಟು ಪ್ರಾಯಶ್ಚಿತ್ತ ನಡೆಸಿದರೂ, ಎಷ್ಟು ತೀರ್ಥ

ಯಾತ್ರೆಗೈದರೂ, ಆ ಸತ್ತುಹೋದ ಧರ್ಮವು ಪುನರುಜ್ಜೀವನಗೊಂಡೀತೇ? ಒಂದು ವೇಳೆ ಗುಟ್ಟಾಗಿ ನಡೆದುದಾದರೆ ಸುಮ್ಮನೆ ಮುಚ್ಚಿಕೊಂಡಿರಬಹುದಿತ್ತು. ಇದೀಗ ಎಲ್ಲರ ಇದಿರಲ್ಲಿ ಅವನ ಧರ್ಮವಿನಾಶ ನಡೆಯಿತು. ಇನ್ನು ತಲೆಯೆತ್ತಿ ನಡೆಯುವುದಾದರೂ ಹೇಗೆ? ಇನ್ನು ಮುಂದಕ್ಕೆ ಅವನ ಮನೆಯಲ್ಲೇ ಆತ ಅಸ್ಪೃಶ್ಯನಂತಾಗಬಹುದು! ಅವನ ಪ್ರೀತಿಯ ತಾಯಿಯೇ ಅವನನ್ನು ಆದರಿಸದಿರಬಹುದು. ಈಗ ಇಲ್ಲಿ ಸೇರಿದವರೆಲ್ಲ ಸುಮ್ಮನೆ ನಿಂತು ನೋಡಿದರೇ ವಿನಾ ಕಿರಿಬೆರಳು ಕೂಡಾ ಎತ್ತಲಿಲ್ಲವಲ್ಲಾ! ಅಷ್ಟಕ್ಕೂ ಧರ್ಮದ ಲೋಪವಾಗಿ ಹೋಯಿತಲ್ಲವೇ? ಈ ವೊದಲು ಅವನನ್ನು ನೋಡಿದೊಡನೆ ಕೈ ಎತ್ತಿ ವಂದಿಸುತ್ತಿದ್ದವರು ಇನ್ನು ಮುಂದೆ ಮುಖ ತಿರುಗಿಸಬಹುದಲ್ಲ! ಇನ್ನು ಮುಂದಕ್ಕೆ ಅವನು ಯಾವ ದೇವಾಲಯಕ್ಕೂ ಹೋಗಲಾರ. ಯಾವ ಪುಣ್ಯಕರ್ಮವನ್ನೂ ಮಾಡಿಸಲಾರ. ಇದೆಲ್ಲವೂ ಈ ಭಾಗ್ಯಹೀನ ಸಿಲಿಯಳಿಂದಾಗಿ ಅಲ್ಲವೇ?

ಸಿಲಿಯಳು ಎಲ್ಲಿ ಧಾನ್ಯದ ಕೆಲಸ ಮಾಡುತ್ತಿದ್ದಳೋ ಅಲ್ಲೇ ತಲೆ ತಗ್ಗಿಸಿ ಸುಮ್ಮನೆ ನಿಂತುಕೊಂಡಿದ್ದಳು. ಒಡನೆಯೇ ಅವಳ ತಾಯಿ ಬಂದು – 'ಏನು ಸುಮ್ಮನೆ ನಿಂತುಕೊಂಡಿರುವೆ? ನಡೆ ಮನೆಗೆ – ಒಳ್ಳೆಯ ಮಾತಿನಿಂದ. ಇಲ್ಲವಾದರೆ ಕೊಚ್ಚಿ ಕೊಚ್ಚಿ ಹಾಕಿಯೇನು. ವಂಶದ ಹೆಸರನ್ನೇ ಕೆಡಿಸಿಬಿಟ್ಟೆ. ಇನ್ನೇನೆಲ್ಲ ಆಗಬೇಕೆಂದಿರುವೆ?' – ಎಂದು ಗದರಿಸಿದಳು.

ಸಿಲಿಯಳು ಗೊಂಬೆಯಂತೆ ನಿಂತುಕೊಂಡೇ ಇದ್ದಳು. ತಾಯಿ, ತಂದೆ, ಅಣ್ಣಂದಿರು – ಎಲ್ಲರ ಮೇಲೂ ಅವಳಿಗೆ ಕೋಪವೇರಿಬಂದಿತ್ತು. ಅವಳ ವೈಯಕ್ತಿಕ ವಿಚಾರದಲ್ಲಿ ಇವರೇಕೆ ಕೈಹಾಕಬೇಕು? ಅವಳಿಗಿಷ್ಟ ಬಂದಂತೆ ಅವಳಿರುವಲ್ಲಿ ಅವರಿಗೆಲ್ಲ ಏನದರಿಂದ?

ಸ್ವಲ್ಪ ಸಮಯದ ವೊದಲು ಅವಳ ಮನಸ್ಸು ಮಾತಾದೀನನ ನಿಷ್ಠುರ ವ್ಯವಹಾರದಿಂದಾಗಿ ಬೇಸರಗೊಂಡಿತ್ತು. ಆದರೆ ಅವಳ ಮನೆಯವರ ಹಾಗೂ ಜಾತಿಯವರ ಈ ಅತ್ಯಾಚಾರವು ಆ ಬೇಸರವನ್ನು ಪ್ರಚಂಡ ಅನುರಾಗರೂಪಕ್ಕೇರಿಸಿ ಬಿಟ್ಟಿತ್ತು. ಹಾಗಾಗಿ ಅವಳು – 'ನಾನೆಲ್ಲಿಗೂ ಹೊರಡಲಾರೆ' – ಎಂದು ಗರ್ವದಿಂದ ಹೇಳಿದಳು.

'ನೀನು ಹೊರಡುವುದಿಲ್ಲವೇ?' – ಆಗ ಮುದುಕಿ ಕರ್ಕಶ ಸ್ವರದಿಂದ ಪುನಃ ಕೇಳಿದಳು.

' ಇಲ್ಲ. '

' ಒಳ್ಳೆಯ ಮಾತಿನಿಂದ ಹೊರಡು. '

' ಎಷ್ಟಕ್ಕೂ ಹೊರಡಲಾರೆ. '

ಒಡನೆಯೇ ಅವಳ ಇಬ್ಬರು ಸಹೋದರರೂ ರಟ್ಟೆ ಹಿಡಿದು ಎಳೆಯ ತೊಡಗಿದರು. ಸಿಲಿಯಾ ನೆಲದ ಮೇಲೆ ಬಿದ್ದಳು. ಆದರೂ ಅಣ್ಣಂದಿರು ಬಿಡಲಿಲ್ಲ; ಎಳೆಯುತ್ತಲೇ ಇದ್ದರು. ಅವಳ ಬಟ್ಟೆ ಹರಿದುಹೋಗಿ ಬೆನ್ನು ಕೈಗಳ ಚರ್ಮವು ಸುಲಿದು ಹೋಯಿತು. ಆದರೂ ಅವರೊಡನೆ ಹೊರಡಲು ಅವಳು ಒಪ್ಪಲಿಲ್ಲ.

ಆಗ ಹರಕನು ಬೇಸತ್ತು ಮಗಂದಿರೊಡನೆ ಹೇಳಿದ–' ಅವಳಿಗಷ್ಟು ಹಟ ವಿದ್ದರೆ ಬಿಟ್ಟುಬಿಡಿ. ಅವಳು ಸತ್ತೇ ಹೋದಳೆಂದು ತಿಳಿದುಕೊಳ್ಳುವಾ. ಎಲ್ಲಿ ಯಾದರೂ ಪುನಃ ನನ್ನ ಮನೆ ಬಾಗಿಲಿಗೆ ಬಂದರೆ ಅವಳ ರಕ್ತ ಕುಡಿದು ಬಿಟ್ಟೇನು. '

' ನಿನ್ನ ಮನೆ ಬಾಗಿಲಿಗೆ ಬಂದರೆ ರಕ್ತ ಕುಡಿದೇ ಬಿಡು ' – ಸಿಲಿಯಳೂ ಜೀವದಾಸೆ ಬಿಟ್ಟು ಹೇಳಿದಳು.

ಆಗ ಮುದಿ ತಾಯಿ ತಡೆಯಲಾರದ ಕೋಪದಿಂದ ಸಿಲಿಯಳಿಗೆ ಹಲವು ಏಟುಗಳನ್ನೇರಿಸಿದಳು. ಅಷ್ಟರಲ್ಲಿ ಹರಕನು ಬಂದು ಅವಳನ್ನು ತಡೆದು ಹೇಳಿದ – ' ದೊಡ್ಡ ಕಟುಕರವಳಂತೆ ಮಾಡಬೇಡ. ಇಂದು ಅವಳನ್ನು ಕೊಂದೇ ಹಾಕುವೆಯೇನು ? '

ಸಿಲಿಯಳು ತಂದೆಯ ಕಾಲುಗಳನ್ನು ಹಿಡಿದು ಅಳತೊಡಗಿದಳು – ' ನೀವೆಲ್ಲರೂ ಸೇರಿ ನನ್ನನ್ನು ಕೊಂದುಬಿಡಿ. ಅಮ್ಮಾ! ನೀನು ಇಷ್ಟೂ ದಯೆ ಇಲ್ಲದವಳೇ ? ಇದಕ್ಕಾಗಿಯೇ ನೀನು ಹಾಲು ಕೊಟ್ಟು ಸಲಹಿದ್ದು ? ಎಳೆತನ ದಲ್ಲೇ ನನ್ನ ಕುತ್ತಿಗೆಯನ್ನೇಕೆ ಹಿಸುಕಲಿಲ್ಲ? ನನಗಾಗಿ ಆ ಪಂಡಿತರನ್ನು ಸಹ ಭ್ರಷ್ಟಗೊಳಿಸಿದಿರಲ್ಲ ! ಅವರ ಧರ್ಮವನ್ನು ಕೆಡಿಸಿ ನಿಮಗೇನು ಲಾಭ ದೊರೆ ಯಿತು ? ಇನ್ನು ಮುಂದೆ ಅವರು ಸಹ ನನ್ನನ್ನು ನೋಡಲಾರರಲ್ಲ! ಅಂತು ಅವರು ನೋಡಲಿ, ನೋಡದಿರಲಿ – ನಾನಿರುವುದು ಅವರ ಹೆಸರು ಹೇಳಿಯೇ. ಅವರು ನನ್ನ ಹೊಟ್ಟೆಗೆ ಹಾಕಲಿ, ಹಾಕದಿರಲಿ–ಅಥವಾ ಕೊಂದೇ ಹಾಕಲಿ– ಏನಾದರೂ ಅವರನ್ನು ಬಿಟ್ಟಿರಲಾರೆ. ಇಷ್ಟೆಲ್ಲ ಕಷ್ಟವನ್ನವರಿಗೆ ಒದಗಿಸಿದ ಬಳಿಕವೂ ಅವರನ್ನು ಬಿಡುವುದೇ? ಒಮ್ಮೆ ಅವರ ಕೈಹಿಡಿದ ಮೇಲೆ ಸಾಯುವ

ತನಕವೂ ಅವರನ್ನು ಬಿಟ್ಟಿರಲಾರೆ. '

ಸೇರಿದವನೊಬ್ಬನೆಂದ – ' ಹಾಳಾಗಿ ಹೋಗಲಿ ಆ ರಂಡೆ. ಅವನಿನ್ನೂ ತನ್ನನ್ನು ನೋಡಿಕೊಂಡಿರುತ್ತಾನೆಂದು ಇವಳು ತಿಳಿದಿದ್ದಾಳೆ. ಇಂದೇ ಇವಳನ್ನು ಹೊಡೆದು ಹೊರ ಮಾಡುತ್ತಾನೋ – ಇಲ್ಲವೋ – ನೋಡಿಕೋ.'

ಅಷ್ಟರಲ್ಲಿ ಅಣ್ಣಂದಿರಿಗೂ ದಯೆ ತೋರಿ ಬಂತು. ಸಿಲಿಯಳನ್ನು ಅಲ್ಲೇ ಬಿಟ್ಟು ಎಲ್ಲರೂ ಹೊರಟರು. ಬಳಿಕ ಅವಳು ಮೆಲ್ಲನೆ ಎದ್ದು ಕೂತು ಮುಖ ಮುಚ್ಚಿ ಅಳತೊಡಗಿದಳು.

ದಾತಾದೀನರು ಜೇಡನ ಮೇಲಿನ ಕೋಪವನ್ನು ದಾಡಿಯ ಮೇಲೆ ತೆಗೆಯುವವರಂತೆ ಗದರಿಸತೊಡಗಿದರು – ' ಅವರೊಡನೆ ಏಕೆ ಹೊರಟುಹೋಗಲಿಲ್ಲ ಸಿಲಿಯಾ ? ಇನ್ನೇನೆಲ್ಲ ಆಗಬೇಕೆಂದು ಕಾದಿರುವೆ ? ನನ್ನ ಸರ್ವನಾಶ ಮಾಡಿದ ಬಳಿಕವೂ ನಿನ್ನ ಹೊಟ್ಟೆ ತುಂಬಲಿಲ್ಲವೇ ? '

ಸಿಲಿಯಳು ನೀರು ತುಂಬಿದ ಕಣ್ಣುಗಳಿಂದ ಅವರತ್ತ ನೋಡಿ ಹೇಳಿದಳು – ' ಅವರೊಡನೆ ಏಕೆ ಹೋಗಬೇಕು ? ಯಾರು ನನ್ನ ಕೈ ಹಿಡಿದಿದ್ದಾರೋ – ಅವರೊಡನೆಯೇ ಇರುತ್ತೇನೆ. '

' ನನ್ನ ಮನೆಯೊಳಗೆ ಕಾಲಿಟ್ಟರೆ ದೊಣ್ಣೆ ಹಿಡಿದೇನು ' – ಪಂಡಿತರು ಗದರಿಸಿದರು.

ಸಿಲಿಯಳೂ ಉದ್ದಂಡತೆಯಿಂದ ಉತ್ತರಿಸಿದಳು – " ಅವರು ' – ನನ್ನನ್ನು ಎಲ್ಲಿರಹೇಳುತ್ತಾರೋ ಅಲ್ಲೇ ಇರುತ್ತೇನೆ. ಮರದಡಿಯಲ್ಲಾಗಲಿ, ಅರಮನೆಯಲ್ಲಾಗಲಿ – ನನಗದರ ಯೋಚನೆ ಇಲ್ಲ. "

ಮಾತಾದೀನನು ಸ್ಮೃತಿ ಇಲ್ಲದವನಂತೆ ಬಿದ್ದುಕೊಂಡಿದ್ದ. ಹೊತ್ತು ಏರಿ ಬಂದಿತ್ತು. ತಲೆಯೆಲ್ಲ ಬೆಸರಿಹೋಗಿತ್ತು. ಆದರೂ ಅವನು ನಿಶ್ಚಲ ಭಾವದಿಂದ ಮೌನವಾಗಿಯೇ ಇದ್ದ.

ಥಕ್ಕನೆ ಅವನು ಎದ್ದು ತಂದೆಯೊಡನೆ ಕೇಳಿದ – ' ನನ್ನ ವಿಚಾರದಲ್ಲಿ ಈಗ ನೀನು ಏನು ಹೇಳುವೆ ಅಪ್ಪಾ ? '

ಪಂಡಿತರು ಅವನ ತಲೆಯ ಮೇಲೆ ಕೈ ಇಟ್ಟು ನಡುಗುವ ಸ್ವರದಿಂದ – ' ನಿನ್ನ ವಿಚಾರದಲ್ಲಿ ನಾನೇನು ಹೇಳಲಿ ಮಗನೇ ? ಹೋಗಿ ಸ್ನಾನ ಮಾಡಿ ಊಟ ಮುಗಿಸು. ಆ ಮೇಲೆ ಪಂಡಿತರೆಲ್ಲ ಹೇಗೆ ಹೇಳುತ್ತಾರೋ ಹಾಗೆ ಮಾಡಬೇಕು. ಆದರೆ ಒಂದು ಮಾತು – ಸಿಲಿಯಳನ್ನು ಬಿಟ್ಟೇ ಬಿಡಬೇಕಾ

ದೀತು ನೀನು ’ – ಎಂದರು.

‘ ನಾನಿನ್ನು ಎಂದಿಗೂ ಆವಳ ಮುಖಾವಲೋಕನ ಮಾಡಲಾರೆ. ಆದರೆ ಪ್ರಾಯಶ್ಚಿತ್ತವಾದ ಬಳಿಕ ಮತ್ತೇನೂ ದೋಷ ಉಳಿಯಲಾರದು ತಾನೆ? ’

‘ ಪ್ರಾಯಶ್ಚಿತ್ತವಾದ ಬಳಿಕ ಸ್ವಲ್ಪವೂ ದೋಷ ಉಳಿಯಲಾರದು. ’

‘ ಹಾಗಾದರೆ ಇಂದೇ ಪುರೋಹಿತರ ಹತ್ತಿರ ಹೋಗಿ ಕೇಳಿದರಾಗದೇ ? ’

‘ ಇಂದೇ ಹೋಗಿ ಕೇಳುತ್ತೇನೆ ಮಗನೇ. ’

‘ ಈ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲವೆಂದು ಪಂಡಿತರೆಲ್ಲ ಹೇಳಿಬಿಟ್ಟರೆ?’

‘ ಅವರು ಹೇಳಿದ ಹಾಗೇ ಆಗಬೇಕಲ್ಲವೇ ? ’

‘ ಹಾಗಾದರೆ ನೀವು ನನ್ನನ್ನು ಮನೆಯಿಂದ ಹೊರಮಾಡುವಿರೇ ? ’

ದಾತಾದೀನರು ಪುತ್ರಸ್ನೇಹದಿಂದ ವಿಹ್ವಲರಾಗಿ ಹೇಳಿದರು – ‘ ಅದು ಹೇಗಾದೀತು ಮಗನೇ ? ಹಣ ಹೋಗಲಿ, ಧರ್ಮ ಹೋಗಲಿ, ಮಾನ ಮರ್ಯಾದೆ ಹೋಗಲಿ – ಅಂತು ಏನು ಹೋದರೂ ನಿನ್ನನ್ನು ನಾನು ಬಿಡಲಾರೆ. ’

ಮಾತಾದೀನನು ಮೆಲ್ಲನೆ ಕೋಲನ್ನೂರಿಕೊಂಡು ತಂದೆಯ ಹಿಂದೆಯೇ ಮನೆಯತ್ತ ಹೋದ. ಸಿಲಿಯಳೂ ಎದ್ದು ಕುಂಟುತ್ತಾ ಅವರ ಹಿಂದೆಯೇ ಹೊರಟಳು.

ಮಾತಾದೀನನು ಹಿಂತಿರುಗಿ ನಿರ್ದಯತೆಯ ಸ್ವರದಿಂದ ಗದರಿಸಿದ – ‘ನನ್ನೊಡನೆ ನೀನು ಬರಬಾರದು. ನನಗೂ ನಿನಗೂ ಇನ್ನು ಯಾವ ಸಂಬಂಧವೂ ಇಲ್ಲ. ಇಷ್ಟು ಕಾಡಿಸಿದ ಬಳಿಕವೂ ನಿನ್ನ ಹೊಟ್ಟೆ ತುಂಬಲಿಲ್ಲವೇ? ’

ಆಗ ಸಿಲಿಯಳು ಧೈರ್ಯದಿಂದ ಮುಂದೆ ಬಂದು ಅವನ ರಟ್ಟೆ ಹಿಡಿದು ಹೇಳಿದಳು – ‘ ಏಕೆ ಯಾವ ಸಂಬಂಧವೂ ಇಲ್ಲ? ಈ ಊರಲ್ಲಿ ನಿನಗಿಂತಲೂ ಧನಿಕರೂ, ನಿನಗಿಂತಲೂ ಸುಂದರರೂ ಹಲವರಿದ್ದಾರೆ. ಆದರೂ ನಾನು ಅವರ ಕೈಹಿಡಿಯ ಹೋಗುವುದಿಲ್ಲ. ನಿನಗೀ ದುರ್ದಸೆ ಬಂದುದಾದರೂ ಯಾವುದ ರಿಂದಾಗಿ? ನಿನ್ನ ಕುತ್ತಿಗೆಯಲ್ಲಿರುವ ಆ ಹಗ್ಗವನ್ನು ನೀನು ಹರಿದುಹಾಕಲಿಕ್ಕೆ ಸಿದ್ಧನಿಲ್ಲ – ಅದರಿಂದಲ್ಲವೇ ? ಆದರೆ ನಾನು ಮಾತ್ರ ಎಷ್ಟಕ್ಕೂ ನಿನ್ನನ್ನು ಬಿಟ್ಟುಹೋಗಲಾರೆ. ಕೂಲಿ ಮಾಡುತ್ತೇನೆ, ಬಿಕ್ಕೆ ಬೇಡುತ್ತೇನೆ ; ಆದರೆ ಮಾತ್ರ ನಿನ್ನನ್ನು ಎಷ್ಟಕ್ಕೂ ಬಿಡಲಾರೆ. ’

ಇಷ್ಟು ಹೇಳಿ ಅವಳು ಮಾತಾದೀನನ ಕೈಬಿಟ್ಟು ಅಂಗಳಕ್ಕೆ ಬಂದು ಧಾನ್ಯದ ಕೆಲಸ ಮಾಡತೊಡಗಿದಳು. ಹೋರಿರಾಮನೂ ಅಲ್ಲೇ ಇನ್ನೊಂದು

ಬದಿಯಲ್ಲಿ ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ಅಷ್ಟರಲ್ಲಿ ದನಿಯಳು ಅವನನ್ನು ಊಟಕ್ಕೆ ಕರೆಯಬಂದಳು. ಹೋರಿರಾಮನು ಎತ್ತುಗಳನ್ನು ಒಂದು ಮರದಡಿಯಲ್ಲಿ ಕಟ್ಟಿ ಸ್ವಲ್ಪ ಹುಲ್ಲು ಹಾಕಿ – 'ನೀನು ಕೂಡಾ ಹೊರಡು ಸಿಲಿಯಾ. ಊಟ ಮುಗಿಸಿಕೊಂಡು ಬಾ. ನಿನ್ನ ಸೀರೆಯೆಲ್ಲ ರಕ್ತದಿಂದ ಒದ್ದೆಯಾಗಿದೆ. ಗಾಯಗಳೆಲ್ಲ ಜೋರಾಗದಂತೆ ನೋಡಿಕೋ. ನಿನ್ನ ಮನೆಯವರಂತು ಬಹು ನಿರ್ದಯರು' – ಎಂದ ಸಿಲಿಯಳಿಗೆ.

ಸಿಲಿಯಳು ಅವನತ್ತ ಕರುಣಾಮಯ ದೃಷ್ಟಿಯಿಂದ ನೋಡಿ ಹೇಳಿದಳು- 'ಇಲ್ಲಿ ಯಾರು ತಾನೆ ನಿರ್ದಯರಲ್ಲ? ಇಲ್ಲಿ ಯಾವ ದಯಾವಂತರನ್ನೂ ನಾನು ಕಂಡುದಿಲ್ಲ.'

'ಪಂಡಿತರೇನೆಂದರು?'

'ಮತ್ತೇನು? ನನಗೂ ಅವರಿಗೂ ಯಾವ ತರದ ಸಂಬಂಧವೂ ಇಲ್ಲವೆಂದು ಹೇಳಿದರು.'

'ಹಾಗೆ ಹೇಳಿದರೇ?'

'ಹಾಗೆ ಸಂಬಂಧ ಕಡಿದುಹಾಕಿದರೆ ಮುಖಕ್ಕೆ ತಾಗಿದ ಮಸಿ ಅಳಸಿ ಹೋದೀತೆಂದು ಅವರು ತಿಳಿದಿದ್ದಾರೆ. ಆದರೆ ಈ ಸಮಾಚಾರ ಇಡೀ ಊರಿಗೇ ತಿಳಿದಿದ್ದ ಮೇಲೆ ಅದನ್ನು ಮುಚ್ಚಿಟ್ಟು ಪ್ರಯೋಜನವೇನು? ನನಗೇನು?– ಕೆಲಸ ಮಾಡಿದರೆ ಎಲ್ಲಿಯೂ ಹೊಟ್ಟೆತುಂಬುವುದು. ಈ ವರೆಗೂ ಕೂಲಿ ಕೆಲಸ ಮಾಡುತ್ತಿದ್ದೆ. ಇನ್ನೂ ಮಾಡಬೇಕು, ಅಷ್ಟೆ. ಆದರೆ ಮಲಗಲಿಕ್ಕೊಂದಿಷ್ಟು ಜಾಗ ತಾನೆ? ಅದನ್ನೀಗ ಬೇಡಿದರೆ ನೀವೇ ಇಲ್ಲವೆಂದು ಹೇಳುವಿರೇ?'

ದನಿಯಳು ಆಗ ಮನ ಕರಗಿ – 'ಹಾಗೆ ಸ್ಥಳಕ್ಕೇನು ಕಡಿಮೆ? ಬಾ ನಮ್ಮ ಮನೆಗೆ. ನಾನಿದ್ದೇನೆ – ನೋಡುವಾ' – ಎಂದಳು.

ಹೋರಿರಾಮನು ಹೆದರಿದ ಸ್ವರದಿಂದ – 'ಈಗ ಕರೆಯುತ್ತಿ. ಆದರೆ ಪಂಡಿತರ ವಿಚಾರ ಗೊತ್ತಿದೆಯಲ್ಲವೇ?' – ಎಂದ.

ದನಿಯಳು ನಿರ್ಭೀತ ಸ್ವರದಿಂದ ಹೇಳಿದಳು – 'ಹೌದು. ಹಾಗೆ ಕೋಪ ಬಂದರೆ ರೊಟ್ಟಿ ಹಸಿ ಹಸಿಯೇ ತಿಂದಾರು. ಮತ್ತೇನು? ನಾವೇನು ಅವರ ಗುಲಾಮರಲ್ಲ. ಇವಳ ಮರ್ಯಾದೆ ತೆಗೆದರು. ಜಾತಿಯಿಂದ ಹೊರ ಮಾಡಿಸಿದರು. ಈಗ ಎಲ್ಲ ಆದ ಮೇಲೆ ನಿನಗೂ ನನಗೂ ಸಂಬಂಧವೇ ಇಲ್ಲವೆಂದು ಹೇಳಿಬಿಟ್ಟರು! ಇವರೂ ಒಬ್ಬ ಮನುಷ್ಯರೇ? ಆಗ – ಇವಳ ಬೆನ್ನು ಹಿಡಿಯು

ವಾಗ ಯೋಚನೆ ಬರಲಿಲ್ಲ. ಆಗ ಮಜಾ ಮಾಡಿದರು. ಈಗ ಮಾತ್ರ ಸಂಬಂಧವೇ ಕಡಿದುಹೋಯಿತಂತೆ! ಒಳ್ಳೆಯ ಕತೆ!'

'ದನಿಯಾ, ಸುಮ್ಮನೆ ಬೇಡದ ಕೆಲಸಕ್ಕೆ ಕೈಹಾಕಬೇಡ. ಸಿಲಿಯಳ ಮನೆಯವರೆಲ್ಲ ಸೇರಿ ಮಾತಾದೀನನ ಧರ್ಮವನ್ನೇ ಕೆಡಿಸಿಹಾಕಿದರಲ್ಲ! ಅದು ಸರಿಯೇ? ಸಿಲಿಯಳನ್ನು ಬೇಕಾದರೆ—ಎಳೆದುಕೊಂಡು ಹೋಗಲಿ; ಅಥವಾ ಮುದ್ದುಮಾಡಿಕೊಂಡು ಹೋಗಲಿ. ಎಷ್ಟಾದರೂ ಅವಳು ಮಗಳು. ಮಾತಾದೀನನ ಧರ್ಮವನ್ನೇಕೆ ಕೆಡಿಸಬೇಕು?'—ಹೋರಿರಾಮ ವಿನಯಪೂರ್ವಕ ಹೇಳಿದ.

ಆಗ ದನಿಯಳು ಗದರಿಸತೊಡಗಿದಳು—'ನೀವೊಬ್ಬ ದೊಡ್ಡ ಧರ್ಮಾತ್ಮರು! ಮನುಷ್ಯರೆಲ್ಲರೂ ಒಂದೇ. ಇವಳ ಧರ್ಮನಾಶ ಆ ಮಾತಾದೀನ ಮಾಡಿದ್ದು ಸರಿಯೇ? ಅದನ್ನಾರೂ ಕೇಳುವವರೇ ಇಲ್ಲ. ಆದರೆ ಈಗ ಮಾತಾದೀನನ ಧರ್ಮ ಹಾಳಾದರೆ—ಯಾರಿಗೂ ಸರಿದೋರುವುದಿಲ್ಲ. ಕೈಹಿಡಿದ ಮೇಲೆ ಇವಳನ್ನು ಕಾಪಾಡುವುದು ಬೇಡವೇ? ಅಂತು ಹರಕನು ಮಾಡಿದ ಕೆಲಸ ಸರಿಯಾದ ಕೆಲಸ! ಪೋಲಿಗಳಿಗೆ ಸಜೆ ಸಿಗಲೇಬೇಕು. ಸಿಲಿಯಾ—ಬಾ ನಮ್ಮ ಮನೆಗೆ. ನಿನ್ನ ಬೆನ್ನ ಚರ್ಮ ಸುಲಿಯುವ ವರೆಗೂ ಶಿಕ್ಷಿಸುವ ಆ ತಂದೆತಾಯಿಯರು ಎಷ್ಟು ನಿರ್ದಯರಪ್ಪಾ! ನೀವು ಹೋಗಿ ಸೋನೆಯನ್ನಿಲ್ಲಿ ಕಳುಹಿಸಿ. ನಾನು ಇವಳನ್ನು ಕರೆದುಕೊಂಡು ಬರುತ್ತೇನೆ.'

ಹೋರಿರಾಮ ಮನೆಯತ್ತ ಹೊರಟ. ಸಿಲಿಯಳು ದನಿಯಳ ಕಾಲ ಮೇಲೆ ಬಿದ್ದು ಅಳತೊಡಗಿದಳು.

೧೯

ಸೋನೆಗೆ ೧೭ನೆಯ ವರ್ಷ ಆರಂಭವಾದ್ದರಿಂದ ಈ ಸಲ ಅವಳ ಮದುವೆಯಾಗುವುದು ಅಗತ್ಯವಾಗಿತ್ತು. ಹೋರಿರಾಮನು ಕಳೆದ ಎರಡು ವರ್ಷಗಳಿಂದ ಆ ಯೋಚನೆಯಲ್ಲೇ ಇದ್ದ. ಆದರೆ ಕೈ ಬರಿದಾಗಿದ್ದ ಕಾರಣ ಯಾವುದೂ ಮುಂದುವರಿಯುತ್ತಿರಲಿಲ್ಲ. ಆದರೆ ಈ ಸಲ ಏನೇ ಆಗಲಿ—ಅವಳ ಮದುವೆ ಮಾಡಿಯೇ ಬಿಡಬೇಕು; ಸಾಲ ಮಾಡಿಯಾಗಲಿ, ಮನೆ ಒತ್ತೆ

ಫಾಕಿಯಾಗಲಿ – ಕೆಲಸವಾಗದೆ ಉಪಾಯವೇ ಇಲ್ಲ. ಬರೇ ಬಾಯಿಮಾತಿನಿಂದ ಆಗುವುದಿದ್ದರೆ ಎಂದೋ ಮದುವೆಯಾಗಿ ಹೋಗುತ್ತಿತ್ತು. ಅದು ಸಾಧ್ಯವಿಲ್ಲ. ಹಾಗಾಗಿ ಆದಷ್ಟು ಸೂಕ್ಷ್ಮ ರೀತಿಯಲ್ಲಿ ಮುಗಿಸಿಬಿಡಬೇಕೆಂದು ಹೋರಿರಾಮನ ಆಸೆಯಾಗಿತ್ತು. ಆದರೆ ದನಿಯಳು – ಎಷ್ಟೇ ಕೈಗಿಡ್ಡ ಮಾಡಿದರೂ ೨೦೦ – ೨೫೦ ಇಲ್ಲದೆ ಆಗಲಿಕ್ಕೇ ಇಲ್ಲವೆಂದು ಹೇಳುತ್ತಿದ್ದಳು. ಅದೂ ಅಲ್ಲದೆ, ಜುನಿಯಳ ಸಂಬಂಧದಿಂದಾಗಿ ಜಾತಿಕಟ್ಟಿನಲ್ಲಿ ಇವರ ಗೌರವ ಸ್ವಲ್ಪ ಇಳಿದುಹೋಗಿತ್ತು. ಆದರಿಂದಾಗಿ ೧೦೦ – ೨೦೦ ಕೊಡದೆ ಯಾವ ಕುಲೀನ ವರನೂ ಬರುವಂತಿದ್ದಿಲ್ಲ. ಕಳೆದ ವರ್ಷದ ಬೆಳೆಯಲ್ಲೂ ಹೆಚ್ಚಿಗೇನೂ ಬಂದಿದ್ದಿಲ್ಲ. ಪಂಡಿತರೊಡನೆ ಪಾಲಿನಲ್ಲಿ ಬೇಸಾಯವೇನೋ ಆಗಿತ್ತು. ಆದರೆ ಬೀಜ, ಮಜೂರಿ, ಹಾಗೆ, ಹೀಗೆ ಎಂದು ಎಲ್ಲ ತೆಗೆದಾದ ಮೇಲೆ ಇವನಿಗೆ ಕಾಲಂಶವೂ ಬಂದಿದ್ದಿಲ್ಲ. ಹಾಗೆ ಬಂದುದೂ ಕಂದಾಯದ ಹಣ ಕೊಡುವಾಗ ಬರಿದಾಗಿ ಹೋಯಿತು. ಕಬ್ಬಿನ ಬೆಳೆಯೂ ಅಷ್ಟು ಒಳ್ಳೇದಾಗಿದ್ದಿಲ್ಲ. ಸೆಣಬು ಹುಳಿ ಜಾಸ್ತಿಯಾಗಿ ಕೆಟ್ಟುಹೋಗಿತ್ತು. ಆದರೆ ಈ ಸಲದ ಬೆಳೆ ತಕ್ಕಮಟ್ಟಿಗೆ ಚನ್ನಾಗಿದೆ. ಕಬ್ಬೂ ಚಿಂತೆ ಇಲ್ಲ. ಕಷ್ಟದಿಂದ ೨೦೦–೩೦೦ ಕೈಗೆ ಬಂದರೆ ಕನ್ಯಾ ಋಣದಿಂದ ಮುಕ್ತನಾಗಿಬಿಡಬೇಕೆಂದು ಅವನು ಯೋಚಿಸಿದ್ದ.

ಆದರೆ ಗೋಬರ ನೂರು ರೂಪಾಯಿಯ ಸಹಾಯವನ್ನಾದರೂ ಮಾಡಿದ್ದರೆ ಉಳಿದುದನ್ನು ಹೇಗಾದರೂ ಮಾಡಬಹುದಿತ್ತು. ಇತ್ತೀಚೆ ಜಿಂಗುರೀ ಸಿಂಹರು ಮತ್ತು ಮಂಗಾರಾಮರು ಹೆಚ್ಚು ಜೋರು ಮಾಡುತ್ತಿದ್ದಿಲ್ಲ. ಗೋಬರ ಪರವೂರಲ್ಲಿ ಸಂಪಾದನೆ ಮಾಡುತ್ತಿದ್ದಾನಾದ್ದರಿಂದ ಅವರ ಹಣ ಮುಳುಗಿಹೋಗಲಾರದೆಂದು ಅವರು ಎಣಿಸಿರಬೇಕು.

ಒಂದು ದಿನ ಹೋರಿರಾಮ ಗೋಬರನ ಹತ್ತಿರ ೨–೩ ದಿನಗಳ ಮಟ್ಟಿಗೆ ಹೋಗಿ ಬರಬೇಕೆಂದು ಯೋಚಿಸಿದ. ಆದರೆ ದನಿಯಳು ಗೋಬರನ ಆ ಕೆಲ ಮಾತುಗಳನ್ನು ಇನ್ನೂ ಮರೆತಿದ್ದಿಲ್ಲ. ಗೋಬರನಿಂದ ಒಂದು ಕಾಸು ಸಹ ತೆಗೆದುಕೊಳ್ಳಬಾರದೆಂದು ಅವಳ ಹಟವಾಗಿತ್ತು.

ಆಗ ಹೋರಿರಾಮನೆಂದ – 'ಹಾಗಿದ್ದರೆ ಕೆಲಸವೆಂತು ನಡೆಯುವುದು, ಹೇಳು ನೋಡುವಾ ?'

'ಗೋಬರನು ಪರ ಊರಿಗೆ ಹೋಗದಿರುತ್ತಿದ್ದರೆ ನೀವೇನು ಮಾಡುತ್ತಿದ್ದಿರಿ? ಅದನ್ನೇ ಈಗ ಮಾಡಿ' – ತಲೆಯಾಡಿಸುತ್ತಾ ದನಿಯಳೆಂದಳು.

ಹೋರಿರಾಮನ ನಾಲಗೆ ಕಟ್ಟಿಹೋಯಿತು. ಅವನು ಒಂದು ಕ್ಷಣ ಯೋಚಿಸಿ ಕೇಳಿದ – 'ಅದೇ ನಾನೂ ಕೇಳುತ್ತಿರುವುದು. ಬೇರೇನು ಮಾಡಲು ಸಾಧ್ಯವಿದೆ ? ನೀನೇ ಹೇಳು ನೋಡುವಾ ?'

'ಅದನ್ನು ಯೋಚಿಸುವುದು ಗಂಡುಸರ ಕರ್ತವ್ಯ.'

ಹೋರಿರಾಮನ ಹತ್ತಿರವೂ ಉತ್ತರ ತಯಾರಾಗಿತ್ತು – 'ನಾನಿಲ್ಲದಿರು ತ್ತಿದ್ದರೆ, ನೀನೊಬ್ಬಳೇ ಆಗಿರುತ್ತಿದ್ದರೆ – ಆಗೇನು ಮಾಡುತ್ತಿದ್ದೆ ? ಅದನ್ನು ಹೇಳು ನೋಡುವಾ !'

ದನಿಯಳು ಆಗ ತಿರಸ್ಕಾರಯುಕ್ತ ದೃಷ್ಟಿಯಿಂದ ನೋಡಿ – "ಆಗ ನಾನು ಬರೇ 'ಕುಶ-ಕನ್ಯೆ' ಕೊಡುತ್ತಿದ್ದರೂ ಯಾರೂ ಏನೂ ಹೇಳುತ್ತಿದ್ದಿಲ್ಲ. ನಗಾಡುತ್ತಲೂ ಇದ್ದಿಲ್ಲ" – ಎಂದಳು.

ಬರೇ 'ಕುಶ-ಕನ್ಯಾದಾನ' ಹೋರಿರಾಮನೂ ಮಾಡಬಹುದಿತ್ತು. ಅದ ರಲ್ಲೇ ಅವನ ಕ್ಷೇಮವೂ ಅಡಗಿತ್ತು. ಆದರೂ ಕುಲಮರ್ಯಾದೆ ಹೇಗೆ ಬಿಟ್ಟುಕೊಡಲು ಸಾಧ್ಯ ? ಅವನ ತಂಗಿಯಂದಿರಿಗೆ ಮದುವೆ ಮಾಡಿದಾಗ ೩೦೦–೪೦೦ ಮಂದಿ ದಿಬ್ಬಣದಲ್ಲೇ ಬಂದಿದ್ದರು. ಒಳ್ಳೆಯ ವರದಕ್ಷಿಣೆ ಸಹ ಕೊಡಲಾಗಿತ್ತು. ನರ್ತನ, ಗಾಯನ, ಆನೆ, ಕುದುರೆ – ಎಲ್ಲವೂ ಇತ್ತು. ಇಂದು ಸಹ ಅವರ ಜಾತಿಕಟ್ಟಿನಲ್ಲಿ ಅವನಿಗೊಂದು ಸ್ಥಾನವಿತ್ತು. ಹತ್ತಾರು ಗ್ರಾಮದ ಜನರನ್ನು ಅವನು ತಿಳಿದಿದ್ದ. ಹಾಗಿರುತ್ತಾ ಬರೇ ಕುಶಕನ್ಯಾದಾನ ಮಾಡಿ ಹೇಗೆ ತಾನೇ ಆತ ಮುಖ ತೋರಿಸಿಯಾನು ? ಅಂತಹ ಅಲ್ಪ ಕೆಲಸ ಮಾಡುವುದಕ್ಕಿಂತ ಸಾಯುವುದು ಎಷ್ಟೋ ಉತ್ತಮವಾಗಿತ್ತು. ಅವನಿಗೆ ನಾಲ್ಕಾರು ಎಕರೆ ಭೂಮಿ ಇದೆ; ತೋಟ ಕಾಡುಗಳಿವೆ. ಒಂದು ಎಕರೆ ಭೂಮಿಯ ಹಕ್ಕು ಮಾರಿದರೂ ಅವನಿಗೆ ೨೦೦–೩೦೦ ಸಿಕ್ಕೀತು. ಆದರೆ ರೈತ ನಿಗೆ ಭೂಮಿಗಿಂತಲೂ ಪ್ರಿಯವಾದ ವಸ್ತು ಬೇರೆ ಇದ್ದೀತೇ ? ಕುಲ ಮರ್ಯಾ ದೆಗಿಂತಲೂ ಪ್ರೀತಿಯದು ಅದು. ಅದು ಕೂಡಾ ಅವನ ಹತ್ತಿರ ಇರುವ ಭೂಮಿ ಬಹು ವಿಶಾಲವಾದುದಲ್ಲ. ಇದ್ದುದನ್ನು ಮಾರಿಬಿಟ್ಟರೆ – ಆ ಮೇಲೆ ?

ಈ ಜಂಜಾಟದಲ್ಲೇ ಹಲವು ದಿನಗಳುರುಳಿದವು. ಆದರೆ ಆತನು ಯಾವ ನಿರ್ಣಯವನ್ನೂ ಮಾಡದಾದನು.

ದಸರೆಯ ಬಿಡುವು ಬಂದಿತು. ಜಿಂಗುರೀಸಿಂಹರ ನೋಖೇರಾಮರ ಮತ್ತು ಪಟೇಶ್ವರೀಲಾಲರ ಮಕ್ಕಳು ಶಾಲೆಗೆ ಬಿಡುವಾದ್ದರಿಂದ ಪಟ್ಟಣದಿಂದ ಊರಿಗೆ

ಬಂದಿದ್ದರು. ಆ ಮೂವರೂ ಇಂಗ್ಲಿಶ್ ಓದುತ್ತಿದ್ದರು. ಪ್ರಾಯ ೨೦ ವರ್ಷವಾಗಿದ್ದರೂ ಕಾಲೇಜಿನ ಹತ್ತಿರ ಸಹ ಅವರು ಹೋಗಿದ್ದಿಲ್ಲ. ಒಂದೊಂದು ಕ್ಲಾಸಿನಲ್ಲೂ ೨-೩ ಸಲ ಓದುತ್ತಿದ್ದರು. ಅವರಿಗೆ ಮದುವೆಯೂ ಆಗಿಹೋಗಿತ್ತು. ಪಟೇಶ್ವರೀಲಾಲರ ಸುಪುತ್ರ ಬಿಂದುಸಾರ ಒಂದು ಮಗುವಿನ ತಂದೆ ಸಹ ಆಗಿದ್ದ. ಆ ಮೂವರೂ ದಿನವಿಡೀ ಭಂಗಿ ಸೇದಿ, ಇಸ್ಪೇಟ್ ಆಡಿ ಇಷ್ಟಬಂದಂತೆ ತಿರುಗುತ್ತಿದ್ದರು. ಎಷ್ಟೋ ಸಲ ಹೋರಿರಾಮನ ಮನೆಯ ಬಳಿಗೆ ಕಣ್ಣುಹಾಕುತ್ತ ಅತ್ತ ಇತ್ತ ತಿರುಗಾಡುತ್ತಿದ್ದರು. ಆಗಲೇ ಸೋನೆಯು ಸಹ ಏನಾದರೊಂದು ನೆವದಿಂದ ಹೊರಬಂದು ಬಾಗಿಲ ಬಳಿ ನಿಂತು ನೋಡುತ್ತಿದ್ದಳು. ಈ ವ್ಯವಹಾರಗಳೆಲ್ಲ ಹೋರಿರಾಮನಿಗೂ ತಿಳಿದುಹೋಯಿತು.

ಒಂದು ದಿನ ಹೋರಿರಾಮ ಮತ್ತು ಸೋನೆ ಒಟ್ಟಾಗಿ ಕೆರೆಯಿಂದ ಗದ್ದೆಗೆ ನೀರು ಹರಿಸುತ್ತಿದ್ದರು. ಆ ಕೆರೆಗೇ ಆ ಮೂವರೂ ಸ್ನಾನಕ್ಕೆ ಬಂದು ಸೇರಿದರು. ಇದನ್ನು ನೋಡಿದೊಡನೆ ಹೋರಿರಾಮನ ರಕ್ತ ಕುದಿಯತೊಡಗಿತು. ಆದರೂ ಸುಮ್ಮನೇ ಇದ್ದ.

ಆ ದಿನ ಸಾಯಂಕಾಲವೇ ಆತ ದುಲಾರಿ ಸಾಹುಕಾರ್ತಿಯ ಹತ್ತಿರ ಹೋದ. ಎಷ್ಟಾದರೂ ಹೆಂಗುಸರಿಗೆ ಕರುಣೆ ಇದ್ದೇ ಇರುತ್ತದೆ. ಆದ್ದರಿಂದ ಸ್ವಲ್ಪ ಕಡಮೆ ಬಡ್ಡಿಯಲ್ಲಿ ಸಾಲ ದೊರಕಬಹುದೋ – ಎಂದು ಅವನೆಣಿಸಿದ್ದ. ಆದರೆ ದುಲಾರಿ ತನ್ನ ರಾಮಾಯಣವನ್ನೇ ಹೇಳುತ್ತ ಅಳತೊಡಗಿದಳು. ಆ ಊರಿನ ಪ್ರತಿಯೊಂದು ಮನೆಯಲ್ಲೂ ಅವಳ ಕಡ ಬಾಕಿ ಉಳಿದಿತ್ತು. ಎಲ್ಲ ಬಿಟ್ಟು, ಜಿಂಗುರೀ ಸಿಂಹರೇ ಅವಳಿಗೆ ೩೦ ರೂಪಾಯಿ ಕೊಡುವುದು ಬಾಕಿ ಉಳಿದಿತ್ತು. ಆದರೆ ಯಾರೂ ಅವಳಿಗೆ ಹಿಂದೆ ಕೊಡುವ ಯೋಚನೆಯಲ್ಲಿದ್ದಿಲ್ಲ. ಹಾಗಿರುತ್ತ ಅವಳೆಲ್ಲಿಂದ ರೂಪಾಯಿ ತಂದಾಳು ?

ಹೋರಿರಾಮ ದೀನಸ್ವರದಿಂದ – 'ಬಹಳ ಪುಣ್ಯ ಬಂದೀತಮ್ಮ ನಿನಗೆ. ನೀನು ರೂಪಾಯಿ ಕೊಡದಿದ್ದರೆ ನನ್ನ ತಲೆಯೇ ಈ ಸಲ ಹೋಗಿಬಿಟ್ಟೀತು. ಜಿಂಗುರೀ ಸಿಂಹ ಪಟೇಶ್ವರೀಲಾಲರಿಬ್ಬರಿಗೂ ನನ್ನ ಗದ್ದೆಯ ಮೇಲೆ ಕಣ್ಣಿದೆ. ತಾತ ಮುತ್ತಾತರಿಂದಲೂ ಬಂದಂಥಾ ಈ ಪ್ರಸಾದವನ್ನು ಕಳೆದುಕೊಂಡು ಬಿಟ್ಟರೆ ಮತ್ತೆ ಹೋಗುವುದಾದರೂ ಎಲ್ಲಿಗೆ ? ಹಿರಿಯರ ಸಂಪತ್ತನ್ನು ಅಭಿವೃದ್ಧಿಗೊಳಿಸುವ ಸುಪುತ್ರನಾಗದಿದ್ದರೂ, ಅವರು ಮಾಡಿಟ್ಟುದನ್ನು ಮಾರಿ ತಿನ್ನುವ ಕುಪುತ್ರ ನಾನೆಂತಾಗಲಮ್ಮಾ ? ' – ಎಂದ.

ದುಲಾರಿ ಆಗ ಪ್ರಮಾಣಮಾಡಿ ಹೇಳಿದಳು – ‘ ರಾಮಣ್ಣಾ, ನಾನೀಗ ದೇವರ ಸಾಕ್ಷಿಹಾಕಿ ಹೇಳುತ್ತಿದ್ದೇನೆ. ನನ್ನ ಕೈಯಲ್ಲಿ ಸ್ವಲ್ಪವೂ ಹಣ ಬಂದು ದಿಲ್ಲ. ತೆಗೆದುಕೊಂಡ ಮಹಾಪುರುಷರು ಹಿಂದಕ್ಕೆ ಕೊಡದಿದ್ದರೆ ನಾನೇನು ಮಾಡಲಿ – ನೀನೇ ಹೇಳು. ನೀನೇನಾದರೂ ಹೊರಗಿನವನಲ್ಲ. ಸೋನೆಯೂ ನನ್ನ ಮಗಳ ಹಾಗೆಯೇ. ಆದರೆ ನೀನೇ ಹೇಳು – ನಾನೇನು ಮಾಡಲಿ? ಆ ಹೀರ ನಿನ್ನ ತಮ್ಮನೇ ಅಲ್ಲವೇ? ಅಂದು ಎತ್ತಿಗಾಗಿ ೫೦ ರೂಪಾಯಿ ತೆಗೆದು ಕೊಂಡಿದ್ದ. ಈಗವನ ಪತ್ತೆಯೇ ಇಲ್ಲ. ಅವನ ಹೆಂಡತಿಯ ಹತ್ತಿರ ಕೇಳ ಹೋದರೆ ಅವಳು ರಣಾಗ್ರಕ್ಕೇ ನಿಲ್ಲುತ್ತಾಳೆ. ಇನ್ನು–ಆ ಸೋಬ ಸಹ ನೋಡು ವಾಗ ಒಳ್ಳೆಯ ಸಾಧುವಿನಂತೆ ಕಾಣುತ್ತಾನೆ. ಆದರೆ ತೆಗೆದುಕೊಂಡ ಹಣ ಹಿಂದೆ ಕೊಡುವ ಅಭ್ಯಾಸವೇ ಅವನಿಗಿಲ್ಲ. ಇದರ ನಿಜಸ್ಥಿತಿ ಮತ್ತೇನೂ ಇಲ್ಲ. ಎಲ್ಲರ ಕೈಯೂ ಬರಿದಾಗಿದ್ದರೆ – ಅವರು ಕೊಡುವುದಾದರೂ ಎಲ್ಲಿಂದ? ಎಲ್ಲರ ಕತೆಯನ್ನೂ ನೋಡುತ್ತಿದ್ದೇನೆ–ಅವರು ಹೊಟ್ಟೆ ತುಂಬಿಸಿಕೊಳ್ಳುವುದೇ ಕಷ್ಟ ವಾಗಿದೆ. ನಾನು ಸಹ – ಮನೆ ಮಾರು ಮಾರಿಯಾದರೂ ಹಣ ಕೊಡಲೇ ಬೇಕೆಂದು ಗದರಿಸಹೋಗುವುದಿಲ್ಲ. ಪಾಪ! ಮರ್ಯಾದೆ ಎಲ್ಲರಿಗೂ ಒಂದೇ ತಾನೇ ? ’

ಪುನಃ ಸ್ವರ ಬದಲಾಯಿಸಿ ಹೇಳತೊಡಗಿದಳು – ‘ ಆ ಪಟೇಶ್ವರೀಲಾಲನ ಪೋರ – ನಿನ್ನ ಮನೆಯ ಹತ್ತಿರ ಬಹಳವಾಗಿ ಸುಳಿಯುತ್ತಿರುತ್ತಾನೆ. ಆ ಮೂರು ಹುಡುಗರಿಗೂ ಬೇರೆ ಕೆಲಸವೇ ಇಲ್ಲ. ಸ್ವಲ್ಪ ಜಾಗ್ರತೆಯಲ್ಲಿರಬೇಕು– ಆ ಪೋಲಿಗಳ ವಿಚಾರದಲ್ಲಿ. ಅವರು ಪೇಟೆಗೆ ಹೋಗಿಬಿಟ್ಟ ಮಾತ್ರಕ್ಕೆ ಹಳ್ಳಿ ಯವರ ಮಾನ ಮರ್ಯಾದೆ ತೆಗೆಯುವುದೇ? ಎಷ್ಟಾದರೂ ಹಳ್ಳಿಯಲ್ಲಿರುವ ಹುಡುಗರಿಗೆ ಸ್ವಲ್ಪ ಮಾನ ಮರ್ಯಾದೆಯ ಭಯವಿದೆ. ನನ್ನ ಕೌಸಲ್ಯೆ ಸಹ ಆ ಸಲ ಬಂದವಳನ್ನು ಬೇಗನೆ ಗಂಡನ ಮನೆಗೆ ಕಳಿಸಿಬಿಟ್ಟೆ. ಎಷ್ಟೆಂದು ಇವರನ್ನೆಲ್ಲ ಕಾದುಕೊಂಡಿರಲು ಸಾಧ್ಯ ? ’

ಹೋರಿರಾಮ ಆಗ ಮುಗುಳ್ನಗುವುದನ್ನು ಕಂಡು ಸರಸಭಾವದಿಂದ ಪುನಃ ಹೇಳತೊಡಗಿದಳು – ‘ ಹೌದು. ನೀನು ಸಹ ಹಿಂದೆ ಒಳ್ಳೇ ಗಟ್ಟಿ ಮುಟ್ಟಿನ ಆಳಾಗಿದ್ದೆ. ದಿನಕ್ಕೆ ಹಲವು ಸಲ ಒಂದಲ್ಲ ಒಂದು ನೆಪ ಹಿಡಿದು ಕೊಂಡು ನನ್ನ ಅಂಗಡಿ ಬಾಗಿಲಿಗೆ ಬಂದೇ ಬರುತ್ತಿದ್ದೆ. ಆದರೆ ನಾನು ನಿನ್ನತ್ತ ಕಣ್ಣೆತ್ತಿ ಸಹ ನೋಡುತ್ತಿದ್ದೆನೆ? ’

ಹೋರಿರಾಮನೂ ಮಧುರಭಾವದಿಂದ ಉತ್ತರಿಸಿದ – ‘ ಆ ಸುಳ್ಳು ಮಾತೆಲ್ಲ ಬೇಡ. ಹಕ್ಕಿಗೆ ಒಂದು ಸಲ ಏನಾದರೂ ತಿಂಡಿ ಸಿಕ್ಕಿದರೆ – ಆಗಾಗ್ಗೆ ಅಂಗಳಕ್ಕೆ ಬಂದುಕೊಂಡೇ ಇರುತ್ತದೆ.’

‘ ಅಬ್ಬಾ ! ಎಂತಹ ಸುಳ್ಳುಗಾರ ! ನಡೆ ನೋಡುವಾ.’

‘ ಹೌದೌದು ; ಕಣ್ಣೆತ್ತಿಯೂ ನೋಡುತ್ತಿದ್ದಿಲ್ಲ. ಆದರೆ ನಿನ್ನ ಮನಸ್ಸು ಮಾತ್ರ ನೋಡುತ್ತಲೇ ಇರುತಿತ್ತು. ಅಷ್ಟೇ ಅಲ್ಲ; ಕರೆಯುತ್ತಲೂ ಇರುತಿತ್ತು.’

‘ಹೌದು ; ನೀನೊಬ್ಬ ದೊಡ್ಡ ಅಂತರ್ಯಾಮಿ – ನನ್ನ ಮನಸ್ಸಿನ ಸ್ಥಿತಿ ತಿಳಿಯಲಿಕ್ಕೆ. ಏನೋ ಪುನಃ ಪುನಃ ಸುತ್ತಾಡುವುದು ನೋಡಿ ನನಗೇ ದಯೆ ತೋರುತ್ತಿತ್ತು. ಅಷ್ಟೆ. ಹಾಗೇನು ನೀನೊಬ್ಬ ಬಹು ಸ್ಫುರದ್ರೂಪಿ ಯುವಕ ನಾಗಿದ್ದೆಯೇ ?’

ಅಷ್ಟರಲ್ಲಿ ಹುಸೇನಿ ಒಂದಾಣೆಯ ಉಪ್ಪು ಕೊಂಡುಹೋಗಲು ಬಂದ. ಅದರಿಂದಾಗಿ ಈ ಸರಸ ಸಂಲಾಪ ನಿಂತುಹೋಯಿತು. ಅವನು ಉಪ್ಪು ಕೊಂಡು ಹೋದ ಬಳಿಕ ದುಲಾರಿ ಪುನಃ ಕೇಳಿದಳು – ‘ ಗೋಬರನ ಹತ್ತಿರ ನೀನೇಕೆ ಹೋಗಬಾರದು ? ಅವನನ್ನು ನೋಡಿಬಂದ ಹಾಗೂ ಆಗುತ್ತದೆ. ಅದರೊಡನೆ ಕೈಯೂ ಬಿಸಿಯಾದೀತು.’

ಹೋರಿರಾಮ ನಿರಾಶಾಪೂರ್ಣ ಸ್ವರದಿಂದ ಹೇಳಿದ – ‘ ಅವನೇನೂ ಕೊಡಲಾರ. ಈಗಿನ ಹುಡುಗರು ನಾಲ್ಕು ಕಾಸು ಸಂಪಾದಿಸತೊಡಗಿದರೆ, ಅವರ ಕಣ್ಣು ತಿರುಗಿಹೋಗುತ್ತದೆ. ಆದರೂ ನಾನು ಹೋಗಿ ಒಂದು ಆಸೆ ತೀರಿಸಿಕೊಂಡು ಬರಲಿಕ್ಕೆ ಅಣಿಯಾಗಿದ್ದೆ. ಆದರೆ ದನಿಯಾ ಒಪ್ಪುವುದಿಲ್ಲ. ಅವಳ ಮಾತು ಮೀರಿಹೋಗಲಿಕ್ಕೂ ಸಾಧ್ಯವಿಲ್ಲ. ಎಷ್ಟಾದರೂ ಅವಳ ಸ್ವಭಾವ ನಿನಗೆ ಗೊತ್ತೇ ಇದೆಯಲ್ಲ !’

‘ ಹಾಗಾದರೆ ಈಗ ನೀನು ಅವಳ ಶುದ್ಧ ಗುಲಾಮನಾಗಿಹೋದೆ ಎನ್ನು!’– ದುಲಾರಿ ಕಣ್ಣು ತಿರುಗಿಸುತ್ತಾ ಹೇಳಿದಳು.

‘ ಹೌದು ; ನೀನು ನನ್ನ ಸುದ್ದಿಯೇ ಕೇಳುವುದಿಲ್ಲನೆಂದಾದರೆ ಮತ್ತೇನು ಮಾಡಲಿ ?’

‘ ನನ್ನ ಗುಲಾಮಗಿರಿ ಮಾಡಲಿಕ್ಕೆ ನೀನು ಸಿದ್ಧನಾಗಿದ್ದರೆ ಇಷ್ಟರಲ್ಲೇ ನಾನು ಹಣ ನಿನ್ನ ಲೆಕ್ಕಕ್ಕೆ ಬರೆದೇಬಿಡುತ್ತಿದ್ದೆ.’

‘ಅದಕ್ಕೇನು ಅಡ್ಡಿ ? ಬರೆ ನೋಡುವಾ. ೨೦೦ ರೂಪಾಯಿ ನನ್ನ ಲೆಕ್ಕಕ್ಕೆ

ಬರೆದುಬಿಡು. ಅದೊಂದು ದೊಡ್ಡ ಬೆಲೆಯಲ್ಲ ನನಗೆ.'

'ಹಾಗಾದರೆ ದನಿಯಳ ಹತ್ತಿರ ನೀನು ಮಾತಾಡಬಾರದು.'

'ಇಲ್ಲ. ಪ್ರಮಾಣಮಾಡಿ ಹೇಳುತ್ತೇನೆ.'

'ಒಂದು ವೇಳೆ ಮಾತಾಡಿದರೆ?'

'ನನ್ನ ನಾಲಗೆಯನ್ನೇ ಕತ್ತರಿಸಿಹಾಕು.'

'ಆಗಲಿ ಹಾಗಾದರೆ. ಹೋಗು. ವರ ನಿಶ್ಚಯಮಾಡು. ನಿನಗೆ ಬೇಕಿದ್ದ ರೂಪಾಯಿ ನಾನು ಕೊಡುತ್ತೇನೆ!'

ಹೋರಿರಾಮ ಸಜಲನೇತ್ರನಾಗಿ ದುಲಾರಿಯ ಕಾಲುಹಿಡಿದ. ಭಾವಾವೇಶದಲ್ಲಿ ಅವನ ಬಾಯಿ ಮುಚ್ಚಿಹೋಗಿತ್ತು.

ದುಲಾರಿ ತನ್ನ ಕಾಲೆಳೆದುಕೊಂಡು ಹೇಳಿದಳು – 'ನೋಡು; ಈ ನಿನ್ನ ಬುದ್ಧಿಯೇ ನನಗೆ ಸರಿದೋರುವುದಿಲ್ಲ. ಒಂದು ವರ್ಷದೊಳಗೆ ಈ ಹಣವನ್ನೆಲ್ಲ ನಾನು ಬಡ್ಡಿ ಸಮೇತ, ನಿನ್ನ ಕೈಹಿಡಿದು ವಸೂಲು ಮಾಡಿಯೇನು. ಹಣದ ವಹಿವಾಟಿನಲ್ಲಿ ಎಷ್ಟಾದರೂ ನೀನು ಸರಿಯಿದ್ದವನಲ್ಲ. ಮತ್ತೊಂದು ವಿಚಾರ– ಆ ಪಂಡಿತರು ನಿಮ್ಮ ಮೇಲೆ ಬಹಳ ಕೋಪದಲ್ಲಿದ್ದಾರೆಂದೂ ಕೇಳಿದೆ. ಈ ಊರಿಂದ ನಿಮ್ಮನ್ನು ಹೊರಹಾಕಿಸದಿದ್ದರೆ ತಾನು ಬ್ರಾಹ್ಮಣನೇ ಅಲ್ಲವೆಂದು ಹೇಳುತ್ತಿದ್ದಾರಂತೆ. ನೀವು ಆ ಸಿಲಿಯಳನ್ನೇಕೆ ಹೊರಗೆ ಓಡಿಸಿಬಿಡುವುದಿಲ್ಲ? ಸುಮ್ಮನಿರುವ ಬದಲು ಜಗಳ ಕ್ರಯಕ್ಕೆ ಕೊಂಡುಕೊಂಡಿರಲ್ಲ?'

'ದನಿಯಾ ಅವಳನ್ನು ಇರಹೇಳಿದ್ದಾಳೆ.'

'ಆ ಪಂಡಿತರ ಮಗ ಕಾಶಿಗೆ ಹೋಗಿದ್ದನಂತೆ. ಅಲ್ಲಿ ಒಬ್ಬ ದೊಡ್ಡ ಪಂಡಿತರಿದ್ದಾರಂತೆ. ಅವರು ೫೦೦ ರೂಪಾಯಿ ತೆಗೆದುಕೊಂಡು ದೊಡ್ಡ ಪ್ರಾಯಶ್ಚಿತ್ತ ನಡೆಸಿದರಂತೆ. ಇಂತಹ ಕತೆಯೂ ಇದೆಯೇ? ಒಮ್ಮೆ ಧರ್ಮ ಪೂರ್ತಿ ನಷ್ಟವಾದ ಮೇಲೆ ಸಾವಿರ ಪ್ರಾಯಶ್ಚಿತ ಮಾಡಿದರೂ ಪುನಃ ಅದು ಬರಲಿದೆಯೇ?'

ಹೋರಿರಾಮನು ಬಹಳ ಹುರುಪಿನಿಂದ ಮನೆಯತ್ತ ಹೊರಟ. ಜೀವನದಲ್ಲಿ ಇಂತಹ ಸಂತೋಷದ ಅನುಭವ ಅವನಿಗೆ ಈ ವರೆಗೆ ಆಗಿದ್ದಿಲ್ಲ.

ದಾರಿಯಲ್ಲೇ ಸೋಬನ ಮನೆಯಿತ್ತು. ಅವನನ್ನು ಕರೆದುಕೊಂಡು ಹೋಗಿ ಪಂಡಿತರ ಹತ್ತಿರ ಮದುವೆಯ ದಿನ ತಕ್ಕ ಮಟ್ಟಿಗೆ ನಿಶ್ಚಯಮಾಡಿಕೊಂಡು ಬಂದ. ಅಲ್ಲಿಂದ ಹೊರಟು ಬಂದು ಮನೆಯಂಗಳದಲ್ಲಿ ಕೂತು ಮದುವೆಯ

ಏರ್ಪಾಡಿನ ವಿಚಾರ ಮಾತುಕತೆ ನಡೆಸತೊಡಗಿದರು.

ಆಗ ದನಿಯಳು ಹೊರಬಂದು ಹೇಳಿದಳು – ' ಅರ್ಧ ಜಾವು ರಾತ್ರಿ ದಾಟಲಿಕ್ಕಾಯಿತು. ಇನ್ನೂ ಊಟಕ್ಕೇಳಲಿಕ್ಕೆ ಸಮಯವಾಗಿಲ್ಲವೇ ? ಊಟಮಾಡಿಕೊತು ಮತ್ತೆ ಇಡೀ ರಾತ್ರಿ ಪುಡಿಹರಟೆ ಹೊಡೆಯುತ್ತಾ ಇರಿ – ಬೇಕಾದರೆ. '

ವಿಚಾರಪೂರ್ಣ ದೃಷ್ಟಿಯಿಂದ ಅವಳತ್ತ ನೋಡಿ ಹೋರಿರಾಮನೆಂದ– ' ಈಗ ನಾವು ಆ ದೊಡ್ಡ ಯೋಚನೆಯಲ್ಲೇ ಬಿದ್ದಿದ್ದೇವೆ. ನೀನೇ ಹೇಳು ನೋಡುವಾ – ಏನೆಲ್ಲ ಸಾಮಾನಾಗಬೇಕು ? ನನಗಾವುದೂ ಗೊತ್ತಿಲ್ಲ. '

' ಏನೂ ಗೊತ್ತಿಲ್ಲವಾದರೆ ಮತ್ತೆಂತಹ ಮಾತುಕತೆ ನಡೆಸುವುದು ನೀವು? ಹಣದ ವ್ಯವಸ್ಥೆ ಏನಾದರೂ ಆಗಿದೆಯೇ? ಅಥವಾ ಬರೇ ಮನಸ್ಸಿನ ಮಂಡಿಗೆಯೇ ? '

ಹೋರಿರಾಮ ಗರ್ವಭರಿತ ಸ್ವರದಿಂದ ಹೇಳಿದ – ' ನಿನಗೇಕೆ ಆ ವಿಚಾರ? ಏನೇನು ಸಾಮಾನಾಗಬೇಕೆಂದು ಅಷ್ಟು ಮಾತ್ರ ಹೇಳಿದರೆ ಸಾಕು. '

' ನಾನು ಅಂತಹ ಬರೇ ಮನಸ್ಸಿನ ಮಂಡಿಗೆ ತಿನ್ನುತ್ತ ಕೂರುವವಳಲ್ಲ.'

' ನಮ್ಮ ತಂಗಿಯ ಮದುವೆಗೆ ಏನೆಲ್ಲ ಸಾಮಗ್ರಿ ತಂದಿತ್ತು ? ಅಷ್ಟು ಮಾತ್ರ ಹೇಳಿದರೆ ಸಾಕು. '

' ರೂಪಾಯಿ ಎಲ್ಲಿಯಾದರೂ ಸಿಕ್ಕಿದೆಯೆ ? ಅದು ಮೊದಲು ಹೇಳಿ ನೋಡುವಾ. '

' ಹೌದು ಸಿಕ್ಕಿದೆ. ಮತ್ತೇನು ? ನಾನು ಭಂಗಿ ಕುಡಿದು ಮಾತಾಡುವುದೆಂದು ತಿಳಿದಿರುವೆಯಾ ? '

ಆದರೆ, ದುಲಾರಿಯೊಡನೆ ಮಾತುಕತೆ ನಡೆದಿದೆಯೆಂದು ತಿಳಿದೊಡನೆ ದನಿಯಾ ಮುಖ ತಿರುಗಿಸಿ ಹೇಳಿದಳು – ' ಅವಳ ಕೈಯಿಂದ ಸಾಲ ತೆಗೆದುಕೊಂಡು ಈ ವರೆಗೆ ಯಾರಾದರೂ ಋಣಪರಿಹಾರ ಮಾಡಿಕೊಂಡವರು ಇದ್ದಾರೆಯೇ ? ಆ ಬೋಸುಡಿಯ ಬಡ್ಡಿ ಯಾವಾಗಲೂ ಹೆಚ್ಚು.'

' ಅದಿಲ್ಲವಾದರೆ ಮತ್ತೇನು ಮಾಡುವುದು ? ಬೇರೆ ದಾರಿಯಾದರೂ ಬೇಕಲ್ಲವೇ ? '

' ಈ ನೆಪ ಮಾಡಿಕೊಂಡು ತಮಾಷೆ ನಡೆಸಲಿಕ್ಕೆ ಹೋಗಿದ್ದಾಗಿ ಯಾಕೆ ಹೇಳುವುದಿಲ್ಲ ? ಮುದುಕರಾದರೂ ಆ ಹುಚ್ಚು ಮಾತ್ರ ಇನ್ನೂ ಹೋಗಿಲ್ಲ ನಿಮಗೆ. '

‘ದನಿಯಾ! ನೀನು ಕೆಲವೇಳೆ ಬರೇ ಹುಡುಗಾಟದ ಮಾತು ನಡೆಸುತ್ತಿ. ನನ್ನಂತಹ ಹಲ್ಲುಹೋದ ಮುದುಕನ ಹತ್ತಿರ ಎಂತಹ ತಮಾಷೆ? ಅವಳು ಮುಖ ನೋಡಿ ಮಾತೇ ಆಡುವುದಿಲ್ಲ. ಗೊತ್ತೇ?’

‘ನಿಮ್ಮಂತಹ ಮುದುಕರಲ್ಲದೆ ಅವಳ ಹತ್ತಿರ ಈಗ ಬೇರೆ ಯಾರು ಹೋದಾರು?’

‘ಅವಳ ಮನೆ ಬಾಗಿಲಲ್ಲಿ ಒಳ್ಳೊಳ್ಳೆಯ ಯುವಕರು ಸುತ್ತಾಡುತ್ತಿದ್ದಾರೆ. ಅದು ಗೊತ್ತೇ ನಿನಗೆ? ಎಷ್ಟಾದರೂ ಅವಳ ಹತ್ತಿರ ಲಕ್ಷ್ಮಿ ಇದ್ದಾಳೆ.’

‘ಅವಳು ಒಂದಿಷ್ಟು ಆಸೆ ತೋರಿಸಿದೊಡನೆ ನೀವು ಸಂತೋಷಸಮಾಚಾರ ಹಬ್ಬಿಸತೊಡಗಿದಿರಿ.’

‘ಬರೇ ಆಸೆ ತೋರಿಸಿದ್ದಲ್ಲ. ಸರಿಯಾದ ಮಾತುಕತೆಯೇ ನಡೆದು ಹೋಗಿದೆ.’

ಹೋರಿರಾಮ ಊಟಕ್ಕೆದ್ದ. ಸೋಬನೂ ಮನೆಯ ಕಡೆ ಹೋದ. ಸೋನೆ ಸಿಲಿಯಳೊಡನೆ ಹೊರಬಂದಳು. ಅವಳು ಬಾಗಿಲಲ್ಲೇ ನಿಂತುಕೊಂಡು ಎಲ್ಲ ಮಾತುಕತೆಗಳನ್ನೂ ಕೇಳುತ್ತಿದ್ದಳು. ಮದುವೆಗಾಗಿ ದುಲಾರಿಯಿಂದ ೨೦೦ ರೂಪಾಯಿ ಸಾಲ ತೆಗೆಯಲಿದ್ದಾರೆಂಬ ಈ ಮಾತು ಅವಳ ಹೊಟ್ಟೆಯೊಳಗೆ ತುಂಬಾ ವೇದನೆಯನ್ನುಂಟುಮಾಡಿತು. ಸುಣ್ಣದ ಚಿಪ್ಪಿನ ರಾಶಿಗೆ ನೀರು ಹೊಯ್ದಾಗ ಆಗುವ ತಳಮಳ ಅವಳ ಹೃದಯದೊಳಗೆ ಆಗತೊಡಗಿತು. ಬಾಗಿಲಲ್ಲಿ ಸೀಮೆ ಎಣ್ಣೆ ದೀಪ ಒಂದು ಮಿಣಿಮಿಣಿ ಉರಿಯುತ್ತಿತ್ತು. ಅದರ ಕರಿ ಗೋಡೆಗೆ ತಾಗುತ್ತಲಿತ್ತು. ಎರಡು ಎತ್ತುಗಳೂ ಹಟ್ಟಿಯಲ್ಲಿ ಮೇವು ತಿನ್ನುತ್ತಿದ್ದುವು. ಹೊರಗೆ ನಾಯಿಯೊಂದು ಯಾವಾಗ ತನ್ನ ಪಾಲಿನ ರೊಟ್ಟಿ ದೊರಕೀತೆಂದು ಕಾಯುತ್ತಲಿತ್ತು. ಈ ಇಬ್ಬರು ಯುವತಿಯರೂ ಎತ್ತುಗಳ ಹತ್ತಿರ ಬಂದು ನಿಂತರು.

ಸೋನೆ ಹೇಳಿದಳು – ‘ನೀನು ಕೇಳಿದೆಯಾ? ಅಪ್ಪ ನನ್ನ ಮದುವೆಗಾಗಿ ೨೦೦ ರೂಪಾಯಿ ಸಾಹುಕಾರ್ತಿಯಿಂದ ಸಾಲ ತೆಗೆಯಲಿದ್ದಾರಂತೆ!’

ಸಿಲಿಯಳು ಆ ಮನೆಯ ಪ್ರತಿಯೊಂದು ವಿಚಾರವನ್ನೂ ಬಲ್ಲಳು. ಮನೆಯಲ್ಲೇನೂ ಇಲ್ಲವಾದರೆ ಸಾಲ ತೆಗೆಯದೆ ಮತ್ತೇನು ಮಾಡುವುದು – ಎಂದು ಅವಳು ಅಭಿಪ್ರಾಯವಿತ್ತಳು.

ಸೋನೆಯು ಮುಂದಿರುವ ಮರದತ್ತ ದೃಷ್ಟಿ ಹಾಯಿಸುತ್ತಾ ಹೇಳಿದಳು–

'ನನಗೋಸ್ಕರ ತಂದೆ ತಾಯಿಯರು ಸಾಲ ತೆಗೆಯುವುದು ಎಷ್ಟಾದರೂ ಸರಿ ಅಲ್ಲ. ಪಾಪ! ಎಲ್ಲಿಂದವರು ಮರುಪಾವತಿ ಮಾಡಿಯಾರು? ಮೊದಲೇ ಸಾಲದ ಹೊರೆ ಹೊರಲಾರದಷ್ಟಿದೆ. ಅದರ ಮೇಲೆ ಪುನಃ ೨೦೦ ತೆಗೆದರೆ ಸಹಿಸಲಾದೀತೇ?'

'ವರದಕ್ಷಿಣೆ ಇಲ್ಲದೆ ಯಾರಾದರೊಬ್ಬ ಮುದುಕ ಸಿಕ್ಕಿಯಾನು – ಅಷ್ಟೆ. ಅವನೊಡನೆ ಹೋಗಲು ಒಪ್ಪುವೆಯಾ?'

'ಮುದುಕನೊಡನೆ ಏಕೆ ಹೋಗಬೇಕು? ಅಣ್ಣನೇನು ಮುದುಕನೇ? ಜುನಿಯಳನ್ನು ಕಟ್ಟಿಕೊಂಡು ಹೋಗಲಿಲ್ಲವೇ? ಅವನಿಗೆ ಯಾರು ಹಣ ಕೊಟ್ಟಿದ್ದಾರೆ?'

'ಅದರಿಂದ ತಂದೆ ತಾಯಿಯರ ಗೌರವಕ್ಕೆ ಕುಂದಲ್ಲವೇ?'

'ನಾನು ಆ ಸೋನಾರಿಯವರೊಡನೆ ಹೇಳಿಯೇ ಬಿಡುತ್ತೇನೆ – ವರದಕ್ಷಿಣೆ ಒಂದು ಕಾಸಾದರೂ ತೆಗೆದುಕೊಳ್ಳುವುದಿದ್ದರೆ ಅವರೊಡನೆ ಮದುವೆಯೇ ಆಗುವುದಿಲ್ಲ ಎಂಬುದಾಗಿ.'

ಸೋನೆಯ ನೆಂಟಸ್ತಿಕೆ ಸೋನಾರಿಯಲ್ಲಿರುವ ಒಬ್ಬ ಧನಿಕ ರೈತನೊಡನೆ ನಿಶ್ಚಯವಾಗಿತ್ತು.

'ನಿನ್ನ ತಂದೆ ಕೊಡುತ್ತಾರೆ; ನಾವು ತೆಗೆದುಕೊಳ್ಳುತ್ತೇವೆ – ಎಂದವರು ಹೇಳಿಬಿಟ್ಟರೆ?'

ಯಾವ ಅಸ್ತ್ರವನ್ನು ರಾಮಬಾಣವೆಂಬುದಾಗಿ ತಿಳಿದಿದ್ದಳೋ ಅದೀಗ ಬರೇ ಬಿದಿರ ಕಣೆಯಾಗಿರುವುದನ್ನು ಅವಳು ತಿಳಿದಳು. ಬಳಿಕ ಹತಾಶಳಾಗಿ ಯೋಚಿಸಿ ಹೇಳಿದಳು – 'ಒಂದು ಸಲ ಅಲ್ಲಿಯವರೊಡನೆ ಹೇಳಿ ನೋಡಬೇಕೆಂದು ನನಗೆನಿಸುತ್ತದೆ. ಆ ವಿಚಾರ ಏನು ಮಾಡಲಿಕ್ಕೂ ಸಾಧ್ಯವಿಲ್ಲವೆಂಬುದಾಗಿ ಅವರು ಹೇಳಿಬಿಟ್ಟರೆ – ಮತ್ತೇನು? ಗೋಮತೀ ನದಿ ಇಲ್ಲಿಂದ ಬಹು ದೂರದಲ್ಲಿಲ್ಲ. ಅದರಲ್ಲಿ ಮುಳುಗಿ ಸಾಯುತ್ತೇನೆ. ಪಾಪ! ಅಮ್ಮ ಅಪ್ಪ ಬಹು ಕಷ್ಟದಿಂದ ಸಾಕಿ ಸಲಹಿದರು. ಅದಕ್ಕೆ ಬದಲಾಗಿ ಈಗ ಮನೆಬಿಟ್ಟು ಹೋಗುವಾಗ ಇನ್ನಷ್ಟು ಸಾಲದ ಹೊರೆಯನ್ನು ಅವರ ತಲೆಯ ಮೇಲೇರಿಸಿ ಹೊರಡುವುದು ಸರಿಯೇ? ದೇವರು ಅವರಿಗೆ ಸಂಪತ್ತು ಕೊಟ್ಟಿದ್ದರೆ ಸಂತೋಷದಿಂದ ಎಷ್ಟು ಬೇಕಾದರೂ ಕೊಡಲಿ. ನನ್ನ ಅಡ್ಡಿಯಿಲ್ಲ. ಪಾಪ! ಅವರೀಗ ಒಂದೊಂದು ಕಾಸಿಗೂ ಒದ್ದಾಡುತ್ತಿದ್ದಾರೆ. ನಾಳೆ ಸಾಲಗಾರರು ವ್ಯಾಜ್ಯ

ಮಾಡಿ ಮನೆ ಏಲಂ ಮಾಡಿಸಿದರೆ- ಮತ್ತೆ ಕೂಲಿ ಕೆಲಸ ಮಾಡಬೇಕಾದೀತು! ಅದಕ್ಕಿಂತ ನಾನು ಸತ್ತುಬಿಟ್ಟರೆ – ಹೌದು; ಮೊದಲು ನಾಲ್ಕು ದಿನ ಅತ್ತರೂ ಮತ್ತೆ ಸಂತೋಷದಿಂದಿದ್ದಾರು. ನನ್ನ ಮದುವೆಯಿಂದಾಗಿ ಜನ್ಮ ವಿಡೀ ಕಣ್ಣೀರು ಸುರಿಸುವಂತಾಗದು ತಾನೆ?'

ಸಿಲಿಯಾಳ ಹೃದಯದಲ್ಲಿ ಹೊಸ ಜ್ಯೋತಿಯೊಂದು ಮೂಡಿ ಬಂದಂತಾಯಿತು. ಅವಳು ಆವೇಶಭರಿತ ಸ್ವರದಿಂದ ಸೋನೆಯನ್ನು ತಬ್ಬಿಕೊಂಡು – 'ಇಷ್ಟೆಲ್ಲ ತಿಳಿವಳಿಕೆ ನಿನಗೆಲ್ಲಿಂದ ಬಂತು ಸೋನಾ? ನೋಡುವಾಗ ಬಹು ಸಾಧುವಾಗಿ ಕಾಣುವೆ' – ಎಂದಳು.

'ಇದರಲ್ಲೇನು ಅಂತಹ ತಿಳಿವಳಿಕೆಯ ವಿಚಾರವಿದೆ? ನನಗೆ ಕಣ್ಣು ಕಾಣಿಸುವುದಿಲ್ಲವೇ? ೨೦೦ ರೂಪಾಯಿ ಮೂರು ನಾಲ್ಕು ವರ್ಷಗಳಲ್ಲಿ ೪೦೦ ಆಗುವುದಿಲ್ಲವೇ? ಮತ್ತೆ ರೂಪಳ ಮದುವೆಗಾಗಿ ಪುನಃ ೨೦೦ ತೆಗೆದರಾಯಿತು. ಕೊನೆಗೆ ಮನೆ ಮಾರೆಲ್ಲ ಮಾರಾಟವಾಗಿ ಮತ್ತೆ ಭಿಕ್ಷೆ ಬೇಡಿದರೆ ಸರಿ. ಅದಕ್ಕಿಂತ ನಾನು ನನ್ನ ಪ್ರಾಣ ಕೊಟ್ಟುಬಿಡುವುದೊಳಿತಲ್ಲವೇ? ಆದ್ದರಿಂದ ಸಿಲಿಯಾ, ನೀನೊಂದು ಕೆಲಸ ಮಾಡು – ಬೆಳಗ್ಗೆ ಮುಖ ತೋರುವ ಮೊದಲೇ ನೀನು ಹೋಗಿ ಸೋನಾರಿಯಿಂದ ಅವನನ್ನು ಕರೆದು ತಂದುಬಿಡು. ಅಥವಾ ಅದು ಬೇಡ; ಕರೆದು ತರುವುದು ಬೇಡ. ಅವನೊಡನೆ ನಾಚಿಕೆಯಿಂದ ಮಾತಾಡಲಿಕ್ಕೇ ಆಗಲಾರದು. ನೀನೇ ನನ್ನ ಈ ಸಂದೇಶವನ್ನು ಮುಟ್ಟಿಸಿ ಅವನೇನು ಹೇಳುತ್ತಾನೆಂದು ನೋಡು. ಹಾಗೆ ಎಷ್ಟು ದೂರವಿದೆ ಸೋನಾರಿಗೆ? ನದಿಯ ಆಚೆ ದಡದಲ್ಲೇ ತಾನೆ? ಒಮ್ಮೊಮ್ಮೆ ಆತ ಏನಾದರೂ ಕೆಲಸದಿಂದ ಇತ್ತ ಬರುತ್ತಲೂ ಇದ್ದನು. ಒಂದು ಸಲ ಅವರ ಎಮ್ಮೆಯೊಂದು ನಮ್ಮ ಗದ್ದೆಗೆ ಇಳಿದಿತ್ತು. ನಾನು ಸರಿಯಾಗಿ ಬೈದುಬಿಟ್ಟಿದ್ದೆ. ಆಗ ಕೈ ಮುಗಿದು ಅವನು ಬೇಡಿಕೊಳ್ಳತೊಡಗಿದ್ದನು. ಅದಿರಲಿ. ಇತ್ತೀಚೆ ನಿನಗೆ ಮಾತಾದೀನನ ಬೆಟ್ಟಿಯಾಗಿತ್ತೇ? ಅವನ ಜಾತಿಯವರೆಲ್ಲ ಅವನನ್ನು ಜಾತಿ-ಕಟ್ಟನಿಂದ ಹೊರಮಾಡಿರುವರಂತೆ!'

ಸಿಲಿಯಾ ಅಲಕ್ಷ್ಯಭಾವದಿಂದ ಹೇಳಿದಳು – 'ಜಾತಿಗೆ ತೆಗೆದುಕೊಳ್ಳದೆ ಎಲ್ಲಿ ಹೋಗುತ್ತಾರೆ? ಆ ಮುದುಕ ಹಣ ವೆಚ್ಚಮಾಡಲಿಕ್ಕೆ ತಯಾರಿಲ್ಲ – ಅಷ್ಟೆ. ಹಣವಿದ್ದರೆ ಎಲ್ಲ ಆಗುತ್ತದೆ.'

'ನೀನೇಕೆ ಅವನ ಸುದ್ದಿಯನ್ನೇ ಬಿಟ್ಟುಬಿಡಬಾರದು? ಯಾವನಾದರೂ

ನಿಮ್ಮ ಜಾತಿಯುವನ ಕೈಹಿಡಿದು ಅವನೊಡನೆ ಸುಖವಾಗಿರಬಾರದೇ? ಇದೀಗ ದೊಡ್ಡ ಅಪಮಾನವಲ್ಲವೇ – ನಿನಗೆ?'

'ಅವರಿಗೂ ನನ್ನಿಂದಾಗಿ ಅಪಮಾನವಾಗಲಿಲ್ಲವೇ? ಇಷ್ಟಾದ ಮೇಲೆ ನಾನು ಬಿಡುವುದು ಸರಿಯೇ? ಅವರು ಈಗ ಪಂಡಿತರಾಗಲಿ; ಅಥವಾ ದೇವತೆಯೇ ಆಗಿಹೋಗಲಿ. ನನ್ನ ಮಟ್ಟಿಗೆ ಅವರು ಆ ಹಳೆಯ ಮಾತಾ ದೀನರೇ. ಅಂದು ನನ್ನ ಕಾಲ ಮೇಲೆ ಬಿದ್ದು ಬೇಡಿಕೊಂಡಿದ್ದರು. ಇಂದು ಅವರು ಬೇರೆ ಮದುವೆಯಾಗಿ ನನ್ನನ್ನು ಬಿಟ್ಟುಬಿಟ್ಟರೂ ಒಂದು ದಿನ ಬಂದೇ ಬಂದಾರು. ನೋಡು ಬೇಕಾದರೆ.'

'ಹೌದು; ಈಗ ಬಂದರೆ ನಿನ್ನನ್ನು ಹಸಿ ಹಸಿಯೇ ತಿಂದುಬಿಟ್ಟಾರು.'

'ಅವರನ್ನು ಯಾರು ಕರೆಯಹೋಗುವರು? ನಮ್ಮ ಧರ್ಮ ನಮ್ಮ ಕೈಯಲ್ಲಿದ್ದರೆ ಯಾರ ಭಯ ನಮಗೆ? ಅವರು ಒಂದು ವೇಳೆ ತಮ್ಮ ಧರ್ಮ ತೊರೆದರೂ ನಾನೇಕೆ ನನ್ನ ಧರ್ಮ ಬಿಡಬೇಕು?'

ಬೆಳಗ್ಗೆ ಎದ್ದು ಸಿಲಿಯಳು ಸೋನಾರಿಗೆ ಹೋಗಿ ಬರುವುದೆಂದು ಯೋಚಿಸಿದಳು. ಆದರೆ ದನಿಯಳಿಗೆ ತಲೆನೋವಾದ್ದರಿಂದ ಅವಳ ಕೆಲಸ ಸಿಲಿಯಳೇ ಮಾಡಬೇಕಾಗಿ ಬಂತು. ಕೊನೆಗೆ ಎಲ್ಲ ಕೆಲಸ ಮುಗಿದಾದ ಮೇಲೆ ಮಧ್ಯಾಹ್ನದ ಬಿಡುವಿನಲ್ಲಿ ಸೋನಾರಿಯತ್ತ ಹೊರಟುಹೋದಳು.

ಇತ್ತ ಸಾಯಂಕಾಲದ ವೇಳೆ ಪುನಃ ಗದ್ದೆಯ ಕೆಲಸಕ್ಕೆ ಹೊರಟಾಗ ಸಿಲಿಯಳು ಅಲ್ಲಿದ್ದಿಲ್ಲ. ಆಗ ಹೋರಿರಾಮ ಕೋಪದಿಂದ – 'ಸಿಲಿಯಳೆಲ್ಲಿಗೆ ಹಾರಿಹೋದಳು? ಇದ್ದ ಹಾಗೇ ಹೇಗೆ ಮಾಯವಾಗಿಬಿಡುತ್ತಾಳೋ – ಏನೋ! ನಿನಗೆ ಗೊತ್ತಿದೆಯೇ ಸೋನಾ?' – ಎಂದು ಕೇಳಿದ.

ಸೋನೆ ಮೆಲ್ಲನೆ ನೆಪ ಹೇಳಿ ಜಾರಿಸಬಯಸಿದಳು – 'ಧೋಬಿಯಲ್ಲಿಗೆ ಹೋಗಿಬರಬೇಕೆಂದು ಹೇಳುತ್ತಿದ್ದಳು. ಪ್ರಾಯಶಃ ಅಲ್ಲಿಗೇ ಹೋದಳೋ ಏನೋ?'

ಆಗ ದನಿಯಳು ಚಾಪೆಯಿಂದೆದ್ದು ಹೇಳಿದಳು – 'ನಡೆಯಿರಿ. ನಾನೇ ನೀರ ಕೆಲಸಕ್ಕೆ ಸೇರುತ್ತೇನೆ. ಅಷ್ಟೆಲ್ಲ ಗದರಿಸಲಿಕ್ಕೆ ನೀವೇನು ಮಜೂರಿ ಕೊಡುವಿರೇ – ಅವಳಿಗೆ?'

'ಅದು ಏನಿದ್ದರೂ ಅವಳು ನಮ್ಮ ಮನೆಯಲ್ಲಿಲ್ಲವೇ? ಅವಳಿಂದಾಗಿ ಊರಲ್ಲೆಲ್ಲ ಕೆಟ್ಟ ಹೆಸರು ಬೇರೆ ಬಂದಿದೆ ನಮಗೆ!'

'ಹೌದೌದು ; ಮನೆಯ ಒಂದು ಮೂಲೆಯಲ್ಲಿ ಅವಳು ಬಿದ್ದುಕೊಂಡಿದ್ದ ಮಾತ್ರಕ್ಕೆ ಬಾಡಿಗೆ ತೆಗೆದುಕೊಳ್ಳುವಿರೇ ?'

'ಒಂದು ಮೂಲೆಯಲ್ಲಿ? ಇಡೀ ಕೋಣೆಯೇ ಅವಳಿಗಾಗಿಲ್ಲವೇ ?'

'ಹೌದು; ಆ ಕೋಣೆಗೆ ತಿಂಗಳಿಗೆ ೫೦ ರೂಪಾಯಿ ಬಾಡಿಗೆ ತೆಗೆದುಕೊಳ್ಳಿ ಹಾಗಾದರೆ.'

'ಅದಕ್ಕೆ ಬಾಡಿಗೆ ಮೂರು ಕಾಸೇ ಆಗಲಿ; ನಮ್ಮ ಮನೆಯಲ್ಲಿದ್ದ ಮೇಲೆ ನಮ್ಮ ಹತ್ತಿರ ಹೇಳಿ ಹೋಗುವುದು ಬೇಡವೇ? ಬರಲಿ ಅವಳು – ನೋಡುತ್ತೇನೆ.'

ನೀರಿನ ಏತ ಚಲಿಸತೊಡಗಿತು. ದನಿಯುಳು ಬರುವುದು ಬೇಡವೆಂದು ಹೋರಿರಾಮನೇ ತಡೆದ. ಸೊನೆ ಮತ್ತು ರೂಪಾ– ಅವನಿಗೆ ಸಹಾಯಕರಾದರು. ಸೋನೆ ಮಧ್ಯೇ ಮಧ್ಯೇ ಸೋನಾರಿಯಿಂದ ಬರುವ ದಾರಿಯತ್ತ ಕಣ್ಣು ಹೊರಳಿಸುತ್ತಲೇ ಇದ್ದಳು. ಅವಳಿಗೆ ಸಂಶಯವೂ ಆಸೆಯೂ – ಎರಡೂ ಇತ್ತು. ಆದರೆ ಆಸೆ ಕಡಮೆ; ಸಂಶಯ ಹೆಚ್ಚು. ಅವರಾದರೂ ಕೈಗೆ ಬಂದ ರೂಪಾಯಿಯನ್ನು ಏಕೆ ಬಿಟ್ಟುಕೊಟ್ಟಾರು? ಹಣ ಇದ್ದವರಿಗೆ ಆಸೆ ಇನ್ನೂ ಹೆಚ್ಚು. ಅದರಲ್ಲೂ ಆ ಗೌರಣ್ಣನಿಗೆ ಹಣದ ಆಸೆ ವಿಪರೀತ. ಆ ಮಧುರನಲ್ಲಿ ದಯೆ ಧರ್ಮ–ಎಲ್ಲವೂ ಇದೆ. ಆದರೆ ತಂದೆಯ ಇಚ್ಛೆಗೆ ವಿರುದ್ಧವಾಗಿ ನಡೆಯಲು ಅವನಿಗೆ ಸಾಧ್ಯವೇ? ಅವನು ಸಿಕ್ಕಿದರೆ–'ಹೋಗಿ ನೀನು ಹಣವಂತರ ಹುಡುಗಿಯ ಬೆನ್ನೇ ಹಿಡಿ; ನಿನ್ನಂಥ ಧನಪಿಶಾಚಿಯ ಕೈ ತಾನು ಹಿಡಿಯಲಿಕ್ಕೇ ಇಲ್ಲ'.– ಎಂದು ಸೋನೆ ಹೇಳಿಬಿಡುವುದರಲ್ಲಿದ್ದಳು. ಅಥವಾ ಗೌರಣ್ಣ ವರದಕ್ಷಿಣೆ ಇಲ್ಲದೆ ವಿವಾಹ ಮುಗಿಸಲು ಒಪ್ಪಿದರೆ– ಅವನ ಕಾಲು ತೊಳೆದು ಕುಡಿಯಲಿಕ್ಕೂ ಅಣಿಯಾಗಿದ್ದಳು. ತನ್ನ ಸ್ವಂತ ತಂದೆಗಿಂತಲೂ ವಿಶೇಷ ಆದರ ತೋರಿಸಲು ಸಿದ್ಧಳಿದ್ದಳು. ಸಿಲಿಯಳಿಗಂತು ಹೊಟ್ಟೆ ತುಂಬ ಮಿಠಾಯಿ ತಿನ್ನಿಸಬೇಕೆಂದೂ ತೋರಿತು. ಗೋಬರನು ಕೊಟ್ಟಿದ್ದ ಆ ರೂಪಾಯಿಯನ್ನು ಇನ್ನೂ ಅವಳು ಜೋಪಾನವಾಗಿಟ್ಟಿದ್ದಳು. ಈ ಎಲ್ಲ ಯೋಚನೆ ಮಾಡುತ್ತ ಮಾಡುತ್ತ ಅವಳ ಕಣ್ಣು ಮಿನುಗತೊಡಗಿದುವು. ಕಪೋಲಗಳ ಮೇಲೆ ಸ್ವಲ್ಪ ಕೆಂಬಣ್ಣವೂ ಮೂಡಿ ಬಂತು.

ಆದರೆ ಸಿಲಿಯುಳೇಕೆ ಇನ್ನೂ ಬರಲಿಲ್ಲ? ಅಲ್ಲಿಗೆ ಅಷ್ಟೇನೂ ದೂರವಿಲ್ಲವಲ್ಲ? ಅವಳನ್ನು ಹೊರಡಲಿಕ್ಕೇ ಬಿಡಲಿಲ್ಲವೋ – ಏನೋ! ಆಹಾ! ಅವಳು ಅಲ್ಲಿ

ಬರುತ್ತಿದ್ದಾಳೆ! ಆದರೆ ಬಹಳ ಮೆಲ್ಲಮೆಲ್ಲನೆ ಬರುತ್ತಿದ್ದಾಳೆ. ಆ ಧನ ಪಿಶಾಚಿಗಳೆಲ್ಲ ಕಿವಿಕೊಡಲೇ ಇಲ್ಲವೆಂದು ತೋರುತ್ತದೆ. ಇಲ್ಲವಾದರೆ ಓಡಿ ಕೊಂಡು ಬರುತ್ತಿದ್ದಳು.

ಸಿಲಿಯೂ ಬಂದೇಬಿಟ್ಟಳು. ಆದರೆ ಬಾವಿಯ ಹತ್ತಿರ ಹೋಗದೆ ಗದ್ದೆಗೇ ಹೋಗಿ ಸೇರಿದಳು. ಸೋನೆ ಈ ಎರಡು ಗಂಟೆಗಳನ್ನು ಬಹು ಕಷ್ಟದಿಂದ ಕಳೆ ದಿದ್ದಳು. ಆದರೆ ಅವಳನ್ನು ಕಂಡೊಡನೆಯೇ ಓಡಿಕೊಂಡು ಅವಳ ಸಮೀಪ ಸೇರಿದಳು.

'ಅಲ್ಲೇನು – ಮುಳುಗೇ ಹೋದೆಯೋ – ಎಂದು ತಿಳಿದಿದ್ದೆ. ನಿನ್ನ ದಾರಿ ನೋಡಿ ನೋಡಿ ಕಣ್ಣು ಕುರುಡಾಯಿತು.'

ಸ್ವಲ್ಪ ಬೇಸರಗೊಂಡು ಸಿಲಿಯುಳೆಂದಳು – "ಹಾಗೇನು ನಾನು ಅಲ್ಲಿಗೆ ಹೋಗಿ ನಿದ್ದೆ ಹೊಡೆದೆನೆ? ಇಂತಹ ಮಾತುಕತೆಗಳನ್ನೆಲ್ಲ ಸಿಕ್ಕಿದಲ್ಲಿ ನಡೆಸ ಲಾದೀತೇ? ಸಂದರ್ಭ ನೋಡಬೇಡವೇ? ಮಥುರನು ನದಿಯ ದಡದಲ್ಲಿ ಕೋಣ ಮೇಯಿಸುತ್ತಿದ್ದ. ಹುಡುಕಾಡುತ್ತಾ ಅವನಿದ್ದಲ್ಲಿಗೇ ಮೆಲ್ಲನೆ ಹೋಗಿ ನಿನ್ನ ಸಂದೇಶ ತಿಳಿಸಿದೆ. ಬಹಳ ಸಂತೋಷವಾಯಿತವನಿಗೆ. ಅವನು ನನ್ನ ಕಾಲ ಮೇಲೆ ಬಿದ್ದು – 'ಸಿಲ್ಲೂ, ಆ ಸೋನೆ ನಮ್ಮ ಮನೆಗೆ ಬರುತ್ತಾಳೆಂದು ಕೇಳಿದಂದಿನಿಂದ ನಿದ್ದೆಯೇ ನನಗೆ ಬರುತ್ತಿಲ್ಲ. ಅಂದು ಅವಳು ಬೈದುದು ಸಾರ್ಥಕವಾಯಿತೆಂದು ನನ್ನ ಭಾವನೆ. ಆದರೆ ನೀನು ಹೇಳುವ ಆ ವರದಕ್ಷಿಣೆಯ ವಿಚಾರದಲ್ಲಿ ಅಪ್ಪ ಏನು ಹೇಳುತ್ತಾರೋ – ಏನೋ! ಅವರು ಯಾರು ಹೇಳಿ ದ್ದನ್ನೂ ಕೇಳುವವರಲ್ಲವಲ್ಲ!' – ಎಂದು ಹೇಳಿ ಬೇಸರತೋರಿದ."

ಆಗ ಸೋನೆ ತಡೆದಳು – 'ಹಾಗಿದ್ದರೆ ಇನ್ನು ಸೋನೆಯ ಕನಸು ಕಾಣುತ್ತಾ ಇರಲಿ. ಅವಳೆಷ್ಟಕ್ಕೂ ಸಿಗುವವಳಲ್ಲ.'

"ಸರಿ–ಒಡನೆಯೇ ಆ ಕೋಣಗಳನ್ನು ಅಲ್ಲೇ ಬಿಟ್ಟು ನನ್ನನ್ನು ಗೌರಣ್ಣನ ಹತ್ತಿರ ಕರೆದುಕೊಂಡು ಹೋದ. ಅಲ್ಲಿ ನಾಲ್ಕು ಏತಗಳಲ್ಲಿ ನೀರಿನ ಕೆಲಸ ಸಾಗುತ್ತಿತ್ತು. ದೊಡ್ಡ ಕೆರೆ ಸಹ ಅವರ ಸ್ವಂತದ್ದೇ. ಸಾಧಾರಣ ೧೦ ಎಕ್ರೆ ಜಾಗದಲ್ಲಿ ಕಬ್ಬಿದೆ. ಆದರೆ ಗೌರಣ್ಣನನ್ನು ಕಂಡೊಡನೆ ನನಗೆ ನಗು ಬಂದು ಹೋಯಿತು. ಅವನು ಕುರಿ ಮೇಯಿಸುವವನ ಹಾಗೆಯೇ ಇದ್ದ. ಅಂತು ತಂದೆ ಮಕ್ಕಳೊಳಗೆ ಭಾರೀ ಮಾತುಕತೆಯಾಯಿತು. ಅಪ್ಪ ಹೇಳುತ್ತಿದ್ದ – 'ನಾನು ಇಷ್ಟ ಬಂದಂತೆ ತೆಗೆದುಕೊಳ್ಳುತ್ತೇನೆ – ಕೊಡುತ್ತೇನೆ. ನೀನಾರು

ಕೇಳುವವನು?'–ಎಂಬುದಾಗಿ. ಮಧುರ ಉತ್ತರಿಸುತ್ತಿದ್ದ–' ಹಾಗೆ ಕೊಂಡು ಕೊಡುವುದಿದ್ದರೆ ನಿನಗಿಷ್ಟ ಬಂದಂತೆ ನೀನು ಮಾಡಬಹುದು. ಆದರೆ ನನ್ನ ಮದುವೆಯ ವಿಚಾರದಲ್ಲಿ ನಾನು ಹೇಳಿದಂತಾಗಬೇಕು.' ಅಂತು ಇಂತು ಮಾತು ಬೆಳೆದುಹೋಯಿತು. ಅಪ್ಪ ಕೋಪದಿಂದ ಕಾಲಿನ ಎಕ್ಕಡ ತೆಗೆದ ಮಗನಿಗೆ ಹೊಡೆಯತೊಡಗಿದ. ಬೇರಾವ ಮಗನಾಗಿದ್ದರೂ ಸುಮ್ಮನಿರುತ್ತಿದ್ದಿಲ್ಲ. ಮಧುರನ ಒಂದೇ ಗುದ್ದಿಗೆ ಆ ಮುದುಕ ಬರುತ್ತಿದ್ದಿಲ್ಲ. ಪೆಟ್ಟು ತಿಂದು ಸಹ ಮಗ ಸುಮ್ಮನೇ ಇದ್ದ. ಕಣ್ಣೀರು ತುಂಬಿ ನನ್ನತ್ತ ಅಸಹಾಯನಂತೆ ನೋಡಿದ. ಆಗ ಗೌರಣ್ಣನು ನನ್ನ ಮೇಲೆ ರೇಗಿಬಿದ್ದ. ಬಾಯಿಗೆ ಬಂದಂತೆ ಬೈಯಲಾರಂಭಿಸಿದ. ಆದರೆ ನಾನೇಕೆ ಕೇಳುತ್ತೇನೆ? ನಾನು ಸ್ಪಷ್ಟವಾಗಿ ಹೇಳಿಯೇ ಬಿಟ್ಟೆ – ' ೨೦೦–೩೦೦ ರೂಪಾಯಿಯೆಂದರೆ ಅದೊಂದು ದೊಡ್ಡ ಸಂಗತಿಯಲ್ಲ. ಹೋರಿರಾಮಣ್ಣ ಅದರಿಂದೇನೂ ದಿವಾಳಿಯಾಗಿ ಹೋಗಲಿಕ್ಕಿಲ್ಲ. ಅಥವಾ ನೀವಾದರೂ ದೊಡ್ಡ ಕುಬೇರರಾಗಲಿಕ್ಕಿಲ್ಲ. ಆದರೆ ಇಷ್ಟು ಮಾತ್ರ ಹೇಳಿಬಿಡುತ್ತೇನೆ– ಆ ಚಿನ್ನದಂತಹ ಸೋನೆ ಮಾತ್ರ ನಿಮಗೆಂದೂ ಸಿಗಲಾರಳು."

ಸೋನೆಯು ಸಜಲ ನೇತ್ರಳಾಗಿ ಕೇಳಿದಳು – ' ಗೌರಣ್ಣ ಈ ಮಾತಿಗೋಸ್ಕರವೇ ಅವರನ್ನು ಹೊಡೆದರೇ ?'

ಸಿಲಿಯಳು ಆ ಅಪಮಾನದ ವಿಚಾರವನ್ನು ಮುಚ್ಚಿಬಿಡಬೇಕೆಂದು ಬಯಸಿದ್ದಳು. ಆದರೆ ಈಗ ಅವಳಿಂದ ಅದನ್ನು ಮುಚ್ಚಿಡಲಾಗಲಿಲ್ಲ. ಅವಳು ಹೇಳಿದಳು – " ಮತ್ತೇನಿಲ್ಲ. ಮಾತಿನ ಭರದಲ್ಲಿ ಗೋಬರಣ್ಣನ ಸಮಾಚಾರವೂ ಬಂತು. ಆ ಸಂದರ್ಭದಲ್ಲಿ ಮಧುರಣ್ಣ ಹೇಳಿದ–ಯಾವ ಮನೆಯ ವಿಚಾರದಲ್ಲಿ ತಾನೇ ಕಳಂಕವಿಲ್ಲ? ಕೆಲವರದು ಗುಟ್ಟಾಗಿದೆ; ಕೆಲವರದು ಇದಿರು ಬಂದಿದೆ–ಅಷ್ಟೆ.

" ಎಂದರೆ, ಗೌರಣ್ಣ ಸಹ ಮೊದಲೊಬ್ಬ ಸಮಗಾರಳನ್ನಿಡಿಸಿಕೊಂಡಿದ್ದ. ಅವಳಲ್ಲಿ ಎರಡು ಮಕ್ಕಳೂ ಹುಟ್ಟಿದ್ದರು. ಹಾಗಾಗಿ ಈ ಮಾತು ಬಾಯಿಂದ ಹೊರಟೊಡನೆಯೇ ಗೌರಣ್ಣನಿಗೆ ಕೆಂಡದಂತಹ ಕೋಪ ಬಂತು. ಎಷ್ಟು ಆಸೆಗಾರನೋ ಅಷ್ಟೇ ಹಟವಾದಿಯೂ ಆಗಿದ್ದಾನೆ – ಆತ. ಅಂತು ಅವನು ಹಣ ತೆಗೆದುಕೊಳ್ಳದೆ ಬಿಡುವುದು ಕಷ್ಟ."

ಇಬ್ಬರೂ ಮನೆಯತ್ತ ಹೋದರು. ಸೋನೆಯ ಮನಸ್ಸಿನಲ್ಲಿ ಆ ಅಪಮಾನ,

ಆ ಪೆಟ್ಟು, ನೋವು, ಚಿಂತೆ ಎಲ್ಲವೂ ತುಂಬಿಬಂತು. ಆದರೆ ಮರುಕ್ಷಣದಲ್ಲಿ ಮಥುರಣ್ಣನ ಆ ವೀರ ಮೂರ್ತಿಯು ನೆನಪಾಗಿ ಹೃದಯದಲ್ಲಿ ಒಂದು ತರದ ಸ್ಫೂರ್ತಿ ಮೂಡಿಬಂತು. ಅವನ ಮೂರ್ತಿಯನ್ನು ತನ್ನ ಹೃದಯದಲ್ಲಿರಿಸಿ ಅವನ ಚರಣಗಳನ್ನು ಕಣ್ಣೀರಿಂದ ತೊಳೆಯುವ ಆಸೆಯಾಯಿತು ಅವಳಿಗೆ.

ಆ ದಿನ ರಾತ್ರಿಯೇ ಸೋನೆಗೆ ವಿಶೇಷ ಜ್ವರ ಏರಿ ಬಂತು.

ಮರುದಿನ ಗೌರಣ್ಣನ ಕೆಲಸಗಾರನೊಬ್ಬನು ಪತ್ರ ಒಂದನ್ನು ಹೋರಿ ರಾಮನ ಕೈಯಲ್ಲಿ ತಂದಿತ್ತ. ಅದರಲ್ಲಿ ಈ ರೀತಿ ಬರೆಯಲಾಗಿತ್ತು :

'ಸ್ವಸ್ತಿಶ್ರೀ ಸರ್ವ ಸಂಪನ್ನ ಶ್ರೀ ಹೋರಿರಾಮರವರಿಗೆ ಗೌರೀರಾಮನ ನಮಸ್ಕಾರಪೂರ್ವಕ ವಿಜ್ಞಾಪನೆಗಳು – ಅಂದು ನಮ್ಮಿಬ್ಬರೊಳಗೆ ಯಾವ ವರದಕ್ಷಿಣೆಯ ವಿಚಾರದಲ್ಲಿ ಮಾತುಕತೆ ನಡೆದಿತ್ತೋ ಆ ವಿಚಾರದಲ್ಲಿ ನಾವು ಶಾಂತ ಮನಸ್ಸಿನಿಂದ ಪರಿಶೀಲಿಸಿದೆವು. ಈ ವರದಕ್ಷಿಣೆ ಹಾಗೂ ಕೊಡುವ ಕೊಳ್ಳುವ ದುಷ್ಟ ಪದ್ಧತಿಯಿಂದಾಗಿ ವಧೂವರರ ಮನೆಗಳೆರಡೂ ಹಾಳಾಗಿ ಹೋಗುವವು. ನೀವು ನಾವು ಈ ಸಂಬಂಧ ಮಾಡಿಕೊಳ್ಳುವಾಗ ಯಾರಿಗೂ ಯಾರಿಂದಲೂ ತೊಂದರೆಯಾಗಬಾರದೆಂಬುದೇ ನನ್ನ ಉದ್ದೇಶವಾಗಿದೆ. ಹಾಗಾದ್ದರಿಂದ ನೀವು ವರದಕ್ಷಿಣೆ, ವರೋಪಚಾರಗಳ ಯಾವ ಗೋಜಿಗೂ ಹೋಗುವುದು ಬೇಡ. ನಮ್ಮ ಖರ್ಚನ್ನು ನಾವೇ ನೋಡಿಕೊಂಡು ನಿಮ್ಮಲ್ಲಿಗೆ ದಿಬ್ಬಣ ಬರುತ್ತೇವೆ. ನೀವು ಮನಃಪೂರ್ವಕವಾಗಿ ಮಾಡಿಸುವ ಊಟ ಉಪಚಾರಗಳಿಂದಲೇ ನಮಗೆ ಪೂರ್ಣ ತೃಪ್ತಿ ಇದೆ. ಇತಿ – ಗೌರಿರಾಮನ ನಮಸ್ಕಾರಗಳು.'

ಹೋರಿರಾಮನು ಪತ್ರ ಓದಿಸಿ ಸಂತೋಷದಿಂದ ಹಾರಿಕೊಂಡೇ ಒಳ ಹೋಗಿ ದನಿಯಳಿಗೆ ಸುದ್ದಿ ತಿಳಿಸಿದ. ಸಂತೋಷದ ಭರದಿಂದ ಆತ ಉಬ್ಬಿ ಹೋಗಿದ್ದ. ಆದರೆ ದನಿಯಾ ಮಾತ್ರ ಯಾವುದೋ ಒಂದು ಯೋಚನೆಯಲ್ಲಿ ಮುಳುಗಿದವಳಂತೆ ಸುಮ್ಮನಾಗಿ ಒಂದು ಕ್ಷಣದ ಬಳಿಕ ಹೇಳತೊಡಗಿದಳು – 'ಇದೀಗ ಗೌರಣ್ಣನ ವಿಶಾಲ ಮನಸ್ಸಿನ ಪರಿಣಾಮ. ಆದರೆ ನಾವು ಸಹ ನಮ್ಮ ಕುಲಮರ್ಯಾದೆಯನ್ನು ಕಾಪಾಡಿಕೊಳ್ಳುವುದು ಬೇಡವೇ ? ಊರ ಜನರೆಲ್ಲ ಏನು ಹೇಳಿಯಾರು ? ಹಣವೆಂದರೆ ನಮ್ಮ ಕೈಯ ಕಲ್ಮಷವಲ್ಲವೇ ? ಹಣಕ್ಕಾಗಿ ನಮ್ಮ ಕುಲಗೌರವ ಬಿಟ್ಟುಕೊಡುವುದೇ ? ನಮಗೆ ಸಾಧ್ಯವಿದ್ದಷ್ಟು ನಾವು ಕೊಡಲೇಬೇಕು. ಅದನ್ನು ಗೌರಣ್ಣ ತೆಗೆದುಕೊಳ್ಳಲೇ ಬೇಕು. ನೀವೂ

ಅದೇ ಉತ್ತರ ಬರೆದು ಕಳುಹಿಸಿರಿ. ತಂದೆತಾಯಿಯರ ಸಂಪತ್ತಿನಲ್ಲಿ ಮಗಳಿಗೆ ಏನೂ ಅಧಿಕಾರವಿಲ್ಲವೇ? ಅಥವಾ ಬರೆಯುವುದೇನನ್ನು? ಬಂದ ಆ ಜನದ ಹತ್ತಿರ ನಾನೇ ಹೋಗಿ ಹೇಳಿ ಕಳಿಸಿಬಿಡುತ್ತೇನೆ.'

ಹೋರಿರಾಮ ಬುದ್ಧಿಭ್ರಂಶವಾದವನಂತೆ ಅಂಗಳದಲ್ಲಿ ಸುಮ್ಮನೆ ನಿಂತಿದ್ದ. ದನಿಯಳು ತನ್ನ ಉದಾರ ಬುದ್ಧಿಯ ಸಂದೇಶವನ್ನು ಬಂದ ಆಳಿನ ಹತ್ತಿರ ಹೇಳುತ್ತಿದ್ದಳು. ಕೊನೆಗೆ ಫಲಾಹಾರ ಮಾಡಿಸಿ ಆತನನ್ನು ಕಳಿಸಿಯೂ ಕೊಟ್ಟಳು.

ಆವನು ಹೊರಟುಹೋದ ಬಳಿಕ ಹೋರಿರಾಮನೆಂದ – 'ಇದೇನೆಲ್ಲ ನೀನು ಮಾಡಿಹಾಕುವೆಯೋ – ನನಗರಿಯದು ದನಿಯಾ. ನಿನ್ನ ಮರ್ಜಿ ನನಗೆ ಈ ತನಕವೂ ಪೂರ್ತಿ ಅರ್ಥವಾಗಲಿಲ್ಲವಲ್ಲ! ನೀನು ಮುಂದೆಯೂ ಹೋಗುತ್ತಿ, ಹಿಂದೆಯೂ ಬರುತ್ತಿ. ಮೊದಲೊಮ್ಮೆ – ಒಂದು ಪೈಯೂ ಸಾಲ ಮಾಡಬಾರದೆಂದು ಕಾದಾಡಿದೆ. ಆದರೆ ಈಗೇನೋ ದೇವರು ಆ ಗೌರಣ್ಣನಿಗೆ ಒಳ್ಳೆಯ ಬುದ್ಧಿಕೊಟ್ಟು, ಈ ಕೊಡುವ ಕೊಳ್ಳುವ ವ್ಯಾಪಾರ ಬೇಡನೆಂದು ಆತ ಹೇಳಿ ಕಳಿಸಿದರೆ – ನೀನು ಈ ಕುಲಮರ್ಯಾದೆಯ ರಾಗಾಲಾಪನೆ ಮಾಡುತ್ತಿರುವೆ! ನಿನ್ನ ಮರ್ಮವನ್ನು ಆ ಭಗವಂತನೇ ಬಲ್ಲ.'

ದನಿಯಳೂ ಸರಿಯಾಗಿ ಹೇಳಿಬಿಟ್ಟಳು – 'ಆಗ ಗೌರಣ್ಣ ತನ್ನ ಹಟ ತೋರಿಸುತ್ತಿದ್ದ. ಈಗ ದೊಡ್ಡತನ ತೋರಿಸುತ್ತಿದ್ದಾನೆ. ಇಟ್ಟಿಗೆಯ ತುಂಡಿನ ಹೊಡೆತಕ್ಕೆ ಕಲ್ಲುಹೊಡೆತ ಉತ್ತರವಾಗಬಹುದು. ಆದರೆ ನಮಸ್ಕಾರಕ್ಕುತ್ತರ – ಬೈದೋಡಿಸುವುದಲ್ಲ.'

ಹೋರಿರಾಮ ಮುಖ ತಿರುಗಿಸಿ ಹೇಳಿದ – 'ನೋಡುವಾ – ನೀನೂ ನಿನ್ನ ದೊಡ್ಡತಿಕೆ ತೋರಿಸಿಯೇಬಿಡು. ರೂಪಾಯಿ ಮಾತ್ರ ಎಲ್ಲಿಂದ ಬರುವುದೆಂದು ನೋಡಿಬಿಡುವಾ.'

ದನಿಯಳೂ ಕಣ್ಣು ಹಾರಿಸಿಕೊಂಡು ಹೇಳಿದಳು – 'ರೂಪಾಯಿ ಕೂಡಿಸಿ ಕೊಡುವುದು ನನ್ನ ಕರ್ತವ್ಯವಲ್ಲ, ನಿಮ್ಮದು.'

'ನಾನಂತು ದುಲಾರಿಯ ಹತ್ತಿರವೇ ತೆಗೆದುಕೊಳ್ಳುವುದು.'

'ಸರಿ. ಅವಳ ಕೈಯಿಂದಲೇ ತೆಗೆದುಕೊಳ್ಳಿ. ಬಡ್ಡಿ – ಎಲ್ಲರೂ ತೆಗೆದುಕೊಳ್ಳುತ್ತಾರೆ. ಮುಳುಗಿಬಿಡುವುದು ನಿಶ್ಚಯವಾದ ಮೇಲೆ – ಕೆರೆಯಾದರೇನು, ಗಂಗಾನದಿಯಾದರೇನು?'

ಹೋರಿರಾಮನು ಹೊರಬಂದು ಗುಡುಗುಡಿ ಸೇದಲಾರಂಭಿಸಿದ. ಎಷ್ಟು ಸುಖವಾಗಿ ಕುತ್ತಿಗೆಯ ಉರುಳು ಸಡಿಲಾಗಿ ಹೋಗುತ್ತಿತ್ತು ! ಆದರೆ ದನಿಯಾ ತನ್ನ ಹಟ ಬಿಡಬೇಕಲ್ಲ ? ಯಾವಾಗ ನೋಡಿದರೂ ಇವಳ ದಾರಿಯೇ ಬೇರೆ. ಎಂತಹ ಭೂತ ಇವಳಿಗೆ ಹಿಡಿದಿದೆಯೋ ದೇವರು ಬಲ್ಲ. ಮನೆಯ ಈ ದುರ್ದಶೆ ನೋಡಿಯೂ ಇವಳ ಕಣ್ಣು ತೆರೆಯುವುದಿಲ್ಲವಲ್ಲ !

೨೦

ಇತ್ತ ಬೋಲಣ್ಣ ಎರಡನೆ ಹೆಂಡತಿಯನ್ನು ಮಾಡಿಕೊಂಡಿದ್ದ. ಮನೆ-ಯಾಕೆ ಇಲ್ಲದೆ ಅವನ ಜೀವನವೇ ನೀರಸವಾಗಿತ್ತು. ಜುನಿಯಾ ಇರುವ ತನಕ ಅವಳು ಈತನ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಳು. ಅವಳು ಹೋದ ಮೇಲೆ ಅವನು ಅನಾಥನಂತಾಗಿದ್ದ. ಸೊಸೆಯಂದಿರಿಗೆ ಮನೆಕೆಲಸವೇ ಕೈತುಂಬ ಆಗುತ್ತಿತ್ತು. ಹಾಗಿರುವಾಗ ಅವರು ಎಷ್ಟೆಂದು ಇವನ ಯೋಗಕ್ಷೇಮ ನೋಡಿ ಕೊಂಡಿದ್ದಾರು ? ಹಾಗಾಗಿ ಅವನು ಮದುವೆಯಾಗುವುದು ಅಗತ್ಯವಾಗಿ ಹೋಯಿತು. ಸಂಯೋಗವಶಾತ್ ಒಳ್ಳೆಯ ಪ್ರಾಯ ಬಂದ ಯುವತಿಯೇ ಅವನಿಗೆ ಸಿಕ್ಕಿಬಿಟ್ಟಳು. ಗಂಡ ಸತ್ತು ಅವಳಿಗೆ ಮೂರು ತಿಂಗಳು ಮಾತ್ರ ಆಗಿತ್ತು. ಒಬ್ಬ ಮಗ ಕೂಡ ಅವಳಿಗಿದ್ದ. ಅವಳ ಮೇಲೆ ಬೋಲಣ್ಣನ ಕಣ್ಣು ಬಿತ್ತು. ಒಡನೆಯೇ ಬೇಟೆ ಹೊಡೆದೇಬಿಟ್ಟ.

ಈ ವರೆಗೆ ಅವನ ಮನೆಯ ಅಧಿಕಾರವೆಲ್ಲ ಸೊಸೆಯಂದಿರ ಕೈಯಲ್ಲಿತ್ತು. ಅವರು ಇಷ್ಟಬಂದಹಾಗೆ ಇರುತ್ತಿದ್ದರು; ಇಷ್ಟ ಬಂದ ಕೆಲಸ ನಡೆಸುತ್ತಿದ್ದರು. ಅದರಲ್ಲೂ ಜಂಗಿಯು ತನ್ನ ಹೆಂಡತಿಯನ್ನು ಕರೆದುಕೊಂಡು ಲಖ್ನೌಗೆ ಹೋದ ಮೇಲಂತು ಕಾಮತನ ಹೆಂಡತಿಯೇ ಮನೆಯ ಅಧಿಕಾರಿಣಿಯಾಗಿದ್ದಳು. ಐದಾರು ತಿಂಗಳಲ್ಲೇ ಅವಳು ೩೦–೪೦ ರೂಪಾಯಿ ಕೈಯಲ್ಲಿ ಮಾಡಿಕೊಂಡಿದ್ದಳು. ಪಾವು, ಅರ್ಧ ಸೇರು, ಹಾಲು ಬೆಣ್ಣೆ ಕದ್ದು ಕದ್ದು ಮಾರಿಬಿಡುತ್ತಿದ್ದಳು. ಆದರೆ ಈಗಲಾದರೋ ಅವಳ ಚಿಕ್ಕತ್ತೆ ಯಜಮಾನ್ತಿಯಾಗಿ ಬಂದಳು. ಅವಳ ಅಡೆ ತಡೆಗಳೆಲ್ಲ ಸೊಸೆಗೆ ಸರಿಬಾರದೆ ಒಂದೊಂದೇ ಜಗಳ ಮೊದಲಾಯಿತು. ಕೊನೆಗೆ ತಮ್ಮ ತಮ್ಮ ಹೆಂಡಂದಿರ ಪಕ್ಷ ಹಿಡಿದು ಬೋಲ ಮತ್ತು

ಕಾಮತರೊಳಗೂ ಜಗಳ ತಲೆ ಎತ್ತಿತು. ಅದೇ ಬೆಳೆಬೆಳೆದು ಅವರು ಬೇರೆ ಬೇರೆ ಆಗುವಲ್ಲಿ ವರೆಗೂ ಹೋಗಿಬಿಟ್ಟಿತು. ಅದರ ಪೂರ್ವಭಾವಿಯಾಗಿ ಹೊಡೆದಾಟ, ಬಡೆದಾಟಗಳೂ ನಡೆದುಹೋದುವು. ಕಾಮತನು ಗಟ್ಟಿಮುಟ್ಟಾದ ಯುವಕ. ಬೋಲನಿಗೆ – ತಾನು ತಂದೆಯೆಂಬುದೊಂದೇ ಬಲವಾಗಿತ್ತು. ಆದರೆ ಈಗ ಈ ಹೊಸ ಹೆಂಗುಸನ್ನು ಮನೆಗೆ ತಂದ ಮೇಲೆ ಆ ಹಿಂದಿನ ಭಯ ಭಕ್ತಿಗಳನ್ನು ಪಡೆಯುವ ಅಧಿಕಾರ ಆ ತಂದೆಗಿದ್ದಿಲ್ಲ. ಅಥವಾ ಇದ್ದರೂ ಕಾಮತನು ಒಪ್ಪಲಿಕ್ಕೆ ಅಣಿಯಾಗಿದ್ದಿಲ್ಲ.

ಒಂದು ದಿನ ಅವನು ಸಿಟ್ಟಿನ ಕಾವಿನಲ್ಲಿ ನಾಲ್ಕು ಏಟು ಏರಿಸಿ ಬೋಲನನ್ನು ಹೊರ ಮಾಡಿಯೇ ಬಿಟ್ಟ. ಮನೆಯ ಒಂದು ಕಡ್ಡಿಯನ್ನು ಸಹ ಕೊಂಡುಹೋಗಬಿಡಲಿಲ್ಲ. ಊರಿನವರು ಸಹ ಯಾರೂ ಬೋಲನ ಪಕ್ಷ ಹಿಡಿದು ಬರಲಿಲ್ಲ. ಎರಡನೆಯ ಮದುವೆಯಾದ ಬಳಿಕ ಅವನು ಹೆಂಡತಿಯ ಗುಲಾಮನಂತಾಗಿ ಹೋಗಿದ್ದ. ರಾತ್ರಿಯನ್ನೊಂದು ಹೇಗೋ ಮರದಡಿಯಲ್ಲಿ ಕಳೆದು ಬೆಳಗಾದ ಬಳಿಕ ಮೆಲ್ಲನೆ ನೋಖೇರಾಮರಲ್ಲಿ ಬಂದು ಸೇರಿದ. ತನ್ನ ಮಗನ ಅನ್ಯಾಯದ ರಾಮಾಯಣವನ್ನೆಲ್ಲ ಅವರ ಮುಂದೆ ಓದಿದ. ಬೋಲನ ಗ್ರಾಮವೂ ನೋಖೇರಾಮರ ಇಲಾಖೆಗೇ ಸೇರಿತ್ತು. ಅವರ ಅಧಿಕಾರ ಸರ್ವವ್ಯಾಪಿಯಾಗಿತ್ತು. ಆದರೆ ಅವರಿಗೆ ಬೋಲನ ಮೇಲೆ ಯಾವ ತರದ ದಯೆಯೂ ತೋರಿಬರಲಿಲ್ಲ. ಆದರೂ ಗಟ್ಟಿಮುಟ್ಟಾಗಿ ಬೆಳೆದ ಅವನ ಆ ಬಣ್ಣದ ಹೆಂಗುಸನ್ನು ಕಂಡೊಡನೆ ಅವರಿಗೆ ಆಶ್ರಯ ಕೊಡಲೊಪ್ಪಿ ತಮ್ಮ ದನದ ಕೊಟ್ಟಿಗೆಯ ಬದಿಯಲ್ಲೇ ಒಂದು ಕೋಣೆ ಕೊಟ್ಟರು. ತಮ್ಮ ಸ್ವಂತ ದನಕರುಗಳ ಆರೈಕೆ ನೋಡಿಕೊಳ್ಳಲಿಕ್ಕಾಗಿ ಅವರಿಗೊಬ್ಬ ಅನುಭವಸ್ಥ ಕೆಲಸಗಾರನ ಅಗತ್ಯವೂ ಇತ್ತು. ಈಗದು ಸರಿಹೋಯಿತು. ತಿಂಗಳಿಗೆ ಮೂರು ರೂಪಾಯಿ, ದಿನಕ್ಕೆ ಒಂದು ಸೇರು ಧಾನ್ಯ – ಸಂಬಳದ ಮೇರೆಗೆ ಅವರು ಬೋಲನನ್ನು ಕೆಲಸಕ್ಕಿಟ್ಟುಕೊಂಡರು.

ನೋಖೇರಾಮರು ಉದ್ದಮೂಗಿನ, ಬೋಳು ತಲೆಯ, ಕಿರುಗಣ್ಣಿನ ಮನುಷ್ಯರು. ಮೈಬಣ್ಣ ಕಪ್ಪು ಆದರೂ ತಕ್ಕಮಟ್ಟಿಗೆ ಗಟ್ಟಿಮುಟ್ಟಾಗಿದ್ದರು. ಹೊರ ಹೋಗುವಾಗ ತಲೆಯ ಮೇಲೆ ದೊಡ್ಡ ಮುಂಡಾಸುಟ್ಟುಕೊಂಡು, ಉದ್ದ ಕೋಟು ಧರಿಸಿಕೊಂಡು ದರ್ಬಾರಿನಿಂದ ಹೋಗುತ್ತಿದ್ದರು. ಅವರಿಗೆ ಯಾವಾಗಲೂ ಎಣ್ಣೆ ಹಚ್ಚಿಸಿಕೊಂಡು ಮಾಲಿಶ್ ಮಾಡಿಸುವ ಹುಚ್ಚು ವಿಶೇಷ. ಅದ

ರಿಂದಾಗಿ ಅವರ ಬಟ್ಟೆ ಯಾವಾಗಲೂ ಕೊಳಕಾಗಿರುತ್ತಿತ್ತು. ಅವರ ಪರಿವಾರವೂ ವಿಶಾಲವಾದುದು. ಆರೇಳು ಮಂದಿ ಸಹೋದರರು, ಅವರ ಮಕ್ಕಳು ಮರಿಗಳು – ಎಲ್ಲರೂ ಇವರನ್ನೇ ಹೊಂದಿಕೊಂಡಿದ್ದರು. ಅವರ ಸ್ವಂತ ಮಗ ಸಹ ಒಂಬತ್ತನೇ ಕ್ಲಾಸಿನಲ್ಲಿ ಇಂಗ್ಲಿಶ್ ಓದುತ್ತಿದ್ದ. ಅವನ ವೆಚ್ಚಕ್ಕೆ ಸಾಕಷ್ಟು ಕೊಡುವುದು ಅಷ್ಟು ಸುಲಭದ ವಿಚಾರವಾಗಿದ್ದಿಲ್ಲ. ರಾಯ್‌ಸಾಹೇಬರು ನೋಖೇರಾಮರಿಗೆ ಕೊಡುತ್ತಿದ್ದುದು ಬರಿಯ ೧೨ ರೂಪಾಯಿ ಸಂಬಳ. ಆದರೆ ಇವರ ಖರ್ಚಿಗೆ ನೂರು ರೂಪಾಯಿಗೆ ಕಾಸು ಕಡಿಮೆಯಾದರೂ ಸಾಕಾಗಲಾರದು. ಅದರಿಂದಾಗಿ ಅವರ ಕೈಯಲ್ಲಿ ಯಾರಾದರೂ ಸಿಕ್ಕಿಬಿಟ್ಟರೆ ಅವರನ್ನು ಚನ್ನಾಗಿ ಹಿಡಿದು ಹಿಸುಕಿ ಹಿಂಡದೆ ಬಿಡುತ್ತಿರಲಿಲ್ಲ. ಮೊದಲು ಅವರಿಗೆ ಬರೇ ಆರು ರೂಪಾಯಿ ಸಂಬಳವಿತ್ತು. ಆಗಲೇ ಅವರು ಗೇಣಿದಾರರಿಗೆ ಸಾಕಷ್ಟು ಹಿಂಸೆ ಕೊಡುತ್ತಿದ್ದರು. ಆ ಮೇಲೆ ಅವರ ಸಂಬಳ ೧೨ಕ್ಕೆ ಏರಿದ ಬಳಿಕಂತು ಅವರ ಆಸೆ ಏರತೊಡಗಿ ಅಲ್ಲಿದ್ದವರಿಗೆ ಕೆಲವು ವೇಳೆ ಸಾಕು ಸಾಕಾಗಿ ಹೋಗುತ್ತಿತ್ತು.

ಊರಲ್ಲಿರುವವರೆಲ್ಲರೂ ಹೆಚ್ಚುಕಡಿಮೆ ಅವರ ಅಂಕೆಯೊಳಗೇ ಇದ್ದರು. ಎಲ್ಲಿವರೆಗೆಂದರೆ – ದಾತಾದೀನ ಪಂಡಿತರು ಮತ್ತು ಜಿಂಗುರೀ ಸಿಂಹರು ಸಹ ಆಗಾಗ್ಗೆ ಬಂದು ಅವರ ಗುಣಗಾನ ಮಾಡಿ ಹೋಗುತ್ತಿದ್ದರು. ಪಟೇಶ್ವರೀ ಲಾಲರೊಬ್ಬರು ಮಾತ್ರ ಇವರ ಸರಿಸಮಾನರಂತೆ ಭುಜಕ್ಕೆ ಭುಜ ಕೊಡಲಿಕ್ಕೂ ಸಿದ್ಧರಿದ್ದರು. ನೋಖೇರಾಮರಿಗೆ–'ತಾನು ಉತ್ತಮ ಜಾತಿಯವನು, ರಾಯ್ ಸಾಹೇಬರ ಪ್ರತಿನಿಧಿ, ಯಾರನ್ನು ಬೇಕಾದರೂ ಇಷ್ಟ ಬಂದಂತೆ ಕುಣಿದಾಡಿಸಬಹುದು'–ಎಂಬುದಾಗಿ ಹೆಮ್ಮೆ ಇತ್ತು. ಅದೇ ರೀತಿ ಪಟೇಶ್ವರೀಲಾಲರಿಗೂ– 'ತಾನು ವೈಶ್ಯ ಜಾತಿಯವನು, ಲೇಖನಿಯ ಯಜಮಾನ. ತನ್ನ ಲೇಖನಿಗೆ ಇದಿರುನಿಲ್ಲಬಲ್ಲವರಾರು ? ಇದಲ್ಲದೆ ತಾನು ಚಿಲ್ಲರೆ ಜಮೀನ್ದಾರರ ನೌಕರನಲ್ಲ; ಸೂರ್ಯದೇವನು ಎಂದಿಗೂ ಕಂತದಿರುವ ಬ್ರಿಟಿಶ್ ರಾಜರ ಪ್ರತಿನಿಧಿ!' ಎಂದು ಮೊದಲಾಗಿ ಗರ್ವವಿತ್ತು. ನೋಖೇರಾಮರು ಏಕಾದಶೀ ವ್ರತ ನಡೆಸಿ ಐದಾರು ಮಂದಿಗೆ ದ್ವಾದಶೀ ಪಾರಣ ಮಾಡಿಸುತ್ತಿದ್ದರೆ, ಪಟೇಶ್ವರೀಲಾಲರು ಪ್ರತಿ ಹುಣ್ಣಿಮೆಯೂ ಸತ್ಯನಾರಾಯಣ ವ್ರತ ನಡೆಸಿ ೧೦–೨೦ ಮಂದಿಗೆ ಮೃಷ್ಟಾನ್ನ ಭೋಜನ ನಡೆಸುತ್ತಿದ್ದರು. ನೋಖೇರಾಮರು ತನ್ನ ಮಗ ದೊಡ್ಡದಾಗುತ್ತಿದ್ದುದನ್ನು ಕಂಡು ಹೇಗಾದರೂ ಹತ್ತನೇ ಕ್ಲಾಸು ಮುಗಿಸಿ ಎಲ್ಲಿ

ಯಾದರೂ ಸರಕಾರದ ಗುಮಾಸ್ತಿಕೆಯಲ್ಲಿ ಹಾಕಿಬಿಡಬೇಕೆಂದು ಯೋಚಿಸು ತ್ತಿದ್ದರು. ಅದಕ್ಕಾಗಿ ಈಗಿನಿಂದಲೇ ದೊಡ್ಡ ದೊಡ್ಡ ಅಧಿಕಾರಿಗಳ ಮನೆಗೆ ಆಗಾಗ್ಗೆ ಕಪ್ಪ ಕಾಣಿಕೆ ಕಳಿಸುತ್ತಲೂ ಇದ್ದರು. ಆದರೆ ಪಟೇಶ್ವರೀಲಾಲರು ಒಂದು ವಿಚಾರದಲ್ಲಿ ಇವರನ್ನು ಮೀರಿದ್ದರು – ಅವರೊಬ್ಬ ಬೋವಿ ಜಾತಿಯ ವಿಧವೆಯನ್ನು ಇಡಿಸಿಕೊಂಡಿದ್ದರೆಂದು ಜನರಿಗೆಲ್ಲ ಗೊತ್ತಿದ್ದ ವಿಚಾರ. ಆದರೆ ಈಗ, ನೋಖೇರಾಮರಿಗೂ ತನ್ನ ವೈಭವದಲ್ಲಿದ್ದ ಈ ನ್ಯೂನತೆಯನ್ನು ಸರಿಪಡಿಸಿ ಕೊಳ್ಳುವ ಸಂದರ್ಭ ಒದಗಿಬಂದುದರಿಂದ ಬಹಳ ಸಂತೋಷವಾಯಿತು.

ಹಾಗಾಗಿ ನೋಖೇರಾಮರು ಬೋಲನಿಗೆ ಧೈರ್ಯಕೊಡುತ್ತ ಹೇಳತೊಡ ಗಿದರು–'ನೀನಿನ್ನು ಸುಖವಾಗಿರು ಬೋಲಾ. ನಿನಗಿಲ್ಲಿ ಯಾವ ತೊಂದರೆಯೂ ಬರಲಾರದು. ಏನು ಬೇಕಿದ್ದರೂ ಬಂದು ನನ್ನನ್ನು ಕೇಳು. ನಿನ್ನ ಮನೆಯವ ಳಿಗೂ ಒಂದಲ್ಲ ಒಂದು ಕೆಲಸ ನಮ್ಮಲ್ಲಿ ಇದ್ದೇ ಇದೆ. ಹಟ್ಟಿಯ ಕೆಲಸ, ಬೇಸಾಯದ ಕೆಲಸ, ಮನೆಗೆಲಸ – ಇವೆಲ್ಲ ಎಷ್ಟು ಮಾಡಿದರೂ ಇದೆ.'

ಆಗ ಬೋಲ ಬೇಡಿಕೊಂಡ – 'ಒಮ್ಮೆ ಆ ಕಾಮತನನ್ನು ಕರೆಸಿ ಒಂದು ಮಾತು ಕೇಳಿಬಿಡಿ ಸ್ವಾಮಿ. ಸ್ವಂತ ತಂದೆಯೊಡನೆ ಇಂತಹ ವ್ಯವಹಾರ ಆತ ಮಾಡಿದ್ದು ಸರಿಯೇ ? ಮನೆಕಟ್ಟಿಸಿದ್ದು – ನಾನು. ದನ ಕರು ಕೊಂಡು ಕೊಂಡುದು – ನಾನು. ಈಗ ಅವನ್ನೆಲ್ಲ ಒಳಹಾಕಿ, ನನ್ನನ್ನು ಹೊರಮಾಡಿ ಬಿಟ್ಟಿದ್ದಾನೆ ! ಎಂತಹ ಅನ್ಯಾಯ ! ನಮಗೆ ನೀವೇ ಗತಿ. ನಿಮ್ಮ ಸನ್ನಿ ಧಾನದಲ್ಲಿ ಇದರ ನಿರ್ಣಯವಾಗಲೇ ಬೇಕು.'

ಆಗ ನೋಖೇರಾಮರು ಬುದ್ಧಿ ಹೇಳಿದರು – 'ಬೋಲಾ, ಅವನಂತಹ ಮೂರ್ಖನೊಡನೆ ಜಗಳಾಡಿ ಪ್ರಯೋಜನವಿಲ್ಲ. ಅವನು ಮಾಡಿದ ಕರ್ಮಕ್ಕೆ ದೇವರು ಫಲಕೊಡದೆ ಇರಲಿಕ್ಕಿಲ್ಲ. ಅನ್ಯಾಯ, ಮೋಸಮಾಡಿ ಈ ವರೆಗೆ ಯಾರಾದರೂ ಉದ್ಧಾರವಾಗಿರುವರೇ ? ನೀನೇ ಹೇಳು – ಈ ಪ್ರಪಂಚದಲ್ಲಿ ಅನ್ಯಾಯ ನಡೆಯದಿದ್ದರೆ, ಆ ನರಕದಿಂದೇನು ಪ್ರಯೋಜನ ? ಈಗಿನ ಕಾಲ ದಲ್ಲಿ ನ್ಯಾಯ ಧರ್ಮಗಳನ್ನು ಯಾರು ಕೇಳುತ್ತಾರೆ ? ಆದರೆ ದೇವರು ಎಲ್ಲ ವನ್ನೂ ನೋಡುತ್ತಾನೆ. ನಿನ್ನ ಮನಸ್ಸಿನೊಳಗೆ ಈಗೇನಿದೆ – ಅದನ್ನು ಸಹ ದೇವರು ಬಲ್ಲನು. ಆದರಿಂದಲೇ ಅವನಿಗೆ ಸರ್ವಾಂತರ್ಯಾಮಿ ಎಂಬ ಹೆಸರು ಬಂದಿದೆ. ಆ ಪರಮಾತ್ಮನಿಗೆ ತಿಳಿಯದಿರುವ ಸಮಾಚಾರವಿದೆಯೇ ? ಆದ್ದ ರಿಂದ ನೀನೀಗ ಸುಮ್ಮನಿರು. ದೇವರ ದಯೆಯಿದ್ದರೆ–ನಿನಗೆ ಅಲ್ಲಿಗಿಂತ ಇಲ್ಲಿ

ಯಾವ ವಿಚಾರದಲ್ಲೂ ಕಡಮೆಯಾಗಲಾರದು.'

ಮರು ದಿನ ಬೋಲನು ಹೋರಿರಾಮನ ಹತ್ತಿರ ಹೋಗಿ ತನ್ನ ಸಂಕಷ್ಟ ಸಮಾಚಾರ ತಿಳಿಸಿದ. ಆಗ ಹೋರಿರಾಮನೂ ತನ್ನ ರಾಮಾಯಣ ಓದಿದ– 'ಈಗಿನ ಕಾಲದಲ್ಲಿ ಮಕ್ಕಳ ಸಮಾಚಾರ ಹೇಳುವುದೇ ಬೇಡ. ಜೀವಕೊಟ್ಟು ನಾವು ಸಾಕಿ ಸಲಹುವುದು; ದೊಡ್ಡವರಾದ ಬಳಿಕ ಅವರೇ ನಮ್ಮ ಹಗೆಗಳಾಗುತ್ತಾರೆ. ನನ್ನ ಮಗ ಗೋಬರನ ಕತೆ ನೋಡು – ತಾಯಿಯ ಹತ್ತಿರ ಜಗಳಾಡಿ ಹೋಗಿ ಹಲವು ವರ್ಷ ದಾಟಿತು. ಕಾಗದವೂ ಇಲ್ಲ, ವರ್ತಮಾನವೂ ಇಲ್ಲ. ಅವನ ದೃಷ್ಟಿಯಲ್ಲಿ ತಂದೆ ತಾಯಂದಿರೆಲ್ಲ ಸತ್ತೇ ಹೋದ ಹಾಗೆ! ತಂಗಿ ಮದುವೆಗೆ ತಯಾರಾಗಿದ್ದಾಳೆ; ಮನೆಯಲ್ಲಿ ಮೂರು ಕಾಸೂ ಇಲ್ಲ – ಎಂಬ ಯಾವ ಯೋಚನೆಯೂ ಇಲ್ಲ. ಜಮೀನು ಒತ್ತೆ ಹಾಕಿ ೨೦೦ರೂಪಾಯಿಗಳ ಸಾಲ ಬೇರೆ ಆಗಿದೆ. ಹೇಗಾದರೂ ಮಾನ ಮರ್ಯಾದೆ ಕಾಪಾಡಿಕೊಳ್ಳುವುದು ಬೇಡವೇ?'

ಅತ್ತ ಕಾಮತನು ತಂದೆಯನ್ನು ಹೊರಮಾಡಿಯಾಗಿತ್ತು. ಆದರೆ ತಂದೆ ಹೊರಟು ಹೋದ ಮೇಲೆ ಆ ಮುದುಕ ಮಾಡುತ್ತಿದ್ದ ಕೆಲಸದ ಅರಿವಾಯಿತು. ಹಟ್ಟಿಯ ಕೆಲಸ ಮಾಡಿದಷ್ಟೂ ಮುಗಿಯುತ್ತಿದ್ದಿಲ್ಲ. ಬೆಳಗ್ಗೆ ಎದ್ದೊಡನೆಯೇ ದನಕರುಗಳಿಗೆ ಅಕ್ಕಚ್ಚು ಮೇವು ಕೊಡುವುದು, ಹಾಲುಕರೆದು ಪೇಟೆಗೆ ಕೊಂಡುಹೋಗುವುದು, ಅಲ್ಲಿಂದ ಬಂದು ದನಗಳನ್ನು ಮೇಯಲಿಕ್ಕೆ ಬಿಡುವುದು, ಪುನಃ ಅವನ್ನು ಹುಡುಕಿ ತರುವುದು – ಕೆಲಸದ ಈ ಎಲ್ಲ ಹೊರೆಯಿಂದಾಗಿ ಸ್ವಲ್ಪವೇ ಸಮಯದಲ್ಲಿ ಅವನಿಗೆ ಸಾಕು ಸಾಕಾಗಿ ಹೋಯಿತು. ಒಳ್ಳೆಯ ದನವೊಂದು ತಪ್ಪಿಸಿಕೊಂಡುಹೋಗಿ ಸಿಗಲೇ ಇಲ್ಲ. ಗಂಡ ಹೆಂಡಿರೊಳಗೆ ಜಗಳವೂ ತೊಡಗಿತು. ಹೆಂಡತಿ ಹೇಳುತ್ತಿದ್ದಳು – 'ನಾನು ನಿನ್ನ ಮನೆಯ ಹೆಸರಲ್ಲಿ ಪ್ರಾಣ ಕೊಡಲಿಕ್ಕಾಗಿ ಬಂದಿಲ್ಲ; ನನ್ನ ಹೊಟ್ಟೆ ತುಂಬಿಸಲಿಕ್ಕೆ ನಿನಗೆ ಸಾಧ್ಯವಿಲ್ಲವಾದರೆ ನಾನು ನನ್ನ ತಾಯಿ ಮನೆಗೆ ಹೋಗಿಬಿಡುತ್ತೇನೆ' ಎಂಬುದಾಗಿ.

ಕಾಮತನಿಗೆ ಹೆದರಿಕೆಯಾಯಿತು. ಇವಳೀಗ ಹೋಗಿಬಿಟ್ಟರೆ ಹೊಟ್ಟೆಯ ಪಾಡಿಗೂ ಕಷ್ಟವೇ. ತಾನೇ ಕೈಸುಟ್ಟುಕೊಳ್ಳಬೇಕಾದೀತು. ಅದಕ್ಕಾಗಿ ಕೆಲಸಕ್ಕೊಂದು ಜನವನ್ನಿಟ್ಟುಕೊಂಡ. ಆ ಕೆಲಸದಾಳು ಬಹು ಚುರುಕು. ಅವನು ಕದ್ದು ಕದ್ದು ಹಾಲು ಬೆಣ್ಣೆ ಮಾರತೊಡಗಿದ. ಹಾಗಾಗಿ ಅವನನ್ನು ಹೊರ

ಮಾಡಬೇಕಾಯಿತು. ಗಂಡಹೆಂಡಿರೊಳಗೆ ಪುನಃ ಜಗಳವಾಯಿತು. ಹೆಂಡತಿ ಕೋಪಗೊಂಡು ತಾಯಿಮನೆಗೆ ಹೋಗಿಯೇ ಬಿಟ್ಟಳು. ಕಾಮತನ ಕೈಯೇ ಕಟ್ಟಿಹೋಯಿತು. ಹಾಗಾಗಿ ಸೋತು ಬೋಲನ ಹತ್ತಿರ ಬಂದು – 'ಅಪ್ಪಾ, ನಾನು ಮಾಡಿದ್ದೆಲ್ಲ ತಪ್ಪಾಯಿತು. ಅದನ್ನೆಲ್ಲ ಕ್ಷಮಿಸಿಬಿಡೋಣಾಗಲಿ. ಈಗ ಲಾದರೂ ಮನೆ ಕಡೆಗೆ ಬಂದು ಎಲ್ಲವನ್ನೂ ನೋಡಿಕೋ. ಹೇಳಿದಂತೆ ನಾನು ಕೇಳಿಕೊಂಡಿರುತ್ತೇನೆ' ಎಂದು ಮೊದಲಾಗಿ ಬೇಡಿಕೊಂಡ.

ಬೋಲನಿಗೆ ಇಲ್ಲಿ ಕೂಲಿಜೀವನ ನಡೆಸಿ ಬೇಸರ ಬಂದುಹೋಗಿತ್ತು. ಮೊದಮೊದಲು ಆತನಿಗೆ ಸಿಗುತ್ತಿದ್ದ ಮಾನ ಮರ್ಯಾದೆಗಳೆಲ್ಲ ಕ್ರಮೇಣ ಇಲ್ಲವಾದುವು. ನೋಖೇರಾಮರು ಒಮ್ಮೊಮ್ಮೆ ಅವರ ಗುಡುಗುಡಿ ತುಂಬಿಸಿ ತರಲಿಕ್ಕೆ ಹೇಳುತ್ತಿದ್ದರು. ಮತ್ತೆ ಕೆಲವೊಮ್ಮೆ ಹಾಸಿಗೆ ಬಿಡಿಸಿ ಸರಿಪಡಿಸ ಲಿಕ್ಕೂ ಆಜ್ಞಾಪಿಸುತ್ತಿದ್ದರು. ಅಪಮಾನವನ್ನೆಲ್ಲ ನುಂಗಿಕೊಂಡು ಆ ಕೆಲಸ ಮಾಡಬೇಕಾಗುತ್ತಿತ್ತು. ತನ್ನ ಮನೆಯಲ್ಲಿ ವಾದ ವಿವಾದಗಳಿದ್ದರೂ ಸಹ ಇನ್ನೊಬ್ಬರ ಗುಲಾಮಗಿರಿ ಮಾಡುವುದು ಸರಿಯಲ್ಲ – ಎಂದು ತೋರುತ್ತಿತ್ತು.

ಆದರೆ ಆವನ ಹೆಂಡತಿ ನೋಹರಿಯು ಮಾತ್ರ ಕಾಮತನ ಪ್ರಸ್ತಾಪ ತೆಗೆ ದೊಡನೆಯೇ ಸಿಡಿದುಬಿದ್ದು – 'ಎಲ್ಲಿಂದ ಪೆಟ್ಟು ತಿಂದು ಬಂದಿರುವಿರೋ ಪುನಃ ಆ ಮನೆಗೇ ಹೋಗುವಿರೇ? ನಾಚಿಕೆ ಸಹ ಆಗುವುದಿಲ್ಲವೇ ನಿಮಗೆ?' ಎಂದಳು.

'ಇಲ್ಲೇನು ನಾನು ಸಿಂಹಾಸನದ ಮೇಲೆ ಕೂತುಕೊಂಡಿರುವೆನೇ?' ಎಂದ ಬೋಲ.

ನೋಹರಿ ಹಾರಿ ಬೀಳುತ್ತ – 'ಹಾಗೆ ನೀವು ಹೋಗುವುದಿದ್ದರೆ ಸಂತೋಷ ದಿಂದ ಹೋಗಿ. ನಾನು ಮಾತ್ರ ಎಷ್ಟಕ್ಕೂ ಬರುವಂತಿಲ್ಲ' ಎಂದಳು.

ನೋಹರಿಯು ಈ ವಿಚಾರದಲ್ಲಿ ವಿರೋಧಿಸಿಯಾಳೆಂದು ಬೋಲನಿಗೆ ಮೊದಲೇ ತಿಳಿದಿತ್ತು. ಅದರ ಕಾರಣ ಸಹ ಅವನಿಗೆ ಸ್ವಲ್ಪ ಸ್ವಲ್ಪ ಗೊತ್ತಾ ಗಿತ್ತು. ಅವನು ಕಣ್ಣಿಂದ ಕಾಣುತ್ತಲೂ ಇದ್ದ. ಅಲ್ಲಿಂದ ಓಡಿಬಿಡುವು ದೊಳ್ಳೆಯದೆಂದು ಅವನು ನಿಶ್ಚೈಸಿದ್ದೂ ಆದಕ್ಕಾಗಿಯೇ. ಇಲ್ಲಿ ಅವನ ಮಾತು ಕೇಳುವವರೇ ಇದ್ದಿಲ್ಲ. ಆದರೆ ನೋಹರಿಗೆ ಮಾತ್ರ ವಿಶೇಷವಾದ ಗೌರವ ಸಲ್ಲುತ್ತಿತ್ತು. ಪಟೇಲರು, ಉಗ್ರಾಣಿಗಳು ಸಹ ಅವಳ ಆಜ್ಞಾಧಾರಕ ರಾಗಿದ್ದರು.

ಈಗ ಅವಳ ಮಾತು ಕೇಳಿ ಬೋಲನಿಗೆ ಕೋಪವೇರಿ ಬಂತು. ಆದರೆ ಮಾಡುವುದೇನು? ಹಾಗೆಂದು ಧೈರ್ಯದಿಂದ ಅವನು ಹೊರಟುಬಿಟ್ಟಿದ್ದರೆ ನೋಹರಿಯೂ ಅವನನ್ನು ಹಿಂಬಾಲಿಸಬಹುದಿತ್ತು. ಅವಳೊಬ್ಬಳನ್ನೇ ಮನೆಯಲ್ಲಿಟ್ಟುಕೊಳ್ಳುವ ಸಾಹಸ ನೋಖೇರಾಮರಲ್ಲಿಯೂ ಇಲ್ಲವಾಗಿತ್ತು. ಅವರು ಎಷ್ಟೆಂದರೂ ತಟ್ಟಿಯ ಹಿಂದೆ ನಿಂತು ಗುಂಡು ಹಾರಿಸುವ ಸ್ವಭಾವದವರು. ಆದರೆ ನೋಹರಿಯು ಮಾತ್ರ ಬೋಲನ ಧೈರ್ಯವಿಚಾರ ಚನ್ನಾಗಿ ಅರಿತವಳಾಗಿದ್ದಳು.

ಬೋಲನು ವಿನಯದಿಂದ ಹೇಳಿದ – 'ಯೋಚಿಸಿ ನೋಡು ನೋಹರೀ. ಈಗ ಅಲ್ಲಿ ಸೊಸೆಯಂದಿರು ಕೂಡಾ ಇಲ್ಲ. ಮನೆಯ ಅಧಿಕಾರವೆಲ್ಲ ನಿನ್ನ ಕೈಯಲ್ಲೇ ಬಂದೀತು. ಇಲ್ಲಿ ಈ ಕೂಲಿಕೆಲಸ ಮಾಡುತ್ತಿರುವುದರಿಂದ ನಮ್ಮ ಕುಲಕ್ಕೆಷ್ಟು ಅಪಮಾನವಾಗುತ್ತಿದೆ – ಯೋಚಿಸಿ ನೋಡು.'

ನೋಹರಿ ಮುಖ ತಿರುಗಿಸಿ ಹೇಳಿದಳು– 'ನಿಮಗೆ ಹೋಗುವ ಮನಸ್ಸಿದ್ದರೆ ಸಂತೋಷದಿಂದ ಹೋಗಿ. ನಾನು ನಿಮ್ಮನ್ನು ತಡೆಯುಬರುವುದಿಲ್ಲ. ಮಗನ ಏಟು ನಿಮಗೆ ರುಚಿಯಾಗಿ ತೋರಬಹುದು. ಆದರೆ ಅದು ನನಗಾಗಲಿಕ್ಕಿಲ್ಲ. ಇಲ್ಲಿ ಕೂಲಿಕೆಲಸವಾದರೂ ಅದಕ್ಕಿಂತ ಎಷ್ಟೋ ವಾಸಿ.'

ಬೋಲನು ಬಾಯಿ ಮುಚ್ಚಿಕೊಂಡು ಸುಮ್ಮನಿರಬೇಕಾಯಿತು. ಬಂದ ಕಾಮುತನೂ ಹೋಗಿ ಹೆಂಡತಿಗೇ ಶರಣಾಗತನಾದ. ಅವಳನ್ನು ಸಂತೋಷಪಡಿಸಿ ಮನೆಗೆ ಕರೆದುಕೊಂಡು ಬಂದ.

ಇತ್ತ ನೋಹರಿಯು ವಿಚಾರದಲ್ಲಿ ಪಿಸು ಮಾತುಗಳು ಹೆಚ್ಚುತ್ತಲೇ ಇದ್ದುವು – 'ಇಂದು ನೋಹರಿ ಹೊಸ ಸೀರೆಯುಟ್ಟಿದ್ದಾಳೆ! ಮುಖಕ್ಕೆ ಹೊಸ ಬಣ್ಣ ಹಚ್ಚಿಕೊಂಡಿದ್ದಾಳೆ! ಈಗವಳಿಗೇನು? ದಿನಕ್ಕೊಂದು ಸೀರೆ ಉಟ್ಟರೂ ತೊಂದರೆಯಿಲ್ಲ! ಪಾಪ! ಆ ಬೋಲನ ಕಣ್ಣು ಒಡೆದೇ ಹೋಗಿರಬೇಕು!'

ಸೋಬನು ಆ ಊರ ಹಾಸ್ಯಗಾರ. ಅವನು ಊರಿನ ವಿದೂಷಕ ಮಾತ್ರವೇ ಅಲ್ಲ-- ನಾರದನೂ ಆಗಿದ್ದನು. ಯಾವ ವಿಚಾರವನ್ನೂ ಒಳ್ಳೆಯ ಬಣ್ಣಕೊಟ್ಟು ಪ್ರಚಾರ ಮಾಡುವುದರಲ್ಲಿ ಎತ್ತಿದ ಕೈ. ಒಂದು ದಿನ ನೋಹ-ರಿಯು ಅವನಿಗೆ ದಾರಿಯಲ್ಲಿ ಸಿಕ್ಕಿದಳು. ಅವನು ಏನೋ ಸ್ವಲ್ಪ ಪರಿಹಾಸ ನಡೆಸಿದ. ಅವಳು ಹೋಗಿ ಹಾಗೇ ನೋಖೇರಾಮರಲ್ಲಿ ಒಂದಕ್ಕೆರಡು ಸೇರಿಸಿ

ದೂರು ಕೊಟ್ಟಳು. ಸರಿ – ಮರುಕ್ಷಣವೇ ಇವನಿಗೆ ಜನ ಬಂದು ವಿಚಾರಣೆ ನಡೆಯಿತು.. ಪಾಪ! ಸೋಬನಿಗೆ ಸಾಕು ಸಾಕಾಯಿತು!

ಮತ್ತೊಂದು ದಿನ ಪಟೇಶ್ವರೀಲಾಲರ ಸರದಿ ಬಂತು. ಬೇಸಗೆಯ ಸಮಯ. ತೋಟದಲ್ಲಿ ಮಾವಿನಹಣ್ಣು ಕೊಯಿಸುತ್ತಿದ್ದರು. ಆಗ ಆ ದಾರಿ ಯಿಂದಾಗಿ ನೋಹರಿ ಹೋಗುತ್ತಿದ್ದಳು. ಆಗ ಲಾಲರು ಕರೆದು–' ನೋಹರಿ ರಾಣಿ – ಬಾ. ಎರಡು ಮಾವಿನಹಣ್ಣು ತಿಂದು ಹೋಗಬಾರದೇ ? ಬಹಳ ಸಿಹಿಯಾಗಿವೆ ' ಎಂದರು.

ಇವರು ತನ್ನ ವಿಚಾರ ತಮಾಷೆ ನಡೆಸುತ್ತಿದ್ದಾರೆಂದು ನೋಹರಿಗೆ ತಿಳಿದು ಹೋಯಿತು. ಈಗೀಗ ಸ್ವಲ್ಪ ಅಹಂಕಾರವೂ ಅವಳ ತಲೆಗೇರಿತ್ತು. ತಾನೊಬ್ಬ ಜಮೀನ್ದಾರಿಣಿ – ಎಂಬುದಾಗಿ ಜನರು ತಿಳಿಯಬೇಕೆಂದೂ ಅವಳಾಶೆಯಾಗಿತ್ತು. ಅಹಂಕಾರಿಗಳು ಯಾವಾಗಲೂ ಸಂಶಯಾತ್ಮರಾಗಿರುತ್ತಾರೆ. ಅದರಲ್ಲೂ ಮನಸ್ಸಿನೊಳಗೆ ಮೋಸವಿದ್ದರೆ ಆ ಸಂಶಯ ಇನ್ನಷ್ಟು ಹೆಚ್ಚಾಗುತ್ತದೆ– ' ಅವರೇಕೆ ನನ್ನತ್ತ ನೋಡಿ ನಗಾಡಿದರು? ನನ್ನನ್ನು ನೋಡಿದೊಡನೆ ನಿಮಗೇಕೆ ಹೊಟ್ಟೆಕಿಚ್ಚು? ನಾನು ಯಾರ ಹತ್ತಿರವೂ ಬೇಡಹೋಗುವುದಿಲ್ಲ. ಈಗಿನ ಕಾಲದಲ್ಲಿ ಯಾರಿದ್ದಾರೆ ಅಂತಹ ಸತ್ಯವಂತರು? – ನನ್ನ ಇದಿರು ಬಂದು ಹೇಳಲಿ ನೋಡುವಾ ? ಊರಿನ ಗುಪ್ತ ರಹಸ್ಯಗಳೆಲ್ಲ ನನಗೆ ಗೊತ್ತಾಗಿದೆ! ಈ ಲಾಲರೇ ಬೋವಿ ಹೆಂಗುಸೊಬ್ಬಳನ್ನು ಇಡಿಸಿಕೊಂಡಿಲ್ಲವೇ ? ಅದರ ಮೇಲೆ ನನಗೆ ತಮಾಷೆ ನಡೆಸುತ್ತಿದ್ದಾರೆ! ಇವರಿಗಾರೂ ಕೇಳುವವರಿಲ್ಲವೇ ? ಇವರು ಬಹು ದೊಡ್ಡ ಮನುಷ್ಯ ತಾನೇ? ನಾನು ಮಾತ್ರ ಬಡವಳಾದ್ದರಿಂದ ಹೀಗೆಲ್ಲ ತಮಾಷೆ ನಡೆಸುವುದು! ಇವರ ಮಗ – ಆ ರಾಮೇಶ್ವರ ಸಹ ಸಿಲಿಯಳ ಹಿಂದೆ ಹಿಂದೆಯೇ ತಿರುಗಾಡುತ್ತಿದ್ದಾನೆ. ಇನೆಲ್ಲ ನನಗೆ ಗೊತ್ತಿಲ್ಲವೇ ? '

ಅವಳು ನಿಂತಲ್ಲೇ ಇದ್ದು ಉತ್ತರಿಸಿದಳು – ' ಎಂದಿನಿಂದ ನೀವು ದೊಡ್ಡ ದಾಸಿಗಳಾದುದು ಲಾಲರೇ ? ಸಾಧ್ಯವಿದ್ದರೆ ಯಾರ್‍ಯಾರ ಅನ್ನ ತೆಗೆಯುವ ಮಹಾ ಪುರುಷರು ನೀವು! ಇಂದು ಮಾತ್ರ ಭಾರೀ ಮಾವಿನ ಹಣ್ಣು ನಿಮ್ಮಲ್ಲಿ ದೆಯಲ್ಲವೇ? ನನ್ನ ಹತ್ತಿರ ನಿಮ್ಮ ತಮಾಷೆ ಗಿಮಾಷೆ ನಡೆಯಲಾರದು. ಜೋಕೆ! ಹೇಳಿಬಿಟ್ಟದ್ದೇನೆ. '

ಓಹೋ! ಈ ಬಣ್ಣದ ಬೀಸಣಿಗೆಗೂ ಇಷ್ಟೊಂದು ಜಂಭವೇ? ನೋಖೇ ರಾಮನಿಗೆ ತಾಗಿಬಿಟ್ಟದ್ದಾಳೆ! ಇಡೀ ಪ್ರಪಂಚವೆಲ್ಲ ಅವನಧಿಕಾರಕ್ಕೊಳ

ಪಟ್ಟದ್ದು ! ಕಣ್ಣು ಕೆರಳಿಸಿ ಲಾಲರೆಂದರು – ' ಏನಿದು ನೋಹರಿ? ಬಹಳ ಹಾರಾಡುತ್ತಿರುವೆ? ಸ್ವಲ್ಪ ನಾಲಗೆ ಹಿಡಿದು ಮಾತಾಡು. ಅಷ್ಟು ಬೇಗನೆ ನಿನ್ನ ಹಳೆಯ ಕತೆಯನ್ನೆಲ್ಲ ಮರೆತುಬಿಡಬೇಡ. '

' ನಾನೇನು ನಿಮ್ಮ ಮನೆಬಾಗಿಲಿಗೆ ಬಿಕ್ಕೆ ಬೇಡಲಿಕ್ಕೆ ಬಂದಿದ್ದೆನೆ ? '

' ನೋಖೇರಾಮನಲ್ಲದಿರುತ್ತಿದ್ದರೆ ಬಂದೇ ಬರುತ್ತಿದ್ದೆ. '

ನೋಹರಿಯ ಕಣ್ಣಿಗೆ ಮೆಣಸುಪುಡಿ ಹಾಕಿದಂತಾಯಿತು. ಅವಳು ಕೋಪದಿಂದ ಬಾಯಿಗೆ ಬಂದಹಾಗೆ ಬೈದುಬಿಟ್ಟಳು – ಸುಟ್ಟ ಮೋರೆಯವನು, ಲಂಪಟ, ಮರ್ಯಾದೆಗೆಟ್ಟವನು,ಹಾಗೆ, ಹೀಗೆ ! ಬಳಿಕ ಕೋಪಭರದಿಂದ ದರದರನೆ ಬಂದು ತನ್ನ ಕೋಣೆಯೊಳಹೋಗಿ ಅಲ್ಲಿಂದ ಪಾತ್ರ ಪದಾರ್ಥ, ಬಟ್ಟೆ ಬರೆಗಳನ್ನೆಲ್ಲ ಹೊರಗಿಡತೊಡಗಿದಳು.

ನೋಖೇರಾಮರು ಬಹಳ ಗಾಬರಿಗೊಂಡವರಾಗಿ ಬಂದು – 'ಏನಿದು ನೋಹರೀ, ಪಾತ್ರ ಪದಾರ್ಥಗಳನ್ನೆಲ್ಲ ಹೊರಗಿಡುತ್ತಿರುವೆ ? ಯಾರಿಂದೇನಾಯಿತು ನಿನಗೆ ?' ಎಂದು ಕೇಳಿದರು.

ಗಂಡುಸರನ್ನು ಬೇಕಾದಂತೆ ಕುಣಿದಾಡಿಸುವ ವಿದ್ಯೆಯಲ್ಲಿ ನೋಹರಿ ಬಹು ಜಾಣ ಹೆಂಗುಸು. ಜೀವನವಿಡೀ ಆ ವಿದ್ಯೆಯನ್ನು ಅವಳು ಹಸ್ತಗತಮಾಡಿಕೊಳ್ಳುತ್ತಲೇ ಇದ್ದಳು. ನೋಖೇರಾಮರು ಸ್ವಲ್ಪ ಓದಿದ ಮನುಷ್ಯರು. ಕಾನೂನು ಸಹ ತಕ್ಕ ಮಟ್ಟಿಗೆ ಗೊತ್ತಿತ್ತು. ಧರ್ಮಶಾಸ್ತ್ರವನ್ನೂ ಬಲ್ಲವರು. ದೊಡ್ಡ ದೊಡ್ಡ ಬ್ಯಾರಿಸ್ಟರುಗಳ ಸೇವೆ ಸಹ ಮಾಡಿದ್ದರು. ಇಷ್ಟಾದರೂ ಈ ಬೆಡಗಿನ ನೋಹರಿಯ ಕೈಗೊಂಬೆಯಾಗಿಹೋಗಿದ್ದರು.

ನೋಹರಿ ಸಿಡುಕು ಮುಖದಿಂದ ಹೇಳಿದಳು – ' ಇಲ್ಲಿ ಬಂದು ಸೇರಿದ್ದೇ ನನ್ನ ಗ್ರಹಚಾರದಿಂದ. ಬೇರೆಲ್ಲಿಯಾದರೂ ಮರ್ಯಾದೆಯಿಂದ ನನ್ನ ಹೊಟ್ಟೆ ತುಂಬುತ್ತಿದ್ದಿಲ್ಲವೇ ? '

ನೋಖೇರಾಮರಿಗೆ ತೇಜೋವಧೆಯಾದಂತಾಯಿತು. ಅವರು ಮೀಸೆ ಸರಿಪಡಿಸಿಕೊಂಡು – ' ನಿನ್ನಮೇಲೆ ಯಾರಾದರೂ ಕಣ್ಣು ಹಾಕಿದ್ದಾದರೆ ಅವರ ಕಣ್ಣನ್ನೇ ಕಿತ್ತುಹಾಕಿಯೇನು ! ಏನಾಯಿತು ಹೇಳು ನೋಡುವಾ? ' ಎಂದರು.

ನೋಹರಿಯು ಕಬ್ಬಿಣವನ್ನು ಕಾಯಿಸಿ ಜಮಾಯಿಸಿಯೇ ಬಿಟ್ಟಳು – ' ನೋಡಿ, ಆ ಪಟೇಶ್ವರೀಲಾಲರು ಯಾವಾಗ ನೋಡಿದರೂ ನನ್ನ ವಿಚಾರದಲ್ಲಿ ಬೇಡದ ಮಾತುಗಳನ್ನೇ ಆಡುತ್ತಾರೆ. ಊರಲ್ಲಿ ಎಷ್ಟೋ ಹೆಂಗುಸರಿದ್ದಾರೆ.

ಅವರ ಮುಖ ನೋಡಿ ಮಾತಾಡುವುದಿಲ್ಲ. ಸುಮ್ಮನಾದರೂ ನನ್ನನ್ನು ಮಾತ್ರ ಕೆಣಕುತ್ತಲೇ ಇದ್ದಾರೆ.'

ನೋಖೇರಾಮರಿಗೆ ಭೂತಾವೇಶವಾದಂತಾಯಿತು. ತನ್ನದೊಡ್ಡ ದೊಣ್ಣೆಯನ್ನು ಹೆಗಲ ಮೇಲೆ ಹಾಕಿಕೊಂಡು ಆ ತೋಟದತ್ತ ಹೋಗಿ ಬೊಬ್ಬೆ ಹೊಡೆಯತೊಡಗಿದರು – 'ಅಷ್ಟು ಧೈರ್ಯದ ಮನುಷ್ಯನಾದರೆ ಬಾ ನೋಡುವಾ ಇಲ್ಲಿಗೆ? ನಿನ್ನ ಮೀಸೆ ಬೋಳಿಸಿ ಹೊಂಡ ತೋಡಿ ಹೂತು ಹಾಕಿಯೇನು. ಇದಿರು ಬಾ ನೋಡುವಾ. ಇನ್ನೊಮ್ಮೆ ನೋಹರಿಯನ್ನು ಕೆಣಕಿದರೆ ನಿನ್ನ ರಕ್ತ ಕಾರಿಸಿಬಿಟ್ಟೇನು; ನಿನ್ನ ದೊಡ್ಡಸ್ತಿಕೆಯನ್ನೆಲ್ಲ ಕರಗಿಸಿಬಿಟ್ಟೇನು. ನಿನ್ನ ಹಾಗೆಯೇ ಎಲ್ಲರೂ ಮರ್ಯಾದೆ ಕೆಟ್ಟವರೆಂದು ತಿಳಿದಿರುವೆಯಾ? ಎಂತಹ ಅಹಂಕಾರ ಮೂರು ಕಾಸಿನ ಮೂರ್ಖನಿಗೆ?'

ಪಟೇಶ್ವರೀಲಾಲರು ತಲೆತಗ್ಗಿಸಿಕೊಂಡು ಸುಮ್ಮನಿದ್ದರು. ಬಾಯಿಬಿಟ್ಟರೆ ಕ್ಷೇಮವಾಗಲಾರದೆಂದೆಣಿಸಿದರು. ಈ ವರೆಗೆ ಅವರಿಗೆ ಇಂತಹ ಬಹಿರಂಗ ಅಪಮಾನವಾಗಿದ್ದಿಲ್ಲ. ಹಿಂದಕ್ಕೊಮ್ಮೆ ಕೆರೆಯ ಸಮೀಪದಲ್ಲಿ ಮಧ್ಯ ರಾತ್ರಿಯ ಸಮಯ ಜನರೆಲ್ಲ ಸೇರಿ ಚನ್ನಾಗಿ ಹೊಡೆದಿದ್ದರು. ಆದರೆ ಆದರ ವರ್ತಮಾನ ಊರವರಿಗೆಲ್ಲ ಗೊತ್ತಾಗಿದ್ದಿಲ್ಲ. ಯಾರ ಹತ್ತಿರವೂ ಅದಕ್ಕೆ ಬೇಕಾದ ಸಾಕ್ಷ್ಯವಿದ್ದಿಲ್ಲ. ಆದರೆ ಇಂದು ಮಾತ್ರ ಹತ್ತು ಜನರಿದಿರಲ್ಲೇ ಅವರ ಮರ್ಯಾದೆ ಕೆಡುವಂತಾಯಿತು. ನಿನ್ನೆ ಆಶ್ರಯ ಬೇಡಿಕೊಂಡು ಬಂದಿದ್ದ ಈ ಹೆಂಗುಸು ಇಂದು ಇಡೀ ಊರಿಗೇ ರಾಣಿಯಾಗಿಹೋದಳಲ್ಲ! ಈಗ ಅವಳನ್ನು ಕೆಣಕಲಿಕ್ಕೆ ಯಾರಿಗೆ ತಾನೆ ಧೈರ್ಯವಿದೆ? ಪಟೇಶ್ವರೀಲಾಲರೂ ಅವಳಿಗೆ ಭಯಪಟ್ಟರಬೇಕಾದರೆ ಇತರರ ಪಾಡೇನು?

ಬರಬರುತ್ತ ನೋಹರಿಯು ಊರಿನ ಸಂಪೂರ್ಣ ರಾಣಿಯೇ ಆಗಿಹೋದಳು. ಅವಳು ಬಂದೊಡನೆ ಊರ ರೈತರೆಲ್ಲ ಅವಳಿಗೆ ದಾರಿ ಬಿಟ್ಟುಕೊಡುತ್ತಿದ್ದರು. ಅವಳಿಗೇನಾದರೂ ಪೂಜೆ ನಡೆಸಿದರೆ ಮಾತ್ರ ನೋಖೇರಾಮರಿಂದ ಬೇಕಾದ ಕೆಲಸ ಮಾಡಿಸಿಕೊಳ್ಳಬಹುದೆಂದು ಊರವರಿಗೆಲ್ಲ ತಿಳಿದಿತ್ತು. ಯಾರಿಗಾದರೂ ದರಖಾಸ್ತು ಆಗಬೇಕಿದ್ದರೆ, ಗೇಣಿಯ ಲೆಕ್ಕಾಚಾರ ಸರಿಯಾಗಬೇಕಿದ್ದರೆ, ಕಟ್ಟಡ ಕಟ್ಟಿಸಲಿಕ್ಕೆ ಜಾಗ ಬೇಕಿದ್ದರೆ – ಅಂತು ಏನಾಗಬೇಕಿದ್ದರೂ, ಅರಿಕೆಗಳೆಲ್ಲ ನೋಹರಿಯ ಮೂಲಕ ಹೋದರೇನೇ ಕೆಲಸವಾಗುತ್ತಿತ್ತು. ಹಾಗಾಗಿ ಕೆಲವೇಳೆ ಅವಳು ದೊಡ್ಡ ದೊಡ್ಡ ಮನುಷ್ಯರನ್ನು ಸಹ ಸರಿಯಾಗಿ

ಗದರಿಸಿಬಿಡುತ್ತಿದ್ದಳು.

ಬೋಲನಿಗೆ ಈಗ ಅವಳ ಆಶ್ರಯದಲ್ಲಿರಲಿಕ್ಕೇ ಮನಸ್ಸಿದ್ದಿಲ್ಲ. ಹೆಂಡತಿಯ ಸಂಪಾದನೆಯನ್ನು ಹೊಂದಿಕೊಂಡು ಜೀವನ ನಡೆಸುವುದು ಅತಿ ಹೀನವಾಗಿ ತೋರಿಬಂತು ಅವನಿಗೆ. ತಿಂಗಳಿಡೀ ಕೆಲಸ ಮಾಡಿದ ಮೇಲೆ ಅವನಿಗೆ ಬರೇ ಮೂರು ರೂಪಾಯಿ ಸಿಗುತ್ತಿತ್ತು. ಅದು ಕೂಡಾ ಅವನ ಕೈಗೆ ಬರುತ್ತಿದ್ದಿಲ್ಲ. ನೋಹರಿ ಅದನ್ನು ಮೊದಲೇ ಹೊಡೆದುಬಿಡುತ್ತಿದ್ದಳು. ಅವನಿಗೆ ಬೀಡಿ ಸೇದಲಿಕ್ಕೆ ಸಹ ಹಣ ಸಿಗುತ್ತಿದ್ದುದು ಬಹು ಕಷ್ಟದಿಂದ. ಹಾಗಿದ್ದರೂ ನೋಹರಿ ದಿನಕ್ಕೆರಡಾಣೆಯ ವೀಳ್ಯದೆಲೆ ತಿನ್ನುತ್ತಿದ್ದಳು. ಸಾಲದುದಕ್ಕೆ ಸಿಕ್ಕಿದವರೆಲ್ಲ ಇವನ ಕೈಯಿಂದ ಬಿಟ್ಟಿಕೆಲಸ ಮಾಡಿಸುತ್ತಿದ್ದರು. ಉಗ್ರಾಣಿಗಳು ಕಟ್ಟಿಗೆ ಒಡೆಸುವ ಕೆಲಸವನ್ನು ಇವನ ಕೈಯಲ್ಲೇ ಮಾಡಿಸುತ್ತಿದ್ದರು. ಅಂತು ದಿನವಿಡೀ ಕೆಲಸಮಾಡಿ ಸೋತು ಮನೆ ಬಾಗಿಲಿಗೆ ಬಂದರೆ ಅಲ್ಲಿಯೂ ಕೇಳುವವರಿದ್ದಿಲ್ಲ. ಹೊರಗೆ, ಮರಪಡಿಯ ಮಂಚದ ಮೇಲೆ ಆತ ಬಿದ್ದುಕೊಳ್ಳಬೇಕಾಗುತ್ತಿತ್ತು. ಬಾಯಾರಿಕೆಗೆ ಒಂದು ಲೋಟಿ ನೀರು ಕೊಡುವ ಗತಿಯೂ ಇದ್ದಿಲ್ಲ. ಎಲ್ಲರ ಊಟವಾದ ಬಳಿಕ ಒಣ ರೊಟ್ಟಿ ಸಿಗುವುದೂ ಅವನಿಗೆ ಕಷ್ಟವಾಗಿತ್ತು.

ಕೊನೆಗೆ ಈ ಕಷ್ಟ ತಡೆಯಲಾರದೆ ಕಾಮತನೊಡನೆಯೇ ಹೋಗಿರುವುದೆಂದು ನಿಶ್ಚಯಮಾಡಿದ ಅವನು. ಬೇರೇನಿಲ್ಲವಾದರೂ ಹೊತ್ತು ಹೊತ್ತಿಗೆ ಸರಿಯಾಗಿ ಹೊಟ್ಟೆಗಾದರೂ ಸಿಕ್ಕೀತಲ್ಲ! ಎಷ್ಟಾದರೂ ತನ್ನದೇ ತಾನೇ ಮನೆ?

ಆಗ ನೋಹರಿ ಹೇಳಿದಳು – 'ನಾನಲ್ಲಿಗೆ ಯಾರ್‍ಯಾರ ಗುಲಾಮಗಿರಿ ಮಾಡಲಿಕ್ಕಾಗಿ ಬರಲಾರೆ.'

'ನೀನು ಬರಬೇಕೆಂದು ನಾನೇನೂ ಹೇಳಿಲ್ಲ. ನಾನು ನನ್ನಷ್ಟಕ್ಕೇ ಹೋಗುತ್ತೇನೆ, ಅಷ್ಟೆ' – ಧೈರ್ಯಮಾಡಿಕೊಂಡು ಬೋಲನೂ ಹೇಳಿದ.

'ಹಾಗಾದರೆ ನನ್ನನ್ನು ಬಿಟ್ಟೇ ಹೋಗುವಿರೇ? ಹಾಗೆ ಹೇಳುವಾಗ ನಾಚಿಕೆ ಸಹ ಆಗುವುದಿಲ್ಲವೇ ನಿಮಗೆ?'

'ಆ ನಾಚಿಕೆಯನ್ನೆಲ್ಲ ಕರಗಿಸಿ ಕುಡಿದುಬಿಟ್ಟಿದ್ದೇನೆ.'

'ಆದರೆ ನಾನು ನನ್ನ ನಾಚಿಕೆಯನ್ನು ಕುಡಿದಿಲ್ಲ. ಆದ್ದರಿಂದ ನನ್ನನ್ನು ಬಿಟ್ಟು ಹೋಗುವುದು ಎಷ್ಟಕ್ಕೂ ಸರಿಯಲ್ಲ.'

'ನೀನು ನಿನ್ನಿಷ್ಟ ಬಂದಂತೆ ಮಾಡಿದರೆ ನಾನು ನಿನ್ನ ಗುಲಾಮನಾಗಿರ ಬೇಕೇ?'

'ನಾಲ್ಕು ಜನರ ಇದಿರಲ್ಲಿ ಪಂಚಾಯತಿ ನಡೆಸಿ ನಿಮ್ಮ ಮುಖಕ್ಕೆ ಮಸಿ ಹಚ್ಚಿಬಿಟ್ಟೇನು.'

'ಈ ವರೆಗೆ ಮುಖಕ್ಕೆ ಮಸಿಯಾಗದಿದ್ದರೆ ತಾನೇ ಭಯ?' — ಎಂದು ಹೇಳುತ್ತ ಕೋಪದಿಂದ ತನ್ನ ದೊಣ್ಣೆ ಹಿಡಿದುಕೊಂಡು ಹೊರಟೇಬಿಟ್ಟ ಬೋಲ. ಅಷ್ಟರಲ್ಲಿ ನೋಹರಿ ಹಾರಿಹೋಗಿ ಅವನ ಕಚ್ಚೆ ಹಿಡಿದು ನಿಲ್ಲಿಸಿಯೇ ಬಿಟ್ಟಳು. ಅವಳ ಬಲವಾದ ಹಿಡಿತದಿಂದ ಬಿಡಿಸಿಕೊಳ್ಳಲಿಕ್ಕೆ ಮುದಿ ಬೋಲನಿಗೆ ಸಾಧ್ಯವೇ ಆಗಲಿಲ್ಲ. ಅವನು ಬಾಯಿ ಮುಚ್ಚಿಕೊಂಡು ಕೈದಿಯಂತೆ ಕೂತುಕೊಂಡುಬಿಟ್ಟ. ಒಂದು ಕಾಲದಲ್ಲಿ ಆತನು ಹೆಂಗುಸರನ್ನು ಇಷ್ಟ ಬಂದಂತೆ ಕುಣಿದಾಡಿಸುತ್ತಿದ್ದವನು. ಆದರೆ ಇಂದು ಮಾತ್ರ ಹೆಂಗುಸೊಬ್ಬಳ ಕೈಯಲ್ಲಿ ಸಿಕ್ಕಿಹೋಗಿ ತನ್ನನ್ನು ತಾನೇ ಬಿಡಿಸದಾದ. ಬಿಡಿಸಿಕೊಳ್ಳಲಿಕ್ಕೆ ಪ್ರಯತ್ನಿಸಿ ಗುಟ್ಟು ರಟ್ಟಾಗಿಸಲಿಕ್ಕೆ ಅವನಿಗಿಷ್ಟವಿಲ್ಲವಿತ್ತು. ಅವನ ಸಾಮರ್ಥ್ಯದ ಮಿತಿ ಅವನಿಗೆ ಗೊತ್ತಿತ್ತು. ಹಾಗಾಗಿ ನೋಹರಿಯ ವಶೀಕರಣ ಮಂತ್ರಕ್ಕೊಳಗಾದವನಂತೆ ಸುಮ್ಮನಿರಲೇ ಬೇಕಾಯಿತು.

೨೧

ಪಟೇಶ್ವರೀಲಾಲರು ಶಾನುಭಾಗರುಗಳ ಪೈಕಿ ಸ್ವಭಾವತಃ ಒಳ್ಳೆಯವರಾಗಿದ್ದರು. ಯಾವ ಗೇಣಿದಾರನೂ ಇನ್ನೊಬ್ಬನ ಭೂಮಿಯನ್ನು ಸ್ವಲ್ಪ ಸಹ ಆಕ್ರಮಿಸ ಬಿಡುತ್ತಿದ್ದಿಲ್ಲ. ಹಾಗೆಯೇ, ಯಾರದಾದರೂ ಸಾಲ ತೆಗೆದುಕೊಂಡು ತಿಂದುಹಾಕುವುದನ್ನೂ ಸಹಿಸುತ್ತಿರಲಿಲ್ಲ. ಊರಿನ ಸಕಲ ಪ್ರಾಣಿಗಳ ಹಿತ ಸಂರಕ್ಷಣೆ ಮಾಡಿಕೊಂಡಿರುವುದೂ ತನ್ನ ಪರಮ ಧರ್ಮವೆಂದು ಅವರು ತಿಳಿದಿದ್ದರು. ಆದರೆ ಊರಿನ ವಿವಾದಗಳನ್ನು ರಾಜಿ ಪಂಚಾತಿಕೆಯಿಂದ ತೀರ್ಮಾನಿಸುವುದರಲ್ಲಿ ಅವರಿಗೆ ವಿಶ್ವಾಸವಿದ್ದಿಲ್ಲ. ಕೋರ್ಟು ಕಚೇರಿಗಳಲ್ಲಿ ಸುತ್ತಾಡುತ್ತಿರುವುದೆಂದರೆ ಅವರಿಗೆ ಬಹಳ ಇಷ್ಟ. ಹಾಗಾಗಿ ಒಂದಲ್ಲ ಒಂದು 'ಕೇಸು' ಎಬ್ಬಿಸುತ್ತಲೇ ಇದ್ದರು.

ಇತ್ತೀಚೆ ಅವರ ಕೃಪಾದೃಷ್ಟಿ ಸಾಹುಕಾರ ಮಂಗಾರಾಮರ ಮೇಲೆ ಬಿದ್ದಿತ್ತು. ಮಂಗಾರಾಮರು ಆ ಊರ ಅತಿ ದೊಡ್ಡ ಸಾಹುಕಾರರು. ಆದರೆ ಊರೊಳಗಿನ ಯಾವ ಗಲಾಟೆಯಲ್ಲೂ ಕೈಹಾಕುತ್ತಿದ್ದಿಲ್ಲ. ಗೌರವ ಅಥವಾ ಅಧಿಕಾರದ ಆಸೆ ಅವರಿಗಿದ್ದಿಲ್ಲ. ಅವರ ಮನೆ ಸಹ ಊರಿಂದ ಹೊರಗಿತ್ತು. ಅಲ್ಲೇ ಅವರು ಒಂದು ತೋಟ, ಒಂದು ಸಾರ್ವಜನಿಕ ಕೆರೆ, ಒಂದು ಸಣ್ಣ ಶಿವ ಮಂದಿರ – ಎಲ್ಲ ಮಾಡಿಸಿದ್ದರು. ಮಕ್ಕಳು ಮರಿಗಳಾರೂ ಇದ್ದಿಲ್ಲ ಅವರಿಗೆ ಹಾಗಾಗಿ ಹಣದ ಲೇವಾದೇವಿ ಸಹ ಈಗ ಕಡಿಮೆಮಾಡತೊಡಗಿದ್ದರು. ತನ್ನ ಸಮಯದ ಬಹು ಭಾಗವನ್ನು ಪೂಜೆ ಪಾಠಗಳಲ್ಲೇ ಕಳೆಯುತ್ತಿದ್ದರು. ಎಷ್ಟೋ ಜನರು ಅವರ ಹಣವನ್ನು ಮುಳುಗಿಸಿಬಿಟ್ಟಿದ್ದರು. ಆದರೆ ಯಾರ ಮೇಲೂ ಅವರು ದಾವೆ ಮಾಡಿದ್ದಿಲ್ಲ. ಹೋರಿರಾಮನಿಂದ ಸಹ ಅಸಲು ಬಡ್ಡಿ ಸೇರಿ ಸಾಧಾರಣ ೧೫೦ಕ್ಕೆ ಮಿಕ್ಕಿಯೇ ಅವರಿಗೆ ಬರಲಿಕ್ಕಿತ್ತು. ಆದರೆ ಹೋರಿ ರಾಮನಿಗೆ ಹಣ ಪಾವತಿ ಮಾಡುವ ಯೋಚನೆಯಾಗಲಿ, ಮಂಗಾರಾಮರಿಗೆ ಅದನ್ನು ವಸೂಲು ಮಾಡುವ ಹಟವಾಗಲಿ – ಇದ್ದಿಲ್ಲ. ಒಂದೆರಡು ಸಲ ಕೇಳಿ ದ್ದರು ; ಗದರಿಸಿಯೂ ನೋಡಿದ್ದರು. ಆದರೆ ಹೋರಿರಾಮನ ಅವಸ್ಥೆ ನೋಡಿ ಕೊನೆಗವರು ಸುಮ್ಮನಾಗಿಹೋಗಿದ್ದರು.

ಆದರೆ ಈ ಸಲ ಹೋರಿರಾಮನ ಕಬ್ಬಿನ ಬೆಳೆ ಇಡೀ ಊರಲ್ಲೇ ಅತ್ಯುತ್ತಮದ್ದಾಗಿತ್ತು. ನೋಡಿದವರೆಲ್ಲ, ಹೇಗಿದ್ದರೂ ಈ ಸಲ ೨೦೦–೫೦ಂಕ್ಕೆ ಕಡಿಮೆ ಬರಲಾರದೆಂದು ಹೇಳುತ್ತಿದ್ದರು. ಈ ಸಲ ದಾವೆ ಮಾಡಿದರೆ ಎಲ್ಲ ಹಣ ಸಿಕ್ಕಿಹೋದೀತೆಂದು ಪಟೇಶ್ವರೀಲಾಲರು ಮಂಗಾರಾಮರಿಗೆ ಸೂಚನೆ ಯನ್ನಿತ್ತರು. ಆದರೆ ಮಂಗಾರಾಮರು ಆಲಸ್ಯ ಪ್ರಕೃತಿಯ ಮನುಷ್ಯರು. ಗಲಾಟೆ ಮಾಡಿಕೊಳ್ಳುವುದಕ್ಕೆ ಅವರಿಗಿಷ್ಟವಿದ್ದಿಲ್ಲ. ಆದರೆ "ಕೋರ್ಟು ಕಚೇ ರಿಗೆ ಒಂದು ಸಲವೂ ಹೋಗದೆ, ಯಾವ ತೊಂದರೆಯೂ ಇಲ್ಲದೆ, ಈ ಸಲ ಡಿಕ್ರಿಯಾಗುತ್ತದೆ; ಹಣವೂ ಬರುತ್ತದೆ; ತನ್ನ ಹೆಸರಲ್ಲಿ ಆ ನೋಟನ್ನು 'ಟ್ರಾನ್ಸ್‌ಫರ್' ಮಾಡಿಕೊಟ್ಟರೆ ಸಾಕು" – ಎಂಬುದಾಗಿ ಪಟೇಶ್ವರೀಲಾಲರು ಭರವಸೆಯನ್ನಿತ್ತ ಮೇಲೆ ವ್ಯಾಜ್ಯ ಮಾಡಲಿಕ್ಕೆ ಲಾಲರಿಗೆ ಅನುಮತಿಯನ್ನಿ ತ್ತರು. ಅದರೊಡನೆ ವ್ಯಾಜ್ಯದ ವೆಚ್ಚಕ್ಕೆ ಬೇಕಿದ್ದ ಹಣವನ್ನೂ ಕೊಟ್ಟರು.

ಪಾಪ! ಹೋರಿರಾಮನಿಗೆ ಈ ಸಮಾಚಾರವೇ ಗೊತ್ತಿಲ್ಲ. ಯಾವಾಗ ದಾವೆ ದಾಖಲಾಯಿತು, ಯಾವಾಗ ಡಿಕ್ರಿಯಾಯಿತು ? – ಒಂದೂ ಅವ

ನಿಗೆ ಗೊತ್ತಿಲ್ಲ. ಅವನಿಗೆ ಗೊತ್ತಾದುದು, ಕೊನೆಗೆ ಕೋರ್ಟಿನ ಅಮೀನರು ಅವನ ಕಬ್ಬನ್ನು ಏಲಂ ಮಾಡಲಿಕ್ಕೆ ಬಂದಾಗಲೇ. ಊರ ಜನರೆಲ್ಲರೂ ಗದ್ದೆಯ ಸುತ್ತು ಜಮೆಯಾದರು. ಹೋರಿರಾಮನು ಮಂಗಾರಾಮರತ್ತ ಓಡಿದನು. ದನಿಯಳು ಪಟೇಶ್ವರೀಲಾಲರಿಗೆ ಬೈಯತೊಡಗಿದಳು. ಇದೆಲ್ಲ ಆ ಲಾಲರ ಕಾರ್ಬಾರೇ ಇರಬೇಕೆಂದು ಅವಳ ಸಹಜಬುದ್ಧಿ ಹೇಳುತ್ತಿತ್ತು.

ಆದರೆ ಹೋರಿರಾಮನು ಹೋಗುವಾಗ ಮಂಗಾರಾಮರು ಪೂಜಾಕಾರ್ಯದಲ್ಲಿ ತೊಡಗಿದ್ದರು. ಹಾಗಾಗಿ ಅವರ ಭೇಟಿಯೇ ಆಗಲಿಲ್ಲ. ದನಿಯಳು ಬೈಯುತ್ತಿದ್ದರೂ ಸಹ ಅದರಿಂದೇನೂ ಪ್ರಯೋಜನವಾಗಲಿಲ್ಲ. ಕಬ್ಬು ಗಿಂಕೈ ಏಲಂ ಆಗಿ ಮಂಗಾರಾಮರ ಹೆಸರಲ್ಲೇ ಮೂರು ವಾರು ಖಾಯಂ ಆಯಿತು. ಬೇರೆ ಯಾರಿಗೂ ಮಧ್ಯೆ ಬಾಯಿ ಹಾಕುವ ಧೈರ್ಯ ಬರಲಿಲ್ಲ. ಏಲವ್ಮಿಗೆ ನಿಂತು ಮತ್ತೆ ದನಿಯಳ ಬಾಯಿಂದ ಕೇಳಲಿಕ್ಕೆ ದಾತಾದೀನರಿಗೂ ಧೈರ್ಯ ಬರಲಿಲ್ಲ.

ದನಿಯಳು ಕೊನೆಗೆ ಹೋರಿರಾಮನನ್ನೇ ಗದರಿಸಿದಳು– 'ಏಕೆ ಸುಮ್ಮನೆ ಕೂತುಕೊಂಡಿರುವಿರಿ? ಹೋಗಿ ಶಾನುಭಾಗರ ಹತ್ತಿರ ಕೇಳಬಾರದೇ – ಊರವರನ್ನೆಲ್ಲ ಈ ರೀತಿ ಮೋಸ ಮಾಡಿ ನಡೆಸಿಕೊಂಡು ಹೋಗುವುದೇ? – ಎಂಬುದಾಗಿ.'

ಹೋರಿರಾಮನು ದೀನ ಸ್ವರದಿಂದ ಹೇಳಿದ – 'ಕೇಳಲಿಕ್ಕೆ ಎಡೆಯಾದರೂ ಬೇಡವೇ? ನೀನು ಬಾಯಿಗೆ ಬಂದಂತೆ ಬೈದುದು ಅವರಿಗೆ ಹೋಗಿ ಮುಟ್ಟಿರಲಾರದೇ?'

'ಬೈಯಬೇಕಾದ ಕೆಲಸ ಮಾಡಿದರೆ ಜನರು ಬೈಯದಿರುತ್ತಾರೆಯೇ? ನೋಡುವಾ–ಯಾರೀಗ ನಮ್ಮ ಗದ್ದೆಯ ಹತ್ತಿರ ಬರುತ್ತಾರೆಂಬುದಾಗಿ.'

'ಸಕ್ಕರೆ ಮಿಲ್ಲಿನವರೇ ಬಂದು ಕಬ್ಬು ಕಡಿದುಕೊಂಡು ಹೋದರೆ ನೀನು ನಾನು ಏನು ಮಾಡಲು ಸಾಧ್ಯವಿದೆ? ಸುಮ್ಮನಾದರೂ ಬೈಯ್ಯುತ್ತಿದ್ದು ನಮ್ಮ ನಾಲಗೆಯ ತುರಿಕೆ ಕಳೆಯಬೇಕಷ್ಟೆ.'

'ನಾನು ಜೀವದಲ್ಲಿರುವ ವರೆಗೆ ಯಾರನ್ನೂ ನಮ್ಮ ಗದ್ದೆಗೆ ಇಳಿಯ ಬಿಡಲಾರೆ.'

'ನೀನು ನಾನು ಬಿಟ್ಟು, ಇಡೀ ಊರವರೇ ಒಟ್ಟಾದರೂ ತಡೆಯಲು ಸಾಧ್ಯವಾಗಲಿಕ್ಕಿಲ್ಲ. ಈಗದು ನಮ್ಮ ಕಬ್ಬಲ್ಲ, ಮಂಗಾರಾಮರದು. ನಾವವರ ಸಾಲಗಾರರಲ್ಲವೇ?'

ಕಬ್ಬು ಹೋಗಿಯೇ ಬಿಟ್ಟಿತು. ಆದರೊಡನೆ ಒಂದು ಹೊಸ ಸಮಸ್ಯೆಯೂ ಒದಗಿ ಬಂತು. ದುಲಾರಿ ಈ ಕಬ್ಬು ನೋಡಿಯೇ ಮದುವೆಗೆ ಸಾಲ ಕೊಡಲು ಒಪ್ಪಿದ್ದಳು. ಈಗ ಅವಳು ಅದನ್ನು ಯಾವ ಧೈರ್ಯದಿಂದ ಕೊಟ್ಟಾಳು ? ಆವಳಿಗೆ ಹಳೆಯ ಸಾಲವೇ ೨೦೦ ಬರುವುದು ಬಾಕಿ ಇತ್ತು. ಆ ಹಳೆಯ ಸಾಲ ಈ ಕಬ್ಬಿನಿಂದ ಬಂದು ಬಿಟ್ಟರೆ ಹೊಸ ಲೆಕ್ಕ ಆರಂಭಿಸಬಹುದೆಂದು ಆವಳೆಣಿಸಿದ್ದಳು. ಅವಳ ದೃಷ್ಟಿಯಲ್ಲಿ ಹೋರಿರಾಮನನ್ನು ೨೦೦ ರೂಪಾಯಿಗಳ ವರೆಗೆ ನಂಬಬಹುದು ; ಅದಕ್ಕಿಂತ ಹೆಚ್ಚು ಕೊಡುವುದೆಂದರೆ ಎಷ್ಟಾದರೂ ಗಂಡಾಂತರವೇ ಸರಿ.

ಮದುವೆ ನಿಶ್ಚಯವಾಗಿತ್ತು. ದಿನ, ಮುಹೂರ್ತ ಸಹ ನೋಡಿಯಾಗಿತ್ತು. ಅತ್ತ ಗೌರಣ್ಣನು ಎಲ್ಲ ವ್ಯವಸ್ಥೆಗಳನ್ನೂ ಮಾಡಿ ಮುಗಿಸಿದ್ದ. ಹಾಗಾಗಿ ಮದುವೆ ನಿಲ್ಲಿಸಿಬಿಡುವುದು ಸಾಧ್ಯವೇ ಇಲ್ಲದ ವಿಚಾರವಾಗಿತ್ತು. ಹೋಗಿ ದುಲಾರಿಯ ಕುತ್ತಿಗೆಯನ್ನೇ ಹಿಸುಕಿಬಿಡುವಷ್ಟು ಕೋಪ ಹೋರಿರಾಮನಿಗೊಮ್ಮೆ ಬಂತು. ಎಷ್ಟೆಲ್ಲ ಅಂಗಲಾಚಿ ಬೇಡಲು ಸಾಧ್ಯವಿತ್ತೋ ಅಷ್ಟನ್ನೆಲ್ಲ ಅವನು ಮಾಡಿ ಮುಗಿಸಿದ್ದ. ಆದರೆ ಅವಳು ಕಲ್ಲಗೊಂಬೆಯಂತೆ ನಿಶ್ಚಲಳೇ ಆಗಿದ್ದಳು. ಕೊನೆಗೆ ಹೊರಟುಬರುವಾಗ ಕೈಮುಗಿದು ಬೇಡಿಕೊಂಡ–' ಸಾಹುಕಾರ್ತಿಯೇ–ನಿನ್ನ ರೂಪಾಯಿ ತೆಗೆದುಕೊಂಡು ನಾನೆಲ್ಲಿಯೂ ಓಡಿಹೋಗಲಾರೆ. ಅಷ್ಟು ಬೇಗನೆ ಸತ್ತೂ ಹೋಗಲಾರೆ. ಜಮೀನಿದೆ, ಮನೆ ಮಾರು ಇದೆ. ಪ್ರಾಯ ಬಂದ ಮಗನಿದ್ದಾನೆ. ಹಾಗಾಗಿ ನಿನ್ನ ರೂಪಾಯಿ ಎಂದೂ ಮುಳುಗಿ ಹೋಗಲಾರದು. ಈ ಸಲಕ್ಕೊಮ್ಮೆ ನನ್ನ ಮರ್ಯಾದೆ ಕಾಪಾಡು.'

ಆದರೆ ದಯೆಯನ್ನು ವ್ಯಾಪಾರದೊಡನೆ ಸೇರಿಸುವ ಬುದ್ಧಿಯನ್ನು ಈ ವರೆಗೆ ಕಲಿತಿದ್ದಿಲ್ಲ ದುಲಾರಿ. ಹಾಗಾಗಿ ಇವನ ಪ್ರಾರ್ಥನೆಗಳೆಲ್ಲ ವ್ಯರ್ಥವಾದುವು.

ಹೋರಿರಾಮ ಮನೆಗೆ ಬಂದು ಧನಿಯಳೊಡನೆ ಇನ್ನೇನು ಮಾಡುವುದೆಂದು ಕೇಳಿದ. ಆಗ ಅವಳು–' ನೀವು ಬಯಸಿದಂತೆಯೇ ಆಯಿತಲ್ಲವೇ ? ' ಎಂದಳು.

' ಅದು ನನ್ನ ತಪ್ಪೆ ? '

' ಯಾರ ತಪ್ಪೇ ಆಗಲಿ. ನಿಮ್ಮ ಮನೋರಥ ನೆರವೇರಿತಲ್ಲ ? '

' ಹಾಗಾದರೆ ಭೂಮಿಯ ಹಕ್ಕನ್ನೂ ಮಾರಿಬಿಡಬೇಕೆಂದು ನಿನ್ನ ಬಯಕೆಯೇ ? '

'ಭೂಮಿ ಮಾರಿ ಮತ್ತೆ ಮಾಡುವುದಾದರೂ ಏನನ್ನು?'

'ಮತ್ತೇನು? ಇನ್ನು ಉಳಿದಿರುವುದು ಕೂಲಿಕೆಲಸ.'

ಆದರೆ ಭೂಮಿಯು ಅವರಿಬ್ಬರಿಗೂ ಅತಿ ಪ್ರೀತಿಯದಾಗಿತ್ತು. ಅವರ ಮಾನ, ಮರ್ಯಾದೆ, ಗೌರವ, ಎಲ್ಲವೂ ಆ ಭೂಮಿಯನ್ನೇ ಹೊಂದಿಕೊಂಡಿತ್ತು. ಭೂಮಿ ಇಲ್ಲವಾದರೆ ಅವನೊಬ್ಬ ಗೃಹಸ್ಥನೇ ಅಲ್ಲ.

ಉತ್ತರ ಬಾರದುದರಿಂದ ಪುನಃ ಹೋರಿರಾಮ ಕೇಳಿದ – 'ಹಾಗಾದ ರೇನು ಮಾಡುವಾ?' ಎಂದು.

ದನಿಯಳೂ ತಗ್ಗಿದ ಸ್ವರದಿಂದ ಹೇಳಿದಳು – "ಮಾಡುವುದೇನನ್ನು? ಗೌರಣ್ಣ ದಿಬ್ಬಣ ತೆಗೆದುಕೊಂಡು ಬರಬಹುದು. ನಾವು ಊಟ ಒಂದು ಕೊಡುವುದು. ಮೊದಲ ಮಗಳ ಮದುವೆಯನ್ನೇ 'ಕುಶ ಕನ್ಯಾದಾನ'ದಲ್ಲಿ ಮುಗಿಸಿಬಿಟ್ಟರೆಂಬುದಾಗಿ ಜನರೆಲ್ಲ ನಗಾಡಬಹುದು. ನಗಾಡಲಿ. ದೇವರ ಇಚ್ಛೆಯೇ ಹಾಗಿದ್ದರೆ ಯಾರೇನು ಮಾಡಬಹುದು?"

ಆಗಲೇ ಹೊಸ ಸೀರೆಯುಟ್ಟುಕೊಂಡು ನೋಹರಿ ಆ ದಾರಿಯಿಂದಲೇ ಬರುವುದು ಕಂಡುಬಂತು. ಬಂದವಳೇ ಹೋರಿರಾಮನನ್ನು ಭಕ್ತಿಯಿಂದ ವಂದಿಸಿ ದನಿಯಳನ್ನು ಮಾತಾಡಿಸಿದಳು. ದನಿಯಳೂ ಅವಳನ್ನು ಆದರ ಪೂರ್ವಕವಾಗಿ ಕೂತುಕೊಳ್ಳ ಹೇಳಿದಳು.

ನೋಹರಿ ಆ ಊರಿಗೆ ಬಂದು ಸ್ವಲ್ಪವೇ ಸಮಯದಲ್ಲಿ ಸಂಪೂರ್ಣ ದಿಗ್ವಿ ಜಯಮಾಡಿಕೊಂಡಾಗಿತ್ತು. ಈಗ ಅವಳು ಜನಮತವನ್ನು ತನ್ನ ಕಡೆಗೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದಳು.

ದನಿಯಳು ಆಕೆಯನ್ನು ತಲೆಯಿಂದ ಕಾಲಿನ ವರೆಗೆ ವಿಚಾರಪೂರ್ಣ ದೃಷ್ಟಿಯಿಂದ ನೋಡಿ ಕೇಳಿದಳು – 'ಏನಿದು, ಇತ್ತ ದಾರಿ ತಪ್ಪಿ ಬಂದೆಯಾ?'

'ಹೀಗೆಯೇ ತಿರುಗಾಡುತ್ತಾ ಬಂದೆ. ನಿಮ್ಮನ್ನೆಲ್ಲ ನೋಡಿ ಹೋಗುವ ಮನಸ್ಸಾಯಿತು. ಅದಿರಲಿ. ಯಾವಾಗ ಮಗಳ ಮದುವೆ?'

'ಅದೆಲ್ಲ ದೇವರ ಕೈಯಲ್ಲಿದೆ' – ಸಂದೇಹಯುಕ್ತ ಸ್ವರದಿಂದ ದನಿಯ ಳೆಂದಳು.

ಈ ಬೇಸಗೆಯಲ್ಲೇ ಮದುವೆಯಾಗಲಿದೆಯೆಂಬುದಾಗಿ ನಾನು ಕೇಳಿದ್ದೆ. ಏನು – ದಿವಸ ನಿಶ್ಚಯವಾಗಲಿಲ್ಲವೇ?'

'ಹೌದು; ದಿವಸವೇನೋ ನಿಶ್ಚಯವಾಗಿದೆ.'

'ಹಾಗಾದರೆ ನನ್ನನ್ನು ಸಹ ಮದುವೆಗೆ ಹೇಳಿಬಿಡಿ.'

'ನಿನ್ನ ಮಗಳೇ ಅಲ್ಲವೇ ಅವಳು? ಮತ್ತೆಂತಹ ಹೇಳಿಕೆ?'

'ಸೀರೆ ಕುಪ್ಪುಸಗಳನ್ನೆಲ್ಲ ಇಷ್ಟರಲ್ಲೇ ತಂದಿರಬೇಕು. ನಾನೂ ಸ್ವಲ್ಪ ನೋಡಬಹುದೆ?'

ದನಿಯುಳಿಗೆ ಏನು ಹೇಳಲಿಕ್ಕೂ ಬಾಯಿ ಬರಲಿಲ್ಲ. ಆಗ ಹೋರಿರಾಮನೇ ಅವಳ ಸಹಾಯಕ್ಕೆ ಬಂದ–'ಈ ವರೆಗೆ ಯಾವ ಸಾಮಾನೂ ತರಲಿಲ್ಲ ನೋಹರಿ. ಅಥವಾ ತರುವುದಾದರೂ ಎಲ್ಲಿಂದ? ಬರೇ ಕುಶ–ಕನ್ಯೆ ಮಾತ್ರ ಕೊಡಬೇಕಷ್ಟೆ.'

ನೋಹರಿಗೆ ಆ ಮಾತಿನ ಮೇಲೆ ನಂಬಿಕೆಯಾಗಲಿಲ್ಲ. ಅವಳು ಪುನಃ ಹೇಳಿದಳು–'ಏಕೆ ಬರೇ ಕುಶಕನ್ಯಾದಾನ ಮಾಡುವಿರಪ್ಪ? ಎಷ್ಟಾದರೂ ಮೊದಲ ಮಗಳಲ್ಲವೇ? ಕೈಬಿಚ್ಚಿ ಖರ್ಚುಮಾಡುವುದು ಬೇಡವೇ?'

ಹೋರಿರಾಮ ನಗಾಡಿಬಿಟ್ಟ. ಅವನು ನಗುವಾಗ – ನಿನಗೇನೋ ಇಡೀ ಪ್ರಪಂಚವೇ ಹಸುರಾಗಿ ಕಂಡರೂ ತನ್ನ ಮಟ್ಟಿಗೆ ಅದು ಒಣಗಿಹೋದ ಮರುಭೂಮಿಯಾಗಿ ಕಾಣುತ್ತಿದೆ – ಎಂದು ಹೇಳುವನೋ ಎಂಬಂತಿತ್ತು. ಆ ಮೇಲೆ ಯೋಚಿಸಿ – 'ಹಣ ಕಾಸಿನ ತಾಪತ್ರಯ ಮಿತಿಮೀರಿಹೋಗಿದೆ ನೋಹರಿ. ನಿನ್ನಲ್ಲೇಕೆ ಮುಚ್ಚುಮರೆ?' ಎಂದ.

'ಅತ್ತ ಮಗ ಸಂಪಾದಿಸುತ್ತಾನೆ! ಇತ್ತ ನೀನು ಬೇರೆ ಸಂಪಾದಿಸುವೆ! ಆಷ್ಟಿದ್ದು ಸಹ ಹಣಕಾಸಿನ ತಾಪತ್ರಯವೇ? ಯಾರೂ ನಂಬಲಾರರು.'

'ಮಗ ಒಳ್ಳೆಯವನಾಗಿದ್ದರೆ ಈ ಕಷ್ಟವೇ ಬರುತ್ತಿದ್ದಿಲ್ಲ. ಅವನೊಂದು ಕಾಗದ ಸಹ ಬರೆಯುವುದಿಲ್ಲ. ಇನ್ನು ಹಣವೇಕೆ ಕಳುಹಿಸಿಯಾನು? ಹೋಗಿ ಎರಡು ವರ್ಷ ದಾಟಿತು. ಈ ವರೆಗೆ ಯಾವ ವರ್ತಮಾನವೂ ಇಲ್ಲ.'

ಅಷ್ಟರಲ್ಲಿ ಸೋನೆಯು ಎತ್ತುಗಳಿಗಾಗಿ ಹಸುರು ಹುಲ್ಲಿನ ಹೊರೆಯೊಂದನ್ನು ಹೊತ್ತುಕೊಂಡು ಬಂದಳು. ತುಂಬಿಬಂದ ಯೌವನವನ್ನು ಬಟ್ಟೆಯಿಂದ ಮರೆ ಮಾಡಿಕೊಂಡಿದ್ದಳು ಅವಳು. ಆದರೂ ಸರಳಸ್ವಭಾವದ ತರಳೆಯಾಗಿಯೇ ಕಾಣುತ್ತಿದ್ದಳು. ಬಂದವಳೇ ಹೊರೆಯನ್ನು ಕೆಳಹಾಕಿ ಮನೆಯೊಳಕ್ಕೆ ಸೇರಿದಳು.

'ಮಗಳು ಚನ್ನಾಗಿ ಬೆಳೆದುಬಂದಿದ್ದಾಳೆ, ಅಲ್ಲವೇ?' – ನೋಹರಿ ಹೇಳಿದಳು ಆಗ.

ದನಿಯೂ ಹೇಳಿದಳು – "ಹುಡುಗಿಯರ ಬೆಳವಣಿಗೆ ಬಿದಿರಮೆಳೆಯ ಬೆಳೆ

ವಣಿಗೆಯಂತೆ' ಎಂಬ ಗಾದೆ ಕೇಳಿಲ್ಲವೇ? ಆದರೆ ಪ್ರಾಯವೇನೂ ಹೆಚ್ಚಾಗಿಲ್ಲ.

'ವರನ ನಿಶ್ಚಯವಾಗಿದೆ ತಾನೆ?'

'ಹೌದು, ವರನಿಶ್ಚಯವಾಗಿದೆ. ಹಣದ ಏರ್ಪಾಡಾದರೆ ಈ ತಿಂಗಳಲ್ಲಿ ಮದುವೆ ಮುಗಿಸಿಬಿಡಬೇಕೆಂದಿದ್ದೇವೆ.'

ನೋಹರಿಯ ಮನಸ್ಸು ವಿಶಾಲವಾಗಿತ್ತು. ಇತ್ತೀಚೆ ಅವಳು ಸಂಪಾದಿ ಕೂಡಿಸಿಟ್ಟದ್ದ ಹಣ ಒಳಗೊಳಗೇ ತುರಿಸುವಂತಿತ್ತು. ಆ ಹಣವನ್ನೀಗ ಮದುವೆಯ ವೆಚ್ಚಕ್ಕಾಗಿ ಕೊಟ್ಟುಬಿಟ್ಟರೆ ಎಂತಹ ಹೆಸರು ಬರಬಹುದು ಊರಲ್ಲೆಲ್ಲ ಆ ವಿಚಾರದ ವಿಮರ್ಶೆಯಾದೀತು! ಇಷ್ಟು ರೂಪಾಯಿ ನೋಹ ಕೊಟ್ಟುಬಿಟ್ಟಳೇ ಎಂದು ಜನರಿಗೆಲ್ಲ ಆಶ್ಚರ್ಯವಾದೀತು! ಹೋರಿರಾಮ ಮತ್ತು ದನಿಯಾ ಹೋದಲ್ಲೆಲ್ಲ ತನ್ನನ್ನು ಬಾಯಿತುಂಬ ಹೊಗಳಬಹುದು. ಅ ರಿಂದ ಅವಳ ಗೌರವ ಊರಲ್ಲಿ ಎಷ್ಟರ ಮಟ್ಟಿಗೆ ಏರಲಿಕ್ಕಿಲ್ಲ? ಮತ್ತೆ ಅವಳನ್ ನೋಡಿ ನಗುವ, ಅಥವಾ ಪರಿಹಾಸ ಮಾಡುವ ಧೈರ್ಯ ಯಾರಿಗೆ ಬಂದೀತು ಆ ಮೇಲೆ ಇಡೀ ಊರವರೇ ಅವಳ ಹಿತಚಿಂತಕರಾದಾರು! ಈ ಎಲ್ಲ ಯೋಚನ ಮಾಡುತ್ತ ಅವಳ ಮುಖಮುದ್ರೆ ಅರಳಿ ಬಂತು. 'ಭಾರೀ ಖರ್ಚಿಲ್ಲದೆ ಕೆಲಸ ನಡೆದೀತಾದರೆ– ನನ್ನ ಕೈಯಲ್ಲಿದೆ. ತೆಗೆದುಕೊಂಡು ಕೆಲಸ ಮುಂದುವರಿಸಿ ಕೈಯಲ್ಲಾದಾಗ ಹಿಂದೆ ಕೊಟ್ಟರೆ ಸಾಕು'– ಎಂದಳು ಅವಳು.

ಹೋರಿರಾಮ ಮತ್ತು ದನಿಯಾ ಇಬ್ಬರೂ ಅವಳ ಮುಖ ನೋಡಿದರು ನೋಹರಿ ಪರಿಹಾಸ ಮಾಡುತ್ತಿಲ್ಲ– ನಿಜ. ಇಬ್ಬರ ದೃಷ್ಟಿಯಲ್ಲೂ ವಿಸ್ಮಯ ಕೃತಜ್ಞತೆ, ಹಾಗೂ ಲಜ್ಜೆ ಮೂಡಿಬಂದಿದ್ದುವು. ನೋಹರಿ ಎಷ್ಟಾದರೂ ಜನರೆಲ್ಲ ಹೇಳುವಷ್ಟು ಕೆಟ್ಟವಳಲ್ಲ.

ನೋಹರಿ ಪುನಃ ಹೇಳಿದಳು– 'ನಿಮ್ಮ ಹಾಗೂ ನಮ್ಮ ಮರ್ಯಾದೆ– ಎಲ್ಲಾ ಒಂದೇ. ನಿಮ್ಮನ್ನು ನೋಡಿ ಜನ ನಗಾಡಿದರೆ ಅದರಿಂದ ನನಗೆ ಬೇಸರವಾಗದಿದ್ದೀತೇ? ಎಷ್ಟಾದರೂ ನೀವೂ ನಾವೂ– ಎಲ್ಲಾ ಒಂದೇ ಅಲ್ಲವೇ?'

ಹೋರಿರಾಮ ಸಂಕೋಚಗೊಂಡು ಹೇಳಿದ– 'ನಿನ್ನ ರೂಪಾಯಿ ಎಷ್ಟಾ ದರೂ ಮನೆಯೊಳಗಿದ್ದ ರೂಪಾಯಿಯೇ ಸರಿ. ನಮ್ಮ ಸೋನೆಯೂ ನಿನ್ನ ಮಗಳಂತೆ ಎಂಬುದೂ ಸರಿ. ಆದರೂ, ಹೊರಗಿಂದ ಹೊರಗೆ ರೂಪಾಯಿಯ ವ್ಯವಸ್ಥೆಯಾಗುವುದಿದ್ದರೆ ಮನೆಯ ರೂಪಾಯಿ ಏಕೆ ತೆಗೆಯಬೇಕು– ಎಂಬುದೇ

ಲೋಚನೆ. ’

‘ ಅಲ್ಲ ; ಮನೆಯೊಳಗೇ ರೂಪಾಯಿ ಇದ್ದರೆ ಏಕೆ ಹೊರಗಿನವರ ಹತ್ತಿರ ಕೈ ಚಾಚಬೇಕು ? ಅದಕ್ಕೆಲ್ಲ ಬಡ್ಡಿ ಕೊಡಬೇಕು; ಸ್ಟಾಂಪು ಬೇಕು; ನೋಟು ಜೇಟು ಆಗಬೇಕು; ಸಾಕ್ಷಿ ಬೇಕು. ನಮ್ಮದೇ ರೂಪಾಯಿ ಆದರೆ ಈ ಎಲ್ಲ ಕಷ್ಟವೇ ಇಲ್ಲ ತಾನೆ ? ’

‘ ಅದು ಹೌದು. ಮನೆಯಲ್ಲಿರುವಾಗ ಹೊರಗೆ ಕೈ ಚಾಚುವುದು ಸರಿಯಲ್ಲ. ಆದರೂ ನಮ್ಮ ನಮ್ಮೊಳಗಿನ ಸಮಾಚಾರ ಇದು. ನನ್ನ ಮನೆಯವರುಗಳ ಭರವಸೆ ಬಹಳವಾಗಿಟ್ಟುಕೊಳ್ಳಬರುವುದಿಲ್ಲ. ಎಲ್ಲಿಯಾದರೂ ನಿನಗೆ ರೂಪಾಯಿ ಅಗತ್ಯಬಿದ್ದರೆ– ನನ್ನ ಕೈಯಲ್ಲಿ ಆಗಲೇ ಕೊಡಲಿಕ್ಕಾಗದಿದ್ದರೆ–ಮತ್ತೆ ನಿನಗೆ ಬೇಸರವಾಗಬಹುದು; ನಮಗೂ ದುಃಖವಾಗಬಹುದು. ಅದಕ್ಕೇ ಹಿಂಜರಿಯುವುದು. ’

‘ ನನಗೀಗ ರೂಪಾಯಿಯ ಅವಶ್ಯಕತೆ ಇಲ್ಲ. ’

‘ ಹಾಗಾದರೆ ಸರಿ. ನಿನ್ನಿಂದಲೇ ತೆಗೆದುಕೊಳ್ಳುವುದು. ಆ ಕನ್ಯಾದಾನದ ಪುಣ್ಯಫಲವಾದರೂ ಹೊರಗೇಕೆ ಹೋಗಬೇಕು ? ’

‘ ಎಷ್ಟು ರೂಪಾಯಿ ಬೇಕಾದೀತು ? ’

‘ ನಿನಗೆಷ್ಟು ಕೊಡಲು ಸಾಧ್ಯವಿದೆ ? ’

‘ ನೂರರಲ್ಲಿ ಕೆಲಸ ಮುಗಿಯಬಹುದೇ ? ’

ಹೋರಿರಾಮನಿಗೆ ಸ್ವಲ್ಪ ಆಸೆಯಾಯಿತು. ದೇವರು ಸುಲಭದಿಂದ ರೂಪಾಯಿ ಕೊಡಿಸುವುದಿದ್ದರೆ ಸಾಧ್ಯವಿದ್ದಷ್ಟು ತೆಗೆದುಕೊಂಡೇ ಬಿಡುವುದು. ಅವನು ಯೋಚಿಸಿ ಹೇಳಿದ–‘ ಅದೀಗ ನೂರರಲ್ಲೂ ಮುಗಿಸಬಹುದು. ಐನೂರರಲ್ಲೂ ಕೊನೆಗಾಣಿಸಬಹುದು. ಅದೆಲ್ಲ ಇದ್ದ ಹಾಗೆ. ’

‘ ನನ್ನ ಕೈಯಲ್ಲಿ ಸರಿಯಾಗಿ ೨೦೦ ಇದೆ. ಅದನ್ನೆಲ್ಲ ಕೊಟ್ಟು ಬಿಡುತ್ತೇನೆ. ’

‘ಅಷ್ಟಿದ್ದರೆ ವಿಜೃಂಭಣೆಯಿಂದ ಕೆಲಸ ಮುಗಿಸಬಹುದು. ದವಸ ಧಾನ್ಯ ಮನೆಯಲ್ಲೇ ಇದೆ. ಆದರೆ ಸತ್ಯ ಹೇಳುತ್ತಿದ್ದೇನೆ– ನೀನು ಇಂತಹ ಭಾಗ್ಯಲಕ್ಷ್ಮಿಯೆಂದು ನಾನೆಂದೂ ತಿಳಿದಿದ್ದಿಲ್ಲ. ಈ ಕಾಲದಲ್ಲಿ ಯಾರ ಹತ್ತಿರ ನಾಲ್ಕು ಕಾಸು ಇದೆ ? ಅಥವಾ ಇದ್ದರೂ ಯಾರು ಸಹಾಯಮಾಡಲು ಯಾರಿದ್ದಾರೆ ? ಅಂತು ಈ ಸಲ ನಾನು ಮುಳುಗಿ ಹೋಗದಂತೆ ಮಾಡಿದೆ.

ದೊಡ್ಡ ಉಪಕಾರ !'

ದೀಪ ಹಚ್ಚುವ ಹೊತ್ತು ಬಂದಿತ್ತು. ಚಳಿಯೂ ಆರಂಭವಾಗುವುದ ಲ್ಲಿತ್ತು. ದನಿಯಾ ಒಳಹೋಗಿ ಅಗ್ಗಿಷ್ಟಿಕೆ ತಂದಳು. ಎಲ್ಲರೂ ಸುತ್ತ ಕೂತ ಚಳಿ ಕಾಯಿಸಲಾರಂಭಿಸಿದರು. ದೀಪದ ಪ್ರಕಾಶದಲ್ಲಿ ಬಣ್ಣ ಬಣ್ಣದ ಸೀ ಯುಟ್ಟು, ತುಂಬು ರೂಪದ ನೋಹರಿ ಕುಲಟೆಯಾದರೂ – ಇಂದಿಗೆ ವ ದಾನ ಮಾಡುವವಳಂತೆ ಕೂತಿದ್ದಳು. ಅವಳ ಮುಖದಲ್ಲಿ ಸಹೃದಯ ತುಂಬಿ ಹರಿಯುವಂತೆ ತೋರುತ್ತಿತ್ತು.

ಬೇರೆ ಬೇರೆ ವಿಚಾರಗಳ ಮಾತುಕತೆ ಮುಗಿದ ಬಳಿಕ ನೋಹರಿ ಎದ್ದು 'ರಾತ್ರಿಯಾಗಿ ಹೋಯಿತು; ನಾಳೆ ಬಂದು ರೂಪಾಯಿ ತೆಗೆದುಕೊಂಡ ಬಿಡು – ರಾಮಣ್ಣಾ ' ಎನ್ನುತ್ತಾ ಮನೆ ಕಡೆ ಹೊರಟಳು.

'ಹೋಗುವಾ, ನಿನ್ನನ್ನು ಮನೆಯ ವರೆಗೆ ಮುಟ್ಟಿಸಿ ಬರುತ್ತೇನೆ.'

'ಬೇಡ ಬೇಡ. ಸೀನಿರು ; ನಾನೇ ಹೋದೇನು.'

'ನನಗೇನೋ ನಿನ್ನನ್ನು ಹೆಗಲ ಮೇಲೆ ಕೂರಿಸಿ ಮನೆಗೆ ಮುಟ್ಟ ಬರಬೇಕೆಂಬಾಸೆಯಾಗಿದೆ.'

ನೋಖೇರಾಮರ ಮನೆ ಊರ ಮತ್ತೊಂದು ತಲೆಯಲ್ಲಿತ್ತು. ಹೋಗು ದಾರಿಯೇನೋ ಒಳ್ಳೇದಿತ್ತು. ಇಬ್ಬರೂ ಆ ರಸ್ತೆಯಲ್ಲಿ ಹೊರಟರು. ಎಲ್ಲಿ ಯಲ್ಲೂ ನಿಶ್ಶಬ್ದತೆ ಆವರಿಸಿತ್ತು.

ದಾರಿಯಲ್ಲಿ ನೋಹರಿ ಹೇಳಿದಳು – 'ನೀವಾದರೂ ಸ್ವಲ್ಪ ನಿಮ್ಮ ಭಾವ – ನಮ್ಮ ಯಜಮಾನರಿಗೆ ಬುದ್ಧಿ ಹೇಳಬಾರದೇ ? ಈಗೀಗ ಎಲ್ಲರೊಡನೆಯು ಕಾದಾಡುತ್ತಿದ್ದಾರೆ. ನಾಲ್ಕು ಜನರ ಮಧ್ಯದಲ್ಲಿದ್ದ ಮೇಲೆ ಅವರಿಗಾಗು ಹಾಗೆ ನಾವಿರಬೇಡವೇ ? ಇವರ ಕತೆ ಹಾಗಲ್ಲ. ಎಲ್ಲರ ಹತ್ತಿರವೂ ಜಗಳ ಹೊಡೆದಾಟ. ನಿಮಗೆ ನನ್ನನ್ನು – ವೈಭವ ಸಮೇತ ಪರದೆಯೊಳಗಿಡಲ ಸಾಧ್ಯವಿಲ್ಲವಾದರೆ ನಾನು ಇನ್ನೊಬ್ಬರ ಕೆಲಸ ಮಾಡದಿರಲು ಸಾಧ್ಯವೇ ಹಾಗೆ ಕೆಲಸ ಮಾಡಬೇಕೆಂದಾದಾಗ ಅವರ ಹತ್ತಿರ ಮಾತಾಡದೆ, ನಗಾಡದ ಅವರತ್ತ ನೋಡದೆ ಇರಲಿಕ್ಕಾಗುವುದೇ ? ನೀವೇ ಹೇಳಿ, ಯಾರಾದರು ನನ್ನತ್ತ ನೋಡಿದರೆ, ಅಥವಾ ಚೇಷ್ಟೆ ಮಾಡಿದರೆ – ನಾನೇನು ಮಾಡಲಿ ಅವರ ಕಣ್ಣು ಕುಕ್ಕಲಿಕ್ಕೆ ನನಗೆ ಸಾಧ್ಯವಿದೆಯೇ ? ಅದೂ ಅಲ್ಲದೆ, ಇತರ ಮೇಲೆ ಪ್ರೀತಿ ವಿಶ್ವಾಸ ತೋರಿಸುತ್ತಾ ಇದ್ದರೆ ಮನುಷ್ಯ ಎಷ್ಟೋ ಕೆಲಸ

ಸ್ಥುಲಭದಿಂದ ಮಾಡಿಸಿಕೊಳ್ಳಬಹುದು. ಅಂತು ಕಾಲ ಬಂದ ಹಾಗೆ ನಡೆಯು ಬೇಡವೇ? ಹೌದು; ಮೊದಲು ನಿಮ್ಮ ಮನೆಯಲ್ಲಿ ಆನೆ ಕಟ್ಟಿದ್ದಿರಬಹುದು! ಆದರೆ ಆದರಿಂದ ಈಗೇನು ಪ್ರಯೋಜನ? ಈಗ ಮೂರು ರೂಪಾಯಿಯ ಕೂಲಿಯಾಳಲ್ಲವೇ? ಹೆಚ್ಚು ಬೇಡ – ನನ್ನ ಮನೆಯಲ್ಲೇ ಒಂದು ಕಾಲದಲ್ಲಿ ನೂರು ಎಮ್ಮೆ ಕಟ್ಟಿದ್ದರಂತೆ! ಆದರೆ ಈಗ ನಾನು ಜೀತದಾಳಲ್ಲವೇ? ಅವ ನೀಗ ಪದೇ ಪದೇ – ಲಖ್ನೌವಿಗೆ ಹೋಗುತ್ತೇನೆ, ಮಗನೊಟ್ಟಿಗಿರುತ್ತೇನೆ – ಎಂದೇನೆಲ್ಲ ಹೇಳುತ್ತ ನನ್ನ ಜೀವ ಹಿಂಡುತ್ತಿದ್ದಾರೆ!'

ಹೋರಿರಾಮನೂ ಅವಳ ಪಕ್ಷ ಹಿಡಿದೇ ಮಾತಾಡಿದ – 'ಎಷ್ಟಾದರೂ ಅದೆಲ್ಲ ಬೋಲಣ್ಣನ ಹೆಡ್ಡು ಬುದ್ಧಿ. ಈಗ ಪ್ರಾಯ ಮೀರಿಹೋಯಿತು. ಇನ್ನಾದರೂ ಬುದ್ಧಿ ಬರುವುದು ಬೇಡವೇ? ಆಗಲಿ; ನಾನೂ ಹೇಳಿ ತಿಳಿಸು ತ್ತೇನೆ.'

'ಹಾಗಾದರೆ ನಾಳೆ ಬೆಳಗ್ಗೆ ಬಂದುಬಿಡು. ರೂಪಾಯಿ ಸಹ ಆಗ ಕೊಟ್ಟು ಬಿಡುತ್ತೇನೆ.'

'ಏನಾದರೂ ನೋಟು – ಚೀಟಿ. . .'

'ಅದೊಂದೂ ಬೇಡ. ನನಗೆ ಗೊತ್ತಿದೆ – ನೀವೇನೂ ನನ್ನ ರೂಪಾಯಿ ತಿಂದುಹಾಕಲಾರಿರಿ.'

ಅಷ್ಟರಲ್ಲಿ ಅವಳ ಮನೆ ಬಂತು. ಅವಳು ಮನೆಯೊಳಗೆ ಸೇರಿದಳು. ಹೋರಿರಾಮನೂ ತನ್ನ ಮನೆಯತ್ತ ಹೊರಟ.

೨೨

ಗೋಬರ ಸಂಸಾರ ಸಮೇತ ಲಖ್ನೌಗೆ ಬಂದು ಸೇರಿದ. ಆದರೆ ಅವನ ಗೂಡಂಗಡಿ ಇದ್ದ ಸ್ಥಳದಲ್ಲಿ ಈಗ ಬೇರೊಬ್ಬನು ಅಂಗಡಿ ತೆರೆದಿದ್ದ. ಆದ ರಿಂದಾಗಿ ಗಿರಾಕಿಗಳೆಲ್ಲ ಆ ಹೊಸ ಅಂಗಡಿಗೆ ಹೋಗಲಾರಂಭಿಸಿದ್ದರು. ಈಗ ಮನೆ ಸಹ ಗೋಬರನಿಗೊಂದು ಪಂಜರದಂತೆ ತೋರಿಬರತೊಡಗಿತು. ಆ ಮನೆಯಲ್ಲಿ ಜುನಿಯಳೊಬ್ಬಳೇ ಕೂತು ಬೇಸತ್ತು ಎಷ್ಟೋ ಸಲ ಅತ್ತುಬಿಟ್ಟಿದ್ದಳು. ಮಗನು ದಿನವಿಡೀ ಅಂಗಳದಲ್ಲಿ ಅಥವಾ ಗದ್ದೆಯಲ್ಲಿ ಆಟ ಆಡುವ

ಅಭ್ಯಾಸದವನು. ಆದರೆ ಅವನಿಗೆ ಹಾಗೆ ಆಡಲಿಕ್ಕೆ ಇಲ್ಲೆಲ್ಲಿ ಅವಕಾಶವಿದೆ ಮನೆಬಾಗಿಲಲ್ಲಿ ಬರೇ ಒಂದು ಗಜಅಗಲದ ಓಣಿ ಮಾತ್ರ ಇತ್ತು. ಅದು ಕೂಡ ವಾಸನೆ ತುಂಬಿಹೋಗಿತ್ತು. ಸೆಕೆ ಕಾಲದಲ್ಲಿ ಮನೆಯ ಹೊರಗೆ ಇರಲಿಕ್ಕಾ ಗಲಿ, ಕೂತುಕೊಳ್ಳಲಿಕ್ಕಾಗಲಿ, ಅವಕಾಶವೇ ಇದ್ದಿಲ್ಲ. ಅದರಿಂದ ಮಗ ಯಾವಾಗಲೂ ತಾಯಿಯ ಬೆನ್ನು ಹಿಡಿದೇ ಇರುತ್ತಿದ್ದ. ಯಾವ ಆಟಗಳಿಗೂ ಎಡೆಯಿಲ್ಲದ್ದರಿಂದ ಏನಾದರೂ ತಿನ್ನುವ, ಅಥವಾ ಹಾಲು ಕುಡಿಯುವ, ಯೋಚನೆಯಿಂದ ಹಟಮಾಡುತ್ತಿದ್ದ. ಹಳ್ಳಿಯ ಮನೆಯಲ್ಲಿರುವಾಗ ಅವನನ್ನು ದನಿಯಾ, ರೂಪಾ, ಸೋನಾ – ಎಲ್ಲರೂ ಆಟವಾಡಿಸುತ್ತಿದ್ದರು. ಇಲ್ಲಿ ಜುನಿಯ ಳೊಬ್ಬಳೇ ಆದ್ದರಿಂದ, ಅದರಲ್ಲೂ ಮನೆಕೆಲಸ ಸಹ ಆಗಬೇಕಾದ್ದರಿಂದ ಅವಳಿಗೆ ಸಾಕು ಸಾಕಾಗಿ ಹೋಗುತ್ತಿತ್ತು.

ಗೋಬರ ಯೌವನಮದದಿಂದ ತುಂಬಿಹೋಗಿದ್ದ. ಅವನ ಅತೃಪ್ತ ಲಾಲಸೆಗಳೆಲ್ಲ ವಿಷಯಭೋಗ ಸಾಗರದಲ್ಲಿ ಅವನನ್ನು ಮುಳುಗಿಸಿಬಿಡಲು ಬಯಸುತ್ತಿದ್ದುವು. ಯಾವ ಕೆಲಸದ ಮೇಲೂ ಅವನಿಗೆ ಆಸಕ್ತಿ ಇದ್ದಿಲ್ಲ ಗೂಡಂಗಡಿಯತ್ತ ಹೋದರೂ ಮರುಗಳಿಗೆಯಲ್ಲೇ ಹಿಂತಿರುಗಿ ಬರುತ್ತಿದ್ದ ಮನೋರಂಜನೆಗೆ ಬೇರೆ ಯಾವ ಉದ್ಯೋಗವೂ ಅವನಧೀನ ಇದ್ದಿಲ್ಲ. ನೆರೆ ಕರೆಯ ಕೂಲಿಗಾರರೂ, ಗಾಡಿವಾಲರೂ ಮಧ್ಯರಾತ್ರಿಯ ತನಕ ಚತುರಂಗ ಜೂಜು, ಆಡುತ್ತಿದ್ದರು. ಮೊದಲು ಇವನು ಸಹ ಚನ್ನಾಗಿ ಆಡುತ್ತಿದ್ದನು ಆದರೆ ಈಗ ಅವನ ಮಟ್ಟಿಗೆ ಜುನಿಯಳೊಡನೆ ಹಾಸವಿಲಾಸಗಳಲ್ಲಿ ಮಗ್ನ ನಾಗಿರುವುದೇ ಮನೋರಂಜನೆಯ ಪ್ರಧಾನ ವಿಷಯವಾಗಿತ್ತು. ಸ್ವಲ್ಪವೇ ದಿನಗಳಲ್ಲಿ ಅವಳಿಗೆ ಈ ತರದ ಜೀವನ ಸಾಕಾಗಿ ಹೋಯಿತು. ಎಲ್ಲಿಯಾದರೂ ಪ್ರಶಾಂತ ಸ್ಥಳದಲ್ಲಿ ವಿರಾಮವಾಗಿ ಕೂತು, ಬಳಿಕ ನಿಶ್ಚಿಂತಳಾಗಿ ಮಲಗಿ ಬಿಡಬೇಕೆಂದು – ಅವಳು ಬಯಸುತ್ತಿದ್ದಳು. ಆದರೆ ಅವಳಿಗೆ ಅಂಥ ಪ್ರಶಾಂತ ಸ್ಥಳ ಎಲ್ಲಿ ದೊರಕೀತು? ಕ್ರಮೇಣ ಅವಳಿಗೆ ಗೋಬರನ ಮೇಲೆ ಬೇಸರ ಬರತೊಡಗಿತು. ಹಿಂದಕ್ಕವಳು ಮನಸ್ಸಿನಲ್ಲಿ ನಗರಜೀವನದ ಉತ್ತಮ ಚಿತ್ರ ವನ್ನು ಕಲ್ಪಿಸಿಕೊಂಡಿದ್ದಳು. ಆದರೆ ಇಲ್ಲಿ ಈ ಕತ್ತಲೆಕೋಣೆ ವಿನಾ ಬೇರೆ ಯಾವುದೂ ಅವಳ ಪಾಲಿಗೆ ಒದಗಿದ್ದಿಲ್ಲ.

ಬರುಬರುತ್ತ ಮಗನ ಮೇಲೂ ಅವಳಿಗೆ ಕೋಪ ಬರತೊಡಗಿತು. ಕೆಲ ವೇಳೆ ಅವನಿಗೆ ಚನ್ನಾಗಿ ಹೊಡೆದು ಮನೆಯಿಂದ ಹೊರಗಟ್ಟಿ ಒಳಗಿಂದ

ಕೇಲು ಹಾಕುತ್ತಿದ್ದಳು. ಮಗ ಹೊರಗಿಂದಲೇ ಅತ್ತು ಅತ್ತು ಸೋತು ಹೋಗುತ್ತಿದ್ದ.

ಆದರ ಮೇಲೆ ಹೊಸ ಆಪತ್ತೊಂದು ಎದುರಾಯಿತು. ಅವಳು ಎರಡನೆಯ ಸಲ ಗರ್ಭಿಣಿಯಾದಳು. ಇಲ್ಲಿ ಅವಳಿಗೆ ಯಾರೂ ಹಿಂದೆಯೂ ಇಲ್ಲ, ಮುಂದೆಯೂ ಇಲ್ಲ. ಆಗಾಗ್ಗೆ ತಲೆ ಸಿಡಿತವೂ ತೋರಿಬರುತ್ತಿತ್ತು. ಬಾಯಿ ರುಚಿಯೂ ಇಲ್ಲ. ಸುಮ್ಮನೆ ಕೋಣೆಯೊಳಗೆ ಬಿದ್ದುಕೊಳ್ಳುವಷ್ಟು ಆಲಸ್ಯ ತೋರಿಬರುತ್ತಿತ್ತು. ತನ್ನೊಡನೆ ಯಾರೂ ಮಾತಾಡಬಾರದು, ವ್ಯವಹರಿಸ ಬಾರದು, ಎಂದೆನಿಸುತ್ತಿತ್ತು ಅವಳಿಗೆ. ಆದರೆ ಗೋಬರನ ನಿಷ್ಠುರ ಪ್ರೇಮವು ಅವಳಿಗೆ ವಿರಾಮವನ್ನೇ ಕೊಡುತ್ತಿದ್ದಿಲ್ಲ. ಎದೆಹಾಲು ಸ್ವಲ್ಪವೂ ಇದ್ದಿಲ್ಲವಾದರೂ ಮಗನು ಹಟ ಹಿಡಿದು ಅವಳ ರಕ್ತವನ್ನೇ ಹೀರುವುದರಲ್ಲಿದ್ದ. ಹಾಗಾಗಿ ಅವಳ ದೇಹ ಮನಸ್ಸುಗಳೆರಡೂ ನಿರ್ಬಲವಾಗಿ ಹೋದುವು. ಆಯಾಸದಿಂದ ಸುಮ್ಮನೆ ಬಿದ್ದುಕೊಂಡಿದ್ದರೆ ಮಗ – ಲಲ್ಲೂ – ಬಂದು ಎದೆಯ ಮೇಲೆ ಬಿದ್ದು ಮೊಲೆ ಬಾಯಲ್ಲಿ ಹಾಕಿಕೊಳ್ಳುತ್ತಿದ್ದ. ಈಗವನಿಗೆ ಎರಡು ವರ್ಷ ಪ್ರಾಯವಾಗಿತ್ತು. ಅವನ ಹಲ್ಲೂ ಹರಿತವಾಗಿತ್ತು. ಹಾಲು ಬಾರದಿದ್ದರೆ ಕೋಪದಿಂದ ಕಚ್ಚಿಯೇ ಬಿಡುತ್ತಿದ್ದ. ಆಗ ಅವನನ್ನು ಎದೆಯಿಂದ ದೂಡಿಹಾಕುವಷ್ಟು ಸಹ ಶಕ್ತಿ ಜುನಿಯಳಿಗಿದ್ದಿಲ್ಲ. ಪ್ರತಿ ಕ್ಷಣವೂ, ಮೃತ್ಯುದೇವತೆ ತನ್ನ ಮುಂದೆ ಬಂದು ನಿಂತಿರುವಳೋ ಎಂದು ತೋರುವಷ್ಟು ನಿತ್ರಾಣವಾಗಿತ್ತು ಅವಳಿಗೆ. ಪತಿಪುತ್ರರಿಬ್ಬರ ಮೇಲೂ ಈಗವಳಿಗೆ ಯಾವ ತರದ ಸ್ನೇಹವೂ ಉಳಿಯಲಿಲ್ಲ. ಎಲ್ಲರೂ ಅವರವರ ಕೆಲಸವನ್ನೇ ಸಾಧಿಸಿಕೊಳ್ಳುವವರು ತಾನೆ!

ಮಳೆಗಾಲದ ಆರಂಭದೊಡನೆ ಲಲ್ಲುವಿಗೆ ಜ್ವರ ತಲೆದೋರಿತು. ಜ್ವರದ ಭರದಲ್ಲಿ ಅವನು ಮೊಲೆಹಾಲು ಬಿಟ್ಟಾಗ ಅವಳಿಗೆ ದೊಡ್ಡ ವಿಪತ್ತೊಂದು ದೂರವಾದ ಅನುಭವವಾಯಿತು. ಆದರೆ ಒಂದೇ ವಾರದ ಜ್ವರದಲ್ಲಿ ಮಗು ದೈವಾಧೀನವಾಗಿ ಹೋಯಿತು! ಆಗ ಅವಳ ಪುತ್ರಸ್ನೇಹವು ಸಜೀವವಾಗಿ ಅವಳಿಗಾದ ದುಃಖಕ್ಕೆ ಪಾರವೇ ಇಲ್ಲದಂತಾಯಿತು. ಮಗು ಸತ್ತು ಕೆಲವೇ ದಿನಗಳಲ್ಲಿ ಪುನಃ ಗೋಬರ ಅವಳೊಡನೆ ವಿಹಾರ ವಿಲಾಸಗಳನ್ನು ಬಯಸಿದ. ಆಗ, ನಿಜವಾಗಿಯೂ ಅವನು ಶುದ್ಧ ಪಶುವೆಂಬ ಜುಗುಪ್ಸೆ ಅವಳಿಗೆ ಬಂದು ಹೋಯಿತು.

ಜುನಿಯಳಿಗೆ ಈಗ ಲಲ್ಲುವಿಗಿಂತಲೂ ಲಲ್ಲುವಿನ ಸ್ಮೃತಿಯು ವಿಶೇಷ

ಮಧುರವಾಗಿ ತೋರಿ ಬಂತು. ಲಲ್ಲು ಅವಳ ಕಣ್ಣೆದುರಲ್ಲಿರುವಾಗ ಸುಖಕ್ಕಿಂತ ಹೆಚ್ಚಾಗಿ ಅವಳು ದುಃಖವನ್ನೇ ಅನುಭವಿಸುತ್ತಿದ್ದಳು. ಆದರೆ ಈಗಲಾದರೋ ಆ ಲಲ್ಲು ಶಾಂತನಾಗಿಯೂ, ಸುಶೀಲನಾಗಿಯೂ, ಸುಹಾಸದಿಂದ ಕೂಡಿದವನಾಗಿಯೂ ತೋರಿಬರುತ್ತಿದ್ದ. ಈಗವಳಿಗೆ ಆ ಕತ್ತಲುಕೋಣೆ, ದುರ್ಗಂಧಮಯ ಗಾಳಿ, ಅಡಿಗೆಯ ಹೊಗೆ – ಇವನ್ನೆಲ್ಲ ಸಹಿಸಿಕೊಂಡಿರುವ ಜೀವನವೇ ಸಾಕು ಸಾಕಾಗಿ ಹೋಯಿತು. ಈಗ ಗೋಬರ ತಡ ಮಾಡಿ ಬರಲಿ, ಬೇಗನೆ ಬರಲಿ; ಅವನು ಸಂತೋಷದಿಂದಿರಲಿ, ಬೇಸರದಿಂದಿರಲಿ; ಅವಳಿಗೆ ಆ ಯಾವ ಯೋಚನೆಯೂ ಇದ್ದಿಲ್ಲ. ತನ್ನ ಗಂಡನೆಷ್ಟು ಸಂಪಾದಿಸುತ್ತಾನೆ, ಅದನ್ನು ಹೇಗೆ ವೆಚ್ಚ ಮಾಡುತ್ತಾನೆ, – ಇವುಗಳ ಪರವೆಯೇ ಅವಳಿಗಿದ್ದಿಲ್ಲ. ಅವಳ ಜೀವನ ಅಂತರ್ಮುಖವಾಗಿತ್ತು. ಹೊರಗಿಂದ ಅವಳು ಕೇವಲ ನಿರ್ಜೀವ ಯಂತ್ರದಂತಾಗಿ ಹೋಗಿದ್ದಳು.

ಗೋಬರನು ಅವಳ ಶೋಕದಲ್ಲಿ ಸಹಾನುಭೂತಿ ತೋರಿಸಿ, ಅವಳ ಅಂತರ್ಜೀವನದರ್ಥ ಮಾಡಿಕೊಂಡು, ಅವಳ ಆಪ್ತನಾಗಬಹುದಿತ್ತು, ಅವಳ ಜೀವನದಂಗವಾಗಬಹುದಿತ್ತು. ಆದರೆ ಅವನು ಅವಳ ಬಾಹ್ಯ ಜೀವನದ ಒಣಗಿದ ದಡದ ಮೇಲೆಯೇ ನಿಂತು ಬೇಸರದಿಂದ ಹಿಂತಿರುಗುತ್ತಿದ್ದ.

ಒಂದು ದಿನ ಅವನು ಪರುಷವಾದ ಸ್ವರದಿಂದ ಕೇಳಿದ – 'ಎಷ್ಟರ ತನಕ ನೀನು ಆ ಲಲ್ಲುವಿನ ಹೆಸರು ಹೇಳುತ್ತಾ ಅಳುತ್ತಿರುವೆ? ನಾಲ್ಕೈದು ತಿಂಗಳು ದಾಟಿಹೋದರೂ ನಿನಗೆ ಸಮಾಧಾನವಾಗಲಿಲ್ಲವೇ?'

'ನಿಮಗೆ ನನ್ನ ದುಃಖ ಹೇಗೆ ತಾನೇ ಅರ್ಥವಾದೀತು? ನೀವು ನಿಮ್ಮ ಕೆಲಸ ಮಾಡಿ. ದಯವಿಟ್ಟು ನನ್ನನ್ನು ನನ್ನಷ್ಟಕ್ಕೇ ಬಿಟ್ಟುಬಿಡಿ' – ಜುನಿಯಳು ಬೇಸರದಿಂದ ಎಂದಳು.

'ನೀನು ಸುಮ್ಮನೆ ಅಳುತ್ತಾ ಇದ್ದ ಮಾತ್ರದಿಂದ ಲಲ್ಲೂ ಪುನಃ ಜೀವವಾಗಿ ಬರುವನೇ?'

ಜುನಿಯಳ ಹತ್ತಿರ ಈ ಮಾತಿಗೆ ಉತ್ತರವೇ ಇದ್ದಿಲ್ಲ. ಎದ್ದು ಮನೆ ಕೆಲಸಕ್ಕೆ ಹೋದಳು. ಗೋಬರ ಇಷ್ಟು ಕಲ್ಲುಹೃದಯದವನೆಂದು ಅವಳು ತಿಳಿದಿದ್ದಿಲ್ಲ. ಮಾತ್ರವಲ್ಲದೆ ಅವನ ಇಂತಹ ವ್ಯವಹಾರಗಳಿಂದಾಗಿ ಲಲ್ಲುವಿನ ಸ್ಮೃತಿಯು ಅವಳ ಮನಸ್ಸಿನಲ್ಲಿ ಇನ್ನಷ್ಟು ದೃಢವಾಗತೊಡಗಿತು. ಈ ವರೆಗೆ ಅವಳು, ಗೋಬರನಿಗೂ ಆ ಲಲ್ಲುವಿನ ಮೇಲೆ ಕೆಲವಂಶ ಅಧಿಕಾರವಿತ್ತೆಂದು

ತಿಳಿದಿದ್ದಳು. ಈಗ ಅವಳಿಗೆ ಸಂಪೂರ್ಣ ತಿಳಿದುಹೋಯಿತು — ಲಲ್ಲೂ ಸಂಪೂರ್ಣ ಅವಳವನೇ ಆಗಿದ್ದನು. ಅವನ ಮೇಲೆ ಇನ್ನಾರಿಗೂ ಯಾವ ಅಧಿಕಾರವೂ ಇಲ್ಲ,ಎಂಬುದಾಗಿ. ಆದರೆ ಇನ್ನೇನು ಮಾಡುವುದು?

ಗೋಬರನ ಗೂಡಂಗಡಿ ಸಂಪೂರ್ಣ ದಿವಾಳಿಯಾಗಿ ಹೋಯಿತು. ಆದ ರಿಂದಾಗಿ ಈಗವನು ಸಕ್ಕರೆಯ ಮಿಲ್ಲೊಂದರಲ್ಲಿ ಕೆಲಸಕ್ಕೆ ಸೇರಬೇಕಾಯಿತು. ಮಿಸ್ಟರ್ ಖನ್ನಾರವರು ಮೊದಲೊಂದು ಕಾರ್ಖಾನೆ ತೆರೆದು ಆದರಿಂದ ಒಳ್ಳೇ ಲಾಭ ಸಿಕ್ಕಿದ ಕಾರಣ ಇತ್ತೀಚೆ ಮತ್ತೊಂದು ಕಾರ್ಖಾನೆಯನ್ನಾರಂಭಿಸಿದ್ದರು. ಗೋಬರ ಅಲ್ಲಿಗೆ ಬೆಳಗ್ಗೆ ಬೇಗನೆ ಕೆಲಸಕ್ಕೆ ಹೋಗಬೇಕಾಗುತ್ತಿತ್ತು. ಕತ್ತ ಲಾಗುವಾಗ ಇಡೀ ದಿನದ ಕೆಲಸ ಮುಗಿಸಿ ನಡೆದು ಬರುವಾಗ ಅವನಿಗೆ ಸಾಕು ಸಾಕಾಗಿ ಪ್ರಾಣವೇ ಮೇಲೆ ಬಂದಂತಾಗುತಿತ್ತು. ತನ್ನ ಹಳ್ಳಿಯ ಮನೆಯಲ್ಲಿ ದ್ದಾಗಲೂ ಆತ ಚನ್ನಾಗಿ ಕೆಲಸ ಮಾಡುತ್ತಿದ್ದ. ಅಲ್ಲಿ ಅವನಿಗೆ ಆಯಾಸ ವಾಗುತ್ತಿದ್ದಿಲ್ಲ. ಮಧ್ಯೆ ಮಧ್ಯೆ ನಗಾಡಿ ಮಾತಾಡಲಿಕ್ಕೂ ಅಲ್ಲಿ ಅವಕಾಶ ವಿತ್ತು. ಅಥವಾ ಆಯಾಸವಾದರೂ ಸ್ವಲ್ಪ ಒರಗಿಕೊಂಡರೆ ಸ್ವಚ್ಛ ಗಾಳಿ ಬೆಳಕುಗಳ ಪ್ರಭಾವದಿಂದ ಆಯಾಸ ಪರಿಹಾರವಾಗುತ್ತಿತ್ತು. ಅಲ್ಲಿ ದೇಹ ವೆಷ್ಟು ದುಡಿದರೂ ಮನಸ್ಸು ಪ್ರಶಾಂತವಾಗಿರುತ್ತಿತ್ತು. ಇಲ್ಲಿ ಕಾರ್ಖಾನೆಯ ಕೋಟೆಯೊಳಗಿನ ಆ ಕೋಲಾಹಲ, ಆ ಸಿಡಿಲಿನಂತಹ ಶಬ್ದ, ಮಿಲ್ ಮಾಲಿ ಕರ ಅಪಮಾನಕರ ಮಾತು — ಎಲ್ಲ ಸೇರಿ ದೇಹ ಮನಸ್ಸು ಬುದ್ಧಿಗಳೆಲ್ಲವೂ ಸೋತು ಸುಣ್ಣವಾಗುತ್ತಿದ್ದುವು. ಯಾವಾಗ ಕೆಲಸಕ್ಕೇ ಖಾರ ಬರಬಹು ದೆಂಬುದು ಸಹ ಹೇಳಬರುವಂತಿದ್ದಿಲ್ಲ. ಎಲ್ಲ ಕೂಲಿಗಾರರ ಕತೆಯೂ ಹೀಗೆಯೇ ಆಗಿತ್ತು. ಸಾಯಂಕಾಲವಾದಾಗ ಎಲ್ಲರೂ ಶರಾಬು, ಹೆಂಡ ಕುಡಿದು ದೇಹ ಮನಸ್ಸುಗಳ ಪರಿಶ್ರಮ ಬೇಸರಗಳನ್ನು ಮುಳುಗಿಸಿಬಿಡಲಿಕ್ಕೆ ಪ್ರಯತ್ನಿಸುತ್ತಿ ದ್ದರು. ಗೋಬರನೂ ಶರಾಬಿನ ಅಭ್ಯಾಸಕ್ಕೆ ಒಳಗಾಗಿ ಓಲಾಡಿಕೊಂಡು ನಡು ರಾತ್ರಿಯ ಸಮಯ ಮನೆಗೆ ಬಂದು ಸೇರುತ್ತಿದ್ದ. ಬಂದ ಮೇಲೂ ಒಂದಲ್ಲ ಒಂದು ನೆಪ ಹಿಡಿದು ಜುನಿಯಳನ್ನು ಗದರಿಸುತ್ತಿದ್ದ. ಕೆಲವೇಳೆ ಹೊಡೆದು ಅವಳನ್ನು ಮನೆಯಿಂದ ಹೊರ ಹಾಕಲೂ ಹಿಂಜರಿಯುತ್ತಿರಲಿಲ್ಲ.

ಜುನಿಯಳೀಗ ಯೋಚಿಸತೊಡಗಿದಳು — ಎಷ್ಟಾದರೂ ತಾನು ಇಡಿಸಿ ಕೊಳ್ಳಲ್ಪಟ್ಟವಳೆಂದು ಈ ರೀತಿ ಈತನು ಅಪಮಾನಗೊಳಿಸುತ್ತಿದ್ದಾನೆ. ಮದುವೆ ಯಾದವಳಾದರೆ ಈ ತರದ ಕಷ್ಟ ಕೊಡುವ ಮನಸ್ಸು ಈತನಿಗಾಗುತ್ತಿದ್ದಿಲ್ಲ.

ಅಯ್ಯೋ ತನ್ನ ಗತಿಯೇ! ಜಾತಿಯಿಂದ ಹೊರ ಬರಬೇಕಾಯಿತು. ಊರವರಿಗೆಲ್ಲ ದಂಡ ತೆರಬೇಕಾಯಿತು. ಅಂತು ಈ ಕಪಟಿಯೊಡನೆ ಸೇರಿದ್ದು ಅತಿ ದೊಡ್ಡ ತಪ್ಪುಕೆಲಸವಲ್ಲವೇ? ಊರವರೆಲ್ಲ ನಗಾಡುವಂತಾಯಿತು. ಆದರೂ ಕೈಗೇನಾದರೂ ಬಂತೆ? ಅದೂ ಇಲ್ಲ. ಈಗವಳಿಗೆ ಗೋಬರನು ದೊಡ್ಡ ಶತ್ರುವಾಗಿ ತೋರಿಬರುತ್ತಿದ್ದ. ಅವನು ಅವಳನ್ನು ಹೊಡೆಯುವಾಗ ಅವನ ಹೊಟ್ಟೆಗೆ ಚೂರಿ ಹಾಕಿಬಿಡಬೇಕೆಂದೂ ಒಮ್ಮೊಮ್ಮೆ ಅವಳಿಗೆ ತೋರಿ ಬರುತ್ತಿತ್ತು.

ಗರ್ಭ ತುಂಬಿದಂತೆಲ್ಲ ಅವಳ ಚಿಂತೆ ಇನ್ನಷ್ಟು ಹೆಚ್ಚುತ್ತಾ ಬಂತು – ಈ ಮನೆಯಲ್ಲೇ ತನ್ನ ಮರಣವೂ ಆಗಿ ಹೋಗಬಹುದೋ – ಏನೋ! ಯಾರು ತಾನೇ ತನ್ನ ಯೋಗ ಕ್ಷೇಮ ವಿಚಾರಿಸಿಯಾರು? – ಎಂದು ಅವಳಿಗೆ ಕಳವಳ ವಾಗತೊಡಗಿತು.

ಒಂದು ದಿನ ಅವಳು ನೀರು ತರಲಿಕ್ಕೆ ನಳ್ಳಿಯ ಹತ್ತಿರ ಹೋದಾಗ ನೆರೆ ಮನೆಯ ಹೆಂಗುಸೊಬ್ಬಳು – 'ಎಷ್ಟು ತಿಂಗಳಮ್ಮ?' ಎಂದು ಕೇಳಿದಳು.

ಲಜ್ಜೆಗೊಂಡು ಜುನಿಯಾ – 'ನನಗೇನು ಗೊತ್ತಮ್ಮ? ನಾನು ಸರಿಯಾದ ಲೆಕ್ಕವೇ ಇಡಲಿಲ್ಲ' ಎಂದಳು.

ಅವಳು ಸ್ವಲ್ಪ ಪ್ರಾಯ ಮೀರಿದ ಹೆಂಗುಸು. ಮೈ ಬಣ್ಣ ಕಪ್ಪು; ಸ್ಥೂಲ ದೇಹ. ಅವಳ ಗಂಡ ಜಡ್ಕಾ ನಡೆಸುತ್ತಿದ್ದ. ಅವಳು ಸ್ವತಃ ಒಂದು ಸೌದೆ ಅಂಗಡಿ ಇಟ್ಟಿದ್ದಳು. ಎಷ್ಟೋ ಸಲ ಅವಳಂಗಡಿಯಿಂದ ಜುನಿಯಳು ಸೌದೆ ತಂದಿದ್ದಳು. ಹಾಗಾಗಿ ಪರಿಚಯ ತಕ್ಕ ಮಟ್ಟಿಗಾಗಿತ್ತು. ಅವಳ ಹೆಸರು ಚುಹಿಯಾ.

ಮುಗುಳ್ನಗುತ್ತ ಚುಹಿಯಾ ಹೇಳಿದಳು – 'ನನಗೇನೋ ದಿನ ಪೂರ್ಣ ವಾಗುತ್ತ ಬಂದಿದೆಯೆಂಬುದಾಗಿ ತೋರುತ್ತದೆ. ಇಂದು ನಾಳೆ ಆಗಲೂ ಬಹುದು. ಯಾರಾದರೂ ದಾದಿಯನ್ನು ಗೊತ್ತುಮಾಡಿಕೊಂಡಿರುವೆಯಾ?'

ಭಯಗೊಂಡ ಸ್ವರದಿಂದ ಜುನಿಯಳು – 'ನನಗಿಲ್ಲಿ ಯಾರದೂ ಪರಿಚಯ ವಿಲ್ಲವಲ್ಲ' ಎಂದಳು.

'ನಿನ್ನ ಗಂಡ ಎಂತಹ ಮನುಷ್ಯನಪ್ಪ! ಸುಮ್ಮನೆ ಕಿವಿಯಲ್ಲಿ ಎಣ್ಣೆ ಹಾಕಿ ಕೂತುಕೊಂಡವನಂತೆ ಇದ್ದಾನಲ್ಲ?'

'ಅವರಿಗೇನು ನನ್ನ ಯೋಚನೆ?'

'ಹೌದು, ನೋಡುತ್ತಲೇ ಇದ್ದೇನೆ. ನಾಳೆ ನೀನು ಹೆತ್ತು ಮಲಗಿಬಿಟ್ಟರೆ ನೋಡಿಕೊಳ್ಳುವವರು ಯಾರಾದರೂ ಬೇಡವೇ? ಅತ್ತೆ, ಅತ್ತಿಗೆ, ಅಕ್ಕ, ತಂಗಿ – ಯಾರೂ ಇಲ್ಲವೆ ನಿನಗೆ? ಯಾರನ್ನಾದರೂ ಕರೆಸಬಹುದಿತ್ತಲ್ಲ?'

'ನನ್ನ ಮಟ್ಟಿಗೆ ಅವರೆಲ್ಲ ಸತ್ತ ಹಾಗೆಯೇ.'

ಜುನಿಯಾ ನೀರು ಹಿಡಿದುಕೊಂಡು ಬಂದು ಪಾತ್ರ ತೊಳೆಯತೊಡಗಿದಳು. ಆಗ ಮುಂದಾಗಲಿರುವ ಪ್ರಸವದ ಯೋಚನೆಯಿಂದ ಅವಳ ಎದೆ ನಡುಗತೊಡಗಿತು – 'ಅಯ್ಯೋ ದೇವರೇ! ಏನೆಲ್ಲ ಆಗಲಿರುವುದೋ ಏನೋ? ಅಥವಾ ಆಗುವುದೇನು? ನನ್ನ ಅವತಾರ ಸಮಾಪ್ತಿಯೇ ಆದೀತು. ಆಗಲಿ. ಹಾಗಾದರೂ ಒಮ್ಮೆ ಈ ಬಂಧನದಿಂದ ಬಿಡುಗಡೆಯಾದೀತಲ್ಲ!'

ಸಾಯಂಕಾಲವಾಗುತ್ತ ಬರುವಾಗ ಅವಳಿಗೆ ಹೊಟ್ಟೆನೋವು ಮೊದಲಿಸಿತು. ಆಪತ್ಕಾಲ ಬಂದೇ ಬಿಟ್ಟಿತೆಂಬುದಾಗಿ ತಿಳಿದುಕೊಂಡಳು ಅವಳು. ಹೊಟ್ಟೆಯನ್ನು ಒಂದು ಕೈಯಿಂದ ಹಿಡಿದುಕೊಂಡು, ಬೆವರಿಂದ ಮಿಂದವಳಂತಾಗಿ, ಹೇಗೋ ಹೇಗೋ ಒಲೆ ಹಚ್ಚಿದಳು. ಅನ್ನಕ್ಕೆ ಅಕ್ಕಿ ಹಾಕಿದಳು. ಅಷ್ಟರಲ್ಲೇ ನೋವು ತಡೆಯಲಾಗದೆ ನೆಲದ ಮೇಲೆ ಒರಗಿಬಿಟ್ಟಳು.

ಸಾಧಾರಣ ೧೦ ಗಂಟೆ ರಾತ್ರಿಯಾಗುವಾಗ ಗೋಬರ ಹಿಂತಿರುಗಿದ. ಅವನ ಬಾಯಿಂದ ಕಳ್ಳಿನ ವಾಸನೆ ಬರುತ್ತಿತ್ತು. ಅಡ್ಡಡ್ಡ ಬೀಳುವ ನಾಲಗೆಯಿಂದ ಏನೇನೋ ಬೊಗಳುತ್ತಿದ್ದ – 'ನನಗೆ ಯಾರ ಲಕ್ಷ್ಯವೂ ಇಲ್ಲ. ನೂರು ಸಲ ಗರ್ಜಿಸಿದರೂ ನಾನು ಹೋಗಲಿಕ್ಕೇ ಇಲ್ಲ. ಹೆತ್ತ ತಂದೆ ತಾಯಿಗಳನ್ನೇ ಗಣ್ಯ ಮಾಡದ ನಾನು ಇವರಿಗೆಲ್ಲ ಹೆದರುವೆನೆ? ಅದರ ಮೇಲೆ ಆ ಪೋಲಿಸಿನವನೊಬ್ಬ ಕಣ್ಣು ಕೆರಳಿಸುತ್ತಾನೆ. ಅದಕ್ಕೆಲ್ಲ ನಾನು ಹೆದರುವೆನೆ? ಜನರೆಲ್ಲ ಹಿಡಿದು ನಿಲ್ಲಿಸಿಡದಿದ್ದರೆ ಅವನ ರಕ್ತ ಕುಡಿಯುತ್ತಿದ್ದೆ. ನಾಳೆ ನೋಡಬೇಕು – ಅವನನ್ನು. ಗಲ್ಲಾದರೂ ಚಿಂತೆ ಇಲ್ಲ. ಇಲ್ಲಿ – ಈ ಹೆಂಗುಸುಜಾತಿ ಎಷ್ಟು ಮೋಸ! ಏನೋ ಸ್ವಲ್ಪ ಬೇಯಿಸಿಟ್ಟು ತಾನು ಸ್ವಸ್ಥ ಬಿದ್ದುಕೊಂಡಿದ್ದಾಳೆ! ಇಲ್ಲಿ ನಾನು ಉಂಡರೇನು? – ಉಪವಾಸವಿದ್ದರೇನು? ಅವಳಿಗದರ ಯೋಚನೆಯೇ ಇಲ್ಲ! ನೋಡುವಾ ದೇವರಿದ್ದಾನೆ – ತಪ್ಪಿದವರನ್ನು ಗಲ್ಲಿಗೇರಿಸಲಿಕ್ಕೆ!'

ಗೋಬರ ಒಳಗೆ ಬಂದವನು ಜುನಿಯಳನ್ನು ಎಬ್ಬಿಸಹೋಗಲಿಲ್ಲ. ಅವಳೊಡನೆ ಮಾತಾಡಲೂ ಇಲ್ಲ. ಒಲೆ ಬದಿಯಲ್ಲಿಟ್ಟಿದ್ದನ್ನು – ಏನೋ ಸ್ವಲ್ಪ ಮುಕ್ಕಿ

ಕೊಂಡು ಹೊರಹೋಗಿ ಜಗುಲಿಯ ಮೇಲೆ ಬಿದ್ದುಕೊಂಡ. ಕೊನೆಗೆ ಬೆಳಗಿನ ಜಾವದಲ್ಲಿ ಚಳಿಯಾಗತೊಡಗಿತು. ಕಂಬಳಿ ತರಲಿಕ್ಕಾಗಿ ಒಳಗೆ ಬಂದ. ಆಗ ಜುನಿಯಾ ಮರುಕುತ್ತಿರುವುದು ಕೇಳಿಬಂತು. ಆಗ ಅಮಲೂ ಇಳಿದಿತ್ತು. ಹಾಗಾಗಿ ಮೆಲ್ಲನೆ ಕೇಳಿದ – 'ಹೇಗಿದ್ದೀ ಜುನಿಯಾ? ಏನು ನೋವು ಗೀವು ಮೊದಲಾಗಿದೆಯೇ?'

'ಹೌದು; ಹೊಟ್ಟೆ ನೋವು ಬಹಳ ಆಗುತ್ತಿದೆ.'

'ಮೊದಲೇ ಏಕೆ ಹೇಳಲಿಲ್ಲ? ಈ ಮಧ್ಯರಾತ್ರಿಗೆ ನಾನೆಲ್ಲಿ ಹೋಗಲಿ?'

'ಯಾರ ಹತ್ತಿರ ಹೇಳುವುದು?'

'ನಾನೇನು ಸತ್ತುಹೋಗಿದ್ದೆನೇ?'

'ನಾನು ಸತ್ತರೂ, ಬದುಕಿದರೂ – ನಿಮಗೇನು ಯೋಚನೆ ಇದೆ?'

ಗೋಬರ ಗಾಬರಿಯಾದ – 'ಈಗ ದಾದಿಯನ್ನು ಹುಡುಕಲು ಎಲ್ಲಿಗೆ ಹೋಗಲಿ? ಈ ಅಪರ ರಾತ್ರಿಯಲ್ಲಿ ಅವಳೆಲ್ಲಿ ಬಂದಾಳು? ಮನೆಯಲ್ಲಾವ ಸಾಮಾನೂ ಇಲ್ಲ. ಈ ಗತಿಗೇಡಿ ಮೊದಲೇ ಹೇಳಿದ್ದರೆ ಕಡ ಕೇಳಿಯಾದರೂ ಮೂರು ನಾಲ್ಕು ರೂಪಾಯಿ ತರುತ್ತಿದ್ದೆ. ನನ್ನ ಈ ಕೈಯಲ್ಲೇ ಒಂದು ಕಾಲದಲ್ಲಿ ೫೦–೧೦೦ ರೂಪಾಯಿ ಯಾವಾಗಲೂ ಇರುತ್ತಿತ್ತು. ನಾಲ್ಕು ಜನರಿಗೆ ಧೈರ್ಯ ಹೇಳುವ ಸಾಮರ್ಥ್ಯವೂ ಇತ್ತು. ಈ ಕುಲಗೇಡಿ ಬಂದೊಡನೆ ಆ ಲಕ್ಷ್ಮಿ ಹೊರಟೇ ಹೋದಳು. ಈಗ ಪುಟ್ಟಪೂರಾ ದಾರಿದ್ರ್ಯ ಬಂದು ಹೋಗಿದೆ.'

ಆಗ ಯಾರೋ ಹೊರಗಿಂದ ಕರೆದು ಹೇಳಿದಂತಾಯಿತು – 'ನಿಮ್ಮ ಮನೆಯವಳು ಆಗಿನಿಂದ ಕೂಗಾಡುತ್ತಿದ್ದಾಳೆ. ಏನು ಹೊಟ್ಟೆ ನೋವುಗೀವು ಬರುತ್ತಿದೆಯೆ?'

ಅದು ಆ ದಪ್ಪ ಹೆಂಗುಸೇ ಆಗಿದ್ದಳು. ಆ ದಿನ ಬೆಳಗ್ಗೆ ಅವಳೊಡನೆಯೇ ಜುನಿಯಳ ಮಾತುಕತೆ ನಡೆದುದು. ಬೆಳಗಿನ ಜಾಮದಲ್ಲಿ ಕುದುರೆಗೆ ಹುಲ್ಲು ಹಾಕಲು ಎದ್ದಾಗ ಜುನಿಯಳು ಅಳುವ ಶಬ್ದ ಕೇಳಿ ಅವಳು ಅಲ್ಲಿ ಬಂದಿದ್ದಳು.

ಗೋಬರ ಹೊರ ಜಗುಲಿಯಲ್ಲಿ ಬಂದು ಹೇಳಿದ – 'ಹೊಟ್ಟೆ ನೋವಾಗುತ್ತಿದೆಯಂತೆ. ಅತ್ತ ಇತ್ತ ಹೊರಳಾಡುತ್ತಿದ್ದಾಳೆ. ಇಲ್ಲಿ ಹತ್ತಿರದಲ್ಲಿ ಯಾರಾದರೂ ದಾದಿ ಸಿಗಬಹುದೆ?'

'ಇಂದು ಬೆಳಗ್ಗೆ ಅವಳನ್ನು ನೋಡಿದಾಗಲೇ ನನಗೆ ಅಂದಾಜಾಗಿತ್ತು. ಸರಾಯಿಗಂಜಿನಲ್ಲಿ ದಾದಿ ಒಬ್ಬಳಿದ್ದಾಳೆ. ಓಡಿ ಹೋಗಿ ಕರೆದುಕೊಂಡು ಬನ್ನಿ ನೀವು. ಈಗಲೇ ಹೊರಡಬೇಕೆಂದು ಹೇಳಿ. ಅಷ್ಟರ ತನಕ ನಾನಿಲ್ಲಿರುತ್ತೇನೆ.'

'ಆ ಸರಾಯಿಗಂಜ್ ಎಲ್ಲಿದೆ? ನಾನೀತನಕ ಅಲ್ಲಿಗೆ ಹೋಗಿಲ್ಲವಲ್ಲ?'

'ಹಾಗಾದರೆ ನೀವು ಇಲ್ಲಿ ಕೂತು ಅವಳಿಗೆ ಗಾಳಿ ಬೀಸುತ್ತಿರಿ. ನಾನೇ ಕರೆದು ತರುತ್ತೇನೆ. ಇದಕ್ಕೇ ಹೇಳುವುದು–ಅನುಭವವಿಲ್ಲದ ಹೆಂಗುಸು ಯಾವ ಪ್ರಯೋಜನಕ್ಕೂ ಬಾರಳು – ಎಂಬುದಾಗಿ. ಹೊಟ್ಟೆ ತುಂಬಿಬಂದಿದ್ದರೂ ದಾದಿಯ ಯೋಚನೆ ಈ ತನಕ ಮಾಡಿಲ್ಲವಲ್ಲ!' ಎನ್ನುತ್ತಾ ಅವಳು ಹೋಗಿಯೇ ಬಿಟ್ಟಳು.

ಗೋಬರನು ಜುನಿಯಳ ಸಮೀಪ ಕೂತುಕೊಂಡು ಹೆಚ್ಚುಕಡಿಮೆ ೧೦ ನಿಮಿಷವಾಗಿರಬಹುದು. ಅಷ್ಟರಲ್ಲೇ ಚುಹಿಯಾ ಹಿಂದಿರುಗಿ ಬಂದು ಬೈಯ ತೊಡಗಿದಳು – 'ಹೀಗಾದರೆ ಇನ್ನು ಬಡವರೆಲ್ಲ ಬದುಕುವುದುಂಟೇ? ಆ ಬಜಾರಿ ಐದು ರೂಪಾಯಿ ಸಿಗದೆ ಹೊರಡಲಿಕ್ಕೇ ಇಲ್ಲ – ಎಂಬುದಾಗಿ ಹೇಳುತ್ತಿದ್ದಾಳೆ. ಮತ್ತೆ ಪುನಃ ದಿನಕ್ಕೊಂದು ರೂಪಾಯಿಯಂತೆ ಕೊಡಬೇಕಂತೆ. ಹನ್ನೆರಡನೇ ದಿನ ಒಂದು ಸೀರೆ ಬೇರೆ ಕೊಡಬೇಕಂತೆ! ಆಗ ನಾನೆಂದೆ – ನಿನ್ನ ಮುಖಕ್ಕೆ ಬೆಂಕಿ ಬೀಳಲಿ. ನಾನೇ ನೋಡುತ್ತೇನೆ. ನಾನು ೧೨ ಮಕ್ಕಳ ತಾಯಿ ಸುಮ್ಮನಾಗಿಲ್ಲ – ಎಂದು ಹೇಳಿ ಬಂದೇಬಿಟ್ಟೆ. ಗೋಬರಣ್ಣಾ, ನೀವು ಹೊರಬನ್ನಿ. ನಾನೆಲ್ಲ ನೋಡುತ್ತೇನೆ. ಸಂದರ್ಭ ಬಂದಾಗ ಮನುಷ್ಯನಿಗೆ ಮನುಷ್ಯ ಸಹಾಯವಾಗದೆ – ಮತ್ತಾರು ಮರ ಸಹಾಯವಾಗುವುದೇ? ನಾಲ್ಕು ಮಕ್ಕಳನ್ನು ಹೆರುವಾಗ ಯಾರೂ ಸ್ವತಃ ದಾದಿಯಾಗುವುದಿಲ್ಲವೇ?' ಹೀಗೆ ಹೇಳುತ್ತಾ ಅವಳು ಜುನಿಯಳ ಹತ್ತಿರ ಹೋದಳು. ಅವಳ ತಲೆಯನ್ನು ತನ್ನ ತೊಡೆಯ ಮೇಲೆ ಮಲಗಿಸಿ ಹೊಟ್ಟೆ ಸವರುತ್ತಾ ಸಮಾಧಾನ ಹೇಳ ತೊಡಗಿದಳು – 'ಇಂದು ಬೆಳಗ್ಗೆ ನಿನ್ನನ್ನು ನೋಡಿದೊಡನೆಯೇ ನನಗೆ ಗೊತ್ತಾಗಿತ್ತು. ನಿಜ ಹೇಳುವುದಾದರೆ ಈ ಯೋಚನೆಯಿಂದಾಗಿ ನನಗೆ ನಿದ್ದೆಯೇ ಬಂದಿದ್ದಿಲ್ಲ. ಪಾಪ! ನಿನಗೆ ಬೇರೆ ಯಾರು ಗತಿಯಪ್ಪಾ!'

ಜುನಿಯಳು ಹಲ್ಲು ಕಚ್ಚಿಕೊಂಡು ನೋವನ್ನು ತಡೆದುಕೊಳ್ಳುತ್ತಾ – 'ಅಯ್ಯೋ! ನಾನಿನ್ನು ಬದುಕಲಾರೆನಪ್ಪಾ! ನಾನೇನು ದೇವರ ಹತ್ತಿರ

ಬೇಡಿದ್ದಿಲ್ಲ – ಒಬ್ಬನನ್ನು ದೇವರು ಕೊಟ್ಟರು, ಎಳೆದುಕೊಂಡು ಹೋದರು. ನಾನೀಗ ಸತ್ತುಹೋದರೆ ಈ ಮಗುವಿನ ಮೇಲೆ ಸ್ವಲ್ಪ ದಯೆ ತೋರಿಸಿಬಿಡಿ. ಇದರ ಯೋಗಕ್ಷೇಮ ನೋಡಿಕೊಂಡಿರಿ. ದೇವರು ನಿಮಗೆ ಒಳ್ಳೇದು ಮಾಡಿಯಾರು' ಎಂದಳು.

ಚುಹಿಯುಳು ಸ್ನೇಹದಿಂದ ಅವಳ ಕೂದಲು ಸರಿಪಡಿಸುತ್ತಾ ಹೇಳಿದಳು– ಧೈರ್ಯಮಾಡಿಕೋ ಮಗಳೇ, ಧೈರ್ಯಮಾಡಿಕೋ. ಇನ್ನು ಒಂದೇ ಕ್ಷಣದಲ್ಲಿ ನಿನ್ನ ಕಷ್ಟ ಪರಿಹಾರವಾದೀತು. ಇದನ್ನೆಲ್ಲ ನೀನು ಮುಚ್ಚಿಕೊಂಡಿದ್ದೆ. ಅದರಲ್ಲೇನು ಲಜ್ಜೆ? ನೀನು ನನ್ನ ಹತ್ತಿರ ಹೇಳಿದ್ದರೆ – ನಾನು ಮೌಲವೀ ಸಾಹೇಬರಿಂದ ಒಂದು ತಾಯಿತ ಮಾಡಿಸಿ ತರುತ್ತಿದ್ದೆ. ಅವರು ಈ ಗಲ್ಲಿಯಲ್ಲೇ ಇದ್ದಾರೆ.'

ಆ ಬಳಿಕ ಜುನಿಯುಳಿಗೆ ಸ್ಮೃತಿಯೇ ಉಳಿಯಲಿಲ್ಲ. ೯ ಗಂಟೆಗೆ ಸ್ಮೃತಿ ಬಂದಾಗ ಹತ್ತಿರವೇ ಚುಹಿಯುಳು ಮಗುವನ್ನೆತ್ತಿಕೊಂಡು ಕುಳಿತಿದ್ದಳು. ಜುನಿಯುಳ ಮೈಮೇಲೆ ಚೊಕ್ಕಟವಾದ ಬಟ್ಟೆ ಹೊದಿಸಿತ್ತು. ಆದರೆ ದೇಹದಲ್ಲಿ ತುಂಬಾ ನಿತ್ರಾಣ. ಮೈಯಲ್ಲಿ ರಕ್ತವೇ ಇಲ್ಲದಂತೆ ಅವಳಿಗೆ ತೋರಿಬರುತ್ತಿತ್ತು.

ಪ್ರತಿದಿನವೂ ಬೆಳಗ್ಗೆ ಚುಹಿಯಾ ಬಂದು ಜುನಿಯುಳ ಕೆಲಸವನ್ನೆಲ್ಲ ಮಾಡಿ, ಮಗುವಿನ ಯೋಗಕ್ಷೇಮ ನೋಡಿಕೊಂಡು ಹೋಗುತ್ತಿದ್ದಳು. ಮತ್ತೆ ಸಹ ಆಗಾಗ್ಗೆ ಬಂದು ವಿಚಾರಿಸಿ ಹೋಗುತ್ತಿದ್ದಳು.

ಇಂದು ನಾಲ್ಕನೇ ದಿನ. ಆದರೆ ಜುನಿಯುಳ ಮೊಲೆಯಲ್ಲಿ ಹಾಲಾಗಿದ್ದಿಲ್ಲ. ಮಗು ಅತ್ತು ಅತ್ತು ಸ್ವರ ಕಳೆದುಕೊಂಡಿತ್ತು. ಬೇರೆ ಏನಾದರೂ ಕೊಟ್ಟರೂ ಮಗುವಿಗದು ಸರಿಯಾಗುತ್ತಿದ್ದಿಲ್ಲ. ಮಗು ಒಂದು ಕ್ಷಣದ ಮಟ್ಟಿಗೂ ಬಾಯಿ ಮುಚ್ಚಿರುತ್ತಿರಲಿಲ್ಲ. ಚುಹಿಯುಳು ಕೊನೆಗೆ ತನ್ನ ಮೊಲೆಯನ್ನೇ ಅದರ ಬಾಯಲ್ಲಿಟ್ಟಳು. ಅದರಿಂದ ಒಂದು ಕ್ಷಣ ಸುಮ್ಮನಾಯಿತು. ಆದರೆ ಮರುಕ್ಷಣ ಹಾಲು ಸಿಗದ್ದರಿಂದ ಪುನಃ ಬೊಬ್ಬಿಡತೊಡಗಿತು. ನಾಲ್ಕನೆಯ ದಿನ ಸಾಯಂಕಾಲದ ತನಕವೂ ಜುನಿಯುಳ ಎದೆಯಲ್ಲಿ ಹಾಲಾಗದ್ದರಿಂದ ಚುಹಿಯುಳಿಗೆ ಗಾಬರಿಯಾಯಿತು. ಮಗು ಒಣಗುತ್ತಾ ಬರುತ್ತಲಿತ್ತು. ಅದೇ ಕೇರಿಯಲ್ಲಿ ಪೆನ್ಶನ್ ಆದ ಡಾಕ್ಟರೊಬ್ಬರಿದ್ದರು. ಚುಹಿಯಾ ಹೋಗಿ ಅವರನ್ನು ಕರೆದು ತಂದಳು. ಡಾಕ್ಟರ್ ಬಂದು ನೋಡಿ ಪರೀಕ್ಷಿಸಿ – ' ಇವಳ

ದೇಹದಲ್ಲಿ ರಕ್ತವೇ ಇಲ್ಲ. ಹಾಗಿರುವಾಗ ಹಾಲೆಲ್ಲಿಂದ ಬಂದೀತು ?' ಎಂದರು. ಈಗ ಸಮಸ್ಯೆ ಬಹಳ ಜಟಿಲವಾಯಿತು. ದೇಹದಲ್ಲಿ ರಕ್ತ ತುಂಬಬೇಕಾದರೆ ತಿಂಗಳುಗಟ್ಲೆ ಪೌಷ್ಟಿಕಾಹಾರ ಸೇವಿಸಬೇಕಾದೀತು. ಹಾಗಾದರೇನೇ ಹಾಲಾದೀತು. ಅಷ್ಟರಲ್ಲಿ ಈ ಪಿಂಡದ ಕತೆಯೇ ಮುಗಿದುಹೋಗಬಹುದು.

ಅರ್ಧ ರಾತ್ರಿ ದಾಟಿಹೋಗಿತ್ತು. ಗೋಬರ ಹೆಂಡ ಕುಡಿದು ಜಗುಲಿಯ ಮೇಲೆ ಬಿದ್ದುಕೊಂಡಿದ್ದ. ಚುಹಿಯಳು ಮಗುವನ್ನು ಸಮಾಧಾನಪಡಿಸುತ್ತಾ ತನ್ನ ಎದೆಯ ಮೇಲೆ ಹಾಕಿಕೊಂಡಿದ್ದಳು. ಒಡನೆಯೇ ಎದೆ ಹಾಲು ಹರಿದು ಬಂದಂತೆ ಅವಳಿಗೆ ತೋರಿತು. ಆಗ ಅವಳು ಪ್ರಸನ್ನಳಾಗಿ – 'ಜುನಿಯಾ, ಇನ್ನು ನಿನ್ನ ಮಗು ಬದುಕಿದಂತೆಯೇ ಸರಿ. ನನ್ನೆದೆಯಲ್ಲಿ ಹಾಲೊಸರುತ್ತಿದೆ' ಎಂದಳು.

ಜುನಿಯಳು ಚಕಿತಳಾಗಿ ಮೆಲ್ಲನೆ – 'ನಿಮ್ಮೆದೆಯಲ್ಲಿ ಹಾಲು ಬಂತೆ ?' ಎಂದು ಕೇಳಿದಳು.

'ಹೌದು, ನಿಜವಾಗಿಯೂ.'

'ನಿಮ್ಮ ಕಿರೇ ಮಗಳಿಗೆ ಎಂಟು ವರ್ಷಕ್ಕೆ ಕಡಮೆಯಾಗಲಾರದಲ್ಲಾ ?'

'ಹೌದು, ಎಂಟಾಯಿತು. ಆದರೆ ನನಗೆ ಯಾವಾಗಲೂ ಹಾಲು ತುಂಬ. ಅದೆಲ್ಲ ದೇವರ ದಯ !'

ಅಂದಿನಿಂದ ದಿನಕ್ಕೆ ನಾಲ್ಕಾರು ಸಲ ಚುಹಿಯಾ ಬಂದು ಮಗುವಿಗೆ ಹಾಲು ಕುಡಿಸಿ ಹೋಗುತ್ತಿದ್ದಳು. ಮಗು ಹುಟ್ಟುವಾಗ ಬಹಳ ಕ್ಷೀಣವಾಗಿದ್ದರೂ ಈಗ ಚುಹಿಯಳ ಒಳ್ಳೆಯ ಹಾಲು ಕುಡಿದು ಪುಷ್ಟಿಯಾಗುತ್ತಲಿತ್ತು.

ಆದರೆ ಜುನಿಯಾ ಮತ್ತು ಗೋಬರರೊಳಗೆ ಈಗಲೂ ಮನಸ್ಸು ಸರಿ ಇದ್ದಿಲ್ಲ. ಜುನಿಯಳ ಮನಸ್ಸಿಗೆ ಖಂಡಿತವಾಗಿತ್ತು – ಎಷ್ಟಾದರೂ ಈ ಗೋಬರ ಸ್ವಾರ್ಥಿ ! ದಯಾರಹಿತ ! ತನ್ನನ್ನು ಕೇವಲ ಭೋಗದ ವಸ್ತುವಾಗಿ ತಿಳಿದವನು ! ತಾನು ಸತ್ತರೂ ಬದುಕಿದರೂ ಲಕ್ಷ್ಯ ಮಾಡದ ಮನುಷ್ಯ ! ತಾನು ಸತ್ತರೆ ಆತ ಇನ್ನೊಬ್ಬಳನ್ನು ತಂದಾನು ! ಇವನ ಬಲೆಯಲ್ಲಿ ಬಿದ್ದುದೇ ತಪ್ಪಾಯಿತು. ಆಗ ಅಲ್ಲಿರುವಾಗ ಬಂದು ಕಾಲ ಮೇಲೆ ಬೀಳುತ್ತಿದ್ದ. ಇಲ್ಲಿ ಬಂದ ಮೇಲೆ ಇವನ ಬುದ್ಧಿ ಹೀಗೆ ಯಾಕೆ ಬದಲಾಗಿಹೋಯಿತೋ ಗೊತ್ತಾಗುವುದಿಲ್ಲ. ಚಳಿಗಾಲ ಬಂದಿದೆ. ಸರಿಯಾಗಿ ಹೊದೆಯಲಿಕ್ಕೆ ಸಹ ಇಲ್ಲ. ಹೊಟ್ಟೆಯ ಹಿಟ್ಟಿಗಿಂತಲೂ ಇವನಿಗೆ ಕುಡಿಯುವುದೇ ಮುಖ್ಯವಾಗಿದೆ.

ಹಳೆಯ ಚಾಪೆಯೊಂದಿತ್ತು. ಅದರಲ್ಲೇ ಇಬ್ಬರೂ ಮಲಗುತ್ತಿದ್ದರು. ಆದರೂ ಅವರಿಬ್ಬರೊಳಗೆ ನೂರು ಗಜಗಳ ಅಂತರವಿದ್ದಂತೆ ತೋರುತ್ತಿತ್ತು.

ಗೋಬರನಿಗೆ ಮಗುವನ್ನೆತ್ತಿಕೊಂಡು ಅದನ್ನು ಮುದ್ದಾಡಿಸಬೇಕೆಂದು ತೋರುತ್ತಿತ್ತು. ಎಷ್ಟೋ ಸಲ ರಾತ್ರಿ ಎದ್ದವನು ಅದರ ನಗುಮುಖ ನೋಡಿ ಆನಂದಿಸುತಿದ್ದನು. ಆದರೆ ಜುನಿಯಳ ವಿಚಾರದಲ್ಲಿ ಮಾತ್ರ ಅವನಲ್ಲಿ ಬೇಸರ ಹೆಚ್ಚುತ್ತಲೇ ಇತ್ತು. ಜುನಿಯಳು ಸಹ ಅವನೊಡನೆ ಮಾತಾಡುತ್ತಿದ್ದಿಲ್ಲ-ಅವನ ಸೇವೆಯನ್ನೂ ಗೈಯುತ್ತಿದ್ದಿಲ್ಲ. ಅವರಿಬ್ಬರೊಳಗಿನ ಈ ಬೇಸರವು ಕಾಲ ಕಳೆದಂತೆಲ್ಲ ಬಲವಾದ ಕಬ್ಬಿಣದ ತೆರೆಯಂತೆ ಅವರಿಬ್ಬರ ಮನಸ್ಸಿನ ಅಂತರವನ್ನೂ ದೂರವಾಗಿಸುತ್ತಿತ್ತು. ಪರಸ್ಪರರ ಮಾತಿಗೆ ಅವರಿಬ್ಬರೂ ಯಾವಾಗಲೂ ವಿರುದ್ಧಾರ್ಥವನ್ನೇ ಕಲ್ಪಿಸಿಕೊಳ್ಳುತ್ತಿದ್ದರು.

ಅತ್ತ, ಗೋಬರ ಕೆಲಸ ಮಾಡುತ್ತಿದ್ದ ಕಾರ್ಖಾನೆಯಲ್ಲಿ ಇತ್ತೀಚೆ ಒಂದಲ್ಲ ಒಂದು ಗಲಭೆ ಏಳುತ್ತಲೇ ಇತ್ತು. ಸರಕಾರದ ಈ ಸಲದ ಬಜೆಟ್ಟನಲ್ಲಿ ಸಕ್ಕರೆಯ ಮೇಲೆ ಹೊಸ ತೆರಿಗೆ ಹೇರಿಸಲಾಗಿತ್ತು. ಮಿಲ್ ಒಡೆಯರಿಗೆ ಕೂಲಿಗಾರರ ಸಂಬಳದ ಮೇಲೆ ಕಡಿತ ಹಾಕಲಿಕ್ಕೆ ಇದೊಂದು ಒಳ್ಳೆಯ ನೆಪ ಸಿಕ್ಕಿತು. ಹೊಸ ತೆರಿಗೆಯಿಂದ ಐದು ರೂಪಾಯಿಯ ನಷ್ಟವಾಗುವುದಿದ್ದರೆ ಈ ಸಂಬಳದ ಕಡಿತದಿಂದ ಹತ್ತರ ಲಾಭವಾಗುವಂತಾಯಿತು. ಇತ್ತ ಹಲವು ತಿಂಗಳುಗಳಿಂದ ಕಾರ್ಖಾನೆಯಲ್ಲಿ ಅನೇಕ ತೊಂದರೆಗಳೇಳುತ್ತಲೂ ಇದ್ದುವು.

ಕೊನೆಗೆ ಕೂಲಿಕಾರ ಸಂಘದವರು 'ಹರತಾಳ' ವನ್ನಾಚರಿಸಲು ನಿಶ್ಚಯ ಮಾಡಿದರು. ಕೂಲಿಗಾರರಿಗೆ ಒಂದು ಕಾಸಿನ ಕಡಿತವೂ ಒಪ್ಪಿಗೆಯಾಗಿದ್ದಿಲ್ಲ. ಸಕ್ಕರೆಯ ಬೆಲೆ ಹೆಚ್ಚಾಗಿದ್ದ ಕಾಲದಲ್ಲಿ ಒಂದು ಕಾಸಿನ ಹೆಚ್ಚಳವೂ ಸಿಗದಿದ್ದ ಮೇಲೆ ಈಗ ತೆರಿಗೆ ಬಂದೊಡನೆಯೇ ಸಂಬಳದ ಕಡಿತ ಯಾವ ನ್ಯಾಯ? ಖುರ್ಶಿದ್ ಮಿರ್ಜಾ ಸಾಹೇಬರು ಕೂಲಿಗಾರರ ಸಂಘದ ಅಧ್ಯಕ್ಷರಾಗಿದ್ದರು. ಈ ಹರತಾಳದಿಂದಾಗಿ ಮಿಲ್ ಒಡೆಯರಿಗೆ ಸರಿಯಾದ ಬುದ್ಧಿ ಕಲಿಸಿಬಿಡಬೇಕೆಂದು ಅವರು ಪಣತೊಟ್ಟರು.

ಈ ಹರತಾಳದಿಂದಾಗಿ ಕೂಲಿಕಾರರಿಗೆ ತುಂಬಾ ಕಷ್ಟವಿದೆ. ಸಾವಿರಾರು ಮಂದಿಗೆ ಹೊಟ್ಟೆಗೆ ಲೋಪವಾದೀತು – ಈ ಮೊದಲಾದ ವಿಚಾರದ ಕಡೆಗೆ ಅವರ ದೃಷ್ಟಿಯೇ ಹೋಗಿದ್ದಿಲ್ಲ. ಗೋಬರನು ಈ ಹರತಾಳವಾದಿಗಳಲ್ಲಿ ಮೊತ್ತಮೊದಲಿಗನು. ಉದ್ದಂಡ ಸ್ವಭಾವದವನಾದ್ದರಿಂದ ಕೊಲ್ಲಲಿಕ್ಕೂ

ಸಾಯುಲಿಕ್ಕೂ ಹೆದರದವನು. ಒಂದು ದಿನ ಜುನಿಯುಳು ಮನಸ್ಸು ಗಟ್ಟಿ ಮಾಡಿಕೊಂಡು–'ಎಷ್ಟಾದರೂ ನೀವು ಮಕ್ಕಳು ಮರಿಗಳಿದ್ದವರು. ಈ ರೀತಿ ಜೆಂಕಿಗೆ ಹಾರುವುದು ಸರಿಯಲ್ಲ' ಎಂದು ತಿಳಿಹೇಳಿದಳು.

'ನೀನಾರೇ ನನಗೆ ಬುದ್ಧಿ ಹೇಳುವವಳು? ನಾನೇನು ನಿನ್ನ ಸಲಹೆ ಕೇಳಿಲ್ಲ ಈ ವಿಚಾರದಲ್ಲಿ'–ಗೋಬರ ಆಗ ಕರ್ಕಶ ಸ್ವರದಿಂದ ಹೇಳಿದ.

ಹಾಗೆಯೇ ಮಾತು ಬೆಳೆದುಹೋಯಿತು. ಕೋಪದ ಭರದಲ್ಲಿ ಗೋಬರ ಅವಳಿಗೆ ಬಲವಾಗಿ ನಾಲ್ಕೇಟು ಬಾರಿಸಿಯೇ ಬಿಟ್ಟ. ಆಗ ಬೊಬ್ಬೆ ಕೇಳಿ ಚುಹಿಯುಳು ಓಡಿ ಬಂದಳು. ಜಗಳ ಬಿಡಿಸಿ ಗೋಬರನಿಗೆ ಚನ್ನಾಗಿ ಗದರಿಸಿದಳು. ಆದರಿಂದ ಆವನಿಗೆ ಕೋಪ ನೆತ್ತಿಗೇರಿತು–'ಚೂಹಾ, ನಿನಗೇನು ನಮ್ಮ ಮನೆಯಲ್ಲಿ ಕೆಲಸ? ಇನ್ನು ಇಲ್ಲಿಗೆ ಬಂದರೆ ನೋಡಿಕೋ' ಎಂದು ಹೇಳಿಯೇ ಬಿಟ್ಟ.

ಆಗ ಚುಹಿಯುಳೂ ವ್ಯಂಗ್ಯ ಸ್ವರದಿಂದ ಹೇಳಿದಳು–'ಅಯ್ಯೋ, ನಿನ್ನ ಮನೆಗೆ ಬಾರದಿದ್ದರೆ ನನ್ನ ಹೊಟ್ಟೆ ಹೇಗೆ ತುಂಬೀತು? ನಿನ್ನ ಹತ್ತಿರ ಏನಾದರೂ ಬೇಡಿಗೀಡಿಕೊಂಡು ಹೋದರೇನೇ– ಏನಾದರೂ ಒಲೆ ಉರಿಸಬಂದೀತು! ಅಯ್ಯಾ! ನಾನಿಲ್ಲದಿರುತ್ತಿದ್ದರೆ– ಈ ಹೆಂಗುಸು ನಿನ್ನ ಏಟು ತಿನ್ನಲಿಕ್ಕಾದರೂ ಇರುತ್ತಿದ್ದಳೇ?'

ಗೋಬರ ಮತ್ತಷ್ಟುಕೋಪದಿಂದ ಹೇಳಿದ–'ನಾನು ಹೇಳಿಯಾಯಿತು. ನನ್ನ ಮನೆಮೆಟ್ಟಲಿಗೆ ನೀನು ಕಾಲಿಡಬಾರದು. ನಿನ್ನಿಂದಾಗಿಯೇ ಈ ಮುಂಡೆಗೆ ಗರ್ವ ತಲೆಗೇರಿಹೋದುದು.'

ಚುಹಿಯುಳು ಅಲ್ಲೇ ದೃಢವಾಗಿ ನಿಂತು ನಿಶ್ಯಂಕಳಾಗಿ ಹೇಳಿದಳು–'ಆಹಾ! ಅರ್ಧ ಸಾಯುಲಿಕ್ಕಾದ ಈ ಪಾಪದ ಹೆಂಗುಸಿಗೆ ಹೊಡೆದ ಮಾತ್ರಕ್ಕೆ ನೀನು ಬಹು ದೊಡ್ಡ ಪರಾಕ್ರಮಿಯಾಗಿಹೋದೆ! ನಿನ್ನ ಏಟು ತಿನ್ನುತ್ತಾ ಸುಮ್ಮನಿರಲಿಕ್ಕೆ ನೀನೇನು ಕೊಡುವೆ ಅವಳಿಗೆ? ಇಂತಹ ಸಾಧುಸ್ವಭಾವದ ಹೆಂಡತಿಯನ್ನಿಟ್ಟುಕೊಳ್ಳಬೇಕಾದರೂ ಪುಣ್ಯ ಬೇಕು. ಬೇರೆಯಾರಾದರೂ ಆಗಿರುತ್ತಿದ್ದರೆ ನಿನಗೆ ಹಿಡಿಸೂಡಿಯಿಂದ ಹೊಡೆದು ಹೊರಹಾಕಿಬಿಡುತ್ತಿದ್ದರು.'

ಅಷ್ಟರಲ್ಲಿ ಕೇರಿಯ ಜನರೆಲ್ಲ ಅಲ್ಲಿ ಸೇರಿದರು. ಎಲ್ಲರೂ ಗೋಬರನನ್ನು ಹೀಯಾಳಿಸುವವರೇ. ತಮ್ಮ ತಮ್ಮ ಮನೆಗಳಲ್ಲಿ ಹೆಂಡಂದಿರನ್ನು ಧಾರಳ ಬಡೆ

ಯುವ ಮನುಷ್ಯರು ಸಹ ಇಂದು ಸ್ತ್ರೀಯರ ಬಗೆಗೆ ಆದರ ತೋರಿಸುವ ದೇವತೆಗಳಾಗಿಹೋದರು.

ಆಗ ಪುನಃ ಚುಹಿಯಾ ಹೇಳತೊಡಗಿದಳು – 'ಇವನ ಮನೆಬಾಗಿಲಿಗೆ ಬರಬಾರದಂತೆ, ಈ ಬುದ್ಧಿಗೇಡಿ ಹೇಳುತ್ತಾನೆ! ಹೆಂಡತಿ ಮಕ್ಕಳನ್ನು ಕಟ್ಟಿಕೊಂಡ ಮೇಲೆ ಅವರ ಯೋಗಕ್ಷೇಮ ನೋಡಿಕೊಳ್ಳಬೇಕೆಂಬುದನ್ನು ತಿಳಿಯದ ಮೂರ್ಖ! ನಾನಿಲ್ಲದಿರುತ್ತಿದ್ದರೆ ಈ ಮಗುವಿನ ಗತಿ ಏನಾಗುತ್ತಿತ್ತೆಂದು ಅವಳ ಹತ್ತಿರ ಕೇಳಿ. ಹೆಂಡತಿಗೆ ಹೊಡೆದು ಈಗ ಪರಾಕ್ರಮ ತೋರಿಸುತ್ತಾನೆ! ನಾನೆಲ್ಲಿಯಾದರೂ ಈತನ ಹೆಂಡತಿಯಾಗಿದ್ದರೆ ಕಾಲಿನ ಮೆಟ್ಟಿನಿಂದ ಮುಖಕ್ಕೆ ಹೊಡೆದು ಮನೆಯಿಂದ ಹೊರಹಾಕುತ್ತಿದ್ದೆ.'

ಗೋಬರ ಏನೇನೋ ಕೂಗಿಕೊಳ್ಳುತ್ತ ತನ್ನ ಕೆಲಸಕ್ಕೆ ಹೋದ. ಅತ್ತ ಮಿಲ್ಲಿನಲ್ಲಿ ಅಶಾಂತಿಯ ಕರಿಮೋಡ ಆವರಿಸುತ್ತಲಿತ್ತು. ಕೂಲಿಕಾರ ಮುಂದಾಳುಗಳೆಲ್ಲ ಸೇರಿ ಅರ್ಧರಾತ್ರಿಯ ತನಕ ಸಮಾಲೋಚನೆ ನಡೆಸಿ ಹರತಾಳದ ಸ್ಕೀಮ್ ಸಿದ್ಧಗೊಳಿಸಿದ್ದರು. ಅತ್ತ ಕಂಪೆನಿಯ ಡೈರೆಕ್ಟರರು ಸಹ ತಮ್ಮ ಹಟ ಬಿಡದೆ ಗಟ್ಟಿ ನಿಂತಿದ್ದರು. ಹರತಾಳದಿಂದ ಕಂಪೆನಿಯ ಹಿತವೇ ಆಗುತ್ತಿತ್ತು. ಕೆಲಸಕ್ಕೆ ಹೊಸ ಜನರು ಬೇಕಾದಷ್ಟು ಸಿಗುತ್ತಿದ್ದರು. ನಿರುದ್ಯೋಗಿಗಳ ಸಂಖ್ಯೆಗೆ ಮಿತಿಯೇ ಇದ್ದಿಲ್ಲ. ಆದ್ದರಿಂದ ಈಗಿನ ಅರ್ಧ ಸಂಬಳಕ್ಕೇ ಜನ ಧಾರಾಳ ಸಿಗುವುದರಲ್ಲಿದ್ದರು. ಹಾಗಾಗಿ ಮಾಲು ತಯಾರಿಸುವಾಗಲೇ ಅರ್ಧಾಂಶ ಹಣದ ಲಾಭವಾಗುವ ಸಂದರ್ಭವಿತ್ತು. ೮–೧೦ ದಿನಗಳ ಮಟ್ಟಿಗೆ ಕೆಲಸವೇ ನಿಂತುಹೋದರೂ ತೊಂದರೆ ಇದ್ದಿಲ್ಲ.

ಹಾಗಾಗಿ ಕೂಲಿ ಕಡಿತದ ಅಂತಿಮ ನಿರ್ಣಯವಾಯಿತು. ಇಂತಹ ದಿನದಿಂದ ಈ ಹೊಸಕೂಲಿ ಬಳಕೆಗೆ ಬರುವುದೆಂದು ನಿಶ್ಚಯವೂ ಆಯಿತು. ಒಡನೆಯೇ ಪೋಲಿಸರಿಗೂ ಸೂಚನೆ ಹೋಯಿತು. ಆದರೆ ಕೂಲಿಗಾರರಿಗೆ ಈ ಎಲ್ಲ ವಿಚಾರಗಳ ಸುಳಿವೇ ಇರಲಿಲ್ಲ.

ಇದಾಗಿ ಕೆಲ ದಿನಗಳ ಮೇಲೆ ಒಂದು ದಿನ ಸಾಯಂಕಾಲ ಕೂಲಿಗಾರರೆಲ್ಲ ಮನೆಗೆ ಹೊರಡಲು ಅಣಿಯಾದರು. ಒಡನೆಯೇ ಕಂಪೆನಿಯ ಒಡೆಯರು ತಮ್ಮ ನಿರ್ಣಯವನ್ನು ಬಹಿರಂಗವಾಗಿ ಘೋಷಿಸಿಯೇ ಬಿಟ್ಟರು. ಆಗಲೇ ಪೋಲಿಸರೂ ಬಂದೊದಗಿದರು. ಕೂಲಿಗಾರರು ಮುಷ್ಕರವನ್ನಾರಂಭಿಸಲೇ ಬೇಕಾಯಿತು.

ಮಿರ್ಜಾ ಸಾಹೇಬರಿಗೆ ಈ ಸಮಾಚಾರ ತಿಳಿದೊಡನೆ ಆಶ್ಚರ್ಯ ಬೇಸರ ಗಳೆರಡೂ ಆಯಿತು. ಅವರು ಒಂದು ಕ್ಷಣ ಯೋಚನೆಮಾಡಿ ಹೇಳಿದರು– ಒಳ್ಳೇದು; ಡೈರೆಕ್ಟರರ ಇಚ್ಛೆ ಇದೇ ಆದರೆ ಉಪಾಯವಿಲ್ಲ. ಪರಿಸ್ಥಿತಿ ಈಗ ಅವರಿಗನುಕೂಲವಾಗಿದೆ. ಆದರೂ ನಮಗೆ ನ್ಯಾಯದ ಬೆಂಬಲವಿದೆ. ಅವರು ಈಗ ಹೊಸ ಜನರನ್ನು ಕೆಲಸಕ್ಕೆ ತೆಗೆದುಕೊಂಡು ಕಾರ್ಖಾನೆ ನಡೆಸಬಯಸು ತ್ತಾರೆ. ಅವರಿಗೆ ಯಾವ ಹೊಸ ಕೆಲಸಗಾರನೂ ಸಿಗದಂತೆ ಮಾಡುವುದೇ ಇನ್ನು ಮುಂದಿನ ನಮ್ಮ ಕರ್ತವ್ಯ. ಅದರಲ್ಲೇ ನಮಗೆ ಜಯವಾಗಲಿದೆ.'

ಒಡನೆಯೇ ದೊಡ್ಡ ಸಭೆ ಕರೆಯಲಾಯಿತು. ಸಮರ್ಥ ಕಾರ್ಯಕರ್ತರ ಚುನಾವಣೆಯಾಯಿತು. ಚರ್ಚೆ ನಿರ್ಣಯಗಳೂ ಆದುವು. ಕೊನೆಗೆ ಒಂಬತ್ತು ಗಂಟೆ ರಾತ್ರಿಯ ಹೊತ್ತಿಗೆ ಕೂಲಿಗಾರರ ಅತಿ ದೊಡ್ಡ ಮೆರವಣಿಗೆ ಹೊರ ಟಿತು. ೧೧ ಗಂಟೆ ರಾತ್ರಿಗೆ, ಮರುದಿನಕ್ಕೆ ಬೇಕಾದ ಕಾರ್ಯಕ್ರಮಗಳ ನಿರ್ಣಯವಾಯಿತು. ಅಂತು, ಹರತಾಳವು ಸರ್ವಥಾ ಅಹಿಂಸಾಮಯ ವಾಗಿರಬೇಕೆಂದೂ ನಿಶ್ಚಯವಾಯಿತು.

ಆದರೆ ಎಲ್ಲ ಪ್ರಯತ್ನವೂ ನಿಷ್ಫಲವಾಗಿಹೋಯಿತು. ಮರು ದಿನ ಹೊಸ ಕೂಲಿಕಾರರ ಅತಿ ದೊಡ್ಡ ಗುಂಪು ಕಾರ್ಖಾನೆಯ ಬಾಗಿಲಲ್ಲಿ ಸಿದ್ಧವಾಗಿತ್ತು. ಅದನ್ನು ಕಂಡೊಡನೆ ಮುಷ್ಕರಗಾರರ ಹಿಂಸಾವೃತ್ತಿ ಅಂಕೆಮೀರಿಹೋಯಿತು. ಕಷ್ಟದಿಂದ ಎಲ್ಲಿಯಾದರೂ ೫೦–೧೦೦ ಮಂದಿ ಸಿಕ್ಕಿಯಾರೆಂದು ಇವರೆಣಿಸಿ ದ್ದರು. ಹಾಗೆ ಬಂದವರನ್ನು ಹೇಳಿ ತಿಳಿಸಿ, ಅಥವಾ ಗದರಿಸಿ, ಓಡಿಸಿಬಿಡ ಬಹುದೆಂದೂ ಯೋಚಿಸಿದ್ದರು. ಅದೂ ಅಲ್ಲದೆ, ಮುಷ್ಕರಗಾರರ ಬಹು ದೊಡ್ಡ ತಂಡವನ್ನು ನೋಡಿ ಹೊಸ ಜನರೆಲ್ಲ ತಮ್ಮಷ್ಟಕ್ಕೇ ಓಡಿಹೋದಾರೆಂದೂ ಭಾವಿಸಿದ್ದರು.

ಆದರೆ ಇಲ್ಲಿಯ ಚಿತ್ರವೇ ಬೇರೆಯಾಗಿಹೋಗಿತ್ತು. ಈ ಹೊಸ ಜನರೆಲ್ಲ ಕೆಲಸಕ್ಕೆ ಸೇರಿಹೋದರೆ ಮಿಲ್ ಒಡೆಯರೊಡನೆ ರಾಜಿ ಪಂಚಾತಿಕೆಗೆ ಸಂದರ್ಭವೇ ಸಿಗಲಾರದು. ಹಾಗಾದ್ದರಿಂದ ಈ ಹೊಸ ಕೂಲಿಗಳು ಮಿಲ್ಲಿನ ಒಳ ಹೊಕ್ಕದಂತೆ ಮಾಡುವುದೇ ಯೋಗ್ಯ ಉಪಾಯವೆಂದು ಇವರೊಳಗೆ ತೀರ್ಮಾನ ವಾಯಿತು. ಅದಕ್ಕೆ ಬಲಪ್ರಯೋಗವಲ್ಲದೆ ಬೇರೆ ಉಪಾಯವೇ ಇದ್ದಿಲ್ಲ. ಹೊಸ ದಳವೂ ಸಹ ಗೆದೆಯಲಿಕ್ಕೂ ಸಾಯಲಿಕ್ಕೂ ಅಣಿಯಾಗಿಯೇ ಇತ್ತು. ಅದ ರಲ್ಲೂ ಹೊಟ್ಟೆಗಿಲ್ಲದ ಕೆಲವರಂತು ಈ ಸಂದರ್ಭ ಸಿಕ್ಕಿದ್ದನ್ನು ಹೇಗಾದರೂ

ಬಿಡಬಾರದೆಂದು ಪಣತೊಟ್ಟಿದ್ದರು. ಹೊಟ್ಟೆಗಿಲ್ಲದೆ ಸಾಯುವುದಕ್ಕಿಂತ ಅಥವಾ ಹೆಂಡತಿ ಮಕ್ಕಳನ್ನು ಉಪವಾಸ ಹಾಕಿ ತೆಗೆಯುವುದಕ್ಕಿಂತ–ಈ ಪರಿಸ್ಥಿತಿಯಲ್ಲಿ ಕಾದಾಡಿ ಸಾಯುವುದೇ ಲೇಸೆಂದು ಆ ಹೊಸ ಜನರು ಎಣಿಸಿದ್ದರು.

ಅಂತು ಎರಡು ಪಂಗಡಗಳೊಳಗೂ ಕೈ ಕೈ ಆಗಿಯೇಹೋಯಿತು. ಮಿರ್ಝಾ ಸಾಹೇಬರು ಮೊದಲು ಹಾರಿದರು. ಅವರ ಸಹಾಯಕ್ಕಾಗಿ ಗೋಬರ ಹಾರಿದ. ಅವನಿಗೆ ಮೊದಲ ಸಲವೇ ಪೆಟ್ಟು ಬಿತ್ತು. ಸಾಹೇಬರು ಕುಸ್ತಿ ಕಲಿತ ಜಟ್ಟಿಗಳಾದ್ದರಿಂದ ಪೆಟ್ಟು ತಪ್ಪಿಸಿಕೊಂಡರು. ಆದರೆ ಗೋಬರ ಹಳ್ಳಿಯ ಹುಡುಗನಾದ್ದರಿಂದ ಪೆಟ್ಟು ತಪ್ಪಿಸಿಕೊಳ್ಳಲಾರದಾದ. ಇಂತಹ ಗಲಾಟೆಗಳಲ್ಲಿ ಹೊಡೆಯುವುದಕ್ಕಿಂತಲೂ ಇತರರ ಹೊಡೆತ ತಪ್ಪಿಸಿಕೊಳ್ಳುವುದು ಮಹತ್ವದ ವಿಚಾರವಾಗಿತ್ತು. ಅವನ ಒಂದು ಕೈಯ ಮೂಳೆಯೇ ಮುರಿದುಹೋಯಿತು. ಕೊನೆಗೆ ಅಲ್ಲೇ ಅವನು ಬಿದ್ದುಬಿಟ್ಟ. ಹಲವಾರು ದೊಣ್ಣೆಗಳ ಪೆಟ್ಟು ಒಂದರ ಮೇಲೊಂದು ಅವನ ಮೇಲೆ ಬಿದ್ದುವು. ಅವನ ಅಂಗಾಂಗಗಳೆಲ್ಲ ನುಗ್ಗಾಗಿ ಹೋದುವು. ಅವನೊಬ್ಬನು ಬಿದ್ದು ಅರ್ಧವಾದೊಡನೆ ಉಳಿದ ಮುಷ್ಕರಗಾರರೆಲ್ಲ ಒಂದೇ ಸಮನೆ ಓಡತೊಡಗಿದರು. ಬರಿಯ ೮–೧೦ ಮಂದಿ ಮಾತ್ರ ಮಿರ್ಝಾ ಸಾಹೇಬರಿಗೆ ಸುತ್ತುಗಟ್ಟಿ ನಿಂತಿದ್ದರು. ಅಂತು, ಹೊಸ ಜನರೆಲ್ಲ ಜಯ ಜಯಕಾರ ಮಾಡುತ್ತ ಕಾರ್ಖಾನೆಯೊಳಗೆ ಹೋಗಿ ಸೇರಿಯೇ ಬಿಟ್ಟರು.

ಸೋತ ಮುಷ್ಕರಗಾರರು ಪೆಟ್ಟುತಾಗಿ ಬಿದ್ದ ಜನರನ್ನೆಲ್ಲ ಹೊತ್ತುಕೊಂಡು ಆಸ್ಪತ್ರೆಗೊಯ್ಯತೊಡಗಿದರು. ಆದರೆ ಆಸ್ಪತ್ರೆಯಲ್ಲಿ ಇಷ್ಟೆಲ್ಲ ಜನರಿಗೆ ಅವಕಾಶವೆಲ್ಲಿ? ಮಿರ್ಝಾ ಸಾಹೇಬರನ್ನು ಅವರ ಮನೆಯವರು ಹೊತ್ತುಕೊಂಡು ಹೋದರು. ಗೋಬರನಿಗೂ ಅಲ್ಲಲ್ಲಿ ಔಷಧಿಪಟ್ಟಿ ಹಾಕಿಸಿ ಅವನ ಮನೆಯಲ್ಲಿ ತಂದುಹಾಕಿದರು.

ಜುನಿಯಳು ಅವನ ಚೇಷ್ಟಾವಿಹೀನ ಸ್ಥಿತಿಯನ್ನು ಕಣ್ಣುಬಿಟ್ಟು ನೋಡಿದಳು. ಒಡನೆಯೇ ಅವಳ ನಾರೀತ್ವವು ಜಾಗೃತವಾಯಿತು. ಈ ವರೆಗೆ ಅವನನ್ನಾಕೆ ಉದ್ದಂಡಸ್ವಭಾವದವನನ್ನಾಗಿಯೂ ಕ್ರೂರನನ್ನಾಗಿಯೂ ಕಂಡಿದ್ದಳು. ಆದರೆ ಈಗ ಅವನು ನಿಸ್ಸಹಾಯನಾಗಿಯೂ, ದಯನೀಯನಾಗಿಯೂ ತೋರಿಬಂದನು. ಜುನಿಯಳು, ಅವನು ಬಿದ್ದುಕೊಂಡಿದ್ದ ಚಾಪೆಯ ಮೇಲೆ ಕೂತುಕೊಂಡು, ನೀರು ತುಂಬಿದ ಕಣ್ಣುಗಳಿಂದ ಅವನತ್ತ ನೋಡಿದಳು. ಮನೆಯ ಪರಿಸ್ಥಿತಿಯನ್ನು ಯೋಚಿಸಿಕೊಂಡಳು. ಅವಳಿಗೆ ಗೋಬರನ ಮೇಲೆ

ಒಂದು ತರದ ದುಃಖಯುಕ್ತ ಕೋಪವೇರಿತು. ಮನೆಯಲ್ಲಿ ಒಂದು ಚಿಕ್ಕಾಸೂ ಇಲ್ಲವೆಂಬುದನ್ನು ಗೋಬರ ಬಲ್ಲವನಾಗಿದ್ದ. ಇತರರ ಹತ್ತಿರ ಕೇಳಿದರೆ ಒಂದು ಚಿಕ್ಕಾಸು ಸಹ ಸಿಗಲಾರದೆಂಬುದೂ ಗೊತ್ತಿದೆ. ಇದನ್ನು ಸ್ವತಃ ತಿಳಿದಿದ್ದೂ, ಪುನಃ ಪುನಃ ಹೇಳಿ ತಿಳಿಸಿದ್ದರೂ ಸಹ ಆಪತ್ತನ್ನು ಬೇಕೆಂದು ಬರಮಾಡಿಕೊಂಡುದಲ್ಲವೇ? ಅವಳು ಎಷ್ಟು ಸಲ ಅವನೊಡನೆ ಹೇಳಿದ್ದಳು– 'ನೀವು ಈ ಜಗಳಕ್ಕೆ ಕೈಹಾಕಬೇಡಿ. ಬೆಂಕಿ ಹಿಡಿಸುವವರು ಬೆಂಕಿ ತಾಗಿಸಿ ಬಿಟ್ಟು ದೂರ ಹೋಗುತ್ತಾರೆ. ಇಲ್ಲಿ ಬಡವರ ತಲೆಯೇ ಹೋಗುವುದು ಅವರಿಗೆ ಗೊತ್ತಿಲ್ಲ.' ಆದರೆ ಈ ಮಾತನ್ನೆಲ್ಲ ಅವನು ಕೇಳಿದನೆ? ಅವಳು ಎಷ್ಟಾದರೂ ತನ್ನ ಹಗೆಯೆಂದೇ ತಿಳಿದಿದ್ದನವನು. ಮೋಟರ್ ಕಾರುಗಳಲ್ಲಿ ದರ್ಬಾರಿನಿಂದ ತಿರುಗಾಡುತ್ತಿರುವವರೇ ಅವನ ಹಿತಬೋಧಕರಾಗಿದ್ದರು. ಆದರೆ ಅವರೆಲ್ಲ ಈಗೆಲ್ಲಿ? ಅವಳ ಈ ಕೋಪದಲ್ಲಿ ಒಂದು ತರದ ತೃಪ್ತಿಯೇ ಇತ್ತು. ಇಬ್ಬರು ಮಕ್ಕಳು ಪರಸ್ಪರ ಕಾದಾಡಿ, ಮೇಜಿನ ಮೇಲಿಂದ ಹತ್ತಿ ಬಿದ್ದ ಒಬ್ಬ ಹುಡುಗನನ್ನು ಕಂಡು–'ನೀನು ಬೀಳಬೇಕು; ನಾನು ನಗಬೇಕು'—ಎನ್ನುತ್ತ ಕುಣಿದಾಡುವ ಇನ್ನೊಬ್ಬ ಹುಡುಗನಂತಾಗಿತ್ತು– ಅವಳ ಪರಿಸ್ಥಿತಿ.

ಆದರೆ ಮರುಕ್ಷಣದಲ್ಲೇ ಗೋಬರನ ಕರುಣಾಕ್ರಂದನವನ್ನು ಕೇಳಿ ಅವಳಿಗೆ ತಡೆಯುಲಾರದ ವ್ಯಥೆಯಾಯಿತು. ಅವಳು ದುಃಖಸಾಗರದಲ್ಲಿ ಪೂರ್ಣ ಮುಳುಗಿದಂತಾಗಿ– 'ಅಯ್ಯೋ! ಸರ್ವನಾಶವಾಯಿತಲ್ಲ! ಯಾರಿಗೂ ಇವರ ಮೇಲೆ ದಯೆ ತೋರಲಿಲ್ಲವಲ್ಲ!' ಎಂದು ಬೊಬ್ಬೆ ಹಾಕತೊಡಗಿದಳು. ಹಾಗೆಯೇ ಅಳುತ್ತ ಅವಳು ಬಹು ಹೊತ್ತಿನ ತನಕ ಅವನ ಮುಖ ನೋಡುತ್ತಾ ಇದ್ದಳು. ಅವನ ಜೀವಕಳೆ ಕ್ಷೀಣವಾಗುತ್ತಿರುವುದನ್ನು ತನ್ನ ಕುಂದುತ್ತಿರುವ ಆಶಾದೃಷ್ಟಿಯಿಂದ ಪರೀಕ್ಷಿಸುವಂತಿದ್ದಳು. ಆದರೆ ಪ್ರತಿಕ್ಷಣದಲ್ಲೂ ಅವಳ ಆಶಾಕಿರಣವು ಅಸ್ತಂಗತನಾಗಲಿರುವ ಸೂರ್ಯನ ತೇಜಸ್ಸಿನಂತೆ ಕ್ಷೀಣವಾಗುವುದರಲ್ಲಿತ್ತು. ಮುಂದೆ ಬರಲಿರುವ ಅಂಧಕಾರದ ಚಿತ್ರವು ಅವಳಿಗೆ ದೊಡ್ಡ ಭಯವನ್ನೊಡ್ಡಿತ್ತು.

ಒಡನೆಯೇ ಚುಹಿಯುಳು ಬಂದು ಕರೆದಳು– 'ಗೋಬರನ ಪಾಡು ಹೀಗೇಕಾಯಿತು ಮಗಳೇ? ಎಲ್ಲವನ್ನೂ ನಾನು ಕೇಳಿದೆ. ಹಾಗಾಗಿ ಅಂಗಡಿಯಿಂದ ಓಡಿಕೊಂಡೇ ಬರುತ್ತಿದ್ದೇನೆ.'

ಜುನಿಯಳ ತಡೆದಿಟ್ಟಿದ್ದ ಕಣ್ಣೀರು ಒಮ್ಮೆಯೇ ಹರಿಯತೊಡಗಿತ್ತು
ಅವಳ ಬಾಯಿಂದ ಮಾತೇ ಹೊರಡಲಿಲ್ಲ. ಅವಳು ಕೇವಲ ಭಯಭೀತ
ನೇತ್ರಗಳಿಂದ ಚುಹಿಯಳತ್ತ ನೋಡಿದಳು. ಚುಹಿಯಳೂ ಗೋಬರನ
ಮುಖ ನೋಡಿ ಅವನ ಎದೆಯ ಮೇಲೆ ಕೈಯಿಟ್ಟು ಪರೀಕ್ಷಿಸಿ ಸಮಾ
ಧಾನದ ಮಾತುಗಳಿಂದ ಹೇಳಿದಳು – ' ಗಾಬರಿಯಾಗಬೇಡ ಮಗಳೇ. ಪೆಟ್ಟು
ವಿಶೇಷವಾಗಿಲ್ಲ. ಇನ್ನು ಕೆಲವೇ ದಿನಗಳಲ್ಲಿ ಗುಣವಾದೀತು. ನಿನ್ನ ಓಲೆಭಾಗ್ಯ
ಗಟ್ಟಿಯಾಗಿದೆ. ಈ ದಂಗೆಯಲ್ಲಿ ಎಷ್ಟೋ ಮಂದಿ ಸತ್ತೇ ಹೋದರಂತೆ! ಮನೆ
ಯಲ್ಲೇನಾದರೂ ಹಣ ಕಾಸು ಇದೆಯೆ? '

ಜುನಿಯಳು ನಾಚಿಕೆಯಿಂದ ಇಲ್ಲವೆಂದು ತಲೆಯಲ್ಲಾಡಿಸಿದಳು.

' ನಾನೇ ಸ್ವಲ್ಪ ಹಣ ತಂದುಕೊಡುತ್ತೇನೆ. ಸ್ವಲ್ಪ ಹಾಲು ತಂದು
ಕಾಯಿಸಿಕೊಡು. '

ಜುನಿಯಳು ಅವಳ ಕಾಲು ಹಿಡಿದು – ' ದೊಡ್ಡಮ್ಮಾ – ನೀವೇ ನನ್ನ
ತಾಯಿ. ನನಗಿನ್ನಾರೂ ಗತಿ ಇಲ್ಲ ' ಎಂದಳು.

ಚಳಿಗಾಲದ ಸಂಧ್ಯಾಕಾಲವು ಇನ್ನಷ್ಟು ಬೇಸರಕರವಾಗಿ ತೋರಿತು.
ಜುನಿಯಳು ಬೆಂಕಿ ಉರಿಸಿ ಹಾಲು ಕುದಿಸತೊಡಗಿದಳು. ಚುಹಿಯಳು ಜಗು
ಲಿಯ ಮೇಲೆ ಮಗುವನ್ನಾಡಿಸಿಕೊಂಡಿದ್ದಳು.

ಏನೋ ಯೋಚಿಸುತ್ತಿದ್ದ ಜುನಿಯಳು ತುಂಬಿದ ಕಂಠದಿಂದ ಹೇಳಿದಳು–
' ದೊಡ್ಡಮ್ಮಾ, ನಾನೆಷ್ಟಾದರೂ ಭಾಗ್ಯಹೀನಳು! ನನ್ನಿಂದಾಗಿಯೇ ಇವರಿಗೆ
ಈ ಗತಿ ಬಂತೆ?–ಎಂಬುದಾಗಿ ನನ್ನ ಮನಸ್ಸು ಹೇಳುತ್ತಿದೆ. ಜೀವ ಭಾರ
ವಾಗಿ, ಮನಸ್ಸಿಗೆ ದುಃಖವಾದಾಗ– ಏನೇನೋ ಬೇಡದ ಮಾತು ಬಾಯಿಂದ
ಬಂದುಹೋಗುತ್ತದೆ. ಶಾಪದ ಮಾತೂ ಬಂದುಬಿಡುತ್ತದೆ. ಆ ನನ್ನ
ಕೆಟ್ಟ ಮಾತುಗಳಿಂದಾಗಿಯೇ ಈಗ . . . ' ಅವಳ ಬಾಯಿಂದ ಮತ್ತೆ
ಮಾತೇ ಹೊರಡಲಿಲ್ಲ. ಸ್ವರವು ಕಣ್ಣೀರ ಭರದಲ್ಲಿ ಮುಳುಗಿಹೋಯಿತು.

ಚುಹಿಯಳು ಹತ್ತಿರ ಬಂದು ಅವಳ ಕಣ್ಣೀರೊರಸುತ್ತಾ – ' ಏನೆಲ್ಲ
ಯೋಚಿಸಿಕೊಳ್ಳುತ್ತಿರುವೆ ಮಗಳೆ? ಇವನೀಗ ಬದುಕಿರುವುದೇ ನಿನ್ನ ಕುಂಕು
ಮದ ಭಾಗ್ಯದಿಂದ. ಅದರಲ್ಲೇನು ಏನು? ನಮ್ಮ ನಮ್ಮೊಳಗೆ ಜಗಳವಾಗು
ವಾಗ ಬಾಯಿಂದ ಬೇಕಾದಂತೆ ಬೈದುಕೊಳ್ಳುತ್ತೇವೆ. ಆದರೆ ನಮ್ಮ ಮನಸ್ಸಿ
ನಲ್ಲೇನಾದರೂ ಕಲ್ಮಷವಿದೆಯೆ? ' ಎಂದು ಹೇಳಿದಳು.

ಜುನಿಯಾ ನಡುಗುವ ಸ್ವರದಿಂದ ಪುನಃ–'ಹಾಗಾದರೆ ನಾನೇನು ಮಾಡಲಿ ದೊಡ್ಡಮ್ಮಾ?' ಎಂದು ಕೇಳಿದಳು.

'ಬೇರೇನೂ ಬೇಡ. ನೀನು ದೇವರ ನಾಮ ಸ್ಮರಿಸುತ್ತಿರು. ಬಡವರಿಗೆ ಭಗವಂತನೇ ರಕ್ಷಕ.'–ಚುಹಿಯುಳು ಧೈರ್ಯವಿತ್ತಳು.

ಅದೇ ಸಮಯ ಗೋಬರ ಕಣ್ತೆರೆದ. ಮುಂದುಗಡೆ ಜುನಿಯಳನ್ನು ಕಂಡು ಯಾಚನೆಯ ಕ್ಷೀಣಸ್ವರದಿಂದ ಮಾತಾಡಿದ–'ಅಯ್ಯೋ! ಇಂದು ಚನ್ನಾಗಿ ಪೆಟ್ಟು ಬಿತ್ತು ಜುನಿಯಾ. ನಾನು ಯಾರೊಡನೆಯೂ ಏನೂ ಮಾತಾಡಿಲ್ಲ. ಎಲ್ಲರೂ ಸೇರಿ ಚನ್ನಾಗಿ ನನ್ನನ್ನು ಹೊಡೆದುಬಿಟ್ಟರು . . . . ನಾನು ನಿನಗೆ ಚನ್ನಾಗಿ ಬೈದಿದ್ದೆ, ಹೊಡೆದಿದ್ದೆ. ಅದರ ಫಲವೇ ನನಗೀಗ ಸಿಕ್ಕಿದ್ದು. ಅದನ್ನೆಲ್ಲ ಮರೆತು ನನ್ನನ್ನು ಕ್ಷಮಿಸಿಬಿಡು ಜುನಿಯಾ. ನಾನಿನ್ನು ಹೆಚ್ಚು ಸಮಯ ಬದುಕಲಾರೆ. . .ಅಯ್ಯೋ, ನೋವಿನಿಂದ ಇಡೀ ದೇಹವೇ ಜರ್ಜರಿತವಾಗುತ್ತಿದೆ!'

ಆಗ ಚುಹಿಯಾ ಒಳ ಬಂದು–'ಸುಮ್ಮನೆ ಮಲಗಿಕೋ. ಮಾತಾಡ ಬೇಡ. ನೀನೆಷ್ಟಕ್ಕೂ ಸಾಯಲಾರೆ. ಅದಕ್ಕೆ ನಾನಿದ್ದೇನೆ' ಎಂದು ಧೈರ್ಯ ಹೇಳಿದಳು.

ಗೋಬರನ ಮುಖದ ಮೇಲೆ ಆಶೆಯ ಬೆಳಕು ತೋರಿಬಂದು ಕೇಳಿದ–'ಅದು ಸತ್ಯವೆ? ನಾನು ಸಾಯಲಾರೆನೇ?'

'ಹೌದು; ಎಷ್ಟಕ್ಕೂ ಸಾಯಲಾರೆ. ನಿನಗೇನಾಗಿದೆ? ತಲೆಗೆ ಸ್ವಲ್ಪ ಪೆಟ್ಟಾಗಿದೆ. ಕೈಯ ಕೀಲು ಸ್ವಲ್ಪ ತಪ್ಪಿದೆ. ಇಂತಹ ಪೆಟ್ಟು ಮನುಷ್ಯರಿಗೆ ಆಗಾಗ್ಗೆ ತಾಗಿಯೇ ತಾಗುತ್ತದೆ. ಇದರಿಂದೆಲ್ಲ ಯಾರೂ ಸಾಯುವುದಿಲ್ಲ.'

'ಇನ್ನು ಮುಂದೆ ನಾನೆಂದೂ ಜುನಿಯಳನ್ನು ಹೊಡೆಯುವುದಿಲ್ಲ.'

'ಎಲ್ಲಿಯಾದರೂ ಅವಳು ಹಿಂದೆ ಹೊಡೆದುಬಿಟ್ಟಾಳೆಂದು ಹೆದರಿರಬೇಕು.'

'ಅವಳು ಹೊಡೆದರೂ ನಾನು ಬಾಯಿಬಿಡಲಿಕ್ಕಿಲ್ಲ.'

'ಗುಣವಾದ ಮೇಲೆ ಅದೆಲ್ಲ ಮರೆತುಹೋದೀತು.'

'ಇಲ್ಲ ದೊಡ್ಡಮ್ಮಾ; ಎಷ್ಟಕ್ಕೂ ಮರೆಯಲಾರೆ.'

ಗೋಬರ ಆಗ ಎಳೆ ಮಗುವಿನಂತೆ ಮಾತಾಡುತ್ತಿದ್ದ. ಬಳಿಕ ಸ್ವಲ್ಪ ಸಮಯದ ತನಕ ನಿಶ್ಚಿಂತನನಾಗಿ ಬಿದ್ದುಕೊಂಡಿದ್ದ. ಅವನ ಮನಸ್ಸು ಎಲ್ಲೆಲ್ಲೋ ಹಾರಿಹೋಗುತ್ತಿತ್ತು. ಒಮ್ಮೆ ಅವನು ನದಿಯಲ್ಲಿ ಮುಳುಗುವುದರಲ್ಲಿದ್ದ. ಜುನಿ

ಯಳಾಗ ಬದುಕಿಸಬರುತ್ತಿದ್ದಳು. ಮತ್ತೊಮ್ಮೆ, ಯಾರೋ ಒಬ್ಬ ದೊಡ್ಡ ರಾಕ್ಷಸ ಬಂದು ಅವನ ಎದೆಯ ಮೇಲೆ ಕೂತುಕೊಂಡ. ಆಗ ಪುನಃ ಜುನಿಯ ಳಾಕಾರದ ಯಾವುದೋ ಒಂದು ದೇವತೆ ಬಂದು ಇವನನ್ನು ಕಾಪಾಡಿತು. ಕಣ್ತೆರೆದು ಆಗಾಗ ಕೇಳತೊಡಗಿದ–'ಜುನಿಯಾ, ನಾನು ಸಾಯಲಾರೆನೆ ?'

ಮೂರು ದಿನಗಳ ತನಕ ಅವನ ಪರಿಸ್ಥಿತಿ ಹಾಗೆಯೇ ಇತ್ತು. ರಾತ್ರಿ ಹಗಲು ಜುನಿಯಳು ಪಕ್ಕದಲ್ಲೇ ಇದ್ದು ಅವನ ಸೇವೆ, ಶುಶ್ರೂಷೆ ಮಾಡುತ್ತಿದ್ದಳು. ಮಗುವನ್ನು ಚುಹಿಯಳೇ ನೋಡಿಕೊಂಡಿರುತ್ತಿದ್ದಳು. ನಾಲ್ಕನೆಯ ದಿನ ಚುಹಿಯಳ ಹೇಳಿಕೆಯಂತೆ ಕುದುರೆಗಾಡಿಯಲ್ಲಿ ಹಾಕಿ ಜುನಿಯಳು ಅವನನ್ನು ಆಸ್ಪತ್ರೆಗೊಯ್ದಳು. ಅಲ್ಲಿ ಪುನಃ ಮದ್ದು ಹಾಕಿ ಕಟ್ಟಿದರು. ಸಂಜೆಗೆ ಹಿಂದೆ ಬರುವಾಗ ಗೋಬರನಿಗೆ–ಎಷ್ಟಾದರೂ ತಾನಿನ್ನು ಬದುಕಿ ಉಳಿದೇನು, ಎಂದು ತೋರಿತು. ಆಗ ಅವನು ನೀರು ತುಂಬಿದ ಕಣ್ಣುಗಳಿಂದ ಜುನಿಯಳತ್ತ ನೋಡಿ–'ನನ್ನ ತಪ್ಪುಗಳನ್ನು ಕ್ಷಮಿಸಿಬಿಡು–ಜುನಿಯಾ' ಎಂದು ಕೇಳಿಕೊಂಡ.

ಈ ನಾಲ್ಕಾರು ದಿನಗಳಲ್ಲಿ ಚುಹಿಯಳ ಕೈಯಿಂದ ತೆಗೆದುಕೊಂಡಿದ್ದ ಐದಾರು ರೂಪಾಯಿ ಮುಗಿದುಹೋಯಿತು. ಇನ್ನೂ ಅವಳನ್ನು ಕೇಳಲಿಕ್ಕೆ ಜುನಿಯಳಿಗೆ ಸಂಕೋಚವಾಯಿತು. ಅವಳಾದರೂ ದೊಡ್ಡ ಸಾಹುಕಾರ್ತಿ ಏನೂ ಅಲ್ಲ. ಸೌದೆ ಮಾರಿ ಬಂದ ಹಣದಿಂದಲೇ ಜುನಿಯಳಿಗೆ ಕೊಡುತ್ತಿದ್ದಳು. ಕೊನೆಗೆ, ತಾನೇ ಏನಾದರೂ ಕೆಲಸಕ್ಕೆ ಸೇರುವ ಯೋಚನೆಮಾಡಿದಳು ಜುನಿಯಾ. ಗೋಬರನಿಗೆ ಸಂಪೂರ್ಣ ಗುಣವಾಗಲಿಕ್ಕೆ ಕೆಲವು ತಿಂಗಳುಗಳೇ ಬೇಕಾಗಬಹುದು. ಈಗ ಹೊಟ್ಟೆಯ ಪಾಡಿಗೂ ಆಗಬೇಕು, ಔಷಧೋಪಚಾರಗಳಿಗೂ ಬೇಕು. ಏನಾದರೂ ಸಂಪಾದನೆ ಮಾಡಿ ಹೊಟ್ಟೆಯನ್ನಾದರೂ ತುಂಬಿಸಬೇಡವೆ ?

ಎಳೆತನದಿಂದಲೇ ಅವಳಿಗೆ ದನ ಕರುಗಳನ್ನು ನೋಡಿಕೊಳ್ಳುವ, ಹುಲ್ಲು ಕೊಯ್ದು ತರುವ, ಕೆಲಸದ ಅಭ್ಯಾಸವಿತ್ತು. ಆದರೆ ಇಲ್ಲಿ ಅವರಿಗೆ ದನ ಕರುಗಳೇ ಇಲ್ಲವಲ್ಲ? ದನ ಕರುಗಳಿಲ್ಲದಿದ್ದರೂ ಅವಳು ಹುಲ್ಲು ಕೊಯಿದು ತಂದು ಮಾರಬಹುದು. ಆ ಗಲ್ಲಿಯ ಹೆಣ್ಣು ಗಂಡು ಎಷ್ಟೋ ಜನ ನಗರದ ಹೊರ ಹೋಗಿ ಹುಲ್ಲು ಕೊಯಿದು ತಂದು ಮಾರಿ ದಿನಕ್ಕೆ ೮–೧೦ ಆಣೆ ಸಂಪಾದಿಸುತ್ತಿದ್ದರು.

ಹಾಗಾಗಿ, ಇವಳು ಸಹ ಬೆಳಗ್ಗೆದ್ದು ಮನೆಗೆಲಸ ಮುಗಿಸಿ ಗೋಬರನಿಗೂ ಮಗುವಿಗೂ ಉಣಿಸಿ ಮಗುವನ್ನು ಗೋಬರನಧೀನ ಬಿಟ್ಟು ಹುಲ್ಲು ತರಲಿಕ್ಕೆ ಹೋಗತೊಡಗಿದಳು. ಅಲ್ಲಿ ಸಾಯಂಕಾಲದ ತನಕ ಹುಲ್ಲು ಕೊಯಿದು ಸಂತೆಗೆ ಹೋಗಿ ಮಾರಿ ಕತ್ತಲಾಗುವಾಗ ಚೆನ್ನಾಗಿ ಹಸಿದು ಹಿಂತಿರುಗುತ್ತಿದ್ದಳು. ರಾತ್ರಿ ಸಹ ಗೋಬರನಿಗೆ ನಿದ್ದೆ ಬಂದ ಮೇಲೆ ಮಲಗುತ್ತಿದ್ದಳು. ಅವನಿಗೆಚ್ಚರವಾದಾಗ ಏಳುತ್ತಿದ್ದಳು. ಇಷ್ಟು ಕಷ್ಟಪಟ್ಟರೂ ಸಹ ಅವಳ ಮನಸ್ಸಿಗೆ ಒಳ್ಳೆಯ ನೆಮ್ಮದಿ ಇತ್ತು. ದಾರಿಯಲ್ಲಿ ಒಡನಿರುವ ಸ್ತ್ರೀ ಪುರುಷರೊಡನೆ ವಿನೋದದ ಮಾತುಕತೆಯಾಗುತ್ತಿತ್ತು. ಹುಲ್ಲು ಕೊಯ್ಯುವಾಗಲೂ ನಾಲ್ಕು ಜನರು ಸೇರಿ ನಗು, ಹುಡುಗಾಟ, ನಡೆಯುತ್ತಿತ್ತು. ಪರಿಶ್ರಮಪಟ್ಟು ಕೆಲಸ ಮಾಡುವಾಗ, ಅದರ ಸ್ವತಂತ್ರ ಫಲ ಅನುಭವಿಸುವಾಗ, ಒದಗಿಬರುವ ಸಂತೋಷ ಸಂತೃಪ್ತಿಗಳ ಪ್ರಕಾಶ ಅವಳ ಅಂಗಾಂಗಗಳಲ್ಲೂ ತೋರಿಬರುತ್ತಿತ್ತು. ಮಗು ಬೆಳೆದು ಮೆಲ್ಲನೆ ನಿಲ್ಲ ಕಲಿತು, ಕೈಚಪ್ಪಾಳೆ ಬಡೆದು ಆನಂದ ಪಡುತ್ತಿರುವಾಗ ಆಗುವಂತೆ ಅವಳ ಪರಿಸ್ಥಿತಿಯಾಗಿತ್ತು. ಈಗ ಅವಳ ದೇಹ ಮನಸ್ಸು ಆತ್ಮಗಳೆಲ್ಲದರಲ್ಲೂ ಒಂದು ತರದ ತೃಪ್ತಿ ಸಂತೋಷ ಮೂಡಿ ಬಂದಿತ್ತು. ಈ ತರದ ಒಂದೇ ತಿಂಗಳ ಜೀವನದಿಂದ ಅವಳ ದೇಹಕ್ಕೆ ಕಾಯ-ಕಲ್ಪ ಮಾಡಿದಂತಾಯಿತು. ಕತ್ತಲುಕೋಣೆಯಲ್ಲಿ ಬಿದ್ದುಕೊಂಡು ಅಪಮಾನ, ಕಲಹ, ಹೊಡೆತಗಳಿಂದ ಕುಂಠಿತವಾಗಿದ್ದ ಅವಳ ಯೌವನವು ಈಗ ಹೊರವಲಯದ ಸ್ವಚ್ಛ ಗಾಳಿ ಬೆಳಕುಗಳ ಪ್ರಭಾವದಿಂದ ಪುನಃ ಅರಳಿ ಬಂದಂತಾಗಿತ್ತು.

ಇದಕ್ಕೆ ವಿರುದ್ಧವಾಗಿ ಅತ್ತ ಗೋಬರನು ದೇಹದಲ್ಲಿ ಹುಶಾರಾದರೂ ಮನಸ್ಸಿನಲ್ಲಿ ಉದಾಸೀನನಾಗಿಯೇ ಇರುತ್ತಿದ್ದ. ಈ ಮೊದಲು ಅವನು ಜುನಿಯಳಿಗೆ ಕೊಟ್ಟಿದ್ದ ಆ ಕಷ್ಟ, ಆ ಪೀಡೆ,–ಎಲ್ಲವೂ ಒಂದೊಂದಾಗಿ ಅವನ ಮನಸ್ಸನ್ನು ಕುಕ್ಕುತ್ತಿತ್ತು. ಆಗ ತಾನು ಹಣಸಂಪಾದಿಸುವವನೆಂದು ತೋರಿಸಿದ್ದ ಆ ದರ್ಪ, ಈಗ ಅವಳು ತನ್ನ ಯೋಗಕ್ಷೇಮ ನೋಡಿಕೊಳ್ಳುವಾಗ ತೋರಿಸುವ ಆ ಶಾಂತಿ ಸಮಾಧಾನ – ಇವುಗಳು ಅವನ ಮನಸ್ಸನ್ನು ಪಶ್ಚಾತ್ತಾಪಕ್ಕೀಡು ಮಾಡುತ್ತಿದ್ದುವು. ಇನ್ನು ಅವನ ಜೀವನದ ರೂಪವೇ ಬದಲಾಗಿ ಹೋಗಬಹುದು. ಈ ವರೆಗಿನ ಕರ್ಕಶತೆ ಹೋಗಿ ಮೃದುತೆ, ಗರ್ವದ ಸ್ಥಾನದಲ್ಲಿ ನಮ್ರತೆ, ಇವೆಲ್ಲ ಮೂಡಿಬರಬಹುದು.

ಅಂತು ಪ್ರೇಮಪೂರ್ವಕ ಸೇವೆ ಮಾಡುವ ಸಂದರ್ಭ ಅಪೂರ್ವವಾಗಿಯೇ ಸಿಗಬಹುದು. ಅಂತಹ ಸಂದರ್ಭ ಸಿಕ್ಕಿದರೆ ಅದರ ಸದುಪಯೋಗವನ್ನು ಮಾಡಿಕೊಳ್ಳಲೇಬೇಕು.

೨೩

ನೋಹರಿಯು ಒಳ್ಳೆಯ ಕೆಲಸಮಾಡಿ ಅದನ್ನು ಅಲ್ಲೇ ಬಿಟ್ಟುಬಿಡುವ ಹೆಂಗುಸರ ಜಾತಿಗೆ ಸೇರಿದವಳಲ್ಲ. ತಾನು ಮಾಡಿದ ಮಹತ್ಕಾರ್ಯ ವಿಚಾರದಲ್ಲಿ ಡಂಗುರ ಸಾರಿಸಿಬಿಡಬೇಕು; ಅದರಿಂದ ಸಿಗಬಹುದಾದ ಕೀರ್ತಿಗಿಂತಲೂ ಸ್ವಲ್ಪ ಹೆಚ್ಚಿಗೆಯೇ ಪಡೆಯಬೇಕು – ಎಂಬುದಾಗಿ ಕೈಕಾಲು ಬಡೆದುಕೊಳ್ಳುತ್ತಿದ್ದಳು. ಅಂಥ ಮನುಷ್ಯರಿಗೆ ಕೊನೆಗೆ ಯಶಸ್ಸಿನ ಬದಲಾಗಿ ಅಪಯಶಸ್ಸು ಬರುವ ಸಂದರ್ಭವೇ ಹೆಚ್ಚು. ಒಳ್ಳೆಯ ಕೆಲಸ ಮಾಡಿದ ಮಾತ್ರಕ್ಕೆ ಅಪಕೀರ್ತಿ ಬರಲಾರದು. ಒಳ್ಳೆಯ ಕೆಲಸ ಮಾಡುವ ಇಚ್ಛೆ ಇಲ್ಲವಾದರೆ, ಅಥವಾ ಸಾಮರ್ಥ್ಯವಿಲ್ಲವಾದರೆ, ಅದಕ್ಕಾಗಿ ನಮ್ಮನ್ನಾರೂ ದೂರಲಾರರು. ಆದರೆ ಉಪಕಾರ ಮಾಡಿದ ನಂತರ ಅದರ ಪ್ರತಿಫಲ ಸಿಗಬೇಕೆಂಬುದಾಗಿ, ಹೆಸರು ಪಡೆದುಬಿಡಬೇಕೆಂಬುದಾಗಿ, ಹವಣಿಸಿದರೆ ಆ ಉಪಕಾರ ಪಡೆದ ಮನುಷ್ಯನೇ ನಮ್ಮ ಶತ್ರುವಾಗುತ್ತಾನೆ. ಅವನೇ ನಮ್ಮ ಕೀರ್ತಿಯನ್ನೂ ಕೆಡಿಸುತ್ತಾನೆ.

ನೋಹರಿಯು ಹೋದಲ್ಲೆಲ್ಲ ಹೇಳಲಾರಂಭಿಸಿದ್ದಳು – 'ಪಾಪ ! ಆ ಹೋರಿರಾಮ ಬಹು ಕಷ್ಟದಲ್ಲಿದ್ದ. ಮಗಳ ಮದುವೆಗಾಗಿ ಭೂಮಿ ಮಾರುವುದರಲ್ಲೂ ಇದ್ದ. ಅವನ ಪರಿಸ್ಥಿತಿ ನೋಡಿ ನನಗೆ ದಯೆ ತೋರಿತು. ಆದರೆ ಆ ದನಿಯಳಿದ್ದಾಳಲ್ಲ – ಏನು ಜಂಭ ! ಗರ್ವದಿಂದ ನೆಲದ ಮೇಲೆ ನಡೆಯುವುದೇ ಇಲ್ಲ. ಆದರೆ ಪಾಪ ! ಆ ಹೋರಿರಾಮನ ಚಿಂತೆ ನೋಡಿ ಅವನಿಗೇನಾದರೂ ಸಹಾಯ ಮಾಡಲೇ ಬೇಕು ; ಎಷ್ಟಾದರೂ ನಮ್ಮ ಸಂಬಂಧಿಕನಲ್ಲವೇ ? ಮನುಷ್ಯನು ಮನುಷ್ಯನಿಗೆ ಸಹಾಯವಾಗುವುದು ಬೇಡವೇ ? – ಎಂದೆಣಿಸಿ ರೂಪಾಯಿ ತೆಗೆದುಕೊಟ್ಟೆ. ಇಲ್ಲವಾದರೆ ಹುಡುಗಿ ಇನ್ನೂ ಕಾದೇ ಇರಬೇಕಾಗುತ್ತಿತ್ತು.'

ಆದರೆ ಈ ಹಂಗಿಸುವ ಮಾತುಗಳನ್ನು ದನಿಯಳು ಕೇಳಿಯೂ ಏಕೆ ಸುಮ್ಮನಿದ್ದಾಳು ?–'ರೂಪಾಯಿ ಏನು ಧರ್ಮಕ್ಕೆ ಕೊಟ್ಟಿದ್ದಳೇ ? ಭಾರೀ ದೊಡ್ಡ ದಾನಧರ್ಮ ಮಾಡುವವಳು ! ಸಾಲ ಕೊಟ್ಟಿದ್ದರೆ ಬಡ್ಡಿ ತೆಗೆದು ಕೊಳ್ಳುವುದಿಲ್ಲವೇ ? ಅದರಲ್ಲೇನು ಉಪಕಾರ ? ಬೇರೆ ಯಾರಿಗಾದರೂ ಕೊಟ್ಟಿದ್ದರೆ ಬಡ್ಡಿಯೊಡನೆ ಅಸಲು ಹಣವೂ ಹೋಗುತ್ತಿತ್ತು. ನಾವಾದರೋ ಕೈಗೆ ರೂಪಾಯಿ ಬಂದೊಡನೆ ಅವಳ ಮುಖಕ್ಕೆಸೆದುಬಿಟ್ಟೇವು. ನಾವಾದ್ದ ರಿಂದ ಅವಳ ಕೈಯಿಂದ ಆ ವಿಷ ಹಿಡಿದ ಹಣ ತೆಗೆದುಕೊಂಡೆವು. ಬೇರೆ ಯಾರಾದರೂ ಆಗುತ್ತಿದ್ದರೆ ಆ ಹಣ ಮೂಸಿ ಕೂಡಾ ನೋಡುತ್ತಿದ್ದಿಲ್ಲ. ಹಣ ತೆಗೆದುಕೊಂಡು ಅವಳಿಗೆ ಸ್ವಲ್ಪವಾದರೂ ಮರ್ಯಾದೆ ನಾವು ಕೊಟ್ಟ ಹಾಗಾಯಿತು !'

ರಾತ್ರಿ ಹತ್ತು ಗಂಟೆಯಾಗಿರಬಹುದು. ಶ್ರಾವಣ ಮಾಸದ ಕಗ್ಗತ್ತಲೆ ಹಬ್ಬಿತ್ತು. ಊರೆಲ್ಲ ಕತ್ತಲು ಕವಿದಿತ್ತು. ಹೋರಿರಾಮ ಊಟ ಮುಗಿಸಿ ಹೊಗೆಬತ್ತಿ ಸೇದಿ ಮಲಗುವುದರಲ್ಲಿದ್ದ. ಅಷ್ಟರಲ್ಲಿ ಬೋಲನು ಅಲ್ಲಿ ಬಂದು ಸೇರಿದ.

ಹೋರಿರಾಮ ಆಗ ಕೇಳಿದ–'ಏನು ಬಂದೆ ಬೋಲಣ್ಣ ಈ ಮಧ್ಯ ರಾತ್ರೆಯಲ್ಲಿ ? ಈ ಊರಲ್ಲೇ ಇನ್ನೂ ಇರುವುದೆಂದಾದರೆ ನೀನೇಕೆ ಬೇರೆಯೇ ಒಂದು ಸಣ್ಣ ಗುಡಿಸಲು ಮಾಡಿಕೊಂಡಿರುವುದಿಲ್ಲ ? ಊರಿನ ಜನರೆಲ್ಲ ಏನೇನೋ ಬೇಡದ ಮಾತು ಹೇಳುತ್ತಿರುತ್ತಾರೆ. ಅಲ್ಲ ; ಬೇಸರ ಮಾಡ ಬೇಡ. ಎಷ್ಟಾದರೂ ನೀನು ನಮ್ಮ ಸಂಬಂಧಿಕನಾದ್ದರಿಂದ ಅದನ್ನೆಲ್ಲ ಕೇಳಿ ದಾಗ ನನಗೂ ಬೇಸರವಾಗುತ್ತದೆ. ಇಲ್ಲವಾದರೆ ನನಗೇನು ಅದರಿಂದೆಲ್ಲ ? ಅಷ್ಟೆ.'

ಆಗಲೇ ದನಿಯಳೂ ಕುಡಿಯುವ ನೀರು ಹಿಡಿದುಕೊಂಡು ಹೋರಿ ರಾಮನ ಹಾಸಿಗೆ ಬಳಿ ಇಡಬಂದಳು. ಇವರ ಮಾತುಕತೆ ಕೇಳಿ–'ಬೇರೆ ಗಂಡುಸಾಗಿದ್ದರೆ ಅಂತಹ ಹೆಂಗುಸಿನ ತಲೆ ಕಡಿದುಹಾಕುತ್ತಿದ್ದರು' ಎಂದಳು.

ಆಗ ಹೋರಿರಾಮ ಗದರಿಸಿದ–'ಯಾಕೆ ಅಂತಹ ಬೇಡದ ಮಾತು ಆಡುವೆ ? ನೀರು ಇಲ್ಲಿಟ್ಟು ಹೋಗಿ ಮಲಗಿಕೋ ನೋಡುವಾ. ನೀನೇ ಈಗ ಕೆಟ್ಟ ದಾರಿ ಹಿಡಿಯಹೊರಟರೆ ನಾನು ನಿನ್ನ ತಲೆ ಕಡಿದುಹಾಕಿ ಬಿಡು ವುದೇ ? ಅಥವಾ ಹಾಗೆ ಕಡಿಯಲಿಕ್ಕೆ ನೀನಾದರೂ ಬಿಡುವೆಯಾ ?'

ನೀರಿನ ಪಾತ್ರವನ್ನು ಬಡಕ್ಕನೆ ನೆಲದ ಮೇಲಿಟ್ಟು ದನಿಯಾ ಹೇಳಿದಳು – 'ಕೆಟ್ಟ ದಾರಿಯಲ್ಲಿ ಹೋಗುವುದು ನಿಮ್ಮ ತಂಗಿ. ನಾನೇಕೆ ಅಡ್ಡ ದಾರಿ ಹಿಡಿಯುತ್ತೇನೆ? ಊರವರ ಸಮಾಚಾರ ನಾನು ಹೇಳಹೊರಟರೆ ನೀವೇಕೆ ನನಗೆ ಬೈಯತೊಡಗುವುದು? ಹೆಂಗುಸು ಮನಬಂದಂತೆ ವರ್ತಿಸಿದಾಗ ಗಂಡುಸು ಪಿಳಪಿಳನೆ ನೋಡಿಕೊಂಡು ಇರಬೇಕೇ? ಅಂತಹ ಗಂಡುಸನ್ನು ನಾನು ಗಂಡುಸೆಂದೇ ಹೇಳಲಾರೆ.'

ಹೋರಿರಾಮನ ಮನಸ್ಸಿಗೆ ತುಂಬ ದುಃಖವಾಯಿತು. ಬೋಲನು ಅವನೊಡನೆ ತನ್ನ ದುಃಖ ಸಂಕಷ್ಟಗಳನ್ನು ಹೇಳಬಂದಿದ್ದನೋ – ಏನೋ! ಇದೀಗ ಅವನ ಮೇಲೆಯೇ ಬಿದ್ದಹಾಗಾಯಿತು. ಆದ್ದರಿಂದ ಹೋರಿರಾಮು ಸ್ವಲ್ಪ ಕೋಪದಿಂದಲೇ ಹೇಳಿದ – 'ಇಡೀ ದಿನ ನೀನು ನಿನ್ನಿಷ್ಟ ಬಂದ ಹಾಗೆ ಮಾಡಿದರೆ – ನಾನೇನು ನಿನಗೆ ಮಾಡಬಲ್ಲೆ? ಏನಾದರೂ ಅಡ್ಡ ಹೇಳಿದರೆ ತಿನ್ನಲಿಕ್ಕೇ ಬರುತ್ತಿ. ಅದನ್ನೇ ಯೋಚಿಸು ನೋಡುವಾ.'

ದನಿಯಾ ಮುಚ್ಚುಮರೆ ಮಾಡುವುದನ್ನು ಕಲಿತಳೇ ಅಲ್ಲ. ಅವಳು ಹೇಳಿದಳು–'ಹೆಂಗುಸು ತುಪ್ಪದ ಪಾತ್ರೆಬೇಕಾದರೆ ಒಡೆದು ಹಾಕಲಿ. ಅಥವಾ ಮನೆಗೇ ಬೆಂಕಿ ಕೊಡಲಿ. ಗಂಡುಸು ಸಹಿಸಿಕೊಂಡಿರಬಹುದು. ಆದರೆ ಅವಳು ಕೆಟ್ಟ ದಾರಿಯಲ್ಲಿ ಹೋದರೆ ಮಾತ್ರ ಯಾವ ಗಂಡುಸೂ ಸಹಿಸಲಾರನು, ಸಹಿಸಬಾರದು.'

ಬೋಲನು ಆಗ ದುಃಖಿತ ಸ್ವರದಿಂದ ಹೇಳಿದ – 'ನೀನು ಹೇಳುವುದೆಲ್ಲ ಸರಿ ದನಿಯಾ. ನಿಜವಾಗಿಯೂ ನಾನವಳ ತಲೆ ಕಡಿದುಹಾಕಬೇಕಿತ್ತು. ಆದರೆ ಈಗ ಆ ಮೊದಲಿನ ಪರಾಕ್ರಮವೇ ಇಲ್ಲವಾಗಿದೆ. ನೀನೇ ಬಂದು ಸ್ವಲ್ಪ ತಿಳಿಸು ನೋಡುವಾ. ನಾನು ಎಲ್ಲ ತರದ ಕೆಲಸ ಮಾಡಿಯೂ ಸೋತುಹೋದೆ.'

'ಹೆಂಗುಸನ್ನು ಮುಷ್ಟಿಯೊಳಗಿಟ್ಟುಕೊಳ್ಳಲು ಸಾಧ್ಯವಿಲ್ಲದ ಮೇಲೆ ಮದುವೆಯಾದುದಾದರೂ ಏಕೆ – ಈ ಹಗರಣಕ್ಕಾಗಿಯೆ? ಅವಳು ಬಂದು ಕಾಲು ತಿಕ್ಕಿಯಾಳು; ಗುಡುಗುಡಿ ತುಂಬಿಸಿಕೊಟ್ಟಾಳು; ಬೇನೆ ಬಿದ್ದಾಗ ಸೇವೆ ಮಾಡಿಯಾಳು – ಎಂದೆಲ್ಲ ಎಣಿಸಿದ್ದಿರಾ? ನಿಮ್ಮೊಡನೆ ಯೌವ್ವನದ ಸುಖವನ್ನನುಭವಿಸಿದವಳು ಮಾತ್ರ ಈ ತರದ ಕಷ್ಟಕ್ಕೆ ಅಣಿಯಾದಾಳು. ಈ ಲಂಕಿಣಿಯನ್ನು ನೋಡಿ ನೀವಂತು ಮರುಳಾಗಿಹೋದಿರೆಂದೇ ನನಗೆ

ಗೊತ್ತಾಗುವುದಿಲ್ಲ. ಅವಳ ಸ್ವಭಾವ ಹೇಗೆ, ಬಂಣ ಹೇಗೆ, ಎಂದು ಮೊದಲಾಗಿ ವಿಚಾರಿಸಿಕೊಳ್ಳುವುದು ಬೇಡವೆ? ನೀವೆಂತು ಹಸಿದ ನರಿಯಂತೆ ಹೋಗಿ ಬಿದ್ದಿರೋ ದೇವರು ಬಲ್ಲ! ಇನ್ನು ಈಗ ಮಾಡಬೇಕಾದುದು ಬೇರೇನೂ ಇಲ್ಲ. ಒಂದು ಕತ್ತಿ ತೆಗೆದು ಅವಳ ತಲೆಯನ್ನೇ ಹಾರಿಸಿಬಿಡಬೇಕು. ಹೆಚ್ಚೆಂದರೆ ಗಲ್ಲಾದೀತು. ಈ ಅಪಮಾನಕ್ಕಿಂತ ಗಲ್ಲೇ ಎಷ್ಟೋ ವಾಸಿ.'

ಬೋಲನ ರಕ್ತವೂ ಸ್ವಲ್ಪ ಬೆಚ್ಚಗಾಯಿತು. ಅವನು ಹೇಳಿದ– 'ಹಾಗಾದರೆ ಇದೇ ನಿನ್ನ ಸಲಹೆಯೇ?'

'ಹೌದು; ಇದೇ ನನ್ನ ಸಲಹೆ. ಇನ್ನೇನಾದರೂ ೫೦–೧೦೦ ವರ್ಷ ಬದುಕಲಾರಿರಿ. ಇಷ್ಟೇ ಆಯುಷ್ಯ ಇದ್ದುದೆಂದು ತಿಳಿದುಕೊಂಡರೆ ಸರಿ.'

ಅಷ್ಟರಲ್ಲಿ ಹೋರಿರಾಮ ಚನ್ನಾಗಿ ಗದರಿಸಿದ–'ಮುಚ್ಚು ಬಾಯಿ! ಬಹಳ ದೊಡ್ಡ ಸತ್ಯವಂತಳಿವಳು! ಬಲಾತ್ಕಾರದಿಂದ ಹಕ್ಕಿಯೇ ಗೂಡಿನಲ್ಲಿರುವುದಿಲ್ಲವೆಂದಮೇಲೆ ಮನುಷ್ಯನಿದ್ದಾನೇ? ಆದ್ದರಿಂದ ನೀನವಳನ್ನು ಬಿಟ್ಟೇಬಿಡುವುದು ಒಳ್ಳೇದು ಬೋಲಣ್ಣ. ಸತ್ತೇಹೋದಳೆಂದು ತಿಳಿದುಕೊಂಡು ನಿನ್ನ ಮಕ್ಕಳೊಡನೆ ಸುಖವಾಗಿದ್ದುಬಿಡು. ಎರಡು ಹೊತ್ತು ಏನಾದರೂ ಹೊಟ್ಟೆಗೆ ಹಾಕಿಕೊಂಡು ರಾಮನಾಮ ಜಪಿಸುತ್ತಿರು. ಯೌವನದ ಸುಖವೆಲ್ಲ ಇನ್ನು ಮುಗಿದುಹೋದ ಹಾಗೆಯೇ. ಆ ಹೆಂಗುಸು ಬಹು ಚಂಚಲ ಸ್ವಭಾವದವಳು. ಅವಳಿಂದಾಗಿ ಅಪಕೀರ್ತಿ ಸಂಕಷ್ಟಗಳಲ್ಲದೆ ಬೇರೆ ಯಾವ ಸುಖವೂ ದೊರೆಯಲಾರದು.'

ಬೋಲನು ನೋಹರಿಯನ್ನು ಬಿಟ್ಟುಬಿಡುವುದೆ? ಬಹು ಕಷ್ಟ! ಈಗ ಸಹ ನೋಹರಿಯು ರೋಷಪೂರ್ಣ ದೃಷ್ಟಿಯಿಂದ ನೋಡುತ್ತಿದ್ದಂತೆ ಅವನಿಗೆ ತೋರಿಬಂತು. ಆದರೂ ಚಿಂತೆ ಇಲ್ಲ. ಈ ಸಲ ನೋಡಿಯೇ ಬಿಡಬೇಕು. ಮಾಡಿದ ಕರ್ಮದ ಫಲವನ್ನು ಅವಳು ಅನುಭವಿಸಲೇ ಬೇಕು.

ಅಷ್ಟರಲ್ಲಿ ಅವನು ಕಣ್ಣಲ್ಲಿ ನೀರು ತುಂಬಿಬಂದು ಹೇಳತೊಡಗಿದ– 'ರಾಮಣ್ಣ, ಈ ನೋಹರಿಯಿಂದಾಗಿ ನಾನೆಷ್ಟು ಕಷ್ಟ ಪಡುತ್ತಿದ್ದೇನೆಂಬುದು ನನಗೇ ಗೊತ್ತು. ಇವಳಿಂದಾಗಿಯೇ ನನಗೂ ಕಾಮತನಿಗೂ ಜಗಳವಾಯಿತು. ಈ ಪ್ರಾಯದಲ್ಲಿ ಕೆಟ್ಟ ಹೆಸರೂ ಬಂತು. ಅದರ ಮೇಲೆ–ನಿಮ್ಮ ಮಗಳೇ ಯಾರ್‍ಯಾರೊಟ್ಟಿಗೆ ಹೋಗಿಲ್ಲವೇ ಎಂದು ಇವಳೇ ಹೀಯಾಳಿಸುತ್ತಿದ್ದಾಳೆ! ನನ್ನ ಮಗಳು ಹೊರಟುಹೋದರೂ, ಅಥವಾ ಓಡಿಯೇಹೋದರೂ

ಕೈಹಿಡಿದ ಗಂಡನೊಡನಿದ್ದಾಳೆ. ಅವನ ಸುಖದುಃಖದ ಸಮಭಾಗಿನಿಯಾಗಿದ್ದಾಳೆ. ಆದರೆ ಇವಳಂತಹ ಹೆಂಗುಸನ್ನು ನಾನೀವರೆಗೆ ಕಂಡುದಿಲ್ಲ. ಇತರರನ್ನು ನೋಡಿದಾಗ ನಗಾಡಿ ಮಾತಾಡಿದರೂ ನನ್ನನ್ನು ಕಂಡೊಡನೆ ಉರಿದುಕೊಂಡೇ ಬರುತ್ತಾಳೆ! ನಾನೀಗ ಶೀರಾ ಬಡವನಾದ್ದರಿಂದ ದಿನಕ್ಕೆ ೨-೩ ಆಣೆಯ ಕೂಲಿ ಮಾಡಬೇಕಾಗಿ ಬಂದಿದೆ. ಹಾಗಿರುವಾಗ ಇವಳಿಗೆ ದಿನಾಲೂ ಹಾಲು, ಹಣ್ಣು, ಮೀನು, ಮಾಂಸ ಎಲ್ಲಿಂದ ತರಲಿ?'

ಕೊನೆಗೆ, ಎಷ್ಟಾದರೂ ಇನ್ನು ಮಕ್ಕಳೊಡನೇ ಇದ್ದುಬಿಡುವುದು ಖಂಡಿತ – ಎಂಬುದಾಗಿ ಬೋಲ ಪ್ರತಿಜ್ಞೆ ಮಾಡಿಕೊಂಡು ಅಲ್ಲಿಂದ ಹೊರಟ.

ಆದರೆ ಮರುದಿನ ಹೋರಿರಾಮನು ಗದ್ದೆಯತ್ತ ಹೋಗುವಾಗ ನೋಡುತ್ತಾನೆ—ಬೋಲನು ನೋಹರಿಗಾಗಿ ಹೊಗೆಸೊಪ್ಪು ಹಿಡಿದುಕೊಂಡು ಓಡುತ್ತಿದ್ದಾನೆ! ಆತನನ್ನು ಕರೆಯುವುದು ಎಷ್ಟಾದರೂ ಸರಿಯಲ್ಲವೆಂದು ಹೋರಿರಾಮನು ತಿಳಿದು ಮನೆಯ ಕಡೆ ಬಂದ ಬಳಿಕ ದನಿಯಳೊಡನೆ ಹೇಳಿದ – 'ಬೋಲಣ್ಣ ಇನ್ನೂ ಅಲ್ಲೇ ಇದ್ದಾನೆ. ನೋಹರಿ ಏನೋ ಒಂದು ವಶೀಕರಣ ಮಂತ್ರ ಮಾಡಿರಬೇಕು!'

ದನಿಯಳು ಮುಖ ತಿರುಗಿಸಿ ಹೇಳಿದಳು – 'ಅವಳೆಂತಹ ಮರ್ಯಾದೆ ಕೆಟ್ಟವಳೋ ಅದೇ ರೀತಿ ಮಾನಗೆಟ್ಟವನು ಇವನು. ಇಂತಹ ಗಂಡುಸು ಜೀವಿಸಿರುವುದಕ್ಕಿಂತ ಒಂದು ಗೆರಟೆ ನೀರಲ್ಲಾದರೂ ಬಿದ್ದು ಸಾಯುವುದು ಲೇಸು. ಅಂದಿನ ಆ ಪರಾಕ್ರಮ ಎಲ್ಲಿಗೆ ಹೋಯಿತು ಈಗ? ಅಂದು ಜುನಿಯಳು ಇಲ್ಲಿಗೆ ಬಂದಾಗ ದೊಣ್ಣೆ ಹಿಡಿದುಕೊಂಡು ಬಂದಿದ್ದ! ಅವನ ಮರ್ಯಾದೆ ಕೆಟ್ಟುಹೋಗಿತ್ತಂತೆ! ಈಗ ಮರ್ಯಾದೆ ಧಾರಾಳ ಸಿಕ್ಕಿತಲ್ಲವೆ?'

ಹೋರಿರಾಮನಿಗೆ ಬೋಲನ ಮೇಲೆ ದಯೆ ತೋರಿಬರುತ್ತಿತ್ತು. ಪಾಪ! ಈ ಕುಲಟೆಯ ಬಲೆಯಲ್ಲಿ ಸಿಕ್ಕಿಬಿದ್ದು ತನ್ನ ಜೀವನವನ್ನೇ ಹಾಳುಮಾಡಿಕೊಂಡ! ಅವಳನ್ನು ಬಿಟ್ಟು ಹೋಗಬಹುದು – ನಿಜ. ಆದರೆ ಹೇಗೆ ಹೋಗುವುದು? ಹೆಂಗುಸನ್ನು ಹಾಗೆ ಬಿಟ್ಟುಹೋಗಬರುವುದೆ? ಹೋದರೂ, ಹಿಂಬಾಲಿಸಿಕೊಂಡುಹೋಗಿ ಪಿಶಾಚಿಯಂತೆ ಅವನನ್ನು ಕಾಡಿಯಾಳು! ಮಾತ್ರವಲ್ಲದೆ, ಪಂಚಾತಿಕೆ ಮಾಡಿಸಿ ಅಶನಾರ್ಥಕ್ಕೆ ವ್ಯಾಜ್ಯ ಮಾಡಲಿಕ್ಕೂ ಹಿಂಜರಿಯಲಿಕ್ಕಿಲ್ಲ! ಈಗ ಊರ ಜನರಿಗೆ ಮಾತ್ರ ಗೊತ್ತು. ಹಾಗೆ ಕೋರ್ಟಿಗೆ ಹೋದರೆ ಇಡೀ ದೇಶಕ್ಕೇ ಗೊತ್ತಾದೀತು. ಪಾಪ! – ಗಂಡ

ಕೈಬಿಟ್ಟರೆ ಕೋರ್ಟಿಗೆ ಹೋಗದೆ ಮತ್ತೇನು ಮಾಡಿಯಾಳು, ಎಂಬು ದಾಗಿ ಕೋರ್ಟು ಸಹ ಹೇಳಲಿಕ್ಕಾಯಿತು -- ಮತ್ತೆ! ಗಂಡುಸು ಜೋರಾದರೆ ಹೆಂಗುಸಿನ ಕುತ್ತಿಗೆ ಕಡಿದುಹಾಕುವುದು; ಹೆಂಗುಸು ಜೋರಾದರೆ ಗಂಡನ ಮುಖಕ್ಕೆ ಮಸಿ ಹಚ್ಚುವುದು – ಇದೇ ತಾನೇ ಲೋಕದ ಕತೆ?

ಅದಾಗಿ ಒಂದೆರಡು ತಿಂಗಳ ಬಳಿಕ – ನೋಹರಿ ಬೋಲನಿಗೆ ಮೆಟ್ಟಿಂದ ಸರಿಯಾಗಿ ಹೊಡೆದು ಮಾನ ಕಳೆದುಬಿಟ್ಟಳೆಂಬುದಾಗಿ – ಊರಲ್ಲೆಲ್ಲ ಸುದ್ದಿ ಹಬ್ಬಿತು.

ಮಳೆ ಕಡಿಮೆಯಾಗುತ್ತಾ ಬಂದಿತ್ತು. ಕಡಲೆ, ಹುರುಳಿ, ಮುಂತಾದ ಧಾನ್ಯ ಬಿತ್ತುವ ಸಮಯ ಒದಗಿಬಂತು. ಹೋರಿರಾಮನ ಕಬ್ಬಂತು ಮೊದಲೇ ಏಲವಾಗಿ ಹೋಗಿತ್ತು. ಕಬ್ಬಿನ ಸಸಿಗಳನ್ನು ಕೊಂಡುಕೊಳ್ಳಲಿಕ್ಕೆ ಸಹ ಆತನ ಕೈಯಲ್ಲಿ ರೂಪಾಯಿ ಇದ್ದಿಲ್ಲ. ಅತ್ತ, ಎತ್ತುಗಳಲ್ಲೂ ಬಲ ಬದಿಯ ಎತ್ತು ಕುಂಟತೊಡಗಿದ್ದರಿಂದ ಬೇರೊಂದು ಹೊಸ ಎತ್ತು ತೆಗೆದುಕೊಳ್ಳದೆ ಉಪಾಯವೇ ಇದ್ದಿಲ್ಲ. ಪುನ್ನಿಯ ಒಂದೆತ್ತು ಕಣಿಯಲ್ಲಿ ಬಿದ್ದು ಸತ್ತು ಹೋಗಿತ್ತು. ಆದರಿಂದಾಗಿ ಅವನ ತೊಂದರೆ ಇನ್ನಷ್ಟು ಹೆಚ್ಚಾಗಿಹೋಯಿತು. ಕೊನೆಗೆ ಅವನು ಆ ಎರಡು ಸರಿಯಿದ್ದ ಎತ್ತುಗಳನ್ನು ಒಟ್ಟುಮಾಡಿ ಒಂದು ದಿನ ಪುನ್ನಿಯ ಗದ್ದೆಯನ್ನೂ ಮತ್ತೊಂದು ದಿನ ತನ್ನ ಗದ್ದೆಯನ್ನೂ ಉಳುತ್ತಿದ್ದ. ಅಂತು ಉಳುವ ಕೆಲಸ ಯಾವ ರೀತಿ ಆಗಬೇಕಿತ್ತೋ ಆ ರೀತಿಯಲ್ಲಾಗು ತ್ತಿರಲಿಲ್ಲ.

ನೇಗಿಲು ಹಿಡಿದುಕೊಂಡು ಹೋರಿರಾಮ ಹೊರಟ. ಆದರೆ ಅವನ ತಲೆಯಲ್ಲಿ ಬೋಲನ ಚಿಂತೆಯೇ ಇತ್ತು. ಹೆಂಗುಸು ಗಂಡನಿಗೆ ಮೆಟ್ಟಿನಿಂದ ಹೊಡೆದ ಸಮಾಚಾರವನ್ನು ಜೀವನದಲ್ಲಿ ಅವನೆಂದೂ ಕೇಳಿದ್ದಿಲ್ಲ. ಮೆಟ್ಟಿ ನಿಂದೇಕೆ, ಕೈಯಿಂದ ಸಹ ಗಂಡನಿಗೆ ಹೆಂಡತಿ ಹೊಡೆದ ಘಟನೆ ಕೇಳಿದ್ದು ಅವನಿಗೆ ನೆನಪಾಗುತ್ತಿರಲಿಲ್ಲ! ಅದರಲ್ಲೂ, ಇಂದು ಬೋಲನಿಗೆ ಆ ಬಜಾರಿ ಮೆಟ್ಟಿಂದ ಹೊಡೆಯುವಾಗ ಊರ ಜನರೆಲ್ಲ ಸೇರಿ ತಮಾಷೆ ನೋಡುತ್ತಿದ್ದರಂತೆ! ಈ ಹೆಂಗುಸಿನ ಮುಷ್ಟಿಯಿಂದ ಅವನ ಕುತ್ತಿಗೆ ಯಾವಾಗ ಬಿಡುಗಡೆ ಯಾದೀತೋ–ದೇವರೇ ಬಲ್ಲ. ಇನ್ನು ಬೋಲಣ್ಣ ಎಲ್ಲಿಯಾದರೂ ಬಾವಿಗೆ ಹಾರಿ ಸಾಯುವುದೇ ಸರಿ. ಜೀವನದಲ್ಲಿ ಅಪಕೀರ್ತಿ, ಸಂಕಷ್ಟ ಪರಂಪರೆ, ಎರಡೂ ಬಂದುಬಿಟ್ಟರೆ ಮನುಷ್ಯ ಸಾಯುವುದೇ ಉತ್ತಮ. ಈಗ ಬೋಲ ಸತ್ತರೆ

ಆವನ ಹೆಸರು ಹೇಳಿ ಅಳುವವರಾರಿದ್ದಾರೆ? ಮಗ ಬೇಕಾದರೆ ಉತ್ತರಕ್ರಿಯೆ ಮಾಡಲೂ ಬಹುದು; – ಅದು ಕೂಡಾ ಜನರ ಕಣ್ಣಿಗೆ ಮಣ್ಣುಹಾಕಲಿಕ್ಕಾಗಿ. ಆದರೆ ಯಾರ ಕಣ್ಣಲ್ಲೂ ನೀರು ಬರಲಾರದು. ತನಗಾಗಿ ಅಳುವವರಾರೂ ಇಲ್ಲವಾದಮೇಲೆ ಜೀವನದಾಸೆ ಏತರದು? ಸಾಯಲಿಕ್ಕಾದರೂ ಏಕೆ ಹೆದರಬೇಕು?

ಒಂದೆಡೆ ನೋಹರಿಯ ಕತೆ ಈ ರೀತಿಯಾದರೆ ಇನ್ನೊಂದೆಡೆ ಸಿಲಿಯಳ ಕತೆಯೇ ಬೇರೆ. ಸಿಲಿಯಳು ನೋಡಲಿಕ್ಕೆ ಕೇಳಲಿಕ್ಕೆ – ಎಲ್ಲ, ನೋಹರಿಗಿಂತ ಎಷ್ಟೋ ಪಾಲು ಉತ್ತಮಳು. ಆವಳು ರಾಧಿಕೆಯಂತೆ ತಿರುಗಾಡಿಯೇ ಸುಖದಿಂದ ದಿನ ತೆಗೆಯಬಹುದಾದರೂ ಕೂಲಿಕೆಲಸ ಮಾಡುತ್ತಿದ್ದಾಳೆ. ಹಸಿವೆಯಿಂದ ಕಷ್ಟಪಡುತ್ತಿದ್ದಾಳಾದರೂ ಆ ಮಾತಾದೀನನ ಹೆಸರ ಜಪ ಮಾಡುತ್ತಿದ್ದಾಳೆ. ಆದರೆ ಆ ನಿರ್ದಯಿಯು ಅವಳ ಹೆಸರು ಸಹ ಎತ್ತುವುದಿಲ್ಲ. ಆದರೆ ಯಾರಿಗೆ ಗೊತ್ತು? – ತನ್ನ ದನಿಯಾ ಕೂಡಾ ಸತ್ತುಹೋಗಿದ್ದರೆ ಈ ಹೋರಿರಾಮನ ಕತೆಯೂ ಹಾಗೆಯೇ ಆಗುತ್ತಿತ್ತೋ – ಏನೋ!

ಅವಳ ಮರಣದ ಕಲ್ಪನೆ ಮಾಡಿದ ಮಾತ್ರದಿಂದಲೇ ಆವನ ಮೈಯೆಲ್ಲ 'ಜುಂ' ಎಂದಿತು. ದನಿಯಳ ಆ ಮೂರ್ತಿ ಅವನ ಮಾನಸಿಕ ನೇತ್ರಗಳ ಮುಂದೆ ಬಂದು ನಿಂತಂತಾಯಿತು! ಸೇವೆ ಮತ್ತು ತ್ಯಾಗದ ದೇವಿಯಾಗಿದ್ದಳವಳು. ನಾಲಗೆ ಬಹು ಹರಿತವಾದರೂ ಮೇಣದಂತಹ ಕೋಮಲ ಹೃದಯ! ಒಂದು ಕಾಸಿಗಾಗಿ ಜೀವಕೊಡುವ ಬುದ್ಧಿಯುವಳಾದರೂ, ಮರ್ಯಾದೆಗಾಗಿ ತನ್ನ ಸರ್ವಸ್ವವನ್ನೂ ಹೋಮಮಾಡಲಿಕ್ಕೆ ಸಿದ್ಧಳಾಗುವವಳು! ಪ್ರಾಯಕಾಲದಲ್ಲಿ ಅವಳ ರೂಪವೇನೂ ಕಡಮೆತರದ್ದಲ್ಲ. ಅವಳೆದುರು ನೋಹರಿ ಎಲ್ಲಿ? ನಡೆದುಹೋಗುವಾಗ ರಾಣಿಯಂತೆಯೇ ಕಾಣುತ್ತಿದ್ದಳು ದನಿಯಾ. ನೋಡಿದವನು ನೋಡುತ್ತಲೇ ಇರಬೇಕಾಗುತ್ತಿತ್ತು. ಆ ಪಟೇಶ್ವರಿ, ಜಿಂಗುರಿ–ಮುಂತಾದವರೆಲ್ಲ ಅಂದು ಯುವಕರಾಗಿದ್ದರು. ಅವರೆಲ್ಲ ದನಿಯಳನ್ನು ನೋಡಿದಾಗ ತಮ್ಮ ಎದೆಯ ಮೇಲೆ ಕೈ ಇಟ್ಟುಕೊಳ್ಳುತ್ತಿದ್ದರು. ಮನೆಬಾಗಿಲಲ್ಲಿ ಹಲವು ಸಲ ಸುತ್ತಾಡುತ್ತಿದ್ದರು. ಆದರೆ ತಾನು ನೋಡುತ್ತಲೇ ಇದ್ದುದರಿಂದ ಬಾಯಿ ತೆರೆಯಲಿಕ್ಕೆ ಅವರಿಗೆಡೆಯೇ ಇದ್ದಿಲ್ಲ. ತಾನೆಲ್ಲಿಯಾದರೂ ಹೊರಹೋದಾಗ, ಅವಳೊಬ್ಬಳೇ ಮನೆಯಲ್ಲಿರುತ್ತಿದ್ದಳಾದರೂ ಯಾರಿಗೂ ಆವಳನ್ನು ಮಾತಾಡಿಸುವ ಧೈರ್ಯವಿದ್ದಿಲ್ಲ. ಪಟೇಶ್ವರಿಯೊಮ್ಮೆ ಏನೋ ಸ್ವಲ್ಪ

ತಪ್ಪಿ ಮಾತಾಡಿದುದಕ್ಕೆ ಅವಳು ಎಸೆದಿದ್ದ ಆ ಬಿಸಿ ಬಿಸಿ ಮಾತುಗಳು ಆತನಿಗೆ ಈಗಲೂ ಮರೆತಿರಲಿಕ್ಕಿಲ್ಲ.

ಹೋರಿರಾಮ ಇದನ್ನೆಲ್ಲ ಯೋಚಿಸುತ್ತ ಮುಂದೆ ಸಾಗುತ್ತಿದ್ದ. ಆಗ ಅಕಸ್ಮಾತ್ತಾಗಿ ಮಾತಾದೀನನು ಅವನತ್ತ ಬರುವುದು ತೋರಿಬಂತು. ಎಲ ಎಲಾ! ಎಂತಹ ನಾಮಗಳನ್ನೆಲ್ಲ ಹಾಕಿಕೊಂಡಿದ್ದಾನೆ. ದೇವರ ಪರಮ ಭಕ್ತನೆಂದರೆ ಇವನೇ ಸರಿ! ಬಣ್ಣಗೆಟ್ಟ ನರಿ!

ಮಾತಾದೀನನು ಹತ್ತಿರ ಬಂದು ಹೇಳಿದ– 'ನಿನ್ನ ಬಲ ಬದಿಯ ಎತ್ತು ಬಹಳ ಮುದಿಯಾಗಿಹೋಗಿದೆ ರಾಮಣ್ಣಾ! ನಿನ್ನ ಈ ಸಲದ ಬೇಸಾಯ ಮೇಲೆ ಬೀಳುವುದೇ ಕಷ್ಟ! ಇದನ್ನು ತಂದು ಐದಾರು ವರ್ಷ ದಾಟಿರಬೇಕು.'

ಹೋರಿರಾಮ ಆ ಎತ್ತಿನ ಬೆನ್ನು ತಟ್ಟುತ್ತಾ ಹೇಳಿದ-"ಐದಾರೇನು, ಇವನನ್ನು ಕೊಂಡು ಎಂಟು ವರ್ಷವೇ ಮುಗಿದುಹೋಯಿತು. ಇವನಿಗೆ 'ಪಿನ್ಶನ್' ಕೊಟ್ಟುಬಿಡಬೇಕೆಂಬಾಸೆಯಾಗುತ್ತಿದೆ. ಆದರೆ ರೈತನಿಗೂ ರೈತನ ಎತ್ತಿಗೂ ಪಿನ್ಶನ್ ಕೊಡುವವನು ಯಮರಾಜ ಮಾತ್ರ. ಇವನ ಕುತ್ತಿಗೆಗೆ ನೊಗ ಕಟ್ಟುವಾಗ ತುಂಬಾ ಬೇಸರವಾಗುತ್ತದೆ. ಈತ ಎಣಿಸುತ್ತಿರಬಹುದು – ತನ್ನ ಈ ಎಲುಬಿನ ಗೂಡಿಗೆ ಇನ್ನೂ ನೊಗಕಟ್ಟುತ್ತಿದ್ದಾರಲ್ಲ – ಎಂಬುದಾಗಿ. ಆದರೇನು ಮಾಡುವುದು? ಕೈಗಿಡ್ಡವಾಗಿ ಹೋಗಿದೆ. ಅದಿರಲಿ. ನೀವೆತ್ತ ಹೊರಟಿರಿ? ಈಗ ಸೌಖ್ಯದಲ್ಲಿದ್ದೀರಿ ತಾನೆ?"

ಇತ್ತ ಕೆಲ ದಿನಗಳ ಹಿಂದೆ ಮಾತಾದೀನನಿಗೆ ಮಲೇರಿಯಾ ಜ್ವರ ಬಂದಿತ್ತು. ಒಂದು ದಿನವಂತು ಅವನ ನಾಡಿಯೇ ನಿಂತುಹೋಗಿತ್ತು. ಚಾಪೆಯಿಂದ ತೆಗೆದು ನೆಲದ ಮೇಲೆ ಹಾಕಿಯೂ ಆಗಿತ್ತು. ಅಂದಿನಿಂದ ಅವನ ಮನಸ್ಸಿನಲ್ಲಿ – ಇದು ಸಿಲಿಯಳ ವಿಚಾರದಲ್ಲಿ ತಾನು ಮಾಡಿದ ಅತ್ಯಾಚಾರದ ಫಲವೆಂಬುದಾಗಿ ತೋರಿ ಬರುತ್ತಲಿತ್ತು. ಅವನು ಸಿಲಿಯಳನ್ನು ಹೊರಹಾಕಿದಾಗ ಅವಳು ಬಸುರಿ. ಆಗ ಆತನಿಗೆ ಸ್ವಲ್ಪವೂ ದಯೆ ತೋರಿದ್ದಿಲ್ಲ. ಗರ್ಭ ತುಂಬಿದ ಮೇಲೆಯೂ ಅವಳು ಕೂಲಿ ಮಾಡುತ್ತಲೇ ಇದ್ದಳು. ಆಗ ದನಿಯಳು ದಯೆ ತೋರಿಸದಿರುತ್ತಿದ್ದರೆ ಪಾಪ! ಸತ್ತೇ ಹೋಗುತ್ತಿದ್ದಳು. ಕೂಲಿ ಮಾಡಲಿಕ್ಕೂ ಕೊನೆ ಕೊನೆಗೆ ಕೂಡುತ್ತಿರಲಿಲ್ಲ.

ಆದರೆ ಇಂದು ಮನಕರಗಿದ ಮಾತಾದೀನನು ಹೋರಿರಾಮನ ಮೂಲಕ ಸಿಲಿಯಳಿಗೆ ಮೆಲ್ಲನೆ ಎರಡು ರೂಪಾಯಿಗಳನ್ನು ಕಳುಹಿಸಲಿಕ್ಕೆ ಬಂದಿದ್ದ.

ಹೋರಿರಾಮನು ಆ ರೂಪಾಯಿ ಅವಳಿಗೆ ಮುಟ್ಟಿಸಿದರೆ ದೊಡ್ಡ ಉಪಕಾ
ಮಾಡಿದಂತಾದೀತೆಂದು ತಿಳಿದು ಅವನು ಬಂದಿದ್ದ.

'ನೀವೇ ಹೋಗಿ ಏಕೆ ಕೊಟ್ಟು ಬರಬಾರದು?' – ಹೋರಿರಾಮ
ಕೇಳಿದ ಆಗ.

ಮಾತಾದೀನನು ದೀನ ಭಾವದಿಂದ ಹೇಳಿದ– 'ನನ್ನನ್ನು ಅವಳ ಹತ್ತಿ
ಕಳುಹಿಸಬೇಡ ರಾಮಣ್ಣಾ! ನಾನು ಯಾವ ಮುಖದಿಂದ ಅವಳ ಬ
ಹೋಗಲಿ? ನನ್ನನ್ನು ನೋಡಿದೊಡನೆ ಜೈಯ್ಯಕೊಡಗಿದರೆ–ಎಂಬ ಭಯವ
ಆಗುತ್ತಿದೆ. ನೀನು ಇಷ್ಟೊಂದುಪಕಾರ ಮಾಡಿಬಿಡು. ಅವಳ ಬಳಿ ಈಗ ನಾನ
ಹೋಗಲಾರೆ. ಈ ರೂಪಾಯಿ ಸಂಪಾದಿಸಿ ತರುವುದಕ್ಕೋಸ್ಕರ ಐದಾ
ಮೈಲು ದೂರದ ಪ್ರಯಾಣ ಮುಗಿಸಿ ಬಂದಿದ್ದೇನೆ. ನಾನು ಮಾಡಿದ ಕರ್ಮ
ಫಲ ಧಾರಾಳ ಅನುಭವಿಸಿಯಾಯಿತು. ಗುಟ್ಟಾಗಿ ಎಂತೆಂತಹ ಕೆಲಸ ಮಾ
ದರೂ ಕೇಳುವವರಿಲ್ಲ. ಆದರೆ ಬಹಿರಂಗವಾಗಿ ನಡೆಸಿದರೆ ಇಡೀ ಕುಲವ
ಹಾಳಾಗಿ ಹೋಗುತ್ತದೆ! ಆದ್ದರಿಂದ ನನ್ನ ತಪ್ಪನ್ನು ಮನ್ನಿಸಬೇಕೆಂದ
ನೀನು ಅವಳೊಡನೆ ಹೇಳಿಬಿಡು. ಈ ಧರ್ಮದ ಬಂಧನ ಬಹಳ ಕಠಿ
ವಾದುದು. ಹುಟ್ಟಿಬಂದ ಜಾತಿಯ ಮಾನ ಕಾಪಾಡಲೇಬೇಕು ತಾನೆ? ಅ
ರಲ್ಲೂ ನಮ್ಮ ಈ ಜಾತಿಧರ್ಮವನ್ನು ಹೊಂದಿಕೊಂಡೇ ನಮ್ಮ ಸಂಪಾದನೆ
ನಮ್ಮ ಜೀವನ, ನಮ್ಮ ಮಾನ – ಎಲ್ಲವೂ ಇದೆ. ಈ ಸಲದ ನನ್ನ ಪ್ರಾಯ
ಶ್ಚಿತ್ತಕ್ಕಾಗಿ ಮುನ್ನೂರು ರೂಪಾಯಿ ಮುಗಿದು ಹೋಯಿತು! ಅಂತು ಧರ್
ಪರಿಪಾಲನೆ ಮಾಡುತ್ತಿದ್ದರೇನೇ ದೇವರಿಗೂ ತೃಪ್ತಿಯಾಗುವುದಲ್ಲವೇ?'

ಸಂಧ್ಯಾಕಾಲದಲ್ಲಿ ಹೋರಿರಾಮನು ಮೆಲ್ಲನೆ ಹೋಗಿ ಆ ಎರಡು ರೂಪಾ
ಯಿಗಳನ್ನು ಸಿಲಿಯಳಿಗೆ ಕೊಟ್ಟ. ಅವಳು ಅದನ್ನು ತನ್ನ ದೀರ್ಘ ತಪಸ್ಸಿಗೆ ಫಲ
ವಾಗಿ ದೊರೆತ ವರದಾನವೆಂದು ತಿಳಿದುಕೊಂಡಳು. ದುಃಖದ ಹೊರೆಯ
ನ್ನೇನೋ ಅವಳೊಬ್ಬಳೇ ಹೊರಬಲ್ಲವಳಾಗಿದ್ದಳು. ಆದರೆ ಸುಖದ ಹೊರೆ
ಯನ್ನು ಮಾತ್ರ ಓರ್ವಳೇ ಹೊತ್ತಿರಲಾರಳು. ಈ ಸಂತೋಷ ಸಮಾಚಾರ
ವನ್ನವಳು ಯಾರಿಗೆ ತಾನೆ ಹೇಳಿಯಾಳು? ದನಿಯುಳೊಡನೆ ತನ್ನ ಮನಸ್ಸಿ
ನೊಳಗಿನ ಎಲ್ಲ ಸಮಾಚಾರವನ್ನೂ ಹೇಳಲಾರದವಳಾಗಿದ್ದಳು. ಆ ಊರಲ್ಲಿ
ಅವಳ ಆಪ್ತರಾದವರು ಬೇರೆ ಯಾರೂ ಇದ್ದಿಲ್ಲ. ಅವಳ ಆಪ್ತ ಗೆಳತಿಯೆಂದರೆ
ಸೋನೆಯೊಬ್ಬಳೇ. ಆ ಸೋನೆಯನ್ನು ಆಗಲೇ ಒಮ್ಮೆ ಕಂಡು ಬರಬೇಕೆಂದು

ಅವಳಿಗಾಸೆಯಾಯಿತು. ಈಗವಳು ಅನಾಥಳಲ್ಲ! ಮಾತಾದೀನನು ಪುನಃ ಅವಳ ಕೈಹಿಡಿದಂತೆಯೇ ಸರಿ. ಜೀವನಪಥವು ಅವಳ ಮಟ್ಟಿಗೆ ಅಂಧಕಾರ ಮಯ, ವಿಕರಾಳ ಅರಣ್ಯದಂತಲ್ಲ! ಅದೀಗ ಖಿಲಖಿಲನೆ ಅರಳಿ ಬಂದಿರುವ ಮರಬಳ್ಳಿಗಳ ಸಾಲುಗಳಿಂದ ಕೂಡಿದ ಸುಂದರ ಉಪವನವಾಗಿ ಕಂಡುಬಂತು. ಒಣಗಿಹೋಗಿದ್ದ ಅವಳ ಆ ಸ್ನೇಹವು ಇಂದು ಉಬ್ಬಿಬಂದಂತಾಯಿತು. ಈ ವರೆಗೆ ಅವಳು ಮಾತಾದೀನನನ್ನು ಕೆಲಮಟ್ಟಿಗೆ ನಿಂದಿಸಿದ್ದಳು. ಅದ ಕ್ಕವಳು ಈಗ ಕ್ಷಮೆ ಕೇಳತೊಡಗಿದಳು.

ಇಷ್ಟರ ತನಕ ಅವಳ ದೃಷ್ಟಿಯಲ್ಲಿ ಎಲ್ಲ ತಪ್ಪೂ ಮಾತಾದೀನನದೇ ಆಗಿತ್ತು. ಆದರೆ ಈಗ ಎಲ್ಲ ತಪ್ಪೂ ತನ್ನದೇ ಎಂದು ತೋರಿಬಂತು. ಅಂತು ಸಹೃದಯತೆಯು ಸಹೃದಯತೆಯನ್ನುಂಟುಮಾಡಿತು. ಅವಳು ಮಗುವ ನ್ನೆತ್ತಿಕೊಂಡು ಚೆನ್ನಾಗಿ ಮುದ್ದಾಡಿದಳು. ಈಗ ಅವಳಿಗೆ ಆ ಮಗುವನ್ನು ನೋಡಿ ಲಜ್ಜೆಬೇಸರ ಆಗುವಂತಿದ್ದಿಲ್ಲ. ಈಗ ಅವನು ಅವಳ ದಯೆಗೆ ಪಾತ್ರನು ಮಾತ್ರವಲ್ಲ, ಅವಳ ಸಂಪೂರ್ಣ ಮಾತೃಸ್ನೇಹ ಅಭಿಮಾನಗಳ ಅಧಿಕಾರಿ.

ಕಾರ್ತಿಕ ಮಾಸದ ಸುಂದರ ಚಂದ್ರಿಕೆಯು ಪ್ರಕೃತಿದೇವಿಯನ್ನು ಮಧುರ ಸಂಗೀತದಿಂದ ಆನಂದಗೊಳಿಸುತ್ತಿದ್ದಂತೆ ತೋರುತ್ತಿತ್ತು. ಆ ಸಂದರ್ಭ ದಲ್ಲೇ ಸಿಲಿಯಾಳು ಮಗುವನ್ನು ಮಲಗಿಸಿ ಮನೆಯಿಂದ ಹೊರಟಳು. ಈ ಸಂತೋಷ ಸಮಾಚಾರವನ್ನು ಆಗಲೇ ಹೋಗಿ ಸೋನೆಗೆ ತಿಳಿಸುವ ವರೆಗೆ ಅವ ಳಿಗೆ ತೃಪ್ತಿಯಿದ್ದಿಲ್ಲ. ಅವಳು ಹೊರಟೇಬಿಟ್ಟಳು. ನದಿಯ ದಡದಲ್ಲಿ ಬಂದು ನೋಡಿದಾಗ – ದೋಣಿ ಆಚೆಯ ದಡದಲ್ಲಿತ್ತು. ಅಂಬಿಗನ ಸುಳಿವೇ ಇದ್ದಿಲ್ಲ. ಬೆಳುದಿಂಗಳು ಕರಗಿ ನದಿಯ ಪ್ರವಾಹದಲ್ಲಿ ಹರಿಯುತ್ತಿದೆಯೋ ಎಂಬಂತಿತ್ತು. ಅವಳು ಒಂದು ಕ್ಷಣದಮಟ್ಟಿಗೆ ಅಲ್ಲೇ ನಿಂತು ಯೋಚಿಸಿ ನೋಡಿದಳು. ಬಳಿಕ ನದಿಗೆ ಇಳಿದೇ ಬಿಟ್ಟಳು. ನದಿಯಲ್ಲಿ ಅಷ್ಟೇನು ನೀರು ಇರಲಾರದು ತಾನೆ? ಅವಳ ಆ ಉಲ್ಲಾಸಸಾಗರದ ಎದುರು ಈ ನದಿ ಎಷ್ಟರದು? ನೀರು ಮೊದಲು ಮೊಣಕಾಲಿನ ವರೆಗೆ, ಮತ್ತೆ ಸೊಂಟದ ವರೆಗೆ, ಕೊನೆಗೆ ಕುತ್ತಿಗೆಯ ವರೆಗೂ ಬಂತು. ಎಲ್ಲಿಯಾದರೂ ಮುಳುಗಿಹೋದರೆ? – ಎಂಬ ಭಯವೂ ಆಯಿತು. ಆದರೂ ಜೀವದಾಸೆ ಬಿಟ್ಟು ಮುಂದೆ ಮುಂದೆ ಹೋದಳು. ಅವಳಿಗೆ ಸ್ವಲ್ಪ ಸ್ವಲ್ಪ ಈಜಲಿಕ್ಕೆ ಗೊತ್ತಿದ್ದುದರಿಂದ ವಿಶೇಷ ಗಾಬರಿಯಾಗಲಿಲ್ಲ. ಎಳೆ ತನದಲ್ಲಿ ಈ ನದಿಯಲ್ಲೇ ಎಷ್ಟೋ ಸಲ ಅವಳು ಈಜಾಡಿದ್ದಳು. ಅಂತು,

ಹಾಗೂ ಹೀಗೂ ನದಿ ದಾಟಿದಳು. ಅವಳ ಎದೆ ಬಡ ಬಡ ಹೇಳುತ್ತಲೇ ಇತ್ತು. ಕೊನೆಗೆ ದಡದಲ್ಲಿ ನಿಂತು ತನ್ನ ಬಟ್ಟೆಯನ್ನು ಹಿಂಡಿಕೊಂಡು ಚಳಿ ಯಿಂದ ನಡುಗಿಕೊಂಡೇ ಮುಂದೆ ಹೋದಳು. ಎಲ್ಲೆಡೆಯಲ್ಲೂ ನಿಶ್ಯಬ್ದತೆ ಹಬ್ಬಿಹೋಗಿತ್ತು. ನಾಯಿಗಳ ಬೊಗಳಾಟ ಸಹ ಕೇಳುತ್ತಿದ್ದಿಲ್ಲ. ಆದರೂ ಸೋನೆಯನ್ನು ನೋಡಬೇಕೆಂಬಾಸೆ ಅವಳನ್ನು ಮುಂದೆ ಮುಂದೆ ಸಾಗಿಸುತ್ತಿತ್ತು.

ಆದರೆ ಸೋನೆಯ ಮನೆಯ ಹತ್ತಿರ ಹೋಗುವಾಗ ಅವಳಿಗೆ ಸಂಕೋಚ ವಾಗತೊಡಗಿತು. ಮಧುರಣ್ಣ ಏನು ಹೇಳುತ್ತಾನೋ ಏನೋ! ಅವನ ಮನೆ ಯವರು ಏನೆನ್ನುವರೋ ಏನೋ! ಈ ಅಪರಾತ್ರಿಯಲ್ಲಿ ಏಕೆ ಬಂದೆಯೆಂದು ಸೋನೆಯೂ ಕೋಪಿಸಿಕೊಳ್ಳುವಳೋ ಏನೋ!

ಹಳ್ಳಿಗಳಲ್ಲಿ ದಿನವಿಡೀ ಕೆಲಸ ಮಾಡಿ ಸೋತು ಹೋದ ರೈತರೆಲ್ಲ ಕತ್ತಲಾದೊಡನೆ ಮಲಗಿಬಿಡುತ್ತಾರೆ. ಇಡೀ ಊರೇ ನಿದ್ದೆಯಲ್ಲಿ ಮುಳುಗಿ ಹೋದಂತಿತ್ತು ಆಗ. ಹತ್ತಿರ ಹೋಗಿ ನೋಡುವಾಗ ಮಧುರಣ್ಣನ ಮನೆಯ ಬಾಗಿಲು ಮುಚ್ಚಿತ್ತು. ಅಲ್ಲಿಯೇ ಹಟ್ಟಿಯ ಒಲೆಯಲ್ಲಿ ಬೆಂಕಿ ಉರಿಯುತ್ತಿತ್ತು. ಆ ಶಾಖಕ್ಕೆ ಸಿಲಿಯಳು ತನ್ನ ಬಟ್ಟೆ ಒಣಗಿಸಲಾರಂಭಿಸಿದಳು. ಅಷ್ಟರಲ್ಲಿ ಫಕ್ಕನೆ ಬಾಗಿಲು ತೆರೆಯಿತು. ಮಧುರಣ್ಣ ಹೊರಬಂದು ಕೇಳಿದ – 'ಎಲೆ, ಅದಾರು ಒಲೆಯ ಹತ್ತಿರ ಕೂತುಕೊಂಡುದು?'

ಸಿಲಿಯಾ ಫಕ್ಕನೆ ತನ್ನ ಬಟ್ಟೆ ಸರಿಮಾಡಿಕೊಂಡು ಅವನ ಹತ್ತಿರ ಬಂದು – 'ಇದು – ನಾನು ಸಿಲಿಯಾ' ಎಂದಳು.

'ಸಿಲಿಯಾ! ಈ ಮಧ್ಯರಾತ್ರಿಯಲ್ಲಿ ಹೇಗೆ ಬಂದೆ? ಅಲ್ಲೆಲ್ಲ ಸೌಖ್ಯವಾಗಿ ದ್ದಾರೆ ತಾನೆ?'

'ಹೌದು; ಎಲ್ಲರೂ ಸೌಖ್ಯವಾಗಿದ್ದಾರೆ. ಏನೋ ಮನಸ್ಸಿಗೆ ಬೇಸರ ವಾಯಿತು. ನಿಮ್ಮನ್ನೆಲ್ಲ ನೋಡಿ ಹೋಗುವಾ ಎಂದು ಬಂದೆ. ಹಗಲಿಗೆ ಸಮಯ ಸಿಕ್ಕಿಲ್ಲ. ಹಾಗಾಗಿ ಈಗ ಬಂದೆ.'

'ಏನು, ನದಿ ದಾಟಿಕೊಂಡೇ ಬಂದೆಯಾ?'

'ಹೌದು; ಮತ್ತೆ ಹೇಗೆ ಬರುವುದು? ಆದರೆ ನೀರು ಹೆಚ್ಚಿಗಿರಲಿಲ್ಲ.'

ಮಧುರನು ಅವಳನ್ನು ಒಳಗೆ ಕರೆದುಕೊಂಡು ಹೋದ. ಒಳ ಜಗುಲಿಯಲ್ಲಿ ಕತ್ತಲೆ ಕವಿದಿತ್ತು. ಮೆಲ್ಲನೆ ಅವನು ಅವಳ ಕೈಹಿಡಿದು ತನ್ನ ಹತ್ತಿರಕ್ಕೆಳೆದ. ಅವಳು ಸರಕ್ಕನೆ ತನ್ನ ಕೈಬಿಡಿಸಿಕೊಂಡು – 'ನೋಡು ಮಧುರಾ, ನನ್ನ

ಸುದ್ದಿಗೆ ಬಂದರೆ ಸೋನೆಯೊಡನೆ ಹೇಳಿಬಿಟ್ಟೇನು. ನೀನು ನನ್ನ ತಮ್ಮನಂತಿರುವೆ. ನಿನಗೇನು, ಸೋನೆಯೊಡನೆ ಸರಿಬೀಳುವುದಿಲ್ಲವೇ?' ಎಂದಳು.

ಮಥುರನು ಅವಳ ಬಾಯಿಗೆ ಕೈಹಿಡಿದು ಹೇಳಿದ– 'ನೀನು ಬಹು ನಿಷ್ಠುರ ಸ್ವಭಾವದವಳು – ಸಿಲ್ಲೂ. ಈಗ ಯಾರು ನೋಡುತ್ತಾರೆ ಇಲ್ಲಿ?'

'ನಾನೇನು ಸೋನೆಗಿಂತಲೂ ಸುಂದರಿಯೇ? ನಿನ್ನ ಪುಣ್ಯದಿಂದ ದೇವ ಲೋಕದ ಅಪ್ಸರೆಯನ್ನು ಪಡೆದು ಕೂಡಾ ಹುಚ್ಚುಗಟ್ಟುತ್ತಿರುವೆಯಲ್ಲಾ? ಅವಳೊಡನೆ ನಾನೀಗ ಬಾಯಿಬಿಟ್ಟರೆ ನಿನಗೆ ಮಂಗಳಾರತಿಯಾದೀತು.'

ಮಥುರನು ಲಂಪಟಸ್ವಭಾವದವನಲ್ಲ. ಸೋನೆಯಲ್ಲಿ ಅವನಿಗೆ ಒಳ್ಳೆಯ ಪ್ರೇಮವೂ ಇತ್ತು. ಆದರೆ ಈಗಿನ ಈ ಸಂದರ್ಭದಲ್ಲಿ – ಕತ್ತಲು, ಏಕಾಂತ ಹಾಗೂ ಸಿಲಿಯಳ ಯೌವನ, ಇವನ್ನೆಲ್ಲ ನೋಡಿ ಅವನ ಮನಸ್ಸು ಚಂಚಲವಾಗಿಹೋಯಿತು. ಈ ಬಿಸಿ ಬಿಸಿ ಮಾತು ತಾಗಿದೊಡನೆ ಅವನಿಗೆ ಪ್ರಜ್ಞೆ ಬಂತು. ಅವನು ಅವಳ ಕೈಬಿಟ್ಟು ಹೇಳಿದ– 'ನಿನ್ನ ಕಾಲಿಗೆ ಬೀಳುತ್ತೇನೆ ಸಿಲ್ಲೂ – ಅವಳೊಡನೆ ಬಾಯಿಬಿಡಬೇಡ. ಏನು ಶಿಕ್ಷೆ ಬೇಕಾದರೂ ನೀನೇ ಕೊಟ್ಟುಬಿಡು.'

ಸಿಲ್ಲುವಿಗೆ ಅವನ ಮೇಲೆ ದಯೆ ಬಂತು. ಅವಳು ಮೆಲ್ಲನೆ ಅವನ ಕೆನ್ನೆಗೊಂದು ಏಟು ಏರಿಸಿ ಹೇಳಿದಳು–'ಅದಕ್ಕಿದೇ ಶಿಕ್ಷೆ. ಇನ್ನು ಮುಂದೆ ನನ್ನೊಡನೆ ಸರಸವಾಡಬೇಡ. ಹೀಗೆ ಬೇರೆ ಯಾರ ಹತ್ತಿರವೂ ಮಾಡಬೇಡ. ಹಾಗೆಲ್ಲ ಮಾಡಿದರೆ ಸೋನೆ ನಿನ್ನನ್ನು ಬಿಟ್ಟೇ ಹೋದಾಳು.'

'ಎಂದಿಗೂ ಇನ್ನು ಹೀಗೆ ಮಾಡೆನು – ಪ್ರಮಾಣ ಮಾಡಿ ಹೇಳುತ್ತೇನೆ.'

ಅವನ ಸ್ವರದಲ್ಲಿ ಯಾಚನೆ ಇತ್ತು. ಅದರಿಂದ ಸಿಲ್ಲುವಿನ ಮನಸ್ಸಿನಲ್ಲಿ ಒಂದು ತರದ ಆಂದೋಲನವುಂಟಾಯಿತು. ತಾನು ತೋರಿಸುವ ದಯೆಯೂ ಒಂದು ತರದ ಸರಸವಾಗಿ ತೋರಿಬರಲಾರಂಭಿಸಿತು ಅವಳಿಗೆ.

'ಒಂದು ವೇಳೆ ನೀನು ಹಾಗೆ ಮಾಡಿದರೆ?'

'ನಿನಗಿಷ್ಟ ಬಂದಂತೆ ಮಾಡು.'

ಸಿಲ್ಲುವಿನ ಮುಖವು ಅವನ ಮುಖದ ಹತ್ತಿರ ಬಂದಿತ್ತು. ಅವರಿಬ್ಬರ ಶ್ವಾಸ, ಸ್ವರ, ಹಾಗೂ ದೇಹಗಳಲ್ಲಿ ಕಂಪನೆಯುಂಟಾಗಿತ್ತು. ಆಗ ಥಕ್ಕನೆ ಸೋನೆಯ ಸ್ವರ ಕೇಳಿ ಬಂತು – 'ಅಲ್ಲಿ ಯಾರೊಡನೆ ಮಾತಾಡುತ್ತಿದ್ದೀರಿ?'

ಸಿಲ್ಲು ಹಿಂದಕ್ಕೆ ಸರಿದಳು. 'ನಿನ್ನ ಊರಿಂದ ಸಿಲ್ಲು ಬಂದಿದ್ದಾಳೆ' — ಮಥುರ ಮುಂದೆ ಹೋಗಿ ಹೇಳಿದ.

ಸಿಲಿಯಳೂ ಸರಿದುಕೊಂಡು ಹೋಗಿ ದೂರ ನಿಂತಳು. ಅವಳು ಸೋನೆಯತ್ತ ನೋಡಿದಳು — ಸೋನೆ ನಿಜವಾಗಿಯೂ ಅಲ್ಲಿ ಸುಖವಾಗಿದ್ದಾಳೆ. ಒಳ ಕೋಣೆಯಲ್ಲಿ ಸುಂದರ ಮಂಚವಿದೆ. ಅದರ ಮೇಲೆ ಮೆತ್ತಗಾದ ಹಾಸಿಗೆ ಹಾಸಿದೆ. ಅದು ಮಾತಾದೀನನ ಸುಂದರ ಮಂಚವನ್ನು ಎಲ್ಲ ವಿಧದಿಂದಲೂ ಮೀರಿದ್ದಿತು. ಸುಂದರ ತಲೆದಿಂಬುಗಳೂ ಇವೆ. ಮಂಚದ ಹತ್ತಿರವೇ ಒಂದು ಚಿಕ್ಕ ಮೇಜಿನ ಮೇಲೆ ಹಾಲಿನ ಪಾತ್ರೆ. ವಿಶಾಲ ಅಂಗಳದಲ್ಲಿ ಬೆಳುದಿಂಗಳು, ಬಿಡಿಸಿಟ್ಟ ದೊಡ್ಡ ಕನ್ನಡಿಯಂತೆ ಹೊಳೆಯುತ್ತಿದೆ. ಅಂಗಳದ ಮಧ್ಯದಲ್ಲಿ ತುಳಸೀಕಟ್ಟೆ. ಮತ್ತೊಂದೆಡೆಯಲ್ಲಿ ಧಾನ್ಯದ ದೊಡ್ಡ ಕಣಜ. ಬೇರೊಂದೆಡೆಯಲ್ಲಿ ದೊಡ್ಡ ದನ ಒಂದನ್ನು ಕಟ್ಟಲಾಗಿದೆ. ಈ ಕೋಣೆಯಲ್ಲೇ ಸೋನೆ ಮತ್ತು ಮಥುರ ಮಲಗುತ್ತಾರೆ! ಸಿಲಿಯಳೆಣಿಸಿದಳು — ಸೋನೆಯ ಜೀವನವು ಎಷ್ಟು ಸುಖಮಯವಾಗಿದೆ!

ಆಗ ಸೋನೆ ಸಮೀಪ ಬಂದಳು. ಕೈಯಲ್ಲೊಂದು ದೀಪವಿತ್ತು. ಆದರೆ ಬಂದವಳು ಪ್ರೀತಿಯಿಂದ ಸಿಲ್ಲುವನ್ನಪ್ಪಿಕೊಳ್ಳಲಿಲ್ಲ. ಪ್ರಾಯಶಃ ಮಥುರನು ಅಲ್ಲೇ ಇದ್ದ ಕಾರಣ ಅವಳು ಸಂಕೋಚಪಡುತ್ತಿರಬೇಕೆಂದು ಸಿಲ್ಲು ಎಣಿಸಿದಳು. ಅಥವಾ ಯಾರು ಬಲ್ಲರು? ಅಹಂಕಾರವೇನಾದರೂ ಏರಿಹೋಗಿದೆಯೋ ಏನೋ! ಸಮಗಾರಳನ್ನು ಅಪ್ಪಿಕೊಂಡರೆ ತನಗೆ ಅಪಮಾನವಾಗಬಹುದೆಂದು ತಿಳಿದಿರಲೂ ಸಾಕು.

ಅಂತು ಸಿಲಿಯಳ ಉತ್ಸಾಹವೆಲ್ಲ ಕರಗಿಹೋಯಿತು. ಈ ಮಿಲನದಿಂದಾಗಿ ಸಂತೋಷದ ಬದಲು ಒಂದು ತರದ ಮಾತ್ಸರ್ಯವೇ ಮೂಡಿಬರುವಂತಾಯಿತು. ಸೋನೆಯ ಮುಖಬಣ್ಣ ಎಷ್ಟು ಮನಮೋಹಕ! ದೀಪದ ಬೆಳಕಿನಲ್ಲಿ ದೇಹದ ವರ್ಣವೂ ಚಿನ್ನದಂತೆ ಹೊಳೆಯುತ್ತದೆ! ಮಾತ್ರವಲ್ಲದೆ ದೇಹವು ಸುಂದರವಾಗಿ ತುಂಬಿಯೂ ಬಂದಿದೆ. ಮುಖದ ಮೇಲೆ ಗೃಹಿಣೀತ್ವದ ಗೌರವ ಮತ್ತು ಯೌವನದ ಸಹಾಸಕಾಂತಿ ಉದಯಿಸಿ ಏರುತ್ತಲಿದೆ. ಸಿಲ್ಲು ಒಂದು ಕ್ಷಣದ ಮಟ್ಟಿಗೆ ಮಂತ್ರಮುಗ್ಧಳಂತೆ ನೋಡುತ್ತಾ ನಿಂತುಕೊಂಡಳು. ಹಿಂದೆ — ಹರಕಲು ಬಟ್ಟೆಯುಟ್ಟುಕೊಂಡು, ಕೆದರಿದ ಕೂದಲು ಮತ್ತು ಬಾಡಿದ ಮುಖದಿಂದ ಕೂಡಿದ್ದ ಆ ಸೋನೆ ಇವಳೇ ಹೌದೇ ಅಲ್ಲವೇ—

ಎಂದು ಸಂದೇಹ ಬರುವಂತೆಯೂ ಆಯಿತು. ಆದರೆ ಇಂದು ಅವಳು ಗೃಹ ರಾಣಿಯಾಗಿದ್ದಾಳೆ! ಕುತ್ತಿಗೆಯಲ್ಲಿ ಮುತ್ತಿನ ಸರವಿದೆ. ಕೈಯಲ್ಲಿ ಚಿನ್ನದ ಬಳೆಯಿದೆ. ಕಣ್ಣಲ್ಲಿ ಕಾಡಿಗೆ, ಹಣೆಯಲ್ಲಿ ಕುಂಕುಮ. ಸಿಲಿಯಳು ಬಯಸಿದ ಜೀವನದ ಸ್ವರ್ಗವೂ ಇದೇ ಆಗಿತ್ತು. ಆದರೆ ಇಂದು ಸೋನೆಯನ್ನಲ್ಲಿ ಕಂಡು ಅವಳ ಮನಸ್ಸಿಗೆ ಆನಂದವಾಗಲಿಲ್ಲ. ಆಹಾ! ಇವಳಿಗೀಗ ಎಷ್ಟು ಗರ್ವ ಏರಿದೆ? ಹಿಂದಕ್ಕೆ ತನ್ನ ಹೆಗಲ ಮೇಲೆ ಕೈಹಾಕಿಕೊಂಡು ಹುಲ್ಲು ಕೊಯ್ಯ ಲಿಕ್ಕೆ ಹೋಗುತ್ತಿದ್ದವಳು ಇಂದಿಗೆ ಸರಿಯಾಗಿ ಕಣ್ಣೆತ್ತಿ ನೋಡುವುದೂ ಇಲ್ಲ. ನೋಡಿದೊಡನೆ ತನ್ನನ್ನಪ್ಪಿಕೊಂಡು ಈ ಸೋನೆ ಸ್ವಲ್ಪ ಹೊತ್ತು ಅಳಬಹುದು! ಆದರದಿಂದ ಕೂತುಕೊಳ್ಳಿಸಿ ಮನೆಯ ಸಮಾಚಾರಗಳನ್ನೆಲ್ಲ ಕೇಳಬಹುದು; ಒಳ್ಳೊಳ್ಳೆಯ ತಿಂಡಿ ತೀರ್ಥಗಳನ್ನಿತ್ತು ತನ್ನ ಸ್ವಂತ ವಿಚಾರ ಹೇಳಬಹುದು; ಪ್ರಥಮ ರಾತ್ರಿಯ ಮಧುರ ಮಿಲನದ ಸಮಾಚಾರವನ್ನು ಗುಟ್ಟಾಗಿ ವಿವರಿಸ ಬಹುದು – ಎಂದು ಮೊದಲಾಗಿ ಎಣಿಸಿದ ಸಿಲಿಯಳಿಗೆ ಇಲ್ಲಿ ಈಗ ದೊರಕಿದ್ದು ಈ ತರದ ಅನಾದರ! ಅಂತು, ಅಲ್ಲಿಗೆ ಬಂದುದಕ್ಕಾಗಿ ಪಶ್ಚಾತ್ತಾಪ ಪಡುವಂತಾ ಯಿತು ಅವಳು.

ಅಂತೂ ಸೋನೆಯು ಸ್ವಲ್ಪ ಕಠಿಣ ಸ್ವರದಿಂದ ಕೇಳಿದಳು – 'ಇಷ್ಟು ರಾತ್ರೆ ದಾಟಿದ ಮೇಲೆ ಹೇಗೆ ಬಂದೆ ಸಿಲ್ಲೂ?'

'ನಿನ್ನನ್ನು ನೋಡಿ ಹೋಗಬೇಕೆಂದು ಬಹಳ ಆಸೆಯಾಗಿತ್ತು. ನೋಡಿ ಬಹಳ ದಿನಗಳಾದ್ದರಿಂದ ಕಂಡುಹೋಗಲಿಕ್ಕಾಗಿ ಬಂದೆ' – ಸಿಲ್ಲುವು ಕಣ್ಣೀರು ತಡೆದುಕೊಳ್ಳಲಿಕ್ಕೆ ಪ್ರಯತ್ನಿಸುತ್ತಾ ಹೇಳಿದಳು.

ಸೋನೆಯ ಸ್ವರ ಮತ್ತೂ ಕಠಿಣವಾಯಿತು – 'ಆದರೆ ಇನ್ನೊಬ್ಬರ ಮನೆಗೆ ನೋಡ ಹೋಗುವುದಿದ್ದರೆ ಹಗಲು ಹೊತ್ತು ಹೋಗುವುದೇ? – ಅಥವಾ ರಾತ್ರಿಯೇ?'

ನಿಜಸ್ಥಿತಿಯಾದರೆ ಆ ಸಮಯದಲ್ಲಿ ಸಿಲ್ಲು ಬಂದುದು ತೀರಾ ಬೇಸರಕ್ಕೆ ಕಾರಣವಾಗಿತ್ತು. ಆ ಸಮಯವು ಅವರ ಹಾಸವಿಲಾಸಗಳ, ಪ್ರೇಮಕ್ರೀಡೆಯ ಮಯ. ಅದಕ್ಕೆ ಸಿಲ್ಲು ಅಡ್ಡಬಂದು ಬಡಿಸಿಟ್ಟ ಊಟದ ಬಟ್ಟಲನ್ನು ಕಿತ್ತು ಕೊಂಡಂತಾಯಿತು.

ಸಿಲ್ಲು ಪ್ರಜ್ಞಾರಹಿತಳಂತೆ ನೆಲ ನೋಡುತ್ತ ಇದ್ದಳು. ಭೂಮಿಯೇ ಒಡೆದುಹೋಗಿ ಅದರೊಳಗೆ ತಾನೇಕೆ ಮುಳುಗಿ ಹೋಗಿಲ್ಲವೆಂಬಂತಾಯಿತ

ಅವಳಿಗೆ. ಎಂತಹ ಅಪಮಾನ! ಅವಳು ತನ್ನ ಜೀವನದಲ್ಲಿ ಬಹು ವಿಧದ ಅ
ಮಾನ, ದುರ್ದಶೆಗಳನ್ನು ಅನುಭವಿಸಿದ್ದಳು. ಆದರೆ ಬಲವಾಗಿ ಎದೆಗೆ ನಾ
ಹೋಗುವ ಅಪಮಾನದ ಇಂತಹ ಬಾಣ ಎಂದಿಗೂ ತಾಗಿದ್ದಿಲ್ಲ. ಆಗ ಅವಳಿ
ಅತಿಯಾದ ವೇದನೆಯಾಗತೊಡಗಿತು. ಮನೆಯಲ್ಲೇ ಉಪವಾಸವಿದ್ದರೆ ಅ
ವಿಚಾರ ಬೇರೆ. ಆದರೆ ಔತಣದೂಟದ ಪಂಗ್ತಿಯಿಂದ ಎಬ್ಬಿಸಿ ಹೊರದೂ
ದರೆ ಮುಳುಗಿ ಸಾಯಬೇಕಾದಷ್ಟು ದುಃಖವಾಗದಿದ್ದೀತೇ? ಸಿಲಿಯಳಿಗೆ ಅಲ್ಲಿ
ಆ ಬಳಿಕ ಒಂದು ಕ್ಷಣವೂ ನಿಲ್ಲಲಾಗಲಿಲ್ಲ. ತನ್ನ ಕುತ್ತಿಗೆಯನ್ನೇ ಯಾರೋ
ಅಮುಕುತ್ತಿರುವಂತೆ ಅವಳಿಗೆ ತೋರಿತು. ಸೋನೆಯೊಡನೆ ಯಾವ ವಿಚಾ
ಕೇಳಲಿಕ್ಕೂ ಅವಳಿಗೆ ಮನಸ್ಸಾಗಲಿಲ್ಲ. ಸೋನೆಯ ಮನಸ್ಸಿನಲ್ಲಿ ಏನೆಲ್ಲ
ತೋರಿರಬಹುದೆಂಬುದನ್ನು ಅವಳು ಊಹಿಸಬಲ್ಲವಳಾಗಿದ್ದಳು. ಕುಕ್ಕೆಯೊಳ
ಗಿನ ಸರ್ಪವು ಹೊರ ಹೊರಟು ಬರುವ ಮೊದಲೇ ಅವಳು ಅಲ್ಲಿಂದ ಓಡಿ
ಬಿಡುವ ಯೋಚನೆ ಮಾಡಿದಳು. ಆದರೆ ಹೇಗೆ ಓಡುವುದು? ಯಾವ ನೆಪ
ಹೂಡುವುದು? ಅಥವಾ ತನ್ನ ಪ್ರಾಣವೇ ಏಕೆ ಹಾರಿಹೋಗಬಾರದು?

ಸಿಲಿಯಳಿಗೆ ಏನಾದರೂ ತಿನ್ನುವುದಕ್ಕೆ ಕೊಡುವ ಯೋಚನೆಯಿಂದ
ಮಧುರನು ಉಗ್ರಾಣದ ಬೀಗದ ಕೈಯನ್ನು ಕೈಯಲ್ಲಿ ತೆಗೆದುಕೊಂಡ.
ಆದರೂ ಮುಂದೆ ಬಂದು ಕರ್ತವ್ಯಮೂಢನಂತೆ ಸುಮ್ಮನೆ ನಿಂತಿದ್ದ. ಇತ್ತ
ಸಿಲ್ಲುವಿನ ಶ್ವಾಸವೂ ಕಟ್ಟಿಹೋಗುವುದರಲ್ಲಿತ್ತು.

ಆದರೆ ಸೋನೆಯ ದೃಷ್ಟಿಯಲ್ಲಿ—ಗಂಡುಸು ಪರಸ್ತ್ರೀಯ ಮೇಲೆ, ಹೆಂಗುಸು
ಪರ ಪುರುಷನ ಮೇಲೆ, ಕಣ್ಣು ಹಾಕುವುದು ಅತಿ ಘೋರ ತಪ್ಪುಕೆಲಸ
ವಾಗಿತ್ತು. ಈ ಅಪರಾಧಕ್ಕೆ ಅವಳ ದೃಷ್ಟಿಯಲ್ಲಿ ಯಾವ ಕ್ಷಮೆಯೂ ಇದ್ದಿಲ್ಲ.
ಕೊಲೆ, ಕಳ್ಳತನ, ಹಿಂಸೆ – ಯಾವ ಅಪರಾಧವೂ ಇಷ್ಟು ಭಯಂಕರವಲ್ಲ
ನಗು – ತಮಾಷೆ ತಪ್ಪಲ್ಲ. ಆದರೆ ಅದು ಬಹಿರಂಗವಾಗಿರಬೇಕು. ಗುಟ್ಟಾಗಿ
ನಡೆಯುವ ನಗು ತಮಾಷೆಗಳನ್ನು ಸಹ ಅವಳು ಅತಿ ಹೇಯವಾಗಿ ತಿಳಿಯು
ತ್ತಿದ್ದಳು. ಅವಳು ಇಂತಹ ವಿಚಾರಗಳನ್ನೆಲ್ಲ ಎಳೆತನದಿಂದಲೇ ತಿಳಿದುಕೊಳ್ಳ
ಲಿಕ್ಕಾರಂಭಿಸಿದ್ದಳು. ಹೋರಿರಾಮನು ಗದ್ದೆಯ ಕೆಲಸದಿಂದಾಗಿ ಕೆಲ ವೇಳೆ
ಮನೆಗೆ ಬರುವಾಗ ತಡವಾಗುತ್ತಿತ್ತು. ಆಗ ಎಲ್ಲಿಯಾದರೂ ಆತನು ದುಲಾ
ಯಂಗಡಿಗೆ—ಬೇಕಾದರೆ ಹೊಗೆಸೊಪ್ಪು ತರಲಿಕ್ಕೇ ಆಗಲಿ—ಹೋಗಿದ್ದನೆಂ
ತಿಳಿದರೆ ದನಿಯಳು ಬಹು ದಿನಗಳ ತನಕ ಅವನೊಡನೆ ಮಾತೇ ಆಡುತ್ತಿ

ಲಿಲ್ಲ. ಮಾತ್ರವಲ್ಲದೆ, ಮನೆ ಕೆಲಸವನ್ನೂ ಸರಿಯಾಗಿ ಮಾಡುತ್ತಿದ್ದಿಲ್ಲ. ಆ ಭಾವನೆಗಳೆಲ್ಲ ಸೋನೆಯಲ್ಲಿ ತೀವ್ರ ರೂಪದಿಂದ ಬೆಳೆದು ಬಂದಿದ್ದುವು. ಅವಳಿಗೆ ವಿವಾಹವಾಗುವ ತನಕ ಅವು ಅಷ್ಟು ಬಲವಾಗಿ ಬೆಳೆದಿಲ್ಲವಾಗಿತ್ತು. ಮದುವೆ ಯಾದಮೇಲಂತು ಅವು ದೊಡ್ಡ ತಪೋನಿಯಮದ ರೂಪವನ್ನೇ ತಾಳಿದ್ದವು. ದಾಂಪತ್ಯಕ್ಕೆ ಹೊರಗಾಗಿ ಪ್ರೇಮಕ್ಕೆ ಸ್ಥಾನವೇ ಅವಳ ದೃಷ್ಟಿಯಲ್ಲಿದ್ದಿಲ್ಲ. ಸಿಲ್ಲುವಿನ ಮೇಲೆ ಅವಳಿಗೆ ಸಹೋದರಿಯ ಪ್ರೇಮವಿತ್ತು. ಆದರೆ ಇಂದು ಅವಳು ತನಗೆ ದೊಡ್ಡ ವಿಶ್ವಾಸಘಾತಕ ಮಾಡಿದಂತೆ ಅವಳಿಗೆ ತೋರಿಬಂತು. ಮಥುರ ಮತ್ತು ಸಿಲ್ಲೂ – ಇವರೊಳಗೆ ಮೊದಲೇ ಏನಾದರೂ ಕೈ ಇದ್ದಿರಬೇಕು. ಮಥುರನು ನದಿಯ ದಡದಲ್ಲಿ ಅಥವಾ ತೋಟದಲ್ಲಿ ಅವಳನ್ನು ಮೊದಲು ಕಂಡಿದ್ದಿರಬೇಕು! ಆದ್ದರಿಂದಲೇ ಅವಳು ಈ ಮಧ್ಯರಾತ್ರಿಯಲ್ಲಿ ಆ ನದಿ ದಾಟಿಕೊಂಡು ಪುನಃ ಬಂದಿರಬೇಕು! ಮಥುರನು ಪ್ರೇಮಮಿಲನಕ್ಕೆ ಇದೇ ತಕ್ಕ ಸಮಯವೆಂದು ತಿಳಿದಿದ್ದಿರಬೇಕು! ಹಾಗಾಗಿ ಇವರ ಈ ಆಟದ ಎಲ್ಲ ಗುಟ್ಟನ್ನೂ ತಿಳಿಯಬೇಕೆಂಬಾಸೆ ಅವಳಿಗಾಯಿತು.

ಹಾಗಾಗಿ ಕೋಪದಿಂದ ಮಥುರನತ್ತ ನೋಡಿ ಸೋನೆ–'ನೀವೇಕೆ ಇಲ್ಲಿಂದ ಹೊರಡುವುದಿಲ್ಲ? ಏನು ಪಹರೆ ಕೆಲಸ ನಡೆಸುವಿರೇ?' ಎಂದಳು.

ಮಥುರ ಬಾಯಿ ಮುಚ್ಚಿಕೊಂಡು ಅಲ್ಲಿಂದ ಹೊರಟ. ಸಿಲ್ಲು ಒಂದು ವೇಳೆ ಎಲ್ಲ ಸಮಾಚಾರ ಹೇಳಿಬಿಟ್ಟರೆ! – ಎಂಬುದಾಗಿ ಅವನ ಪ್ರಾಣವೇ ಮೇಲೆ ಬರುವುದರಲ್ಲಿತ್ತು.

ಆಗ ಸೋನೆ ಗಂಭೀರ ಸ್ವರದಿಂದ ಸಿಲ್ಲುವಿನೊಡನೆ ಕೇಳಿದಳು – 'ನೋಡು ಸಿಲ್ಲೂ! ಇದ್ದುದನ್ನು ಇದ್ದ ಹಾಗೇ ಹೇಳಿಬಿಡು. ಇಲ್ಲವಾದರೆ ನಿನ್ನ ಕಣ್ಣೆದುರಲ್ಲೇ ನನ್ನ ಕುತ್ತಿಗೆಯನ್ನು ಕತ್ತಿಯಿಂದ ಕಡಿದುಕೊಂಡೇನು. ಆ ಮೇಲೆ ನೀನೇ ನನ್ನ ಗಂಡನ ಕೈಹಿಡಿದು ರಾಣಿಯಂತಿರಬಹುದು. ಅಲ್ಲಿ ನೋಡು – ಕತ್ತಿ ಸಿದ್ಧವಾಗಿಯೇ ಇದೆ. ಎಷ್ಟಾದರೂ ಒಂದು ಒರೆಯೊಳಗೆ ಎರಡು ಖಡ್ಗಗಳನ್ನಿಡಲು ಬರುವಂತಿಲ್ಲ.'

ಸರ್ರನೆ ಅವಳು ಗೋಡೆಗೆ ತೂಗಹಾಕಿದ್ದ ಕತ್ತಿಯನ್ನೆಳೆದು ಕೈಯಲ್ಲಿ ಹಿಡಿದುಕೊಂಡು ಹೇಳಿದಳು–' ನಾನು ಬರೇ ಬೆದರಿಸುತ್ತಿದ್ದೇನೆಂದು ಮಾತ್ರ ತಿಳಿಯಬೇಡ ಸಿಲ್ಲು! ಕೋಪಾವೇಶದಲ್ಲಿ ನಾನೇನು ಮಾಡಿಯೇನೆಂಬುದನ್ನು ಹೇಳ ಬರುವುದಿಲ್ಲ. ಆದ್ದರಿಂದ ಸ್ಪಷ್ಟವಾಗಿ ಸತ್ಯಸ್ಥಿತಿ ಹೇಳಿಬಿಡು.'

ಸಿಲಿಯಾ ನಡುಗಿಹೋದಳು. ನಡೆದ ವಿಚಾರವೆಲ್ಲ ಗ್ರಾಮಫೋನ್ ರಿಕಾರ್ಡಿನಿಂದೆಂಬಂತೆ ಒಂದು ಶಬ್ದ ಸಹ ಬಿಡದೆ ಅವಳ ಬಾಯಿಂದ ಹೊರಟು ಬಂತು. ಒಂದು ಅಕ್ಷರವನ್ನು ಸಹ ಅವಳು ಮರೆಮಾಡದಾದಳು. ಸೋನೆಯ ಮುಖದ ಮೇಲೆ ಅಂತಹ ಭೀಕರ ಸಂಕಲ್ಪ ತಾಂಡವವಾಡುತ್ತಿತ್ತು.

ಸೋನೆ ತೀಕ್ಷ್ಣ ದೃಷ್ಟಿಯಿಂದ, ಕಠಾರಿಯಿಂದ ಚುಚ್ಚುತ್ತಿರುವವಳಂತೆ ಆವಳತ್ತ ನೋಡುತ್ತ ಕೇಳಿದಳು – 'ಇದು ಸಂಪೂರ್ಣ ಸತ್ಯವಲ್ಲವೇ ?'

'ಸಂಪೂರ್ಣ ಸತ್ಯ. ನನ್ನ ಮಗನಾಣೆಗೂ ಸತ್ಯ.'

'ಇದರಲ್ಲೇನೂ ಮುಚ್ಚಿಡಲಿಲ್ಲವಲ್ಲ ?'

'ನಾನು ಎಳ್ಳಷ್ಟಾದರೂ ಮುಚ್ಚಿಟ್ಟಿದ್ದರೆ ನನ್ನ ಕಣ್ಣು ಒಡೆದು ಹೋಗಲಿ.'

'ನೀನೇಕೆ ಆ ಪಾಪಿಗೆ ಒದೆಯಲಿಲ್ಲ ? ಅವನ ಮೂಗನ್ನೇಕೆ ಹಲ್ಲಿಂದ ಕಚ್ಚಲಿಲ್ಲ? ಅವನ ರಕ್ತವನ್ನೇಕೆ ಕುಡಿಯಲಿಲ್ಲ? ಅಥವಾ ಬೊಬ್ಬೆಯನ್ನಾದರೂ ಏಕೆ ಹೊಡೆಯಲಿಲ್ಲ ?'

ಸಿಲ್ಲುವು ಏನು ತಾನೇ ಉತ್ತರ ಕೊಟ್ಟಾಳು ?

ಸೋನೆ ಹುಚ್ಚು ಹಿಡಿದವಳಂತಾಗಿ, ಕೆಂಡದಂತಹ ಕಣ್ಣುಗಳಿಂದ ನೋಡಿ ಹೇಳಿದಳು – 'ಏಕೆ ಬಾಯಿ ಬಿಡುವುದಿಲ್ಲ? ಅವನ ಕುತ್ತಿಗೆಯನ್ನೇ ಏಕೆ ಎರಡೂ ಕೈಗಳಿಂದ ಅಮುಕಿಬಿಡಲಿಲ್ಲ ? ಆಗ ನಿನ್ನ ಚರಣಗಳ ಮೇಲೆ ನನ್ನ ಶಿರಸ್ಸನ್ನಿಡುತ್ತಿದ್ದೆ. ನೀನು ಹೀಗೆಲ್ಲ ಮಾಡುವುದಿದ್ದರೆ ಆ ಮಾತಾದೀನನ ಹೆಸರನ್ನೇಕೆ ಕಲಂಕಿತಗೊಳಿಸುವೆ? ಬೇರೆ ಯಾರನ್ನಾದರೂ ಕಟ್ಟಿಕೊಂಡು ನಿನ್ನಿಷ್ಟ ಬಂದಂತೆ ಏಕೆ ಇರುವುದಿಲ್ಲ? ಅಥವಾ ನಿನ್ನಪ್ಪನ ಮನೆಗೇ ಏಕೆ ಹೋಗುವುದಿಲ್ಲ ? ನಿನ್ನ ಮನೆಯವರೂ ಅದನ್ನೇ ಬಯಸುತ್ತಿದ್ದರಲ್ಲವೇ ? ಅಥವಾ ಪಟ್ಟಣಕ್ಕೆ ಹೋಗಿ ಅಲ್ಲಿಂದ ಹಣ ಸಂಪಾದಿಸಿ ತಂದು ನಿನ್ನ ತಂದೆಗೆ ಕಳ್ಳು ಕುಡಿಯಲಿಕ್ಕೆ ಏಕೆ ಕೊಡಬಾರದು ? ಅತ್ತ ಆ ಪಂಡಿತರಿಗೆ ಅಪಮಾನ ಮಾಡಿ, ಪುನಃ ಸತ್ಯವಂತಳಂತೆ ಸುಮ್ಮನೆ ಕೂತುಕೊಂಡಿರುವುದೇಕೆ ? ಒಬ್ಬಳಿಗೇ ಇರಲಿಕ್ಕಾಗುವುದಿಲ್ಲವಾದರೆ ಯಾರನ್ನಾದರೂ ಕಟ್ಟಿಕೊಂಡು ಏಕೆ ಸಾಯುವುದಿಲ್ಲ? ಅಥವಾ ಬಾವಿಯಲ್ಲಾದರೂ ಏಕೆ ಹಾರುವುದಿಲ್ಲ ? ಇತರರ ಜೀವನದಲ್ಲಿ ಈ ರೀತಿ ವಿಷವನ್ನು ಸೇರಿಸಬಯಸುವುದೇಕೆ? ಈಗಲೇ ನಾನು ಹೇಳಿಬಿಟ್ಟಿದ್ದೇನೆ – ಇನ್ನೆಲ್ಲಿಯಾದರೂ ಇಂತಹ ವಿಚಾರ ನನಗೆ

ಗೊತ್ತಾದರೆ—ನೋಡಿಕೋ. ಮತ್ತೆ ನಾವು ಮೂವರಲ್ಲಿ ಒಬ್ಬರೂ ಜೀವದಿಂದಿರ ಲಾರೆವು! ಅದು ಖಂಡಿತ! ಸಾಕು. ಈಗ ನಡೆ. ಇಂದಿನಿಂದ ನಿನಗೂ ನನಗೂ ಯಾವ ಸಂಬಂಧವೂ ಉಳಿದಿಲ್ಲ.'

ಸಿಲ್ಲು ಮೆಲ್ಲನೆ ಎದ್ದು ಹೊರಡಲನುವಾದಳು. ಅವಳ ಕಾಲು ಮುರಿದೇ ಹೋದಂತಾಗಿತ್ತು. ಕಣ್ಣು ಕತ್ತಲೆಬರುತ್ತಿತ್ತು, ತಲೆ ತಿರುಗುತ್ತಿತ್ತು. ಕಂಠ ಒಣಗಿಬಂತು. ಇಡೀ ದೇಹವೇ ಬೆಂದುಹೋದಂತಾಗಿತ್ತು. ಅಂತು ಮೆಲ್ಲನೆ ಹೊರಟು ನದಿಯ ಕಡೆಗೆ ನಡೆದಳು.

ಬಾಗಿಲಲ್ಲಿ ನಿಂತಿದ್ದ ಮಥುರ— 'ಈ ಮಧ್ಯರಾತ್ರಿ ಹೇಗೆ ಹೋಗುವೆ ಸಿಲ್ಲು?'— ಎಂದು ಕೇಳಿದ.

ಸಿಲ್ಲು ಯಾವ ಉತ್ತರವನ್ನೂ ಕೊಡಲಿಲ್ಲ. ಮಥುರನೂ ಪುನಃ ಕೇಳಲಿಲ್ಲ.

ಆ ಸುಂದರ ಬೆಳುದಿಂಗಳು ಈಗಲೂ ಹಬ್ಬಿತ್ತು. ನದಿಯ ತೆರೆಗಳು ಈಗಲೂ ಬೆಳುದಿಂಗಳಲ್ಲಿ ಮಿಂಯುತ್ತಿದ್ದುವು. ಆದರೆ ಸಿಲಿಯುಳು ಕೆದರಿದ ಸ್ವಪ್ನದ ಛಾಯೆ ಯಂತೆ ಮುಂದೆ ಮುಂದೆ ಹೋಗುತ್ತಲೇ ಇದ್ದಳು.

೨೪

ಸಿಲಿಯುಳ ಮಗನಿಗೆ ಈಗ ಎರಡು ವರ್ಷ ಪ್ರಾಯ. ಅವನೀಗ ಇಡೀ ಕೇರಿಯುಲ್ಲಿ ಕುಣಿದಾಡುತ್ತಿದ್ದ. ಅವನ ಭಾಷೆಯೂ ವಿಚಿತ್ರವಾಗಿತ್ತು. ಇತರ ರಿಗೆ ಅರ್ಥವಾಗಲಿ, ಆಗದಿರಲಿ— ಆ ಭಾಷೆಯಲ್ಲೇ ಅವನು ಮಾತಾಡುತ್ತಿದ್ದ. ಅವನ ಭಾಷೆಯಲ್ಲಿ ಟ—ಲ—ಗ— ಅಕ್ಷರಗಳು ಮಾಯವಾಗಿದ್ದುವು. ಅವನು ರೊಟ್ಟಿಗೆ 'ಓಟೀ', ಹಾಲಿಗೆ 'ಆಲೂ'— ಎಂದು ಮೊದಲಾಗಿ ಹೇಳುತ್ತಿದ್ದ. ಬೇರೆ ಬೇರೆ ಪ್ರಾಣಿಗಳ ಕೂಗಾಟವನ್ನು ಇದ್ದ ಹಾಗೇ ಅನುಕರಿಸಿ ಕೇಳುವವ ರಿಗೆ ಚನ್ನಾಗಿ ನಗುಬರುವಂತೆ ಮಾಡುತ್ತಿದ್ದ. ಹುಡುಗ ಗಟ್ಟಿಮುಟ್ಟಾಗಿಯೂ ಇದ್ದ. ಯಾವಾಗ ನೋಡಿದರೂ ಆಟದ್ದೇ ಹುಚ್ಚು. ಹಸಿವು ಬಾಯಾರಿಕೆಗಳ ಪರವೆಯೂ ಅವನಿಗಿದ್ದಿಲ್ಲ. ಸಾಧಾರಣದ ಹುಡುಗರೆಲ್ಲ ಅವನಿಗೆ ಆಟಕ್ಕೆ ಸಾಕಾಗುತ್ತಲೇ ಇರಲಿಲ್ಲ.

ಯಾರಾದರೂ ನಿನ್ನ ಹೆಸರೇನೆಂದು ಕೇಳಿದರೆ—'ಲಾಮೂ' ಎನ್ನುತ್ತಿದ್ದ.

'ನಿನ್ನ ತಂದೆಯ ಹೆಸರೇನು?'

'ಮಾಟಾದೀನ ಪಂಡಿಟಲು.'

'ನಿನ್ನ ತಾಯಿಯ ಹೆಸರು?'

'ಜಿಲಿಯಾ.'

'ದಾತಾದೀನರೇನಾಗಬೇಕು ನಿನಗೆ ?'

'ಅವಲು ನಮ್ಮಜ್ಜ.'

ದಾತಾದೀನರ ಈ ಸಂಬಂಧವನ್ನು ಅವನಿಗೆ ಯಾರು ತಿಳಿಸಿದ್ದರೋ–ದೇವರೇ ಬಲ್ಲ.

ರಾಮು ಮತ್ತು ರೂಪರೊಳಗೆ ಒಳ್ಳೆಯ ಸ್ನೇಹ ಬೆಳೆದಿತ್ತು. ಅವನು ರೂಪಳ ಗೊಂಬೆಯಾಗಿದ್ದ. ಅವನನ್ನು ಮೀಯಿಸುವುದು, ಅವನ ಕಣ್ಣಿಗೆ ಕಾಡಿಗೆ ಹಾಕುವುದು, ತಲೆ ಬಾಚುವುದು, ತಿಂಡಿ ತಿನ್ನಿಸುವುದು, ಮತ್ತೆ ಕೆಲ ವೇಳೆ ಕಾಲ ಮೇಲೆ ಮಲಗಿಸುವುದು – ಇನೆಲ್ಲ ಅವಳ ಆಟವಾಗಿತ್ತು. ದನಿಯಾ ಗದರಿಸಿದರೂ ಅವಳು ಕೇಳುತ್ತಿದ್ದಿಲ್ಲ. ಈ ಮೊದಲು ಹರಕು ಬಟ್ಟೆಯ ಗೊಂಬೆ ಮಾಡಿ ಅದನ್ನವಳು ಮಗುವೆಂದಾಡಿಸುತ್ತಿದ್ದಳು. ಆ ಮಾತೃತ್ವದ ಭಾವನೆ ಈಗ ಈ ಜೀವಂತ ಮಗುವನ್ನು ಪಡೆದು ಬಹು ಸಂತೋಷಪಟ್ಟಿತು.

ಹೋರಿರಾಮನ ಮನೆಯ ಹಿಂಭಾಗದಲ್ಲೊಂದು ಕೊಟ್ಟಿಗೆ ಇತ್ತು. ಸಿಲಿಯಾ ಆ ಕೊಟ್ಟಿಗೆಯ ಬದಿಯಲ್ಲೇ ಒಂದು ಹಂದರ ಇಳಿಸಿ ಅದರಲ್ಲಿ ವಾಸಿಸುತ್ತಿದ್ದಳು. ಇನ್ನು ಅವಳು ಹೋರಿರಾಮನ ಮನೆಯಲ್ಲೇ ಇರುವುದು ಸರಿಯಲ್ಲ ತಾನೆ ?

ಅತ್ತ, ಮಾತಾದೀನನು ಕಾಶಿಗೆ ಹೋಗಿ ನೂರಾರು ರೂಪಾಯಿ ಪುಡಿ ಮಾಡಿದ. ಅಲ್ಲಿಯ ಮಹಾಪಂಡಿತರೆಲ್ಲ ಸೇರಿ ಅವನ ಶುದ್ಧಿ ಸಂಸ್ಕಾರಮಾಡಿದರು. ಆ ದಿನ ಬಹು ದೊಡ್ಡ ಹೋಮವಾಯಿತು. ಹಲವು ಜನರಿಗೆ ಭೋಜನವಾಯಿತು. ಅನೇಕ ಪುರಾಣಗಳ ಪಾರಾಯಣವಾಯಿತು. ಅಂತು ಇಷ್ಟೆಲ್ಲ ಆಗುವಾಗ ಅವನ ದೇಹ ಆತ್ಮಗಳೆರಡೂ ಶುದ್ಧವಾಗದೆ ಇರಬಹುದೇ ?

ಸಿಲಿಯಳು ಗಂಡು ಮಗುವನ್ನು ಹೆತ್ತ ದಿನ ಮಾತಾದೀನನು ಎರಡು ಪಾಲಷ್ಟು ಭಂಗಿ ಸೇದಿದ. ಅವನೆದೆ ಗರ್ವದಿಂದ ಉಬ್ಬಿಬಂತು. ಮೀಸೆ ಸರಿಪಡಿಸಿಕೊಂಡು ಎಣಿಸಲಾರಂಭಿಸಿದನವನು – ಮಗ ಹೇಗಿದ್ದಾನು ? ತನ್ನ ಹಾಗೆಯೇ – ಮತ್ತೆ ಹೇಗೆ? ಆಗಲಿ; ಹೇಗೆ ಹೋಗಿ ನೋಡಲಿ?'

೨-೩ ದಿನಗಳ ಬಳಿಕ ಗದ್ದೆಯಲ್ಲಿ ಅವನು ರೂಪಳನ್ನು ಕಂಡು ಅವಳೊಡನೆ ಕೇಳಿದ – 'ರೂಪಾ, ನೀನು ಸಿಲಿಯಳ ಮಗುವನ್ನು ನೋಡಿರುವೆಯಾ ?'

'ಏಕೆ ನೋಡದಿರುತ್ತೇನೆ. ಬಣ್ಣ ಕೆಂಪು; ಚನ್ನಾಗಿ ಹೃಷ್ಟ ಪುಷ್ಟನಾಗಿದ್ದಾನೆ. ದೊಡ್ಡ ದೊಡ್ಡ ಕಣ್ಣು. ತಲೆಯ ಮೇಲೆ ಗುಂಗುರು ಕೂದಲು. ಪಿಳ ಪಿಳನೆ ನೋಡುತ್ತಾನೆ!'

ಮಾತಾದೀನನ ಕಣ್ಣಿಗೆ ಆ ಬಾಲಕನು ಕಣ್ಣ ಮುಂದೆ ಬಂದು ಕೈಕಾಲು ಬಡೆದುಕೊಳ್ಳುತ್ತಿರುವಂತೆ ತೋರಿತು. ಆಗ ಒಮ್ಮೆಗೇ ಆ ಶುಭ ಸಮಾಚಾರ ಹೇಳಿದ ರೂಪಳನ್ನೇ ಪ್ರೀತಿಯಿಂದ ಹಿಡಿದೆತ್ತಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದ.

'ಬಿಡಿ ನನ್ನೊಡನೆ. ದೂರದಿಂದ ಮಗುವನ್ನು ತೋರಿಸುತ್ತೇನೆ ನಿಮಗೆ. ನಮ್ಮ ಕೊಟ್ಟಿಗೆಯಲ್ಲೇ ಇದ್ದಾರೆ ತಾಯಿ-ಮಗು. ಆ ಸಿಲಿಯಕ್ಕ ಯಾಕೆ ಯಾವಾಗಲೂ ಅಳುತ್ತಿದ್ದಾಳೋ-ನಾನರಿಯೆ.' – ರೂಪಾ ಧೈರ್ಯದಿಂದ ಹೇಳಿದಳು.

ಮಾತಾದೀನನ ಮುಖ ಬಾಡಿಹೋಯಿತು. ಕಣ್ಣಲ್ಲಿ ನೀರು ಬಂತು. ತುಟಿ ನಡುಗಲಾರಂಭಿಸಿತು.

ಅಂದು ರಾತ್ರಿಯೇ, ಕತ್ತಲು ಎಲ್ಲೆಡೆಯಲ್ಲೂ ಕವಿದ ಮೇಲೆ, ಊರವರೆಲ್ಲ ಮಲಗಿದ್ದಾಗ, ಅವನು ಸಿಲಿಯಳ ಗುಡಿಸಲ ಬಳಿ ಬಂದ. ಮಗುವಿನ ಅಳುವ ಶಬ್ದ ಕೇಳಿದ. ಆ ಅಳುವಿನಲ್ಲಿ ಇಡೀ ಪ್ರಪಂಚದ ಸಂಗೀತದ ಆನಂದ ಮಾಧುರ್ಯಗಳೆಲ್ಲ ತುಂಬಿದ್ದಂತೆ ಅವನಿಗೆ ತೋರಿತು.

ದಿನಗಳು ಉರುಳುತ್ತಲೇ ಇದ್ದುವು. ಸಿಲಿಯಳು ಮಗುವನ್ನು ತಂದು ಹೋರಿರಾಮನ ಮನೆಯ ತೊಟ್ಟಿಲಲ್ಲಿ ಮಲಗಿಸಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು. ಮಾತಾದೀನನು ಒಂದಲ್ಲ ಒಂದು ನೆಪ ಮಾಡಿಕೊಂಡು ಹೋರಿರಾಮನಲ್ಲಿಗೆ ಬಂದು, ಕಿಟಕಿಯ ಮೂಲಕ ಮಗುವನ್ನು ನೋಡಿ ಆತ್ಮ ಸಮಾಧಾನ ಮಾಡಿಕೊಂಡು ಹೋಗುತ್ತಿದ್ದ. ಅದರಿಂದ ಅವನ ಆತ್ಮ ನೇತ್ರಗಳ ಶಾಂತಿಯಾಗುತ್ತಿತ್ತು.

ಆಗ ದನಿಯಾ ಮುಗುಳ್ನಗುತ್ತಾ – 'ಅದರಲ್ಲೇನು ನಾಚಿಕೆ? ಎತ್ತಿಕೊಳ್ಳಿ ಅವನನ್ನು. ಮುದ್ದಾಡಿಸಿ. ಎಂತಹ ಕಲ್ಲೆದೆಯಪ್ಪಾ ನಿಮ್ಮದು? ಎಲ್ಲ ರೀತಿಯಲ್ಲೂ ಮಗ ನಿಮ್ಮ ಹಾಗೆಯೇ ಕಾಣುತ್ತಾನೆ' ಎನ್ನುತ್ತಿದ್ದಳು.

ಮಾತಾದೀನನು ಒಂದೆರಡು ರೂಪಾಯಿ ಸಿಲಿಯಾಳಿಗಾಗಿ ಎಸೆದುಬಿಟ್ಟು ಹೊರಡುತ್ತಿದ್ದ. ಬಾಲಕ ಬೆಳೆಯುತ್ತಿದ್ದಂತೆಯೇ ಮಾತಾದೀನನ ಜೀವನದಲ್ಲೂ ಸಂಯಮ, ಗಂಭೀರತೆ, ಜವಾಬ್ದಾರಿ – ಇವೆಲ್ಲ ತುಂಬಿ ಬರತೊಡಗಿದುವು.

ಒಂದು ದಿನ ರಾಮು ತೊಟ್ಟಿಲಲ್ಲಿ ಮಲಗಿದ್ದ. ದನಿಯಾಳು ಎಲ್ಲಿಗೋ ಹೊರ ಹೋಗಿದ್ದಳು. ರೂಪಳೂ ಮಕ್ಕಳ ಆಟದ ಶಬ್ದ ಕೇಳಿ ಹೊರಗೆ ಓಡಿದ್ದಳು. ಮನೆಯಲ್ಲಿ ಯಾರೂ ಇದ್ದಿಲ್ಲ. ಆಗಲೇ ಮಾತಾದೀನ ಅಲ್ಲಿ ಬಂದ. ಮಗು ತೊಟ್ಟಿಲಲ್ಲಿ ಮಲಗಿಕೊಂಡು ಕೈಕಾಲು ಬಡಿಯುಕೊಳ್ಳುತ್ತಿತ್ತು. ಜೀವನದ ಉಲ್ಲಾಸ ಮುಖದಲ್ಲಿ ನಲಿದಾಡುವಂತಿತ್ತು. ಆಗ ಮುಂದುಗಡೆ ಬಂದು ನಿಂತಿದ್ದ ಮಾತಾದೀನನನ್ನು ನೋಡಿ ರಾಮು ನಕ್ಕುಬಿಟ್ಟ. ಮಾತಾದೀನ ಸ್ನೇಹ ವಿಹ್ವಲನಾಗಿಹೋದ. ಮಗುವನ್ನೆತ್ತಿ ಎದೆಗೆ ಅಪ್ಪಿಕೊಂಡ. ಆಗ ಅವನ ಇಡೀ ದೇಹದಲ್ಲಿ ರೋಮಾಂಚವಾದಂತಾಯಿತು. ನೀರಿನ ಅಲೆಗಳ ಮೇಲೆ ಪ್ರಕಾಶದ ರೇಖೆಗಳು ನಲಿಯುತ್ತಿರುವಂತಾಯಿತು. ಮಗನ ತುಂಬಿದ ನಿರ್ಮಲ, ಸಂತೋಷಭರಿತ, ನೇತ್ರಗಳಲ್ಲಿ ತನ್ನ ಜೀವನದ ಸತ್ಯ ತೋರಿಬಂದಂತಾಯಿತು ಅವನಿಗೆ. ಮರುಕ್ಷಣದಲ್ಲಿ ಆ ಮಗನು ತನ್ನನ್ನು ತೀಕ್ಷ್ಣ ದೃಷ್ಟಿಯಿಂದ ಚುಚ್ಚುತ್ತಿದ್ದಾನೋ – ಎಂಬಂತೆ ಕಂಡುಬಂತು. ಮತ್ತೊಮ್ಮೆ, ಈ ಮಗ ತೀರಾ ಅಪವಿತ್ರ, ಅಸ್ಪೃಶ್ಯ–ಎಂದು ತೋರಿ ಶಂಕಿತ ಮನಸ್ಸಿನಿಂದ ಪುನಃ ಅಲ್ಲೇ ಮಲಗಿಸಿದ. ಅಷ್ಟರಲ್ಲಿ ರೂಪಳು ಹೊರಗಿಂದ ಅಲ್ಲಿ ಬಂದು ಸೇರಿದಳು. ಮಾತಾದೀನ ಹೊರಗೆ ಹೊರಟ.

ಕ್ರಮೇಣ ರಾಮು ಬೆಳೆದು ಅತ್ತ ಇತ್ತ ಓಡಾಡತೊಡಗಿದ, ತೊದಲು ಮಾತುಗಳನ್ನಾಡತೊಡಗಿದ. ಊರವರಿಗೆ ಸಂತೋಷಕಾರಣನೂ ಆದ.

ಒಂದು ದಿನ ಚನ್ನಾಗಿ ಮಳೆ ಬಂತು. ಸಿಲಿಯಾಳು ಹುಲ್ಲು ತೆಗೆದುಕೊಂಡು ಪೇಟೆಗೆ ಹೋಗಿದ್ದಳು. ರೂಪಳು ತನ್ನ ಆಟದಲ್ಲಿ ತೊಡಗಿದ್ದಳು ರಾಮುವಿಗೆ ಅಂಗಳದಲ್ಲಿ ಸುರಿಯುತ್ತಿರುವ ನೀರು ಆಣೆಕಲ್ಲುಗಳನ್ನು ನೋಡಿ ಬಹಳ ಸಂತೋಷವಾಯಿತು. ಆ ಮಳೆಯಲ್ಲೇ ಚನ್ನಾಗಿ ಆಡಿದ. ಬೇಕಾದಷ್ಟು ನೀರೂ ಕುಡಿದ. ಆ ದಿನವೇ ರಾತ್ರಿ ಅವನಿಗೆ ಜ್ವರ ಏರಿ ಬಂತು. ಮರು ದಿನ ಅದು ನಿಮೋನಿಯಾ ಜ್ವರಕ್ಕೆ ಸೇರಿತು. ಮೂರನೇ ಸಾಯಂಕಾಲ ಸಿಲಿಯಾಳ ತೊಡೆಯ ಮೇಲಿರುವಾಗಲೇ ಮಗುವಿನ ಪ್ರಾಣಪಕ್ಷಿ ಹಾರಿಹೋಯಿತು.

ಸಿಲಿಯಾಳಿಗೆ ಈ ವರೆಗಿದ್ದ ಈ ಒಂದು ಜೀವನಾಧಾರವೂ ಕಳೆದು

ಹೋಯಿತು. ಈ ತನಕ ಅವಳು ಹಗಲಿಡೀ ಕೆಲಸ ಮುಗಿಸಿ ರಾತ್ರಿಯ ಹೊತ್ತು ಪ್ರೀತಿಯಿಂದ ಮಗುವನ್ನಪ್ಪಿಕೊಂಡು ಮಲಗುತ್ತಿದ್ದಳು. ಅವನ ಬಾಯಿಗೆ ಮೊಲೆಹಾಲುಣಿಸುವಾಗ ಅವಳ ಎಲ್ಲ ತರದ ಶ್ರಮ ದುಃಖಗಳೂ ದೂರವಾಗುತ್ತಿದ್ದುವು. ಆಗ ಅವಳು ಇಂಪಾದ ಹಾಡುಗಳನ್ನು ಮೆಲ್ಲನೆ ಹೇಳುತ್ತಿದ್ದಳು. ಮಧುರ ಮಧುರ ಸ್ವಪ್ನಗಳನ್ನು ಕಾಣುತ್ತಿದ್ದಳು. ಹೊಸ ಪ್ರಪಂಚವನ್ನೇ ಕಟ್ಟುತ್ತಿದ್ದಳು. ರಾಮು ಅವೆಲ್ಲವುಗಳ ರಾಜನಾಗುತ್ತಿದ್ದ.

ಆದರೆ ಅದೆಲ್ಲ ಮಾಯವಾಗಿಹೋಯಿತು. ಈಗ, ಕೆಲಸ ಮುಗಿಸಿ ತನ್ನ ಶೂನ್ಯವಾದ ಗುಡಿಸಲಿಗೆ ಬಂದ ಬಳಿಕ ಸುಮ್ಮನೆ ಅಳುತ್ತಿರುವುದೇ ಅವಳ ಮುಖ್ಯ ಕೆಲಸವಾಯಿತು. ತನ್ನ ಪ್ರಾಣವೂ ಹಾರಿಹೋಗಿ, ಮೇಲಿನ ಲೋಕದಲ್ಲಿ ಈಗಲೂ ಆಡುತ್ತಿರಬಹುದಾದ ಆ ತನ್ನ ಲಾಲನನ್ನು ಕಾಣಬೇಕೆಂದು ತಡಪಡಿಸುತ್ತಿರುವಂತಿತ್ತು ಅವಳ ಮನಸ್ಸು. ಈಗ ಆ ಇಡೀ ಊರಿಗೇ ದುಃಖವುಂಟಾಗಿತ್ತು. ಎಂತಹ ಮುದ್ದು ಬಾಲಕ! ಕರೆದಾಗ ಎಷ್ಟು ಸಂತೋಷದಿಂದ ಹತ್ತಿರ ಬರುತ್ತಿದ್ದ! ಮರಣದ ಮೇಲಂತು ಅವನು ಎಲ್ಲರಿಗೂ ಮತ್ತಷ್ಟು ಮುದ್ದಾಗಿ ಕಂಡುಬರುತ್ತಿದ್ದ.

ಮಾತಾದೀನನಿಗೆ ಆಗ ಎಚ್ಚರ ಬಂತು. ಅವನು ಎಲ್ಲ ವಿಚಾರವನ್ನೂ ಮರೆತು ಸಿಲಿಯಳಿದ್ದಲ್ಲಿಗೆ ಬಂದ. ಆ ಮಗುವಿನ ಶವನನ್ನು ಸ್ವತಃ ತನ್ನ ಕೈಗಳಿಂದ ಎತ್ತಿಕೊಂಡುಹೋಗಿ, ನದಿಯ ದಡದಲ್ಲಿ ಸಂಸ್ಕಾರಮಾಡಿ ಬಂದ. ಆ ದಿನ ಅವನಿಗೆ ಸ್ವಲ್ಪವೂ ನಾಚಿಕೆಯಾಗಲಿಲ್ಲ. ಅವನು ಎಳ್ಳಷ್ಟೂ ಹಿಂಜರಿಯಲಿಲ್ಲ. ಆದರೆ ಮತ್ತೆ ಏಳೆಂಟು ದಿನಗಳ ತನಕ ಅವನ ಕೈಗಳ ಬಲವೇ ಉಡುಗಿಹೋಗಿತ್ತು.

ನೋಡಿದವರು ಸಹ ಏನೂ ಹೇಳಲಿಲ್ಲ. ಮಾತ್ರವಲ್ಲದೆ ಅವನ ಸಾಹಸ ದೃಢತೆಗಳನ್ನು ಕೆಲವರು ಪ್ರಶಂಸಿಸಿಯೂಬಿಟ್ಟರು.

ಹೋರಿರಾಮ ಆಗ ಹೇಳಿದ – 'ಮನುಷ್ಯನ ಧರ್ಮವೆಂದರೆ ಇದೇ ಸರಿ. ಕೈಹಿಡಿದವಳನ್ನು ಆಪತ್ಕಾಲದಲ್ಲಂತು ಎತ್ತಿಹಿಡಿಯಲೇ ಬೇಕು!'

ಕಣ್ಣು ತಿರುಗಿಸಿ ದನಿಯಳೆಂದಳು – 'ಹೆಚ್ಚೆಲ್ಲ ಹೊಗಳಬೇಡಿ. ಕೈಹಿಡಿಯುವಾಗ ಅವನಿಗೆ ಅವಳ ಜಾತಿ ಗೊತ್ತಿದ್ದಿಲ್ಲವೇ? ಮತ್ತೇಕೆ ಇಷ್ಟೆಲ್ಲ ಬೊಬ್ಬಾಟ?'

ಒಂದು ತಿಂಗಳು ಸಂದುಹೋಯಿತು. ಸಿಲಿಯಳು ಪುನಃ ಕೂಲಿ ಕೆಲಸಕ್ಕೆ

ತೊಡಗಿದ್ದಳು. ಒಂದು ದಿನ ಕತ್ತಲಾಗಿತ್ತು. ಚಂದ್ರನು ಮೂಡಿ ಮೇಲೇರಿ ಬರುವುದರಲ್ಲಿದ್ದ. ಸಿಲಿಯಳು ಗದ್ದೆಯಲ್ಲಿ ಬಿದ್ದಿದ್ದ ಧಾನ್ಯಕಣಗಳನ್ನು ಸಂಗ್ರಹಿಸಿಕೊಂಡು ಮನೆಕಡೆ ಬರುವುದರಲ್ಲಿದ್ದಳು. ಮೇಲೆ ಚಂದ್ರನನ್ನು ನೋಡಿ ಅವಳಿಗೆ ಆ ಹಳೆಯ ನೆನಪು ಮೂಡಿ ಬಂದು ದುಃಖ ತಡೆಯಲಾಗಲಿಲ್ಲ. ಕಣ್ಣಲ್ಲಿ ನೀರು ತುಂಬಿ ತನ್ನಷ್ಟಕ್ಕೇ ಅಳುತ್ತಲಿದ್ದಳು.

ಫಕ್ಕನೆ ಯಾರದೋ ಕಾಲ ಸಪ್ಪಳ ಕೇಳಿ ಅವಳು ಬೆಚ್ಚಿಬಿದ್ದಳು. ಹಿಂದಿನಿಂದ ಬರುತ್ತಿದ್ದ ಮಾತಾದೀನ ಮುಂದೆ ಬಂದು ನಿಂತು – 'ಎಷ್ಟರ ತನಕ ಸುಮ್ಮನೆ ಅಳುತ್ತಿರುವೆ ಸಿಲಿಯಾ ? ಸುಮ್ಮನೆ ಅಳುವುದರಿಂದ ಪುನಃ ಅವನು ಬರಲಿದೆಯೇ ? ' ಎಂದು ಸಮಾಧಾನಪಡಿಸತೊಡಗಿದ. ಅವನಿಗೂ ಅಳು ಬಂತು.

ಸಿಲಿಯಳ ಬಾಯಿಂದ ಹೊರಡಲು ಸಿದ್ಧವಾಗಿದ್ದ ಗದರಿಕೆಯ ಒಂದೆರಡು ಮಾತೂ ಈಗ ಕರಗಿಹೋದುವು. ಅವಳು ಕೊನೆಗೆ ಮೆಲ್ಲನೆ ಕೇಳಿದಳು– 'ನೀವೆಂತು ಈ ಕಡೆ ಬಂದಿರಿ ' '

'ಇಲ್ಲಿಂದಾಗಿಯೇ ಹೋಗುತ್ತಿದ್ದೆ. ನಿನ್ನ ಅಳುವ ಸ್ವರ ಕೇಳಿಸಿತು. ಹಾಗಾಗಿ ಬಂದೆ.'

'ನೀವು ಅವನನ್ನು ಒಮ್ಮೆಯಾದರೂ ಸರಿಯಾಗಿ ನೋಡಿರುವಿರೇ ?'

'ಎಷ್ಟೋ ಸಲ ನೋಡಿದ್ದೆ. ಅಷ್ಟೇ ಅಲ್ಲ ಸಿಲಿಯಾ. ನಾನವನನ್ನು ಒಂದು ಸಲ ಮುದ್ದಾಡಿಸಿಯೂ ಇದ್ದೆ.'

'ನಿಜವಾಗಿಯೂ ?'

'ಹೌದು ; ನಿಜವಾಗಿಯೂ ಹೌದು.'

'ನಾನೆಲ್ಲಿ ಹೋಗಿದ್ದೆ ?'

'ನೀನು ಪೇಟೆಗೆ ಹೋಗಿದ್ದೆ.'

'ನಿಮ್ಮನ್ನು ನೋಡಿ ಅವನು ಅಳಲಿಲ್ಲವೇ ?'

'ಇಲ್ಲ ಸಿಲಿಯಾ, ನಗುತ್ತಿದ್ದ.'

'ನಿಜವಾಗಿಯೂ ?'

'ಹೌದು. ನಿಜವಾಗಿಯೂ ಹೌದು.'

'ಸರಿ ; ಒಂದೇ ಸಲ ಆಡಿಸಿದ್ದಲ್ಲವೇ ?'

'ಹೌದು ; ಒಂದೇ ಸಲ. ಆದರೆ ನೋಡಲಿಕ್ಕೆ ನಿತ್ಯ ಬರುತ್ತಿದ್ದೆ. ಅವನು

ಅಂಗಳದಲ್ಲಿ ಆಡುವುದನ್ನು ನೋಡಿದಾಗ ಮನಸ್ಸಿಗೆ ನೆಮ್ಮದಿಯಾಗುತ್ತಿತ್ತು.'

'ಹೌದು. ನೋಡುವಾಗ ನಿಮ್ಮ ಹಾಗೆಯೇ ಇದ್ದ.'

ಅಂತು ಸಿಲಿಯಳ ಮುಖದ ಮೇಲೆ ಒಂದು ತರದ ಸಮಾಧಾನ ಮೂಡಿ ಬಂತು. ಅವಳು ಬುಟ್ಟಿಯನ್ನು ಹಿಡಿದುಕೊಂಡು ಮನೆಯ ಕಡೆ ಹೊರಟಳು. ಮಾತಾದೀನನೂ ಅವಳೊಡನೆ ಹೊರಟ.

'ನಾನೀಗ ದನಿಯಕ್ಕನ ಮನೆ ಜಗುಲಿಯ ಮೇಲೆಯೇ ಮಲಗುತ್ತಿದ್ದೇನೆ. ನನ್ನ ಗುಡಿಸಲಿಗೆ ಹೋಗಲಿಕ್ಕೇ ಮನಸ್ಸು ಬರುವುದಿಲ್ಲ' – ಸಿಲಿಯ ಳೆಂದಳು.

'ಯಾವಾಗಲೂ ದನಿಯಳು ನನಗೆ ಉಪದೇಶ ಮಾಡುತ್ತಿದ್ದಳು.'

'ನಿಜವಾಗಿಯೂ ?'

'ಹೌದು, ಸತ್ಯ. ಸಿಕ್ಕಿದಾಗಲೆಲ್ಲ ನನಗೆ ನಿನ್ನ ಗುಣಗಳನ್ನು ಬಣ್ಣಿಸಿ ತಿಳಿಸುತ್ತಿದ್ದಳು.'

ಮನೆ ಹತ್ತಿರ ಬಂತು. ಆಗ ಸಿಲಿಯಳು –'ಇನ್ನು ಇಲ್ಲಿಂದಲೇ ನಿಮ್ಮ ಮನೆಯತ್ತ ಹೋಗಿರಿ. ಎಲ್ಲಿಯಾದರೂ ಪಂಡಿತರು ನೋಡಿದರೆ?' ಎಂದಳು.

ಮಾತಾದೀನ ತಲೆ ಎತ್ತಿ ಹೇಳಿದ–'ನಾನೀಗ ಯಾರಿಗೂ ಹೆದರುವುದಿಲ್ಲ.'

'ಮನೆಯಿಂದ ಹೊರ ಹಾಕಿದರೆ ಮತ್ತೆಲ್ಲಿ ಹೋಗುವಿರಿ ?'

'ಈಗ ಬೇರೆಯೇ ಮನೆಮಾಡಿಕೊಂಡಿದ್ದೇನೆ.'

'ಸತ್ಯವೆ ?'

'ಹೌದು; ಸತ್ಯವಾಗಿಯೂ ಹೌದು.'

'ಎಲ್ಲಿ? ನಾನು ನೋಡಿಲ್ಲವಲ್ಲ ?'

'ಬಾ, ನಾನೀಗಲೇ ತೋರಿಸುತ್ತೇನೆ.'

ಇಬ್ಬರೂ ಮುಂದುವರಿದರು – ಮಾತಾದೀನ ಮುಂದೆ, ಸಿಲಿಯಾ ಹಿಂದೆ. ಹೋರಿರಾಮನ ಮನೆ ಬಂತು. ಮಾತಾದೀನ ಆ ಮನೆಯ ಹಿಂದುಗಡೆ ಹೋಗಿ ಸಿಲಿಯಳ ಗುಡಿಸಲ ಬಾಗಿಲಿಗೆ ನಿಂತು–'ಇದೇ ನಮ್ಮ ಮನೆ' ಎಂದ.

ಸಿಲಿಯಳು ಅವಿಶ್ವಾಸ ಹಾಗೂ ವ್ಯಂಗ್ಯಪೂರ್ಣವಾದ ಸ್ವರದಿಂದ–'ಇದು ಆ ಸಮಗಾರ್ತಿ ಸಿಲಿಯಳ ಮನೆಯಲ್ಲವೆ?' ಎಂದಳು.

ಮಾತಾದೀನನು ಅದರ ಬಾಗಿಲು ತೆರೆಯುತ್ತಾ ಹೇಳಿದ – 'ಅಲ್ಲ; ಇದು ನನ್ನ ದೇವಿಯ ಮಂದಿರ!'

ಸಿಲಿಯಳ ಕಣ್ಣು ಮಿನುಗತೊಡಗಿದುವು. ಅವಳು ಹೇಳಿದಳು–' ಹೌದು ಮಂದಿರಕ್ಕೆ ಬಂದು ಒಂದು ತಂಬಿಗೆ ನೀರು ಸುರಿಸಿಹೋಗುವಿರಿ–ಅಷ್ಟೇ!'

ಮಾತಾದೀನನು ಅವಳ ತಲೆಯ ಮೇಲಿನ ಬುಟ್ಟಿಯನ್ನು ಕೆಳಗಿಳಿಸುತ್ತಾ ಕಂಪಿತ ಸ್ವರದಿಂದ ನುಡಿದ – ' ಹಾಗಲ್ಲ ಸಿಲಿಯಾ. ಪ್ರಾಣವಿರುವ ತನಕ ನಿನ್ನ ಪೂಜೆಯನ್ನು ಮಾಡುತ್ತಿರುತ್ತೇನೆ.'

' ನೀವು ಹೇಳುತ್ತಿರುವುದು ಸುಳ್ಳು ಮಾತು!'

' ಇಲ್ಲ; ನಿನ್ನ ಕಾಲು ಹಿಡಿದು ಹೇಳುತ್ತೇನೆ. ಆ ಪಟೇಶ್ವರಿಯ ಮಗ–ಮೂರು ಕಾಸಿನ ಫಟಿಂಗ – ಭುವನೇಶ್ವರಿಯು ನಿನ್ನ ಬೆನ್ನು ಹಿಡಿದು ಬರುತ್ತಿರುವಾಗ ನೀನು ಚನ್ನಾಗಿ ಗದರಿಸಿ ಓಡಿಸಿದೆಯಂತೆ!'

' ನಿಮಗೆ ಯಾರು ಹೇಳಿದರು?'

' ಅವನೇ.'

' ನಿಜವಾಗಿಯೂ?'

' ಹೌದು. ನಿಜವಾಗಿಯೂ.'

ಸಿಲಿಯಳು ದೀಪ ಹಚ್ಚಿದಳು. ಒಂದು ಮೂಲೆಯಲ್ಲಿ ಮಣ್ಣಿನ ಮಡಕೆಗಳಿದ್ದುವು. ಇನ್ನೊಂದು ಮೂಲೆಯಲ್ಲಿ ಒಲೆಯಿತ್ತು. ತೊಳೆದಿಟ್ಟ ಎರಡು ಮೂರು ಕಂಚು ಹಿತ್ತಾಳೆಯ ಪಾತ್ರೆಗಳು ನಿರ್ಮಲವಾಗಿದ್ದುವು. ಮಧ್ಯದಲ್ಲಿ ಒಂದು ಚಿಕ್ಕ ಮುರುಕಲು ಮಂಚವಿತ್ತು. ಅದರ ಮೇಲೆ ಸಿಲಿಯಳು ಮಲಗುವ ಚಾಪೆ ಇತ್ತು. ಅದರ ತಲೆಯ ಭಾಗದಲ್ಲಿ ರಾಮುವಿನ–ಆನೆ ಕುದುರೆಗಳ ಮುರಿದ ಗೊಂಬೆಗಳಿದ್ದುವು. ನಿತ್ಯ ಅವನ್ನು ನೋಡಿ ಅವಳು ಅಳುತ್ತಿರಬೇಕು! ಮಾತಾದೀನನು ಆ ಮಂಚದ ಮೇಲೆ ಕೂತುಕೊಂಡ. ಅವನಿಗೊಮ್ಮೆ ಚನ್ನಾಗಿ ಅತ್ತುಬಿಡಬೇಕೆನ್ನುವಷ್ಟು ದುಃಖವಾಯಿತು.

' ನಿಮಗೆಂದಾದರೂ ನನ್ನ ನೆನಪು ಬರುತ್ತಿತ್ತೇ?' – ಸಿಲಿಯಳು ಅವನ ಹೆಗಲ ಮೇಲೆ ಕೈಯಿಟ್ಟು ಕೇಳಿದಳು.

ಮಾತಾದೀನನು ಅವಳ ಕೈಯನ್ನು ಹಿಡಿದು ತನ್ನ ಎದೆಯ ಮೇಲೆ ಇಡುತ್ತ –' ಪ್ರತಿ ಕ್ಷಣವೂ ನೀನು ನನ್ನ ಕಣ್ಣ ಮುಂದೆ ನಲಿದಾಡುತ್ತಿದ್ದೆ! ಅದಿರಲಿ; ನಿನಗೆಂದಾದರೂ ನನ್ನ ನೆನಪಾಗುತ್ತಿತ್ತೇ?' ಎಂದು ಕೇಳಿದ.

' ನನಗೆ ಯಾವಾಗಲೂ ನಿಮ್ಮ ಮೇಲೆ ಕೋಪವೇ ಇತ್ತು.'

' ಹಾಗಾದರೆ. . . .'

'ಅಲ್ಲ; ಯೋಚಿಸಿ ನೋಡಿ. ನನಗೆ ಭಯವಾಗುತ್ತಿದೆ. ಊರವರು ಏನು ಹೇಳುವರೋ – ಏನೋ !'

'ಒಳ್ಳೆಯ ಮನುಷ್ಯರು ಒಳ್ಳೇದನ್ನು ಹೇಳಿಯಾರು; ಇದೇ ಧರ್ಮ ವೆಂದಾರು. ಇನ್ನು, ಕೆಟ್ಟವರ ಪರವೆ – ನನಗೆ ಇಲ್ಲವೇ ಇಲ್ಲ.'

'ನಿಮಗೆ ಇನ್ನು ಅಡಿಗೆಮಾಡಿ ಹಾಕುವುದು ಯಾರು ?'

'ನನ್ನ ರಾಣಿ – ಸಿಲಿಯಾ !'

'ನಿಮ್ಮ ಧರ್ಮ ?'

'ಇದೇ ನನ್ನ ಧರ್ಮ.'

ಸಿಲಿಯಾಳ ಕೋಮಲ ಬಾಹುಪಾಶ ಅವನ ಕಂಠದ ಮೇಲೆ ಬಿದ್ದಿತ್ತು.

೨೫

ಹೋರಿರಾಮನ ಪರಿಸ್ಥಿತಿ ದಿನ ದಿನಕ್ಕೆ ಕೆಡುತ್ತಾ ಬರುತ್ತಿತ್ತು. ಜೀವನ ಸಂಗ್ರಾಮದಲ್ಲಿ ಅವನಿಗೆ ಯಾವಾಗಲೂ ಅಪಜಯವೇ ಒದಗಿ ಬಂದಿತ್ತು. ಆದರೆ ಎಂದೂ ಧೈರ್ಯಗೆಡಲಿಲ್ಲ ಅವನು. ಪ್ರತಿಯೊಂದು ಅಪಜಯವೂ ಅದೃಷ್ಟದೊಡನೆ ಹೋರಾಡಲು ಅವನಿಗೊಂದು ಹೊಸ ಶಕ್ತಿಯನ್ನು ಕೊಡುತ್ತಿತ್ತು. ಆದರೆ ಈಗ ಅವನು ಜೀವನದ ಕೊನೆಯ ಅವಸ್ಥೆಗೆ ಬಂದಂತಾಗಿದ್ದ. ಅದರಿಂದ ಅವನ ಆತ್ಮವಿಶ್ವಾಸ ಕಡಿಮೆಯಾಗಲಾರಂಭಿಸಿತ್ತು. ಅವನ ಬೆಳೆ ಹಾಳಾಯಿತು; ಧರ್ಮವೂ ಕೆಟ್ಟುಹೋಯಿತು. ಅಂತು ಅವನು ಪಡದ ಯಾವ ಕಷ್ಟವೂ ಬಾಕಿ ಇಲ್ಲ – ಎಂಬಲ್ಲಿವರೆಗಾಗಿತ್ತು. ಅವನ ಜೀವನದ ಯಾವ ಅಭಿಲಾಷೆಯೂ ನೆರವೇರಲಿಲ್ಲ. ಸುಖದ ದಿನವಂತು ಬಿಸಿಲ್ಗುದುರೆಯಂತೆ ಮುಂದೆ ಮುಂದೆ ಹೋಗುತ್ತಲೇ ಇತ್ತು. ಸೋತುಹೋದ ಅರಸನಂತೆ ಅವನು ಈ ತನ್ನ ಮೂರು ಎಕ್ರೆ ಭೂಮಿಯೆಂಬ ಕೋಟೆಯೊಳಗೆ ಭದ್ರವಾಗಿದ್ದುಕೊಂಡು, ಅದನ್ನು ಬಹು ಜಾಗರೂಕತೆಯಿಂದ ಕಾಪಾಡುತ್ತಿದ್ದ. ಸಾಲವಾಯಿತು, ಕೆಟ್ಟ ಹೆಸರು ಬಂತು, ಕೂಲಿಕೆಲಸ ಮಾಡಿಯಾಯಿತು. ಆದರೆ ಈ ಕೋಟೆ ಮಾತ್ರ ಕೈತಪ್ಪಿ ಹೋಗದಂತೆ ನೋಡಿಕೊಂಡಿದ್ದ. ಕಳೆದ ಮೂರು ವರ್ಷಗಳಿಂದ ಗೇಣಿ ಸಹ ಬಾಕಿಯಾಗಿತ್ತು. ಹಾಗಾದ್ದರಿಂದ ಸೋಚೇ

ರಾಮರು ಇವನ ಮೇಲೆ ಗೇಣಿಬಾಕಿಯು ವ್ಯಾಜ್ಯ ಸಹ ಮಾಡಿದ್ದರು. ರೂಪಾ
ಸಿಗುವ ಆಸೆ ಎಲ್ಲಿಯೂ ಇದ್ದಿಲ್ಲ. ಇದ್ದ ಆ ಭೂಮಿಯೂ ಕೈತಪ್ಪಿಹೋ
ಉಳಿದ ಜೀವನ ಕೇವಲ ಕೂಲಿಕೆಲಸದಲ್ಲೇ ಕಳೆಯಬೇಕಾದೀತು ! ಎ
ದೇವರ ಇಚ್ಛೆ ! ಇದರಲ್ಲಿ ರಾಯ್ ಸಾಹೇಬರ ತಪ್ಪೇನಿದೆ ? ಅವರ ಜೀ
ನವೂ ಗೇಣಿ ಹಣದಿಂದಲೇ ನಡೆಯಬೇಕು ತಾನೇ ? ಆ ಗ್ರಾಮದಲ್ಲಿ ಇರು
ಜನರಲ್ಲಿ ಅರ್ಧಾಂಶ ಗೇಣಿದಾರರ ಮೇಲೆ ಬಾಕಿಯು ವ್ಯಾಜ್ಯ ದಾಖಲಾಗಿತ್ತು
ಎಲ್ಲರ ಕತೆ ಹೇಗಾಗುವುದೋ – ಹಾಗೆಯೇ ತನ್ನದೂ ಆದೀತು. ಹಣೆಯ
ಸುಖ ಬರೆದಿದ್ದರೆ ಬೆಳೆದು ಬಂದ ಮಗನೇ ಕೈಬಿಟ್ಟು ಹೋಗುತ್ತಿದ್ದನೇ ?

ಕತ್ತಲೆಯಾಗುವುದರಲ್ಲಿತ್ತು. ಹೋರಿರಾಮು ಇದೇ ಚಿಂತೆಯಲ್ಲಿ ಮುಳು
ದವನಾಗಿ ಕೂತುಕೊಂಡಿದ್ದ. ಅಷ್ಟರಲ್ಲಿ ಪಂಡಿತ ದಾತಾದೀನರು ಬಂ
ಕೇಳಿದರು – ' ಏನು ಹೋರಿರಾಮು, ನಿನ್ನ ಮೇಲಿನ ಗೇಣಿ ವ್ಯಾಜ್ಯವೇನ
ಯಿತು ? ಇತ್ತೀಚೆ ನಾನು ನೋಖೇರಾಮನೊಡನೆ ಮಾತಾಡುವುದನ್ನೇ ಬಿ
ದ್ದೇನೆ. ನನಗೆ ಈ ಕತೆಯೇ ಗೊತ್ತಿಲ್ಲ. ಇನ್ನು ಕೊನೆಯ ವ್ಯಾದೆಗೆ ಬ
ಹದಿನೈದು ದಿನ ಉಳಿದಿದೆಯೆಂದು ಕೇಳಿದೆ. ಹೌದೇ ? '

ಹೋರಿರಾಮು ಅವರಿಗೆ ಕೂತುಕೊಳ್ಳಲಿಕ್ಕೆ ಮಂಚ ಸರಿಪಡಿಸಿಕೊಟ್ಟು
' ಅವರೆಷ್ಟಾದರೂ ಧನಿಗಳು ! ಇಷ್ಟ ಬಂದಂತೆ ಮಾಡುತ್ತಾರೆ. ನ
ಕೈಯಲ್ಲಿ ರೂಪಾಯಿ ಇದ್ದರೆ ಈ ದುರ್ದಶೆ ಬರಲಿಕ್ಕಿತ್ತೇ ? ನಾನೇನು ತಿಂ
ಹಾಳುಮಾಡಲಿಲ್ಲ. ಮಜಾ ಮಾಡಿ ಹಣ ಕರಗಿಸಲೂ ಇಲ್ಲ. ಗೇಣಿ ಸ
ಗದ್ದೆಯಿಂದ ಬರುವುದಿಲ್ಲವೆಂದಾದರೆ ನಾನೇನು ಮಾಡಲಿ ? ' ಎಂದ.

' ಆದರೂ ಮರ್ಯಾದೆ ಕಾಪಾಡಿಕೊಳ್ಳುವುದು ಬೇಡವೆ ? ಮತ್ತೆ ಜೀವ
ಸಾಗುವುದಾದರೂ ಹೇಗೆ ? ತಾತ ಮುತ್ತಾತರಿಂದ ಬಂದ ಪ್ರಸಾದ ! ಅದ
ಕೂಡಾ ಹೋಗಿಬಿಟ್ಟರೆ ಇರುವುದೆಲ್ಲಿ ಮತ್ತೆ ? '

' ಅದೆಲ್ಲ ದೇವರ ಕೈಯ್ಯಲ್ಲಿದೆ ಸ್ವಾಮಿ. ನಾನೇನು ಮಾಡಲಿ ? '

' ಹಾಗಾದರೆ, ನೀನು ಮಾಡುವುದಿದ್ದರೆ ಒಂದುಪಾಯವಿದೆ. '

ಹೋರಿರಾಮನಿಗೆ ಅಭಯದಾನ ಸಿಕ್ಕಿದಂತಾಯಿತು. ಅವನು ಅವ
ಕಾಲು ಹಿಡಿದು ಹೇಳಿದ – ' ದೊಡ್ಡ ಉಪಕಾರವಾದೀತು ಮಹಾರಾಜರ
ನೀವಲ್ಲದೆ ಯಾರು ಇದ್ದಾರೆ ನನಗೆ ಗತಿ ? ನಾನೇನೋ ಆಸೆಯನ್ನೇ ಬಿಟ್ಟಿದ್ದೆ.

' ಹಾಗೆ ನಿರಾಶನಾಗಬೇಕಾದ ಸಂದರ್ಭವೇ ಬರಲಾರದು. ಇಷ್ಟು

ಮಾತ್ರ ತಿಳಿದುಕೋ – ಮನುಷ್ಯನ ಧರ್ಮ ಸುಖದ ಕಾಲದಲ್ಲಿ ಒಂದು ರೀತಿ, ದುಃಖದ ಕಾಲದಲ್ಲಿ ಮತ್ತೊಂದು ರೀತಿ. ಸುಖದ ಕಾಲದಲ್ಲಿ ಮನುಷ್ಯ ದಾನ ಧರ್ಮ ಮಾಡುತ್ತಾನೆ. ಕಷ್ಟಕಾಲದಲ್ಲಿ ಭಿಕ್ಷೆ ಬೇಡಲಿಕ್ಕೂ ಅಣಿಯಾಗುತ್ತಾನೆ. ಆಗ ಅದೇ ಧರ್ಮವೆಂದಾಗುತ್ತದೆ. ದೇಹಕ್ಕೆ ಸೌಖ್ಯವಿದ್ದರೆ ನಾವು ಸ್ನಾನ ಪೂಜೆ ಮಾಡದೆ ಬಾಯಿಗೆ ನೀರು ಸಹ ತೆಗೆದುಕೊಳ್ಳುವುದಿಲ್ಲ. ಆದರೆ ಜ್ವರಬಿದ್ದರೆ ಸ್ನಾನವೂ ಇಲ್ಲ, ಮಡಿಯೂ ಇಲ್ಲ. ಮಂಚದ ಮೇಲೆಯೇ ಕೂತು ಪಥ್ಯ ತೆಗೆದುಕೊಳ್ಳುವುದಿಲ್ಲವೆ? ಆ ಕಾಲದ ಧರ್ಮ ಅದೇ. ಇಲ್ಲಿ ಈಗ ನಿಮಗೂ ನಮಗೂ ಬಹಳ ಭೇದವಿದೆ. ಆದರೆ ಜಗನ್ನಾಥಪುರಿಯಲ್ಲಿ ಈ ಜಾತಿನೀತಿಯ ಭೇದವೇ ಇಲ್ಲ. ಎಲ್ಲರೂ ಒಂದೇ ಪಂಕ್ತಿಯಲ್ಲಿ ಕೂತು ಉಣ್ಣುತ್ತಾರೆ. ಆಪತ್ಕಾಲದಲ್ಲಿ ಶ್ರೀ ರಾಮಚಂದ್ರ ದೇವರೇ ಶಬರಿಯ ಎಂಜಲು ಹಣ್ಣುಗಳನ್ನು ತಿಂದರು; ವಾಲಿಯನ್ನು ಮರೆಯಲ್ಲಿ ಕೊಂದರು. ದೊಡ್ಡ ದೊಡ್ಡವರೇ ಕಾಲ ಬಂದಂತೆ ಮಾಡಿದ್ದರಿಂದ ಮೇಲೆ ನಿಮ್ಮ ನಮ್ಮಂತಹರ ಕತೆ ಏನು? ಅದಿರಲಿ; ನಿನಗೆ ನಮ್ಮ ರಾಮಸೇವಕರ ಪರಿಚಯವಿದೆ ತಾನೆ?'

'ಸ್ವಲ್ಪ ಗೊತ್ತಿದೆ' – ಹೋರಿರಾಮ ನಿರುತ್ಸಾಹದ ಸ್ವರದಿಂದ ಹೇಳಿದ.

'ಅವರ ಪುರೋಹಿತ ಕೆಲಸ ನಾನೇ ಮಾಡುವುದು. ಅವರಿಗೆ ಒಳ್ಳೆಯ ವಿಶಾಲ ಭೂಮಿ ಇದೆ. ಹಣದ ಲೇವಾದೇವಿ ಸಹ ನಡೆಸುತ್ತಾರೆ. ಅಂತಹ ದರ್ಬಾರಿನ ಜನ ಸಿಗುವುದೇ ಕಷ್ಟ. ಅವರ ಹೆಂಡತಿ ತೀರಿಹೋಗಿ ಕೆಲವು ತಿಂಗಳು ದಾಟಿಹೋಯಿತು. ಮಕ್ಕಳು ಮರಿಗಳಿಲ್ಲ. ನಿಮ್ಮ ರೂಪಳ ಮದುವೆ ಅವರೊಡನೆ ಮಾಡಿಸುವುದಿದ್ದರೆ ನಾನು ಅವರನ್ನೊಪ್ಪಿಸುತ್ತೇನೆ. ನನ್ನ ಮಾತು ಅವರೆಂದೂ ಅಲ್ಲ ಎಂದವರಲ್ಲ. ನಿನ್ನ ಮಗಳಿಗೂ ಪ್ರಾಯ ತುಂಬಿದೆ. ಎಷ್ಟಾದರೂ ಲೋಕವೇ ಈಗ ಹಾಳಾಗುತ್ತಿದೆ. ಏನಾದರೂ ನಡೆದುಬಿಟ್ಟರೆ ಮತ್ತೆ ಮುಖಕ್ಕೆ ಮಸಿ! ಇದೀಗ ಒಳ್ಳೆಯ ಸಂದರ್ಭ. ಮಗಳ ಮದುವೆಯೂ ಆದೀತು; ನಿನ್ನ ಭೂಮಿಯೂ ಉಳಿದೀತು. ಖರ್ಚು ವೆಚ್ಚ ಎಲ್ಲ ಉಳಿಸಬಹುದು.'

ರಾಮಸೇವಕರು ಹೋರಿರಾಮನಿಂದ ಬರೇ ಮೂರು ನಾಲ್ಕು ವರ್ಷ ಸಣ್ಣವರು. ಅಂತಹ ಮನುಷ್ಯನೊಡನೆ ರೂಪಳ ಮದುವೆಯ ಮಾತುಕತೆ ನಡೆಸುವುದು ಸಹ ಅಪಮಾನಕರವಾಗಿತ್ತು. ಹೂವಿನಂತಹ ರೂಪಳೆಲ್ಲಿ, ಆ ಮುದಿಗೂಬೆ ಎಲ್ಲಿ? ಜೀವನದಲ್ಲಿ ಹೋರಿರಾಮನು ದೊಡ್ಡ ದೊಡ್ಡ ಏಟು

ಗಳನ್ನು ತಿಂದಿದ್ದ. ಆದರೆ ಈ ಏಟು ತಡೆಯಲಸಾಧ್ಯವಾದ ಏಟು. ಇಂ
ಮಗಳ ಮಾರಾಟ ಮಾಡುವ ಸೂಚನೆಯನ್ನು ಕೇಳಬೇಕಾಗಿ ಬಂತಲ್ಲವೆ
ಹಾಗೆಂದು ಅದನ್ನು ತೀರಾ ತಿರಸ್ಕಾರ ಮಾಡಿಬಿಡುವ ಸಾಹಸವೂ ಅವನಲ್ಲಿದ್ದಿ
ಬೇಸರದಿಂದ ಅವನ ತಲೆಯೇ ತಗ್ಗಿಹೋಯಿತು.

'ಏನು ಹೇಳುತ್ತೀ ಈಗ?'— ಪಂಡಿತರು ಒಂದು ಕ್ಷಣ ತಾಳಿ ಕೇಳಿದರು

ಹೋರಿರಾಮ ಒಂದು ನಿಟ್ಟುಸಿರು ತೆಗೆದು—'ಯೋಚಿಸಿ ಹೇಳುತ್ತೇನೆ
ಎಂದ.

'ಇದರಲ್ಲಿ ಯೋಚಿಸುವ ವಿಚಾರವೇನಿದೆ?'

'ದನಿಯಳೊಡನೆ ಸಹ ಕೇಳಿನೋಡಬೇಕು.'

'ನೀನೊಪ್ಪಿದೆಯೋ – ಇಲ್ಲವೋ?'

'ಸ್ವಲ್ಪ ಯೋಚಿಸಲಿಕ್ಕವಕಾಶ ಕೊಡಿ ಸ್ವಾಮಿ. ಈ ತನಕ ನಮ
ಕುಲದಲ್ಲಿ ಇಂತಹ ವಿಚಾರ ನಡೆದಿಲ್ಲ. ಈ ಕುಲಮರ್ಯಾದೆಯನ್ನಾದರು
ಕಾಪಾಡಬೇಡವೇ?'

'ನಾಲ್ಕೈದು ದಿನಗಳೊಳಗೆ ನನಗೆ ಇದಕ್ಕುತ್ತರ ಸಿಗಬೇಕು. ಅ
ವಾದರೆ ಯೋಚಿಸುತ್ತಲೇ ಇರು. ಮನೆಮಾರೆಲ್ಲ ದಿವಾಳಿಯಾಗಿ ಹೋಗಲಿ.

ದಾತಾದೀನರು ಹೋದರು. ಹೋರಿರಾಮನ ವಿಚಾರದಲ್ಲಿ ಅವರಿ
ಹೆಚ್ಚಿನ ಸಂದೇಹವಿದ್ದಿಲ್ಲ. ಅವರಿಗೆ ಸಂಶಯ ದನಿಯಳದೇ. ಅವಳ ನಾಲ
ಬಹಳ ಉದ್ದ. ಪ್ರಾಣಹೋದರೂ ಮಾನ ಬಿಡಲಾರಳು. ಆದರೆ ಹೋರಿರಾವ
'ಹೂಂ' ಎಂದುಬಿಟ್ಟರೆ ಅವಳು ಕೂಡಾ ಕೊನೆಗೆ ಅತ್ತು ಕೂಗಿ ಒಪ್ಪಲಿಕ್ಕೂ
ಸಾಕು. ಅತ್ತ ಗದ್ದೆ ಕಳೆದುಹೋದರೆ ಸಹ ಮಾನ ಹೋಗುವುದಲ್ಲವೇ?

'ಏನು, ಪಂಡಿತರು ಬಂದಿದ್ದರಲ್ಲ?' – ದನಿಯಾ ಬಂದು ಗಂಡನೊಡನ
ಕೇಳಿದಳು.

'ಮತ್ತೇನಿಲ್ಲ; ಅದೇ, ಗೇಣಿವ್ಯಾಜ್ಯದ ವಿಚಾರ ಕೇಳಬಂದಿದ್ದರು.'

'ಬರೇ ಕಣ್ಣೀರು ಸುರಿಸ ಬಂದಿರಬೇಕು. ಬರುವಾಗ ಒಂದು ನೂರ
ರೂಪಾಯಿಯಾದರೂ ಕೊಂಡು ಬಂದು ಕೊಡಲಿಕ್ಕಾಗಲಿಲ್ಲವೇ ಅವರಿಗೆ?'

'ಯಾವ ಬಾಯಿಂದ ತಾನೇ ಅವರನ್ನು ಕೇಳುವುದು?'

'ಹಾಗಾದರೆ ಅವರು ಬಂದುದಾದರೂ ಏಕೆ?'

'ಮತ್ತೇನು? ರೂಪಳ ನೆಂಟಸ್ತಿಕೆಯ ವಿಚಾರ ಮಾತಾಡಲಿಕ್ಕೆ.'

‘ ಯಾರೊಡನೆ ? ’

‘ ರಾಮಸೇವಕರ ವಿಚಾರ ಗೊತ್ತಿದೆಯೆ ? ಅವರೊಡನೆ. ’

‘ ನಾನೆಲ್ಲಿ ಅವರನ್ನು ಕಂಡಿದ್ದೇನೆ? ಅವರ ಹೆಸರು ಮಾತ್ರ ಬಹು ದಿವಸಗಳಿಂದ ಕೇಳಿ ಗೊತ್ತು. ಆದ್ದರಿಂದ ಅವರಿಗೀಗ ತಕ್ಕ ಮಟ್ಟಿಗೆ ಪ್ರಾಯವಾಗಿರಬೇಕು.’

‘ ಹಾಂ. ಹೆಚ್ಚು ಕಡಿಮೆ ಹಾಗೆಯೇ ಸರಿ.’

‘ ನೀನು ಪಂಡಿತರನ್ನು ಗದರಿಸಿ ಓಡಿಸಲಿಲ್ಲವೇ? ನನ್ನ ಹತ್ತಿರ ಪ್ರಸ್ತಾಪ ತೆಗೆಯುತ್ತಿದ್ದರೆ ಎಂದಿಗೂ ಮರೆಯಲಾರದ ಮಾತು ಹೇಳುತ್ತಿದ್ದೆ.’

“ ಗದರಿಸಲಿಲ್ಲ. ಆದರೂ ಆಗುವುದಿಲ್ಲವೆಂದು ಹೇಳಿಬಿಟ್ಟೆ. ಅವರೆನ್ನುತ್ತಿದ್ದರು – ‘ಯಾವ ಖರ್ಚಿನ ಗೊಡವೆಯೂ ಇಲ್ಲದೆ ಮದುವೆಯಾದೀತು. ಹಾಗೆಯೇ, ನಮ್ಮ ಭೂಮಿಯೂ ಉಳಿದೀತು’ ಎಂಬುದಾಗಿ. ”

‘ ಹುಡುಗಿಯನ್ನು ಹಣಕ್ಕಾಗಿ ಮಾರಿಬಿಡಿ–ಎಂಬುದಾಗಿ ಸ್ಪಷ್ಟವಾಗಿಯೇ ಅವರು ಹೇಳಬಹುದಿತ್ತು. ಅಬ್ಬ ! ಮುದುಕನ ಧೈರ್ಯವೇ ? ’

ಆದರೆ ಹೋರಿರಾಮನು ಯೋಚಿಸುತ್ತ ಹೋದಂತೆ ಅವನ ಹಟ ಈ ವಿಚಾರದಲ್ಲಿ ಕಡಿಮೆಯಾಗತೊಡಗಿತು. ಕುಲಮರ್ಯಾದೆಯ ಯೋಚನೆ ಅವನಿಗೆ ಧಾರಾಳವಾಗಿತ್ತು ; ನಿಜ. ಆದರೆ ಗುಣವಾಗದ ಅಸಾಧ್ಯ ರೋಗ ತಾಗಿದರೆ ಇದು ಭೋಜ್ಯ, ಇದು ಅಭೋಜ್ಯ – ಎಂಬುದಾಗಿ ಮನುಷ್ಯ ಯೋಚಿಸುವನೇ ? ದಾತಾದೀನರಲ್ಲಿ ಅವನು ಹೇಳಿದ್ದ ಉತ್ತರ ಪೂರ್ಣ ರೂಪದ ತಿರಸ್ಕಾರವಾಗಿದ್ದಿಲ್ಲ. ಪ್ರಾಯ ಎಷ್ಟಾದರೂ ಅದೊಂದು ದೊಡ್ಡ ವಿಚಾರವಲ್ಲ. ಜೀವನ ಮರಣಗಳೆಲ್ಲ ಅದೃಷ್ಟಾಧೀನ ! ಮುದುಕರು ಗಟ್ಟಿ ಮುಟ್ಟಾಗಿರುತ್ತಾರೆ; ಯುವಕರು ಹೊರಟೇಹೋಗುತ್ತಾರೆ ! ರೂಪಳ ಹಣೆಯಲ್ಲಿ ಸುಖವನ್ನೇ ಬರೆದಿದ್ದರೆ ದುಃಖವು ಎಂದಿಗೂ ಸೋಂಕಲಾರದು. ಈಗ ಸ್ವಲ್ಪ ಹಣ ನಗದಾಗಿ ತೆಗೆದುಕೊಂಡರೂ ಅನುಕೂಲವಾದೊಡನೆ ಹಿಂತಿರುಗಿಸಿಬಿಟ್ಟರಾಯಿತು. ಹಾಗಾದರೆ ಹುಡುಗಿಯನ್ನು ಮಾರಿದ ಮಾತೇ ಬರಲಾರದು. ನಾಚಿಕೆ ಅಪಮಾನಗಳಿಗೂ ಎಡೆಯಾಗಲಾರದು. ಶಕ್ತಿ ಇರುತ್ತಿದ್ದರೆ ರೂಪಳ ವಿವಾಹವನ್ನು ಯಾರಾದರೂ ಒಳ್ಳೆಯ ತರುಣನೊಡನೆಯೇ ನಡೆಸಿಬಿಡಬಹುದಿತ್ತು. ಮದುವೆಯ ಊಟೋಪಚಾರಗಳಿಗಾಗಿಯೂ ಕೈಬಿಟ್ಟು ಖರ್ಚು ಮಾಡಬಹುದಿತ್ತು. ಆದರೆ ದೇವರು ಆ ಸಾಮರ್ಥ್ಯ ಕೊಟ್ಟಿಲ್ಲ

ವೆಂದಾದ ಮೇಲೆ – ಬರೀ 'ಕುಶ ಕನ್ಯೆ' ಕೊಡುವುದಲ್ಲದೆ ಬೇರೇನು ತಾನೆ ಮಾಡಲಾದೀತು ? ಜನರೆಲ್ಲ ನಗಾಡಿಯಾರು. ಹಾಗೆ ನಗಾಡಿದರೆ ನಗಲಿ ಅವರೆಲ್ಲ ಬರೀ ನಗುವುದು ಮಾತ್ರವಲ್ಲದೆ ಬೇರೇನಾದರೂ ಸಹಾಯ ಮಾಡ ಲಿರುವರೇ ? ಅಂಥವರ ನಗುವಿಗೇನು ಬೆಲೆ? ಆದರೆ ಈಗ ದನಿಯಳನ್ನೊಪ್ಪಿ ಸುವುದು ದೊಡ್ಡ ಕಷ್ಟದ ವಿಚಾರ ! ಅವಳಿಗೆ ಆ ಹಳೆಯ ಮಾನಮರ್ಯಾದೆಯ ಯೋಚನೆ ಇನ್ನೂ ಹೋಗಿಲ್ಲ. ಇದು ಮಾನ ಕಾಪಾಡುವ ಕಾಲವಲ್ಲ – ಪ್ರಾಣ ಕಾಪಾಡಿಕೊಳ್ಳುವ ಕಾಲ ! ಅಷ್ಟೆಲ್ಲ ಅಭಿಮಾನವಿದ್ದರೆ ಈಗ ಒಂದ ಐನೂರು ರೂಪಾಯಿ ತರಲಿ ನೋಡುವಾ ? ಇಲ್ಲಿ ಈಗ ಐನೂರು ರೂಪಾಯಿ ಬಿಟ್ಟು ಐನೂರು ಕಾಸೂ ಇಲ್ಲವಾಗಿದೆ !

ಎರಡು ಮೂರು ದಿನ ದಾಟಿತು. ಆದರೆ ಈ ವಿಚಾರದಲ್ಲಿ ಮತ್ತೆ ಮಾತು ಕತೆ ನಡೆಯಲಿಲ್ಲ. ವಿಚಾರ ವಿಮರ್ಶೆಗಳು ಮಾತ್ರ ಒಳಗೊಳಗೇ ನಡೆಯು ತ್ತಲೇ ಇದ್ದುವು.

ದನಿಯಾ ಹೇಳುತ್ತಿದ್ದಳು – 'ವಧೂವರರು ಸರಿಯಾದ ಜೋಡಿ ಯಾದಾಗಲೇ ಆ ಮದುವೆಯಲ್ಲಿ ಒಂದು ಆನಂದ. ಮಾತ್ರವಲ್ಲದೆ, ಮನೆಯಲ್ಲಿ ಅತ್ತೆ, ಮಾವ, ಅತ್ತಿಗೆ, ಅಕ್ಕ ಇವರೆಲ್ಲ ಇಲ್ಲವಾದರೆ, ಗಂಡನ ಮನೆಯ ಸುಖ ವಾದರೂ ಏತರದು ? ಕೆಲ ದಿನಗಳ ಮಟ್ಟಿಗಾದರೂ ಹುಡುಗಿ ಮನೆಗೆಲಸದ ಭಾರವಿಲ್ಲದೆ ಸುಖವಾಗಿರುವುದು ಬೇಡವೇ ? ಹಿಂದೆಯೂ ಇಲ್ಲ, ಮುಂದೆಯೂ ಇಲ್ಲ – ಎಂದಾದರೆ ಕಷ್ಟವಲ್ಲವೇ ? '

ಹೋರಿರಾಮ ಹೇಳಿದ – 'ನೀನು ಈ ಮನೆಗೆ ಬರುವಾಗ ಅತ್ತೆ, ಮಾವ, ಇಬ್ಬರು ಭಾವಂದಿರು – ಎಲ್ಲ ಇದ್ದಿಲ್ಲವೇ ? ನೀನು ಯಾವ ಸುಖವನ್ನನುಭವಿ ಸಿದೆ ಹೇಳು ನೋಡುವಾ ? '

'ಎಲ್ಲ ಮನೆಗಳಲ್ಲೂ ಅಂತಹ ಪ್ರಾಣಿಗಳೇ ಇರುತ್ತಾರೆಯೇ ? '

'ಮತ್ತೆ ? ಅಂಥವರಲ್ಲದೆ ಆಕಾಶದಿಂದ ಇಳಿದು ಬಂದ ದೇವತೆಗಳಿರು ತ್ತಾರೆಯೇ ? ಒಬ್ಬಳೇ ಆದರೆ – ಅವಳನ್ನು ಕೇಳುವವರಿಲ್ಲ, ಗದರಿಸುವವರಿಲ್ಲ. ತುಂಬಾ ಜನರು ಮನೆಯಲ್ಲಿದ್ದರೆ ಅವರೆಲ್ಲರನ್ನೂ ತೃಪ್ತಿಪಡಿಸುತ್ತಿರಬೇಕು. ಯಾರಿಗಾದರೂ ಒಬ್ಬನಿಗೆ ಆಗುವಂತಿರದಿದ್ದರೆ ಅವನು ಇವಳ ವೈರಿಯಾಗು ತ್ತಾನೆ. ಹಾಗಾದ್ದರಿಂದ ಒಬ್ಬೊಂಟಿಗಳಾಗಿರುವುದು ಎಷ್ಟೋ ವಾಸಿ. '

ಮಾತು ಅಷ್ಟರಲ್ಲೇ ನಿಂತುಹೋಯಿತು. ಆದರೆ ಕ್ರಮೇಣ ದನಿಯಳ

ಅದ್ದಿ ಸಡಿಲಾಗುತ್ತಾ ಬಂತು. ನಾಲ್ಕನೇ ದಿನ ಸ್ವತಃ ರಾಮಸೇವಕರೇ ಬಂದು ಬಿಟ್ಟರು. ಕಪ್ಪು ಕುದುರೆಯ ಮೇಲೆ ಕೂತುಕೊಂಡು ಬಂದಿದ್ದರು ಅವರು. ಒಟ್ಟಿಗೊಬ್ಬ ಉಗ್ರಾಣಿ ಸಹ ಇದ್ದ. ನೋಡುವಾಗ ದೊಡ್ಡ ಜಮೀನ್ದಾರ ನಂತಿದ್ದರು. ಪ್ರಾಯ ೪೦ಕ್ಕೆ ಮಿಕ್ಕಿರಬಹುದು. ತಲೆಗೂದಲು ತೆಳ್ಳಗಾಗಿತ್ತು. ಆದರೆ ಮುಖದಲ್ಲಿ ತೇಜಸ್ಸಿತ್ತು; ದೇಹ ಪುಷ್ಟವಾಗಿತ್ತು. ಅವರಿದಿರಲ್ಲಿ ಹೋರಿರಾಮ ಶೀರಾ ಮುದುಕನಂತೆ ಕಾಣುತ್ತಿದ್ದ. ಯಾವುದೋ ಒಂದು ಕೋರ್ಟು ಕೆಲಸದ ಮೇಲೆ ಹೊರಟಿದ್ದರು ಅವರು. ಮಧ್ಯಾಹ್ನದ ಬಿಸಿಲು ವಿಶೇಷವಿದ್ದುದರಿಂದ ಇಲ್ಲಿ ಸ್ವಲ್ಪ ವಿಶ್ರಾಂತಿಪಡೆದು ಹೋಗಬಯಸಿದ್ದರು.

ಹೋರಿರಾಮ ಓಡಿ ಹೋಗಿ ದುಲಾರಿಯ ಅಂಗಡಿಯಿಂದ ಸ್ವಲ್ಪ ಹಿಟ್ಟು ತುಪ್ಪ ತಂದ. ಪೂರಿ ತಯಾರಾಯಿತು. ಅತಿಥಿಗಳ ಫಲಾಹಾರ ಮುಗಿಯಿತು. ಆಗ ದಾತಾದೀನರೂ ಆಶೀರ್ವದಿಸಲಿಕ್ಕೆ ಬಂದು ಸೇರಿದರು. ಹಾಗಾಗಿ ಮಾತು ಕತೆ ಮೊದಲಾಯಿತು.

‘ ಏನಂತಹ ಕೋರ್ಟುಕೆಲಸ, ರಾಮಸೇವಕರೆ ? ’ – ದಾತಾದೀನರು ಕೇಳಿದರು.

ಸ್ವಲ್ಪ ಅಲಕ್ಷ್ಯಭಾವದಿಂದ ರಾಮಸೇವಕರೆಂದರು – “ಕೋರ್ಟುಕೆಲಸ ಒಂದಲ್ಲ ಒಂದು ಇದ್ದೇ ಇರುತ್ತದೆ ಸ್ವಾಮಿ. ಈ ಪ್ರಪಂಚದಲ್ಲಿ ಒಬ್ಬನು ಶೀರಾ ಸಾಧುವಾಗಿದ್ದರೆ ದಿನವೇ ಹೋಗಲಾರದು. ನಾವು ಬಗ್ಗಿದರೆ ಮತ್ತಷ್ಟು ಬಗ್ಗಿ ಸುತ್ತಾರೆ. ಕೋರ್ಟು, ಕಚೇರಿ, ಪೋಲಿಸರು, ಜಡ್ಜರು – ಎಲ್ಲರೂ ನಮ್ಮನ್ನು ಕಾಪಾಡಲಿಕ್ಕಾಗಿ ಇದ್ದಾರೆ, ನಿಜ. ಆದರೆ ಇವರೆಲ್ಲ ಸಾಧ್ಯವಿದ್ದರೆ ನಮ್ಮನ್ನು ಸತಾಯಿಸುವವರೇ. ಒಬ್ಬನು ಬಡವ, ಶಕ್ತಿಯಿಲ್ಲದವನು, ಎಂದಾದರೆ ಎಲ್ಲರೂ ತಲೆ ಕಡಿಯುವವರೇ. ದೇವರ ದಯದಿಂದ–ಯಾರೂ ಮೋಸಮಾಡಬಾರದು. ಮೋಸವು ದೊಡ್ಡ ಪಾಪ. ಆದರೆ ತಮ್ಮ ತಮ್ಮ ಹಣಕ್ಕಾಗಿ, ಅಥವಾ ನ್ಯಾಯ ಕ್ಕಾಗಿ, ಹೊಡೆದಾಡದಿರುವುದು ಅದಕ್ಕಿಂತ ದೊಡ್ಡ ಪಾಪ. ನೀವೇ ಹೇಳಿ – ಮನುಷ್ಯ ಎಷ್ಟರ ತನಕ ಬಗ್ಗಿಕೊಂಡಿರಬಹುದು ? ಇತ್ತ ಈ ರೈತ ಎಲ್ಲರಿಗೂ ಗುಲಾಮನಾಗಿರಬೇಕು. ಪಟೇಲ್ ಶಾನುಭೋಗರಿಗೆ ಕಪ್ಪಕಾಣಿಕೆ ಕೊಡುತ್ತಾ ಇರದಿದ್ದರೆ ಊರಲ್ಲಿರುವುದೇ ಕಷ್ಟ. ಜಮೀನ್ದಾರರ ಉಗ್ರಾಣಿ ಗುಮಾಸ್ತರು ಗಳ ಹೊಟ್ಟೆ ತುಂಬಿಸದಿದ್ದರೆ ದಿನವೇ ಹೋಗದು. ಇನ್ನು ಪೋಲಿಸಿನವರು, ಇನ್ಸ್‌ಪೆಕ್ಟರರು – ಇವರನ್ನೆಲ್ಲ ಅಳಿಯಂದಿರಂತೆಯೇ ಉಪಚರಿಸುತ್ತಿರಬೇಕು.

ಅವರು ಊರಿಗಿಳಿದಾಗ ಅವರ ಸೇವೆ ಸತ್ಕಾರ ಮಾಡದಿದ್ದರೆ, ಒಂದೇ ರಿಪೋರ್ಟಿನಲ್ಲಿ ಊರವರಿಗೆಲ್ಲ ಜೈಲಾಗಬಹುದು. ಅದರ ಮೇಲೆ ಮಣೆಗಾರರು, ತಹಸಿಲ್ದಾರರು, ಡೆಪ್ಯುಟೀ ಕಲೆಕ್ಟರ್, ಕಲೆಕ್ಟರ್, ಕಮಿಶನರ್ – ಅಂತು ಇವರೆಲ್ಲಾರು ಬಂದರೂ ಬಡ ರೈತ ಕೈಮುಗಿದು ಅವರ ಮುಂದೆ ಕಾದಿರಲೇ ಬೇಕು. ಅವರಿಗಾಗಿ ಹಾಲು ಹಣ್ಣು, ಕೋಳಿ ಕುರಿ – ಕೇಳಿದ್ದೆಲ್ಲ ಅಣಿಯಾಗಿರ ಬೇಕು! ಈಗೀಗ ಅವರ ಮೇಲೂ ಕೆಲವೆಲ್ಲ ಹೊಸ ಹೊಸ ಆಫೀಸರರು! ಇತ್ತೀಚೆ ಒಬ್ಬ ಡಾಕ್ಟರ್ ಬಂದು ಬಾವಿಗೆ ಮದ್ದು ಹಾಕಲಿಕ್ಕೆ ತೊಡಗಿದ್ದಾನೆ! ಮತ್ತೊಬ್ಬ ಡಾಕ್ಟರ್ ಬಂದು ಮನೆಗಳನ್ನೆಲ್ಲ ನೋಡಿ ಹೋಗುತ್ತಾನೆ. ಹಾಗೆಯೇ ಮಕ್ಕಳ ಪರೀಕ್ಷೆ ಮಾಡುವ ಇನ್ಸ್‌ಪೆಕ್ಟರ್ ಬೇರೊಬ್ಬ. ಅಂತು ಎಷ್ಟೆಲ್ಲ ಮಂದಿ ಇದ್ದಾರೋ – ದೇವರೇ ಬಲ್ಲ! ಅಂತು ಊರಿಗೊಬ್ಬ ಆಫೀಸರ್, ಕಾಡಿಗೊಬ್ಬ ಆಫೀಸರ್, ಹೆಂಡಕ್ಕೊಬ್ಬ ಆಫೀಸರ್, ಗ್ರಾಮ ಸುಧಾರಣೆಗೊಬ್ಬ, ಕೃಷಿ ಕೈಗಾರಿಕೆಗಿನ್ನೊಬ್ಬ – ಅಯ್ಯೋ! ಅದನ್ನೆಲ್ಲ ಲೆಕ್ಕ ಮಾಡಿ ಪೂರೈಸಲಿಕ್ಕಿಲ್ಲ. ಇತ್ತೀಚೆ ನಮ್ಮ ಜಮೀನ್ದಾರರು ಸಹ ನೊಗ ಒಂದಕ್ಕೆ ಎರಡೆರಡು ರೂಪಾಯಿಗಳ ಕಾಣಿಕೆಯನ್ನು ಹೊಸದಾಗಿ ವಿಧಿಸಿದ್ದಾರೆ. ಯಾರೋ ಒಬ್ಬ ದೊಡ್ಡ ಆಫೀಸರನ ಸೂಚನೆ ಇರಬೇಕು ಇದು. ಇದನ್ನು ಕೊಡಲಿಕ್ಕೆ ಸಾಧ್ಯವೇ ಇಲ್ಲವೆಂದು ನಮ್ಮೂರ ರೈತರೆಲ್ಲ ನಿರಾಕರಿಸಿ ಬಿಟ್ಟರು. ಇಡೀ ಊರವರ ಮೇಲೆ 'ಕೇಸ್' ಆಯಿತು. ಬಂದ ಒಬ್ಬ ಆಫೀಸರ್ ಸಹ ಜಮೀನ್ದಾರರ ಕಡೆಯೇ! ಈ ರೈತರು ಸಹ ಜೀವ ಇರುವ ಮನುಷ್ಯರು; ಅವರಿಗೂ ಮಕ್ಕಳು ಮರಿಗಳು ಇದ್ದಾರೆ; ಅವರಿಗೂ ಮಾನ ಮರ್ಯಾದೆ ಇದೆ – ಇವನ್ನೆಲ್ಲ ಯಾರು ಕೇಳುತ್ತಾರೆ?

"ಯೋಚಿಸಿದರೆ ಇದೆಲ್ಲ ನಮ್ಮ ಸಾಧುತನದ ಪರಿಣಾಮ. ನಾನು ಎಲ್ಲರ ಹತ್ತಿರ - ನೀವಾರೂ ಹೊಸ ಕಾಣಿಕೆ ಕೊಡಲೇ ಬಾರದು, ಗದ್ದೆ ಬಿಡಲೂ ಬಾರದು – ಎಂಬುದಾಗಿ ಹೇಳುತ್ತ ಬಂದೆ. ಊರವರೆಲ್ಲ ನಾನು ಹೇಳಿದ ಹಾಗೆ ಕೇಳಿದರು. ಎಲ್ಲಾ ಒಗ್ಗಟ್ಟಾದ ಮೇಲೆ ಧನಿಗಳೂ ತಣ್ಣಗಾಗಿ ಹೋದರು. ಇಡೀ ಊರೇ ಒಂದಾದ ಮೇಲೆ ಅವರಾದರೂ ಏನು ಮಾಡಿಯಾರು? ಗದ್ದೆಗಳನ್ನು ಬಿಡಿಸಿಕೊಂಡರೂ ಹೊಸದಾಗಿ ಬೇಸಾಯ ಮಾಡುವವರಾರು?

"ಅಂತು ಈಗಿನ ಕಾಲದಲ್ಲಿ ಸ್ವಲ್ಪ ಬಿಸಿಯಾಗಿರದಿದ್ದರೆ ಯಾವ ಕೆಲಸವೂ ನಡೆಯಲಾರದು. ಮಗು ಸಹ ಅಳದಿದ್ದರೆ ತಾಯಿ ಹಾಲು ಕೊಡುವಳೇ?"

ಬಿಸಿಲ ಭರ ಕಡಮೆಯಾದ ಬಳಿಕ ರಾಮಸೇವಕರು ಹೊರಟುಹೋದರು. ಹೋರಿರಾಮ ಮತ್ತು ದನಿಯರೊಳಗಿನ ಭಿನ್ನಾಭಿಪ್ರಾಯ ದೂರವಾಗುತ್ತಾ ಬಂತು.

ದಾತಾದೀನರ ಮಂತ್ರ ತಾಗಿಹೋಯಿತು. 'ಈಗೇನು ಹೇಳುವಿರಿ ?' – ಅವರು ಕೇಳಿದರು.

ಹೋರಿರಾಮನು ದನಿಯಳತ್ತ ಕೈತೋರಿಸಿ ಹೇಳಿದ–'ಅವಳನ್ನು ಕೇಳಿ.'

'ನಾನು ಕೇಳುತ್ತಿರುವುದು ನಿಮ್ಮಿಬ್ಬರನ್ನೂ' – ದಾತಾದೀನರೆಂದರು.

ದನಿಯಳೆಂದಳು – 'ಪ್ರಾಯವೇನೋ ಸ್ವಲ್ಪ ಹೆಚ್ಚಾಗಿದೆ. ಆದರೆ ನೀವೆಲ್ಲ ಒಪ್ಪುವುದಾದರೆ ನನ್ನದೂ ಒಪ್ಪಿಗೆಯೇ ಸರಿ. ಮತ್ತೆಲ್ಲ ಹಣೆಯಲ್ಲಿ ಬರೆದಂತೆಯೇ ಆಗುವುದು ತಾನೆ? ಅಂತು ಮನುಷ್ಯನೇನೋ ಒಳ್ಳೆಯವನು.'

ಹೋರಿರಾಮನಿಗಂತು ರಾಮಸೇವಕರ ಮೇಲೆ ಒಳ್ಳೆಯ ವಿಶ್ವಾಸ ಕೂತುಹೋಗಿತ್ತು. ಕಷ್ಟದಲ್ಲಿದ್ದವರನ್ನು ಕಾಪಾಡುವ ಬುದ್ಧಿ ಅವರದು! ಇಂಥಾ ಆಪದ್ಬಾಂಧವನು ಕೈಗೆ ಸಿಕ್ಕಿದಾಗ ಬಿಡುವುದು ಸರಿಯೇ?

ವಿವಾಹಮುಹೂರ್ತ ನಿಶ್ಚಯವಾಯಿತು. ಗೋಬರನಿಗೂ ಕಾಗದ ಬರೆದುಬಿಡುವುದು. ಬರುವುದೂ ಬಾರದಿರುವುದೂ ಅವನಿಷ್ಟ. ತನಗೆ ಕಾಗದ ಬರೆಯಲೇ ಇಲ್ಲವೆಂದು ಮತ್ತೆ ಅಪವಾದ ಬರಬಾರದು. ಸೋನೆಯನ್ನೂ ಬರಹೇಳಬೇಕು. ಅಂತು ಎಲ್ಲವೂ ನಿಶ್ಚಯವಾಯಿತು.

ಆಗ ದನಿಯಳೆಂದಳು – 'ಗೋಬರ ಅಂಥಾ ಹಾಳುಬುದ್ಧಿಯವನಲ್ಲ. ಆದರೆ ಅವನನ್ನು ಜುನಿಯಾ ಬರಲು ಬಿಡಬೇಕಲ್ಲ? ಪರವೂರಿಗೆ ಹೋದ ಮೇಲೆ ಮನೆಯನ್ನು ಪೂರ್ತಿ ಮರೆತೇಬಿಟ್ಟಿದ್ದಾನೆ. ಒಂದು ಕಾಗದ ಚೀಟಿ ಸಹ ಇಲ್ಲ. ಹೇಗಿದ್ದಾನೆಂಬುದೂ ಗೊತ್ತಿಲ್ಲ.' – ಹೀಗೆ ಹೇಳುತ್ತಿರುವಾಗಲೇ ಅವಳ ಕಣ್ಣಲ್ಲಿ ನೀರು ಬಂತು.

ಗೋಬರನಿಗೆ ಕಾಗದ ಸಿಕ್ಕಿತು. ಅವನು ಒಡನೆಯೇ ಹೊರಡಲಣಿಯಾದ. ಜುನಿಯಳಿಗೆ ಹೊರಡಲು ಅಷ್ಟು ಮನಸ್ಸಿದ್ದಿಲ್ಲ. ಆದರೂ ಈ ಸಂದರ್ಭದಲ್ಲಿ ಏನೂ ಹೇಳಲಾರದವಳಾಗಿದ್ದಳು. ತಂಗಿಯ ಮದುವೆಗೆ ಅಣ್ಣ ಹೋಗದಿದ್ದರೆ ದೊಡ್ಡ ತಪ್ಪಲ್ಲವೆ? ಸೋನೆಯ ಮದುವೆಗೆ ಹೋಗದ್ದೇ ದೊಡ್ಡ ಅಪಕೀರ್ತಿಗೆ ಕಾರಣವಾಗಿದೆ.

ಗೋಬರನೂ ಆರ್ದ್ರಕಂಠದಿಂದ ಹೇಳಿದ – 'ತಂದೆ ತಾಯಿಯರಿಂದ

ಬೇರೆ ಆಗಿರುವುದು ಎಷ್ಟಾದರೂ ಸರಿಯಲ್ಲ. ಈಗ ನಮ್ಮ ಕೈಕಾಲು ಗಟ್ಟಿ ಇದೆ; ಬೇರೆ ಇದ್ದುಬಿಡುತ್ತೇನೆ. ಸಾಲದುದಕ್ಕೆ ಜಗಳ ಸಹ ಮಾಡುತ್ತೇನೆ. ಆದರೆ ಅವರೇ ತಾನೇ ನಮ್ಮನ್ನು ಹೊತ್ತು ಹೆತ್ತು, ಸಾಕಿ ಸಲಹಿ, ದೊಡ್ಡದು ಮಾಡಿದ್ದು ? ಈಗವರು ನಾಲ್ಕು ಮಾತು ಹೇಳಿದರೂ ನಾವು ಕೇಳಿಕೊಂಡು ಸುಮ್ಮನಿರಬೇಕು. ನನಗೆ ಇತ್ತೀಚೆ ಬಹಳವಾಗಿ ಅಪ್ಪ ಅಮ್ಮನ ನೆನಪಾಗುತ್ತಿದೆ. ಆ ಸಲ ನನಗೆ ಅವರ ಮೇಲೆ ಏಕೆ ಕೋಪ ಬಂತೋ–ಗೊತ್ತಾಗುವುದಿಲ್ಲ. ನಿನ್ನಿಂದಾಗಿ ತಂದೆ ತಾಯಿಯರನ್ನು ಸಹ ಬಿಟ್ಟಿರಬೇಕಾಯಿತು.'

ಆಗ ಜುನಿಯಾ ಸಟ್ಟನೆ ಹೇಳಿದಳು – 'ಆ ಪಾಪ ನನ್ನ ತಲೆಯ ಮೇಲೆ ಹೊರಿಸಬೇಡಿ. ನೀವೇ ಜೇಕೇದು ಕಾದಾಡಿದಿರಿ ಆ ಸಲ. ನಾನು ಅಷ್ಟು ದಿನಗಳ ತನಕ ನಿಮ್ಮ ಮನೆಯಲ್ಲಿದ್ದೆ. ಅವರಿಗಿದಿರಾಗಿ ಉಸಿರನ್ನೂ ಜೋರಾಗಿ ಬಿಟ್ಟದ್ದಿಲ್ಲ, ಗೊತ್ತೇ ?'

'ನಿನ್ನಿಂದಾಗಿಯೇ ಅಂದು ಜಗಳವಾದುದು.'

'ಹೌದು; ನನ್ನಿಂದಾಗಿಯೇ ಆದುದು. ನಾನು ಸಹ ನಿಮಗಾಗಿ ನನ್ನ ಮನೆಮಾರು ಬಿಟ್ಟು ಬರಲಿಲ್ಲವೇ ?'

'ನಿನ್ನ ಮನೆಯಲ್ಲಿ ನಿನ್ನನ್ನು ಯಾರು ಕೇಳುತ್ತಿದ್ದರು ? ಅಣ್ಣಂದಿರು ಬೈಯ್ಯುತ್ತಿದ್ದರು. ಅತ್ತಿಗೆಯಂದಿರು ಗದರಿಸುತ್ತಿದ್ದರು. ನಿನ್ನಪ್ಪನಂತು ಸಿಕ್ಕಿದರೆ ನಿನ್ನನ್ನು ಹಸಿ ಹಸಿಯೇ ತಿನ್ನಲಿಕ್ಕೆ ಅಣಿಯಾಗಿದ್ದ.'

'ಅದು ನಿಮ್ಮಿಂದಾಗಿಯೇ.'

'ಅದು ಹೇಗೂ ಆಗಲಿ. ಇನ್ನು, ಬದುಕಿರುವ ತನಕ ಅವರ ಮನಸ್ಸಿಗೆ ಸ್ವಲ್ಪವಾದರೂ ಸಮಾಧಾನವಾಗುವ ರೀತಿಯಲ್ಲಿ ಹೋಗಿ ಇದ್ದುಬಿಡುವಾ. ಅವರ ಇಚ್ಛೆಗೆ ವಿರುದ್ಧವಾಗಿ ಯಾವ ಕೆಲಸವನ್ನೂ ಮಾಡುವುದು ಬೇಡ. ಅಪ್ಪನಂತು ಒಂದು ಸಲ ಸಹ ನನಗೆ ಗದರಿಸಿದ್ದಿಲ್ಲ – ಅಷ್ಟು ಒಳ್ಳೆಯವರು ! ಅಮ್ಮ ಎಷ್ಟೋ ಸಲ ನನಗೆ ಹೊಡೆದಿದ್ದರು – ನಿಜ. ಆದರೆ ಅವಳು ಹೊಡೆದ ಮೇಲೆ ಏನಾದರೊಂದು ಬಗೆ ತಿನ್ನಲಿಕ್ಕೆ ಕೊಟ್ಟೇಕೊಡುತ್ತಿದ್ದಳು. ಒಮ್ಮೆ ಹೊಡೆದರೂ, ಮತ್ತೊಮ್ಮೆ ನಾನು ನಗುವುದನ್ನು ಕಾಣುವ ತನಕ ಅವಳಿಗೆ ಸಮಾಧಾನವಾಗುತ್ತಿದ್ದಿಲ್ಲ.'

ಇಬ್ಬರೂ ಊರಿಗೆ ಹೊರಟರು. ಆದರೆ ಮನೆಗೆ ಬಂದು ನೋಡಿದಾಗ ಗೋಬರನಿಗೆ ಬಹಳ ಬೇಸರವಾಯಿತು. ಮನೆಯ ಪಶ್ಚಿಮ ಭಾಗ ಕುಸಿದು

ಬೀಳುವುದರಲ್ಲಿತ್ತು. ಹಟ್ಟಿಯಲ್ಲಿ ಒಂದು ಎತ್ತು ಮಾತ್ರ ಇತ್ತು. ಅದು ಕೂಡಾ ಮುದಿಯಾಗಿ ಹೋಗಿದೆ. ದನಿಯಾ ಮತ್ತು ಹೋರಿರಾಮ ಸಹ ಬಹಳ ನಿತ್ರಾಣವಾಗಿ ಹೋಗಿದ್ದಾರೆ. ಇನ್ನು ಆ ಮನೆಯನ್ನು ಹೇಗೆ ಸುಧಾರಿಸುವುದೆಂಬುದೇ ಅವನಿಗೆ ತೋರಲಿಲ್ಲ. ಆ ಊರ ದೊಡ್ಡ ಮನುಷ್ಯರೆಲ್ಲ ಹೋರಿರಾಮನ ಧನಿಗಳೇ. ಪ್ರತಿಯೊಬ್ಬರ ಹಂಗಿನಲ್ಲೂ ಅವನಿದ್ದಾನೆ. ಆ ಊರ ಹೆಚ್ಚಿನ ರೈತರೆಲ್ಲ ಬೆವರು ಸುರಿಸಿ, ರಕ್ತ ಹರಿಸಿ, ಏನಾದರೂ ಗದ್ದೆಯಲ್ಲಿ ಬೆಳಸುತ್ತಾರೆ. ಕೊನೆಗೆ ಅದನ್ನೆಲ್ಲ ಯಾರ್ಯಾರಿಗೆ ಸಾಲ, ಮೂಲ – ಎಂಬುದಾಗಿ ಕೊಟ್ಟುಬಿಟ್ಟು, ತಾವು ಸುಮ್ಮನೆ ಕೂತು ರಾಮನಾಮ ಜಪಿಸುತ್ತಾರೆ! ಅಪ್ಪನಾದ್ದರಿಂದ ಇದನ್ನೆಲ್ಲ ತಾಳಿಕೊಂಡಿದ್ದಾನೆ. ತನ್ನಿಂದ ಒಂದು ದಿನದ ಮಟ್ಟಿಗೂ ಇಂತಹ ಪರಿಸ್ಥಿತಿಯನ್ನು ತಾಳಿಕೊಂಡಿರಲು ಸಾಧ್ಯವಿಲ್ಲ. ಹಾಗೆಂದು ಇದು, ಹೋರಿರಾಮನೊಬ್ಬನ ಕತೆ ಮಾತ್ರವಲ್ಲ. ಇಡೀ ಊರ ರೈತರ ಪಾಡೂ ಹೆಚ್ಚು ಕಡಮೆ ಇದೇ ರೀತಿ. ಜೀವನದಲ್ಲಿ ಅವರಿಗೊಂದು ಆಶೆಯೂ ಇಲ್ಲ, ಆಕಾಂಕ್ಷೆಯೂ ಇಲ್ಲ. ಕೇವಲ ಗೊಂಬೆಗಳಂತೆ ರಾತ್ರಿ ಹಗಲು ಕೆಲಸ ಮಾಡುತ್ತಾರೆ; ಯಾರ್ಯಾರಿಗೋ ತಿನ್ನಿಸುತ್ತಾರೆ. ಈಗ ಕಾರ್ತಿಕ ಮಾಸವಾಗಿದ್ದು ದವಸ ಧಾನ್ಯ ಮನೆಯೊಳಕ್ಕೆ ಬರುವ ಕಾಲವಾಗಿದ್ದರೂ ಯಾರ ಮುಖದ ಮೇಲೂ ಗೆಲುವಿಲ್ಲ, ನಗುವಿಲ್ಲ. ಬಂದುದನ್ನೆಲ್ಲ ಅಂಗಳದಿಂದಲೇ ಸಾಲಗಾರರೂ, ಶಾನುಭಾಗರೂ ಸಾಗಿಸಿಕೊಂಡು ಹೋಗಿಬಿಡುತ್ತಾರೆ. ಭವಿಷ್ಯವು ಯಾವಾಗಲೂ ಅಂಧಕಾರಮಯವಾಗಿಯೇ ಇರುತ್ತದೆ. ಇದರಿಂದ ವಿನೋದಚನೆಗೊಳ್ಳುವ ಸಂದರ್ಭವೂ ಇಲ್ಲ. ಮನೆ ಬಾಗಿಲಲ್ಲಿ ಕೊಳೆ ಕಸಗಳೆಲ್ಲ ಸೇರಿ ದುರ್ವಾಸನೆ ಬರುತ್ತಾ ಇದೆ. ನುಸಿ ಸೊಳ್ಳೆಗಳು ಹಾರಾಡುತ್ತಿವೆ. ಆದರೆ ಆ ರೈತರಿಗೆ ಕಣ್ಣು ಕಾಣಿಸುವುದಿಲ್ಲ, ಕಿವಿ ಕೇಳಿಸುವುದಿಲ್ಲ. ಅವರ ಮೂಗಿಗೆ ಸುಗಂಧ ದುರ್ಗಂಧಗಳ ಭೇದವೂ ಗೊತ್ತಾಗುವುದಿಲ್ಲ! ನಾಲಗೆಗೆ ರುಚಿ ನೋಡುವ ಶಕ್ತಿಯೇ ಇಲ್ಲ. ಏನಾದರೂ ತಿಂದುಕೊಂಡು ಪ್ರಾಣಧಾರಣ ಮಾಡಿಕೊಂಡಿರುತ್ತಾರೆ – ಅಷ್ಟೆ.

ಗೋಬರ ಎಳೆತನದಿಂದಲೇ ಹಳ್ಳಿಗಳ ಈ ಅವಸ್ಥೆ ನೋಡುತ್ತಿದ್ದ. ಆದರೆ ಕಳೆದ ನಾಲ್ಕು ವರ್ಷಗಳಲ್ಲಿ, ಅವನೊಂದು ಹೊಸ ಪ್ರಪಂಚವನ್ನು ಕಂಡು ಬಂದಿದ್ದಾನೆ. ದೊಡ್ಡ ದೊಡ್ಡ ಮನುಷ್ಯರೊಡನೆ ಇದ್ದುದರಿಂದ ಅವನ ಬುದ್ಧಿ ಎಚ್ಚರಗೊಂಡಿದೆ. ಅವನು ಕೆಲವೆಲ್ಲ ರಾಜಕೀಯ ಸಭೆಗಳಿಗೆ ಹೋಗಿ

ದೂರ ನಿಂತು ತುಂಬ ಭಾಷಣಗಳನ್ನೆಲ್ಲ ಕೇಳಿದ್ದ. ಆದರಿಂದಾಗಿ– 'ನಮ್ಮ ಭಾಗ್ಯ ನಮ್ಮ ಕೈಯಲ್ಲೇ ಇದೆ. ನಮ್ಮ ಕಷ್ಟಗಳನ್ನು ನಮ್ಮ ಬುದ್ಧಿ ಸಾಹಸಗಳಿಂದ ನಾವೇ ದೂರಮಾಡಿಕೊಳ್ಳಬೇಕು. ಯಾವ ದೇವತೆಯಾಗಲಿ, ಅಥವಾ ಗುಪ್ತ ಶಕ್ತಿಯಾಗಲಿ ಸುಮ್ಮನೆ ಸಹಾಯಕ್ಕೆ ಬರಲಾರದು'– ಎಂಬ ಎಲ್ಲ ವಿಚಾರಗಳನ್ನೂ ಅವನು ತಿಳಿದುಕೊಂಡಿದ್ದ. ಈಗ ಅವನಲ್ಲಿ ಆ ಹಳೆಯ ಉದ್ದಂಡತೆ ಹಾಗೂ ಗರ್ವ ಉಳಿದಿದ್ದಿಲ್ಲ. ಈಗ ಅವನು ನಮ್ರ ಹಾಗೂ ಉದ್ಯೋಗಶೀಲ ಯುವಕ. ವಿಶಾಲ ಪ್ರಪಂಚದ ಚಿಕ್ಕ ದೊಡ್ಡ ವಿಚಾರಗಳನ್ನೆಲ್ಲ ನೋಡಿ ಬಂದುದರಿಂದ ಅವನಲ್ಲಿ ಹೊಸ ತಿಳಿವಳಿಕೆ, ಹೊಸ ಹುರುಪು ಮೂಡಿಬಂದಿದ್ದುವು. ಬಂಧುತ್ವದಿಂದ ಒದಗಿ ಬಂದಿದ್ದ ದೈವೀಬಂಧನವನ್ನು ತನ್ನ ಸ್ವಾರ್ಥ ಲೋಭಗಳಿಂದ ಕಡಿದುಹಾಕಲು ಈಗ ಅವನಿಗೆ ಇಷ್ಟವಿದ್ದಿಲ್ಲ.

ಈಗ ಹೋರಿರಾಮನು ಯಾವುದಾದರೊಂದು ಕೆಲಸವನ್ನಾರಂಭಿಸಿದರೆ, ಗೋಬರ ಸ್ವತಃ ತಾನೇ ಮುಂದೆ ಹೋಗಿ ಆ ಕೆಲಸ ಮಾಡುತ್ತಿದ್ದ. ತನ್ನ ಹಿಂದಿನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವವನಂತೆ 'ಅಪ್ಪಾ! ಇನ್ನು ಯಾವ ಚಿಂತೆಯನ್ನೂ ಮಾಡಬೇಡಿ. ಎಲ್ಲ ಭಾರವನ್ನೂ ನನ್ನ ಮೇಲೆ ಬಿಟ್ಟು ಬಿಡಿ. ಪ್ರತಿ ತಿಂಗಳಲ್ಲೂ ನಿಮ್ಮ ಚಿಲ್ಲರೆ ಖರ್ಚಿಗೆ ನಾನು ಕಳುಹಿಸುತ್ತೇನೆ. ಇಷ್ಟು ದಿನ ತುಂಬಾ ಒದ್ದಾಡಿದಿರಿ. ಇನ್ನಾದರೂ ಸ್ವಲ್ಪ ಸುಖವಾಗಿರಿ. ನಾನಿರುವಾಗಲೂ ನೀವಿಷ್ಟು ಕಷ್ಟಪಡಬೇಕಾಯಿತಲ್ಲ– ಎಂಬುದಾಗಿ ನನಗೆ ಬೇಸರವಾಗುತ್ತಿದೆ' ಎಂಬುದಾಗಿ ಸಮಾಧಾನಪಡಿಸುತ್ತಿದ್ದ.

ಇದನ್ನು ಕೇಳಿದ ಹೋರಿರಾಮನಿಗೆ ರೋಮ ರೋಮಗಳಿಂದಲೂ ಮಗನ ಮೇಲೆ ಆಶೀರ್ವಾದದ ಮಳೆಗರೆಯಬೇಕೆಂದೆನಿಸಿತು. ಆಗ ಅವನು ತನ್ನ ಜೀರ್ಣ ದೇಹದಲ್ಲೂ ಒಂದು ತರದ ದೈವೀ ಸ್ಫೂರ್ತಿಯನ್ನು ಅನುಭವಿಸುತ್ತಿದ್ದ. ತನ್ನ ಸಾಲದ ಹೊರೆಯನ್ನು ಆಗಲೇ ಮಗನ ತಲೆಯಮೇಲೆ ಹೇರಿಸಿ ಅವನಿಗೆ ದುಃಖಕೊಡಲು ಹೋರಿರಾಮನಿಗೆ ಮನಸ್ಸಾಗಲಿಲ್ಲ. ಪಾಪ! ಅವನಾದರೂ ಸರಿಯಾಗಿ ಉಂಡು ತಿಂದು ಯೌವನದ ಸುಖವನ್ನು ಚನ್ನಾಗಿ ಅನುಭವಿಸಲಿ. ತಾನು ಯಾವ ಕೆಲಸಕ್ಕೂ ಸಿದ್ಧನೇ ಸರಿ. ವಿಶ್ರಾಂತಿ, ರಾಮನಾಮ, ಇತ್ಯಾದಿಗಳಿಗಿಂತ ಕೆಲಸದ ಜೀವನವೇ ತನ್ನ ಮಟ್ಟಿಗೆ ಉತ್ತಮವಾದುದು.

ಗೋಬರ ಕೇಳಿದ– 'ಹೇಳಿ ನೋಡುವಾ– ಗೇಣಿ ಗೀಣಿ ಪಾವತಿ ಮಾಡಿ,

ನೀವು ಅಚ್ಚುಕಟ್ಟಾಗಿ ಬಾಳಬೇಕಾದರೆ ನಾನು ಪ್ರತಿ ತಿಂಗಳೂ ಎಷ್ಟು ಕಳು ಹಿಸಬೇಕಾದೀತು ?'

ಹೋರಿರಾಮು ತಲೆಯಾಡಿಸುತ್ತಾ ಹೇಳಿದ–'ಬೇಡ ಮಗನೇ. ನೀನೇಕೆ ಸುಮ್ಮನೆ ತಾಪತ್ರಯ ಹಚ್ಚಿಕೊಳ್ಳುವುದು ? ಹಾಗೇನು ನಿನಗೆ ಬಹು ದೊಡ್ಡ ಸಂಪಾದನೆ ಇದೆಯೇ ? ನಾನೇ ಎಲ್ಲ ನೋಡಿಕೊಳ್ಳುತ್ತೇನೆ. ನೋಡುವಾ–ಪ್ರಪಂಚದ ಪರಿಸ್ಥಿತಿ ಹೀಗೇ ಇರಲಾರದು. ರೂಪಳ ಮದುವೆಯೊಂದು ಈ ಸಲ ಆಗಿಹೋದರೆ–ಮತ್ತೆ ಸಾಲವನ್ನು ಕ್ರಮೇಣ ಪರಿಹಾರಮಾಡಿಕೊಂಡು ಬಂದರಾಯಿತು. ಆದ್ದರಿಂದ ನೀನು ಯಾವ ಚಿಂತೆಯನ್ನೂ ಹಚ್ಚಿಕೊಳ್ಳುವುದು ಬೇಡ. ನಿನ್ನ ದೇಹಸ್ಥಿತಿ ಚನ್ನಾಗಿದ್ದರೇನೇ ಮುಂದಿನ ಕಷ್ಟಸುಖ ಅನುಭವಿಸಬಹುದು. ನನಗಂತು ಹೇಗಿದ್ದರೂ ಆಗುತ್ತದೆ. ಅದೇ ಅಭ್ಯಾಸವಾಗಿದೆ ನನಗೆ. ಈ ತಾಪತ್ರಯದಲ್ಲಿ ನಾನು ನಿನ್ನನ್ನು ಈಗಲೇ ಸಿಕ್ಕಿಸಿಹಾಕ ಬಯಸುವುದಿಲ್ಲ. ಅಲ್ಲಿ ನಿನಗೆ ಒಳ್ಳೆಯ ಯಜಮಾನರೂ ಸಿಕ್ಕಿರುವರಲ್ಲವೇ ? ಅವರ ಸೇವೆ ಮಾಡುತ್ತಿದ್ದರೆ ನೀನೂ ಒಬ್ಬ ಮನುಷ್ಯನಂತಾಗುವೆ.'

'ಹೌದು ; ಅವರಂತಹ ಮಹಾಪುರುಷರೊಡನೆ ಇದ್ದರೆ ಸಂಬಳ ಸ್ವಲ್ಪ ಕಡಿಮೆಯಾದರೂ ಚಿಂತೆ ಇಲ್ಲ, ತುಂಬಾ ಜ್ಞಾನಸಂಪಾದನೆಯಾಗುತ್ತದೆ.'

ಆಗಲೇ ದಾತಾದೀನ ಪಂಡಿತರು ಬಂದು ಹೋರಿರಾಮುನನ್ನು ಕಣ್ಸನ್ನೆಯಿಂದ ಕರೆದರು. ಮತ್ತು ಸ್ವಲ್ಪ ದೂರ ಕರೆದುಕೊಂಡುಹೋಗಿ ಸೊಂಟದಿಂದ ನೂರರ ಎರಡು ನೋಟುಗಳನ್ನು ತೆಗೆದು–'ನಾನು ಹೇಳಿದಂತೆ ಕೇಳಿದೆ. ಅದರಿಂದ ಬಹಳ ಒಳ್ಳೇದಾಯಿತು. ಎರಡು ಕೆಲಸವೂ ಆದಂತಾಯಿತು. ಇತ್ತ ಕನ್ಯಾ ಋಣವೂ ಪರಿಹಾರವಾಯಿತು; ಅತ್ತ ಹಿರಿಯರ ಪ್ರಸಾದ–ಭೂಮಿ–ಉಳಿದಂತೆಯೂ ಆಯಿತು. ನನ್ನಿಂದಾದ ಸಹಾಯ ನಾನು ಮಾಡಿದೆ' ಎಂದರು.

ಹೋರಿರಾಮು ರೂಪಾಯಿ ತೆಗೆದುಕೊಂಡ. ಆದರೆ ಕೈ ನಡುಗುತ್ತಿತ್ತು. ಬಾಯಿಂದ ಒಂದು ಮಾತೂ ಹೊರಡಲಿಲ್ಲ. ಅಪಮಾನದ ಪಾಶ ಕುತ್ತಿಗೆಯನ್ನು ಬಿಗಿದು ಹಿಡಿದಂತಾಗಿತ್ತು. ಕಳೆದ ಮೂವತ್ತು ವರ್ಷಗಳ ಹೋರಾಟದ ಬಳಿಕ ಅವನಿಗೆ ಇಂದು ದೊಡ್ಡ ಅಪಜಯ, ಅಪಮಾನ, ಒದಗಿ ಬಂತು. ಇಂದವನಿಗೆ ತನ್ನನ್ನು ನಗರದ್ವಾರದಲ್ಲಿ ನಿಲ್ಲಿಸಿ ಎಲ್ಲರೂ ಮುಖಕ್ಕೆ ಉಗುಳುತ್ತಿದ್ದರೆ ಹೇಗಾಗಬಹುದೋ ಆ ತರದ ಮಹಾ ದುಃಖ ಉಂಟಾಯಿತು. ಇಷ್ಟರ ತನಕದ ತನ್ನ ಅವಿಶ್ರಾಂತ ಪರಿಶ್ರಮದ ಬಳಿಕವೂ ಈ ಅಪಮಾನವೇ ? ಅವ

ನಿಗೆ ಜೀವನದ ಮೇಲಿದ್ದ ಆ ವಿಶ್ವಾಸವೂ ಇಂದು ಪುಡಿ ಪುಡಿಯಾಗಿ ಹಾ
ಹೋದಂತಾಗಿತ್ತು.

'ನಾನೀಗ ಹೋಗುತ್ತೇನೆ. ನೀನು ಸಹ ಈಗಲೇ ನೋಖೇರಾವ
ಹತ್ತಿರ ಹೋಗಿ ಬಾ' – ಎಂದರು ದಾತಾದೀನರು.

'ಹೋಗಿಬರುತ್ತೇನೆ ಮಹಾಸ್ವಾಮಿ. ನನ್ನ ಮಾನ – ಪ್ರಾಣ ಎಲ್ಲವ
ನಿಮ್ಮ ಕೈಯಲ್ಲೇ ಇದೆ' – ದೀನತೆಯಿಂದ ಹೋರಿರಾಮ ಹೇಳಿದ.

೨೬

ಎರಡು ದಿನಗಳ ಮಟ್ಟಿಗೆ ಸಂಭ್ರಮವೇ ಸಂಭ್ರಮ. ಬೇಂಡು, ವಾಲ
ಗಾಯನ, ನರ್ತನ, – ಎಲ್ಲವೂ ಮುಗಿದು ರೂಪಳು ಅಳುತ್ತಾ ಗಂಡನ ಮನೆ
ಹೋದಳು. ಆದರೆ ಹೋರಿರಾಮ ಮಾತ್ರ ಮನೆಬಿಟ್ಟು ಹೊರಡುತ್ತಲೇ
ಇದ್ದಿಲ್ಲ. ಮುಖಕ್ಕೆ ಮಸಿ ತಾಗಿದವನಂತೆ ಸುಮ್ಮನೆ ಅಡಗಿಕೊಂಡೇ ಇದ್ದ.

ಗೋಬರ ತನ್ನ ಸ್ನೇಹಮಯ ವರ್ತನೆಯಿಂದ ಇಡೀ ಊರನ್ನೇ ಮು
ಗೊಳಿಸಿದ್ದ. ಪ್ರತಿ ಮನೆಯೂ ಅವನ ಉತ್ತಮ ಗುಣಗಳನ್ನು ನೆನಸುತ್ತಿತ್ತು
ಬೋಲನಂತು ಅವನ ಕಾಲಿಗೇ ಬಿದ್ದ. ಸೋಹರಿಯೂ ಉತ್ತಮ ಉಪಚಾ
ಮಾಡಿ ಹೊರಡುವ ವೇಳೆ ಎರಡು ರೂಪಾಯಿ ಕೊಟ್ಟು ಆಶೀರ್ವದಿಸಿ ಅವ
ಲಖ್ನೌವಿನ ವಿಳಾಸ ಸಹ ತೆಗೆದುಕೊಂಡಳು. ಅತ್ತ ಬಂದರೆ ಗೋಬರನನ
ಖಂಡಿತ ಕಂಡುಬರುವುದಾಗಿ ಭರವಸೆಯನ್ನೂ ಇತ್ತಳು.

ಮೂರು ನಾಲ್ಕು ದಿನಗಳಾದ ಮೇಲೆ ಗೋಬರ ಲಖ್ನೌಗೆ ಹೊರಡಲ
ಯಾದ. ಆಗ ಹೋರಿರಾಮ ಕಣ್ಣೀರು ತುಂಬಿ ದನಿಯೊಡನೆ ಮುಂ
ಬಂದ. ಬಹು ದಿನಗಳಿಂದ ಮುಚ್ಚಿಟ್ಟಿದ್ದ ತನ್ನ ಅಪರಾಧವನ್ನು ಅಳುತ್ತ ಹೇ
ತೊಡಗಿದ – 'ಈ ಮಣ್ಣಿನ ಮೇಲಿನ ಮೋಹದಿಂದ ನಾನು ಬಹು ದೊಡ
ಅಪರಾಧ ಮಾಡಿದೆ ಮಗನೇ. ದೇವರು ನನಗೆ ಆದಕ್ಕಾಗಿ ಯಾವ ಶಿಕ್ಷೆ ಕೊ
ಲಿದ್ದಾರೋ – ನಾನರಿಯೆ.'

ಗೋಬರನ ಮುಖದ ಮೇಲೆ ಸ್ವಲ್ಪವೂ ಕೋಪ ಬೇಸರಗಳ ಕಳೆ ತೋ
ಬರಲಿಲ್ಲ. ಅವನು ಶ್ರದ್ಧಾಭಾವದೊಡನೆ ಹೇಳಿದ – 'ಇದರಲ್ಲಿ ಅಪರಾಧ

ವಿಚಾರವೇನಿದೆ ಅಪ್ಪಾ? ಹೌದು; ಈಗ ಆ ರಾಮಸೇವಕರ ಹಣ ವೊಂದನ್ನು ಹಿಂದೆ ಕೊಟ್ಟುಬಿಟ್ಟರೆ ಸರಿಯಲ್ಲವೇ? ನೀವಾದರೂ ಮತ್ತೇನು ಮಾಡಬಹುದು? ನಾನಂತು ಯಾವ ಪ್ರಯೋಜನಕ್ಕೂ ಬಾರದವನು. ಈ ಭೂಮಿಯಲ್ಲೂ ಒಳ್ಳೆಯ ಬೆಳೆ ಬರುವುದಿಲ್ಲ. ಸಾಲ ಎಲ್ಲಿಯೂ ಸಿಗುವುದಿಲ್ಲ. ಸರಿಯಾಗಿ ಒಂದು ತಿಂಗಳ ಮಟ್ಟಿಗೆ ಉಣ್ಣಲಿಕ್ಕೂ ಮನೆಯಲ್ಲಿಲ್ಲ. ಇಂತಹ ಸಂದರ್ಭದಲ್ಲಿ ಮತ್ತೇನು ಮಾಡಲು ಸಾಧ್ಯವಿದೆ? ಮನುಷ್ಯನ ಕೈಯಿಂದೇನೂ ಸಾಗದಿದ್ದರೆ ಅದೃಷ್ಟದ ಮೇಲೆ ಭಾರ ಹಾಕಿ ಸುಮ್ಮನಿರುವುದು, ಅಷ್ಟೆ. ಈ ತಾಪತ್ರಯಗಳೆಲ್ಲ ಎಷ್ಟರ ತನಕ ಸಾಗುವುದೋ – ದೇವರೇ ಬಲ್ಲ. ಹೊಟ್ಟೆಗೇ ಸಾಕಷ್ಟು ಸಿಗದಿರುವಾತನಿಗೆ – ಮರ್ಯಾದೆ ಗೌರವಗಳೆಂದರೆ ಕೈಗೆ ಎಟಕದ ವಿಚಾರ. ಇತರ ಕೆಲ ಮಹಾಶಯರ ಹಾಗೆ ನೀವು ಸಹ ಬೇರೆಯವರ ಕುತ್ತಿಗೆ ಹಿಸುಕುತ್ತಿದ್ದರೆ, ಮೋಸ ಕಪಟ ನಡೆಸಿದ್ದರೆ, ಮಾನ ಮರ್ಯಾದೆ ಕಾಪಾಡಿಕೊಳ್ಳಬಹುದಿತ್ತು! ನೀವೂ ದೊಡ್ಡ ಮನುಷ್ಯರಾಗಿರಬಹುದಿತ್ತು. ನೀವೆಂದೂ ನಿಮ್ಮ ನೀತಿಯನ್ನು ಬಿಡಲಿಲ್ಲ. ಅದಕ್ಕೇ ದೊರೆತ ಶಿಕ್ಷೆ ಇದು. ನಿಮ್ಮ ಸ್ಥಾನದಲ್ಲಿ ನಾನಿರುತ್ತಿದ್ದರೆ ಇಷ್ಟರಲ್ಲಿ ಜೈಲಲ್ಲಿ ಅಥವಾ ಗಲ್ಲುಕಂಬದಲ್ಲಿ ಇರುತ್ತಿದ್ದೆನೋ–ಏನೋ! ಕಷ್ಟಪಟ್ಟು ಸಂಪಾದನೆ ಮಾಡಿ ಮಾಡಿ ಬೇರೆಯವರ ಹೊಟ್ಟೆ ತುಂಬಿಸುತ್ತಾ ಬರಲಿಕ್ಕೆ ನನ್ನಿಂದೆಷ್ಟಕ್ಕೂ ಸಾಧ್ಯವಾಗದು.

ದನಿಯಳಿಗೆ ಈ ಸಲ ಮಗನೊಡನೆ ಸೊಸೆಯನ್ನು ಕಳುಹಿಸಲು ಇಷ್ಟವಿದ್ದಿಲ್ಲ. ಜುನಿಯಳಿಗೂ ಕೆಲ ದಿನಗಳ ಮಟ್ಟಿಗೆ ಇಲ್ಲೇ ಇರುವ ಮನಸ್ಸಾಯಿತು. ಹಾಗಾಗಿ ಗೋಬರನೊಬ್ಬನೇ ಹೋಗುವುದೆಂದು ನಿರ್ಣಯವಾಯಿತು.

ಮರುದಿನ ಬೆಳಗ್ಗೆ ಗೋಬರ ಎಲ್ಲರ ಅನುಜ್ಞೆಪಡೆದು ಲಖ್ನೌಗೆ ಹೊರಟ. ಹೋರಿರಾಮ ಅವನನ್ನು ಊರಿನ ಹೊರ ಭಾಗದ ವರೆಗೆ ಕಳುಹಲು ಹೋದ. ಗೋಬರನ ಮೇಲೆ ಇಂತಹ ಪ್ರೇಮ ಅವನಿಗೆಂದಿಗೂ ಉಂಟಾಗಿದ್ದಿಲ್ಲ. ಗೋಬರ ಅವನ ಕಾಲುಗಳ ಮೇಲೆ ಬಿದ್ದಾಗ ಹೋರಿರಾಮ ಚನ್ನಾಗಿ ಅತ್ತುಬಿಟ್ಟ. ಇನ್ನು ಮಗನ ಮುಖ ಪುನಃ ನೋಡಲಿಕ್ಕಿದೆಯೋ ಇಲ್ಲವೋ – ಎಂಬ ಭಯ ಸಹ ಅವನೆದೆಯಲ್ಲಿ ಒಮ್ಮೆ ಮೂಡಿಬಂತು. ಮಗ ತನ್ನ ಮೇಲೆ ತೋರಿಸಿದ ಭಕ್ತಿ ವಿಶ್ವಾಸಗಳಿಂದ ಆತ ಮುಗ್ಧನಾಗಿಹೋದ.

ರೂಪಳು ತನ್ನ ಗಂಡನ ಮನೆಯಲ್ಲಿ ಸುಖವಾಗಿದ್ದಳು. ಅವಳು ಎಳೆತನದಿಂದಲೇ ಹಣಕ್ಕೆ ಎಲ್ಲಕ್ಕಿಂತ ಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದವಳು. ಆದೀಗ

ಧಾರಾಳ ಸಿಕ್ಕಿದ್ದರಿಂದ ಅವಳಿಗೆ ತುಂಬಾ ಸಂತೋಷವಾಯಿತು. ಅವಳ
ಸ್ಸಿನಲ್ಲಿದ್ದ ಎಷ್ಟೋ ಆಸೆಗಳು ಒಳಗೊಳಗೇ ಒತ್ತಿಹಿಡಿಯಲ್ಪಟ್ಟಿದ್ದುವು.
ಅವನ್ನೆಲ್ಲ ಸಾಧಿಸಿಕೊಂಡು ತೃಪ್ತಳಾದಳು. ರಾಮಸೇವಕರು ಸಹ
ಹೊಸ ವೈಭವದಿಂದಾಗಿ ಪುನಃ ಯುವಕರಂತೆಯೇ ಆದರು. ರೂಪಳ ಮಟ್ಟಿ
ಅವರು ಉತ್ತಮ ಪತಿದೇವರಾಗಿದ್ದರು. ಯುವಕನಾಗಲಿ, ವೃದ್ಧನಾಗಲಿ
ಆ ವ್ಯತ್ಯಾಸ ಅವಳಿಗೆ ಗೊತ್ತೇ ಇದ್ದಿಲ್ಲ. ಅವಳು ವೈಭವಯುಕ್ತ ಗೃಹಕ್ಕ
ಗಳನ್ನು ಚಾತುರ್ಯದಿಂದ ಸಾಗಿಸುತ್ತ ಯೋಗ್ಯ ಗೃಹಿಣಿಯಂತಿದ್ದ
ಅಂತು ಅವಳು ಅಲ್ಲಿ ಯಾವ ಕೊರತೆಯನ್ನೂ ವಿಶೇಷವಾಗಿ ಕಾಣಲಿಲ್ಲ.

ಇನ್ನೀಗ ಅವಳ ಅತಿ ದೊಡ್ಡ ಆಸೆ – ತನ್ನ ತಾಯಿಮನೆಯವರು ಸು
ದಲ್ಲಿರುವುದನ್ನು ಕಾಣುವುದಾಗಿತ್ತು. ಅವರ ಬಡತನವನ್ನು ಹೇಗೆ ದ
ಮಾಡಲಾದೀತು? ಅಂದಿನ ಆ ದನದ ನೆನಪು ಅವಳ ಮನಸ್ಸಿನಲ್ಲಿ ಈಗಲ
ಉಳಿದಿತ್ತು. ಆ ಕಾಮಧೇನು ಒಳ್ಳೆಯ ಅತಿಥಿಯಂತೆ ಬಂದು ಎಲ್ಲರನ
ಅಳುವಂತೆ ಮಾಡಿ ಹೋಗಿದ್ದಳು. ಆ ಸ್ಮೃತಿಯು ಬಹು ದಿನ ದಾಟಿದ ಮೇ
ಇನ್ನಷ್ಟು ಮಧುರವಾಗಿ ಅವಳಿಗೆ ತೋರಿಬರುತ್ತಿತ್ತು.

ಈ ಹೊಸ ಮನೆ ಇನ್ನೂ ಅವಳಿಗೆ ಪೂರ್ಣ ತನ್ನದಾಗಿ ತೋರಿಬ
ದ್ದಿಲ್ಲ. ಆ ಹಳೆಯ ಮನೆಯ ಮೇಲಿನ ಆತ್ಮೀಯ ಭಾವನೆ ಇನ್ನೂ ಪೂ
ಅಳಿದಿರಲಿಲ್ಲ. ಆ ಮನೆ ತನ್ನದು; ಅಲ್ಲಿಯ ಜನರೆಲ್ಲ ತನ್ನವರೇ. ಅವರ ಸು
ದಿಂದಲೇ ತನ್ನ ಸುಖ; ಅವರ ದುಃಖದಿಂದ ತನ್ನ ದುಃಖ. ಇಲ್ಲಿಯ ಈ ಮ
ಯಲ್ಲಿ ದನಗಳ ಹಿಂಡನ್ನೇ ಕಾಣುತ್ತಿದ್ದರೂ, ತನ್ನ ಮನೆಯ ಆ ಒಂದು ದ
ವನ್ನು ಕಂಡಾಗ ಆದಷ್ಟು ಸಂತೋಷ ಅವಳಿಗಾಗುತ್ತಿದ್ದಿಲ್ಲ. ಅವಳ ಅಪ್ಪನ
ಒಂದು ಆಸೆ – ಮನೆಬಾಗಿಲಲ್ಲಿ ಒಂದು ದನ ಕಟ್ಟುವ ಹಿರಿಯಾಸೆ – ಇನ
ಪೂರ್ತಿಯಾಗಿಲ್ಲ. ಅಂದು ಆ ದನ ಬಂದಾಗ, ಆತ ದೇವಲೋಕದಿಂದ ಕಾ
ಧೇನುವೇ ಇಳಿದು ಬಂದಂತೆ ಸಂತೋಷಗೊಂಡಿದ್ದ. ಆದ್ದರಿಂದ ಬರುವ ಮ
ಗಾಲಕ್ಕೆ ತಾಯಿಮನೆಗೆ ಹೋಗುವಾಗ ಒಂದು ಒಳ್ಳೆಯ ದನವನ್ನು ಹೊಡೆ
ಕೊಂಡೇ ಹೋಗಬೇಕು. ಗಂಡನ ಹತ್ತಿರ ಹೇಳಿದರೆ ಅವರಿಂದ ಯಾವ ಆಕ್ಷ
ಪವೂ ಬರಲಾರದು. ಆ ಗೌರಿದನವೇ ಇದ್ದುದರಲ್ಲಿ ಬಹಳ ಒಳ್ಳೆಯುದ
ಅದನ್ನು ಒಪ್ಪಿಸಿಬಿಟ್ಟು ಅಪ್ಪನ ಆ ಹಿರಿಯಾಸೆಯನ್ನು ಸಂತೃಪ್ತಿಗೊಳಿಸಬೇಕ

ಇತ್ತ, ಹೋರಿರಾಮನಿಗೂ ದನ ಕೊಂಡುಕೊಳ್ಳುವ ಆಸೆ ಇದ್ದೇ ಇತ್ತು

ಮನೆಯಲ್ಲಿ ಅವನೊಬ್ಬನೇ ಆಗಿದ್ದರೆ ದನದ ಅವಶ್ಯಕತೆ ಬಹಳ ಇದ್ದಿಲ್ಲ. ಆದರೆ ಈಗ ಗೋಬರನ ಮಗ ಮಂಗಲನೂ ಇದ್ದಾನೆ. ಅವನಿಗೆ ಹೊತ್ತು ಹೊತ್ತಿಗೆ ಹಾಲು ಕೊಡುವುದು ಬೇಡವೇ? ಆದ್ದರಿಂದ ರೂಪಾಯಿ ಕೈಯಲ್ಲಾದೊಡನೆ ಒಂದು ದನ ತೆಗೆಯಲೇಬೇಕೆಂದು ಅವನ ಎಣಿಕೆ.

ಆದರೆ ರೂಪಾಯಿ ಎಲ್ಲಿಂದ ಬರುವುದು? ಸಂಯೋಗವಶಾತ್ ಒಬ್ಬ ಕಂಟ್ರ್ಯಾಕ್ಟರನು ಅಲ್ಲೇ ಒಂದು ರಸ್ತೆಯ ಕೆಲಸವನ್ನಾರಂಭಿಸುವ ಸುದ್ದಿ ಸಿಕ್ಕಿತು. ಒಡನೆಯೇ ಹೋರಿರಾಮ ಓಡಿಕೊಂಡು ಹೋಗಿ ದಿನಕ್ಕೆ ಎಂಟಾಣೆ ಕೂಲಿಗೆ ಮಣ್ಣು ಅಗೆಯುವ ಕೆಲಸಕ್ಕೆ ಸೇರಿದ. ಈ ಕೆಲಸ ಎರಡು ಮೂರು ತಿಂಗಳ ತನಕ ನಡೆದುಹೋದರೆ, ಸಾಧಾರಣ ತರದ ಒಂದು ದನಕ್ಕೆ ಬೇಕಾದ ಹಣ ಒದಗಬಹುದು.

ಮರುದಿನದಿಂದ ಹೋರಿರಾಮ ದಿನವಿಡೀ ಬಿಸಿಲು ಬೇಗೆಯೆನ್ನದೆ ಚನ್ನಾಗಿ ಕೆಲಸಮಾಡಲಾರಂಭಿಸಿದ. ಅವನು ಕತ್ತಲಾಗುವ ಹೊತ್ತಿಗೆ ಸೋತು ಸುಣ್ಣವಾಗಿ ಮನೆಯತ್ತ ಹಿಂತಿರುಗುತ್ತಿದ್ದ. ಆದರೂ ಅವನ ಉತ್ಸಾಹ ಕುಗ್ಗುತ್ತಿದ್ದಿಲ್ಲ. ಮರು ದಿನ ಬೆಳಗ್ಗೆ ಪುನಃ ಅದೇ ಹೊಸ ಹುರುಪಿನಿಂದ ಹೊರಡುತ್ತಿದ್ದ. ರಾತ್ರಿಯಲ್ಲಿ ಸಹ ಊಟವಾದ ಬಳಿಕ ದೀಪದ ಹತ್ತಿರ ಕೂತುಕೊಂಡು ನೂಲು ತೆಗೆಯುತ್ತಿದ್ದ. ಈ ಹೊಸ ಉದ್ಯೋಗದಿಂದ ನೂಲು ಮಾರಿ, ನಾಲ್ಕು ಕಾಸು ಸಂಪಾದಿಸುವ ದಾರಿ ಆತ ಯೋಚಿಸಿದ್ದ. ಬಹಳ ರಾತ್ರಿಯಾದ ಮೇಲೆಯೇ ಅವನು ಮಲಗುತ್ತಿದ್ದ. ದನಿಯಳು ಸಹ ಈಗೀಗ ಅವನು ಕೆಲಸ ಮಾಡುವುದನ್ನು ತಡೆಯುವ ಬದಲಾಗಿ, ತಾನೂ ಅವನೊಡನೆ ಸೇರಿ ರಾತ್ರಿಹೊತ್ತು ನೂಲು ತೆಗೆಯುತ್ತಿದ್ದಳು. ಒಂದು ದನ ತೆಗೆಯಬೇಕು; ರಾಮಸೇವಕರ ಹಣವನ್ನು ಸಲಾಯಿಸಬೇಕು. ಇದಕ್ಕೆಲ್ಲ ಹೆಚ್ಚಿನ ಪರಿಶ್ರಮಪಡದೆ ಸಾಧ್ಯವಿದೆಯೇ?

ರಾತ್ರಿ ಬಹಳ ದಾಟಿತ್ತು. ಇಬ್ಬರೂ ಕೂತು ನೂಲು ತೆಗೆಯುತ್ತಿದ್ದರು. ಆಗ ದನಿಯಳು – 'ನಿಮಗೆ ನಿದ್ದೆ ಬರುವುದಿದ್ದರೆ ಹೋಗಿ ಮಲಗಿಕೊಳ್ಳಿ. ನಾಳೆ ಪುನಃ ಕೆಲಸಕ್ಕೆ ಹೋಗುವುದು ಬೇಡವೇ?' ಎಂದಳು.

ಹೋರಿರಾಮ ಆಕಾಶದತ್ತ ನೋಡಿ ಹೇಳಿದ – 'ಆಯಿತು ಮಲಗುತ್ತೇನೆ. ಈಗೇನಾದರೂ ಗಂಟೆ ಹತ್ತಾಗಿರಬಹುದು – ಅಷ್ಟೆ. ನೀನು ಹೋಗಿ ಮಲಗು ನೋಡುವಾ.'

‘ ನನಗೇನು? ಹಗಲುಹೊತ್ತಿನಲ್ಲೂ ಸ್ವಲ್ಪ ಮಲಗಿಕೊಳ್ಳುತ್ತೇನೆ.

‘ ನಾನು ಸಹ ಬುತ್ತಿಯ ಊಟಮಾಡಿ ಮರದಡಿಯಲ್ಲಿ ಮಧ್ಯಾ ಬಿದ್ದುಕೊಳ್ಳುವುದಿಲ್ಲವೇ ?’

‘ ಅಲ್ಲಿ ಬಹಳ ಸೆಕೆಯಾಗುತ್ತಿರಬಹುದು!’

‘ ಏನಂಥ ಸೆಕೆ, ಒಳ್ಳೆಯ ನೆರಳಿರುವಾಗ ?’

‘ ದೇವರ ದಯದಿಂದ ನಿಮಗೆ ಅನಾರೋಗ್ಯವಾಗದಿದ್ದರೆ ಸಾಕು. ’

‘ ಅನಾರೋಗ್ಯ? ಅದೆಲ್ಲ ಬೇನೆ ಬೀಳಲಿಕ್ಕೆ ಸಮಯವಿದ್ದ ಮನುಷ್ಯ ನನಗೀಗ ಒಂದೇ ಯೋಚನೆ– ಈ ಸಲ ಗೋಬರ ಬರುವ ಹೊತ್ತಿಗೆ ರಾ ಸೇವಕರಿಗೆ ಕೊಡಬೇಕಾದ ಹಣದಲ್ಲಿ ಅರ್ಧಾಂಶವಾದರೂ ಮಾಡಿಡಲೇ ಬೇ ಎಂಬುದು. ಅವನು ಸಹ ಸ್ವಲ್ಪ ತರಬಹುದು. ಒಟ್ಟುಮಾಡಿ ಈ ಅದೊಂದು ಋಣ ತೀರಿಸಿಬಿಟ್ಟರೆ– ಮತ್ತೆ ಹೊಸ ಜೀವನವನ್ನೇ ಆರಂ ಬಹುದಲ್ಲ ? ’

‘ ನನಗೆ ಈಗೀಗ ಬಹಳವಾಗಿ ಗೋಬರನ ನೆನಪಾಗುತ್ತಿದೆ. ಎಂತಹ ಒಳ್ಳೆಯ ಹುಡುಗನಾಗಿದ್ದಾನೆ ಅವನು ! ’

‘ ಪಾಪ! ಹೋಗುವ ಸಮಯ ಕಾಲಮೇಲೆ ಬಿದ್ದು ಕಣ್ಣೀರು ಸು ವಂದಿಸಿ ಹೋದ !’

ಮಗು ಮಂಗಲನೂ ಅಲ್ಲಿಂದ ಬರುವಾಗ ಎಷ್ಟು ಚನ್ನಾಗಿದ್ದ! ಬಂದು ಈಗ ಬಚ್ಚಿಹೋಗಿದ್ದಾನೆ!’

‘ ಅಲ್ಲಿ ಹಾಲು ಬೆಣ್ಣೆ ಎಲ್ಲ ತಿನ್ನುತ್ತಿದ್ದಿರಬೇಕು. ಇಲ್ಲಿ ರೊಟ್ಟಿ ಸಿಗುವು ಬಹು ಕಷ್ಟವಾಗಿದೆ. ಮೇಸ್ತ್ರಿಯಿಂದ ರೂಪಾಯಿ ಬಂದೊಡನೆ ಈ ಒಂದು ದನ ತೆಗೆದುಕೊಂಡೇಬಿಡಬೇಕು. ’

‘ ದನವನ್ನು ಎಂದೋ ತೆಗೆದುಕೊಳ್ಳಬಹುದಿತ್ತು. ಆದರೆ ನಾನು ಹೇ ದ್ದನ್ನು ನೀವು ಕೇಳುವುದೇ ಇಲ್ಲ. ನಮ್ಮ ಗದ್ದೆಯ ಕೆಲಸವನ್ನೇ ಸರಿಯಾ ಮಾಡಲಾಗುವುದಿಲ್ಲ ನಮಗೆ. ಅದರ ಮೇಲೆ ಆ ಪುನ್ನಿಯ ಬೇಸಾಯ ಕೆಲಸ ಹೊರೆಯನ್ನೂ ನಿಮ್ಮ ತಲೆಯ ಮೇಲೆ ವಹಿಸಿಕೊಂಡಿರಿ. ’

‘ ಮತ್ತೇನು ಮಾಡುವುದು? ಸ್ವಲ್ಪವಾದರೂ ನಮ್ಮ ಕರ್ತವ್ಯ ನಾ ಮಾಡುವುದು ಬೇಡವೇ? ಹೀರ ನಮಗೆ ಕೇಡು ಬಯಸಿದ–ನಿಜ. ಆದರ ಅವನ ಮಕ್ಕಳು-ಮರಿಗಳು ನಮಗೇನು ಮಾಡಿವೆ? ಅವರಿಗೆ ನಾವಲ್ಲ

ಬೇರಾರಿದ್ದಾರೆ? ನಾನು ಸಹಾಯ ಮಾಡದಿರುತ್ತಿದ್ದರೆ ಅವರ ಗತಿ ಏನಾಗುತ್ತಿತ್ತೋ–ಏನೋ! ಯೋಚಿಸಿ ನೋಡು. ಇಷ್ಟೆಲ್ಲ ಮಾಡಿ ಸಹ ಮಂಗಾರಾಮರು ಅವರ ಮೇಲೆ ದಾವೆ ಹಾಕಿದ್ದಾರೆ.'

'ಬಂದ ರೂಪಾಯಿಯನ್ನೆಲ್ಲ ಭದ್ರವಾಗಿ ಹೂತಿಟ್ಟರೆ ಬಾಕಿಗೆ ವ್ಯಾಜ್ಯ ಮಾಡದಿರುತ್ತಾರೆಯೇ?'

'ನೀನೇನು ಹೇಳುತ್ತೀ? ಈ ಬೇಸಾಯ ಕೆಲಸದಿಂದ ಹೊಟ್ಟೆ ತುಂಬಿದರೆ ಅದೇ ದೊಡ್ಡದು. ಗಂಟು ಕಟ್ಟಿಡುವುದೆಲ್ಲಿಂದ?'

'ಹೀರನಂತು ಬದುಕಿದ್ದಂತೆ ಕಾಣೆ.'

'ನನ್ನ ಮನಸ್ಸೇನೋ ಹೇಳುತ್ತಿದೆ – ಒಂದಲ್ಲ ಒಂದು ದಿನ ಆತ ಬಂದೇ ಬಂದಾನು – ಎಂಬುದಾಗಿ.'

ಇಬ್ಬರೂ ಮಲಗಿದರು. ಹೋರಿರಾಮ ಬೆಳಗ್ಗೆ ಎದ್ದು ಹೊರಮುಖ ಹಾಕುವಾಗಲೇ ಸನ್ಯಾಸಿಯೊಬ್ಬನು ಮನೆಯ ಮುಂದೆ ಬಂದು ನಿಂತಿದ್ದಾನೆ. ಕೂದಲು ಗಡ್ಡ–ಎಲ್ಲ ಬೆಳೆದುಹೋಗಿದೆ. ವಸ್ತ್ರ ಹರಿದು ಚಿಂದಿಯಾಗಿದೆ. ಮುಖ ಒಣಗಿಹೋಗಿದೆ. ದೇಹದಲ್ಲಿ ರಕ್ತ ಮಾಂಸಗಳ ಗುರುತು ಸಹ ಕಾಣುವಂತಿದ್ದಿಲ್ಲ. ಹೋರಿರಾಮ ಕಣ್ಣುಬಿಟ್ಟು ನೋಡುತ್ತಾನೆ– ಅದು ಅವನ ತಮ್ಮ, ಹೀರಾ!

ಹೀರನು ಮುಂದೆ ಬಂದು ಅಣ್ಣನ ಕಾಲುಗಳ ಮೇಲೆ ಬಿದ್ದ.

ಹೋರಿರಾಮ ಅವನನ್ನು ಹಿಡಿದೆತ್ತಿ ಅಪ್ಪಿಕೊಂಡು ಹೇಳಿದ – 'ನೀನೇನು ಮಾಯವೇ ಆಗಿಹೋದೆಯೆಂದು ತಿಳಿದಿದ್ದೆ. ಯಾವಾಗ ಬಂದೆ? ಆಗಾಗ ನಿನ್ನ ನೆನಪಾಗುತ್ತಿತ್ತು. ಏನು ಜೇನೆಬಿದ್ದಿದ್ದೆಯಾ?'

ಇಂದಿನ ಈ ಹೀರ, ಅಣ್ಣನೊಡನೆ ಜಗಳಕ್ಕೆ ನಿಂತಿದ್ದ ಆ ಉದ್ಧಟ ಹೀರನಲ್ಲ; ತಂದೆತಾಯಿಗಳನ್ನು ಕಳೆದುಕೊಂಡ ಆ ಹಿಂದಿನ ಅನಾಥ ಹೀರನಾಗಿದ್ದ. ಅವನು ಯಾವ ಉತ್ತರವನ್ನೂ ಕೊಡಲಾರದವನಾಗಿದ್ದ. ಸುಮ್ಮನೇ ನಿಂತುಕೊಂಡು ಅಳುತ್ತಲೇ ಇದ್ದ.

ಹೋರಿರಾಮನು ಅವನ ಕೈಹಿಡಿದು ಗದ್ಗದ ಕಂಠದಿಂದ – 'ಏಕೆ ಅಳುತ್ತಿರುವೆ ಹೀರಾ? ಮನುಷ್ಯ ತಿಳಿಯದೆ ತಪ್ಪು ಮಾಡದಿರುತ್ತಾನೆಯೇ? ಎಲ್ಲಿದ್ದೆ ಇಷ್ಟರ ತನಕ?' ಎಂದು ಕೇಳಿದ.

ಹೀರನೂ ಕಾತರ ಸ್ವರದಿಂದ ಹೇಳಿದ – 'ಏನು ಹೇಳಲಿಯಣ್ಣಾ? ನಿಮ್ಮ

ನ್ನೆಲ್ಲ ಕಾಣುವ ಯೋಗವಿತ್ತು – ಬದುಕಿ ಬಂದೆ; ಅಷ್ಟೆ. ಆ ಹತ್ಯೆಯು ಪ
ತಲೆಗೇರಿತ್ತು. ಹೆಜ್ಜೆ ಹೆಜ್ಜೆಗೂ ಆ ದಿನ ಬಂದು ಕಣ್ಣ ಮುಂದೆ ನಿಂತಂತಾ
ತ್ತಿತ್ತು. ಎಚ್ಚರದಲ್ಲಿಯೂ ನಿದ್ದೆಯಲ್ಲಿಯೂ ಸದಾ ದನದ್ದೇ ಚಿಂತೆ. ಅ
ರಿಂದಲೇ ಹುಚ್ಚನಾಗಿ ಎಷ್ಟೋ ವರ್ಷ ಹುಚ್ಚರಾಸ್ಪತ್ರೆಯಲ್ಲಿದ್ದೆ. ಅಲ್ಲಿಂ
ಬಿಡುಗಡೆಯಾಗಿ ತಿಂಗಳು ಆರಾಗುತ್ತ ಬಂತು. ಬೇಡಿ ತಿಂದು ತಿರುಗಾಡ
ತ್ತಿದ್ದೆ. ಇತ್ತ ಬರಲಿಕ್ಕೆ ಧೈರ್ಯವಾಗುತ್ತಿದ್ದಿಲ್ಲ. ಊರವರಿಗೆ ಮುಖತೋ
ಸುವುದು ಹೇಗೆ? ಆದರೂ ಮನಸ್ಸು ಕೇಳಲಿಲ್ಲ. ಕೊನೆಗೆ ಗಟ್ಟಿ ಮನಸ್ಸ
ಮಾಡಿಕೊಂಡು ಬಂದೆ. ನೀನು ನನ್ನ ಮಕ್ಕಳು ಮರಿಗಳನ್ನು........'

ಹೋರಿರಾಮು ಅವನ ಮಾತಿಗೆ ಅಡ್ಡ ಬಂದು – 'ನೀನು ಆ ದಿನ ಸುಮ್ಮ
ನಾದರೂ ಓಡಿಹೋದೆ. ೫–೧೦ ರೂಪಾಯಿ ಆ ಪೋಲಿಸ್ ಇನ್ಸ್‌ಪೆಕ್ಟರರಿಗ
ತಾಗಿಸಿಬಿಡುತ್ತಿದ್ದರೆ ಎಲ್ಲವೂ ಮುಗಿದುಹೋಗುತ್ತಿತ್ತು' ಎಂದ.

'ಸಾಯುವ ತನಕವೂ ನಿನ್ನ ಋಣ ತೀರಿಸಲಿಕ್ಕಾಗಲಿಕ್ಕಿಲ್ಲಣ್ಣಾ!'

'ಹಾಗೆ ನಾನೇನು ಹೊರಗಿನವನೇ?'

ಹೋರಿರಾಮು ಸಂಪೂರ್ಣ ಪ್ರಸನ್ನನಾದ. ಅವನಿಗೆ ಜೀವನದ ಎಲ್ಲಾ
ಸಂಕಟ ನಿರಾಶೆಗಳೂ ಕರಗಿಹೋದಂತಾಯಿತು.

ಅವನು ಜೀವನದಲ್ಲಿ ಸೋತುಹೋದವನೆಂದು ಯಾರು ತಾನೇ ಹೇಳಿ
ಯಾರು? ಈ ಉಲ್ಲಾಸ, ಈ ರೋಮಾಂಚ, ಈ ಹೆಮ್ಮೆ – ಇವೆಲ್ಲ ಅಪ
ಜಯದ ಲಕ್ಷಣಗಳೇ? ಅಥವಾ ಈ ಅಪಜಯದಲ್ಲೇ ಅವನು ವಿಜಯ
ವನ್ನು ಕಂಡಿದ್ದನೋ?

ಅವನ ಹೃದಯವರಳಿತು. ಮುಖದ ಮೇಲೆ ತೇಜಸ್ಸು ಮೂಡಿಬಂತು.
ಹೀರನು ತೋರಿಸಿದ ಈ ಕೃತಜ್ಞತೆಯಲ್ಲಿ ಹೋರಿರಾಮುನಿಗೆ ಜೀವನದ
ಸಂಪೂರ್ಣ ಸಫಲತೆಯು ಮೂಡಿಬಂದಂತಾಯಿತು. ಅವನ ಕಣಜದಲ್ಲಿ ೭೦೦–
೩೦೦ ಗೋಣಿ ಧಾನ್ಯವಿದ್ದರೂ ಅಥವಾ ಗುಡಾಣವಿಡೀ ಹಣ ತುಂಬಿ
ಕೊಟ್ಟರೂ ಅವನಿಗೆ ಈ ತರದ ಅಪಾರ ಮನಶ್ಶಾಂತಿ ದೊರಕುತ್ತಿರಲಿಲ್ಲ.

ಹೀರ ಅವನನ್ನು ತಲೆಯಿಂದ ಕಾಲಿನ ತನಕ ನೋಡಿ ಹೇಳಿದ – 'ನೀನ
ಕೂಡಾ ಬಹಳ ನಿಶ್ಶ್ರಾಣವಾಗಿ ಹೋಗಿರುವೆಯಲ್ಲ – ಅಣ್ಣಾ?'

ಹೋರಿರಾಮು ನಗುತ್ತ ಹೇಳಿದ— 'ಇದೇನು ನಾನು ದಪ್ಪವಾಗಲಿರುವ
ವಯಸ್ಸೇ? ಯಾರಿಗೆ ಸಾಲದ ಅಥವಾ ಮರ್ಯಾದೆಯ ಯೋಚನೆಯಿಲ್ಲವೋ

...ಥವರೇ ದಪ್ಪವಾದಾರು. ಈ ಲೋಕದಲ್ಲಿ ದಪ್ಪವಾಗುವುದು ಕೂಡಾ ಒಂದು ತಪ್ಪುಕೆಲಸವೇ ಸರಿ. ನೂರು ಜನರನ್ನು ಕ್ಷೀಣಗೊಳಿಸಿಯೇ ಒಬ್ಬ ದಪ್ಪವಾದಾನು. ಅಂತಹ ದಪ್ಪದೇಹದಲ್ಲಿ ಏನು ಸುಖವಿದೆ? ಎಲ್ಲರೂ ದಪ್ಪವಾದಾಗಲೇ ನಿಜವಾದ ಸುಖ. ಸೋಬನನ್ನು ಕಂಡು ಬಂದೆಯಾ?'

'ಅವನನ್ನು ರಾತ್ರಿಯೇ ಕಂಡಿದ್ದೆ. ನೀನು ನಿಮ್ಮವರನ್ನು ಬದುಕಿಸಿ, ನಿನ್ನ ವೈರಿಗಳನ್ನೂ ಕಾಪಾಡಿ ಮರ್ಯಾದೆ ಉಳಿಸಿದೆ. ಸೋಬನಂತು ಪಾಪ! ತನ್ನ ಮನೆ ಮಾರುಗಳನ್ನು ಕಳೆದುಕೊಂಡಿದ್ದಾನೆ ಇನ್ನೆಂತು ದಿನ ಕಳೆಯುತ್ತಾನೋ – ದೇವರು ಬಲ್ಲ.'

ಹೋರಿರಾಮು ಎಂದಿನಂತೆ ಕೆಲಸಕ್ಕೆ ಹೊರಟ. ಆದರೆ ದೇಹ ಸ್ವಲ್ಪ ಭಾರವಾಗಿದ್ದಂತೆ ತೋರಿಬಂತು. ರಾತ್ರಿಯ ನಿದ್ರೆಯಲ್ಲಿ ಹಿಂದಿನ ದಿನದ ಆಯಾಸ ಪರಿಹಾರವಾಗಿದ್ದಿಲ್ಲ. ಆದರೂ ಯಾವುದನ್ನೂ ಗಣಿಸದೆ ಬೇಗಬೇಗನೆ ಹೋಗಿ ಕೆಲಸಕ್ಕೆ ಸೇರಿಯೇಬಿಟ್ಟ.

ಆದರೆ ಇಂದು ಹತ್ತು ಗಂಟೆಗೇನೇ ವಿಶೇಷ ಸೆಕೆಯಾರಂಭವಾಯಿತು. ಹೊತ್ತು ಏರುತ್ತ ಹೋದಂತೆ ಬೆಂಕಿ ಸುರಿಯುತ್ತಿದ್ದಂತೆಯೇ ಆಯಿತು. ಆದರೂ ಹೋರಿರಾಮು ಎಂದಿನಂತೆ ದೊಡ್ಡ ದೊಡ್ಡ ಮಣ್ಣಿನ ಹೊರೆಗಳನ್ನು ಹೊತ್ತು ತಂದು ಹಾಕುತ್ತಲೇ ಇದ್ದ.

ಆದರೆ ಮಧ್ಯಾಹ್ನದ ವಿರಾಮಕಾಲದಲ್ಲಿ ಅವನಿಗೆ ಉಸಿರೇ ಕಟ್ಟಿಹೋದ ಹಾಗಾಯಿತು. ಇಂತಹ ಆಯಾಸ ಅವನಿಗೆಂದೂ ಆಗಿದ್ದಿಲ್ಲ. ಕಾಲು ಎತ್ತಲಿಕ್ಕೇ ಕಷ್ಟವಾಗುತ್ತಿತ್ತು. ದೇಹವೆಲ್ಲ ಒಳಗಿಂದೊಳಗೇ ಉರಿದುಬರುವಂತಿತ್ತು. ಅವನು ಕೈಕಾಲು ತೊಳೆಯಲೂ ಇಲ್ಲ, ಬುತ್ತಿಯನ್ನು ಉಣ್ಣಲೂ ಇಲ್ಲ. ಆಯಾಸದಿಂದ ಏನೂ ಮಾಡಲಾಗದೆ ತನ್ನ ಅಂಗವಸ್ತ್ರ ತೆಗೆದು ಬಿಡಿಸಿ ಒಂದು ಮರದಡಿಯಲ್ಲಿ ಮಲಗಿಯೇಬಿಟ್ಟ. ಬಾಯಾರಿಕೆಯಿಂದ ಅವನ ಕುತ್ತಿಗೆ ಒಣಗಿಕೊಂಡುಬರುತ್ತಿತ್ತು. ಆದರೆ ಬರೀ ಹೊಟ್ಟೆಗೆ ನೀರು ಕುಡಿಯುವುದು ಒಳ್ಳೆಯದಲ್ಲ. ಹಾಗಾಗಿ ಬಾಯಾರಿಕೆ ತಡೆದುಕೊಳ್ಳಲು ಪ್ರಯತ್ನಿಸಿದ. ಆದರೂ ಒಳಗಿನ ದಾಹ ಏರಿಬರುತ್ತಲೇ ಇತ್ತು. ಕೊನೆಗೆ ಅವನಿಗೆ ತಡೆಯಲಿಕ್ಕೇ ಆಗಲಿಲ್ಲ. ಹತ್ತಿರವೇ ಇನ್ನೊಬ್ಬ ಕೂಲಿಯವನು ತಂಬಿಗೆಯಲ್ಲಿ ನೀರು ಇಟ್ಟುಕೊಂಡು ಫಲಾಹಾರ ಮಾಡುತ್ತಿದ್ದ. ಹೋರಿರಾಮು ಮೆಲ್ಲನೆ ಎದ್ದು ಅವನ ಹತ್ತಿರ ಕೇಳಿ ಸ್ವಲ್ಪ ನೀರು ಕುಡಿದು ಮಲಗಿದ. ಆದರೆ

ಸ್ವಲ್ಪವೇ ಸಮಯದಲ್ಲಿ ಅವನಿಗೆ ಏನೇನೋ ಆಗತೊಡಗಿತು. ಮುಖದ ಮೇಲಿನ ಜೀವಕಳೆಯೇ ಕಡಿಮೆಯಾಗುತ್ತಿರುವಂತೆ ತೋರಿತು.

'ಏನಾಗುತ್ತಿದೆ ರಾಮಣ್ಣಾ ನಿನಗೆ?'—ಆ ಕೂಲಿಕಾರ ಕೇಳಿದ.

ಹೋರಿರಾಮನಿಗೆ ತಲೆ ತಿರುಗುತ್ತಿತ್ತು. ಆದರೂ...'ಏನೂ ಇಲ್ಲ...'ಎಂದ.

ಹೀಗೆ ಹೇಳುತ್ತಿರುವಾಗಲೇ ಸ್ವಲ್ಪ ವಾಂತಿಯಾಯಿತು. ಕೈಕಾಲು ತಣ್ಣಗಾದಂತಾಯಿತು. ಕಣ್ಣು ಕತ್ತಲುಬರಲಾರಂಭಿಸಿತು. ಕಣ್ಣು ಮುಚ್ಚಿ ಹೋಯಿತು. ಜೀವನದ ಎಲ್ಲ ಸ್ಮೃತಿಗಳೂ ಸಜೀವವಾಗಿ ಒಂದೊಂದೇ ಕಣ್ಣ ಮುಂದೆ ಕಟ್ಟಬರತೊಡಗಿದುವು. ಆದರೆ ಯಾವುದೂ ಕ್ರಮವಾಗಿರಲಿಲ್ಲ. ಮುಂದಿನದು ಹಿಂದೆ; ಹಿಂದಿನದು ಮುಂದೆ. ಸ್ವಪ್ನಚಿತ್ರಗಳಂತೆ ಒಂದಕ್ಕೊಂದು ಸಂಬಂಧವಿಲ್ಲ– ವಿಕೃತ ಹಾಗೂ ಅಸಂಬದ್ಧ. ಆ ಸುಖಕರವಾದ ಬಾಲ್ಯಜೀವನ ಬಂತು. ಆತ ಗೋಲಿಯಾಡುತ್ತಿದ್ದ. ತಾಯಿಯ ತೊಡೆಯ ಮೇಲೆ ಮಲಗುತ್ತಿದ್ದ. ಮತ್ತೊಮ್ಮೆ ಗೋಬರ ಬಂದು ಅವನ ಕಾಲುಗಳ ಮೇಲೆ ಬಿದ್ದ. ಪುನಃ ದೃಶ್ಯ ಬದಲಾಯಿತು. ಸುಂದರ ರೂಪದ ದನಿಯಳ್ಳ ಅವನಿಗೆ ಉಣಬಡಿಸುತ್ತಿದ್ದಾಳೆ. ಮತ್ತೊಂದು ದನ ಬಂತು. ಸರ್ವಥಾ ಕಾಮಧೇನುವೇ ಅವಳು! ಅವಳ ಹಾಲು ಕರೆದು ಮಂಗಲನಿಗೆ ಕುಡಿಸಿದ....

ಆ ಕೂಲಿಯವನೇ ಪುನಃ ಕರೆದ—'ಗಂಟೆ ಎರಡಾಯಿತು. ಮಧ್ಯಾಹ್ನದ ಕೆಲಸಕ್ಕೆ ಗಂಟೆಯಾಯಿತು ರಾಮಣ್ಣಾ.'

ಹೋರಿರಾಮ ಮಾತಾಡಲೇ ಇಲ್ಲ. ಅವನ ಪ್ರಾಣಗಳು ಬೇರೆ ಬೇರೆ ಲೋಕದಲ್ಲಿ ಹಾರಾಡುತ್ತಿದ್ದುವು. ಮುಖದಲ್ಲಿ ಉರಿ! ಕೈಕಾಲು ತಣ್ಣಗೆ!

ಅವನ ಮನೆಗೆ ಜನ ಹೋಯಿತು. ದನಿಯಾ ಒಡನೆಯೇ ಓಡಿಕೊಂಡು ಬಂದಳು. ಸೋಬ ಮತ್ತು ಹೀರಾ ಕಂಬಳಿಯ ಒಂದು ಡೋಲಿ ಅಣಿಗೊಳಿಸಿಕೊಂಡು ಬಂದರು.

ದನಿಯಾ ಬಂದು ಹೋರಿರಾಮನ ಮೈಮೇಲೆ ಕೈಹಾಕಿ ನೋಡಿದಳು. ಅವಳ ಎದೆ 'ಜುಂ' ಎಂದಿತು; ಮುಖ ತೀರಾ ಖಿನ್ನವಾಯಿತು. ನಡುಗುತ್ತಿರುವ ಸ್ವರದಿಂದ ಅವಳು – 'ಈಗ ಹೇಗಿದ್ದೀರಿ ದೇವರೇ?' ಎಂದು ಕೇಳಿದಳು. ಹೋರಿರಾಮ ಮೆಲ್ಲನೆ ಕಣ್ತೆರೆದು ಅಸ್ಥಿರ ನೋಟದಿಂದ ನೋಡುತ್ತಾ ಹೇಳಿದ – 'ಬಂದೆಯಾ ಗೋಬರಾ? ಮಂಗಲನಿಗಾಗಿ ದನ ತಂದಿದ್ದೇನೆ... ನೋಡು ... ಅಲ್ಲಿ ನಿಂತಿದ್ದಾಳೆ!'

ದನಿಯಾ ಮೃತ್ಯುದೇವತೆಯ ಲೀಲೆ ನೋಡಿದ್ದಳು. ಯಾವ ಸತ್ತುದು, ತ್ತಿ ಸತ್ತುದು ಅವಳ ಎದುರಲ್ಲೇ. ಇಬ್ಬರು ಮಕ್ಕಳೂ ಸತ್ತಿದ್ದರು. ಊರಿನ ಷ್ಟೋ ಜನರು ಸತ್ತುದನ್ನು ಕಂಡಿದ್ದಳು ಅವಳು. ಈಗ ಅವಳ ಪ್ರಾಣಕ್ಕೇ ಟು ಬಿದ್ದಂತಾಯಿತು. ಯಾವ ಒಂದು ಆಧಾರವನ್ನು ಅವಳು ಅವಲಂಬಿ ದ್ದಳೋ – ಅದೇ ಈಗ ಕೈಬಿಟ್ಟುಹೋಗಲಿರುವುದೆಂದು ಅವಳಿಗೆ ಖಂಡಿತ ಾಯಿತು. ಆದರೆ ಇದು ಧೈರ್ಯಗೆಡುವ ಸಂದರ್ಭವಲ್ಲವಾಗಿತ್ತು. ಅವಳ ಂಕೆ ಆಧಾರರಹಿತವಾಗಿರಬಾರದೇಕೆ ? ಕೇವಲ ಸೆಕೆ-ಬಿಸಿಲಿನ ಬೇಗೆ ಯಿಂದ ಹೀಗೆ ಆಗಿರಬಾರದೇಕೆ ?

ಅವಳು ಹರಿಯುತ್ತಿರುವ ಕಣ್ಣೀರನ್ನೊರಸಿಕೊಂಡು ಹೇಳಿದಳು – ನನ್ನತ್ತ ನೋಡಿ. ಇದು ನಾನಲ್ಲವೇ ? ನನ್ನ ಪರಿಚಯವಾಗುವುದಿಲ್ಲವೇ ?'

ಹೋರಿರಾಮನಿಗೆ ಸ್ವಲ್ಪ ಚೇತನ ಬಂತು. ಮೃತ್ಯುದೇವತೆ ಸಮೀಪ ುರುವುದರಲ್ಲಿದ್ದಳು. ಅವನು ದನಿಯಳನ್ನು ದೀನ ದೃಷ್ಟಿಯಿಂದ ನೋಡಿದ. ಂರಡು ಹನಿ ಕಣ್ಣೀರು ಹರಿದು ಬಂದು ಕ್ಷೀಣ ಸ್ವರದಿಂದ ಹೇಳಿದ – ' ನಾನು ಹೇಳಿದ್ದ ಕೆಟ್ಟ ಮಾತುಗಳನ್ನು ಮರೆತುಬಿಡು ದನಿಯಾ – ನಾನೀಗ ಹೋಗು ತ್ತೇನೆ – ದನದ ಆಸೆ ಮನಸ್ಸಿನಲ್ಲೇ ಉಳಿದುಹೋಯಿತು. ಈ ಸಲ ಬರುವ ಕೂಲಿಹಣ ಉತ್ತರಕ್ರಿಯೆಗಾಗಿ ಮುಗಿದುಹೋದೀತು . . . . ಅಳುತ್ತಿರಬೇಡ. ಎಲ್ಲ ಕಷ್ಟ ದೇವರು ಪರಿಹಾರ....ಮಾಡಿಯಾರು....ಇನ್ನು ನನ್ನನ್ನು ....ಹೋಗ ಬಿಡು ...ಆಗದೇ ? ' ಅವನ ಕಣ್ಣು ಅಲ್ಲೇ ಮುಚ್ಚಿಹೋದುವು.

ಆಗ ಹೀರ ಮತ್ತು ಸೋಬ ಡೋಲಿ ಸರಿಪಡಿಸಿಕೊಂಡು ಬಂದರು. ಅಣ್ಣ ನನ್ನೆತ್ತಿ ಡೋಲಿಯಲ್ಲಿ ಮಲಗಿಸಿ ಮನೆಯತ್ತ ಹೊತ್ತುಕೊಂಡು ಹೊರಟರು.

ಈ ಸುದ್ದಿ ಊರಲ್ಲೆಲ್ಲ ಬಿರುಗಾಳಿಯಂತೆ ಹಬ್ಬಿತು. ಇಡೀ ಊರೇ ಒಟ್ಟಾಯಿತು. ಹೋರಿರಾಮ ಮಂಚದ. ಮೇಲೆ ಬಿದ್ದುಕೊಂಡು ಎಲ್ಲವನ್ನೂ ನೋಡುತ್ತಿದ್ದ. ಅವನಿಗೆ ಎಲ್ಲ ಸ್ವಲ್ಪ ಸ್ವಲ್ಪ ಅರ್ಥವೂ ಆಗುತ್ತಿತ್ತು. ಆದರೆ ಬಾಯಿ ಮಾತ್ರ ಬಿಡಲಾಗುತ್ತಿದ್ದಿಲ್ಲ. ಹೌದು – ಅವನ ಕಣ್ಣಿಂದ ಹೊರಡುವ ಕಣ್ಣೀರು, ಈ ಮೋಹಬಂಧನವನ್ನು ಕಡಿದುಹಾಕುವುದು ಎಷ್ಟು ಕಷ್ಟ ಎಂಬು ದನ್ನು ಸೂಚಿಸುವಂತಿತ್ತು.

ಆದರೆ ದನಿಯಾ ಎಲ್ಲ ತಿಳಿದಿದ್ದರೂ ಕಂತುತ್ತಿರುವ ಆಶೆಯ ನೆರಳನ್ನು ಹಿಡಿದವಳಂತಿದ್ದಳು. ಅವಳ ಕಣ್ಣಿಂದ ನೀರು ಹರಿಯುತ್ತಿತ್ತು. ಅವಳು

ಯಂತ್ರದಂತೆ ಅತ್ತ ಇತ್ತ ಓಡುತ್ತಿದ್ದಳು. ಒಮ್ಮೆ ಓಡಿಹೋಗಿ ಏನ್ನೋ ಕುದಿಸಿ ತರುತ್ತಿದ್ದಳು. ಮತ್ತೊಮ್ಮೆ ತೌಡನ್ನು ಬಿಸಿಮಾಡಿ ತಂದು, ಬಟ್ಟೆಯಲ್ಲಿ ಕಟ್ಟಿ ಕೈಕಾಲುಗಳಿಗೆ ಶಾಖಕೊಡುತ್ತಿದ್ದಳು. ಪಾಪ ! ಏನು ಮಾಡುವುದು ? ಕೈಯಲ್ಲಿ ಕಾಸಿದ್ದಿಲ್ಲ ! ಇಲ್ಲವಾದರೆ ಯಾರನ್ನಾದರೂ ಕಳುಹಿಸಿ ಡಾಕ್ಟರರನ್ನಾದರೂ ಕರೆತರಿಸುತ್ತಿದ್ದಳು.

ಹೀರ ಅಳುತ್ತ – 'ಅತ್ತಿಗೇ, ಮನಸ್ಸು ಸ್ವಲ್ಪ ಗಟ್ಟಿ ಮಾಡಿಕೋ. ಗೋ ದಾನ ಮಾಡಿಸಿಬಿಡು. ಅಣ್ಣ ನಿನ್ನು ಹೋದಹಾಗೇ . . .' ಎಂದ.

ದನಿಯಾ ಅವನತ್ತ ತಿರಸ್ಕಾರಪೂರ್ಣ ದೃಷ್ಟಿಯಿಂದ ನೋಡಿದಳು. ಮನಸ್ಸನ್ನು ಇನ್ನಷ್ಟು ಗಟ್ಟಿಮಾಡಿಕೊಂಡಳು. ತನ್ನ ಪತಿದೇವನ ವಿಚಾರದಲ್ಲಿ ಯಾವ ಕರ್ತವ್ಯ ತನ್ನಿಂದಾಗಬೇಕು ಎಂಬುದು ಅವಳಿಗೆ ಗೊತ್ತಿಲ್ಲವೇ ? ತನ್ನ ಜೀವನಸಂಗಾತಿಯಾಗಿದ್ದವನ ವಿಚಾರದಲ್ಲಿ ಬರೀ ಅಳುತ್ತಿರುವುದು ಮಾತ್ರ ಅವಳ ಧರ್ಮವೇ ?

ಇನ್ನಾರೋ ಒಬ್ಬನೂ ಸ್ವರಸೇರಿಸಿದ–'ಹೌದು; ಗೋ ದಾನ ಮಾಡಿಸಿಬಿಡಿ. ಇದೇ ತಕ್ಕ ಸಮಯ.'

ದನಿಯಾ ಯಂತ್ರದಂತೆ ಎದ್ದಳು. ಇಂದು ನೂಲು ಮಾರಾಟ ಮಾಡಿ ಅವಳು ಒಂದೂಕಾಲು ರೂಪಾಯಿ ತಂದಿದ್ದಳು. ಅದನ್ನು ತಂದು ಗಂಡನ ತಣ್ಣಗಾದ ಕೈಯಲ್ಲಿ ಇಡುತ್ತ, ಮುಂದುಗಡೆ ನಿಂತಿದ್ದ ದಾತಾದೀನರನ್ನು ನೋಡಿ ಹೇಳಿದಳು – 'ಸ್ವಾಮಿ, ನಮ್ಮ ಮನೆಯಲ್ಲಿ ದನವೂ ಇಲ್ಲ; ಕರುವೂ ಇಲ್ಲ. ಹೆಚ್ಚಿನ ಹಣವೂ ಇಲ್ಲ ಇದ್ದ ಈ ಹಣವೇ ಈ ನನ್ನ ದೇವರಿಗಾಗಿ ಕೊಡುವ **ಗೋ ದಾನ !'**

ಹೀಗೆ ಹೇಳುತ್ತಾ ಅಲ್ಲೇ ಮೂರ್ಛೆ ಬಿದ್ದಳು !

ಶಬ್ದಕೋಶ

ಅಕ್ಷರಾನುಕ್ರಮಣಿಕೆಯ ಮೇರೆಗೆ

...ಚ್ಚು : ಅಕ್ಕಿತೊಳೆದ ನೀರು, ದನಕರುಗಳಿಗೆ ಕೊಡುವ ಪಾನೀಯ
...ಡೆ : ಅವರೆ
...ಸಾಮಿ : ವ್ಯಕ್ತಿ, ಮನುಷ್ಯ
...ಮೆ : ಆವೆ
...ಡಿಸಿಕೊಳ್ಳು : ಇಟ್ಟುಕೊ
...ಗ್ರಾಣ : ಧಾನ್ಯವನ್ನು ಸಂಗ್ರಹಿಸಿಡುವ ಭದ್ರವಾದ ಕೋಣೆ
...ಗ್ರಾಣಿ : ಗ್ರಾಮಾಧಿಕಾರಿಯ ಕೈಕೆಳಗಿನ ಆಳು
...ಪದ್ರವ : ತೊಂದರೆ, ಕಾಟ
...ಪ್ಪುಕಡಲೆ : ಉಪ್ಪು ಕಾರ ಬೆರಸಿ ತಯಾರಿಸಿದ ಕಡಲೆ
...ರಿಗಾಳಿ : ಬಿಸಿಯಾದ ಗಾಳಿ
...ರುಗೋಲು : ನಡೆಯುವಾಗ ಉಪಯೋಗಿಸುವ ಕೋಲು
...ಣಪಾತಕ : ಪಡೆದ ಸಾಲವನ್ನು ಸಂದಾಯ ಮಾಡದಿರುವುದರಿಂದ ಬರುವ ಪಾತಕ
...ಟಕು : ನಿಲುಕು, ಸಿಗು
...ಡೆ : ಇಂಬು, ಆಸ್ಪದ
...ಣಿಸು : ತಿಳಿದುಕೊ, ಯೋಚಿಸು
...ದೆಗಟ್ಟು : ಧೈರ್ಯ
...ಬ್ಬಿಸು : ಹೊರಗೆ ಹಾಕು, ಹೊರತಳ್ಳು
...ತ : ಯಾತ
...ಲಂ : ಹರಾಜು
...ಕ್ಕಲು : ಇತರರ ಹೊಲ ಗದ್ದೆಗಳನ್ನು ಬೇಸಾಯ ಮಾಡುವವನು
...ಟ್ಟಿಗೆ : ಜೊತೆಗೆ, ಸಂಗಡ
...ಮ್ಮೆಗೆ : ಒಂದು ಸಲ

ಓರಗಿತ್ತಿ : ಗಂಡನ ಸೋದರನ ಹೆಂಡತಿ
ಓಲಾಡು : ಹೊಯ್ದಾಡು, ಆ ಬದಿಗೆ ಈ ಬದಿಗೆ ವಾಲು
ಓಲೆಭಾಗ್ಯ : ಕುಂಕುಮ ಭಾಗ್ಯ, ಮುತ್ತೈದೆತನ
ಕಚ್ಚಾಟ : ಕಾದಾಟ, ಜಗಳ
ಕಟ್ಟಳೆ ಹಾಕು : ಮೊಕದ್ದಮೆ ಹೂಡು, ಕೇಸ್ ಮಾಡು
ಕಟ್ಟುಕಟ್ಟು : ಮೂಟೆಕಟ್ಟು, ಗಂಟುಕಟ್ಟು
ಕಡ : ಸಾಲ
ಕಡು : ಬಹಳ, ಮಹಾ
ಕಣಿ : ಗಣಿ
ಕಣ್ಣಿಗೆ ಹಿಡಿ : ಮನಸ್ಸಿಗೆ ಬರು
ಕಣ್ಣು ಹಾಕು : ದೃಷ್ಟಿ ಇಡು, ಅಪೇಕ್ಷಿಸು
ಕಣ್ಣು ಹಾರಿಹೋಗು : ಕಣ್ಣು ತಿರುಗಿ ಹೋಗು, ಸಾಕಾಗಿ ಹೋಗು
ಕತ್ತಲು ಕೋಣೆ : ಸೆರೆಮನೆ
ಕಬಳಿಸು : ಒಳಗೆ ಹಾಕಿಕೊ, ತಿಂದು ಹಾಕಿಬಿಡು
ಕಮಾಯಿ : ಸಂಪಾದನೆ, ಗಳಿಕೆ
ಕಂಬಿ : ಅಂಚು
ಕರಕರೆಗೊಳ್ಳು : ಬೇಸರಗೊಳ್ಳು
ಕರಡುಮಾಡಿಕೊಳ್ಳು : ಕೆಡಿಸಿಕೊಳ್ಳು
ಕರಿ : ಕಪ್ಪುಮಸಿ
ಕಲ್ಲು ಒಡೆಸು : ಸೆರೆಮನೆಯೊಳಗಿನ ಕಲ್ಲು ಒಡೆಸುವ ಕೆಲಸ ಮಾಡಿಸು
ಕಸಾಯಿ : ಕಟುಕ, ಚಂಡಾಲ
ಕಳತೆ : ನಿಕೃಷ್ಟ
ಕಳ್ಳು : ಹೆಂಡ
ಕಾದಿರು : ದಾರಿನೋಡುತ್ತಿರು

ಕಾಯಿಸು : ಬೆಂಕಿಯಲ್ಲಿ ಸುಡು, ಎಣ್ಣೆಯಲ್ಲಿ ಕರಿ
ಕಾರ್ಬಾರು : ಉಪದ್ವ್ಯಾಪ
ಕಾಲುಗೆಳೆಡೆ : ಕಾಲುಗಳ ನಡುವೆ
ಕಾಳಿ ದನ : ಕಪ್ಪು ಬಣ್ಣದ ದನ
ಕೀಲು : ಕೊಂಡಿ, ಬೀಗ, ಸಂದು
ಕುಕ್ಕೆ : ಬುಟ್ಟಿ
ಕುಟ್ಟಿ ದೊಣ್ಣೆ : ಚಿಣಿ ಕೋಲು, ಚಿಣಿಫಣಿ
ಕುಟ್ಟಿ ಹೊಡೆ : ಪೆಟ್ಟು ಹೊಡೆ
ಕುತ್ತಿಗೆ ಕಟ್ಟಿ ಬಾ : ದುಃಖ ಉಕ್ಕಿ ಬರುವುದು
ಕುರ್ಶಿ : ಕುರ್ಚಿ
ಕುಲಟೆ : ಬಜಾರಿ, ನಡತೆ ತಪ್ಪಿದ ಹೆಂಗುಸು
ಕುಶಕನ್ಯೆ : ವರದಕ್ಷಿಣೆ ಮುಂತಾದ ಯಾವುದೂ ಇಲ್ಲದೆ ಮದುವೆ ಮಾಡಿಕೊಡುವುದು
ಕುಳ : ವ್ಯಕ್ತಿ, ಇಸಮು
ಕೂಡುಕಟ್ಟು : ಒಂದೇ ಊರಿನವರು ಅಥವಾ ಜಾತಿಯವರು ಪರಸ್ಪರರು ಕೂಡಿಕೊಂಡಿರುವುದು
ಕೂರು : ಕುಳಿತುಕೊ
ಕೆಂಪು ಟೋಪಿಯುವರು : ಪೋಲೀಸರು (ಮದ್ರಾಸ್ ಪೋಲೀಸರ ಟೊಪ್ಪಿಗೆ ಕೆಂಪಾಗಿರುವುದರಿಂದ)
ಕೆಮ್ಮುಲು : ಕೆಮ್ಮು, ಕಾಸ
ಕೆಲಸಗಳ್ಳ : ಮೈಗಳ್ಳ
ಕೈ ಆಗು : ಪರಸ್ಪರರ ಮಿಲನವಾಗು
ಕೈ ಇರು : ಒಳಸಂಚು ಇರು
ಕೈ ಕಟ್ಟಿಹೋಗು : ಅನುಕೂಲತೆ ಕಡಿಮೆಯಾಗು
ಕೈಕಾಟ : ಕೈಗೆ ಕೈ ತಾಗಿಸಿಕೊಳ್ಳುವುದು
ಕೈಯೊಳಗೆ ಮಾಡಿಕೊ : ಸ್ವಾಧೀನ ಮಾಡಿಕೊ
ಕೊಂಡುಹೋಗು : ತೆಗೆದುಕೊಂಡು ಹೋಗು
ಕೊಂಬು : ಕೋಡು
ಕೋಪೀನ : ಬಟ್ಟೆಯ ತುಂಡು
ಕೋಳ ಹಾಕು : ಕಬ್ಬಿಣದ ಬೇಡಿ ಹಾಕು
ಖಾರ ಬರು : ಚಕ್ರ ಬರು, ಕಳೆದು ಕೊಳ್ಳು
ಖೊಟ್ಟಿ : ಪೊಳ್ಳು, ಗೊಡ್ಡು, ಸುಳ್ಳು
ಗಣ್ಯಮಾಡು : ಲೆಕ್ಕಿಸು, ಲಕ್ಷ್ಯಮಾಡು
ಗಲ್ಲು : ಮರಣದಂಡನೆ
ಗಾಡಿಕಟ್ಟು : ಸಾಯು
ಗೀರು : ಗೀಚು, ಕೆರೆ
ಗುಡಾಣ : ಹಂಡೆ
ಗುಡ್ಡೆ : ಗುಡ್ಡ, ಬೆಟ್ಟ, ರಾಶಿ
ಗೂಡಂಗಡಿ : ಚಿಕ್ಕ ಅಂಗಡಿ
ಗೆಡ್ಡೆ : ಗಡ್ಡೆ
ಗೆರಟೆ : ಚಿಪ್ಪು, ಕರಟ, ಪರಟೆ
ಗೇಣಿ : ಗದ್ದೆಯ ಒಡೆಯನಿಗೆ ಕೊಡುವ ಹಣ ಅಥವಾ ದವಸ ಧಾನ್ಯ
ಗೈಯಾಳಿ : ಮಾನಗೆಟ್ಟವಳು
ಗೊಲ್ಲ : ಹಾಲು ಮಾರುವವನು
ಗೋಚರ : ತಿಳಿವಳಿಕೆ
ಗೋಣಿ : ಗೋಣಿ ಚೀಲ
ಗೋರು : ಬಾಚು, ಕೆರೆ
ಗೌರಿ ದನ : ಬಿಳಿಯ ದನ
ಗ್ರಾಮ ಕಂಟಕಿ : ದೇಶಪೀಡಕ
ಚಾಪೆ ಹಿಡಿ : ದೀರ್ಘ ರೋಗಕ್ಕೆ ಗುರಿಯಾಗು
ಚಾಯ : ಚಹಾ, ಟೀ
ಚಿರಿಪಿರಿ : ಚಿರಿಚಿರಿ, ಅನಾದರದ ಮಾತಾಡುವುದು
ಜಗಿ : ಅಗಿ, ಮೆಲ್ಲು
ಜಡ್ತಿ : ಕೋರ್ಟಿನ ಮೂಲಕ ಶೋಧ

ವಮಾಯಿಸು : ಕುಟ್ಟಿಬಿಡು, ಹೊಡೆದು ಬಿಡು
ವನೆಯಾಗು : ಒಟ್ಟಾಗು
ಬರ್ಬುರ್ : ಹೆಮ್ಮೆ
ಜಾತಿಕಟ್ಟು : ಜಾತಿ, ಸಮಾಜ
ಜಾಮು : ಯಾಮ
ಜೀತದಾಳು : ಕೂಲಿಯ ಆಳು
ಜೀವಕೊಡು : ಶ್ರಮಪಡು
ಜೀವ ತೆಗೆದುಕೊ : ಕಷ್ಟಪಡು
ಜೀವ ಹಿಂಡಿಕೊ : ಕಷ್ಟಪಡು
ಜೋಡು : ಮೆಟ್ಟು, ಚಪ್ಪಲು
ಜೋಡೆತ್ತು : ಒಂದು ಜೊತೆ ಎತ್ತು
ಟೊಪ್ಪಿ : ಟೊಪ್ಪಿಗೆ, ಟೋಪಿ
ಟೋಪಿ : ಟೊಪ್ಪಿಗೆ, ಟೊಪ್ಪಿ
ಡೋಲು : ದೋಳು, ಡೊಳ್ಳು
ತಗಾದೆ ಮಾಡು : ಒತ್ತಾಯ ಪಡಿಸು
ತಾಗಿಬರು : ಹೊಂದಿಬರು
ತಾಗಿಬಿಡು : ಅಂಟು, ಬೆನ್ನುಹತ್ತು
ತಾಗಿಸಿಬಿಡು : ಕೈ ಬೆಚ್ಚಗೆ ಮಾಡು
ತಾಗಿಸಿಹಾಕು : ಹಚ್ಚಿಹಾಕು
ತಾಗಿಸು : ಹಚ್ಚು, ಸೇರಿಸು
ತಾಗು : ಅಂಟಿಕೊ, ಗಂಟುಬೀಳು
ತಾಯಿ ಬೇರು : ಗಿಡಮರಗಳಿಗಿರುವ ಮುಖ್ಯವಾದ ಬೇರು
ತುರಿಕೆ : ತೀಟೆ, ತಿಂಡಿ
ತುರುಕ : ಮುಸಲ್ಮಾನ
ತುರುಕರು : ದನ ಕರು
ತೆಗೆ : ಕೊಳ್ಳು, ಸಂಪಾದಿಸು
ದಂಡ : ಕೋಲು
ದನ : ಹಸು, ಆಕಳು
ದನಿಗಳು : ಭೂಮಿಯ ಒಡೆಯರು
ದರ್ಬಾರು : ದೊಡ್ಡಸ್ತಿಕೆ
ದಾಕ್ಷಿಣ್ಯ : ವಿನಯ, ಸೌಜನ್ಯ
ದಾಸ್ತಾನು : ಶೇಖರಣೆ, ಸಂಗ್ರಹ
ದಿನ ನಿತ್ಯದ : ಸ್ಥಿರ, ಶಾಶ್ವತ
ದೀಪವಾಗು : ಬೆಳಕಾಗು
ದುಮ್ಮಾನ : ಶೋಕ, ಅಳಲು
ದೊಡ್ಡತಿಕೆ : ದೊಡ್ಡಸ್ತಿಕೆ
ದೊಡ್ಡಿತೆ : ದೊಡ್ಡಸ್ತಿಕೆ
ಧರ್ಮಕ್ಕೆ : ಪುಕ್ಕಟೆಯಾಗಿ
ಧಾರಾಳ : ಯಥೇಷ್ಟ
ನಗನಾಣ್ಯ : ವಸ್ತು ಒಡವೆ, ಆಭರಣ
ನಗಾಡು : ಹಾಸ್ಯ ಮಾಡು, ನಗೆಯಾಡು
ನಡು ಬಿಸಿಲು : ಮಧ್ಯಾಹ್ನದ ಬಿಸಿಲು
ನಂದಿಹೋಗು : ಆರಿಹೋಗು
ನಳ್ಳಿ : ನಲ್ಲಿ, ನಳ
ನಾಯಿಗೆರೆ : ವ್ಯರ್ಥವಾಗಿ ತಿರುಗಾಟದಲ್ಲಿ ತೊಡಗಿಸುವಂಥ ಗೆರೆ
ನಾಳದು : ನಾಡದು
ನೀರುಮಾಡು : ನೀರಿನಂತೆ ವೆಚ್ಚಮಾಡು
ನೆಂಟ : ಸಂಬಂಧಿಕ, ಜ್ಞಾತ
ನೆಂಟಸ್ತಿಕೆ : ವಿವಾಹ ಸಂಬಂಧ
ನೆಪ : ನೆವನ
ನೇಣುಹಾಕು : ಉರುಲು ಹಾಕು
ನೋಟು ಚೀಟು : ಸಾಲಪಡೆದ ಬಗೆಗೆ ಬರೆದುಕೊಟ್ಟ ಕಾಗದ ಮುಂತಾದ್ದು
ಪಗಡಿ : ರುಮಾಲು
ಪಂಚೆ : ದೋತರ
ಪಂಚಾತಿಕೆ : ಪಂಚಾಯತಿ
ಪಟ್ಟೆ : ರೇಶಿಮೆ
ಪಡಬೀಳು : ಬೇಸಾಯವಾಗದೆ ಉಳಿ
ಪತಾಯ : ಧಾನ್ಯ ತುಂಬಿಸುವ ಮರದ ದೊಡ್ಡ ಪೆಟ್ಟಿಗೆ ಅಥವಾ ಬಿದಿರ ಆಶ್ರಯ

ಪದಾರ್ಥ : ಮೇಲೋಗರ
ಪಂಥ : ಪ್ರತಿಜ್ಞೆ, ಶಪಥ
ಪರವೆ : ಲಕ್ಷ್ಯ
ಪರುಷ : ಕರ್ಕಶ
ಪವನು : ಚಿನ್ನದ ಒಂದು ನಾಣ್ಯ
ಪಾತ್ರ ಪದಾರ್ಥ : ಪಾತ್ರೆ ಪಡಗ
ಪಾಪಕಾಣು : ಅಯ್ಯೋ ಎನಿಸು
ಪಾಪದ : ನಿರುಪದ್ರವಿ
ಪಾರಣ: ಉಪವಾಸದ ಮುಕ್ತಾಯಕ್ಕಾಗಿ ಆಹಾರ ತೆಗೆದುಕೊಳ್ಳುವುದು
ಪಿಕ್ಕಾಸು : ಗುದ್ದಲಿ
ಪುಡಿ ಹರಟೆ : ಒಣಹರಟೆ, ಹಾಳು ಹರಟೆ
ಪುರಸ್ಕಾರ : ಆದರ ಸತ್ಕಾರ
ಪೂರೈಸು : ನಿಭಾಯಿಸು, ಏಗು
ಪುರ್ಸೊತು : ಬಿಡುವು, ಸಮಯಾವಕಾಶ
ಪೇದೆ : ಆಳು
ಪೋಕರಿತನ : ತುಂಟತನ
ಪ್ರಾಣ ಕೊಡು : ಪ್ರಾಣದ ಮೇಲಿನ ಆಶೆ ಬಿಡು
ಬಚಾವಾಗು : ಬದುಕಿರು
ಬಚ್ಚಿಹೋಗು : ಸೊರಗಿಹೋಗು
ಬಜಾರಿ : ನಾಚಿಕೆಗೆಟ್ಟವಳು
ಬಂಜರು : ಸಾಗುವಳಿಯಾಗದ
ಬಟ್ಟಲು : ತಟ್ಟೆ (ಊಟದ್ದು)
ಬಾಚಣಿಕೆ : ಹಣಿಗೆ
ಬಿಟ್ಟಿ ಬೇಗಾರಿ : ಕೂಲಿತೆಗೆದುಕೊಳ್ಳದೆ ಭೂ-ಒಡೆಯರಲ್ಲಿ ಮಾಡುವ ಕೆಲಸ
ಬಿಟ್ಟಿ : ಕಡಿಮೆ ಬೆಲೆಯದು
ಬಿರಣೆ : ಕುರುಳು (ಕುಳ್ಳು)
ಬೇಡದ : ಅಯೋಗ್ಯ
ಬೈಸು : ಬೈಗಳು
ಭಗಂದಳ : ಭಗಂದರ, ಆಸನ ಕುರು

ಮಣೆಗಾರ : ತಹಸಿಲ್ದಾರನ ಕೈಕೆಳಗಿನ ಒಬ್ಬ ಅಧಿಕಾರಿ
ಮದ್ದಳೆ : ಮೃದಂಗ, ಮದ್ದಲೆ
ಮದ್ದು : ಔಷಧ
ಮಂದೆ : ಗುಂಪು, ಸಮೂಹ
ಮರಿಗೆ : ಮರದ ಅಥವಾ ಮಣ್ಣಿನ ಅಗಲ ಬಾಯಿಯ ಪಾತ್ರ
ಮರುಕು : ಮುಲುಕು, ವೇದನೆಪಡು
ಮರುಪಾವತಿ ಮಾಡು : ತಿರುಗಿ ಕೊಡು
ಮರ್ಜಿ : ಮನಸ್ಸಿನ ಓಘ
ಮಾಯು : ಕಾಣದಂತಾಗುವಿಕೆ, ಅದೃಶ್ಯ ವಾಗುವಿಕೆ
ಮಾಲೀಸು ಮಾಡು : ಮೈಯನ್ನು ತಿಕ್ಕು
ಮಾಲು : ಓಲಾಡು
ಮುಕ್ಕಾಲು : ಕಾಲಾಣೆ, ಮೂರು ಪೈ
ಮುಂಡಾಸು : ರುಮಾಲು
ಮುದುಡಿಹೋಗು : ಉಡುಗಿಹೋಗು
ಮುದ್ದುಮಾಡು : ರಂಬಿಸು, ಮನರಂಜಿಸು
ಮೂರು ವರ್ಷ ಕಳಿಸು : ಸೆರೆಮನೆಗೆ ಕಳಿಸು
ಮೂರು ವಾರು : ಏಲಮಿನಲ್ಲಿ ಕೊನೆಯ ಸಲ ಸಾರುವುದು
ಮೂಳೆ : ಎಲುಬು
ಮ್ಯಾಂವ್ ಮ್ಯಾಂವ್ : ಬೆಕ್ಕಿನ ಹಾಗೆ ಕೂಗುವುದು
ರಣಾಗ್ರ : ಜಗಳ, ಕಾದಾಟ
ರವಕೆ : ಕುಪ್ಪಸ
ರಾತಾ ರಾತ್ರಿ : ರಾತೋರಾತ್ರಿ, ರಾತ್ರಿಯೆಂದು ನೋಡದೆ ಆಗಿಂದಾಗ
ರಿಷ್ಟ ಪುಷ್ಟ : ಹೃಷ್ಟ ಪುಷ್ಟ
ಲಡಾಯಿ : ಕಾದಾಟ, ಜಗಳ
ಲಥಾಡಿ : ತೊಂದರೆ, ಕಾಟ

ಾಟ್ರಹೊಡೆ : ವ್ಯರ್ಥವಾಗಿ ಹೊತ್ತು ಕಳೆ, ಲಾಗಹಾಕು
ೋಟೆ : ಲೋಟ, ಬಟ್ಟಲು
ಾಕ್ಮೂಲ : ಪೋಲೀಸ್ ವಿಚಾರಣೆಯಲ್ಲಿ ವಾದಿ ಅಥವಾ ಪ್ರತಿವಾದಿಯ ಹೇಳಿಕೆ
ಾತಹಿಡಿ : ಪಾತ ರೋಗ ತಗಲು
ಷಡ್ಯಂತ್ರ : ಮೋಸದ ಯೋಜನೆ
ಸಜ್ಜನಿಕೆ : ಸೌಜನ್ಯ
ಸಂದಾಯ : ತೆಗೆದುಕೊಂಡದ್ದನ್ನು ತಿರಿಗಿ ಕೊಡುವುದು
ಸಿಗಿ : ಸೀಳು
ಸಿಂಧು : ನ್ಯಾಯಬದ್ಧ
ಸೀಮೆ ಎಂಣೆ : ಚಿಮಣೆ ಎಂಣೆ
ಸುಣ್ಣದ ಚಿಪ್ಪು : ಸುಣ್ಣ ಮಾಡುವ ಸಮುದ್ರದ ಚಿಪ್ಪು
ಸೂಡಿ : ಸೂಡು, ಪೆಂಡೆ
ಸೆಣಬು : ಸಣಬು
ಸೌದೆ : ಕಟ್ಟಿಗೆ
ಹಗರಣ : ಹೋರಾಟ, ಕಾದಾಟ
ಹಟ್ಟಿ : ದನಕರುಗಳನ್ನು ಕಟ್ಟುವ ಮನೆ
ಹತ್ತು ಸಮಸ್ತರು : ಸಾರ್ವಜನಿಕರು
ಹದಿನಾಲ್ಕು ವರ್ಷ ಹೋಗಿ ಬಾ : ದೀರ್ಘಾವಧಿಯ ವರೆಗೆ ಸೆರೆಮನೆಗೆ ಹೋಗಿ ಬಾ
ಹರಾಮಿ : ನೀಚ ಸ್ವಭಾವದವಳು
ಹರಿವಾಣ : ದೊಡ್ಡ ತಟ್ಟೆ
ಹಸಿಗೊಬ್ಬರ : ಹಟ್ಟಿಯಲ್ಲಿ ದನಕರುಗಳ ಬುಡಕ್ಕೆ ಹಾಕಿದ ಸೊಪ್ಪು ಸದೆಯಿಂದ ಆಗುವ ಹಸಿಯ ಗೊಬ್ಬರ
ಹಾರಿಸಿಬಿಡು : ಅಡಗಿಸಿಬಿಡು
ಹಿಡಿಸೂಡಿ : ಪೊರಕೆ, ಕಸಬರಿಗೆ
ಹಿಡುಗಲು : ಪೊರಕೆ, ಹಿಡಿಸೂಡಿ
ಹಿಂಡಿ : ಎಂಣೆ ತೆಗೆದ ಮೇಲೆ ಉಳಿಯುವ ತೆಂಗಿನಕಾಯಿ ಎಳ್ಳು ಮುಂತಾದವುಗಳ ಚರಟ
ಹಿಂಪಡೆದುಕೊ : ತಿರುಗಿ ಪಡೆದುಕೊ
ಹುಚ್ಚುಗಟ್ಟು : ಹುಚ್ಚನ ಹಾಗೆ ಮಾಡು, ತಲೆತಿರುಕನ ಹಾಗೆ ಮಾಡು
ಹುಯಿಲು : ಗದ್ದಲ, ಬೊಬ್ಬಾಟ
ಹೂಡು : ಉಳು, ನೇಗಿಲುಹೊಡೆ
ಹೂತಿಡು : ಹುಗಿದಿಡು
ಹೂತು : ಹುಗಿದು
ಹೆಕ್ಕು : ಆಯ್ದುಕೊ
ಹೆಗಲುಶಾಲು : ಹೆಗಲ ಮೇಲೆ ಹಾಕಿಕೊಳ್ಳುವ ಶಾಲು
ಹೆಗ್ಗಳಿಕೆ : ಹೆಚ್ಚುಗಾರಿಕೆ
ಹೊಗೆ ಸೊಪ್ಪು : ತಂಬಾಕು
ಹೊಟ್ಟೆ ಕಾಯಿಸು : ಉಪವಾಸಬೀಳು
ಹೊಟ್ಟೆಗೆ ತಕ್ಕ : ಹೊಟ್ಟೆಗೆ ಎಷ್ಟು ಬೇಕೋ ಅಷ್ಟು
ಹೊರಮಾಡು : ಹೊರಗೆ ದಬ್ಬು
ಹೊರೆ : ಭಾರ, ಒಬ್ಬನು ತಲೆಯ ಮೇಲೆ ಹೊರುವಷ್ಟು

——

ತಪ್ಪು-ಒಪ್ಪು

ಪುಟ	ಸಾಲು	ತಪ್ಪು	ಒಪ್ಪು
೧೩	೭	ಜೋಲಾರಾವು	ಹೋರಿರಾವು
೧೪	೨೦	ಗ್ರಹನಿರ್ಮಾಣ	ಗೃಹನಿರ್ಮಾಣ
೨೦	೩	ಜಗೆ	ಜಗಿ
೨೧	೨೩	ಒಂದನ್ನು	ಒಂದನ್ನೂ
೨೪	೧೫	ಮನೆಬಾಗಿಲಲೇ	ಮನೆಬಾಗಿಲಲ್ಲೇ
೨೭	೨೧	ಕೊಡುತ್ತಾ	ಕೊಡುತ್ತಾ ಬಂದು
೩೦	೨೪	ಮಾತು	ಮಾತು,
೩೧	೯	ಕೋಣ	ಕೋಣ,
೩೫	೧೨	ಕರುಗಳ	ದನಕರುಗಳ
೩೮	೧೩	ಆಶೆಯಂತೆ	ಆನೆಯಂತೆ
೪೦	೨೨	ಓರಿಗಿತ್ತಿ	ಓರಗಿತ್ತಿ
೪೩	೩	ಜಗೆಯುತ್ತಾ ಬಂದು	ಜಗಿಯುತ್ತಾ ಬಂದು
೬೦	೨೦	ನನದಾಗಿ	ನಗದಾಗಿ
೬೧	೪	ದೃಷಿಯಿಂದ	ದೃಷ್ಟಿಯಿಂದ
೬೨	೨೬	ಸೋಖಿ	ಸೋಬಿ
೮೪	೧೫	ಒಮ್ಮೆಗೇ,	ಒಮ್ಮೆಗೆ
೧೧೯	೨೧	ಒಂದು	ಈ ಒಂದು
೧೬೧	೯	ನನಗೆ	ನಮಗೆ
೧೭೦	೨೦	ಅನ	ಅನು
೧೯೦	೧೧	ವಿಜಾರಿ	ಮಿಜಾರಿ
೧೯೮	೧೮	ಅಡಿಗಣಿಂದ	ಅಡಿಗಣ್ಣಿಂದ
೨೦೬	೩	ಅಮ್ಮನಿಗೆ	ಮಾವ ನಿಮ್ಮಮ್ಮನಿಗೆ
೨೭೦	೪	ತೆಗೆದ	ತೆಗೆದು
೨೯೧	೨೮	ಯಾರಿದ್ದಾರೆ ?	ತಯಾರಿದ್ದಾರೆ ?
೩೧೪	೯	ಮಾಡಿದ	ಮಾಡದ
೩೨೩	೫	ಉಬ್ಬಿಬಂದಂತಾಯಿತು.	ಉಕ್ಕಿ ಬಂದಂತಾಯಿತು

ಈ ಪುಸ್ತಕಗಳನ್ನು ಓದಿರುವಿರಾ ?

ವಿಂದ ದರ್ಶನ—	ಶ್ರೀ ಅರವಿಂದರು	ಸಾದಾ ಪ್ರತಿ	೩	೦	೦
		ಉತ್ತಮ ,,	೩	೮	೦
		ಕೆಲಿಕೊ ,,	೪	೦	೦
ರತೀಯ ರಾಜ್ಯಧರ್ಮ—	,,		೧	೪	೦
ತೃವಾಣಿ II—	ಶ್ರೀ ಮಾತಾ		೦	೨	೦
ಸಾರ ಚಿತ್ರ—	ಆನಂದಕಂದ		೨	೪	೦
ಕ್ಕಳ ಬಸವಣ್ಣನವರು—	,,		೦	೮	೦
ಗಿ ಮನೆಗೆ—	ಚಾರು ವಂದ್ಯೋಪಾಧ್ಯಾಯ		೧	೧೦	೦
ತ್ಯಕಾಲಿ—	,,		೦	೬	೦
ತ್ರ ಶ್ರೀ—	ಸಿ. ಎಂ. ವಿ. ಶರ್ಮಾ		೧	೪	೦
ೕಕ್ ನಾಟಕ ಕಥೆಗಳು—	ಡಿ. ವಿ. ಶೇಷಗಿರಿರಾವ್		೨	೮	೦
ರತದಿಂದ ತೊಲಗಿರಿ—	ಗಾಂಧಿಜಿ		೧	೪	೦
ಂಗಲ ಪ್ರಭಾತ—	,,		೦	೧೨	೦
್ನ ಆರಂಭ ಜೀವನ—	,,		೧	೪	೦
ತ್ಯಕ್ತೆ—	ಗುರುನಾಥ ಜೋಶಿ		೧	೪	೦
ತಿಯ ಹಾಡು—	ಹಲಸಂಗಿಯ ಗೆಳೆಯರು		೧	೮	೦
ರ್ಯಧರ್ಮ ಪ್ರದೀಪ—	ಎಚ್. ಚಿದಂಬರಯ್ಯ		೮	೦	೦
ಕ್ಕಳ ಮಹಾತ್ಮಾ ಗಾಂಧಿ—	ಹೊಯ್ಸಳ ಮತ್ತು ಶರ್ಮ		೦	೧೨	೦
ಣ್ಣೆ ತೆಗೆಯುವುದು—	ಜಿ. ಪಿ. ಪಟೇಲ್		೦	೧೨	೦
್ರಂತಿಪಥದಲ್ಲಿ—	ಜೈಪ್ರಕಾಶ ನಾರಾಯಣ		೩	೮	೦
ರ್ಧಾ ಶಿಕ್ಷಣ ಯೋಜನೆ—	ಝಾಕೀರ್ ಹುಸೇನ್		೦	೧೨	೦
ಪಿಗೆ—	ಕುಲಕರ್ಣಿ ಶ್ರೀನಿವಾಸ		೦	೧೦	೦
ಹಿತ್ಯದ ಹಿನ್ನೆಲೆ—	ಕೆ. ವೆಂಕಟರಾಯಾಚಾರ್ಯ		೧	೮	೦
ಂಧೀ ವಿಚಾರ ದೋಹನ—	ಕೆ. ಜಿ. ಮಶ್ರುವಾಲಾ		೩	೦	೦
ಳಿನ ಗಿಡ—	ದಿ. ಎಂ. ಹರಿದಾಸರಾಯರು		೨	೮	೦
ಹಿಡಿದ ಕಾವೇರಿ—	,,		೨	೪	೦
ಸಿದ ಹಂಬಲು—	,,		೧	೮	೦

ಗೋದಾನ

ದಿವಂಗತ ಪ್ರೇಮಚಂದರ ಕಾದಂಬರಿಗಳಲ್ಲಿ '**ಗೋದಾನ**' ಅತ್ಯಂತ ಪ್ರಖ್ಯಾತವಾದುದು. ಇದು ಇಂಗ್ಲಿಷ್, ಫ್ರೆಂಚ್, ರಶ್ಯನ್ ಮುಂತಾದ ವಿದೇಶಿ ಭಾಷೆಗಳಲ್ಲೂ ಅನುವಾದಿಸಲ್ಪಟ್ಟು ವಿಶೇಷ ಹೊಗಳಿಕೆಗೆ ಪಾತ್ರವಾಗಿದೆ. ರಶ್ಯನ್ ಭಾಷೆಯಲ್ಲಂತು ಇದರ ಲಕ್ಷಾಂತರ ಪ್ರತಿಗಳು ಮಾರಾಟವಾಗಿ ಅಲ್ಲಿಯ ಅತ್ಯುಚ್ಚ ಮಾರಾಟದ (Best Seller) ಪುಸ್ತಕಗಳಲ್ಲೊಂದಾಗಿದೆಯಂತೆ. ಹೋರಿರಾಮನೆಂಬೊಬ್ಬ ಒಕ್ಕಲಿಗನ ಜೀವನವು ಇದರಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿದೆ. ಹಳ್ಳಿಯ ಸಾಮಾಜಿಕ ಆರ್ಥಿಕ ಬಂಧನದೊಳಗೆ ಸಿಕ್ಕಿಬಿದ್ದ ಆ ಬಡ ಬೇಸಾಯಗಾರನ ಪಾಡು ಇಲ್ಲಿ ಯಥಾವತ್ತಾಗಿ ವರ್ಣಿತವಾಗಿದೆ. ಅದರೊಡನೆ, ಗ್ರಾಮಜೀವನದ ಸುಧಾರಣೆಯು ಯಾವ ತರದಲ್ಲಾಗಬಹುದೆಂಬ ಅಂಶವೂ ತೆರೆಯ ಮರೆಯಿಂದ ಸೂಚಿತವಾಗಿದೆ. ಮಧ್ಯೇ ಮಧ್ಯೇ ಪ್ರಣಯ ಹಾಸಗಳ ಅಲೆಗಳೂ ಏರಿಬಂದು ಕಾದಂಬರಿ ತುಂಬಾ ರಸವತ್ತಾಗಿ ತೋರುತ್ತದೆ.

ಭಾರತದ ಜನತೆಯೆಲ್ಲಾ ಒಂದು, ಸಂಸ್ಕೃತಿ ಸಂಪ್ರದಾಯಗಳೂ ಮೂಲತಃ ಒಂದು, ಎಂಬೀ ಭಾವನೆ ಬೆಳೆದುಬರುತ್ತಿರುವ, ಬೆಳೆದುಬರಬೇಕಾದ ಈ ಕಾಲದಲ್ಲಿ '**ಗೋದಾನ**' ದಂತಹ ಉತ್ತಮ ಕಾದಂಬರಿಯ ಸವಿಯನ್ನು ಕನ್ನಡಿಗರು ಅರಿಯುವುದು ಅಗತ್ಯ.